ಡಿ.ಎಸ್. ನಾಗಭೂಷಣ

ವಿಧವಿಧ



ವಿಧವಿಧ

(ಭಾಷಣಗಳು—[illegible]—[illegible] ಲೇಖನಗಳು)

ಡಿ.ಎಸ್. ನಾಗಭೂಷಣ

ವಿಧವಿಧ

(ರಾಜಕೀಯ-ಸಾಮಾಜಿಕ-ಸಾಂಸ್ಕೃತಿಕ ಲೇಖನಗಳು)

ಡಿ.ಎಸ್. ನಾಗಭೂಷಣ

ರೂಪ ಪ್ರಕಾಶನ ಮೈಸೂರು

Vidhavidha

(A Collection of Political, Social, Cultural Writeups)

Written by D.S.Nagabushana
HIG-5, 'Nudi', Kalahalli badavane
Vinobha Nagar, Shimoga-577204 Ph: 94492 42284

Published by : Roopa Prakashana, No. 2406, 2407/K-1
1st Cross, Hosabandikeri, K.R.Mohalla, Mysore - 570 004
Mob: 93422 74331 email:roopaprakashana@gmail.com

Inner Pages: Maplitho
Size: 1/8th Demmy
First Impression : 2021
Pages: 320+iv = 324 Price : ₹ 300

ISBN: 978-81-955083-2-7

ವಿಧವಿಧ

(ರಾಜಕೀಯ-ಸಾಮಾಜಿಕ-ಸಾಂಸ್ಕೃತಿಕ ಲೇಖನಗಳು)

ಮೊದಲನೇ ಮುದ್ರಣ: ೨೦೨೧
ಪುಟಗಳು: ೩೨೦+iv= ೩೨೪
ಬೆಲೆ: ₹ ೩೦೦
ಮುಖಪುಟ ವಿನ್ಯಾಸ : ಸುಧಾಕರ ದರ್ಬೆ
ಪ್ರಕಾಶನ: ರೂಪ ಪ್ರಕಾಶನ
ನಂ. ೨೪೦೬, ೨೪೦೭/ಕೆ-೧, ೧ನೇ ಕ್ರಾಸ್
ಹೊಸಬಂಡಿಕೇರಿ, ಕೆ.ಆರ್.ಮೊಹಲ್ಲಾ, ಮೈಸೂರು - ೫೭೦ ೦೦೪
ಮೊಬೈಲ್: ೯೩೪೨೨ ೭೪೩೩೧

ಮುದ್ರಣ: ಗಾಯತ್ರಿ ಎಂಟರ್‌ಪ್ರೈಸಸ್, ಮೈಸೂರು-೫೭೦ ೦೦೪

ಅರ್ಪಣೆ

ಅಗಲಿದ ನನ್ನ ಒಡಹುಟ್ಟು
ಸರಸ್ವತಿಗೆ

ಲೇಖಕನ ಮಾತು

ಇದು ೨೦೧೧ಲರಲ್ಲಿ ಪ್ರಕಟವಾದ 'ಬಹುಮುಖ'ದ ನಂತರ ನಾನು ಬರೆದ ಕೆಲವು ಲೇಖನಗಳ ಸಂಗ್ರಹ. 'ಬಹುಮುಖ'ದಂತೆಯೇ ರಾಜಕಾರಣ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಪರಿಸರ ಇತ್ಯಾದಿ ನನ್ನ ಹಲವು ಆಸಕ್ತಿಗಳ ಕ್ಷೇತ್ರಗಳಿಗೆ ಸಂಬಂಧಿಸಿದ ಬರಹಗಳು ಇಲ್ಲಿವೆ. ಇವುಗಳಲ್ಲಿ ಕೆಲವು ಪೂರ್ಣ ಪ್ರಮಾಣದ ಲೇಖನಗಳಾದರೆ, ಇನ್ನು ಕೆಲವು ಸಂಕ್ಷಿಪ್ತ ಪ್ರತಿಸ್ಪಂದನಗಳಾಗಿವೆ. ಮತ್ತೆ ಕೆಲವು ವ್ಯಕ್ತಿ ಚಿತ್ರಗಳಾಗಿವೆ. ಸಾಹಿತ್ಯ ಕುರಿತಂತೆ ನನ್ನೊಡನೆಯ ದೀರ್ಘ ಸಂದರ್ಶನವೂ ಇಲ್ಲಿದೆ. ಇವುಗಳಲ್ಲಿ ಬಹುಪಾಲನ್ನು ನಾನು ಬರೆದದ್ದು, ನಾನು ಸಂಪಾದಿಸುತ್ತಿರುವ 'ಹೊಸ ಮನುಷ್ಯ' ಮಾಸಪತ್ರಿಕೆಗಾಗಿ. ಜೊತೆಗೆ 'ಪ್ರಜಾವಾಣಿ' ಪತ್ರಿಕೆಗೂ ಸಾಕಷ್ಟು ಬರೆದಿದ್ದೇನೆ. ಅವುಗಳಲ್ಲಿ ಬಹಳಷ್ಟು ಪ್ರಕಟವಾಗಿವೆ, ಒಂದೆರಡು ಪ್ರಕಟವಾಗಿಲ್ಲ. ಅದು ಆ ಪತ್ರಿಕೆಯ ಸಂಪಾದಕೀಯ ಸ್ವಾತಂತ್ರ್ಯ ಅದನ್ನು ಗೌರವಿಸುತ್ತಲೇ ಅದು ಪ್ರಕಟಿಸದ ಲೇಖನಗಳ ಸೂಚನೆಯನ್ನೂ ಓದುಗರ ಅವಗಾಹನೆಗಾಗಿ ಆಯಾ ಲೇಖನಗಳ ಕೊನೆಯಲ್ಲಿ ನೀಡಿದ್ದೇನೆ. ಇನ್ನು 'ಸಂವಾದ', 'ವಾರ್ತಾ ಭಾರತಿ' ಮತ್ತು 'ಸಮಾಜಮುಖಿ' ಪತ್ರಿಕೆಗಳೂ ಪ್ರಕಟಿಸಿದ ಬರಹಗಳೂ ಇಲ್ಲಿವೆ. ನನ್ನ ಸಂದರ್ಶನ ಜಿ.ಎನ್. ಮೋಹನ್ ಅವರ ಡಿಜಿಟಲ್ ಪತಿಕೆ 'ಅವಧಿ'ಯ ಒಂದು ವಿಶೇಷ ಸಂಚಿಕೆಗಾಗಿ ಗೆಳೆಯ ಜಿ.ಪಿ. ಬಸವರಾಜು ಅವರು ಆಯೋಜಿಸಿದ ಸಂದರ್ಶನ. ಸಂದರ್ಶನ ಮಾಡಿದವರು ನನ್ನ ಕಿರಿಯ ಗೆಳೆಯ ಟಿ. ಅವಿನಾಶ ಅವರು. ಈ ಎಲ್ಲ ಬರಹಗಳನ್ನು ಪ್ರಕಟಿಸಿದ ಪತ್ರಿಕೆಗಳ ಸಂಪಾದಕರೂ ಸೇರಿ ಸಂಬಂಧಪಟ್ಟ ಎಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಪತ್ರಿಕಾ ಬರಹಗಳಲ್ಲಿ 'ಪ್ರಜಾವಾಣಿ'ಗೆ ಬರೆದ ಎರಡು 'ವಾಚಕರವಾಣಿ' ಪತ್ರಗಳ ಇವೆ. ಇವನ್ನು ಇಲ್ಲಿ ಪ್ರಕಟಿಸಲು ಕಾರಣ, ಓದುಗರೇ ಗಮನಿಸಬಹುದಾದಂತೆ, ಅವುಗಳ ವಸ್ತುವಿಶೇಷ. ಇನ್ನು ಒಂದು ಜಂಟಿ ಪತ್ರಿಕಾ ಹೇಳಿಕೆಯೂ ಇಲ್ಲಿದೆ. ಅದು ಈ ಸಂಗ್ರಹದಲ್ಲಿ ಸೇರಲು ಕಾರಣ, ಅದನ್ನು ಬರೆದವನು ನಾನು ಮತ್ತು ಅದು ತುಂಬ ಸಾಮಾಜಿಕ ಮಹತ್ವದ್ದು ಎಂಬುದು. ಈ ಸಂಗ್ರಹದಲ್ಲಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇಬ್ಬರು ಗೆಳೆಯರಿಗೆ ಬರೆದ ಎರಡು ಪತ್ರಗಳಿವೆ, ಈ ಪತ್ರಗಳ ಮೂಲಕವೇ ಈ ನನ್ನ ಗೆಳೆಯರ ಯಾವ ಅಭಿಪ್ರಾಯ ಅಥವಾ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ್ದೇನೆ

ಎಂದು ಓದುಗರು ಅರಿಯಬಹುದು. ಈ ಪತ್ರಗಳೇನೂ ಖಾಸಗಿ ವಿಷಯಗಳನ್ನು ಒಳಗೊಂಡಿಲ್ಲವಾದ್ದರಿಂದ ಈ ಗೆಳೆಯರ ನಿರ್ದಿಷ್ಟ ಅನುಮತಿಯನ್ನೇನೂ ಪಡೆಯದೆ ಇವನ್ನು ಇಲ್ಲಿ ಪ್ರಕಟಿಸಲಾಗಿದೆ. ಮಾಸ್ತಿ ಕಥನ ಕುರಿತಂತೆ ನಾನು ಬರೆದ ಪತ್ರಕ್ಕೆ ಎಚ್. ಎಸ್. ರಾಘವೇಂದ್ರ ರಾವ್ ಅವರಿಗೆ ಎರಡು ಬಾರಿ ನೆನಪಿಸಿದರೂ ಏಕೋ ಅವರು ಉತ್ತರಿಸಲಿಲ್ಲ ಎಂಬುದನ್ನೂ ಇಲ್ಲಿ ತಿಳಿಸಬೇಕಾಗಿದೆ.

ಮಿಕ್ಕಂತೆ, ಕಳೆದ ಮೂರು ದಶಕಗಳಿಂದ ನನ್ನ ಬರಹಗಳನ್ನು ಓದುತ್ತಾ ಬಂದಿರುವ ಓದುಗರಿಗೆ ಈ ಸಂಗ್ರಹದ ಬರಹಗಳಿಗೆ ಸಂಬಂಧಪಟ್ಟಂತೆ ಹೇಳಬಹುದಾದ ವಿಶೇಷ ಸಂಗತಿಗಳೇನಿಲ್ಲ. ನಾನು ನನ್ನ ಬದುಕಿನ ಅರ್ಥಪೂರ್ಣತೆಗೆ ಸಂಬಂಧಿಸಿದಂತೆ ಕಾಣುವ ಸಾರ್ವಜನಿಕ ಜೀವನದ ಎಲ್ಲ ಸಂಗತಿಗಳಿಗೆ–ಅವು ಸಣ್ಣವಿರಲಿ, ದೊಡ್ಡವಿರಲಿ– ಸ್ಪಂದಿಸುತ್ತಾ ಬಂದಿದ್ದೇನೆ. ಇವುಗಳಲ್ಲಿ ಸದ್ಯ ಮತ್ತು ಶಾಶ್ವತ ಎರಡೂ ಒಳಗೊಂಡಿದೆ ಎಂದು ನಾನು ನಂಬಿದ್ದೇನೆ.

ನನ್ನ ಹಲವು ಪುಸ್ತಕಗಳನ್ನು ಅಭಿಮಾನದಿಂಧ ಪ್ರಕಟಿಸುತ್ತಿರುವ ರೂಪ ಪ್ರಕಾಶನದ ಯುವ ಗೆಳೆಯ ಯು.ಎಸ್. ಮಹೇಶ್ ಈ ಕೃತಿಯನ್ನೂ ಪ್ರಕಟಿಸುತ್ತಿದ್ದಾರೆ. ಅವರಿಗೆ ಮತ್ತು ಅವರ ಸಿಬ್ಬಂದಿಗೆ ನನ್ನ ಕೃತಜ್ಞತೆಗಳು. ಹಾಗೇ ನನ್ನ ಹಲವು ಕೃತಿಗಳ ಮುಖಪುಟ ವಿನ್ಯಾಸ ಮಾಡಿರುವ ಕಲಾವಿದ ಗೆಳೆಯ ಸುಧಾಕರ ದರ್ಬೆಯವರು ಈ ಕೃತಿಗೂ ಸುಂದರ ಮುಖಪುಟ ವಿನ್ಯಾಸ ಮಾಡಿಕೊಟ್ಟಿದ್ದಾರೆ, ಅವರಿಗೂ ನನ್ನ ಧನ್ಯವಾದಗಳು. ಇನ್ನು ನನ್ನ ಎಲ್ಲ ಪುಸ್ತಕಗಳ ಪ್ರಕಟನೆಯ ಹಿಂದಿನ ಸಿದ್ಧತೆ ಮತ್ತು ಸಂಭ್ರಮಗಳಿಗೆ ಕಾರಣಳಾದ ಪತ್ನಿ ಸವಿತಾಳನ್ನೂ ಇಲ್ಲಿ ನೆನೆಯಬೇಕು. ನನ್ನ ಎಲ್ಲ ಪುಸ್ತಕಗಳನ್ನೂ ಪ್ರೀತಿಯಿಂದ, ಕುತೂಹಲದಿಂದ ಕೊಂಡು ಓದಿರುವ ಕನ್ನಡಿಗರು ಈ ಪುಸ್ತಕಕ್ಕೂ ಅಂಥಹುದೇ ಸ್ಪಂದನ ನೀಡುವರೆಂದು ಆಶಿಸುವೆ.

೧ ನವೆಂಬರ್ ೨೦೨೧ ಡಿ.ಎಸ್. ನಾಗಭೂಷಣ

ಶಿವಮೊಗ್ಗ

ಪರಿವಿಡಿ

ಭಾಗ–೧ : ರಾಜಕಾರಣ

ಭಾಗ–೨ : ಪರಿಸರ–ಶಿಕ್ಷಣ–ಸಂಸ್ಕೃತಿ

ಭಾಗ–೩: ಸಾಹಿತ್ಯ

ಭಾಗ–೧

ರಾಜಕಾರಣ

ಲೋಹಿಯಾ ಚಿಂತನೆಯ ಬೆಳಕಲ್ಲಿ
ಇಂದಿನ ಮೋದಿ ವಿರೋಧಿ
ಮೈತ್ರಿ ರಾಜಕಾರಣದತ್ತ ಒಂದು ನೋಟ

ಮಾರ್ಚ್ ೨೩, ಸಮಾಜವಾದಿ ಚಿಂತಕ ಮತ್ತು ಹೋರಾಟಗಾರ ರಾಮಮನೋಹರ ಲೋಹಿಯಾ ಅವರ ಜನ್ಮ ದಿನ. ಅದನ್ನು ಈ ವರ್ಷವೂ ಲೋಹಿಯಾ ವಿಚಾರಗಳ ಸ್ಮರಣೆಯೊಂದಿಗೆ ಬೆಂಗಳೂರೂ ಸೇರಿದಂತೆ ಹಲವಾರು ಕಡೆ ಆಚರಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿಯವರೂ ಅಂದು ಲೋಹಿಯಾರನ್ನು, ಅವರ 'ಕಾಂಗ್ರೆಸ್ಸೇತರವಾದ'ದ ನೆಪದಲ್ಲಿ ನೆನಪಿಸಿಕೊಳ್ಳುತ್ತಾ ಒಂದು 'ಬ್ಲಾಗ್' ಕೂಡ ಬರೆದಿದ್ದಾರೆ! ಆದರೆ ಸ್ವತಃ ಲೋಹಿಯಾ ಅವರು ತಾವು ಬದುಕಿದ್ದಾಗ ಎಂದೂ ಈ ದಿನದಂದು ತಮ್ಮ ಜನ್ಮದಿನವನ್ನು ಆಚರಿಸಲು ತಮ್ಮ ಅಭಿಮಾನಿಗಳಿಗೆ ಅವಕಾಶ ಕೊಡಲಿಲ್ಲ. ಏಕೆಂದರೆ ಅದು ಭಗತ್ ಸಿಂಗ್‌ರನ್ನು ಬ್ರಿಟಿಷ್ ಸರ್ಕಾರ ಗಲ್ಲಿಗೇರಿಸಿದ ದಿನವೂ ಆಗಿತ್ತು. ಮಹಾನ್ ರಾಷ್ಟ್ರಪ್ರೇಮಿಯೂ, ಮಹಾನ್ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ಅವರಿಗೆ ಅದು ತೀವ್ರ ಶೋಕದ ದಿನವೂ ಆಗಿತ್ತು.

ಆದರೆ ಅವರ ಸಾವಿನ ೫೩ ವರ್ಷಗಳ ನಂತರ ಅವರ ಈ ೧೦೯ನೇ ಜನ್ಮದಿನದಂದೂ ಅವರನ್ನು ದೇಶ ಶೋಕದೊಂದಿಗೇ ನೆನೆಸಿಕೊಳ್ಳಬೇಕಾದ ಪರಿಸ್ಥಿತಿ ಇದೆ. ಅದಕ್ಕೆ ಕಾರಣ ಬೇರೆ. ಅದು, ಈಗ ನಮ್ಮ ಮನೆಯ ಹೊಸ್ತಿಲಿಗೇ ಬಂದಿರುವ ಲೋಕಸಭಾ ಚುನಾವಣೆಗಳಿಗಾಗಿ ನಡೆಯುತ್ತಿರುವ ರಾಜಕಾರಣದ ಪರಿ. ಈ ಚುನಾವಣೆಗಳ ವೈಶಿಷ್ಟ್ಯವೆಂದರೆ ಎರಡೂ ಕಡೆ ನಿರ್ಮಾಣವಾಗುತ್ತಿರುವ ಮೈತ್ರಿ ರಾಜಕಾರಣ. ಇವುಗಳಲ್ಲಿ ವಿರೋಧ ಪಕ್ಷಗಳ ಮೈತ್ರಿಕೂಟವನ್ನು ಮಹಾಘಟಬಂಧನ ಎಂದು ಅದರ ನಿರ್ಮಾತೃಗಳು ಕರೆದುಕೊಂಡಿದ್ದಾರೆ. ಆ ಘಟಬಂಧನದ ಉದ್ದೇಶ ಈಗ ಆಡಳಿತಾರೂಢವಾಗಿರುವ ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸುವುದು. ಈ ಬಿಜೆಪಿಯೊಂದಿಗೆ ಹಲವು ಪಕ್ಷಗಳ ಎನ್‌ಡಿಎ ಎಂಬ ಮೈತ್ರಿಕೂಟವಿದ್ದರೂ ಮಹಾಘಟಬಂಧನದ ಗುರಿ ಏನಿದ್ದರೂ ಬಿಜೆಪಿಯೆಡೆಗೇ. ಅದಕ್ಕೆ ಅವು ನೀಡುವ

ಕಾರಣ, ಅದು ಇಂದು ದೇಶದ ಬಹುಭಾಗದಲ್ಲಿ ಭದ್ರವಾಗಿ ಬೇರೂರಿದ್ದು, ದೇಶಾದ್ಯಂತ ಏಕಮೇವಾದ್ವಿತೀಯ ಪಕ್ಷವಾಗಿ ಬೆಳೆಯುತ್ತಿದೆ ಮತ್ತು ನರೇಂದ್ರ ಮೋದಿ ಅವರ ಗಡಸು ವ್ಯಕ್ತಿತ್ವದಿಂದಾಗಿ ಏಕವ್ಯಕ್ತಿ ಪಕ್ಷವಾಗಿ ಸರ್ವಾಧಿಕಾರದತ್ತ ಚಲಿಸಿದೆ ಎಂಬುದು. ಲೋಹಿಯಾ ಅವರು ತಮ್ಮ ಹಠಾತ್ ಸಾವಿನ ಮುನ್ನಾ ದಿನಗಳಲ್ಲಿ ವಿರೋಧ ಪಕ್ಷವೊಂದರ ಪ್ರಮುಖ ನಾಯಕರಾಗಿ ಅಂದಿನ ಆಡಳಿತಾರೂಢ ಕಾಂಗ್ರೆಸ್ ಮತ್ತು ಅದರ ನಾಯಕ ನೆಹರೂ ಅವರ ವಿಷಯವಾಗಿ ಆತಂಕಗೊಂಡಿದ್ದುದೂ ಇಂತಹುದೇ ಕಾರಣಗಳಿಗಾಗಿ. ಅದೇ ಅವರನ್ನು ೧೯೬೭ರ ಸಾರ್ವತ್ರಿಕ ಚುನಾವಣೆಗಳ ಸಂದರ್ಭದಲ್ಲಿ– ಆ ಹೊತ್ತಿಗೆ ನೆಹರೂ ನಿಧನರಾಗಿದ್ದರಾದರೂ–ಭಾರತದಲ್ಲಿ ಮೊದಲಬಾರಿಗೆ ಮೈತ್ರಿ ರಾಜಕಾರಣದ ಪ್ರಯತ್ನ ಮಾಡಲು ಪ್ರೇರೇಪಿಸಿದ್ದು. ತಮ್ಮ ಸಮಾಜವಾದಿ ಪಕ್ಷದ ರಾಜಕೀಯ ದಾರಿಯೇ ಶ್ರೇಷ್ಠ ಎಂಬ ನಂಬಿಕೆಯನ್ನು ತೊರೆದ ಅವರು ಮೊದಲು ದೇಶವನ್ನು ಕಾಂಗ್ರೆಸ್‌ನಿಂದ ರಕ್ಷಿಸಬೇಕಾಗಿದೆ; ಅದಕ್ಕಾಗಿ ತಾವು ದೆವ್ವದೊಂದಿಗೂ ರಾಜಿಯಾಗಲು ಸಿದ್ಧ ಎಂದು ಘೋಷಿಸಿದ್ದರು. ಇದನ್ನು ಅವರು ಕಾಂಗ್ರೆಸ್ಸೇತರವಾದ ಎಂದು ಕರೆದಿದ್ದರು.

ಅಂದಿನ ಕಾಂಗ್ರೆಸ್ ಜಾಗದಲ್ಲಿ ಇಂದು ಬಿಜೆಪಿ ಇದೆ. ಇದೊಂದು ವಿಪರ್ಯಾಸವೇ ಸರಿ. ಏಕೆಂದರೆ ಇಂದಿನ ಬಿಜೆಪಿಯ 'ಕಾಂಗ್ರೆಸ್ ಮುಕ್ತ ಭಾರತ' ಎಂಬ ಘೋಷಣೆಯೇ ಈ ಪಕ್ಷದ ಮೂಲರೂಪವಾದ ಭಾರತೀಯ ಜನಸಂಘದ ರಾಜಕೀಯ ಗುರಿಯೂ ಆಗಿತ್ತು ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು. ಈ ಭಾರತೀಯ ಜನಸಂಘ ಹುಟ್ಟಿಕೊಂಡಿದ್ದೇ ಕಾಂಗ್ರೆಸ್ ಕಟ್ಟತೊಡಗಿದ್ದ ಹೊಸ ಭಾರತದ ಕನಸನ್ನು ಅದು ಭಾರತೀಯ ಸಂಸ್ಕೃತಿಯ ಅಪಭ್ರಂಶಗಳಿಂದ ಕೂಡಿದ್ದು ಎಂಬ ಕಾರಣದಿಂದ ಮತ್ತು ಅದಕ್ಕೊಂದು ಹೊಸ ಭಾರತದ ಪರ್ಯಾಯ ಕನಸನ್ನು ಕಟ್ಟಿಕೊಡಲು. ಆ ದಿಕ್ಕಿನಲ್ಲಿ ಆ ಪಕ್ಷದ ಇಂದಿನ ಅವತಾರವಾದ ಬಿಜೆಪಿ ಯಶಸ್ಸಿನ ಒಂದೊಂದೇ ಮೆಟ್ಟಿಲೇರುತ್ತಿದ್ದಂತೆ ಅದು ಕಾಂಗ್ರೆಸ್ ಮಾತ್ರವಲ್ಲ, ಎಲ್ಲ ಪ್ರಮುಖ ವಿರೋಧಪಕ್ಷಗಳಲ್ಲಿ ಆತಂಕ ಹುಟ್ಟಿಸಿದೆ. ಇಲ್ಲಿಯೇ ಇಂದು ಲೋಹಿಯಾ ಅವರ ರಾಜಕಾರಣದ ಅರ್ಥವಂತಿಕೆ ಕಂಡುಬರುವುದು. ಅದು ಅವರ ಅಂದಿನ ಕಾಂಗ್ರೆಸ್ಸೇತರವಾದದ ಮೈತ್ರಿ ರಾಜಕಾರಣದ ತಂತ್ರದ ಮಟ್ಟವನ್ನೂ ಮೀರಿದ ಅವರ ರಾಜಕೀಯ ದರ್ಶನದ ಕೇಂದ್ರ ಭಾಗಕ್ಕೆ ಸಂಬಂಧಪಟ್ಟುದುದಾಗಿತ್ತು. ಅದು ಅವರು ಪಶ್ಚಿಮದಿಂದ ಆಮದಾದ ಸಮಾಜವಾದಕ್ಕೆ ಗಾಂಧಿ ಪ್ರಣೀತ 'ಸ್ವ–ರಾಜ್ಯ' ಪರಿಕಲ್ಪನೆಯ ಸತ್ವವನ್ನು ತುಂಬಿ ನಮ್ಮದನ್ನಾಗಿ ಮಾಡಿಕೊಂಡ ಅವರ ಅನುಪಮ ಸೃಜನಶೀಲ ಮನಸ್ಸಿನ ಕೊಡುಗೆಯಾಗಿತ್ತು. ಈ ದೃಷ್ಟಿಯಿಂದ ಲೋಹಿಯಾ ಕಂಡುಕೊಂಡು ಪ್ರತಿಪಾದಿಸಿದ ಸಮಾಜವಾದ ಮಾರ್ಕ್ಸ್‌ವಾದದಿಂದ ಪ್ರೇರಿತವಾದ ಭೌತವಾದಿ ಸಮಾಜವಾದದಿಂದ ಮೂಲಭೂತವಾಗಿ ಭಿನ್ನವಾಗಿತ್ತು.

ಅದು ಲೋಹಿಯಾ ಅವರು ಆಧುನಿಕ ಯಂತ್ರ ನಾಗರೀಕತೆ ಯುಕ್ತ ಅಡೆತಡೆಗಳಿಲ್ಲದೆ ಸರ್ವಮಾನ್ಯವಾಗಿ ಜಗತ್ತಿನಾದ್ಯಂತ ಹಲವು ರೂಪಗಳಲ್ಲಿ ನಿರ್ಮಾಣ ಮಾಡತೊಡಗಿದ್ದ ಏಕರೂಪಿ ಮನಸ್ಸಿನ (Monotonic mind and logic)

ವಿರುದ್ಧದ ಹೋರಾಟವಾಗಿತ್ತು. ಅದು ಅವರ ಕಾಲದಲ್ಲಿ ಮುಚ್ಚಿದ ಸಮಾಜವೆಂದು ಗುರುತಿಸಲಾಗುತ್ತಿದ್ದ ಕಮ್ಯೂನಿಸ್ಟ್ ಸಮಾಜದಲ್ಲಿ ಮಾತ್ರವಲ್ಲ, ಮುಕ್ತವೆಂದು ಹೇಳಲಾಗುತ್ತಿದ್ದ ಬಂಡವಾಳಶಾಹಿ ಸಮಾಜದಲ್ಲೂ ನಿರ್ಮಾಣವಾಗುತ್ತಿರುವುದನ್ನೂ ಅವರು ಗುರುತಿಸಿ ಆತಂಕಗೊಂಡಿದ್ದರು. ಯಂತ್ರ ನಾಗರೀಕತೆ ಮನುಷ್ಯನ ಮಿತಿ ಇಲ್ಲದ ಲೌಕಿಕ ಸುಖಗಳ ಆಸೆಯ ಈಡೇರಿಕೆಗಾಗಿ ಹೆಚ್ಚೆಚ್ಚು ಸಂಕೀರ್ಣವೂ, ಬೃಹತ್ತೂ ಆಗಿ ಬೆಳೆಯುತ್ತಾ ಅವನನ್ನು ತನ್ನ ಜಟಿಲತೆ ಮತ್ತು ಭವ್ಯತೆಗಳಿಂದ ಮರುಳುಗೊಳಿಸಿ ತನ್ನ ದಾಸನನ್ನಾಗಿ ಮಾಡಿಕೊಂಡಾಗ ಅವನ ಮನಸ್ಸು ಸಹಜವಾಗಿಯೇ ಏಕರೂಪಿಯಾಗುವ ಜಡ ಸುಖದತ್ತ ವಾಲುತ್ತದೆ ಎಂದು ಅವರು ಮುನ್ನೋಡಿದ್ದರು. ಇದೇ ಮನುಷ್ಯನ ಎಲ್ಲ ಆಜನ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಹಕ್ಕುಗಳ ಅರಿವು ಮಸುಕುಗೊಳ್ಳುತ್ತಾ ಅವನು ಪ್ರಭುತ್ವದ–ಪ್ರಜಾಪ್ರಭುತ್ವದ ಹೆಸರಿನಲ್ಲಿಯೂ– ಬಂದಿಯಾಗಲು ಆರಂಭಿಸುವ ಕಾಲ. ನಾಗರಿಕ ಹಕ್ಕುಗಳನ್ನು ಹೆಚ್ಚುವರಿ ಸುಖ–ಸವಲತ್ತುಗಳ ಭರವಸೆಗಳೊಂದಿಗೆ ವಿನಿಮಯ ಮಾಡಿಕೊಳ್ಳಲು ಮನಸ್ಸು ಸಿದ್ಧವಾಗುವ ಕಾಲ. ಅದೇ ಪ್ರಜೆಯ ಉಸಿರುಗಟ್ಟಿಸುವಂತಹ ಸರ್ವಾಧಿಕಾರ ಬೆಳೆಯಲು ಅಸ್ತಿವಾರ ಹಾಕಲ್ಪಡುವ ಕಾಲ ಎಂದು ಅವರು ಹೇಳುತ್ತಿದ್ದರು. ತನ್ನ ದೇಶಕ್ಕಾಗಿ ಭವ್ಯ ಪರಂಪರೆಯ, ಭವ್ಯ ಭವಿಷ್ಯದ ಭವ್ಯ ಕನಸನ್ನು ಕಟ್ಟತೊಡಗಿದ್ದ ಹಿಟ್ಲರನ ರಾಜಕಾರಣದ ಆರಂಭದ ದಿನಗಳನ್ನು ಲೋಹಿಯಾ ತಾವು ವಿದ್ಯಾರ್ಥಿಯಾಗಿ ಜರ್ಮನಿಯಲ್ಲಿದ್ದಾಗ ಹತ್ತಿರದಿಂದ ಗಮನಿಸಿದ್ದರು; ಆತಂಕಗೊಂಡಿದ್ದರು. ಆ ಆತಂಕದಿಂದಲೇ ಅವರು ತಮ್ಮ ಮಾರ್ಗದರ್ಶಕರ ಸಲಹೆಯ ಮೇರೆಗೆ ತಮ್ಮ ಡಾಕ್ಟೊರೇಟ್ ಪದವಿಯ ಔಪಚಾರಿಕೆಗಳು ಮುಗಿಯುವ ಮೊದಲೇ ತ್ವರೆಯಿಂದ ಆ ದೇಶ ಬಿಟ್ಟು ಬಂದಿದ್ದರು.

ಇಂತಹ ಸೂಕ್ಷ್ಮಮತಿಯಾದ ಲೋಹಿಯಾಗೆ ನೆಹರೂ ರಾಜಕಾರಣವೂ ಅಭೇಧ್ಯವಾದ ಏಕವ್ಯಕ್ತಿ ರಾಜಕಾರಣವಾಗಿಯೇ ಕಂಡಿತು. ಅದರ ಹಿಂದೆ ಗಾಂಧಿ ಕನಸಿಗೆ ತದ್ವಿರುದ್ಧವಾದ ಪಶ್ಚಿಮದ ಮಾದರಿಯ ಆಧುನಿಕ ಯಂತ್ರ ನಾಗರೀಕತೆಯ ಆಧಾರದ ಮೇಲೆ ಕಟ್ಟಲಾಗುವ ಭವ್ಯ ಭಾರತದ ಕನಸು ಕಂಡಿತು. ಅದು ಅವರ ಪ್ರಕಾರ ಭಾರತವನ್ನು ಹಲವು ಅಸಮಾನತೆಗಳನ್ನು ನಿರ್ಮಿಸಿ ಬಡವರ ಮತ್ತು ದುರ್ಬಲರ ಮಾನವ ಮತ್ತು ನಾಗರೀಕ ಹಕ್ಕುಗಳನ್ನು ಉಳ್ಳವರ ಪಾಲು ಮಾಡುವ ದುಃಸ್ವಪ್ನವಾಗಿತ್ತು. ಜೊತೆಗೇ ಈ ದಾರಿಯನ್ನು ವಿರೋಧಿಸುವ ರಾಜಕಾರಣ ಮಾಡುವವರನ್ನು ಎಲ್ಲ ತಂತ್ರಗಳ ಮೂಲಕ ದಮನ ಮಾಡುವ ಪ್ರಭುತ್ವದ ಬರ್ಬರತೆಯ ದರ್ಶನ ಅವರು ನಡೆಸಿದ ಪ್ರತಿಭಟನಾ ಮೆರವಣಿಗೆಗಳು ಮತ್ತು ಹಲವು ಸೆರೆಮನೆವಾಸಗಳ ಸಂದರ್ಭದಲ್ಲಿ ಆಗಿತ್ತು. (ವಿವರಗಳಿಗೆ ನೋಡಿ: ಇವರ 'ರಾಜಕೀಯದ ಮಧ್ಯೆ ಬಿಡುವು; ಪುಸ್ತಕದಲ್ಲಿನ 'ಯೋಗದಲ್ಲಿ ಒಂದು ಅಧ್ಯಾಯ' ಎಂಬ ಲೇಖನ) ಎಲ್ಲಕ್ಕಿಂತ ಮುಖ್ಯವಾಗಿ ರಾಜ್ಯ ಪ್ರಭುತ್ವದ ನಾಲ್ಕನೇ ಆಧಾರ ಸ್ತಂಭವೆನಿಸಿದ್ದ ಮಾಧ್ಯಮ ಲೋಕ ನೆಹರೂ ಸೃಷ್ಟಿಸಿದ್ದ ಮಧ್ಯಮವರ್ಗದ ಮುಖವಾಣಿಯಾಗಿ ಲೋಹಿಯಾ ರಾಜಕಾರಣವನ್ನು ವಿಗ್ರಹ

ಭಂಜನೆ, ಅರೆಹುಚ್ಚುತನ ಎಂದು ವರ್ಣಿಸುತ್ತಾ ಲೋಹಿಯಾರ ಉಸಿರುಗಟ್ಟಿಸಿತ್ತು. ಈ ವ್ಯವಸ್ಥೆ ವಿಸರ್ಜನೆಯಾಗಬೇಕಿದ್ದರೆ ಅದರ ಪ್ರತೀಕವಾಗಿರುವ ನೆಹರೂರನ್ನು ಅಧಿಕಾರದಿಂದ ಕೆಳಗಿಳಿಸಬೇಕು ಎಂಬ ಅವರ ವಾದವನ್ನು ಮಾಧ್ಯಮಗಳು ವ್ಯಕ್ತಿ ದ್ವೇಷದ ರಾಜಕಾರಣವೆಂದು ಕರೆದವು.

ಚೀನಾ ಯುದ್ಧದ ಪರಾಭವದಲ್ಲಿ ತಮ್ಮ ಇಡೀ ರಾಜಕೀಯ ದರ್ಶನದ ಸೋಲನ್ನು ಕಂಡವರಂತೆ ಜರ್ಝರಿತರಾಗಿ ನೆಹರೂ ನಿಧರಾದ ನಂತರವೂ ಕಾಂಗ್ರೆಸ್ಸಿನ ಕುಟುಂಬ ರಾಜಕಾರಣದ ಕಪಿಮುಷ್ಟಿ ರಾಜಕಾರಣವನ್ನು ಕಂಡು ಗಾಬರಿಯಾದ ಲೋಹಿಯಾ ೧೯೬೪ರಲ್ಲಿ ನಾಲ್ಕು ಲೋಕಸಭಾ ಉಪಚುನಾವಣೆಗಳಲ್ಲಿ ಯಶಸ್ವಿಯಾಗಿ ಪ್ರಯೋಗ ಮಾಡಿನೋಡಿ ಕೊನೆಗೆ ೧೯೬೭ರ ಸಾರ್ವತ್ರಿಕ ಚುನಾವಣೆಗಳ ಹೊತ್ತಿಗೆ 'ಮೊದಲು ಕಾಂಗ್ರೆಸ್ ತೊಲಗಲಿ. ನಂತರ ಮಿಕ್ಕಿದ್ದನ್ನು ಯೋಚಿಸೋಣ' ಎಂಬ ತುರ್ತಿನಿಂದ ಆರಂಭಿಸಿದ ಕಾಂಗ್ರೆಸ್ಸೇತರವಾದಿ ಮೈತ್ರಿ ರಾಜಕಾರಣಕ್ಕೆ ಅಸ್ತಿವಾರ ಹಾಕಿದರು. ಆದರೆ ಇದು ನಿಜವಾಗಿ ಫಲ ಕೊಟ್ಟದ್ದು, 'ಏಕರೂಪಿ' ಮನಸ್ಸಿನ ನಿರ್ಮಾಣದ ರಾಜಕಾರಣ ತನ್ನ ತುತ್ತತುದಿ ಮುಟ್ಟಿ ೧೯೭೫ರಲ್ಲಿ ಇಂದಿರಾಗಾಂಧಿಯವರು ಹೇರಿದ ತುರ್ತು ಪರಿಸ್ಥಿತಿಯ ಸರ್ವಾಧಿಕಾರವನ್ನು ಅಂತಿಮವಾಗಿ ಜನ ೧೯೭೭ರಲ್ಲಿ ತಿರಸ್ಕರಿಸಿದಾಗ. ಅದು ನಡೆದದ್ದೂ ಲೋಹಿಯಾ ಅವರ ಸಮಾಜವಾದಿ ಮಿತ್ರ ಜೆಪಿಯವರ ಪ್ರಯತ್ನದಿಂದ ಎಂಬುದೂ ವಿಶೇಷವೇ.

ಇಂದಿನ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಿ ಲೋಹಿಯಾ ಅವರ ಜನ್ಮದಿನದ ನೆಪದಲ್ಲಿ ಇದೆಲ್ಲವೂ ನೆನಪಿಗೆ ಬರಲು ಹಲವು ಕಾರಣಗಳಿವೆ. ಮುಖ್ಯವಾದದ್ದು, ಲೋಹಿಯಾ ಮುನ್ನೋಡಿದ್ದ ಮಾನವ ಸತ್ವ ಮತ್ತು ಅಳತೆಗಳನ್ನು ಧಿಕ್ಕರಿಸಿರುವ ದೈತ್ಯ ಯಂತ್ರನಾಗರೀಕತೆ ಹುಟ್ಟಿಸುವ ಮಿತಿಯಿಲ್ಲದ ಲೌಕಿಕ ಸುಖದಾಸೆ ಮಾಡುವ ಮರುಳಿನಲ್ಲಿ ಸೃಷ್ಟಿಯಾಗುವ ಏಕರೂಪಿ ಮನಸ್ಸಿನ ಪರಿಕಲ್ಪನೆಯನ್ನು ಪುನರ್ಮನನ ಮಾಡಿಕೊಳ್ಳುವ ಕಾಲವೀಗ ಬಂದಿದೆ ಎಂಬುದು. ಇಂದು ರಾಜಕೀಯ ಚರ್ಚೆಗಳಲ್ಲಿ ಇಂದಿನ ಪ್ರಧಾನ ಲಹರಿ ರಾಜಕಾರಣದ ಲಕ್ಷಣಗಳೆಂದು ಪ್ರಸ್ತಾಪಿತವಾಗುವ ಪ್ರಜಾಪ್ರಭುತ್ವದ ಆಧಾರ ಸಂಸ್ಥೆಗಳ ದುರ್ಬಲೀಕರಣ, ಬಂಡವಾಳಶಾಹಿಗಳ ಓಲೈಕೆಯ ಅಭಿವೃದ್ಧಿ ರಾಜಕಾರಣ, ಪರಿಸರ ನಾಶ, ಆದಿವಾಸಿಗಳ ನಿರ್ವಸತೀಕರಣ, ನಿರುದ್ಯೋಗ, ಮಹಿಳೆಯರು ಮತ್ತು ದುರ್ಬಲರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯದ ಪ್ರಕರಣಗಳು, ಕೋಮುವಾದ, ಅನ್ಯಾಭಿಪ್ರಾಯ ಅಸಹನೆಯ ಹಿಂಸಾಚಾರಗಳು, ಇತಿಹಾಸದ ಹೊಸ ನಿರೂಪಣೆ, ಸೇನೆಯ ವೈಭವೀಕರಣ, ಏಕವ್ಯಕ್ತಿ ರಾಜಕಾರಣ ಮತ್ತು ಇವೆಲ್ಲವೂ ನಿರ್ಣಾಯಕ ಸ್ಥಿತ್ಯಂತರ ಕಾಲದ, ಹೊಸ ಶಕೆಯ ಆರಂಭ ಕಾಲದ ಅನಿವಾರ್ಯತೆಗಳೆಂದು ಹೇಳುವ ಸರ್ವಜ್ಞ ಗರ್ವದ ಪ್ರತಿಷ್ಠಿತ ವರ್ಗವೊಂದರ ಹುಟ್ಟು ಮುಂತಾದುವೆಲ್ಲ ಆಳವಾಗಿ ಬೇರೂರಿ ನಿರಂತರವಾಗಿ ಬೆಳೆದು ಬಂದಿರುವ ಒಂದು ಏಕರೂಪಿ ಮನಸ್ಸಿನ ಪರಿಣಾಮಗಳೇ.

ಇಂದು ಯಾರಾದರೂ ಆಶ್ಚರ್ಯದಿಂದ ಕೇಳಬಹುದಾದ ಪ್ರಶ್ನೆ ಎಂದರೆ, ಏಕರೂಪಿ ಮನಸ್ಸನ್ನು ಸೃಷ್ಟಿಸುತ್ತಿದೆ ಎಂದು ಹೇಳಲಾಗುತ್ತಿದ್ದ ನೆಹರೂ ರಾಜಕಾರಣವನ್ನು ಲೋಹಿಯಾ–ಜೆಪಿಯವರ ಸಮಾಜವಾದಿ ರಾಜಕಾರಣದ ನಂತರ ಮೂಲೋತ್ಪಾಟನೆ ಮಾಡುವ ತನ್ನ ಮೂಲ ರಾಜಕೀಯ ಉದ್ದೇಶವನ್ನು ಈಗ 'ಕಾಂಗ್ರೆಸ್‌ಮುಕ್ತ ಭಾರತ' ಘೋಷಣೆಯೊಂದಿಗೆ ನವೀಕರಿಸಿಕೊಂಡು ದೀಕ್ಷಾಬದ್ಧರಂತೆ ಅಧಿಕಾರಕ್ಕೆ ಬಂದ ಬಿಜೆಪಿ ಮತ್ತು ಅದರ ನಾಯಕ ನರೇಂದ್ರ ಮೋದಿಯವರೂ ಈ ಏಕರೂಪಿ ಮನಸ್ಸಿನ ರಾಜಕಾರಣದ ಆರೋಪಗಳಿಗೆ ಗುರಿಯಾಗಿದ್ದಾರಲ್ಲಾ ಏಕೆ ಎಂಬುದು. ಅದಕ್ಕೆ ಉತ್ತರ: ಎರಡೂ ರಾಜಕಾರಣಗಳು ಇತಿಹಾಸವನ್ನು ಗ್ರಹಿಸುವ ರೀತಿ ಭಿನ್ನವಾದರೂ ಭವಿಷ್ಯದ ಲೌಕಿಕ ರೂಪಗಳನ್ನು ಕಟ್ಟುವ ವಿಷಯದಲ್ಲಿ ಇಬ್ಬರದ್ದೂ ಒಂದೇ ಮಾದರಿಯ ಕನಸು. ವಿವರಗಳಲ್ಲಿ ಸ್ವಲ್ಪ ಭಿನ್ನತೆ ಇರಬಹುದು. ಆದರೆ ಅದೇ, ಮಿತಿಯಿಲ್ಲದ ಲೌಕಿಕ ಸುಖದಾಸೆಯ ಮರುಳು ಸೃಷ್ಟಿಸುವ ಏಕರೂಪಿ ಜಡ ಮನಸ್ಸಿನಿಂದ ಪ್ರೇರಿತವಾದ ಭವ್ಯ ಕನಸು. ಭಾರತ ಹಿಂದೆಂದಿಗಿಂತ ಹೆಚ್ಚು ಈ ಕನಸ್ಸಿನಲ್ಲಿ ಸಿಕ್ಕಿ ಹಾಕಿಕೊಂಡಿದೆ.

ಇಂದು ಮೋದಿಯವರ ರಾಜಕಾರಣವನ್ನು ಸೋಲಿಸದಿದ್ದರೆ ದೇಶಕ್ಕೆ, ದೇಶದ ಪ್ರಜಾಸಮೂಹಕ್ಕೆ ಗಂಡಾಂತರ ಕಾದಿದೆ ಎಂದು ಕೂಗುತ್ತಿರುವ ನಮ್ಮ ಘಟಬಂಧನದ ನಾಯಕರಲ್ಲಿ ಯಾರಿಗೆ ಈ ಗಂಡಾಂತರಗಳ ಮೂಲ ಎಲ್ಲಿದೆ ಎಂಬುದರ ಅರಿವಿದೆ? ಅದನ್ನು ತಮ್ಮ ರಾಜಕಾರಣದಲ್ಲಿ ಅಳವಡಿಸಿಕೊಂಡು ಅದನ್ನು ಜನರಿಗೆ ಮನವರಿಕೆ ಮಾಡಿಕೊಡುವ ಧೈರ್ಯ, ವಿವೇಕ ಮತ್ತು ಜಾಣ್ಮೆ ಎಷ್ಟು ಜನರಿಗಿದೆ? ಇವು ಲೋಹಿಯಾ ಸತ್ವದ ಪುನರುಜ್ಜೀವನದಿಂದ ಮಾತ್ರ ಸಾಧ್ಯ. ಇದಿದ್ದರೆ ಘಟಬಂಧನದ ರಾಜಕಾರಣದ ಒಳಜಗಳಗಳು ಒಂದು ಹದಕ್ಕೆ ಬಂದು ಮೋದಿ ವಿರೋಧಿ ರಾಜಕಾರಣಕ್ಕೆ ಶಬ್ದಾಡಂಬರವನ್ನು ಮೀರಿದ ಹೊಸ ದರ್ಶನದ ಒಂದು ಘನತೆ ಮತ್ತು ಆತ್ಮವಿಶ್ವಾಸ ಬರಬಹುದು. ಇಲ್ಲದೇ ಹೋದರೆ ಮೋದಿ ಹೋದರೂ ಹೋಗಬಹುದು. ಆದರೆ ಅವರ ರಾಜಕಾರಣ ಹೋಗಲಾರದು. ಅದು ಮತ್ತೆ ಮತ್ತೆ ಮರುಕಳಿಸುವ, ಪ್ರತಿ ಬಾರಿ ಮರುಕಳಿಸಿದಾಗಲೂ ಹೆಚ್ಚು ವಿಕಾರವಾಗುತ್ತಾ ಹೋಗುವ ರಾಜಕಾರಣವಾಗಬಹುದು.

ಲೋಹಿಯಾ ಎಂದರೆ ಹಿಂದುಳಿದ ಜಾತಿವಾದಿ ರಾಜಕಾರಣದ ಪ್ರತೀಕ ಎಂಬ ಒಡ್ಡ ನಿರೂಪಣೆ ಚಾಲ್ತಿಗೆ ಬಂದು ಬೆಳೆದಿರುವ ಈ ದಿನಗಳಲ್ಲಿ ಇದರ ಸಾಧ್ಯತೆಯೇ ಹೆಚ್ಚು ಎಂಬುದೇ ಇಂದಿನ ದುರಂತದ ಸಂಗತಿ.

('ಸಂವಾದ' ಮಾಸಿಕದ ೨೦೧೯ರ ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟ)

‘ಕಾಂಗ್ರೆಸ್ ಮುಕ್ತ ಭಾರತ’ ನಿಜವಾಗಿಯೂ ಹಾಗೆಂದರೇನು?

ಭಾರತೀಯ ಜನತಾ ಪಕ್ಷದ ‘ಕಾಂಗ್ರೆಸ್‌ಮುಕ್ತ ಭಾರತ’ ಎಂಬ ರಾಜಕೀಯ ಘೋಷಣೆ ಆ ಪಕ್ಷದ ಹೊಸ ಘೋಷಣೆಯೇನೂ ಅಲ್ಲ. ಈ ಪಕ್ಷ ಮೂಲತಃ ಭಾರತೀಯ ಜನಸಂಘವಾಗಿ ಹುಟ್ಟಿಕೊಳ್ಳಲು ಪ್ರೇರಣೆ ನೀಡಿದ ಹಿಂದೂ ಮಹಾಸಭಾ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರೆಸ್ಸೆಸ್)ಗಳ ಗುರಿ ಮತ್ತು ತಾತ್ವಿಕತೆಗಳೇ ಕಾಂಗ್ರೆಸ್ ಮುಕ್ತ ಭಾರತವನ್ನು ನಿರ್ಮಿಸುವುದಾಗಿದ್ದವು. ಅವು ರಾಜಕೀಯ ಪಕ್ಷಗಳಾಗಿರಲಿಲ್ಲವೆಂಬ ಕಾರಣದಿಂದ ಅವು ಈ ಘೋಷಣೆಯನ್ನು ಚಲಾವಣೆಗೆ ತರಲಿಲ್ಲವಷ್ಟೆ. ಆದರೆ ಅವು ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳುವ ಪ್ರಯತ್ನವಾಗಿ ಭಾರತೀಯ ಜನಸಂಘ ಎಂಬ ರಾಜಕೀಯ ಪಕ್ಷವನ್ನು ಹುಟ್ಟುಹಾಕಿದಾಗಲೂ ಈ ಘೋಷಣೆಯನ್ನು ಸಾರ್ವಜನಿಕವಾಗಿ ಚಲಾವಣೆಗೆ ತರಲು ಸಾಧ್ಯವಿರಲಿಲ್ಲ. ಏಕೆಂದರೆ, ಕಾಂಗ್ರೆಸ್‌ನ ಅಖಿಲ ಭಾರತ ವ್ಯಾಪ್ತಿ ಮತ್ತು ಶಕ್ತಿಗಳ ಎದುರು ಇವುಗಳ ವ್ಯಾಪ್ತಿ ಮತ್ತು ಶಕ್ತಿ ತೀರಾ ನಗಣ್ಯವಾಗಿದ್ದು, ಅಂತಹ ಘೋಷಣೆಯನ್ನು ಚಾಲ್ತಿಗೆ ತರುವ ಶಕ್ತಿಯಾಗಲೀ ನೈತಿಕ ಸ್ಥೈರ್ಯವಾಗಲೀ ಅವುಗಳಿಗೆ ಇರಲಿಲ್ಲ. ಆದರೆ ಈಗ ರಾಜಕೀಯ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ತನ್ನ ಮೂಲ ಗುರಿಯನ್ನು ಈ ಘೋಷಣೆಯ ಮೂಲಕ ಸಾರ್ವಜನಿಕವಾಗಿ ಸಾರುವಷ್ಟು ರಾಜಕೀಯ ಬಲ ಮತ್ತು ಸ್ಥೈರ್ಯ ಅದು ಭಾರತೀಯ ಜನತಾ ಪಕ್ಷವಾಗಿ ಬೆಳೆದು ಗಳಿಸಿಕೊಂಡಿದೆ. ‘ಕಾಂಗ್ರೆಸ್‌ಮುಕ್ತ ಭಾರತ’ ಎಂಬ ಘೋಷಣೆ ಈಗ ಘೋಷಣೆಯಾಗಿ ಉಳಿಯದೆ ಒಂದು ರಾಜಕೀಯ ಕಾರ್ಯಕ್ರಮವಾಗಿ ನೇರ ಮತ್ತು ವಕ್ರ ಮಾರ್ಗಗಳೆಲ್ಲವುಗಳ ಮೂಲಕವೂ ಜಾರಿಗೆ ಬರುತ್ತಿದ್ದು ಅದು ಸಂಪೂರ್ಣ ಯಶಸ್ವಿಯಾಗಬಲ್ಲದೆಂಬ ವಿಶ್ವಾಸ ಭಾಜಪಕ್ಕೂ, ನಂಬಿಕೆ ಸಾರ್ವಜನಿಕರಿಗೂ ಬಂದಿದೆ. ಹಾಗೆ ನೋಡಿದರೆ ಈ ಕಾರ್ಯಕ್ರಮ ಕೇವಲ ಭಾಜಪದ್ದಾಗಿರದೆ ಸ್ವತಃ ಕಾಂಗ್ರೆಸ್ಸಿನದೇ ಆಗಿರುವಂತೆ ಕಾಣುತ್ತಿರುವುದು, ಈ ವಿಶ್ವಾಸ ಮತ್ತು ನಂಬಿಕೆಗಳನ್ನು ಬಲಪಡಿಸುತ್ತಿದೆ.

೨೦೧೪ರಲ್ಲಿ ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಭಾರಿ ಸೋಲನ್ನನುಭವಿಸಿದ ನಂತರ ಅದು ಆ ತನ್ನ ಸೋಲನ್ನು ಅರಗಿಸಿಕೊಳ್ಳಲು ನಡೆಸಿರುವ ಪ್ರಯತ್ನಗಳೆಲ್ಲ ವಿಫಲವಾಗುತ್ತಿರುವುದು ಇದನ್ನು ಸಾಬೀತುಪಡಿಸುತಿದೆ.

ಸ್ವಾತಂತ್ರ್ಯೋತ್ತರ ಭಾರತವನ್ನು ಬಹುಕಾಲ ಆಳಿದ ಕಾಂಗ್ರೆಸ್‌ನ ಚರಿತ್ರೆಯನ್ನು ಗಮನಿಸಿದಾಗ ಈ 'ಕಾಂಗ್ರೆಸ್‌ಮುಕ್ತ ಭಾರತ' ಘೋಷಣೆ ಮೇಲ್ನೋಟಕ್ಕಾದರೂ ಒಂದು ಪಕ್ಷ ತನ್ನ ರಾಜಕೀಯ ಹಕ್ಕಾಗಿ ಚಾಲ್ತಿಗೆ ತರಬಹುದಾದ ಸಕ್ರಮ ಘೋಷಣೆಯಾಗಿಯೇ ಕಾಣುತ್ತದೆ. ಆದರೆ ಇಂದಿನ ಭಾಜಪ ಕಾರ್ಯನಿರ್ವಹಿಸುತ್ತಿರುವ ರೀತಿಯನ್ನು ಗಮನಿಸಿದಾಗ ಅದರ ಈ ಘೋಷಣೆಯಲ್ಲಿನ ಕಾಂಗ್ರೆಸ್ ಎಂದರೆ ಬರೀ ಒಂದು ರಾಜಕೀಯ ಪಕ್ಷವಾಗಿರದೆ ಒಂದು ರಾಜಕೀಯ ಸಂಸ್ಕೃತಿಯ ಮೌಲ್ಯ ಪರಂಪರೆಯಾಗಿದೆ ಎಂಬುದು ಹೊಳೆದು ಈ ಘೋಷಣೆ ಅನುರಣಿಸುವ ಹಲವು ಅಪಾಯಗಳ ಸೂಚನೆಗಳು ನಮ್ಮನ್ನು ತಾಕುತ್ತವೆ. ಇಂದಿನ ಕಾಂಗ್ರೆಸ್ ಪಕ್ಷ ಈ ಮೌಲ್ಯಗಳ ಸಾಕಾರ ರೂಪವಾಗಿಲ್ಲದಿರಬಹುದು. ಆ ಮೌಲ್ಯ ಪರಂಪರೆಯನ್ನು ವಾಸ್ತವ ರಾಜಕಾರಣದ ಏಳುಬೀಳುಗಲ್ಲಿ ಕಳೆದುಕೊಂಡಿರಬಹುದು. ಅದಕ್ಕಾಗಿ ಈಗಾಗಲೇ ಅದು ಜನತೆಯಿಂದ ಎರಡು ರಾಷ್ಟ್ರೀಯ ಚುನಾವಣೆಗಳಲ್ಲಿ ಸಾರಾ ಸಗಟಾಗಿ ತಿರಸ್ಕರಿಸಲ್ಪಟ್ಟು ದೊಡ್ಡ ಬೆಲೆ ತೆತ್ತಿದೆ. 'ಕಾಂಗ್ರೆಸ್‌ಮುಕ್ತ ಭಾರತ' ಘೋಷಣೆ ಇಂದು ಸಾರ್ವಜನಿಕ ಸಾಧುತ್ವ ಪಡೆಯುತ್ತಿರುವುದೇ ಈ ದೊಡ್ಡ ಬೆಲೆಯಾಗಿದೆ. ಆದರೆ ಇದರರ್ಥ ಈ ಪಕ್ಷ ವಾರಸುದಾರಿಕೆ ಪಡೆದು ಅದನ್ನು ಸರಿಯಾಗಿ ನಿರ್ವಹಿಸದ ಮೌಲ್ಯ ಪರಂಪರೆಯೂ ಸೋತಿದೆ ಅಥವಾ ಜನರಿಂದ ತಿರಸ್ಕೃತವಾಗಿದೆ ಎಂದಲ್ಲ.

ಈ ಮೌಲ್ಯಗಳಾದರೂ ಯಾವುವು? ಸಂವಿಧಾನಾತ್ಮಕ ಪ್ರಜಾಪ್ರಭುತ್ವದ ಆಧಾರ ಮೌಲ್ಯಗಳಾದ ಪ್ರಜೆಯ ಮೂಲಭೂತ ಹಕ್ಕುಗಳ ಸಂರಕ್ಷಣೆ, ಸರ್ವ ಸಮುದಾಯಗಳ ಸಮಾನತೆಗೆ ಬದ್ಧತೆ, ಪಾರದರ್ಶಕ ನ್ಯಾಯದಾನ ಮತ್ತು ಪಾರದರ್ಶಕ ಚುನಾವಣಾ ಪದ್ಧತಿಗಳು ಹಾಗೂ ಎಲ್ಲಕ್ಕೂ ಮುಖ್ಯವಾಗಿ ಇವುಗಳಲ್ಲಿ ಯಾವುದಾದರಲ್ಲೂ ವ್ಯತ್ಯಯವಾದಾಗ ಅದನ್ನು ಪ್ರಶ್ನಿಸಿ ಪ್ರಜಾಸತ್ತಾತ್ಮಕ ಮಾರ್ಗಗಳ ಮೂಲಕ ಪ್ರತಿಭಟಿಸಿ ಆ ವ್ಯತ್ಯಯವನ್ನು ಸರಿಪಡಿಸುವ ಹಕ್ಕು. ಈ ಎಲ್ಲ ಮೌಲ್ಯಗಳು ಒಂದಲ್ಲ ಒಂದು ರೂಪದಲ್ಲಿ ನಮ್ಮ ಸಂವಿಧಾನದಲ್ಲಿ ಅಳವಡಿಕೆಯಾಗಿವೆ. ಭಾಜಪವೂ ಈ ಸಂವಿಧಾನದ ಅಡಿಯಲ್ಲಿಯೇ ಸ್ಥಾಪಿತವಾದ ಪಕ್ಷವಾದ್ದರಿಂದ ಈ ಮೌಲ್ಯಗಳನ್ನು ಈ ಪಕ್ಷವೂ ಸಂರಕ್ಷಿಸಲು ಬದ್ಧವಾಗಿದೆ ಎಂಬ ನಂಬಿಕೆಯಿಂದಲೇ ಜನ ಈ ಪಕ್ಷವನ್ನು ಕಾಂಗ್ರೆಸ್‌ಗೆ ಪರ್ಯಾಯವಾಗಿ ಆರಿಸಿದ್ದಾರೆ. ಜನ ಈ ಪಕ್ಷವನ್ನು ಆರಿಸಿರುವುದು ಇದೇ ಮೊದಲಲ್ಲ. ೧೯೯೯ರಲ್ಲಿ ಈ ಪಕ್ಷದ ನೇತೃತ್ವದ ಮೈತ್ರಿಕೂಟವನ್ನು ಗೆಲ್ಲಿಸಿತ್ತು. ನಂತರದ ಚುನಾವಣೆಗಳಲ್ಲಿ ಜನತೆ ಅದನ್ನು ಸೋಲಿಸಿತಾದರೂ ಅದಕ್ಕೆ ಕಾರಣ ಪ್ರಜೆಗಳ ಮೂಲಭೂತ ಹಕ್ಕುಗಳಲ್ಲಿ ಅಥವಾ ಪ್ರಜಾಪ್ರಭುತ್ವದ ಆಧಾರಗಳಲ್ಲಿ ವ್ಯತ್ಯಯವಾಯಿತು

ಎಂಬ ಕಾರಣದಿಂದಲ್ಲ. ಆ ಮೈತ್ರಿಕೂಟ ಅನುಸರಿಸಿದ ಆರ್ಥಿಕ ನೀತಿಯ ಕೆಲ ಅಂಶಗಳನ್ನು ಜನತೆ ಒಪ್ಪಲಿಲ್ಲ ಎಂಬ ಕಾರಣಕ್ಕಾಗಿ.

ಇಲ್ಲಿ ಎದ್ದು ಕಾಣುವುದು ವಾಜಪೇಯಿಯವರ ಭಾಜಪಕ್ಕೂ ಇಂದಿನ ನರೇಂದ್ರ ಮೋದಿಯವರ ಭಾಜಪಕ್ಕೂ ಇರುವ ವ್ಯತ್ಯಾಸ. ವ್ಯತ್ಯಾಸವೆಂದರೆ ನೆಹರೂ ಅಭಿಮಾನಿಯಾಗಿ ಅರೆ ಕಾಂಗ್ರೆಸ್ಸಿಗರೇ ಆಗಿದ್ದ ವಾಜಪೇಯಿ ನೇತೃತ್ವದ ಭಾಜಪ ಇತರ ಕಾಂಗ್ರೆಸ್ಸೇತರ ಪಕ್ಷಗಳ ಮೈತ್ರಿಕೂಟದ ಮೂಲಕ ಒಂದು ರೀತಿಯಲ್ಲಿ ಸುಧಾರಿತ ಕಾಂಗ್ರೆಸ್ ಪಕ್ಷದ ಆಡಳಿತದ ಭಾವನೆ ಹುಟ್ಟಿಸಿದ್ದರೆಂದು ಹೇಳಬೇಕು. ಹಾಗಾಗಿಯೇ ವಾಜಪೇಯಿ ಮೈತ್ರಿಕೂಟ ೨೦೦೪ರಲ್ಲಿ ಸೋತ ನಂತರವೂ ಭಾಜಪದ ಅಧ್ಯಕ್ಷರಾಗಿ ಅಡ್ವಾಣಿಯವರು ಪಾಕಿಸ್ತಾನಕ್ಕೆ ಹೋದಾಗ ಜಿನ್ನಾ ಸ್ಮಾರಕಕ್ಕೆ ಭೇಟಿ ನೀಡುವುದಲ್ಲದೆ ಅಲ್ಲಿ ಜಿನ್ನಾರನ್ನು ಸೆಕ್ಯುಲರ್ ರಾಜಕಾರಣಿ ಎಂದು ದಾಖಲಿಸಬಲ್ಲವರಾಗಿದ್ದರು. ಆದರೆ ಆ ಹೊತ್ತಿಗೆ ಪಕ್ಷದೊಳಗೇ ವಾಜಪೇಯಿ-ಅಡ್ವಾಣಿ ಜೋಡಿಯ ಮಾರ್ಗದರ್ಶನದಲ್ಲಿ ಪಕ್ಷ ತನ್ನ ಮೂಲ ಚಹರೆಗಳನ್ನು ತೊರೆಯುತ್ತಿರುವ ಬಗ್ಗೆ ಶುರುವಾಗಿದ್ದ ಆಕ್ರೋಶ ಈಗ ಒಂದು ನೆಪ ಸಿಕ್ಕಂತೆ ಸ್ಫೋಟಿಸಿ ಅಡ್ವಾಣೀಯವರ ಅಧ್ಯಕ್ಷ ಸ್ಥಾನಕ್ಕೇ ಮುಳುವಾಯಿತು. ೨೦೦೪ರಲ್ಲಿ ವಾಜಪೇಯಿ ನೇತೃತ್ವದ ಮೈತ್ರಿಕೂಟ ಎಲ್ಲರ ನಿರೀಕ್ಷೆಗೆ ವಿರುದ್ಧವಾಗಿ ಸೋಲಲು ಪಕ್ಷದೊಳಗೇ ಬುಸುಗುಡುತ್ತಿದ್ದ ಈ ಆಕ್ರೋಶವೂ ಕಾರಣವಿದ್ದೀತು. ಇದರಿಂದ ತಿಳಿಯಬೇಕಾದ ಪಾಠವೆಂದರೆ ಭಾಜಪದ ನಿಜ ನಿಯಂತ್ರಣ ಆ ಪಕ್ಷದ ಚುನಾಯಿತ ನಾಯಕರಲ್ಲಿ ಇಲ್ಲದೆ ಬೇರೆಲ್ಲೋ ಇದೆ ಎಂಬುದು. ಅದು ತನ್ನ ಗುರಿ ಈಡೇರಿಸಿಕೊಳ್ಳಲು ಕಾಂಗ್ರೆಸ್ಸೇತರ ಪಕ್ಷಗಳನ್ನು ಏಣಿಯಾಗಿ ಬಳಸಿಕೊಳ್ಳಬಯಸುವುದೇ ಹೊರತು ಅವುಗಳನ್ನು ಬೆಳೆಯಲು ಬಿಡುವುದಿಲ್ಲವೆಂಬುದು. ಏಕೆಂದರೆ ಈ ಬಹುತೇಕ ಕಾಂಗ್ರೆಸ್ಸೇತರ ಪಕ್ಷಗಳೆಲ್ಲವೂ ಮೂಲತಃ ಕಾಂಗ್ರೆಸ್‌ನಿಂದ ಕೆಲ ಸಾಂದರ್ಭಿಕ/ವೈಯಕ್ತಿಕ ಕಾರಣಗಳಿಂದಾಗಿ ಒಡೆದು ಬಂದಿರುವ ಕಾಂಗ್ರೆಸ್ ತುಂಡುಗಳೇ. ಹಾಗಾಗಿ ಬಿಜೆಪಿಯ 'ಕಾಂಗ್ರೆಸ್‌ಮುಕ್ತ ಭಾರತ' ಘೋಷಣೆಯ ದೂರಗಾಮಿ ಅರ್ಥವೇನೆಂದು ಈ ಪಕ್ಷಗಳೂ ಯೋಚಿಸಬೇಕಾಗಿದೆ.

ಅದೇನೇ ಇರಲಿ, ೨೦೦೪ರ ಸೋಲು ಮತ್ತು ೨೦೦೫ರ ಅಡ್ವಾಣಿ ಹೇಳಿಕೆ ನಂತರ ಭಾಜಪದ ಖದರೇ ಬದಲಾಯಿತು. ತನ್ನದೇ ಭಾರತದ ಕನಸಿನ ಸಾಕಾರಕ್ಕಾಗಿ ರೂಪಿಸಿದ್ದ ಭಾಜಪದ ಮೇಲೆ ಸದಾ ನಿಗಾ ಇಟ್ಟಿರುವ ಆರೆಸ್ಸೆಸ್, ಪಕ್ಷದ ವಾಜಪೇಯೀಕರಣದ ಲಾಭಗಳೆಲ್ಲ ಮುಗಿದು ನಷ್ಟದ ದಿನಗಳು ಆರಂಭವಾದಂತಿದೆ ಎಂಬ ಅರಿವಿಗೆ ಬಂದಿದ್ದು ಹೊಸ ತಲೆಮಾರಿನ ನಾಯಕತ್ವದ ಪ್ರಯೋಗವನ್ನು ಆರಂಭಿಸಿತ್ತು. ಆ ಪ್ರಯೋಗ ಗುಜರಾತ್‌ನಲ್ಲಿ ನರೇಂದ್ರ ಮೋದಿ ಎಂಬ ನಿಷ್ಠಾವಂತ ಸ್ವಯಂಸೇವಕನ ಆಡಳಿತ ರೂಪದಲ್ಲಿ ಅಭೂತಪೂರ್ವವಾಗಿ 'ಯಶಸ್ವಿ'ಯೂ ಆಗತೊಡಗಿತ್ತು. ಅಲ್ಲಿಂದ ಭಾಜಪದ ಹೊಸ ಶಕೆ ಆರಂಭವಾಯಿತೆನ್ನಬೇಕು. ಹಾಗೇ ಆರೆಸ್ಸೆಸ್ಸಿನ 'ಕಾಂಗ್ರೆಸ್‌ಮುಕ್ತ ಭಾರತ'ದ ಕನಸೂ ನನಸಾಗುವ ಹತ್ತಿರದ ದಿನಗಳ ಸೂಚನೆಗಳೂ

ದೊರೆಯತೊಡಗಿದವು. ಕೇವಲ ಆರೆಸ್ಸೆಸ್-ಬಿಜೆಪಿಗೆ ಅಲ್ಲ. ರಾಷ್ಟ್ರದ ಜನತೆಗೂ. ಇದರ ಭಾಗವಾಗಿ ಆ ರಾಜ್ಯದಲ್ಲಿ ೨೦೦೨ರಲ್ಲಿ ರಕ್ತದ ಕೋಡಿಯೇ ಹರಿಯುವಂತಾದಾಗ, ಇಂತಹ ನಾಯಕತ್ವದ ಬೆಳವಣಿಗೆಯನ್ನು 'ರಾಜಧರ್ಮ'ದ ಹೆಸರಲ್ಲಿ ತಡೆಯಲು ಮಾಡಿದ ವಾಜಪೇಯಿಯವರ ಪ್ರಯತ್ನವನ್ನು ವಿಫಲಗೊಳಿಸಿದವರು ಅಡ್ವಾಣಿಯವರೇ ಎಂಬುದು ಒಂದು ವಿಪರ್ಯಾಸ.

ಇದರ ಒಟ್ಟು ಪರಿಣಾಮವೆಂದರೆ ಬಿಜೆಪಿ ಆರೆಸ್ಸೆಸ್ಸಿನ ರಾಜಕೀಯ ಮುಖವಾಗಿರುವ ಅಗತ್ಯವೇ ಇಲ್ಲದೆ ಆರೆಸ್ಸೆಸ್ಸೇ ಬಿಜೆಪಿಯಾಯಿತು. ಅಡ್ವಾಣಿ, ಜಸವಂತ್ ಸಿಂಗ್, ಮುರಳೀ ಮನೋಹರ ಜೋಷಿ, ಯಶವಂತ ಸಿನ್ಹಾ ಮುಂತಾದ ಹಿರಿಯ ಬಿಜೆಪಿ ನಾಯಕರಿದ್ದರೂ ನರೇಂದ್ರ ಮೋದಿಯವರನ್ನು ರಾಷ್ಟ್ರದ ಪ್ರಧಾನಿ ಸ್ಥಾನದ ಅಭ್ಯರ್ಥಿಯನ್ನಾಗಿ ಘೋಷಿಸಿದ್ದರ ಹಿಂದಿನ ರಾಜಕಾರಣ ಇದಕ್ಕೆ ಸಾಕ್ಷಿ. ಆ ರಾಜಕಾರಣದ ಯಶಸ್ಸಿನ ಫಲವೇ 'ಕಾಂಗ್ರೆಸ್‌ಮುಕ್ತ ಭಾರತ' ಎಂಬ ತೆರೆದ ಘೋಷಣೆ. ಜೊತೆಗೇ ಆಡಳಿತದ ಇಕ್ಕಟ್ಟಿನಲ್ಲಿ ಮೋದಿಯವರು ಎಲ್ಲಿ ತನ್ನ ತತ್ವ ಮತ್ತು ಗುರಿಗಳ ವಿಷಯದಲ್ಲಿ ರಾಜಿ ಮಾಡಿಕೊಂಡಾರೋ ಎಂಬ ಎಚ್ಚರಿಕೆಯ ಭಾಗವಾಗಿ ಸರ್ಕಾರದಲ್ಲಿ ಆರೆಸ್ಸೆಸ್ ತನ್ನ ಇನ್ನೋರ್ವ ನಿಷ್ಠಾವಂತ ಪ್ರತಿನಿಧಿ ಅಮಿತ್ ಶಾರನ್ನು ಗೃಹ ಮಂತ್ರಿಯನ್ನಾಗಿ ನೇಮಿಸಿ ಇರಿಸಿದೆ ಎಂಬುದನ್ನು ನಾವು ಗಮನಿಸಬೇಕು. ಹಾಗಾಗಿ ಈ ಘೋಷಣೆಗೆ ಪಕ್ಷವೊಂದರ ನಾಶ ಎಂಬುದಕ್ಕಿಂತ ಆಳದ ಅರ್ಥವಿದೆ.

ಈ ಆಳದ ಅರ್ಥವನ್ನು ಅರಿಯಲು ನಾವು ಆರೆಸ್ಸೆಸ್ ಯಾವಾಗ ಏಕೆ ಸ್ಥಾಪಿತವಾಯಿತು ಎಂಬುನ್ನು ಗಮನಿಸಬೇಕು. ಕಾಂಗ್ರೆಸ್ ಆಂದೋಲನದಲ್ಲಿ ಉಗ್ರವಾದಿ ತಿಲಕರ ಅನುಯಾಯಿಗಳ ಗುಂಪು ಹಿನ್ನೆಲೆಗೆ ಸರಿದು ಖಿಲಾಫತ್ ಚಳುವಳಿ ಚದುರಿಹೋದ ನಂತರ ಭಾರತದ ಮುಸ್ಲಿಂ ಸಮುದಾಯದ ಪ್ರತಿನಿಧಿಗಳಂತಿದ್ದ ಅಲಿ ಸೋದರರು ತೋರಿದ ಮತೀಯವಾದಿ ನಿಲುವುಗಳ ನಂತರವೂ ಹಿಂದೂ-ಮುಸ್ಲಿಂ ಐಕ್ಯತೆಯನ್ನು ಬಲವಾಗಿ ಪ್ರತಿಪಾದಿಸುತ್ತಿದ್ದ ಗಾಂಧಿ ನಾಯಕತ್ವ ಭದ್ರವಾಗಿ ಬೇರೂರತೊಡಗಿದಾಗ ೧೯೨೫ರ ಸೆಪ್ಟಂಬರ್ ೨೫ರಂದು ಆರೆಸ್ಸೆಸ್ ಸ್ಥಾಪಿತವಾಯಿತು. ಅದು ಸ್ಥಾಪಿತವಾಗಿದ್ದು ಹಿಂದೂ ಮಹಾಸಭಾದ ನಾಯಕ ಮೂಂಜೆಯವರ ನೆರವಿನೊಂದಿಗೆ ಕಲ್ಕತ್ತಾದಲ್ಲಿ ವೈದ್ಯಕೀಯ ಶಿಕ್ಷಣದ ಜೊತೆಗೆ ಬಂಗಾಳದ ಉಗ್ರಗಾಮಿ 'ಅನುಶೀಲನ' ಗುಂಪಿನಲ್ಲಿ ತರಬೇತಿ ಪಡೆದ ಕೇಶವ ಬಲಿರಾಂ ಹೆಡ್ಗೆವಾರ್ ಎಂಬ ತರುಣ ವೀರೋತ್ಸಾಹಿಯಿಂದ. ಹಾಗಾಗಿಯೇ ಅದು ಆಗ ಇಟಲಿಯಲ್ಲಿ ಪ್ರಚಲಿತಕ್ಕೆ ಬರುತ್ತಿದ್ದ ಫ್ಯಾಸಿವಾದದ ಪ್ರಭಾವದಲ್ಲಿ ಸೈನಿಕ ಶಿಸ್ತು ಮತ್ತು ಶಸ್ತ್ರ ತರಬೇತಿಯ ದೀಕ್ಷಾಬದ್ಧ ಹಿಂದೂ ಧರ್ಮ ರಕ್ಷಣಾ ಪಡೆಯಾಗಿ ರೂಪುಗೊಂಡಿತು. ಮುಂದೆ ಇದು ಇದೇ ಗುಂಪಿನ ಸಾವರ್ಕರ್ ಹಿಂದೂ ಮಹಾಸಭಾದ ಅಧ್ಯಕ್ಷರಾಗಿ ರೂಪಿಸಿದ ಮತಾಧಾರಿತ ಶ್ರೇಣೀಕರಣದ ಪ್ರಜೆತನವನ್ನಾಧರಿಸಿದ 'ಹಿಂದುತ್ವ ಎಂಬ ಉಗ್ರ ಮತೀಯವಾದಿ ರಾಷ್ಟ್ರೀಯತೆಯನ್ನು ತನ್ನ ರಾಷ್ಟ್ರೀಯತೆಯ ಸಿದ್ಧಾಂತವನ್ನಾಗಿ ಒಪ್ಪಿಕೊಳ್ಳುವ ಹೊತ್ತಿಗೆ

ಗಾಂಧಿ ನಾಯಕತ್ವದಲ್ಲಿ ಕಾಂಗ್ರೆಸ್ ರೂಪಿಸುತ್ತಿದ್ದ ಹಿಂದೂ ಧರ್ಮದ ಸನಾತನ ಮೌಲ್ಯಗಳನ್ನು ಪುನರುಜ್ಜೀವನಗೊಳಿಸಿ ಬಹುತ್ವದ ಅಹಿಂಸಾತ್ಮಕ ರಾಷ್ಟ್ರೀಯತೆ ಒಂದು ದೊಡ್ಡ ಮುಖಾಮುಖಿಯನ್ನು ಈ ರೂಪದಲ್ಲಿ ಎದುರಿಸಬೇಕಾಯಿತು.

ಈ ಮುಖಾಮುಖಿ ಅಂತಿಮವಾಗಿ ಗಾಂಧಿ ಕೊಲೆಯಲ್ಲಿ ಪರ್ಯಾವಸಾನವಾದರೂ, ಗಾಂಧಿ ರೂಪಿಸಿಕೊಟ್ಟ ರಾಷ್ಟ್ರೀಯತೆ ಮತ್ತು ಅದು ಪ್ರತಿನಿಧಿಸುವ ಮೌಲ್ಯಗಳೇ ಸ್ವತಂತ್ರ ಭಾರತದ ಅಧಿಕೃತ ಮೌಲ್ಯಗಳಾದವು. ಅವುಗಳ ಸಾರ ನಮ್ಮ ಸಂವಿಧಾನದಲ್ಲಿಯೂ ಅಳವಡಿಕೆಯಾಯಿತು. ಆದರೆ ಆರೆಸ್ಸೆಸ್ ಇದನ್ನು ಸವಾಲಾಗಿ ಸ್ವೀಕರಿಸಿದಂತೆ ಗಾಂಧಿ ಮೌಲ್ಯಗಳ ಪ್ರತಿನಿಧಿಯಂತಿದ್ದ ಕಾಂಗ್ರೆಸ್‌ಗೆ ಪರ್ಯಾಯವಾಗಿ (ಮುಂದೆ ಭಾಜಪವಾಗಿ ರೂಪಾಂತರಗೊಂಡ) ಭಾರತೀಯ ಜನಸಂಘವನ್ನು ಸ್ಥಾಪಿಸಿ ಬೆಳೆಸತೊಡಗಿತು. ಮುಂದಿನದೆಲ್ಲ ಚರಿತ್ರೆ. ಕಾಂಗ್ರೆಸ್ ಒಂದು ರಾಜಕೀಯ ಪಕ್ಷವಾಗಿ ಕ್ರಮೇಣ ವ್ಯಾವಹಾರಿಕ/ಸ್ಪರ್ಧಾತ್ಮಕ ರಾಜಕಾರಣ ಇತ್ಯಾದಿ ಒಂದಲ್ಲ ಒಂದು ನೆಪದಲ್ಲಿ ಗಾಂಧಿ ಮೌಲ್ಯಗಳನ್ನು ಕೈಬಿಡುತ್ತಾ ಅವುಗಳನ್ನು ಅಪಮೌಲ್ಯ ಮತ್ತು ಅಪ್ರಸುತ್ತಗೊಳಿಸುತ್ತಾ ಹೋಗಿ ಅದೇ ಕಾರಣದಿಂದ ಒಂದು ರಾಜಕೀಯ ಪಕ್ಷವಾಗಿ ಕೂಡ ಅಪಮೌಲ್ಯ ಮತ್ತು ಅಪ್ರಸ್ತುತಗೊಂಡ ಇಂದಿನ ಸಂದರ್ಭದಲ್ಲಿ 'ಕಾಂಗ್ರೆಸ್‌ಮುಕ್ತ ಭಾರತ'ದ ಘೋಷಣೆಯು ಹೊಸ ತಲೆಮಾರೇ ಬಹುಸಂಖ್ಯಾತರಾಗಿರುವ ಪ್ರಜಾ ಸಮುದಾಯದ ನಡುವೆ ಮತ್ತು ಜಗತ್ತಿನ ಹಲವೆಡೆ ಏಕಪಕ್ಷ ಪ್ರಜಾಪ್ರಭುತ್ವ ಎಂಬ ಅರೆ ಫ್ಯಾಸಿಸಂ ತಲೆ ಎತ್ತಿರುವಾಗ ಅಪಾಯಕಾರಿಯಾಗಿ ಕಾಣದಿರುವುದರಲ್ಲಿ ಆಶ್ಚರ್ಯವೇನು?

ಇದಕ್ಕೆ ಪರಿಹಾರವಿಲ್ಲವೆ? ಪರಿಹಾರದ ಮೊದಲ ಮೂಲವನ್ನು ನಾನು ಕಾಣುವುದು ಹಲವಾರು ಕಾರಣಗಳಿಂದಾಗಿ ಭಾಜಪದಲ್ಲೇ ಸುಪ್ತವಾಗಿ ಇರುವ ಪ್ರಜಾಸತ್ತಾತ್ಮಕ ಶಕ್ತಿಗಳ ಜಾಗೃತಿ. ಇದಕ್ಕೆ ಪೂರಕವಾಗಿ ಗಾಂಧಿಯನ್ನು ಅವರ ಚಲನಶೀಲತೆಯೊಂದಿಗೆ ಪೂರ್ಣ ಪ್ರಮಾಣದಲ್ಲಿ ಪುನರುಜ್ಜೀವನಗೊಳಿಸುವುದು. ಕೆಲವರು ಕಾಂಗ್ರೆಸ್ ಪಕ್ಷದ ಪುನರುಜ್ಜೀವದ ಮೂಲಕವೂ ಆಗಬಹುದು ಎನ್ನುತ್ತಾರೆ. ಆದರೆ ಆ ಪಕ್ಷವನ್ನು ಗಾಂಧಿಯವರೇ ವಿಸರ್ಜಿಸುವ ತೀರ್ಮಾನ ಮಾಡಿದ್ದರು ಎಂದ ಮೇಲೂ ಅದು ಈವರೆಗೆ ಬದುಕುಳಿದಿರುವುದೇ ಗಾಂಧಿಯನ್ನು ಅಂಚಿಗೆ ತಳ್ಳುತ್ತಾ. ಆದರೆ ಅದು ತನ್ನ ಈ ಪಾಪದ ಪ್ರಾಯಶ್ಚಿತ್ತವಾಗಿಯಾದರೂ ಮಾಡಬಹುದಾದ ಗಾಂಧಿಯ ಪುನರುಜ್ಜೀವನದ ಪ್ರಾಮಾಣಿಕ ಪ್ರಯತ್ನವೇ ಆ ಪಕ್ಷದ ಮರುಜನ್ಮದ ರೂಪದಲ್ಲಿ ಸಾಕಾರವಾಗುವುದಾದರೆ ಬೇಡವೆನ್ನುವವರು ಯಾರು?

('ಸಮಾಜಮುಖಿ' ಪತ್ರಿಕೆಯ ೨೦೨೦ರ ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟ)

‘ಬಡವ’ರಿಗೆ ಮೀಸಲಾತಿ: ಮೋದಿಯವರ ‘ಗರೀಬಿ ಹಠಾವೋ’ ಕಾರ್ಯಕ್ರಮ!

ನರೇಂದ್ರಮೋದಿ ನೇತೃತ್ವದ ಕೇಂದ್ರ ಸರ್ಕಾರವು ಮೀಸಲಾತಿ ವ್ಯಾಪ್ತಿಗೆ ಸೇರದ (ಮೇಲ್ಜಾತಿಗಳ) ಬಡ ಎಂದು ಅದು ಹೇಳುವ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗಾವಕಾಶಗಳಲ್ಲಿ ಮೀಸಲಾತಿ ಕಲ್ಪಿಸುವ ಅವಸರದ ಹೆಜ್ಜೆ ಇಟ್ಟಿದೆ. ಇದಕ್ಕಾಗಿ ಮುಂದಿನ ಲೋಕಸಭಾ ಚುನಾವಣೆಗಳ ಎರಡೂವರೆ ತಿಂಗಳ ಮುನ್ನವಷ್ಟೇ, ಸಂಸತ್ ಅಧಿವೇಶನದ ಕೊನೆಯ ದಿನ (ರಾಜ್ಯಸಭೆಯ ಅಧಿವೇಶನವನ್ನು ಒಂದು ದಿನದ ಮಟ್ಟಿಗೆ ವಿಸ್ತರಿಸಿ) ಸಂಬಂಧಿತ ಸಂವಿಧಾನ ತಿದ್ದುಪಡಿ ಮಸೂದೆಯನ್ನು ತರಾತುರಿಯಲ್ಲಿ ಮಂಡಿಸಿದ್ದಲ್ಲದೆ ಉಭಯ ಸದನಗಳ ಅಂಗೀಕಾರ ಪಡೆಯುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಈಗ ಈ ಹೊಸ ಮೀಸಲಾತಿ ಕೇಂದ್ರ ಸರ್ಕಾರದ ಮಟ್ಟಿಗಾದರೂ ಜಾರಿಗೆ ಬಂದಿದೆ ಎಂದು ಸರ್ಕಾರ ಹೇಳುತ್ತಿದೆ.

ಸಂವಿಧಾನದ ಮುಖ್ಯ ಆಶಯಗಳಲ್ಲೊಂದಾದ ಸಾಮಾಜಿಕ ನ್ಯಾಯದ ಅರ್ಥವನ್ನೇ ತಿದ್ದಬಯಸುವ ಇಂತಹ ಮಹತ್ವದ ಮಸೂದೆಯ ಬಗ್ಗೆ ವಿಸ್ತೃತ ಚರ್ಚೆಯೇ ನಡೆಯದೆ ಅದು ಅಂಗೀಕಾರವಾದ್ದದರ ಹಿಂದಿನ ರಾಷ್ಟ್ರೀಯ ತುರ್ತಾದರೂ ಏನು? ಎಂಬ ಪ್ರಶ್ನೆಗೆ ಸರ್ಕಾರದ ಕಡೆಯಿಂದ ಸಮರ್ಪಕ ಉತ್ತರವಿಲ್ಲ. ಈ ದೃಷ್ಟಿಯಿಂದ ಸರ್ಕಾರದ ಈ ಕ್ರಮದ ಬಗ್ಗೆ ವಿವಿಧ ವಿರೋಧ ಪಕ್ಷಗಳು ತಳೆದಿರುವ ನಿಲುವುಗಳು ನೀಡುತ್ತಿರುವ ಪ್ರತಿಕ್ರಿಯೆಗಳೂ ಕುತೂಹಕಾರಿಯಾಗಿದ್ದು ಈ ಮೀಸಲಾತಿ ರಾಜಕಾರಣವು ಯಾವ ವಿಕ್ಷಿಪ್ತ ಮಟ್ಟವನ್ನು ತಲುಪಿದೆ ಎಂಬುದನ್ನು ಸೂಚಿಸುವಂತಿವೆ. ಕೆಲವು ವಿರೋಧ ಪಕ್ಷಗಳು ಇದನ್ನು ಚುನಾವಣಾ ‘ಗಿಮಿಕ್’ ಎಂದೂ, ಇನ್ನು ಕೆಲವು ಸಂವಿಧಾನಬಾಹಿರವೆಂದೂ ಕರೆಯುತ್ತಲೇ ಈ ಸಂವಿಧಾನ ತಿದ್ದುಪಡಿ ಮಸೂದೆಗೆ ಬೆಂಬಲ ನೀಡಿವೆ! ಬಿಎಸ್‌ಪಿ ನಾಯಕಿ ಮಾಯಾವತಿಯವರಂತೂ ಇದೊಂದು ವಿವೇಚನಾಹೀನ ಕ್ರಮವೆಂದು ವರ್ಣಿಸುವ ಉಸಿರಿನಲ್ಲೇ ಅದನ್ನು ಬೆಂಬಲಿಸುವುದಾಗಿಯೂ ಹೇಳಿದ್ದಾರೆ!! ವಿರೋಧ

ಪಕ್ಷಗಳ ಈ ಅಸಂಬದ್ಧ ಮತ್ತು ಹಾಸ್ಯಾಸ್ಪದ ವರ್ತನೆಗೆ ಕಾರಣ, ಬಿಜೆಪಿಯೂ ಸೇರಿದಂತೆ ರಾಷ್ಟ್ರದ ಎಲ್ಲ ರಾಜಕೀಯ ಪಕ್ಷಗಳೂ ಸಾಂವಿಧಾನಿಕ ಘನೋದ್ದೇಶದ ಮೀಸಲಾತಿಯನ್ನು ಮತದಾರ ವರ್ಗಗಳ ಓಲೈಕೆ ಕಾರ್ಯಕ್ರಮವನ್ನಾಗಿ ಪರಿವರ್ತಿಸಿ ವಿವಿಧ ಕಾಲಘಟ್ಟಗಳಲ್ಲಿ ಅದನ್ನು ರಾಜಕೀಯ ಲಾಭ-ನಷ್ಟಗಳ ಲೆಕ್ಕಾಚಾರಕ್ಕನುಸಾರವಾಗಿ ಹೊಸ ಹೊಸ ಸಮುದಾಯಗಳಿಗೆ ಅನ್ವಯವಾಗುವಂತೆ ಅನುಷ್ಠಾನ ಮಾಡುತ್ತಾ ಬಂದಿರುವುದು. ಇದರ ಒಟ್ಟು ಪರಿಣಾಮವೆಂದರೆ, ನಮ್ಮ ಸಂವಿಧಾನದಲ್ಲಿ ಮೀಸಲಾತಿ ಕಲ್ಪನೆಯನ್ನು ಅಳವಡಿಸಲಾಗಿರುವ ಸದುದ್ದೇಶವೇ ವಿಕಾರಗೊಂಡು, ಇಂದು ಅದನ್ನು- ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿದ ಮಂಡಲ್ ವರದಿ ಅನುಷ್ಠಾನದ ಸಂದರ್ಭದಲ್ಲಿ- ಬಲವಾಗಿ ವಿರೋಧಿಸುತ್ತಿದ್ದ ಪಕ್ಷವೇ ಅದರ ರಾಜಕೀಯ ಲಾಭ ಗಳಿಸಲು ಮುಂದಾಗಿರುವುದು.

ನಮ್ಮ ಸಂವಿಧಾನ ಸಮಾನ ಅವಕಾಶಗಳ ಮೂಲಕ ಸಮಾನತೆಯನ್ನು ಸಾಧಿಸುವ ಗಣರಾಜ್ಯದ ಆದರ್ಶವನ್ನು ಹೇಳುವುದಾದರೂ, ಈ ಪ್ರಕ್ರಿಯೆಗೆ ಅಡಚಣೆಯಾಗಿರುವ ಅಂಶಗಳನ್ನು ಗುರುತಿಸಿ ಅಂತಹ ಅಡಚಣೆಗಳಿಗೆ (ಅಥವಾ ತಾರತಮ್ಯಗಳಿಗೆ) ಒಳಗಾಗಿರುವ ಜನಸಮುದಾಯಗಳಿಗೆ ಒಟ್ಟು ಸಮಾಜದ ಹಿತಾಸಕ್ತಿಗಳಿಗೆ ಧಕ್ಕೆಯಾಗದಷ್ಟು ಪ್ರಮಾಣದ (ಸರ್ವೋಚ್ಚ ನ್ಯಾಯಾಲಯದ ಒಂದು ತೀರ್ಪಿನಂತೆ ಇದು ಒಟ್ಟು ಶೇ. ೫೦ನ್ನು ಮೀರಬಾರದು.) ಮೀಸಲಾತಿಯನ್ನು ನಿಗದಿಪಡಿಸಿದೆ. ಇದಕ್ಕೆ ಬಳಸಲಾಗಿರುವ ಒರೆಗಲ್ಲೆಂದರೆ, ಈ ಸಮುದಾಯಗಳು ಪ್ರಭುತ್ವದ ಅಧಿಕಾರ ರಚನೆಯಲ್ಲಿ ಸಕ್ರಿಯ ಪಾತ್ರ ವಹಿಸುವಷ್ಟು ಪ್ರಮಾಣದಲ್ಲಿ ಪ್ರಾತಿನಿಧ್ಯ ಹೊಂದಿವೆಯೇ ಎಂಬ ಲೆಕ್ಕಾಚಾರ. ಸಾಮಾಜಿಕ ವಾಸ್ತವದ ಈ ಲೆಕ್ಕವಿಲ್ಲದಿದ್ದರೆ ಪ್ರಜಾಪ್ರಭುತ್ವಕ್ಕೆ ಏನು ಅರ್ಥ? ಈ ಲೆಕ್ಕಾಚಾರದಲ್ಲಿ ಅಸ್ಪೃಶ್ಯತೆ ಇತ್ಯಾದಿ ಚಾರಿತ್ರಿಕ ಕಾರಣಗಳಿಂದಾಗಿ ಅವಕಾಶ ವಂಚಿತವಾಗಿದ್ದ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಸಮುದಾಯಗಳು ಸಹಜವಾಗಿಯೇ ಮೀಸಲಾತಿ ವ್ಯಾಪ್ತಿಗೆ ಸೇರಿದವು. ಆದರೆ ಈ ಸಮುದಾಯಗಳ ಹೊರತಾಗಿಯೂ ಇತರ ಕೆಲ ಸಮುದಾಯಗಳು ಪ್ರಭುತ್ವದ ಅಧಿಕಾರ ರಚನೆಯಲ್ಲಿ ಉಚಿತ ಪ್ರಾತಿನಿಧ್ಯ ಹೊಂದಿಲ್ಲ ಎಂದು ಕಂಡುಬಂದಾಗ ಇದಕ್ಕೆ ಈ ಸಮುದಾಯಗಳು ಶಿಕ್ಷಣ ಮತ್ತು ಉದ್ಯೋಗಾವಕಾಶ ಸ್ಪರ್ಧೆಗಳಲ್ಲಿ ಇತರರೊಂದಿಗೆ ಸಮನಾಗಿ ಸ್ಪರ್ಧಿಸಲಾಗದಿರುವುದೇ ಕಾರಣವೆಂದೂ, ಮತ್ತೆ ಇದಕ್ಕೆ ಅವು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದೇ ಕಾರಣ ಎಂದು ಅಧ್ಯಯನಗಳ ಮೂಲಕ (ಅಂದರೆ ಆಯೋಗಗಳ ವರದಿಗಳ) ಮೂಲಕ ಖಚಿತಪಡಿಸಿಕೊಂಡು ಅವುಗಳಿಗೆ ಸೂಕ್ತ ಪ್ರಮಾಣದ (ಶೇ. ೨೭) ಮೀಸಲಾತಿ ಒದಗಿಸಲಾಯಿತು. ಆದರೆ ಈ ಸಮುದಾಯಗಳ ಎಲ್ಲರಿಗೂ ಸಾರಾಸಗಟಾಗಿ ಮೀಸಲಾತಿ ಒದಗಿಸದೆ, ಅವರಲ್ಲಿ ಆರ್ಥಿಕವಾಗಿ ಒಂದು ಮಟ್ಟ ಮೀರಿರುವವರನ್ನು 'ಕೆನೆಪದರ' ವರ್ಗವೆಂದು ಕರೆದು ಅವರನ್ನು ಮೀಸಲಾತಿ ವ್ಯಾಪ್ತಿಯಿಂದ ಹೊರಗಿಡಲಾಯಿತು. (ಅಂದರೆ ಸಂವಿಧಾನದ ಪ್ರಕಾರ ಆರ್ಥಿಕ

ಹಿಂದುಳಿದಿರುವಿಕೆಯ ಆಧಾರದ ಮೀಸಲಾತಿಗೆ ಅವಕಾಶ ಇಲ್ಲವೆಂದಾಯಿತು.) ಹೀಗೆ ಈ ಮೀಸಲಾತಿಗಳ ಹಿಂದೆ ಇರುವ ಪ್ರಮುಖ ಕಾರಣ, ನಮ್ಮ ಜಾತಿ ಪದ್ಧತಿ ಮತ್ತು ಅದರಲ್ಲಿ ಅಂತರ್ಗತವಾಗಿರುವ ಶ್ರೇಣೀಕರಣದಿಂದಾಗಿ ಆದ ಅವಕಾಶ ವಂಚನೆ.

ಆದರೆ ಈ ಎಲ್ಲ ಮೀಸಲಾತಿ ಯೋಜನೆ ಕಾರ್ಯಗತವಾಗಲಾರಂಭಿಸಿದ ಕಾಲಾನುಕಾಲದ ನಂತರ ಆಗಿರುವ ಸಾಮಾಜಿಕ, ಶೈಕ್ಷಣಿಕ ಮತ್ತು ಅವಕಾಶ ಲಭ್ಯತೆಗಳ ಪ್ರಮಾಣದಲ್ಲಿನ ಬದಲಾವಣೆಗಳ ಯಾವ ಸಮೀಕ್ಷೆಯನ್ನೂ ಯಾವ ಸರ್ಕಾರವೂ ನಡೆಸಿಲ್ಲ. ನಡೆಸಿದ್ದರೆ ಪ್ರತಿ ದಶಕದ ನಂತರವೂ ಈ ಮೀಸಲಾತಿ ಕಾರ್ಯಕ್ರಮದಲ್ಲಿ ಹಲವು ಬದಲಾವಣೆಗಳನ್ನು ತರಲು (ಉದಾ: ಕೆಲವು ಸಮುದಾಯಗಳನ್ನು ಮೀಸಲಾತಿಯಿಂದ ಹೊರಗಿಡುವುದು/ಹೊಸದಾಗಿ ಒಳಗೆ ತರುವುದು ಅಥವಾ ಕೆಲ ಸಮುದಾಯಗಳ ಮೀಸಲಾತಿ ಪ್ರಮಾಣವನ್ನು ಕಡಿಮೆ/ಹೆಚ್ಚು ಮಾಡುವುದು ಇತ್ಯಾದಿ) ಸಾಧ್ಯವಿತ್ತು. ಆ ಮೂಲಕ ಮೀಸಲಾತಿಯ ತಾತ್ವಿಕತೆಗೆ ಒಂದು ಜನ ವಿಶ್ವಾಸವೂ ದೊರಕುತ್ತಿತ್ತು. ಮೀಸಲಾತಿಯ ರೂವಾರಿ ಎನಿಸಿರುವ ಡಾ. ಅಂಬೇಡ್ಕರ್ ಅವರೇ ಮೀಸಲಾತಿಗೆ ಒಂದು ದಶಕದ ಮಿತಿ ಹಾಕಿದ್ದರು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಆದರೆ ನಮ್ಮ ಸರ್ಕಾರಗಳು ಮತ್ತು ರಾಜಕೀಯ ಪಕ್ಷಗಳು ಮೀಸಲಾತಿಯನ್ನು ಜಾತಿ ಆಧಾರಿತ ರಾಜಕೀಯ ಕೊಡುಗೆ ಮತ್ತು ಆಮಿಷಗಳಂತೆ ಜನರ ಮುಂದಿಟ್ಟು ಅದರ ಸಾಂವಿಧಾನಿಕ ಪಾವಿತ್ರ್ಯವನ್ನೇ ಹಾಳು ಮಾಡಿವೆ. ಜನ ಕೂಡ ಇದನ್ನು ಜಾತಿ ಮೇಲಾಟದ ಸಾಧನದಂತೆ ಕಂಡು ಅದಕ್ಕಾಗಿ ಜಾತಿ ಹೋರಾಟಗಳನ್ನು ರೂಪಿಸತೊಡಗಿವೆ. ಉದಾಹರಣೆಗೆ ಪರಿಶಿಷ್ಟ ಜಾತಿ-ವರ್ಗಗಳಲ್ಲಿನ ಮೀಸಲಾತಿಯಲ್ಲಿ ಅಸಮತೋಲನವಿದೆ ಎಂಬ ದೂರನ್ನು ಅಧ್ಯಯನ ಮಾಡಲು ನಮ್ಮ ಕರ್ನಾಟಕ ಸರ್ಕಾರ ನೇಮಿಸಿದ್ದ ನ್ಯಾ. ಎ.ಜೆ. ಸದಾಶಿವ ಆಯೋಗ ವರದಿ ನೀಡಿ ವರ್ಷಗಳೇ ಕಳೆದರೂ, ಕೆಲ ಜಾತಿ ಹಿತಾಸಕ್ತಿಗಳ ಒತ್ತಡದ ರಾಜಕಾರಣದಿಂದಾಗಿ ಗಂಭೀರ ಪರಿಶೀಲನೆಗೂ ಒಳಗಾಗಿಲ್ಲ! ಇದರಿಂದಾಗಿ ನಮ್ಮ ಸಮಾಜದಲ್ಲಿನ ಮೂಲ ಅಸಮಾನತೆಗೆ ಮತ್ತು ಆ ಮೂಲಕ ಮೀಸಲಾತಿಗೆ ಏನು ಕಾರಣವಾಗಿತ್ತೋ ಆ ಜಾತಿ ವಿಂಗಡಣೆ ಮತ್ತು ಪ್ರತ್ಯೇಕತೆಯ ಪ್ರಜ್ಞೆ ಹೆಚ್ಚಾಗುತ್ತಾ ಸಾಮಾಜಿಕ ಐಕ್ಯತೆ ಮತ್ತು ಸೌಹಾರ್ದ ಕಡಿಮೆಯಾಗುತ್ತಾ ಅಶಾಂತಿ ಹರಡುತ್ತಿದೆ.

ಮೀಸಲಾತಿ ಕುರಿತ ಜನರ ಈ ಅ-ರಾಜಕ ಕಲ್ಪನೆಯನ್ನು ಬಳಸಿಕೊಂಡು ಇಂದು ಕೇಂದ್ರ ಸರ್ಕಾರ ಮೇಲ್ಜಾತಿ ಬಡವರಿಗೆ ಮೀಸಲಾತಿ ಕಲ್ಪಿಸಲು ಮತ್ತು ಅದರ ಬಗ್ಗೆ ಪರ-ವಿರೋಧದ ಚರ್ಚೆಗಳಿಗೆ ಕಾರಣವಾಗಿ ನಮ್ಮ ಸಮಾಜವನ್ನು ಮತ್ತಷ್ಟು ಜಾತೀಯಗೊಳಿಸುವ ಪ್ರಯತ್ನಕ್ಕೆ ಕೈ ಹಾಕಿದೆ. ಏಕೆಂದರೆ, ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯ ಆಧಾರಗಳ ಹೊರತಾಗಿ ಆರ್ಥಿಕ ಕಾರಣವೂ ಸೇರಿದಂತೆ ಮತ್ತಾವ ಕಾರಣದಿಂದಲೂ ಯಾವುದೇ ಸಾಮಾಜಿಕ ವರ್ಗಕ್ಕೆ ಮೀಸಲಾತಿ ಒದಗಿಸಲು ಸಂವಿಧಾನದಲ್ಲಿ ಅವಕಾಶವಿಲ್ಲ. ಏಕೆಂದರೆ ಬಡತನದ ಪರಿಣಾಮಗಳ

ಪರಿಹಾರಕ್ಕೆಂದೇ ಬೇರೆ ಕಾನೂನುಗಳಿದ್ದು, ಮೀಸಲಾತಿ ಎಂಬುದು ಬಡತನ ಪರಿಹಾರ ಕಾರ್ಯಕ್ರಮವಾಗಿಲ್ಲ. ಹಾಗೆ ಸಂವಿಧಾನ ತಿದ್ದುಪಡಿಯ ಮೂಲಕ ಬೇಕಾಬಿಟ್ಟಿ ಅವಕಾಶ ಕಲ್ಪಿಸಹೊರಟರೆ ಅದು ಸಂವಿಧಾನದ ಮೂಲ ಸ್ವರೂಪಕ್ಕೇ ಧಕ್ಕೆ ತರುವ ಸಂಗತಿಯಾಗಿ ಅಂತಹ ತಿದ್ದುಪಡಿ ಕಾನೂನು ಪ್ರಕಾರ ಅಸಿಂಧುವಾಗುತ್ತದೆ. ಜೊತೆಗೆ ಈ ಮೇಲ್ಜಾತಿ ಬಡವರು ಎಂದು ಹೇಳಲಾಗುವ ವರ್ಗಗಳಿಗೆ ನಮ್ಮ ಪ್ರಭುತ್ವದ ಅಧಿಕಾರ ರಚನೆಯಲ್ಲಿ ಸೂಕ್ತ ಪ್ರಾತಿನಿಧ್ಯವಿಲ್ಲ ಎಂದು ಸೂಚಿಸುವ ಯಾವ ನಿರ್ದಿಷ್ಟ ಅಧ್ಯಯನವನ್ನೂ ಸರ್ಕಾರ ಇದಕ್ಕೆ ಬೆಂಬಲವಾಗಿ ಈವರೆಗೆ ಮುಂದಿಟ್ಟಿಲ್ಲ. ಈ ದೃಷ್ಟಿಯಿಂದಲೂ ಈ ಹೊಸ ಮೀಸಲಾತಿ ಪ್ರಯತ್ನ ನ್ಯಾಯಾಲಯದ ವಿಚಾರಣೆಯ ಪ್ರಾಥಮಿಕ ಹಂತದಲ್ಲೇ ತಿರಸ್ಕೃತವಾಗುವ ಸಂಭವವಿದೆ. ಅಲ್ಲದೆ, ಮೀಸಲಾತಿ ಪ್ರಮಾಣ ಹೆಚ್ಚಿದಷ್ಟೂ ಆಡಳಿತದಲ್ಲಿ ದಕ್ಷತೆಯ ವಿಷಯದಲ್ಲೆ ಹೆಚ್ಚೆಚ್ಚು ರಾಜಿ ಮಾಡಿಕೊಳ್ಳಬೇಕಾಗುತ್ತದೆ ಎಂಬ ಕಾರಣಕ್ಕೂ ಈ ತಿದ್ದುಪಡಿ ಅಸಾಧುವಾಗುವ ಸಂಭವವಿದೆ. (ದುರದೃಷ್ಟಕರ ಸಂಗತಿ ಎಂದರೆ ಈ ಮೀಸಲಾತಿ ಕಾಯಿದೆಯನ್ನು ಪ್ರಶ್ನಿಸಿರುವ ಅರ್ಜಿಯನ್ನು ನಮ್ಮ ಸರ್ವೋನ್ನತ ನ್ಯಾಯಾಲಯ ಎರಡು ವರ್ಷಗಳ ನಂತರವೂ ವಿಚಾರಣೆಗೆ ಎತ್ತಿಕೊಂಡಿಲ್ಲ!) ಏಕೆಂದರೆ, ಮೀಸಲಾತಿಯು ಒಟ್ಟಾರೆ ಆಡಳಿತ ದಕ್ಷತೆಗೆ ಕುಂದುಂಟು ಮಾಡದ ಪ್ರಮಾಣ ಮತ್ತು ರೀತಿಯಲ್ಲಿ ಮಾತ್ರ ಜಾರಿಗೆ ತರಬೇಕೆಂಬ ಎಚ್ಚರವೂ ಮೀಸಲಾತಿ ಅಳವಡಿಕೆಯ ಕಾನೂನು ಪ್ರಕ್ರಿಯೆಯಲ್ಲಿ ಸೇರಿದೆ.

ಜೊತೆಗೇ ಮೇಲ್ಜಾತಿ ಬಡವರು ಎಂದು ಗುರುತಿಸಲು ಸರ್ಕಾರ ನಿಗದಿ ಮಾಡಿರುವ ೮ ಲಕ್ಷ ರೂ.ಗಳ ವಾರ್ಷಿಕ ವರಮಾನ (ಅಂದರೆ ತಿಂಗಳಿಗೆ ಸುಮಾರು ೬೬ ಸಾವಿರ ರೂಪಾಯಿಗಳು!) ಅಥವಾ ತತ್ಸಮವಾದ ಸ್ಥಿರಾಸ್ತಿ ಮೌಲ್ಯವು ಹಿಂದುಳಿದ ಜಾತಿಗಳ 'ಕೆನೆಪದರ'ವನ್ನು ಸರ್ಕಾರ ನಿರ್ಧರಿಸುವ ಮಿತಿಯಂತೆಯೇ ಹಾಸ್ಯಾಸ್ಪದವಾಗಿದ್ದು ನಿಜವಾದ ಬಡಜನರ ಮೇಲೆ ಪ್ರಯೋಗ ಮಾಡಿರುವ ಕ್ರೂರ ವ್ಯಂಗ್ಯವೇ ಆಗಿದೆ. ಈ ಮಿತಿಯನ್ನು ನಿರ್ಧರಿಸುವ ಮೂಲಕ ಸರ್ಕಾರ ದೇಶದ ಶೇ. ೯೦ರಷ್ಟು ಜನರನ್ನು ಬಡವರೆಂದು ಘೋಷಿಸಿ ತನ್ನ ಬಡತನ ನಿವಾರಣೆಯ ಈವರೆಗಿನ ಸಾಧನೆಗಳನ್ನು– 'ಅಭಿವೃದ್ಧಿ' ಸಂಕಥನವನ್ನು–ತಾನೇ ನಿರಾಕರಿಸಿಕೊಂಡಿರುವ ಪೆದ್ದುತನ ತೋರಿದೆ!

ಮೀಸಲಾತಿಯಿಂದ ಪ್ರತಿಭಾವಂತರಿಗೆ ಅನ್ಯಾಯವಾಗುತ್ತಿದೆ ಮತ್ತು ಇದು ಪ್ರತಿಭಾ ಪಲಾಯನಕ್ಕೆ ಕಾರಣವಾಗುತ್ತಿದೆ ಎಂದು ವಾದಿಸುತ್ತಿದ್ದವರು ಕೂಡ ಈಗ ಈ ಹೊಸ ಮೀಸಲಾತಿ ಪ್ರಸ್ತಾವವನ್ನು ಬೆಂಬಲಿಸುತ್ತಿರುವುದು ವಿಪರ್ಯಾಸಕರ. ಏಕೆಂದರೆ, ಶೇ. ೫೦ರ ಗರಿಷ್ಠ ಮೀಸಲಾತಿಯ ಹೊರತಾಗಿ ಈವರೆಗೆ 'ಪ್ರತಿಭಾವಂತ'ರ ಸ್ಪರ್ಧೆಗೆಂದೇ ಮುಕ್ತವಾಗಿದ್ದ ಶೇ. ೫೦ರಷ್ಟು ಅವಕಾಶಗಳಲ್ಲಿ ಈಗ ಶೇ. ೧೦ರಷ್ಟು ಖೋತಾ ಆಗಿದೆ! ಹಾಗೆ ನೋಡಿದರೆ, ಈ ಹೊಸ ಮೀಸಲಾತಿಗಾಗಿ ಬಡವರ್ಗಗಳೆಂದು ಮಾನ್ಯ ಮಾಡಲು ಈಗ ಕೇಂದ್ರ ಸರ್ಕಾರ ನಿಗದಿ ಮಾಡಿರುವ ಆದಾಯ/ಆಸ್ತಿ ಮಿತಿ ಮೇಲೆ ತಿಳಿಸಿದಂತೆ

ಹೆಚ್ಚೂ ಕಡಿಮೆ ಸಮಾಜದ ಬಹುಪಾಲನ್ನು ಒಳಗೊಳ್ಳುವಂತಿರುವುದರಿಂದ ಈ ಹೊಸ ಮೀಸಲಾತಿ ನಿಜವಾಗಿ ಮೀಸಲಾತಿಯೇ ಆಗಿರದೆ, ಮುಕ್ತ ಸ್ಪರ್ಧೆಗಿದ್ದ ಅವಕಾಶಗಳಲ್ಲೇ ಒಂದು ಭಾಗವನ್ನು ತೆಗೆದು 'ಮೀಸಲು' ಎಂಬ ಹೆಸರಿನಡಿ ಮತ್ತೆ ಅವರಿಗೇ ವಾಪಸ್ ಕೊಟ್ಟಂತಾಗಿದೆ ಅಷ್ಟೆ!

ಹೀಗಾಗಿ ಇದೊಂದು ಚುನಾವಣಾ ರಾಜಕೀಯ ಆಮಿಷದ ಪ್ರಯತ್ನವಾಗಿದ್ದು ಸರ್ಕಾರಕ್ಕೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಇದು ಸಮಾಜವನ್ನು ಮತ್ತಷ್ಟು ಒಡೆದು ಸಾಮಾಜಿಕ ಅಶಾಂತಿಯನ್ನು ಹೆಚ್ಚಿಸುವ ಪ್ರಯತ್ನವೇ ಆಗಿ ಪರಿಣಮಿಸಿದೆ. ಯುವಜನರಲ್ಲಿ ನವಭಾರತದ ನಿರ್ಮಾಣದ ಹೊಸ ಕನಸು ಬಿತ್ತಿ ಅಧಿಕಾರಕ್ಕೆ ಬಂದಿದ್ದ ನರೇಂದ್ರ ಮೋದಿಯವರು ತಮ್ಮ ಈ ಅಧಿಕಾರಾವಧಿಯಲ್ಲಿ ಅದನ್ನು ಸಾಕಾರಗೊಳಿಸಲು ವಿಫಲರಾಗಿ ಈಗ ಅಧಿಕಾರ ಉಳಿಸಿಕೊಳ್ಳಲು ದೇಶ ಕಟ್ಟುವ ಹಳಸಲು ಮಾದರಿಗೇ ಮೊರೆಹೋಗುತ್ತಿರುವುದು ನಿಜವಾಗಿಯೂ ಒಂದು ದುರಂತಮಯ ದೃಶ್ಯವಾಗಿದೆ.

ಒಟ್ಟಿನಲ್ಲಿ ಸಾಮಾಜಿಕ ನ್ಯಾಯದ ಒಂದು ಭಾಗವಾಗಿದ್ದ ಜಾತಿ ಮೀಸಲಾತಿಯ ಹಿಂದಿದ್ದ ಗಂಭೀರ ಜಿಜ್ಞಾಸೆಯನ್ನೇ, ಅದರ ತಾತ್ವಿಕ ಅಡಿಗಲ್ಲುಗಳನ್ನೇ ತಮ್ಮ ರಾಜಕೀಯ ಅನುಕೂಲಗಳಿಗೆ ತಕ್ಕಂತೆ ಸಡಿಲಿಸಿ ಅದನ್ನೇ ಇಡಿಯಾಗಿ ಸಾಮಾಜಿಕ ನ್ಯಾಯ ಕಾರ್ಯಕ್ರಮವೆಂಬಂತೆ ಪ್ರತಿಬಿಂಬಿಸುವ ನಮ್ಮ ರಾಜಕೀಯ ಪಕ್ಷಗಳ ವರ್ತನೆ–ರಾಜ ಪರಿವಾರಗಳ ಊರ ಬೇಡರಿಗೆ ಕರ್ನಾಟಕದಲ್ಲಿ, ಮುಸ್ಲಿಮರಿಗೆ ತೆಲಂಗಾಣದಲ್ಲಿ, ಜಾಟರಿಗೆ ಹರ್ಯಾಣದಲ್ಲಿ, ಮರಾಠರಿಗೆ ಮಹಾರಾಷ್ಟ್ರದಲ್ಲಿ, ಗುಜ್ಜರರಿಗೆ ರಾಜಸ್ಥಾನದಲ್ಲಿ ಮೀಸಲಾತಿ ನೀಡುವ ವಿವಿಧ ರಾಜಕೀಯ ಪಕ್ಷಗಳ ಸರ್ಕಾರಗಳ ಸಫಲ/ವಿಫಲ ಪ್ರಯತ್ನಗಳು–ಮೀಸಲಾತಿ ಎಂಬ ಪರಿಕಲ್ಪನೆಯನ್ನೇ ಹಾಸ್ಯಾಸ್ಪದಗೊಳಿಸಿ ಕ್ರಮೇಣ ಅಪ್ರಸ್ತುತ ಮತ್ತು ಅವಾಸ್ತವಿಕವೆನ್ನುವಂತೆ ಮಾಡುವ ದಿಕ್ಕಿನ ಅಪಾಯಕಾರಿ ಹೆಜ್ಜೆಯೇ ಆಗಿದೆ. ಇದು ಸಾಮಾಜಿಕ ಮೀಸಲಾತಿ ಕಾರ್ಯಕ್ರಮದಲ್ಲಿ ಮಾಡಬೇಕಾದ ಬದಲಾವಣೆ ಮತ್ತು ಮರುಹೊಂದಾಣಿಕೆಗಳ ಗಂಭೀರ ಪ್ರಸ್ತಾವನೆ ಮತ್ತು ಅಧ್ಯಯನಗಳ ಅವಕಾಶಗಳನ್ನೂ ಸದ್ಯಕ್ಕೆ ಮೊಟಕುಗೊಳಿಸಿದೆ ಎಂದೂ ಹೇಳಬೇಕು.

('ಪ್ರಜಾವಾಣಿ' ಪ್ರಕಟಿಸದ ಲೇಖನ)

ಪೌರತ್ವ ತಿದ್ದುಪಡಿ ಮಸೂದೆಯ ಸುತ್ತಮುತ್ತ

ಸಂಸತ್ತು ಈಗ ಅಂಗೀಕರಿಸಿ ರಾಷ್ಟ್ರಪತಿಗಳ ಅಂಕಿತದೊಂದಿಗೆ ಕಾಯಿದೆಯಾಗಲು ಕಾಯುತ್ತಿರುವ ಪೌರತ್ವ ತಿದ್ದುಪಡಿ ಮಸೂದೆಯನ್ನು ವಿರೋಧಿಸುತ್ತಿರುವವರು ಅದು ಒಂದು ನಿರ್ದಿಷ್ಟ ಮತದವರ ವಿರುದ್ಧ ತಾರತಮ್ಯ ನೀತಿಯನ್ನು ಒಳಗೊಂಡಿದೆ ಎಂಬ ಕಾರಣವನ್ನು ನೀಡುತ್ತಿದ್ದಾರೆ. ಇದು ನಿಜವಾದರೂ, ಅದಕ್ಕಿಂತ ಮುಖ್ಯವಾಗಿ ಈ ಮಸೂದೆ ಹಿಂದೂ ಮತದ ತಿರುಳನ್ನೇ ಬಗೆದು ಅದರ ಧಾರ್ಮಿಕತೆಯ ಆಯಾಮವನ್ನೇ ನಾಶಮಾಡುತ್ತಿದೆ ಎಂಬುದನ್ನು ಹಿಂದೂಗಳೂ ಗಮನಿಸಿದಂತಿಲ್ಲ. ಮೊದಲು ವಿವಾದದ ಈ ಆಯಾಮವನ್ನು ನೋಡಿ ನಂತರ ಕಾನೂನಿನ ಪ್ರಶ್ನೆ ನೋಡುವುದು ಉಚಿತವೆಂದು ನಾನು ಭಾವಿಸುತ್ತೇನೆ.. ಏಕೆಂದರೆ ಕಾನೂನು ಏನಿದ್ದರೂ ಹೊರಬದುಕಿಗೆ. ಧರ್ಮ ಹೊರಬದುಕನ್ನೂ ಪ್ರಭಾವಿಸುವ ಒಳಬದುಕಿಗೆ ಸಂಬಂಧಿಸಿದ್ದು.

ಯಾವುದೇ ಕಾರಣ ನೀಡಿ ಹಲವು ಮತಗಳ ಜನರಿರುವ ಒಂದು ಸಮೂಹದಿಂದ ಒಂದು ನಿರ್ದಿಷ್ಟ ಮತದವರನ್ನು ಬದುಕುವ ಅವಕಾಶಗಳ ವಿಷಯದಲ್ಲಿ ಹೊರಗಿಡುವುದು ಧಾರ್ಮಿಕವಾಗಿ ಅನೀತಿಯೆನಿಸುತ್ತದೆ. ನೇರವಾಗಿ ಹೇಳುವುದಾದರೆ ಅಧಾರ್ಮಿಕವೆನಿಸುತ್ತದೆ. ಜಗತ್ತಿಗೆ ಧರ್ಮದ ಮೂಲ ಪಾಠ ಹೇಳುವ ನಮ್ಮ ಸನಾತನ ಧರ್ಮಕ್ಕೆ ಇದು ಅಪಚಾರವೇ ಆಗಿದೆ. ಆರೆಸ್ಸೆಸ್ ಅಥವಾ ವಿಶ್ವ ಹಿಂದೂ ಪರಿಷತ್ ಅಥವಾ ಬಿಜೆಪಿ ನಮ್ಮದು ಪ್ರಧಾನವಾಗಿ ಹಿಂದೂಗಳ ದೇಶ ಎಂದು ನಂಬಿದ್ದರೆ, ಹಿಂದೂ ಧರ್ಮವೆಂಬುದು ಸನಾತನ ಧರ್ಮವಾಗಿದೆ ಎಂದು ತಿಳಿದಿದ್ದರೆ ಮತ್ತು ಸನಾತನದ ಅರ್ಥ ಗೊತ್ತಿದ್ದರೆ ಅವು ಒಟ್ಟಾಗಿ ಈಗ ದೇಶಕ್ಕಾಗಿ ಅಳವಡಿಸಿಕೊಳ್ಳುತ್ತಿರುವ ಪೌರತ್ವ ತಿದ್ದುಪಡಿ ಮಸೂದೆ ಇದಕ್ಕೆ ವಿರುದ್ಧವಾಗಿದೆ ಎಂಬುದು ಅವಕ್ಕೆ ಗೊತ್ತಾಗಬೇಕಿತ್ತು. ಗೊತ್ತಾಗಿಲ್ಲ ಎಂದರೆ ಅವು ನಂಬುವ ಹಿಂದೂ ಧರ್ಮ ಬೇರೆಯೇ ಆಗಿದೆ ಎಂಬುದು ಸ್ಪಷ್ಟ. ಅದು ಇಂದು ಬಂದು ನಾಳೆ ಅಳಿಯುವ ಧರ್ಮವೇಷಧಾರಿಯಾದ ಪುಡಾರಿ ರಾಜಕಾರಣ ಮಾತ್ರ.

ಸನಾತನ ಎಂದರೆ ಆದಿ ಇಲ್ಲದದು. ಅದರ ಇನ್ನೊಂದು ಅರ್ಥ ಅಂತ್ಯವೂ ಇಲ್ಲದ್ದು. ಅಂದರೆ ಅದು ಕಾಲಾನುಕಾಲಕ್ಕೆ ಕಂಡುಕೊಂಡ ಸತ್ಯಗಳನ್ನು ಹೀರಿಕೊಳ್ಳುತ್ತಾ ಹೋಗುವ ನಿತ್ಯ ನೂತನಶೀಲವಾದದ್ದು. ಹಾಗಾಗಿಯೇ ಅದು ದ್ವೈತಾದ್ವೈತವಲ್ಲದೆ ಅದ್ವೈತದಲ್ಲೇ ಹಲವು ಬಗೆಯ ವಿಭಿನ್ನತೆಗಳನ್ನು ಕಂಡಿತು. ಬೌದ್ಧ ಮತ್ತು ಜೈನದಿಂದ ನಿರೀಶ್ವರವಾದಿ ಅಧ್ಯಾತ್ಮಿಕತೆಯನ್ನು ತನ್ನೊಳಕ್ಕೆ ಪಡೆದುಕೊಂಡಿತು. ಒಣ ನಿರೀಶ್ವವಾದವಾದ ಚಾರ್ವಾಕ ಮತವನ್ನೂ ತನ್ನದೆಂದಿತು. ಇನ್ನು ಕಾಲಾನುಕಾಲದಲ್ಲಿ ಸಂಪರ್ಕಕ್ಕೆ ಬಂದ ಕ್ರೈಸ್ತ ಮತ್ತು ಇಸ್ಲಾಮಿ ಪಂಥಗಳನ್ನು ಸೋದರ ಧರ್ಮಗಳೆಂದು ಪರಿಗಣಿಸಿ ಅವುಗಳಿಂದಲೂ ಪಡೆಯಬಹುದಾದ್ದನ್ನು ಪಡೆದು ಬಹುಸಂಪನ್ನವಾಯಿತು. ಇದರಿಂದಾಗಿ ಒಟ್ಟಿಗೇ ಅಥವಾ ಪ್ರತ್ಯೇಕವಾಗಿ ಈ ಹಲವು ಪಂಥಗಳ ಅನುಯಾಯಿಗಳೂ ಆಗಿರಲು ಜನರಿಗೆ ಅದು ಅವಕಾಶ ನೀಡಿತು. ನಮ್ಮ ಜನಮಧ್ಯದ ಅನೇಕ ಆಚರಣೆಗಳು, ನಂಬಿಕೆಗಳು ಮತ್ತು ಸಮುದಾಯಗಳು ಇದಕ್ಕೆ ಉದಾಹರಣೆಗಳಾಗಿವೆ. ಹಾಗಾಗಿಯೇ ಶಂಕರ ಮಧ್ವ ರಾಮಾನುಜರನ್ನು ಮಾತ್ರವಲ್ಲ, ಇವರ ಮೊದಲೂ, ನಂತರವೂ ವಿಶ್ವ ರಹಸ್ಯದ ತತ್ವಗಳನ್ನು ಕಾಲಾನುಕಾಲಕ್ಕೆ ನಿತ್ಯ ಜೀವನದ ಒರೆಗಲ್ಲಿಗೆ ಹಚ್ಚುತ್ತಾ ಸತ್ಯದ ಹೊಸ ವ್ಯಾಖ್ಯಾನಗಳನ್ನು ನೀಡಿದ ಬುದ್ಧ ಮಹಾವೀರ, ಕಬೀರ, ಚೈತನ್ಯ ತುಕಾರಾಮ ಸೂರದಾಸ, ಬಸವ, ಅಲ್ಲಮ, ಕನಕ–ಪುರಂದರ ಪರಮಹಂಸ, ವಿವೇಕಾನಂದ, ರಮಣ, ಶಿಶುನಾಳ ಶರೀಫ, ನಾರಾಯಣಗುರುಗಳನ್ನೂ ಆರಾಧಿಸುತ್ತದೆ. ಸತ್ಯದ ಬಹುರೂಪಗಳನ್ನು ನಂಬುವ ಇಂತಹ ಹಲವು ಸಮುದಾಯಗಳ ಒಕ್ಕೂಟ ನಮ್ಮ ದೇಶವಾಗಿತ್ತು. ಜನಕ್ಕೆ ಬದುಕಲು ಆಧಾರಗಳು ಬೇಕು. ಕೆಲವರಿಗೆ ಒಂದೇ ಸಾಕು. ಇನ್ನು ಕೆಲವರಿಗೆ ಹಲವು ಬೇಕು. ಮುಖ್ಯವಾಗಿ ಜನ ಬದುಕಬೇಕೆಂದು ನಂಬುವವರಿಗೆ ನಿರ್ದಿಷ್ಟ ಮಾದರಿಯ ಅನಿವಾರ್ಯತೆ ಕಾಣುವುದಿಲ್ಲ. ಆದರೆ ಅವರಿಗೆ ಒಂದು ಸಾಮಾಜಿಕ ನೀತಿ ಮುಖ್ಯವಾಗಿರುತ್ತದೆ. ಅದು ಒಕ್ಕೂಟ ಧರ್ಮದ ಸಹಜೀವನ ತತ್ವ.

ಆದರೆ ರಾಷ್ಟ್ರವೆಂಬ ಕಲ್ಪನೆ ಪಶ್ಚಿಮದಿಂದ ಬಂದು ಜನರನ್ನು ಹಲವು ನೆಲೆಗಳಲ್ಲಿ ಕೆರಳಿಸುತ್ತಾ ಈ ಒಕ್ಕೂಟ ಧರ್ಮವನ್ನು ಬುಡಮೇಲುಗೊಳಿಸಿತು. ಜೊತೆಗೆ ನಾವು ರಾಷ್ಟ್ರಪಿತನ ಕೊಲೆ, ದೇಶವಿಭಜನೆಯ ತಾತ್ವಿಕ ಗೊಂದಲ ಮತ್ತು ಅನಿಶ್ಚಿತತೆಗಳ ಮಧ್ಯದಲ್ಲಿ ಸಂವಿಧಾನ ರೂಪದಲ್ಲಿ ಆರಿಸಿಕೊಂಡ; ಒಕ್ಕೂಟ ತತ್ವಕ್ಕಿಂತ ಹೆಚ್ಚಾಗಿ ಏಕೀಕೃತ ರಾಷ್ಟ್ರದ ಕಲ್ಪನೆ, ಇದನ್ನು ಸಂಸ್ಥೀಕರಿಸಿಬಿಟ್ಟಿತು. ಇದೊಂದು ಕೇಂದ್ರಾನುಗಾಮಿ ಸಂಪಿಧಾನ ಎಂಬುದು ಇಲ್ಲಿ ಗಮನಾರ್ಹ. ಇಂತಹ ಸಂವಿಧಾನದ ನಿರೂಪಣೆಗೆ ಸ್ಫೂರ್ತಿಯಾದ ಮೌಲ್ಯಗಳು ನಮ್ಮ ದೇಶ ವಿಭಜನೆಗೂ ಕಾರಣವಾಗಿದ್ದವು ಎಂದು ಹೇಳಬಹುದು. ಆ ಮೌಲ್ಯಗಳು ನೆಲಮಟ್ಟದ ಸಾಮಾನ್ಯ ಜನರನ್ನು ಆಧುನೀಕರಣದ ಆಂದೋಲನದ ನಾಯಕತ್ವದಿಂದ ದೂರವಿಟ್ಟು ಅನುಯಾಯಿಗಳಾಗಲು ಮಾತ್ರ ಅರ್ಹರೆಂದು ಪರಿಗಣಿಸುವ ವಸಾಹತುಶಾಹಿ ಆಧುನಿಕತೆಯ ಮೌಲ್ಯಗಳಾಗಿದ್ದವು.

ಹಾಗಾಗಿಯೇ ಈ ಆಧುನಿಕತೆಯ ಈ ಗುಣವನ್ನು ಗುರುತಿಸಿದ್ದ ಗಾಂಧಿ ಎಲ್ಲ ಮೂರ್ತ-ಅಮೂರ್ತ ಹಿಂಸಾ ರಚನೆಗಳನ್ನು ನಿರಾಕರಿಸುವ ಅಹಿಂಸೆಯನ್ನು ಆಧರಿಸಿದ ತನ್ನದೇ ಒಂದು ವಿಶಿಷ್ಟ ಆಧುನಿಕತೆಯನ್ನು (ಆಧುನಿಕತೆ ಎಂದರೆ ಸ್ಥೂಲವಾಗಿ, ಕಾಲಾನುಕೂಲಿತ ನಿರಂತರ ಬದಲಾವಣೆಯ ಗುಣ) ಕಂಡುಕೊಂಡು ಅದನ್ನು ಪ್ರತಿಪಾದಿಸಿ ಜನರ ಮನ ಗೆಲ್ಲತೊಡಗಿದಾಗ ಅವರನ್ನು ಯಾರು ವಿರೋಧಿಸಿ ಕೊನೆಗೆ ಅವರ ಹತ್ಯೆಗೆ ಕಾರಣರಾದರೋ ಆ ಬ್ರಿಟಿಷ್ ಸಾಮ್ರಾಜ್ಯಶಾಹಿ, ಮಹಮ್ಮದಾಲಿ ಜಿನ್ನಾ ಮತ್ತು ವಿ.ಡಿ. ಸಾವರ್ಕರ್ ಅವರ ರಾಜಕಾರಣವೇ ಈ ವಿಭಜನೆಗೂ ಕಾರಣವಾಗಿದ್ದು ಆಶ್ಚರ್ಯದ ಸಂಗತಿ ಏನಲ್ಲ. ನೆಹರೂ, ಪಟೇಲ್, ರಾಜಾಜಿ ಮುಂತಾದ ಕಲಬೆರಕೆ ಆಧುನಿಕರು ಇದಕ್ಕೆ ನಿಮಿತ್ತ ಮಾತ್ರವಾದರಷ್ಟೆ. ವಿಭಜಿತ ದೇಶಕ್ಕೆ ಕೇಂದ್ರಾನುಗಾಮಿ ಸಂವಿಧಾನವನ್ನು ರೂಪಿಸಿಕೊಡುವಲ್ಲಿ ಮುಂಚೂಣಿ ಪಾತ್ರ ವಹಿಸಿದ ಡಾ. ಅಂಬೇಡ್ಕರ್ ಅವರು ಗಾಂಧೀಜಿಯನ್ನು ವಿರೋಧಿಸುತ್ತಾ ಬಂದವರೇ ಎಂಬುದೂ ಇಲ್ಲಿ ಗಮನಾರ್ಹ.

ಗಾಂಧಿ ಹೆಸರು ಹೇಳಿಕೊಂಡೇ ಅಧಿಕಾರಕ್ಕೆ ಬಂದು ಅವರ ಮೌಲ್ಯಗಳನ್ನು ಅಪ್ರಸ್ತುತಗೊಳಿಸುತ್ತಾ ಬಂದ ಆ ಕಲಬೆರಕೆ ಆಧುನಿಕತೆಯ ವಾರಸುದಾರರಾದ ಕಾಂಗ್ರೆಸ್ಸಿಗರು, ಅದೇ ಕಾರಣದಿಂದಾಗಿ ಎಸಗುತ್ತಾ ಬಂದ ವೈವಿಧ್ಯಮಯ ಅಪರಾಧಗಳಿಂದಾಗಿ ಇಂದು ಮತ್ತೆ ಸಾವರ್ಕರ್-ಜಿನ್ನಾ ರಾಜಕಾರಣಕ್ಕೆ ದಾರಿ ಮಾಡಿಕೊಟ್ಟಿದ್ದಾರೆ. ಬಿಜೆಪಿ ಮಾಡಹೊರಟಿರುವ ಸಾವರ್ಕರ್ ರಾಜಕಾರಣವನ್ನು ಸಮರ್ಥಿಸಲು ಜಿನ್ನಾರ ರಾಜಕಾರಣವನ್ನು ಉದಾಹರಿಸುತ್ತಿರುವುದು ಇದೇ ಕಾರಣದಿಂದಲೇ! (ಹಾಗೆ ನೋಡಿದರೆ, ಮತಾತೀತರಾಗಿದ್ದ ಜಿನ್ನಾರನ್ನು ಮತೀಯರನ್ನಾಗಿಸಿದ್ದೇ ಸಾವರ್ಕರ್ ಪ್ರಣೀತ ಹಿಂದೂ ಮತೀಯ ರಾಜಕಾರಣವೇ ಎಂದು ವಾದಿಸಲು ಚರಿತ್ರೆಯಲ್ಲಿ ಹಲವು ಸಾಕ್ಷ್ಯಗಳಿವೆ.) ಹಾಗಾಗಿ ಇವು ಒಂದೇ ನಾಣ್ಯದ ಎರಡು ಮುಖಗಳಷ್ಟೆ. ಬಹಳ ವರ್ಷಗಳಿಂದ ಪಾಕಿಸ್ತಾನದಲ್ಲಿ ಚಲಾವಣೆಯಲ್ಲಿದ್ದ ಈ ನಾಣ್ಯವನ್ನು ಈಗ ಬಿಜೆಪಿ ಅದರ ಮೇಲೆ ಭಾರತ ಎಂದು ಬರೆದು ಚಲಾವಣೆಗೆ ತರಲು ಹೊರಟಿದೆ. ಇದರ ಉದ್ದೇಶ ಹಿಂದೂ ಧರ್ಮವನ್ನು ಇಸ್ಲಾಂ ಮತದ ಮಾದರಿಯಲ್ಲಿ ಪುನರ್ರೂಪಿಸಿ ಅದನ್ನು ಇಸ್ಲಾಂನಂತೆಯೇ ಒಂದು ರಾಜಕೀಯ ಅಸ್ತ್ರವನ್ನಾಗಿ ಮಾಡುವುದು. ಸಂವಿಧಾನದ ೩೭೦ ಮತ್ತು ೩೭೧ನೇ ವಿಧಿಗಳ ರದ್ದತಿ ಮತ್ತು ಇಂದಿನ ಪೌರತ್ವ ತಿದ್ದುಪಡಿ ಮಸೂದೆಗಳು ಮತ್ತು 'ಕಾಂಗ್ರೆಸ್ ಮುಕ್ತ ಭಾರತ'ದ ಕಾರ್ಯಕ್ರಮದ ಅಂಗವಾಗಿ ಅರುಣಾಚಲ, ಗೋವಾ ಮತ್ತು ಇತ್ತೀಚೆಗೆ ಕರ್ನಾಟಕದಲ್ಲಿ ನಡೆಸಿದ ರಾಜಕೀಯ ಕಾರ್ಯಚರಣೆಗಳು ಇದಕ್ಕಾಗಿ ಇಟ್ಟ ಹೆಜ್ಜೆಗಳಷ್ಟೇ.

೩೭೦ನೇ ವಿಧಿ ರದ್ದು ಮಾಡಿದಾಗ ಸರ್ಕಾರ ದೇಶದ ಯಾವುದೇ ಪ್ರದೇಶಕ್ಕೆ ಕಾನೂನಾತ್ಮಕ ವಿಶೇಷ ಸವಲತ್ತುಗಳನ್ನು ನೀಡಲಾಗದು ಎಂಬ ತತ್ವವನ್ನು ದೇಶಕ್ಕೆ ಹೇಳಿತು. ಅದು ಪ್ರತ್ಯೇಕತೆಯನ್ನು ಪ್ರಚೋದಿಸುತ್ತದೆ ಎಂದಿತು. ಆದರೆ ಅದೇ ಸರ್ಕಾರ

ಈಗ ಈಶಾನ್ಯ ಪ್ರದೇಶಗಳಲ್ಲಿ ಈ ಪೌರತ್ವ ತಿದ್ದುಪಡಿ ಮಸೂದೆಯ ವಿರುದ್ಧ ಜನ ಆಕ್ರೋಶದಿಂದ ಬೀದಿಗಿಳಿದಿರುವಾಗ ಆ ಪ್ರದೇಶಗಳಿಗೆ ೩೭೦ನೇ ವಿಧಿಯಡಿಯ ವಿಶೇಷ ಸವಲತ್ತುಗಳಿಗೇ ಸಮನಾದ ಪ್ರಜೆತನದ ವಿಶೇಷ ಸವಲತ್ತುಗಳನ್ನು ಒದಗಿಸಿರುವುದಾಗಿ ಮತ್ತು ಒದಗಿಸುವುದಾಗಿ ಹೇಳುತ್ತಿದೆ! ಇದೇ ಸರ್ಕಾರ ನಾಗಾಲ್ಯಾಂಡ್‌ನಲ್ಲಿ ಅಲ್ಲಿನ ಬಂಡುಕೋರರೊಂದಿಗೆ ಮಾಡಿಕೊಂಡಿರುವ ಒಪ್ಪಂದ ಈಗ ಪ್ರತ್ಯೇಕವಾದಿ ಎಂದು ತಾವು ಖಂಡಿಸುತ್ತಿರುವ ಕಾಶ್ಮೀರ ಒಪ್ಪಂದಕ್ಕಿಂತ ದೇಶದ ಏಕತೆಗೆ ಆಘಾತಕಾರಿಯಾಗಿದೆ ಎಂದು ಹೇಳಲಾಗುತ್ತಿದೆ. ಹಾಗಾಗಿ ಈ ದ್ವಂದ್ವ ನೀತಿಯಲ್ಲಿ ಅಡಗಿರುವುದೂ ಇಸ್ಲಾಂ ವಿರೋಧಿ ಮತೀಯತೆಯೇ: ಈಶಾನ್ಯ ರಾಜ್ಯಗಳಿಗೆ ಅನ್ವಯವಾಗುವ ತತ್ವ ಕಾಶ್ಮೀರಕ್ಕೆ ಅನ್ವಯವಾದರೆ ಅದು ಅನೈಕ್ಯತೆಗೆ ಕಾರಣವಾಗಬಹುದು!

ನಿಜ, ಇಂದು ಜಗತ್ತಿನಲ್ಲಿ ಇಸ್ಲಾಮಿ ಭಯೋತ್ಪಾದನೆ ಎಂಬುದೊಂದಿದೆ. ಅದು ಇಂದಿನ ಜಗತ್ತಿನ ಅಶಾಂತಿಗೆ ಕಾರಣವಾಗಿರುವ ಸಂಗತಿಗಳಲ್ಲಿ ಅದೂ ಒಂದಾಗಿದೆ. ಇದಕ್ಕೆ ಹಲವು ಬಾಹ್ಯ ರಾಜಕೀಯ ಕಾರಣಗಳಿದ್ದರೂ, ಒಂದು ಒಳ ರಾಜಕಾರಣವೂ ಇದೆ. ಅದೆಂದರೆ, ಆ ಧರ್ಮದಲ್ಲಿ ಖಡ್ಗಕ್ಕೆ ಧಾರ್ಮಿಕ ಮಾನ್ಯತೆ ಇದೆ ಎಂಬುದು. ಇದು ನಮ್ಮ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅದರ ಅಂಗವಾಗಿ ಗಾಂಧಿ ಆರಂಭಿಸಿದ ಹಿಂದೂ–ಮುಸ್ಲಿಂ ಐಕ್ಯತೆಯ ಕಾರ್ಯಕ್ರಮದ ಸಂದರ್ಭದಲ್ಲೂ ಚರ್ಚಿತವಾಯಿತಾದರೂ, ಅದು ಜಿನ್ನಾ–ಸಾವರ್ಕರ್ ಅವರ ಸ್ಪರ್ಧಾತ್ಮಕ ಕೋಮುವಾದಿ ರಾಜಕಾರಣದಿಂದಾಗಿ ಅಪೂರ್ಣವಾಗಿಯೇ ಉಳಿಯಿತು. ಕೊನೆಗೆ ಅದು ಇಸ್ಲಾಮಿನ ಖಡ್ಗ ಹಿಂದೂವೊಬ್ಬನ ಕೈಯಲ್ಲಿ ಪಿಸ್ತೂಲಾಗಿ ರೂಪಾಂತರಗೊಂಡು ಗಾಂಧಿಯವರನ್ನೇ ಬಲಿತೆಗೆದುಕೊಂಡ ವಿಪರ್ಯಾಸದಲ್ಲಿ ಮುಕ್ತಾಯವಾಯಿತು. ಇದು ಇಸ್ಲಾಮನ್ನು ಹಿಂಸಾತ್ಮಕ ಎಂದು ಕರೆಯುವವರ ಶಾಂತಿಪ್ರಿಯತೆಯ ಅಭಿವ್ಯಕ್ತಿ ವಿಧಾನ!

ಗೋಡ್ಸೆಯನ್ನು ದೇಶಭಕ್ತ ಎಂದು ಕರೆಯುವುದರ, ಹಾಗೆ ಕರೆಯುವುದನ್ನು ನೆಪ ಮಾತ್ರಕ್ಕೆ ಖಂಡಿಸಿ ಅಂಥವರನ್ನು ರಕ್ಷಿಸಿಕೊಳ್ಳುವುದರ ಅರ್ಥವಾದರೂ ಏನು? ಈ ದೇಶವನ್ನು ಈಗ ಗೋಡ್ಸೆ ಕಲ್ಪನೆಯ ದೇಶವನ್ನಾಗಿ ಮಾಡುವುದೇ ಆಗಿದೆ. ಅಂದರೆ ಒಂದು ಹಿಂದೂ ಪಾಕಿಸ್ತಾನವನ್ನು ಸೃಷ್ಟಿಸುವುದೇ ಆಗಿದೆ. ಇಸ್ಲಾಮೀ ಭಯೋತ್ಪಾದನೆಯನ್ನು ತಡೆಯುವುದೆಂದರೆ ಸಾರಾ ಸಗಟಾಗಿ ಮುಸಲ್ಮಾನರನ್ನು ಸೈತಾನೀಕರಿಸುವುದಲ್ಲ. ಸೈತಾನನು, ಗೋಡ್ಸೆ ಮತ್ತು ಗೋಡ್ಸೆವಾದಿಗಳ ಎದೆಯೂ ಸೇರಿ ಎಲ್ಲಿ ಬೇಕಾದರೂ ಇರಬಲ್ಲನೆಂಬ ಅರಿವಿನೊಂದಿಗೆ ಆ ಸೈತಾನನನ್ನು ನಿರ್ವಹಿಸುವ ದಕ್ಷತೆಯನ್ನು ಗಳಿಸಿಕೊಳ್ಳಬೇಕು. ಅಪರಾಧ ದಂಡನೆಯ ಕಾನೂನುಗಳನ್ನು ಇನ್ನಷ್ಟು ಬಲಪಡಿಸಬಹುದು. ಅದರ ಹಾದಿಯಲ್ಲಿ ಧರ್ಮ ಆಘಾತಗೊಳ್ಳಬಾರದೆಂಬ ಎಚ್ಚರಿಕೆಯೂ ಇರಬೇಕು. ಅಂದರೆ ಅಂತಹ ಕಾನೂನುಗಳು ಎದುರಾಳಿಯನ್ನು ಕೆರಳಿಸುವಂತಹ ಅಲ್ಲ, ಮಣಿಸುವಂತಹ– ತಾರಾತಮ್ಯವಿಲ್ಲದ ನ್ಯಾಯಯುತ–

ಕಾನೂನಾಗಿರಬೇಕು. ಸದ್ಯದ ಪೌರತ್ವ ತಿದ್ದುಪಡಿ ಮಸೂದೆ ಜಗತ್ತಿನ ನಾಗರಿಕ ಸಮಾಜದಲ್ಲಿ ಇರಲಿ, ಜಗತ್ತಿನ ಮುಸ್ಲಿಂ ಸಮುದಾಯದಲ್ಲಿ, ನಿರ್ದಿಷ್ಟವಾಗಿ ಭಾರತದೊಳಗಿನ ಮುಸ್ಲಿಂ ಸಮುದಾಯದಲ್ಲಿ ಏನು ಭಾವನೆ ಉಂಟುಮಾಡಬಹುದು, ಯೋಚಿಸಿ. ವಿಶ್ವ ಮಟ್ಟದಲ್ಲಿ ಇದರ ಸಾಧಕ ಬಾಧಕಗಳೇನು ಎಂದು ಯೋಚಿಸಿ. ಕಾನೂನುಗಳ ಮೂಲಕ ಮಾನವ ಸಹಜ ದೌರ್ಬಲ್ಯಗಳಿಂದಾಗುವ ಅನಾಹುತಗಳನ್ನು ತಡೆಯಬಹುದೇ ಹೊರತು ಸಾಕಿಕೊಂಡ ದ್ವೇಷ ಮತ್ತು ಅನುಮಾನಗಳಿಂದ ಉಂಟಾಗುವ ಅನಾಹುತ-ಅಪರಾಧಗಳನ್ನಲ್ಲ.

ಹಾಗಾಗಿ ಈ ಪೌರತ್ವ ತಿದ್ದುಪಡಿ ಮಸೂದೆ ದ್ವೇಷ ಮತ್ತು ಅನುಮಾನಗಳಿಂದ ವಿಚಲಿತವಾದ ದುರ್ಬಲ ಮನಸ್ಸಿನ ದೇಶವೊಂದರ, ಮೂಲತಃ ಭಯಭೀತಿಯಿಂದ ಹುಟ್ಟಿದ ಕ್ರಮವಾಗಿದೆ. ಇದನ್ನೀಗ ನ್ಯಾಯಾಂಗ ಮಾತ್ರ ತಡೆಯಬಲ್ಲುದು. ಏಕೆಂದರೆ ಚುನಾಯಿತ ಸರ್ಕಾರವೊಂದು ರಾಷ್ಟ್ರದ ಸ್ವರೂಪವನ್ನೇ ಬದಲಾಯಿಸುವ ಅಧಿಕಾರ ಪಡೆದಿರುವುದಿಲ್ಲ. ಅದು ಪಡೆದಿರುವುದು ಇರುವ ರಾಷ್ಟ್ರವನ್ನು ಜನರ ನೆಮ್ಮದಿಗಾಗಿ ನಡೆಸಬೇಕಾದ ಆಡಳಿತದ ಅಧಿಕಾರವನ್ನು ಮಾತ್ರ. ಇರುವ ರಾಷ್ಟ್ರದ ಆಧಾರಗಳನ್ನೇ ಬದಲಿಸುವ ಅಧಿಕಾರವನ್ನಲ್ಲ. ಜೊತೆಗೆ ಅದು (ಬಿಜೆಪಿ ಸರ್ಕಾರ) ಈ ಅಡಳಿತದ ಅಧಿಕಾರವನ್ನು ಪಡೆದಿರುವುದು, ತನ್ನ ಮೂಲ ಸೈದ್ಧಾಂತಿಕ ನಾಯಕರು ವಿರೋಧಿಸಿದ್ದ ಗಾಂಧಿ ನೇತೃತ್ವದ ಸ್ವಾತಂತ್ರ್ಯ ಹೋರಾಟ ರೂಪಿಸಿಕೊಟ್ಟ ಸಂವಿಧಾನದ ವಿಧಿ-ವಿಧಾನಗಳ ಮೂಲಕ. ಬಿಜೆಪಿ ಇಂದು ಐದು ವರ್ಷಗಳ ಆಡಳಿತಕ್ಕೆ ವಾರಸುದಾರನೇ ಹೊರತು ರಾಷ್ಟ್ರದ ಒಡೆತನಕ್ಕಲ್ಲ. ಈ ಮಸೂದೆಯ ಆಶಯವನ್ನು ತನ್ನ ಘೋಷಣಾ ಪತ್ರದಲ್ಲಿ ಸೇರಿಸಿದ್ದರೂ ಅಷ್ಟೆ, ಬಿಟ್ಟಿದ್ದರೂ ಅಷ್ಟೆ.

ಆದರೆ ಬಿಜೆಪಿ ಸರ್ಕಾರ ಮಸೂದೆ ಸಂವಿಧಾನಾತ್ಮಕವಾಗಿಯೇ ಇದೆ ಎಂದು ವಾದಿಸುತ್ತಿದೆ. ಈ ದಿಸೆಯಲ್ಲಿ ಅದು ಹಲವು ವಾದಗಳನ್ನು ಮಂಡಿಸುತ್ತಾ, ಅದಕ್ಕೆ ಬೇಕಾದ ಚಾರಿತ್ರಿಕ ಆಧಾರಗಳನ್ನೂ, ಕಾನೂನಿನ ವೇಷಭೂಷಣಗಳನ್ನೂ ಸಿದ್ಧಪಡಿಸಿಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಈ ಮಸೂದೆಯನ್ನು ಅಂಬೇಡ್ಕರ್ ಪ್ರಣೀತ ಸಂವಿಧಾನವು ರೂಪಿಸಿರುವ ನಮ್ಮ ನ್ಯಾಯಾಂಗ ವ್ಯವಸ್ಥೆ ಹೇಗೆ ನೋಡಬಹುದು ಎಂಬ ವಿಷಯ ಕುತೂಹಲಕಾರಿಯಾದದ್ದೇ ಸರಿ. ಏಕೆಂದರೆ, ನಮ್ಮ ನ್ಯಾಯಾಂಗ ಯಾವುದೇ ಸಾಂವಿಧಾನಿಕ ಪ್ರಶ್ನೆಯನ್ನು ಸಂವಿಧಾನದ ಎಲ್ಲ ಸಂಬಂಧಿತ ಅನುಚ್ಛೇದಗಳನ್ನು ಜೋಡಿಸಿಕೊಂಡು ವ್ಯಾಖ್ಯಾನ ಮಾಡಿ ತೀರ್ಪಿತ್ತರೂ ಅದು ಅಂತಿಮವಾಗಿ ಅಕ್ಷರಶಃ/ಭಾಷಿಕ ಪರಮಿತಿಗಳಲ್ಲಿನ ಪರಿಶೀಲನೆಯನ್ನು ಆಧರಿಸಿದ ತೀರ್ಪೇ ಆಗಿರುತ್ತದೆ. ಏಕೆಂದರೆ ನಾವು ಒಪ್ಪಿಕೊಂಡಿರುವ ನ್ಯಾಯವಿಧಾನ ವ್ಯವಸ್ಥೆ ಆಧರಿಸಿರುವ ತರ್ಕ ಅಥವಾ ವಿವೇಚನಾ ವಿಧಾನವೇ-ಅದೆಷ್ಟೇ ಸಂಕೀರ್ಣವಾಗಿದ್ದರೂ-ಹಾಗಿದೆ. ಏಕೆಂದರೆ ವಿವಾದದಲ್ಲಿ ಅಡಗಿರುವ ನೈತಿಕತೆಯ ಪ್ರಶ್ನೆಯೂ ಅಕ್ಷರ ರೂಪದ

ನಿಯಮ/ಕಾನೂನುಗಳ ಅರ್ಥೈಸುವಿಕೆಯ ಮೂಲಕವೇ ನಿರ್ಣಯಿಸಲ್ಪಟ್ಟಿರುತ್ತದೆ. ಆದರೆ ಈ ಅಕ್ಷರಶಃ/ತಾಂತ್ರಿಕ ಮತ್ತು ನೈತಿಕ/ಭಾವನೆಯ ನೆಲೆಗಳ ಪರಿಶೀಲನೆಯ ನಡುವೆ ಒಂದು ಕಂದಕವಿರುತ್ತದೆ. ಈ ಕಾರಣವನ್ನು ಅರಿತೇ ನಮ್ಮ ನ್ಯಾಯಾಂಗದಲ್ಲಿ ಒಂದು ತೀರ್ಪಿನ ಹಲವು ನೆಲೆಗಳ ಪರಿಶೀಲನೆ ಮತ್ತು ಮರುಪರಿಶೀಲನೆಗಳಿಗೆ ಅವಕಾಶ ಮಾಡಿಕೊಡಲಾಗಿದೆ. ಸಾಂವಿಧಾನಿಕ ನೈತಿಕತೆ (Constitutional morality) ಎಂಬೊಂದು ಪರಿಕಲ್ಪನೆಯನ್ನು ನ್ಯಾಯ ಪರಿಶೀಲನೆಯ ಒಂದು ಮಾನದಂಡವನ್ನಾಗಿ ರೂಪಿಸಿಕೊಂಡಿದೆ. ಆದರೂ ಇಂದಿನ ಸರ್ಕಾರ ಈ ಕಂದಕವನ್ನು ಮರೆಮಾಚಲೆಂದೇ ಇತಿಹಾಸದ ಬಗ್ಗೆ ಅರ್ಧ ಸತ್ಯಗಳನ್ನು ಹೇಳುತ್ತಿದೆ. ಆ ಮೂಲಕ ಇದರಲ್ಲಿ ಮುಸ್ಲಿಮರ ವಿರುದ್ಧ ಆಗಿರುವ ತಾರತಮ್ಯದ ಅಂಶವನ್ನು ಮುಚ್ಚಿಡುವ ಪ್ರಯತ್ನ ಮಾಡಲಾಗಿದೆ. ಈ ಮಸೂದೆ ರಾಷ್ಟ್ರಪತಿಯವರ ಅಂಕಿತ ಪಡೆದು ಕಾನೂನಾಗಿ ನ್ಯಾಯಾಂಗ ಪರಿಶೀಲನೆಗೆ ಹೋದರೂ, ಜನಾಭಿಪ್ರಾಯ ತನ್ನ ಪರವಾಗಿರುವಂತೆ ನೋಡಿಕೊಳ್ಳುವುದೇ ಇದರ ಉದ್ದೇಶವಾಗಿದೆ. ಜನಾಭಿಪ್ರಾಯ ಪ್ರಭಾವ ಎಲ್ಲೆಲ್ಲಿ ಪರಿಣಾಮ ಬೀರುತ್ತದೆ ಎಂಬುದು ಇತ್ತೀಚಿನ ಅನುಭವಗಳಿಂದ ಅದಕ್ಕೆ ಗೊತ್ತಿದೆ.

ಪ್ರಜ್ಞಾವಂತ ಜನಸಮುದಾಯದ ಪ್ರಬಲ ವಿರೋಧದ ಎದುರಲ್ಲಿ, ಈ ಮಸೂದೆ ಏಕೆ ಅಗತ್ಯವಾಗಿದೆ ಎಂದು ಸರ್ಕಾರ ನೀಡಿದ ಕಾರಣಗಳು ದಿನದಿಂದ ದಿನಕ್ಕೆ ಬದಲಾದುದನ್ನು ನಾವು ಕಂಡಿದ್ದೇವೆ. ಮೊದಲು ಕಾಂಗ್ರೆಸ್ ಧಾರ್ಮಿಕ ಆಧಾರದ ಮೇಲೆ ದೇಶ ವಿಭಜನೆಗೆ ಒಪ್ಪಿಕೊಂಡದ್ದೇ ಕಾರಣವೆಂದು ಹೇಳಲಾಯಿತು. ಅದೊಂದು ಅರ್ಧ ಸತ್ಯ(ಅಂದರೆ ಸುಳ್ಳು) ಎಂದು ಬಲ್ಲವರು ದಾಖಲೆ ಸಹಿತ ಜನರಿಗೆ ವಿವರಿಸತೊಡಗಿದಾಗ, ಇದು ತಂತಮ್ಮ ದೇಶಗಳ ಅಲ್ಪಸಂಖ್ಯಾತರ ಹಿತರಕ್ಷಣೆ ಮಾಡುವುದಕ್ಕೆ ಸಂಬಂಧಿಸಿದಂತೆ ನೆಹರೂ–ಲಿಯಾಖತ್‌ಅಲಿ ಖಾನ್ (ಪಾಕಿಸ್ತಾನದ ಮೊದಲ ಪ್ರಧಾನ ಮಂತ್ರಿ) ನಡುವಣ ಒಪ್ಪಂದ ಜಾರಿಯ ವೈಫಲ್ಯವೇ ಇದಕ್ಕೆ ಕಾರಣವೆಂದು ಹೇಳಲಾಯಿತು. ಆದರೆ ಈ ಒಪ್ಪಂದ ನಡೆದದ್ದು ಪಾಕಿಸ್ತಾನ ಒಂದು ಮತಾತೀತ ದೇಶವಾಗಿದ್ದಾಗ ಮತ್ತು ಈ ಮಸೂದೆ ಪಾಕಿಸ್ತಾನಕ್ಕೆ ಮಾತ್ರ ಸಂಬಂಧಿಸದ್ದಾಗಿಲ್ಲವಲ್ಲ ಎಂದು ಪ್ರಶ್ನಿಸಿದಾಗ ಸರ್ಕಾರ ಅಕ್ರಮ ವಲಸಿಗರ ಪೈಕಿ ಯಾವ ವಲಸಿಗರಿಗೆ ನಿರ್ಬಂಧ ಹೇರಲಾಗಿದೆಯೋ ಆ ದೇಶಗಳು ಮತಾಧಾರಿತ ದೇಶಗಳು ಎಂಬ ಕಾರಣ ನೀಡುತ್ತಿದೆ. ಆದರೆ ತಾನೇ ಲೇವಡಿ ಮಾಡುವ, ಮತೀಯ ಪ್ರಭುತ್ವಗಳ ಉದಾಹರಣೆ ನಮ್ಮ ದೇಶದ ನೀತಿಯನ್ನು, ಆಧಾರ ಮೌಲ್ಯಗಳನ್ನು ಬದಲಾಯಿಸಬೇಕೆ ಎಂಬುದು ಇಲ್ಲಿನ ಮುಖ್ಯ ಪ್ರಶ್ನೆ.

ಈ ಸಂಬಂಧವಾಗಿ ಸರ್ಕಾರ ನೀಡುವ–ಬಹು ಭಾವನಾತ್ಮಕವಾದ–ಕಾರಣವೆಂದರೆ, ಈ ದೇಶಗಳ ಅಲ್ಪಸಂಖ್ಯಾತರ (ಅಂದರೆ ಮುಖ್ಯವಾಗಿ ಹಿಂದೂಗಳ) ಪ್ರಮಾಣ ಶೇ. ೨೨ರಿಂದ ಇಂದು ಶೇ. ೩ಕ್ಕೆ ಕುಸಿದಿದೆ ಎನ್ನುವುದು. ಒಂದು ಧರ್ಮದ ವರ ಜನಸಂಖ್ಯೆ ಕುಸಿದಿದೆ ಎಂದರೆ ಅವರನ್ನೆಲ್ಲ ಕೊಲ್ಲಲಾಗಿದೆ ಎಂದೇ? ನಾಗರಿಕ ಹಕ್ಕುಗಳ

ಅಂತಾರಾಷ್ಟ್ರೀಯ ಸಂಘ-ಸಂಸ್ಥೆಗಳ ನಿಗಾವಡಿ ಇದು ಈ ಪ್ರಮಾಣದಲ್ಲಿ ನಡೆಯಲು ಸಾಧ್ಯವಿಲ್ಲ. ನಡೆದಿದೆ ಎಂದು ಹೇಳುವವರು ಅದಕ್ಕೆ ಸಾಕ್ಷ್ಯ ಒದಗಿಬೇಕಾಗುತ್ತದೆ. ಹೆಚ್ಚಿನಂಶ ಅವರು ಮತಾಂತರ ಹೊಂದಿರಬೇಕು ಅಥವಾ ಭಾರತವೂ ಸೇರಿದಂತೆ ಅನ್ಯದೇಶಗಳಿಗೆ ವಲಸೆ ಹೋಗಿರಬೇಕು. ಇಸ್ಲಾಮಿನ ಮುಚ್ಚಿಕೊಂಡ(Closed) ಸ್ವರೂಪ ಗಮನಿಸಿದಾಗ ಸಾಕಷ್ಟು ಬಲಾತ್ಕಾರದ ಮತಾಂತರ ನಡೆದಿರುವ ಸಾಧ್ಯತೆಯನ್ನು ತಳ್ಳಿ ಹಾಕಲಾಗಿದ್ದರೂ, ಆಧುನಿಕ ನ್ಯಾಯ ವಿತರಣೆ ವ್ಯವಸ್ಥೆಯಲ್ಲಿ ಎಲ್ಲಕ್ಕೂ ಸಂಶಯಾತೀತ ಸಾಕ್ಷ್ಯ ಒದಗಿಸಬೇಕಾಗುತ್ತದೆ. ಆದರೆ ಚರಿತ್ರೆಯ ನಿರಂತರ ಹರಿವಿನಲ್ಲಿ ಸಾಕ್ಷ್ಯಗಳು ಇದ್ದರೂ ಅವರಲ್ಲಿ ಕೊಚ್ಚಿಕೊಂಡು ಹೋಗಿರುತ್ತವೆ ಎಂಬುದನ್ನೂ ನಾವು ಗಮನಿಸಬೇಕು. ಹಾಗೆ ನೋಡಿದರೆ ನಮ್ಮ ದೇಶದ ಚರಿತ್ರೆಯಲ್ಲಿ ಎಷ್ಟು ಮತಾಂತರಗಳು-ರಕ್ತಸಹಿತ ಮತ್ತು ರಕ್ತರಹಿತ-ನಡೆದುಹೋಗಿಲ್ಲ? ಕೆಲವು ಯಾವ ಪ್ರಮಾಣದಲ್ಲಿ ನಡೆದುಹೋಗಿವೆ ಎಂದರೆ ಅದಕ್ಕೆ ಸಾಕ್ಷಿಗಳು ಈಗಲೂ, ಇಷ್ಟು ದೀರ್ಘ ಕಾಲದ ನಂತರವೂ ಹಲವು ರೂಪಗಳಲ್ಲಿ ಉಳಿದಿವೆ. ಚರಿತ್ರೆಯಲ್ಲಿ ಮುಕ್ತ ಮನಸ್ಸಿನ ಅಥವಾ ತಾತ್ವಿಕ ಆಧಾರದ ಮತಾಂತರಗಳ ಪ್ರಮಾಣ ಎಷ್ಟು ಎಂದು ಗೊತ್ತಿದ್ದವರಿಗೆ, ಮತಾಂತರ ಮಾಡಿದವರ ರಾಜಕಾರಣದಷ್ಟೇ ಅದರ ಬಗ್ಗೆ ಆಕ್ರೋಶಗೊಳ್ಳುವವರ ರಾಜಕಾರಣವೂ ರೂಕ್ಷವಾಗಿರುತ್ತದೆ ಎಂಬುದು ಗೊತ್ತಾಗುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ ಈ ಮಸೂದೆ ಮುಸ್ಲಿಮರ ಹೊರತಾಗಿ ಭಾರತದಲ್ಲಿನ ಇನ್ನೆಲ್ಲ ಮತಗಳ ಅಕ್ರಮ ವಲಸಿಗರೂ ಮತೀಯ ಕಿರುಕುಳಗಳ ಕಾರಣದಿಂದ ಈ ದೇಶದೊಳಕ್ಕೆ ನುಸುಳಿದ್ದಾರೆಂದು ಯಾವುದೇ ಸಾಕ್ಷ್ಯವಿಲ್ಲದೆ ಒಪ್ಪಿಕೊಳ್ಳುವ ಮತ್ತು ಮುಸ್ಲಿಮರು ಇತರ ಮತಗಳ ಬಹುಸಂಖ್ಯಾತ ಜನ ಬಂದಿರಬಹುದಾದಂತೆಯೇ ಜೀವನೋಪಾಯಕ್ಕಾಗಿ ಬಂದಿರಬಹುದೆಂಬ ಅಂಶವನ್ನೇ ನಿರಾಕರಿಸುತ್ತದೆ. ಹಾಗಾಗಿ ಯಾವುದೇ ಸಾಧುವೆನಿಸುವ ದಾಖಲೆ-ಸಾಕ್ಷ್ಯಗಳ ಆಧಾರವಿಲ್ಲದೆ ತಾನು ಮತೀಯ ಕಿರುಕುಳಕ್ಕೊಳಗಾದವರ ವಲಸೆಯನ್ನು ಸಕ್ರಮಗೊಳಿಸುವ ಮಾನವೀಯ ನೀತಿಯನ್ನು ಅನುಸರಿಸುತ್ತಿದ್ದೇನೆ ಎಂಬ 'ಟೊಳ್ಳಾದ" ವಾದ ಮತಾಧಾರಿತ ತಾರತಮ್ಯ ನೀತಿಯನ್ನು ಮರೆಮಾಚಿಕೊಳ್ಳಲು ಒಂದು ನೆಪ ಮಾತ್ರವೆಂದು ಸ್ಪಷ್ಟವಾಗುತ್ತದೆ. ಸರ್ಕಾರದ ಇನ್ನೊಂದು ಮಾತೂ ಅದರ ಈ ಮತೀಯ ನೀತಿಯನ್ನು ಇನ್ನಷ್ಟು ಸಾಬೀತುಗೊಳಿಸುತ್ತದೆ. ಹಿಂದೂ ವಲಸೆಗಾರರು, ಇರುವ ಒಂದೇ ಹಿಂದೂಗಳ ದೇಶದಲ್ಲದೆ ಇನ್ನೆಲ್ಲಿ ಆಶ್ರಯ ಪಡೆಯಬೇಕು ಎಂದೂ ಅದು ಕೇಳುತ್ತಿದೆ. ಇದು ಈ ಮಸೂದೆಯ ಹಿಂದೆ ಅಡಗಿರುವ ತನ್ನ ಹಿಂದೂ ರಾಷ್ಟ್ರ ನಿರ್ಮಾಣದ ಗುಪ್ತ ಕಾರ್ಯಸೂಚಿಯನ್ನು ಮುಂದಿನ ರಾಜಕೀಯ ಲಾಭಗಳಿಗಾಗಿ ಹಿಂದೂಗಳ ಭಾವನೆಗಳೊಂದಿಗೆ ಆಟವಾಡಲೆಂದೇ ಕಂಡೂ ಕಾಣದಂತೆ ಪರಿಚಯಿಸುತ್ತದೆ. ಏಕೆ ಬೆರಳೆಣಿಕೆಯ ಮತಾಧಾರಿತ ರಾಷ್ಟ್ರಗಳ ಹೊರತಾಗಿ ವಲಸೆಗಾರರನ್ನು ಹಿಂದೂ ಎಂದು ಯಾವ ರಾಷ್ಟ್ರ ಪೌರತ್ವವನ್ನು ನಿಷೇಧಿಸಿದೆ?

ಆದರೂ ನಮ್ಮ ಸರ್ವೋಚ್ಚ ನ್ಯಾಯಾಲಯ ಇತ್ತೀಚೆಗೆ ಕರ್ನಾಟಕದ ಪಕ್ಷಾಂತರಗಳ ಬಗ್ಗೆ, ಅಯೋಧ್ಯಾ ವಿವಾದದ ಬಗ್ಗೆ ಮತ್ತು ಶಬರಿಮಲೈ ದೇವಾಲಯ ಪ್ರವೇಶದ ತೀರ್ಪಿನ ಮರುಪರಿಶೀಲನಾ ಅರ್ಜಿಯ ವಿಷಯದಲ್ಲಿ ನೀಡಿರುವ ತೀರ್ಪುಗಳು ಅನುಸರಿಸುವ ನ್ಯಾಯ ನಿರ್ಣಯದ ಮಾದರಿಗಳನ್ನು ಗಮನಿಸಿದಾಗ ನ್ಯಾಯಾಲಯ ಈ ಮಸೂದೆಯ ಕಾಯಿದೆ ರೂಪವನ್ನು ಅಸಾಂವಿಧಾನಿಕ ಎಂದು ಘೋಷಿಸುತ್ತದೆ ಎಂದು ಖಡಾಖಂಡಿತವಾಗಿ ಹೇಳಲಾಗುವುದಿಲ್ಲ. ಕಾದು ನೋಡಬೇಕು. (**ನಂತರದ ಟಿಪ್ಪಣಿ:** ಹೆಚ್ಚೂ ಕಡಿಮೆ ಎರಡು ವರ್ಷಗಳ ನಂತರವೂ ನಮ್ಮ ಸರ್ವೋನ್ನತ ನ್ಯಾಯಾಲಯ ಈ ಕಾಯಿದೆಯ ಸಾಂವಿಧಾನಿಕತೆಯನ್ನು ಪ್ರಶ್ನಿಸಿರುವ ಅರ್ಜಿಗಳ ವಿಚಾರಣೆಯನ್ನು ಆರಂಭಿಸಿಯೂ ಇಲ್ಲ!)

('ಹೊಸ ಮನುಷ್ಯ' ಪತ್ರಿಕೆಯ ೨೦೨೦ರ ಜನವರಿ ಸಂಚಿಕೆಯಲ್ಲಿ ಪ್ರಕಟ)

ಪೌರತ್ವ ತಿದ್ದುಪಡಿ ಕಾಯಿದೆಯೂ, ನಮ್ಮ ಇಸ್ಲಾಮೀ ನೆರೆಹೊರೆಯೂ

ಪೌರತ್ವ ತಿದ್ದುಪಡಿ ಕಾಯ್ದೆಯ ಪರವಾಗಿ ಸರ್ಕಾರ ಅದನ್ನು ಮಸೂದೆಯಾಗಿ ಮಂಡಿಸಿದ ಸಂದರ್ಭದಲ್ಲಿ ಸಂಸತ್ತಿನಲ್ಲಿ ನೀಡಿದ ಮತ್ತು ಆನಂತರ ಅದರ ವಿರುದ್ಧ ದೇಶಾದ್ಯಂತ ಎದ್ದ ಪ್ರತಿಭಟನೆಗಳ ಸಂದರ್ಭದಲ್ಲಿ ಅದರ ಸಮರ್ಥನೆಗಾಗಿ ನೀಡುತ್ತಿರುವ ಹಲವಾರು ಹೇಳಿಕೆಗಳು ಅರ್ಧ ಸತ್ಯಗಳು ಮಾತ್ರವಾಗಿವೆ. ಯಾವ ದೇಶಗಳ ಹಿಂದೂ, ಬೌದ್ಧ, ಜೈನ, ಸಿಖ್, ಕ್ರೈಸ್ತ ಮತ್ತು ಪಾರ್ಸಿ ವಲಸಿಗರಿಗೆ ನಮ್ಮ ದೇಶದಲ್ಲಿ ನೇರವಾಗಿ ಪೌರತ್ವವನ್ನು ನೀಡಲು ಉದ್ದೇಶಿಸಲಾಗಿದೆಯೋ ಆ ಪಾಕಿಸ್ತಾನ, ಬಂಗ್ಲಾದೇಶ ಮತ್ತು ಆಫ್ಘನಿಸ್ತಾನಗಳು ಇಸ್ಲಾಮಿಕ್ ದೇಶಗಳಾಗಿರುವುದರಿಂದ ಇವರೆಲ್ಲ ಮತೀಯ ದೌರ್ಜನ್ಯಕ್ಕೆ ಒಳಗಾಗಿ ಓಡಿ ಬಂದವರಾಗಿದ್ದು ಅವರಿಗೆಲ್ಲ ನ್ಯಾಯ ಒದಗಿಸುವುದು ಈ ಕಾಯಿದೆಯ ಉದ್ದೇಶವಾಗಿದೆ ಎಂಬ ಸರ್ಕಾರದ ವಿವರಣೆ ಇಂತಹ ಒಂದು ಅರ್ಧ ಸತ್ಯವಾಗಿದೆ.

ಈ ವಿವರಣೆಗೆ ಪೂರಕ ಸಾಕ್ಷ್ಯವಾಗಿ ಸರ್ಕಾರ ನೀಡುವ ಮಾಹಿತಿ ಎಂದರೆ, ಆ ಮೂರು ದೇಶಗಳಲ್ಲಿ ಅಲ್ಪ ಸಂಖ್ಯಾತರ, ಮುಖ್ಯವಾಗಿ ಹಿಂದೂಗಳ ಜನಸಂಖ್ಯಾ ಪ್ರಮಾಣ ತೀವ್ರವಾಗಿ ಕುಸಿದಿದೆ ಎಂಬುದು. ಆದರೆ ಅಧಿಕೃತ ಮೂಲಗಳಿಂದ ಲಭ್ಯವಿರುವ ಅಂಕಿ ಸಂಖ್ಯೆಗಳನ್ನು ಗಮನಿಸಿದಾಗ ಇದು ಕೇವಲ ಮತೀಯ ಭಾವನೆಗಳನ್ನು ಕೆರಳಿಸುವ ಉದ್ದೇಶದ ಉತ್ಪ್ರೇಕ್ಷೆಯ ಮಾತು ಎನಿಸದಿರದು. ರಾಷ್ಟ್ರ ವಿಭಜನೆಯ ಸಂದರ್ಭದಲ್ಲಿ ಮತೀಯ ದೌರ್ಜನ್ಯಗಳ ಭಯದ ನೆರಳಿನಲ್ಲಿ ೬೦ ಲಕ್ಷ ಜನ ಪಾಕಿಸ್ತಾನದಿಂದ ಭಾರತಕ್ಕೂ, ೮೦ ಲಕ್ಷ ಜನ ಭಾರತದಿಂದ ಪಾಕಿಸ್ತಾನಕ್ಕೂ ನಾಲ್ಕು ವರ್ಷಗಳ ಅವಧಿಯಲ್ಲಿ ವಲಸೆ ಹೋದರೆಂಬುದು ಒಂದು ಅಂದಾಜು. ಇಂತಹ ಪರಿಸ್ಥಿತಿಯಲ್ಲಿ ಯಾವ ದೇಶದಲ್ಲಿ ಯಾವ ಧರ್ಮದವರು ಎಷ್ಟಿದ್ದರು ಎಂದು ನಿಖರವಾಗಿ ಹೇಳುವುದು ಅಸಾಧ್ಯ. ಆದರೆ ಕಾಯಿದೆಯ ಸಮರ್ಥಕರು ಹೇಳುವಂತೆ

ಪಾಕಿಸ್ತಾನದಲ್ಲಿ ಶೇ. ೨೦ಕ್ಕೂ ಹೆಚ್ಚಿದ್ದ ಹಿಂದೂಗಳ ಪ್ರಮಾಣವೀಗ ಶೇ. ೨ಕ್ಕೋ ೩ಕ್ಕೋ ಕುಸಿದಿದೆ ಎಂಬುದು ಮಾತ್ರ ದಾರಿ ತಪ್ಪಿಸುವ ಮಾತು. ಏಕೆಂದರೆ, ೧೯೫೧ರ ಪಾಕಿಸ್ತಾನದ ಅಧಿಕೃತ ಜನಗಣತಿ ಪ್ರಕಾರ ಈಗ ಬಂಗ್ಲಾದೇಶವಾಗಿರುವ ಪೂರ್ವ ಪಾಕಿಸ್ತಾನವೂ ಸೇರಿದಂತೆ ರಾಷ್ಟ್ರ ವಿಭಜನೆಯ ಸಂದರ್ಭದಲ್ಲಿ ಅಲ್ಲಿದ್ದ ಹಿಂದೂಗಳನ್ನೂ ಒಳಗೊಂಡ ಅಲ್ಪಸಂಖ್ಯಾತರ ಪ್ರಮಾಣ ಸುಮಾರು ಶೇ. ೧೪. ಇದರಲ್ಲಿ ಈಗ ಪಾಕಿಸ್ತಾನವೆಂದು ಕರೆಯಾಲಾಗುವ ಪಶ್ಚಿಮ ಪಾಕಿಸ್ತಾನದ ಪಾಲು ಶೇ.೩.೪೪. ಮತ್ತು ಈಗ ಬಂಗ್ಲಾದೇಶವಾಗಿರುವ ಪೂರ್ವ ಪಾಕಿಸ್ತಾನದ ಪಾಲು ಶೇ. ೨೩.೨. ಆದರೆ ಪಾಕಿಸ್ತಾನದಲ್ಲಿ ಅದು ೧೯೯೮ರ ಜನಗಣತಿಯ ಪ್ರಕಾರ ಶೇ ೧.೬ಕ್ಕೆ ಕುಸಿದಿದೆ ಎಂದು ಹೇಳಲಾಗುತ್ತಿದೆಯಾದರೂ, ಅ ದೇಶದ ಹಿಂದೂ ಕಲ್ಯಾಣ ಮಂಡಳಿ ಈ ಅಂಕಿ-ಅಂಶ ವಿಶ್ವಾಸಾರ್ಹವಲ್ಲವೆಂದು ಸಂಶಯಿಸುತ್ತಾ, ಅದು ಶೇ ೪ ಎಂದು ಹೇಳುತ್ತದೆ! ಇದೀಗ ಅಲ್ಲಿನ ೨೦೧೭ರ ಜನಗಣತಿ ಅಂಕಿ ಅಂಶಗಳು ಪ್ರಕಟವಾಗುತ್ತಿದ್ದು ಅದರ ಪ್ರಕಾರ ಹಿಂದೂಗಳ ಜನಸಂಖ್ಯೆ ಶೇ. ೯೪ರ ಪ್ರಮಾಣದಲ್ಲಿ ಏರಿರಬಹುದಾದ ಅಂದಾಜಿದೆ. ಅದೇನೇ ಇರಲಿ, ರಾಷ್ಟ್ರ ವಿಭಜನೆಯ ವಲಸೆಯು ಮತವಾರು ಜನಸಂಖ್ಯಾ ಪ್ರಮಾಣದಲ್ಲಿ ಉಂಟು ಮಾಡಿದ ಏರುಪೇರಿನ ಹಿನ್ನೆಲೆಯಲ್ಲಿ ನೋಡಿದಾಗ ಈಗಿನ ಪಾಕಿಸ್ತಾನದಲ್ಲಿ ಮತೀಯ ದೌರ್ಜನ್ಯವನ್ನು ಯಾವ ಕಾರಣದಿಂದಲೂ ನಿರಾಕರಿಸಲಾಗದಿದ್ದರೂ, ಆ ಕಾರಣದಿಂದಲೇ ಅಕ್ರಮವಾಗಿ ಭಾರತಕ್ಕೆಂದೇ ವಲಸೆ ಬಂದವರ ಸಂಖ್ಯೆ ಬಹು ದೊಡ್ಡದಿರಲಾರದು. ಮುಸ್ಲಿಮರೂ ಸೇರಿದಂತೆ ಹಲವು ಮತಗಳ ಜನ ಉತ್ತಮ ಜೀವನೋಪಾಯ, ಧರ್ಮನಿರಪೇಕ್ಷ ವಾತಾವರಣ, ಬಂಧು ಬಾಂಧವರ ಸಾಮೀಪ್ಯ, ಮದುವೆ ಇತ್ಯಾದಿ ಕಾರಣಗಳಿಂದಲೂ ಈ ದೇಶಕ್ಕೆ ವಲಸೆ ಬಂದಿರುವ ಸಾಧ್ಯತೆಗಳಿವೆ.

ಇನ್ನು ಬಂಗ್ಲಾದೇಶದಲ್ಲಿ ಅದು ಪಾಕಿಸ್ತಾನದಿಂದ ಬೇರ್ಪಟ್ಟು ಸ್ವತಂತ್ರ ದೇಶವಾದ ನಂತರದ ವರ್ಷಗಳಲ್ಲಿ ಹಿಂದೂಗಳ ಜನಸಂಖ್ಯಾ ಪ್ರಮಾಣ ಅಲ್ಲಿ ನಡೆದ ಹಲವು ಮಿಲಿಟರಿ ಕ್ರಾಂತಿಗಳ ಮತ್ತು ಮತೀಯ ಮೂಲಭೂತವಾದಿಗಳ ಕಾರ್ಯಾಚರಣೆಗಳ ಪರಿಣಾಮವಾಗಿ ಹಲವು ಏರುಪೇರುಗಳನ್ನು ಕಂಡು ಈಗ ಪ್ರಜಾಪ್ರಭುತ್ವವಾದಿ ಹಸೀನಾ ಅವರ ಆಳ್ವಿಕೆಯ ಸಮಯದಲ್ಲಿ ಶೇ ೮ರಿಂದ ೧೦ರ ಮಧ್ಯೆ ಇದೆಯೆಂದು ಹೇಳಲಾಗುತ್ತಿದೆ. ಆದರೆ ಈ ಏರುಪೇರು ಹಿಂದೂಗಳಿಗೆ ಮಾತ್ರ ಸಂಬಂಧಿಸಿಲ್ಲದೆ ಮುಸ್ಲಿಮರ ಜನಸಂಖ್ಯಾ ಪ್ರಮಾಣದಲ್ಲೂ ಕಂಡುಬಂದಿದ್ದು ಇದು ಆ ದೇಶದಿಂದ ಭಾರತದ ಗಡಿ ರಾಜ್ಯಗಳಿಗೆ ನಡೆದಿರುವ ವಲಸೆಯ ವಿದ್ಯಮಾನದಲ್ಲಿ ಪ್ರತಿಫಲಿಸಿದೆ. ಈ ವಲಸೆಯಲ್ಲಿ, ಅಸ್ಸಾಂನ ಪೌರತ್ವ ನೋಂದಣಿ ಯೋಜನೆ ಸೂಚಿಸುತ್ತಿರುವಂತೆ ಹಿಂದೂಗಳ ಜೊತೆ ಅಪಾರ ಪ್ರಮಾಣದಲ್ಲಿ ಮುಸ್ಲಿಮರೂ ಇರುವುದರಿಂದ ಇದಕ್ಕೆ ಬಂಗ್ಲಾದಲ್ಲಿನ ಮತೀಯ ದೌರ್ಜನ್ಯವೊಂದೇ ಕಾರಣವೆಂದು ಸಾರಾಸಗಟಾಗಿ ಹೇಳಲಾಗದು. ಇಲ್ಲಿಯೇ ವಲಸೆಯ ಇತರ ಕಾರಣಗಳೂ ನಮ್ಮ ಗಮನಕ್ಕೆ ಬರುವಂತಾಗುವುದು. ಬಂಗ್ಲಾದೇಶ ಜಗತ್ತಿನಲ್ಲೇ ಅತ್ಯಂತ ದಟ್ಟ ಜನಸಾಂದ್ರತೆ ಹೊಂದಿರುವ ದೇಶಗಳಲ್ಲಿ ಒಂದಾಗಿದ್ದು ಅಲ್ಲಿ

ಜೀವನೋಪಾಯ ಕಷ್ಟವಾಗಿದೆ. (ಆದರೆ ಇತ್ತೀಚಿನ ವರದಿಗಳ ಪ್ರಕಾರ ಬಂಗ್ಲಾದೇಶದ ತಲಾ ಆದಾಯ ಭಾರತಕ್ಕಿಂತ ಹೆಚ್ಚಿದ್ದು ವಲಸೆ ತಿರುಗು ಮುರುಗಾಗಿದೆ) ಈಗ ಮುಖ್ಯ ಪ್ರಶ್ನೆ: ಜೀವನೋಪಾಯ ಹುಡುಕಿಕೊಂಡು ಬಂದವರನ್ನು ಮತೀಯ ಆಧಾರದ ಮೇಲೆ ತಾರತಮ್ಯಕ್ಕೊಳಪಡಿಸುವುದು ಯಾವ ಧರ್ಮ? ಇವರಿಗೆಲ್ಲ ಆಶ್ರಯ ಕೊಡುವುದು ಕಷ್ಟವೆನಿಸಿದರೆ ಅದನ್ನು ಹಾಗೆ ಹೇಳುವುದು ಒಳ್ಳೆಯದು. ಇಸ್ಲಾಮಿಕ್ ರಾಷ್ಟ್ರದ ಮಾತೆತ್ತಿ ಜನರನ್ನು ಕೆರಳಿಸುವ ರಾಜಕಾರಣವೇಕೆ? ಬಂಗ್ಲಾದೇಶ ಮೂಲ ಪಾಕಿಸ್ತಾನದಿಂದ ಬೇರ್ಪಡೆಯಾದದ್ದೇ ಅದು ಇಸ್ಲಾಮಿಕ್ ರಾಷ್ಟ್ರವಾಗಿ ಉರ್ದುವನ್ನು ಇಡೀ ರಾಷ್ಟ್ರದ ಅಧಿಕೃತ ಭಾಷೆಯನ್ನಾಗಿ ಘೋಷಿಸಲಾಗಿದೆ ಎಂಬ ಕಾರಣಗಳಿಂದ ಆರಂಭವಾದ ಘರ್ಷಣೆಯಿಂದಾಗಿ. ಬಂಗ್ಲಾದೇಶ ಉದಯವಾದಾಗ ಅದು ತನ್ನನ್ನು ಧರ್ಮ ನಿರಪೇಕ್ಷ ರಾಷ್ಟ್ರವೆಂದು ಘೋಷಿಸಿಕೊಂಡಿತ್ತು ಎಂಬುದನ್ನು ನಾವು ಮರೆಯಬಾರದು.

ನಿಜ, ಒಂದು ರಾಷ್ಟ್ರ ಮತೀಯವೆಂದು ಘೋಷಿಸಿಕೊಳ್ಳುವುದು ಈ ಆಧುನಿಕ ಕಾಲದಲ್ಲಿ ಒಂದು ಅನಾಗರಿಕ ನಡೆಯೇ. ಆದರೆ ಅದನ್ನೇ ನೆಪವಾಗಿಟ್ಟುಕೊಂಡು ಆ ದೇಶಗಳ ಅವಾಸ್ತವವಾದ, ರಾಕ್ಷಸೀಯ ಚಿತ್ರ ಕೊಡುವುದು ಹಲವು ಮತೀಯ ರಾಷ್ಟ್ರಗಳಿರುವ ಇಂದಿನ ಜಾಗತಿಕ ಸಂದರ್ಭದಲ್ಲಿ ವಿವೇಕದ ನಡೆಯಾಗದು. ಸ್ವತಂತ್ರ ರಾಷ್ಟ್ರವಾದ ಆರು ವರ್ಷಗಳ ನಂತರವಷ್ಟೇ ತನ್ನನ್ನು ಇಸ್ಲಾಮಿಕ್ ರಾಷ್ಟ್ರವೆಂದು ಘೋಷಿಸಿಕೊಂಡ ಪಾಕಿಸ್ತಾನ ಅಂತಿಮವಾಗಿ ೧೯೭೩ರಲ್ಲಿ ಇಸ್ಲಾಮಿಕ್ ಸಂವಿಧಾನವನ್ನು ಅಳವಡಿಸಿಕೊಂಡಿತಾದರೂ ಅದು ಕ್ರಮೇಣ ತನ್ನ ನಾಗರಿಕ ಕಾನೂನುಗಳ ವಿಷಯದಲ್ಲಿ ಉದಾರವಾಗುತ್ತಾ ತನ್ನ ಸಂಸತ್ತು ಮತ್ತು ಪ್ರಾಂತೀಯ ಶಾಸನಸಭೆಗಳಲ್ಲಿ ಅಲ್ಪಸಂಖ್ಯಾತರಿಗೆ ಉಚಿತ ಪ್ರಮಾಣದ ಪ್ರಾತಿನಿಧ್ಯ ಕಲ್ಪಿಸಿದೆಯಲ್ಲದೆ ಈಗ ಸಾರ್ವತ್ರಿಕ ಕ್ಷೇತ್ರಗಳಲ್ಲಿಯೂ ಅವರಿಗೆ ಸ್ಪರ್ಧಿಸುವ ಹಕ್ಕನ್ನೂ ನೀಡಿದ್ದು, ಕೆಲವರು ಆಯ್ಕೆಯೂ ಆಗಿದ್ದಾರೆಂಬುದು ನಮ್ಮಲ್ಲಿ ಎಷ್ಟು ಜನಕ್ಕೆ ಗೊತ್ತು? ಜೊತೆಗೆ ಇನ್ನೊಂದು ಮಾತು: ಅಲ್ಲಿ ರಾಷ್ಟ್ರ ವಿಭಜನೆಯ ಸಂದರ್ಭದ ಗಡಿಯ ಎರಡೂ ಬದಿಗಳಲ್ಲಿದ್ದ ಪ್ರಚೋದನಾತ್ಮಕ ಸನ್ನಿವೇಶದ ಕಾವು ಆರಿದ ನಂತರ ಅಲ್ಲಿ ಮತೀಯ ಸೌಹಾರ್ದತೆಯ ಸಂಕೇತವಾಗಿ ಮುಸ್ಲಿಮೇತರ ಆರಾಧನಾ ಸ್ಥಳಗಳ ಮತ್ತು ಜಾತ್ರೆಗಳ ಪುನರುಜ್ಜೀವನಕ್ಕಾಗಿ ಅಲ್ಲಿ ಸರ್ಕಾರವೇ ನೆರವಾಗುತ್ತಿದೆ. ಗುರು ನಾನಕ್ ಪಥ ನಿರ್ಮಾಣ ಈ ಸೌಹಾರ್ದಕ್ಕೊಂದು ಇತ್ತೀಚಿನ ಉದಾಹರಣೆ.

ಇನ್ನು ಬಂಗ್ಲಾದೇಶ ಕೆಲ ಚಾರಿತ್ರಿಕ ಕಾರಣಗಳಿಂದಷ್ಟೇ ಒಂದು ನಾಮಕಾವಸ್ತೆ ಮತೀಯ ರಾಷ್ಟ್ರವಾಗಿದ್ದು ಅಲ್ಲಿ ಕಾನೂನಿನ ಮುಂದೆ ಎಲ್ಲರೂ ಸಮಾನರಾಗಿದ್ದಾರೆ. ಹಾಗಾಗಿಯೇ ಅಲ್ಲಿನ ಸಂಸತ್ತಿನಲ್ಲಿ, ಸಚಿವ ಸಂಪುಟದಲ್ಲಿ, ಉನ್ನತ ನ್ಯಾಯಾಂಗದಲ್ಲಿ (ಆ ದೇಶದ ಸರ್ವೋಚ್ಚ ನ್ಯಾಯಾಲಯದ ಹಿಂದಿನ ಮುಖ್ಯ ನ್ಯಾಯಾಧೀಶ ಓರ್ವ ಹಿಂದೂ ಆಗಿದ್ದರು.) ಕ್ರಿಕೆಟ್, ಫುಟ್‌ಬಾಲ್ ಮತ್ತಿತರ ಕ್ರೀಡಾ ತಂಡಗಳಲ್ಲಿ, ಸಿನಿಮಾ,

ನಾಟಕ ಸೇರಿದಂತೆ ಕಲಾ ಕ್ಷೇತ್ರಗಳಲ್ಲಿ ಹಿಂದೂಗಳೂ ಅನ್ಯಮತೀಯರೊಂದಿಗೆ ಹೆಗಲೆಣೆಯಾಗಿ ಸ್ಪರ್ಧಿಸುತ್ತಾ ಆ ಕ್ಷೇತ್ರಗಳಲ್ಲಿ ಗಣನೀಯ ಸಂಖ್ಯೆಯಲ್ಲೇ ಪ್ರಾಧಾನ್ಯತೆ ಪಡೆದಿದ್ದಾರೆ.

ಅಫ್ಘನಿಸ್ತಾನಕ್ಕೂ ರಾಷ್ಟ್ರ ವಿಭಜನೆಗೂ ಸಂಬಂಧವಿಲ್ಲದೇ ಇರುವುದರಿಂದ ಮತ್ತು ಅಲ್ಲಿ ಮುಸ್ಲಿಮರೇ ಹೊಡೆದಾಡಿಕೊಂಡು ಸಾಯುತ್ತಿರುವುದರಿಂದ ಈ ಚರ್ಚೆಯನ್ನು ಅಲ್ಲಿಗೆ ಒಯ್ಯುವುದು ಅಸಂಬದ್ಧವೇ ಸರಿ. ಅದೇನೇ ಇದ್ದರೂ, ೨೦೧೫ರಲ್ಲಿ ದೀರ್ಘ ಅವಧಿಯ ವೀಸಾಗಾಗಿ ಇದೇ ನಮ್ಮ ಸರ್ಕಾರ ಇಲ್ಲಿರುವ ವಲಸಿಗರಿಂದ ಅರ್ಜಿ ಆಹ್ವಾನಿಸಿದಾಗ ತಮ್ಮ ವಲಸೆಗೆ ಮತೀಯ ದೌರ್ಜನ್ಯದ ಕಾರಣ ನೀಡಿ ಬಂದ ಅರ್ಜಿಗಳು ಕೇವಲ ೩೧೩೧೩ ಮಾತ್ರ. ಎಂದು ಗುಪ್ತಚರ ವಿಭಾಗದ ಒಂದು ವರದಿ ಹೇಳುತ್ತಿರುವಾಗ ಈ ಒಟ್ಟು ಮತೀಯ ದೌರ್ಜನ್ಯದ ಮಾತೇ ಕ್ಷುಲ್ಲಕ ಎನ್ನಿಸುತ್ತದೆ. ಪೌರತ್ವ ನೀಡಲು ಮತೀಯ ದೌರ್ಜನ್ಯವೇ ಆಧಾರವಾಗಿರುವುದಾದದರೆ, ವಲಸೆಯ ಸಕ್ರಮೀಕರಣಕ್ಕೆ ೨೦೧೪ರ ಅಂತ್ಯದವರೆಗೂ ಗಡುವು ಏಕೆ?

ಈ ಎಲ್ಲ ಮಾಹಿತಿಯ ಅರ್ಥ ಈ ದೇಶಗಳಲ್ಲಿ ಮತೀಯ ದೌರ್ಜನ್ಯಗಳು ನಡೆದೇ ಇಲ್ಲ ಎಂದಲ್ಲ. ನಡೆದಿವೆ; ನಡೆಯುತ್ತಲೂ ಇವೆ. ಮತೀಯ ಭಾವನೆಗಳನ್ನು ಕೆರಳಿಸಿದರೆ ಅವು ಎಲ್ಲಿ ಬೇಕಾದರೂ ನಡೆಯಬಹುದು. ರಾಷ್ಟ್ರ ವಿಭಜನೆಯ ಸಂದರ್ಭದಲ್ಲಿ ಮತ್ತು ಕಳೆದ ಐದಾರು ವರ್ಷಗಳಲ್ಲಿ ನಮ್ಮ ದೇಶದಲ್ಲೂ ಇಂಥವು ಎಷ್ಟು ನಡೆದಿಲ್ಲ? ಮತೀಯ ರಾಷ್ಟ್ರಗಳು ಎಂಬುದು ಅಪೇಕ್ಷಣೀಯವಲ್ಲದಿದ್ದರೂ ಅವು ಇಂದಿನ ವಾಸ್ತವ. ನಾವೇನು ಅಂಥ ರಾಷ್ಟ್ರಗಳ ಜೊತೆ ಸಂಬಂಧ ಕಡಿಕೊಂಡಿದ್ದೇವೆಯೆ? ನಮ್ಮ ನೆರೆಯ ಮೂರೂ ರಾಷ್ಟ್ರಗಳಲ್ಲಿ ರಾಜಕೀಯವಾಗಿ ಹಲವು ಬದಲಾವಣೆಗಳು ನಡೆಯುತ್ತಿದ್ದು ಅವು ನಿಧಾನವಾಗಿಯಾದರೂ ಉದಾರವಾದಿ ಮೌಲ್ಯಗಳತ್ತ ಸಾಗುತ್ತಿರುವಂತಿವೆ. ಹಾಗಾಗಿ ಅವನ್ನು ಉದಾರ ಮೌಲ್ಯಗಳೆಡೆಗೆ ಕರೆದೊಯ್ಯುವುದು ನಿಜವಾದ ಧರ್ಮಿಯನ ಪ್ರಯತ್ನವಾಗಬೇಕೇ ಹೊರತು, ಅವನ್ನು ಕೆಣಕುತ್ತಾ ಅವುಗಳಂತೆಯೇ ನಾವು ಆಗುವಂತಾಗಬಾರದು. ಅದೇ ನಮ್ಮ ಉದ್ದೇಶವಾಗಿರದ ಹೊರತು!

('ಹೊಸ ಮನುಷ್ಯ' ಫೆಬ್ರವರಿ, ೨೦೨೦)

ಸೆಕ್ಯುಲರಿಸಂ ಎಂಬ ಅಧರ್ಮ

೨೦೨೦ರ ಆಗಸ್ಟ್ ೫ ಆಧುನಿಕ ಭಾರತದ ಇತಿಹಾಸದಲ್ಲಿ ಒಂದು ನಿರ್ಣಾಯಕ ದಿನವಾಗಿ ದಾಖಲಾಗಲಿದೆ. ಅಂದು ಅಯೋಧ್ಯೆಯಲ್ಲಿ ರಾಮಮಂದಿರದ ಭೂಮಿ ಪೂಜೆ ನಡೆಯಿತೆಂದಲ್ಲ. ಅದು ನಮ್ಮ ಸರ್ವೋನ್ನತ ನ್ಯಾಯಾಲಯದ ತೀರ್ಪಿಗೆ–ಅದು ಎಷ್ಟೇ ಚರ್ಚಾರ್ಹವೇ ಆಗಿರಲಿ–ಅನುಸಾರವಾಗಿ ನಡೆಯಿತು. ಆದರೆ ಅದು ದೇಶದ ಪ್ರಧಾನ ಮಂತ್ರಿ ನೇತೃತ್ವದಲ್ಲಿ, ಮುಖ್ಯಮಂತ್ರಿ, ರಾಜ್ಯಪಾಲರುಗಳಲ್ಲದೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರ ಸಹಭಾಗಿತ್ವದಲ್ಲಿ ನಡೆದು, ಅವರು ಜನರಿಂದ ಶ್ರೀರಾಮನಿಗೆ ಜೈಕಾರ ಕೂಗಿಸಿದರು ಎಂಬುದು ಆ ದಿನ ನಿರ್ಣಾಯಕವೆನಿಸಲು ಮುಖ್ಯ ಕಾರಣವೆನ್ನಬಹುದು.

ಅಂದು ರಾಷ್ಟ್ರಕ್ಕೆ ಆಧಾರವಾಗಿರುವ ನಮ್ಮ ಸಂವಿಧಾನದ ಮೂಲ ತತ್ವಗಳಲ್ಲಿ ಒಂದಾದ ಸೆಕ್ಯುಲರಿಸಂನ ಮಾರಣ ಹೋಮವಾಯಿತು ಎಂಬ ಚರ್ಚೆ ರಾಷ್ಟ್ರಾದ್ಯಂತ ದಟ್ಟವಾಗಿ ನಡೆಯುತ್ತಿದೆ. ಅಂದು ರಾಷ್ಟ್ರಧರ್ಮವೆಂಬುದೊಂದಿದ್ದರೆ ಅದಕ್ಕೆ ತೀವ್ರ ಆಘಾತವಾಗಿದ್ದು, ಈ ಚರ್ಚೆಗೆ ಆಧಾರ ಒದಗಿಸಿದೆ. ಆದರೆ ಈ ಚರ್ಚೆ ಇಷ್ಟಕ್ಕೇ ಸೀಮಿತವಾಗದೆ ಈ ಆಘಾತಕ್ಕೆ ಮೂಲ ಕಾರಣವಾದರೂ ಏನು ಎಂಬುದರ ಚರ್ಚೆಗೂ ವಿಸ್ತರಿಸಿಕೊಳ್ಳಬೇಕಿದೆ.

ಹಾಗೆ ವಿಸ್ತರಿಸಿಕೊಂಡಾಗ ಮೊದಲು ಅರಿವಿಗೆ ಬರಬೇಕಾದ ಸಂಗತಿ ಎಂದರೆ, ಈ ಸೆಕ್ಯುಲರಿಸಂ ತತ್ವ ಉಲ್ಲಂಘನೆಯಾಗುತ್ತಿರುವುದು ಬಿಜೆಪಿ ಸರ್ಕಾರಗಳು ಬಂದ ಮೇಲೆ ಮಾತ್ರವಲ್ಲ. ಕೇರಳದ ಕಮ್ಯುನಿಸ್ಟ್ ಸರ್ಕಾರ ಐವತ್ತರ ದಶಕದಲ್ಲೇ ಮುಸಿಂ ಲೀಗ್‌ನ ಓಲೈಕೆಗಾಗಿ ಮುಸ್ಲಿಂ ಬಹುಸಂಖ್ಯಾತ ಮಲಪ್ಪುರಂ ಜಿಲ್ಲೆ ರಚನೆ ಮಾಡಿದಂದಿನಿಂದಲೂ ಸೆಕ್ಯುಲರಿಸಂನ ಮಹಾಪ್ರತಿಪಾದಕರಾಗಿದ್ದ ನೆಹರೂ ಸರ್ಕಾರಗಳೂ ಸೇರಿದಂತೆ ಹೆಚ್ಚೂಕಡಿಮೆ ಎಲ್ಲ ಪಕ್ಷಗಳ ಸರ್ಕಾರಗಳೂ ಈ ಉಲ್ಲಂಘನೆಗಳಲ್ಲಿ ಪಾಲ್ಗೊಂಡಿವೆ. ಈ ಹಲವು ಉಲ್ಲಂಘನೆಗಳ ಇತಿಹಾಸವೇ ಇಂದು ಬಿಜೆಪಿಗೆ ಅದರ ಮಾರಣಹೋಮ

ನಡೆಸಲು ಸುಲಭಗೊಳಿಸಿರುವುದು. ಇದೆಲ್ಲದರ ಹಿಂದೆ ಇರುವ ವಾಸ್ತವಾಂಶ ಎಂದರೆ ಭಾರತದ ಜನಜೀವನದ ಜಾಯಮಾನಕ್ಕೆ ಒಗ್ಗದ ಅರ್ಥದ ಸೆಕ್ಯುಲರಿಸಂನ್ನು ನಾವು ಆಧುನಿಕ ರಾಷ್ಟ್ರವನ್ನು ನಿರ್ಮಿಸುವ ಭರದಲ್ಲಿ ಯೂರೋಪ್‌ನಿಂದ ಆಧುನಿಕ ರಾಷ್ಟ್ರದ ಪರಿಕಲ್ಪನೆಯೊಂದಿಗೆ ಆಮದು ಮಾಡಿಕೊಂಡಿರುವುದು. (ಇದೇ ಸಂಚಿಕೆಯಲ್ಲಿನ ಆಶೀಶ್ ನಂದಿ ಅವರ ಸಂದರ್ಶನ ನೋಡಿ.) ಈ ಹಿಂದೆಯೊಮ್ಮೆ ನಾನು ಬರೆದಂತೆ ಈ ಸೆಕ್ಯುಲರಿಸಂ ಎಂಬ ಶಬ್ದಕ್ಕೆ ಸರಿಯಾದ ಭಾರತೀಯ ಭಾಷೆಯ ಶಬ್ದವೊಂದು ನಮಗೆ ಸಿಗದೆ ಹೋಗುವುದಿರಲಿ, ಹೊಸ ಶಬ್ದವೊಂದನ್ನು ಟಂಕಿಸಲೂ ಸಾಧ್ಯವಾಗದಿರುವುದು ಇದಕ್ಕೆ ಸಾಕ್ಷಿ. ಈ ಪ್ರಯತ್ನದಲ್ಲಿ ಜಾತ್ಯತೀತತೆ, ಧರ್ಮ ನಿರಪೇಕ್ಷತೆ, ಸರ್ವಧರ್ಮ ಸಮಭಾವ ಇತ್ಯಾದಿ 'ಅನುವಾದ'ಗಳು ಕೇವಲ ಸಂದರ್ಭಗಳಿಗೆ ತಕ್ಕಂತೆ ಬಳಸಲಾಗುತ್ತಿರುವ ಶಬ್ದಗಳು ಸಮಯಸಾಧಕ ರಾಜಕೀಯ ಸಾಧನಗಳಾಗಿ ಕಾಣುತ್ತಿವೆಯೇ ಹೊರತು ಸೆಕ್ಯುಲರಿಸಂ ಶಬ್ದ ಸೂಚಿಸುವುದೆಂದು ಹೇಳಲಾಗುವ ಪ್ರಭುತ್ವವನ್ನು ಧರ್ಮದಿಂದ 'ಪ್ರತ್ಯೇಕಿಸ'ಬೇಕೆಂಬ ನಿಖರ ಅರ್ಥ ಹೊರಡಿಸುವುದಿಲ್ಲ. ಸಂವಿಧಾನದ ಅಡಿಯಲ್ಲಿ ನಮ್ಮ ರಾಷ್ಟ್ರಪತಿಗಳಿಂದ ಹಿಡಿದು ಸರ್ಕಾರಗಳ ಕಿರಿಯ ಅಧಿಕಾರಿಗಳವರೆಗೆ ಅಧಿಕಾರ ಸ್ವೀಕರಿಸುವ ಔಪಚಾರಿಕ ಪ್ರಮಾಣ ವಚನದಲ್ಲಿ 'ದೇವರ ಹೆಸರಿನಲ್ಲಿ...' (ಕೆಲವೊಮ್ಮೆ ಮನೆದೇವರ ಹೆಸರಿನಲ್ಲಿಯೂ!) ಎಂಬ ಶಬ್ದಗಳಿಗೆ ಅವಕಾಶವಿರುವಾಗ ನೀವು ಎಂತಹ ಸೆಕ್ಯುಲರಿಸಮ್ಮನ್ನು ಇಲ್ಲಿ ಜಾರಿಗೆ ತರುತ್ತೀರಿ? ಸೆಕ್ಯುಲರಿಸಂ ಅಂದರೆ ನಾಸ್ತಿಕವಾದವಲ್ಲ ತಾನೆ?

ಈ ಗೊಂದಲದ ಹಿನ್ನೆಲೆಯಲ್ಲೇ ನಮ್ಮ ಸಂವಿಧಾನ ರಕ್ಷಣೆಯ ಅಂತಿಮ ಜವಾಬ್ದಾರಿ ಹೊಂದಿರುವ ನಮ್ಮ ಸರ್ವೋನ್ನತ ನ್ಯಾಯಾಲಯವೂ ಅಯೋಧ್ಯಾ ನಿವೇಶನ ಹಕ್ಕುದಾರಿಕೆ ವಿವಾದವನ್ನು ಇತ್ಯರ್ಥಪಡಿಸಲು ಹೋಗಿ ರಾಮಮಂದಿರ ಕಟ್ಟಲು ಟ್ರಸ್ಟ್‌ವೊದನ್ನು ರಚಿಸುವಂತೆ ಸರ್ಕಾರಕ್ಕೆ ಸೂಚಿಸುವಂತಹ ತೀರ್ಪು ನೀಡುವ ಒತ್ತಡಕ್ಕೆ ಒಳಗಾಗಿದೆ. ಜೊತೆಗೇ ಬಾಬ್ರಿ ಮಸೀದಿಯನ್ನು ಉರುಳಿಸಿದ್ದು ಒಂದು ಘೋರ ಅಪರಾಧ ಮತ್ತು ಇದರ ವಿಚಾರಣೆ ಕ್ಷಿಪ್ರವಾಗಿ ನಡೆದು ಅಪರಾಧಿಗಳಿಗೆ ಶಿಕ್ಷೆಯಾಗಬೇಕೆಂದು ಹೇಳಲೂ ಅದು ಮರೆತಿಲ್ಲ. ಅಷ್ಟೇ ಅಲ್ಲ, ಮುಂದುವರೆದ ಅದು ವ್ಯಾಜ್ಯದ ಮುಸ್ಲಿಂ ಸಮುದಾಯದ ಕಕ್ಷಿದಾರಿಗೆ ಅವರು ಕಳಕೊಂಡ ಮಸೀದಿಗೆ ಪರಿಹಾರವಾಗಿ ಅಯೋಧ್ಯೆಯಲ್ಲೇ ಒಂದು ಪರ್ಯಾಯ ನಿವೇಶನ ನೀಡಬೇಕೆಂದೂ ಸೂಚಿಸಿದೆ. ಸಾಮಾನ್ಯ ನ್ಯಾಯ ದೃಷ್ಟಿಗೆ ತದ್ವಿರುದ್ಧ ಸೂಚನೆಗಳಂತೆ ಕಾಣುವ ಈ ಎಲ್ಲ ಸಾಂವಿಧಾನಿಕ ವೈರುಧ್ಯಗಳನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಅದಕ್ಕೆ ಹೆಚ್ಚು ಕಷ್ಟ ಬೇಡ ಎಂದು ಸರ್ಕಾರ ಈ ತೀರ್ಪಿನ ನೇತೃತ್ವ ವಹಿಸಿ ನಿವೃತ್ತರಾದ ಮುಖ್ಯ ನ್ಯಾಯ್ಯಾಧೀಶರಿಗೆ ರಾಜ್ಯಸಭೆಯ ಸದಸ್ಯತ್ವವನ್ನು ದಯಪಾಲಿಸಿ ಕೊನೆಯ ನಗೆ ನಕ್ಕಿದೆ! ಕ್ಷಮಿಸಿ, ಕೊನೆಯ ನಗೆ ನಕ್ಕಿರುವವರು ಆ ಸದಸ್ಯತ್ವವನ್ನು ಯಾವ ಎಗ್ಗೂ ಇಲ್ಲದೆ ಒಪ್ಪಿಕೊಂಡ ಆ ನಿವೃತ್ತ ನ್ಯಾಯಾಧೀಶರು!

ಈ ಎಲ್ಲ ಗೊಂದಲಗಳಾಚೆ ನಿಂತು ಯೋಚಿಸಿದರೆ ಒಂದು ಪ್ರಶ್ನೆ ನಮ್ಮ ಮುಖದೆದುರೇ ಬಂದು ನಿಲ್ಲುತ್ತದೆ. ಈ ದೇಶದ ಜನರ ಸ್ಮೃತಿಕೋಶದಲ್ಲಿ ಹಾಸುಹೊಕ್ಕಾಗಿರುವ ಶ್ರೀರಾಮನಿಗೆ ಅವನ ಊರಾದ ಅಯೋಧ್ಯೆಯಲ್ಲಿ ಒಂದು ಐತಿಹಾಸಿಕ ಸ್ಮಾರಕವೋ, ಮಂದಿರವೋ ಇಲ್ಲದೆ ಅಲ್ಲೊಂದು ಬೃಹತ್ ಮಸೀದಿ ಇದ್ದುದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? 'ಈಶ್ವರ ಅಲ್ಲಾ ತೇರೇ ನಾಮ್' ಎಂದು ನಂಬುವವರನ್ನೂ ಕಾಡುವ ಪ್ರಶ್ನೆ ಇದು. ಹಾಗಾಗಿ ಸೆಕ್ಯುಲರಿಸಂ ಎಂದರೆ ಖಂಡಿತ ನಾಸ್ತಿಕತೆ ಅಲ್ಲದಿದ್ದರೆ, ಅದರ ವಿವೇಕ ಬಾಬ್ರಿ ಮಸೀದಿಯ ಕಕ್ಷಿದಾರರನ್ನು ಬಹು ಹಿಂದೆಯೇ ಆ ಜಾಗವನ್ನು ತಾವೇ ತಾವಾಗಿ ರಾಮಮಂದಿರ ಕಟ್ಟಬಯಸುವವರಿಗೆ ಬಿಟ್ಟುಕೊಡಲು ಪ್ರೇರೇಪಿಸಬೇಕಿತ್ತು. ಆದರೆ ನಾವು ಆಧುನಿಕ ಆಡಳಿತ ವ್ಯವಸ್ಥೆ ರೂಪಿಸುವ ಹೆಸರಿನಲ್ಲಿ ಚಲಾವಣೆಗೆ ತಂದಿದ್ದ ಸೆಕ್ಯುಲರಿಸಮ್ಮಿನ ರಾಜಕೀಯ ಸಂಕಥನ ಆಂತಹ ವಾತಾವರಣಕ್ಕೆ ಅವಕಾಶವನ್ನೇ ನೀಡಲಿಲ್ಲ. (ಅವರು ಹಾಗೆ ಮಾಡಲು ಸಿದ್ಧರಿದ್ದರೆಂದೂ, ಆದರೆ ಕೆಲ 'ಸೆಕ್ಯುಲರ್' ಚರಿತ್ರಕಾರರು ಅದು 'ಸೆಕ್ಯುಲರಿಸಂ'ಗೆ ದ್ರೋಹ ಬಗೆದಂತಾಗುವುದೆಂದು ತಡೆದರೆಂಬ ವರದಿಗಳೂ ಇವೆ.) ಈಗ ಅದಕ್ಕಾಗಿ ದೊಡ್ಡ ಬೆಲೆ ತೆರಬೇಕಾಗಿದೆ. ದೇಶದ ಅತ್ಯುಚ್ಚ ನ್ಯಾಯಾಲಯ ಸಂವಿಧಾನದ ಬಹು ಅಪರೂಪದ ಸಂದರ್ಭಗಳಲ್ಲಿ ಮಾತ್ರ ಬಳಸಬಹುದಾದ ಒಂದು ವಿಶೇಷಾಧಿಕಾರ ಬಳಸಿ ಮಂದಿರ ನಿರ್ಮಾಣದ ವ್ಯವಸ್ಥೆಯ(ಟ್ರಸ್ಟ್‌ನ) ಆದೇಶ ನೀಡುವಂತಾಗಿದೆ ಮತ್ತು ಇದು ಸೃಷ್ಟಿಸಿದ ವಾತಾವರಣ ದೇಶದ ಪ್ರಧಾನ ಮಂತ್ರಿ ಅದರ ಭೂಮಿ ಪೂಜೆ ನಡೆಸಿ ಶ್ರೀರಾಮನಿಗೆ ಜಯಕಾರ ಕೂಗುವ ರಾಜಕಾರಣ ಮಾಡುವ ಧೈರ್ಯ ಮತ್ತು ಸ್ಥೈರ್ಯಗಳೆರಡನ್ನೂ ಪ್ರದಾನ ಮಾಡಿದೆ.. ಅಂದರೆ ಅದಕ್ಕೆ ಬಹು ಜನರ ಸಮ್ಮತಿಯೂ ಸಿಕ್ಕಿದೆ. ಇಂದು ಕಾಂಗ್ರೆಸ್ ನಾಯಕರೂ ಇದರ ಬಗ್ಗೆ ಚಕಾರವೆತ್ತದೆ, ಇಂತಹ ಜನಸಮ್ಮತಿಯಲ್ಲಿ ಪಾಲು ಪಡೆಯಲು ಹಾತೊರೆಯುತ್ತಿರುವುದು ಅದರ ಪಾಪಪ್ರಜ್ಞೆಯ ಪ್ರತೀಕವೇ ಆಗಿದೆ. ಹಾಗೇ ಇಂದು ಈ ಸೆಕ್ಯುಲರಿಸಂ ಅಪಹಾಸ್ಯಕ್ಕೀಡಾಗುತ್ತಿರುವುದರ ಬಗ್ಗೆ ಎದೆ ಎದೆ ಬಡಿದುಕೊಂಡು ದುಃಖಿಸುತ್ತಿರುವವರು ಅಸಾವುದ್ದೀನ ಒವೈಸಿಯಂತಹ, ಧರ್ಮವೆಂದರೆ ಅದರ ಪುರೋಹಿತಶಾಹಿ ಮಾತ್ರ ಮುಟ್ಟುವಂಥದ್ದು ಎಂದು ನಂಬಿರುವ ಮೂಲಭೂತವಾದಿ ರಾಜಕಾರಣಿಗಳು ಮಾತ್ರ. ಹಾಗೆ ನೋಡಿದರೆ ಈತನೇ ಉತ್ತಮ. ಇತರರು ತಮ್ಮ ದು:ಖವನ್ನು ವೋಟು ಕಳೆದುಕೊಳ್ಳುವ ಆತಂಕದಿಂದ ಹತ್ತಿಕ್ಕಿ ಒಳಗೊಳಗೇ ನುಲಿಯುತ್ತಿರುವಂತಿದೆ.

ನಿಜವಾದ ಸೆಕ್ಯುಲರಿಸಂ ನಮ್ಮ ಜನಜೀವನದ ನರನಾಡಿಗಳಲ್ಲೇ ಹಾಸುಹೊಕ್ಕಾಗಿದೆ. ಅಥವಾ ಸರಿಯಾಗಿ ಹೇಳುವುದಾದದರೆ ಹಾಸುಹೊಕ್ಕಾಗಿತ್ತು. ಆದರೆ ಸೆಕ್ಯುಲರಿಸಂನ ಹೆಸರಿನಲ್ಲಿ ಮಾಡಿದ ವೋಟಿನ ರಾಜಕಾರಣ ಈ ಪರಂಪರೆಯನ್ನೇ ಇಂದು ನಾಶ ಮಾಡಿ ಕೂರಿಸಿದೆ. ಬಾಬ್ರಿ ಮಸೀದಿ ಪ್ರಶ್ನೆಯನ್ನು ಅಯೋಧ್ಯೆಯ ಜನರಿಗೇ ಮಾತಾಡಿ ಪರಿಹರಿಸಿಕೊಳ್ಳಲು ಬಿಡುವುದೇ ನಿಜವಾದ ಸೆಕ್ಯುಲರಿಸಂ ಆಗಿತ್ತು. ಆಗ ರಥಯಾತ್ರೆ,

ಕೋಮು ದಂಗೆ, ಬಹುಸಂಖ್ಯಾತರ ಕೋಮು ಉನ್ಮಾದ, ಮೋದಿ ನಾಯಕತ್ವದ ಉದಯ ಇವಾವುವೂ ಇರುತ್ತಿರಲಿಲ್ಲ. ಹಾಗಾಗಿ ಎಲ್ಲಕ್ಕಿಂತ ಮುಖ್ಯವಾಗಿ ಬಹು ಆಯಾಮದ ಸೀತಾರಾಮ ಏಕಾಯಾಮದ ಕೋದಂಡರಾಮನಾಗಿ ಪರಿವರ್ತಿತನಾಗುತ್ತಿರಲಿಲ್ಲ. ಇದರಿಂದಾಗಿ ಆಗಿರುವ ಹಾನಿಯನ್ನು ಸರಿಪಡಿಸಲು ಇರುವುದು ಒಂದೇ ಮಾರ್ಗ. ಅಯೋಧ್ಯೆಯಲ್ಲಿಯೇ ದೂರದಲ್ಲಿ ಸರ್ಕಾರ ಮಂಜೂರು ಮಾಡಿರುವ ಬದಲಿ ನಿವೇಶನದಲ್ಲಿ ಕಟ್ಟಲಾಗುವ ಮಸೀದಿ ನಿರ್ಮಾಣದ ಆರಂಭೋತ್ಸವಕ್ಕೆ ಪ್ರಧಾನಿ ಮೋದಿಯವರು ಹಾಜರಾಗಿ ಅಲ್ಲಾಹುವಿಗೆ ಪ್ರಾರ್ಥನೆ ಸಲ್ಲಿಸುವುದು. ಇದಕ್ಕೆ ಅಪಾರ ರಾಜಕೀಯ ಧೈರ್ಯವೂ, ಸೀಮಾತೀತ ರಾಜಕೀಯ ಮುತ್ಸದ್ದಿತನವೂ, ರಾಮ-ರಹೀಮರು ಬೇರೆಯಲ್ಲ ಎಂಬ ಅನುಪಮ ಧಾರ್ಮಿಕ ಅರಿವೂ ಬೇಕಾಗುತ್ತದೆ. ಇಂತಹ ಒಂದು ಐತಿಹಾಸಿಕ ಹೆಜ್ಜೆ ಇಡಬಲ್ಲ ಮಹಾನಾಯಕತ್ವದ ಛಾತಿಯನ್ನು ಮೋದಿಯವರು ಪ್ರದರ್ಶಿಸುವರೇ?

ಇಲ್ಲಿಯೇ ಹೇಳಬೇಕಾದ ಒಂದು ಮುಖ್ಯ ಮಾತೆಂದರೆ, ನಿಜವಾದ ಸೆಕ್ಯುಲರಿಸಂ ಎಂದರೆ ಅಧ್ಯಾತ್ಮ. ಅಧ್ಯಾತ್ಮ ಎಂದರೆ ನಂನಮ್ಮ ಧರ್ಮಗಳ ಸುತ್ತ ಕಟ್ಟಲ್ಪಟ್ಟಿರುವ ಕರ್ಮಠತನದ ಗೋಡೆಗಳನ್ನು ಒಡೆದು ಆ ಚಿಪ್ಪುಗಳಿಂದ ಹೊರಬಂದಾಗ ತೆರೆದುಕೊಳ್ಳುವ ಅನುಭಾವದ ಅವಕಾಶದಲ್ಲಿ ಚಿಟ್ಟೆಯಾಗಿ ಹಾರುವುದು. ಅಧ್ಯಾತ್ಮ ಎಂದರೆ, ಮನುಷ್ಯನನ್ನು ಅನಂತ ಸೃಷ್ಟಿಯ ಅಖಂಡತೆಯಲ್ಲಿ ಗ್ರಹಿಸಿ ನಮ್ರನೂ, ಪೂರ್ಣನೂ ಆಗುವ ಪ್ರಕ್ರಿಯೆ; ಪ್ರಯತ್ನ; ತುಡಿತ.. ಉಳಿದದ್ದೆಲ್ಲ ಬರೀ ರಾಜಕಾರಣ. ಅಥವಾ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಒಂದು ಎಂದರೆ ಧರ್ಮ. ಎರಡಾದರೆ ಅದು ರಾಜಕಾರಣ. ಎರಡನ್ನು ಒಂದು ಮಾಡುವುದು ಸೆಕ್ಯುಲರ್ ರಾಜಕಾರಣ. ಗಾಂಧಿ ಮಾಡಹೊರಟದ್ದು ಇಂತಹ ರಾಜಕಾರಣವನ್ನೇ, ಇದು ಅರ್ಥವಾಗದ ಧಾರ್ಮಿಕ ವೇಷದ ರಾಜಕೀಯ ಶಕ್ತಿಗಳು ಅವರನ್ನು ಬಲಿ ತೆಗೆದುಕೊಂಡವು. ಅದರ ಪಶ್ಚಾತ್ತಾಪದ ಭಾಗವಾಗಿಯಾದರೂ ನಾವಿಂದು ನಿಜವಾದ ಸೆಕ್ಯುಲರ್ ರಾಜಕಾರಣದ ಹೊಸ ಅಧ್ಯಾಯವನ್ನು ಆರಂಭಿಸಬೇಕಿದೆ.

ಇದು ಸಾಧ್ಯವಾಗುವುದು ಬಾಬ್ರಿ ಮಸೀದಿ-ರಾಮಮಂದಿರ ವಿವಾದವನ್ನು ಪರಿಹರಿಸಲು ಇದ್ದ ಸುಲಭದ ಹಾದಿ ಎಂದು ಮೇಲೆ ಸೂಚಿಸಿದ, ಆ ವಿವಾದವನ್ನು ಆ ಊರಿನವರಿಗೆ ಬಿಟ್ಟುಕೊಡುವ ಮಾನಸಿಕ ವಿಕೇಂದ್ರೀಕರಣದಿಂದ ಮಾತ್ರ. ಅಂದರೆ ಒಂದು ಜನಸಮುದಾಯದ ಮನಸ್ಸನ್ನು ರಾಜಕೀಯ ಮಹತ್ವಾಕಾಂಕ್ಷೆಯಿಂದ ರೂಪಿಸಲಾಗುವ ರಾಜ್ಯ ಅಥವಾ ರಾಷ್ಟ್ರ ವ್ಯವಸ್ಥೆಯ ಒತ್ತಡಗಳಿಗೆ ಅಧೀನಗೊಳಿಸದಿರುವುದು. ಇದು ಧರ್ಮವನ್ನೂ ರಾಜಕೀಯಗೊಳಿಸಿ ಅದರ ಅಧ್ಯಾತ್ಮವನ್ನು ನಾಶ ಮಾಡುತ್ತದೆ. ಅಯೋಧ್ಯಾ ವಿವಾದ ಎರಡೂ ಕಡೆಗಳ ಪುರೋಹಿತಶಾಹಿಗಳ ವಶವಾಗಿ ಸಮಸ್ಯೆ ಭಾವನಾತ್ಮಕವಾಗಿ ಉದ್ದೀಪನಗೊಂಡು ಉನ್ಮಾದಮಯವಾಗಿದ್ದು ಹೀಗೆ. ಧರ್ಮವೆನ್ನುವುದು ಒಳಗಿನ ಮೌನದತ್ತ ತುಡಿಯುವ ಪ್ರವೃತ್ತಿಯಾಗಿ ಉಳಿಯದೆ

ಹೊರಗಿನ ತಂಟೆಕೋರತನವಾಗಿ ಪರಿವರ್ತಿತವಾಗುವುದು, ಅದು ತನ್ನ ಹೊರಗಿನ ಲೋಕದ ಒತ್ತಡಗಳಿಗೆ ಒಳಗಾದಾಗ. ಹಾಗೆಂದೇ ಗಾಂಧಿ ರಾಜ್ಯ/ ರಾಷ್ಟ್ರವೆಂಬ ಪರಿಕಲ್ಪನೆಗಳು ಮೂಡುತ್ತಿದ್ದಾಗ ಅವುಗಳ ಗೊಡವೆ ಬೇಡವೆಂದು ಗ್ರಾಮ-ಸ್ವರಾಜ್ಯದ ಪರಿಕಲ್ಪನೆಯನ್ನು ನೀಡಿದ್ದು. ಹೀಗೆ ಭಾರತದಲ್ಲಿ ಸೆಕ್ಯುಲರಿಸಂ ಎಂದರೆ ವಿಕೇಂದ್ರೀಕರಣ ಮತ್ತು ಆ ಮೂಲಕ ಅಧ್ಯಾತ್ಮ ಎಂದು ಅರ್ಥವಾಗುತ್ತದೆ. ಈ ದೇಶ ಬೆಳೆಸಿಕೊಂಡು ಬಂದ ಹಿಂದೂ ಎಂದು ಕರೆಯಲಾಗುವ ಧರ್ಮ ಹೀಗೇ ಇತ್ತು. ಆದರೆ ರಾಷ್ಟ್ರೀಯತೆ ಎಂಬ ಪರಿಕಲ್ಪನೆಗೆ ಬಲಿ ಬಿದ್ದ ದೇಶ ಅದನ್ನು ಕಳೆದುಕೊಂಡು ತನ್ನ ಉಳಿವಿಗಾಗಿ ಸೆಕ್ಯುಲರಿಸಂನ್ನು ಮೊರೆ ಹೋಗಿ ಈಗ ೭೪ ವರ್ಷಗಳ ನಂತರ ಎರಡನ್ನೂ ಕಳೆದುಕೊಂಡು ಹಿಂದುತ್ವವೆಂಬ ಅಧ್ಯಾತ್ಮವೇ ಇಲ್ಲದ ಅಪ್ಪಟ ರಾಜಕೀಯ ಮೋಡಿಯಲ್ಲಿ ಬಂಧಿತವಾಗಿದೆ. ಯೂರೋಪ್‌ನಲ್ಲಿ ರಾಷ್ಟ್ರ ಪರಿಕಲ್ಪನೆಯ ಜೊತೆಗೆ ಸೆಕ್ಯುಲರಿಸಂ ತತ್ವ ಕೂಡ ಉದಯವಾಗಲು ಕಾರಣ ಅಲ್ಲಿ ಧರ್ಮ ಚರ್ಚ್ ರೂಪದಲ್ಲಿ ಸಂಘಟಿತಗೊಂಡು ಏಕರೂಪಿಯಾಗಿತ್ತು. ಆದರೆ ಭಾರತದಲ್ಲಿ ಧರ್ಮ ಚರ್ಚ್ ರೂಪದಲ್ಲಿ ಏಕರೂಪಿಯಾಗಿ ಸಂಘಟಿತಗೊಂಡಿರಲಿಲ್ಲ. ಹಾಗಾಗಿ ಇಲ್ಲಿ ಸೆಕ್ಯುಲರಿಸಂ ಪರಿಣಾಮ ತಾನಾಗಿಯೇ ಇತ್ತು. ಆದರೆ ಈಗ ನೋಡುತ್ತಿರುವಂತೆ ಆಮದಾದ ಸೆಕ್ಯುಲರಿಸಂ ಬಂದು ಇಲ್ಲಿ ಹಿಂದೂ ಚರ್ಚ್‌ಗಳ ನಿರ್ಮಾಣವನ್ನು ಕೈಗೊಂಡು ಹಿಂದೂ ಧರ್ಮದ ಆಧ್ಯಾತ್ಮವನ್ನೆಲ್ಲ ಕಳೆದು ಅದನ್ನು ರಾಷ್ಟ್ರೀಯಗೊಳಿಸುವಲ್ಲಿ ತೊಡಗಿದೆ. ವಿಶ್ವ ಹಿಂದೂ ಪರಿಷತ್ ಹಿಡಿದಿರುವ ಹಾದಿಯಾದರೂ ಇನ್ನಾವುದು? ಅದರ ಪರಿಣಾಮವೆಂದರೆ ಭಾರತಕ್ಕೆ ಬಂದು ಬಹುರೂಪಿಗಳಾಗಿ ವಿಕೇಂದ್ರೀಕೃತಗೊಂಡಿದ್ದ ಇತರ ಧರ್ಮಗಳೂ ತಂತಮ್ಮ ಹೊಸ 'ಚರ್ಚ್'ಗಳನ್ನು ಕಟ್ಟಿಕೊಳ್ಳತೊಡಗಿವೆ. ಇದನ್ನು ಅಧರ್ಮ ಎಂದು ಕರೆಯದೆ ಇನ್ನೇನೆನ್ನಬೇಕು?

(ಸೆಪ್ಟಂಬರ್, ೨೦೨೦ರ 'ಹೊಸ ಮನುಷ್ಯ'ದಲ್ಲಿ ಪ್ರಕಟ)

'ಸುಧಾರಣೆ'ಗಳ ರಾಜಕಾರಣ ಮತ್ತು ರೈತ ಚಳುವಳಿ

ಒಟ್ಟಾರೆ ಜನತೆ ಜಾಗತೀಕರಣದ ಆಕ್ರಮಣವನ್ನು ಎಚ್ಚರದಪ್ಪಿ ನಿಯಂತ್ರಿಸದೇ ಹೋದ ಪ್ರಮಾದವನ್ನು ಸರಿಪಡಿಸುವ ಒಂದು ದೊಡ್ಡ ಪ್ರಕ್ರಿಯೆಗೆ ಚಾಲನೆ ಕೊಡಬಲ್ಲ ಅವಕಾಶವನ್ನು ತೆರೆದಿದೆ. ಸ್ವತಃ ರೈತರಿಗೆ ಗೊತ್ತಿದೆಯೋ ಇಲ್ಲವೋ ತಿಳಿಯದು. ಏಕೆಂದರೆ ಜಾಗತೀಕರಣಪೂರ್ವದ ನಮ್ಮ ರೈತ ಚಳುವಳಿಗಳೆಲ್ಲವೂ ತಮ್ಮನ್ನು ಒಟ್ಟಾರೆ ಸಮಾಜದಿಂದ ಪ್ರತ್ಯೇಕಿಸಿಕೊಂಡು ಕಾರ್ಮಿಕ ಸಂಘಗಳಂತೆ ವರ್ತಿಸುತ್ತಾ ತನ್ನ ಬೆಳೆಗಳಿಗೆ ವಂಚನೆಯಾದಂತೆ ತೋರಿದ ನ್ಯಾಯಯುತ ಬೆಲೆಯನ್ನು ಆಗ್ರಹಿಸುವುದಕ್ಕಷ್ಟೇ ಸೀಮಿತವಾಗಿದ್ದವು. ಅವು ಯಾವುವೂ ಬದುಕಿನ, ನಿರ್ದಿಷ್ಟವಾಗಿ ಗ್ರಾಮಬದುಕಿನ ಪುನರುಜ್ಜೀವನದ ಚಳುವಳಿಗಳಾಗಿ ಪರಿಕಲ್ಪಿತವೂ ಆಗಿರಲಿಲ್ಲ, ಬೆಳೆಯಲೂ ಇಲ್ಲ. ಆದರೆ ಸದ್ಯದ ರೈತ ಚಳುವಳಿ ಸದರಿ ಕಾಯ್ದೆಗಳ ತಿದ್ದುಪಡಿಗಳಿಂದ ಅಂತಃಸ್ಫೂರ್ತವಾಗಿ (instinctively) ತಮ್ಮ ಬದುಕಿನ ಬೇರುಗಳು ಕಳಚುತ್ತಿರುವ ಆತಂಕಕ್ಕೆ ಎಚ್ಚೆತ್ತುಕೊಂಡಂತೆ ರೈತ ತನ್ನ ಪ್ರಾಣವನ್ನೇ ಪಣವೊಡ್ಡಿ ಹೋರಾಟಕ್ಕೆ ನಿಂತಂತಿದೆ. ಆದರೆ ಈ ಮೊದಲೇ ಸೂಚಿಸಿದಂತೆ ಇದು ಕೇವಲ ರೈತರಿಗೆ ಸಂಬಂಧಿಸಿದ ಚಳುವಳಿಯಲ್ಲ. ಭಾರತೀಯ ಬದುಕಿನ ಮೂಲ ಮಾದರಿಯ ರಕ್ಷಣೆಗೆ ಸಂಬಂಧಪಟ್ಟ, ನಮ್ಮ ಕಸುಬುಗಳ ಘನತೆಯನ್ನು ಕಾಪಾಡುವ, ಅವುಗಳ ಸಾಮಾಜಿಕ ಆವರಣವನ್ನು ಸೃಷ್ಟಿಸಿರುವ ಮಾನವ ಸಂದರ್ಭಗಳನ್ನು ಕಾಪಾಡುವ ಪ್ರಶ್ನೆ ಇದು.

೨೦೨೦- ೨೧ನೇ ಸಾಲಿನ ಕೇಂದ್ರ ಸರ್ಕಾರದ ಆರ್ಥಿಕ ಸಮೀಕ್ಷಾ ವರದಿ ಸದ್ಯದ ರೈತ ಚಳುವಳಿಯನ್ನು ಕುರಿತ ಸರ್ಕಾರದ ಧೋರಣೆಯ ಮರ್ಮವನ್ನು ಅರಿಯಲು ಸಹಾಯ ಮಾಡುವಂತಹ ಒಂದು ಅಂಶವನ್ನು ಹೊರಗೆಡಹಿದೆ. ಅದೆಂದರೆ. ರೈತನನ್ನು ಉತ್ಪಾದಕನನ್ನಾಗಿ ಗ್ರಹಿಸಿ, ಕೃಷಿ ವಲಯವನ್ನು ಒಂದು ಉದ್ಯಮವನ್ನಾಗಿ ಬೆಳೆಸುವುದು ಅಗತ್ಯ ಎಂದು ಅದು ಹೇಳಿರುವುದು. ಇದನ್ನು ಅದು 'ಸುಧಾರಣೆ' ಎಂದೂ ಕರೆದು, ಇದಕ್ಕೆ ವ್ಯಕ್ತವಾಗಬಹುದಾದ ವಿರೋಧವನ್ನು 'ಸುಧಾರಣಾ ವಿರೋಧಿ' ಕ್ರಮವೆಂದು

ಬಣ್ಣಿಸಲು ಪೂರ್ವ ಸಿದ್ಧತೆಯನ್ನೂ ಮಾಡಿಕೊಂಡಿದೆ. ಜಾಗತೀಕರಣದ ಭಾಗವಾದ ಆರ್ಥಿಕ ಉಪಕ್ರಮಗಳನ್ನೆಲ್ಲ ಬದಲಾವಣೆಗಳೆಂದಷ್ಟೇ ಕರೆಯದೆ 'ಸುಧಾರಣೆಗಳು' ಎಂದು ಕರೆಯುವ ಪಾರಿಭಾಷಿಕ ರಾಜಕಾರಣದ ಮೂಲಕವೇ ಜಾಗತೀಕರಣದ ರಾಜಕಾರಣವೂ ಆರಂಭವಾಗುತ್ತದೆ ಎಂಬುದು ಜಾಗತೀಕರಣ ತನ್ನ ನಿರ್ಣಾಯಕ ಘಟ್ಟ ಮುಟ್ಟಿರುವ ಇಂದಿನ ದಿನಗಳಲ್ಲೂ ನಮ್ಮ ತಿಳುವಳಿಕೆಗಿನ್ನೂ ಬಂದಂತಿಲ್ಲ. ಆದ್ದರಿಂದಲೇ ಇಂದಿನ ರೈತ ಚಳುವಳಿಗೆ ಕಾರಣವಾಗಿರುವ ಕೃಷಿ ಸಂಬಂಧಿತ ಮೂರು ಕಾಯಿದೆಗಳ ತಿದ್ದುಪಡಿಗಳನ್ನು ಕುರಿತು ಮಾಧ್ಯಮಗಳಲ್ಲಿ ನಡೆದಿರುವ ಚರ್ಚೆಗಳೆಲ್ಲದರಲ್ಲೂ ಈ ತಿದ್ದುಪಡಿಗಳನ್ನು 'ಸುಧಾರಣೆ'ಗಳೆಂದು ಕರೆಯುತ್ತಿರುವುದೂ, ಈ ಸಂಬಂಧದ ಭಿನ್ನಾಭಿಪ್ರಾಯಗಳನ್ನು 'ಸುಧಾರಣಾ ವಿರೋಧಿ' ಕ್ರಮಗಳೆಂದು ಬಣ್ಣಿಸುತ್ತಾ, ಈ ಭಿನ್ನಾಭಿಪ್ರಾಯಗಳನ್ನು ಪ್ರಗತಿ ವಿರೋಧಿ ಎಂಬಂತೆ ಬಿಂಬಿಸುವುದೂ ಈ ಪರಿಭಾಷಾ ರಾಜಕಾರಣದ ಭಾಗವೇ ಆಗಿದೆ. ಹಾಗಾಗಿ ಈ ಚಳುವಳಿ ಮತ್ತು ಕಾಯ್ದೆ ತಿದ್ದುಪಡಿಗಳನ್ನು ಕುರಿತ ಚರ್ಚೆಯು ಪ್ರಗತಿ ಎಂಬ ಪರಿಕಲ್ಪನೆಯ ಅರ್ಥವನ್ನು ಸ್ಪಷ್ಟಡಿಸುವುದರ ಭಾಗವಾಗಿ ಸುಧಾರಣೆ ಎಂಬ ಶಬ್ದದ ಅರ್ಥವನ್ನು ಪರಿಶೀಲಿಸುವುದರೊಂದಿಗೇ ಆರಂಭವಾಗಬೇಕಿದೆ.

ಸುಧಾರಣೆ ಎಂದರೆ ಈಗಿರುವ ಸ್ಥಿತಿಯಿಂದ ಉತ್ತಮ ಸ್ಥಿತಿಗೆ ಹೋಗುವುದು. ಆದರೆ ಈ ಚಲನೆ ಉತ್ತಮ ಸ್ಥಿತಿಯೆಡೆಗೆ ಇದೆಯೆಂದು ನಿರ್ಧರಿಸಲು ಇರುವ ಒರೆಗಲ್ಲುಗಳಾದರೂ ಯಾವುವು ಮತ್ತು ಅವನ್ನು ಬಳಸಿ ಅದನ್ನು ನಿರ್ಧರಿಬೇಕಾದವವರಾದರೂ ಯಾರು? ಎಲ್ಲ ದೇಶ–ಪ್ರದೇಶಗಳ ಯಾವುದೇ ಕಾರ್ಯಕ್ಷೇತ್ರಗಳಲ್ಲಿನ ಈ ಉತ್ತಮಿಕೆಯನ್ನು ನಿರ್ಣಯಿಸುವ ಒಳಿತು ಕೆಡುಕುಗಳನ್ನು ಯಾರೇ ಒಬ್ಬರು ಅಥವಾ ಒಂದು ಸಂಸ್ಥೆ ನಿರ್ಧರಿಸಲು ಸಾಧ್ಯವಿಲ್ಲ. ಅಂತಹ ಅಧಿಕಾರವನ್ನು ಯಾವ ರೂಪದಲ್ಲೂ–ಶಾಸನ ಸಭೆ ಅಥವಾ ಸಂಸತ್ತೂ ಸೇರಿದಂತೆ–ಯಾರಿಗೂ ಕೊಡಲಾಗಿಲ್ಲ. ಇದು ಸಾಮಾನ್ಯ ವಿವೇಕಕ್ಕೆ ವಿರುದ್ಧವಾದದ್ದು. ಆದರೆ ಜಾಗತೀಕರಣದ ಹೆಸರಿನಲ್ಲಿ, ಭಾರತಕ್ಕಿಂತ ಭಿನ್ನವಾದ ಚರಿತ್ರೆ ಮತ್ತು ಜೀವನ ದೃಷ್ಟಿಯುಳ್ಳ ಪಾಶ್ಚಿಮಾತ್ಯ ದೇಶಗಳ ಪ್ರಾಬಲ್ಯವಿರುವ ಜಾಗತಿಕ ಸಂಸ್ಥೆಗಳು ಅವೇ 'ಪ್ರಗತಿಪರ' ಎಂದು ರೂಪಿಸಿಕೊಟ್ಟಿರುವ ನಮ್ಮ ದೇಶದ 'ಪ್ರಗತಿ'ಪಥ ಜನರ ಒಳಿತಿನ ದಿಕ್ಕಿನೆಡೆ ಚಲಿಸುತ್ತಿದೆ ಎಂದು ಹೇಳುತ್ತಿವೆ. ಅವನ್ನು ನಿರ್ಯೋಚನೆಯಿಂದ ನಂಬಿ ಆ ಚಲನೆಯನ್ನು ಸುಧಾರಣೆಗಳು ಎಂದು ಒಪ್ಪಿಕೊಂಡು ನಮ್ಮ ಸರ್ಕಾರಗಳು ಹಲವು ಕಾರ್ಯಕ್ಷೇತ್ರಗಳಲ್ಲಿ ಜಾರಿಗೆ ತಂದಿರುವುದನ್ನೂ, ತರುತ್ತಿರುವುದನ್ನೂ ನಾವು ಇತ್ತೀಚಿನ ವರ್ಷಗಳಲ್ಲಿ ನೋಡುತ್ತಿದ್ದೇವೆ.

ಇದನ್ನು ಜನಸಮೂಹವು ಎಂದೂ ಗಂಭೀರವಾಗಿ ಚರ್ಚಿಸಿಲ್ಲ ಮತ್ತು ಪ್ರಬಲವಾಗಿ ಪ್ರಶ್ನಿಸಿಯೂ ಇಲ್ಲ. ಕಾರಣವೆಂದರೆ, ಇಂತಹ ಚರ್ಚೆಗಳನ್ನು ನಡೆಸಿ ಪ್ರಶ್ನೆಗಳನ್ನು ಎತ್ತುತ್ತಿದ್ದ ನಮ್ಮ ಮಧ್ಯಮ ವರ್ಗ ಈ ಚಲನೆಗಳಿಂದ ಹೊಸ 'ಸಮೃದ್ಧಿ'ಯನ್ನು ಸಾಧಿಸಿಕೊಂಡು ಸಂತೃಪ್ತವಾಗಿದ್ದರೆ, ಇದರ ಅಕ್ಕಪಕ್ಕದಲ್ಲೇ ಸೇವಾ ವಲಯವೆಂಬ

ವಿವಿಧ ಶ್ರೇಣಿಗಳ ಹೊಸ ಸುಖ ವೈವಿಧ್ಯಗಳ ವಲಯವೊಂದು ಸೃಷ್ಟಿಯಾಗಿ ಸಮಾಜದ ಉಳಿದ ವರ್ಗಗಳು ತಮ್ಮ ಯೋಗ್ಯತಾನುಸಾರವಾದ ಶ್ರೇಣಿ, ದರದ ಹೊಸ ಸುಖಗಳ ರುಚಿಗೆ ಬಿದ್ದು ಮೈಮರೆತಂತಿರುವುದು. ಒಂದು ಬಡದೇಶವಾಗಿ ಎಂದೂ ಕಂಡೂ ಕೇಳದ ಮತ್ತು ನಿರೀಕ್ಷಿಸದ ಈ ಹೊಸ ಶ್ರೇಣಿ ಉಂಟು ಮಾಡಿದ ಈ ಮೈಮರೆವಿನಲ್ಲಿ ನಮ್ಮ ಬದುಕೆಂಬುದು, ಅದಕ್ಕೆ ಆಧಾರವಾದ ಕಸುಬುಗಳೆಂಬುವವು ಇತರೆಲ್ಲ ಸಂವೇದನೆ ಹಾಗೂ ಆಯಾಮಗಳನ್ನು ಕಳೆದುಕೊಂಡು ಕೇವಲ ಲಾಭೋದ್ಯಮವಾಗುತ್ತಿರುವ, ಎಲ್ಲ ಮಾನವ ವ್ಯವಹಾರಗಳನ್ನೂ ಹಣದ ಲೆಕ್ಕದ ಮೂಲಕ ಮಾತ್ರ ಅಳೆಯುವ ದುರಂತ ಸೃಷ್ಟಿಯಾಗಿದೆ ಎಂಬುದು ಗೊತ್ತಾಗುವುದಾದರೂ ಹೇಗೆ?

ಹಾಗೆ ನೋಡಿದರೆ ಈ ಜಾಗತೀಕರಣಕ್ಕೆ ಅನುವು ಮಾಡಿಕೊಟ್ಟ ಹೊಸ ಆರ್ಥಿಕ ನೀತಿ ಸಂಹಿತೆ (ಗ್ಯಾಟ್ ಒಪ್ಪಂದ ಮತ್ತು ಡಂಕೆಲ್ ಪ್ರಸ್ತಾವ ಮುಂತಾದವು) ನಮ್ಮ ಸಂಸತ್ತಿನಲ್ಲಿ ಚರ್ಚೆಗೇ ಒಳಗಾಗದೆ ಜಾರಿಗೆ ಬಂದಿದೆ ಎಂಬುದು ಎಷ್ಟು ಜನರಿಗೆ ಗೊತ್ತು? ಈ ಬಗ್ಗೆ ಮತ್ತು ದೇಶ ಪಾಪರ್ ಆಗುವ ಸ್ಥಿತಿ ಮುಟ್ಟಿ ತನ್ನ ಕಾಪು ಚಿನ್ನವನ್ನೆಲ್ಲ ಅಡವಿಟ್ಟು ಅಂತಾರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕ್‌ಗಳಿಂದ ಸಾಲ ಪಡೆದು 'ಬದುಕಿದೆಯಾ ಬಡಜೀವವೇ!' ಎಂದು ನಿರಾಳಗೊಂಡ ದೇಶಕ್ಕೆ, ಇದಕ್ಕಾಗಿ ತೆರಬೇಕಾದ ಬೆಲೆ ಎಂದರೆ, ತನ್ನ ಪ್ರಗತಿಯ ದಾರಿ ಯಾವುದು ಎಂಬುದನ್ನು ಇತರರು ನಿರ್ಧರಿಸುವ ಸ್ಥಿತಿ ಉಂಟಾದದ್ದು ಮತ್ತು ಇದು ಪ್ರಗತಿಯೋ ಮನೆಹಾಳತನವೋ ಎಂದು ಯೋಚಿಸುವ ವ್ಯವಧಾನವೇ ಇಲ್ಲವಾದದ್ದು ಆಶ್ಚರ್ಯವೇನಲ್ಲ. ಹಾಗೇ ಇಷ್ಟು ವರ್ಷಗಳ ನಂತರ ಸ್ತ್ರೀಯರ ಮೇಲಿನ ಅತ್ಯಾಚಾರಗಳೂ ಸೇರಿದಂತೆ ಹಿಂಸೆಯ ಹೊಸ ಅವತಾರಗಳು, ದುರಾಸೆಯ ಮತ್ತು ಅನಿವಾರ್ಯವೆನಿಸಿದ ವಲಸೆಗಳು ಹಾಗೂ ಅವು ಉಂಟು ಮಾಡಿದ ಸ್ಥಳೀಯತೆ ಕೋಶಗಳ ನಾಶ, ಕೌಟುಂಬಿಕ ಅಸ್ತವ್ಯಸ್ತತೆಗಳು, ಮಾದಕ ದ್ರವ್ಯ ಸೇವನೆಯ ವ್ಯಾಪಕತೆ, ಮತೀಯ ಮೂಲಭೂತವಾದ, ಕೋಮುವಾದ, ಜಾತಿವಾದ ಇತ್ಯಾದಿ ಮಧ್ಯಕಾಲೀನ ಪ್ರತ್ಯೇಕತಾವಾದಿ ಪ್ರವೃತ್ತಿಗಳ ಹೊಸ ಆವೃತ್ತಿಗಳ ಸೃಷ್ಟಿ ಇತ್ಯಾದಿ ಈ 'ಸುಧಾರಣೆ'ಗಳ ದೀರ್ಘಕಾಲಿಕ ಪರಿಣಾಮಗಳ ವೈವಿಧ್ಯಮಯ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮತ್ತು ಒಟ್ಟಾರೆಯಾಗಿ ನೈತಿಕವಾದ ಹಾಳುಪಾಳುಗಳನ್ನು ಕಂಡು ಗಾಬರಿಗೊಳ್ಳುತ್ತಿರುವುದರಲ್ಲೂ ಆಶ್ಚರ್ಯವಿಲ್ಲ.

ಇಂತಹ 'ಪ್ರಗತಿ'ಪರ ಸುಧಾರಣೆಗಳು ಈಗ ನೇರವಾಗಿ ಕೃಷಿ ವಲಯವನ್ನು ಪ್ರವೇಶಿಸಲು ಯತ್ನಿಸುತ್ತಿರುವಾಗ ಈವರೆಗಿನ ಇತರ ಕ್ಷೇತ್ರಗಳ ಸುಧಾರಣೆಗಳ (ಮತ್ತು ತಮ್ಮದೇ ಕ್ಷೇತ್ರದಲ್ಲಿನ 'ಹಸಿರು ಕ್ರಾಂತಿ' ಎಂಬ ಹಳೆಯ ಸುಧಾರಣೆಯೊಂದರ) ಹಾಳು-ಪಾಳುಗಳ ದುಷ್ಪರಿಣಾಮಗಳನ್ನು ಕಂಡು ಅನುಭವಿಸಿದ ನಮ್ಮ ಭಾರತೀಯ ಬದುಕಿನ ಅತ್ಯಂತ ಬುಡದ ಮತ್ತು ಸಹನಾಶೀಲವಾದ ಗ್ರಾಮೀಣ ಭಾಗದ ಜೀವಾಳವಾದ ರೈತ ಸಮುದಾಯ ಈ ಸುಧಾರಣೆಗಳ ವಿರುದ್ಧ ಧ್ವನಿ ಎತ್ತಿರುವುದು ಸಹಜವೂ ಹೌದು ಮತ್ತು, ನಮ್ಮೆಲ್ಲರ ಅದೃಷ್ಟವೂ ಹೌದು. ಭಾರತೀಯ ಸಮಾಜದ ಮೂಲ ಪ್ರಾಣ

ಬುಡದಲ್ಲಾದರೂ ಇನ್ನೂ ಉಳಿದಿದೆ ಎಂಬುದರ ಶುಭ ಸೂಚನೆ ಇದು. ಏಕೆಂದರೆ ಭಾರತೀಯ ಬದುಕಿನ ಮೂಲ ಅಸ್ಮಿತೆ ರೂಪುಗೊಂಡಿರುವುದೇ ನಮ್ಮ ಕೃಷಿ ಸಂಸ್ಕೃತಿಯ ಮೂಲಧಾತುಗಳಿಂದಲೇ; ಅದರ ಜೀವನ ದೃಷ್ಟಿಯ ಲಯ ಗತಿ, ಸೌಂದರ್ಯ ಪ್ರಜ್ಞೆ ಮತ್ತು ಇತರ ಮೌಲ್ಯ ಸಂಹಿತೆಗಳಿಂದಲೇ. ಇದು ನಮ್ಮ ಬದುಕಿನ ಹದ, ಆದ್ರತೆ ಮತ್ತು ಆರೋಗ್ಯವನ್ನು ನಿರ್ಧರಿಸುವುದು. ಇದೇ ಕಾರಣದಿಂದ ಜಪಾನ್‌ನ ಕೃಷಿ ಋಷಿ ಎಂದು ಹೆಸರಾದ ಫೂಕೊವುಕಾ ಕೃಷಿ (ಯಾವುದೇ ಬೆಳೆ ತೆಗೆಯುವುದು) ಎಂದರೆ ಮಾನವತೆಯ ಬೆಳೆ ತೆಗೆಯುವುದು ಎಂದದ್ದು.

ಈ ದೃಷ್ಟಿಯಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ/ತರಲು ಹೊರಟಿರುವ ಕೃಷಿ ಕಾಯ್ದೆ ತಿದ್ದುಪಡಿಗಳು ಘಾತುಕ ಜಾಗತೀಕರಣದ ಭಾಗವೇ ಆಗಿದೆ. ಸಣ್ಣ ಭೂ ಹಿಡುವಳಿಗಳನ್ನು ನಮ್ಮ ಕೃಷಿ ಬದುಕಿನ ಕೆಟ್ಟ ಲಕ್ಷಣಗಳೆಂದು, ಕೃಷಿ ಆರ್ಥಿಕತೆಗೆ ಇರುವ ಅಡ್ಡಿಗಳೆಂದೂ ಪರಿಗಣಿಸಿ ಅವುಗಳನ್ನು ನಿವಾರಿಸಿಕೊಳ್ಳಲು ದೊಡ್ಡ ಬಂಡವಾಳಿಗರ ಸುಪರ್ದಿಯ ಕೂಡು ಕೃಷಿ ಪದ್ಧತಿಯನ್ನು ಜಾರಿಗೆ ತಂದು ಸಣ್ಣ ಹಿಡುವಳಿಗಳ ರೈತ ಮಕ್ಕಳನ್ನು ನಗರಗಳಿಗೆ ಒಕ್ಕಲೆಬ್ಬಿಸಿ ಇಲ್ಲವೇ ಕೂಲಿ ಕಾರ್ಮಿಕ/ ಗೇಣಿದಾರರನ್ನಾಗಿ ಮಾಡಿಕೊಳ್ಳುವ ಕರಾರು ಒಪ್ಪಂದಗಳ ಪರಿಧಿಗೆ ತರುವ ಈ ಪ್ರಯತ್ನವು ಕೃಷಿಯನ್ನು ಒಂದು ಸಂಸ್ಕೃತಿಯನ್ನಾಗಿ ಬುಡಸಮೇತ ನಾಶ ಮಾಡಿ ಅದನ್ನೊಂದು ಬೃಹತ್ (ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ) ವ್ಯಾಪಾರವನ್ನಾಗಿ ಮಾಡುವ ಕಾರ್ಪೋರೇಟ್‌ಶಾಹಿ ಹುನ್ನಾರವೇ ಆಗಿದೆ. ಸರ್ಕಾರ ಕೃಷಿ ಉತ್ಪನ್ನಗಳ ಮಾರಾಟದ ಸ್ಥಳೀಯ ಬೇರು ಬಿಳಲುಗಳನ್ನು ಕತ್ತರಿಸಿ ಸ್ಪರ್ಧಾತ್ಮಕ ಬೆಲೆಗಳ ಆಸೆ ತೋರಿಸಿ ರೈತರ ಪಾಲಿಗೆ ಅದನ್ನೊಂದು ಪರಕೀಯ ನಿರ್ದೇಶನಗಳ ಬಯಲು ಬಂದಿಖಾನೆಯನ್ನಾಗಿ ಮಾಡಹೊರಟಿದೆ. ಕೊಳು- ಕೊಡುವ ಸ್ಥಳೀಯ ವಿವೇಕದ ಮೂಲಕ ಹೇಗೋ ನಿಭಾಯಿಸಬಹುದಾದ ಸ್ಥಳೀಯ ಮಧ್ಯವರ್ತಿಗಳ ಕೈನಿಂದ ಕೈಗೆ ಸಿಗದ ತಿಮಿಂಗಿಲಗಳ ಬಾಯಿಗೆ ಒಡ್ಡಹೊರಟಂತಿದೆ. ರೈತರ ಬೆಳೆಗೆ ಕನಿಷ್ಠ ಬೆಂಬಲ ಬೆಲೆಯ ವ್ಯವಸ್ಥೆಯನ್ನು ಶಾಸನಾತ್ಮಕಗೊಳಿಸಲು ಸರ್ಕಾರ ನಿರಾಕರಿಸುತ್ತಿರುವ ಹಿಂದಿನ ಗುಟ್ಟೂ ಇದೇ ಆಗಿದೆ.

ಇನ್ನು ಅವಶ್ಯಕ ವಸ್ತುಗಳ ನಿಯಂತ್ರಣ ಕಾಯ್ದೆಯ ತಿದ್ದುಪಡಿ ಇವೆಲ್ಲವನ್ನೂ ಸುಗಮಗೊಳಿಸುವ ಸಾಧನ ಮಾತ್ರವಾಗಿದೆ. ಒಟ್ಟಿನಲ್ಲಿ ರೈತ ಚಳುವಳಿ ದೇಶದ ಒಟ್ಟಾರೆ ಜನತೆ ಜಾಗತೀಕರಣದ ಆಕ್ರಮಣವನ್ನು ಎಚ್ಚರದಪ್ಪಿ ನಿಯಂತ್ರಿಸದೇ ಹೋದ ಪ್ರಮಾದವನ್ನು ಸರಿಪಡಿಸುವ ಒಂದು ದೊಡ್ಡ ಪ್ರಕ್ರಿಯೆಗೆ ಚಾಲನೆ ಕೊಡಬಲ್ಲ ಅವಕಾಶವನ್ನು ತೆರೆದಿದೆ. ಸ್ವತಃ ರೈತರಿಗೆ ಗೊತ್ತಿದೆಯೋ ಇಲ್ಲವೋ ತಿಳಿಯದು. ಏಕೆಂದರೆ ಜಾಗತೀಕರಣ ಪೂರ್ವದ ನಮ್ಮ ರೈತ ಚಳುವಳಿಗಳೆಲ್ಲವೂ ತಮ್ಮನ್ನು ಒಟ್ಟಾರೆ ಸಮಾಜದಿಂದ ಪ್ರತ್ಯೇಕಿಸಿಕೊಂಡು ಕಾರ್ಮಿಕ ಸಂಘಗಳಂತೆ ವರ್ತಿಸುತ್ತಾ ತನ್ನ ಬೆಳೆಗಳಿಗೆ ವಂಚನೆಯಾದಂತೆ ತೋರಿದೆಡೆಗಳಲ್ಲಿ ನ್ಯಾಯಯುತ ಬೆಲೆಯನ್ನು

ಆಗ್ರಹಿಸುವುದಕ್ಕಷ್ಟೇ ಸೀಮಿತವಾಗಿದ್ದವು. ಅವು ಯಾವುವೂ ಬದುಕಿನ, ನಿರ್ದಿಷ್ಟವಾಗಿ ಗ್ರಾಮಬದುಕಿನ ಪುನರುಜ್ಜೀವನದ ಚಳುವಳಿಗಳಾಗಿ ಪರಿಕಲ್ಪಿತವೂ ಆಗಿರಲಿಲ್ಲ, ಬೆಳೆಯಲೂ ಇಲ್ಲ. ಆದರೆ ಸದ್ಯದ ರೈತ ಚಳುವಳಿ ಸದರಿ ಕಾಯ್ದೆಗಳ ತಿದ್ದುಪಡಿಗಳಿಂದ ಅಂತಃಸ್ಫೂರ್ತವಾಗಿ (instinctively) ತಮ್ಮ ಬದುಕಿನ ಬೇರುಗಳು ಕಳಚುತ್ತಿರುವ ಆತಂಕಕ್ಕೆ ಎಚ್ಚೆತ್ತುಕೊಂಡಂತೆ ರೈತ ತನ್ನ ಪ್ರಾಣವನ್ನೇ ಪಣವೊಡ್ಡಿ ಹೋರಾಟಕ್ಕೆ ನಿಂತಂತಿದೆ. ಆದರೆ ಈ ಮೊದಲೇ ಸೂಚಿಸಿದಂತೆ ಇದು ಕೇವಲ ರೈತರಿಗೆ ಸಂಬಂಧಿಸಿದ ಚಳುವಳಿಯಲ್ಲ. ಭಾರತೀಯ ಬದುಕಿನ ಮೂಲ ಮಾದರಿಯ ರಕ್ಷಣೆಗೆ ಸಂಬಂಧಪಟ್ಟ, ನಮ್ಮ ಕಸುಬುಗಳ ಘನತೆಯನ್ನು ಕಾಪಾಡುವ, ಅವುಗಳ ಸಾಮಾಜಿಕ ಆವರಣವನ್ನು ಸೃಷ್ಟಿಸಿರುವ ಮಾನವ ಸಂದರ್ಭಗಳನ್ನು ಕಾಪಾಡುವ ಪ್ರಶ್ನೆ ಇದು. ಈ ಘನತೆ, ಮಾನವ ಸಂದರ್ಭಗಳನ್ನುಳಿಸಿಕೊಂಡೇ ನಮ್ಮ ಕಸುಬುಗಳನ್ನು ಸುಧಾರಿಸಿಕೊಳ್ಳುವ, ಆಧುನೀಕರಿಸಿಕೊಳ್ಳುವ ಸಾಧ್ಯತೆಗಳೇ ಇಲ್ಲವೆ? ಅಂತಹ ಸೃಜನಶೀಲ ಪ್ರಯತ್ನಗಳ ಕಡೆ ನಾವು ನಿಜವಾಗಿಯೂ ಗಮನ ಹರಿಸಿದ್ದೇವೆಯೇ? ಈ ಪ್ರಶ್ನೆಗಳನ್ನೂ ಕೇಳಿಕೊಳ್ಳುವ ಕಾಲವೂ ಇದಾಗಿದೆ.

ಸದಾ ಕಾಲ ಭಾರತೀಯತೆ, ಭಾರತೀಯತೆ ಎಂದು ಉಗ್ಗಡಿಸುವ ಸರ್ಕಾರವೇ ಭಾರತೀಯ ಬದುಕಿನ ಮೂಲ ಮಾದರಿಯನ್ನೇ ಬುಡಮೇಲುಗೊಳಿಸಲು ಹೊರಟಿರುವುದು ಎಂತಹ ವಿಪರ್ಯಾಸ!

(೨೦೨೧ ರ ಫೆಬ್ರುವರಿ ೫ ರ 'ವಾರ್ತಾಭಾರತಿ' ಯಲ್ಲಿ ಪ್ರಕಟ)

ಭೂ ಸುಧಾರಣಾ ಕಾಯಿದೆ ತಿದ್ದುಪಡಿಯ ಸುತ್ತಮುತ್ತ

ಕರ್ನಾಟಕ ಸರ್ಕಾರದ ಸಚಿವ ಸಂಪುಟವು ದೇಶದಲ್ಲೇ ಬಹು ಪ್ರಗತಿಪರವೆಂದು ಶ್ಲಾಘನೆಗೆ ಒಳಗಾಗಿದ್ದ ಭೂ ಸುಧಾರಣಾ ಕಾನೂನಿನ ಹಲವು ನಿರ್ಣಾಯಕ ವಿಧಿಗಳನ್ನು ತಿದ್ದುಪಡಿ ಮಾಡಲು ಅಧಿಕೃತವಾಗಿ ನಿರ್ಧರಿಸಿದೆ. ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ, 'ಉಳುವವನೇ ನೆಲದೊಡೆಯ' ಎಂಬ ೧೯೫೦ರ ಕಾಗೋಡು ಭೂ ಸತ್ಯಾಗ್ರಹ ರಾಜ್ಯದಲ್ಲಿ ಮೊಳಗಿಸಿದ್ದ ಸುಪ್ರಸಿದ್ಧ ಸಮಾಜವಾದಿ ಘೋಷಣೆಯ ಆಶೋತ್ತರಗಳಿಗೆ ಪ್ರತಿಸ್ಪಂದನವಾಗಿ ಈ ಕಾನೂನು ಜಾರಿಗೆ ಬಂದು ಸಾವಿರಾರು ಗೇಣಿದಾರರು ಭೂ ಒಡೆತನ ಪಡೆದು ತಮ್ಮ ಬದುಕಿನ ಸಾರ್ಥಕ ಕ್ಷಣಗಳನ್ನು ಕಂಡರು. ಆನಂತರ ರೈತ ಹಿನ್ನೆಲೆಯಿಂದಲೇ ಬಂದ ಮುಖ್ಯ ಮಂತ್ರಿಗಳೂ ಸೇರಿದಂತೆ ಹಲವು ರಾಜಕೀಯ ನಾಯಕರ ಹಿತಾಸಕ್ತಿಗಳಿಗನುಗುಣವಾಗಿ ಈ ಕಾನೂನು ಸಡಿಲಗೊಳ್ಳುತ್ತಾ ಕ್ರಮೇಣ ತನ್ನ ಉದ್ದೇಶವನ್ನೇ ಕಳೆದುಕೊಳ್ಳುತ್ತಾ ಹೋಯಿತು. ಈಗ ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಈ ಕಾನೂನಿನ ಮುಖ್ಯ ಪ್ರಾಣವನ್ನೇ ತೆಗೆಯಹೊರಟಂತಿದೆ. ಭೂ ಒಡೆತನದ ಪರಿಮಿತಿಯನ್ನು ಹೆಚ್ಚಿಸುವುದು, ಕೃಷಿ ಹಿನ್ನೆಲೆ ಇಲ್ಲದವರೂ, ಹಾಗೆ ನೋಡಿದರೆ ಯಾರು ಬೇಕಾದರೂ ಕೃಷಿಭೂಮಿಯನ್ನು ಕೊಳ್ಳಲು, ಅದನ್ನು ಹೇಗೆ ಬೇಕಾದರೂ ಪರಿವರ್ತಿಸಿಕೊಂಡು ಬಳಸಿಕೊಳ್ಳಲು ಈ ತಿದ್ದುಪಡಿ ಅನುವು ಮಾಡಿಕೊಡುತ್ತದೆ. ಇದನ್ನು ಬದಲಾದ ಕಾಲದ ಅಗತ್ಯವೆಂದು ಸರ್ಕಾರ ಸಮರ್ಥಿಸಿಕೊಳ್ಳುತ್ತಿದೆ.

ಬದಲಾದ ಕಾಲ ಎಂದರೆ ಹಲವು ಅರ್ಥಗಳಿವೆ. ಮೊದಲನೆಯದಾಗಿ ನಮ್ಮ ಆರ್ಥಿಕತೆ ಕೃಷಿ ಕೇಂದ್ರಿತವಾಗಿ ಈಗ ಉಳಿದಿಲ್ಲ ಎನ್ನುವುದು. ಇನ್ನೊಂದು ದೇಶ ಆಹಾರ ಭದ್ರತೆಯನ್ನು ಸಾಧಿಸಿರುವುದರಿಂದ ಭೂಮಿಯನ್ನು ಕೃಷಿಗಾಗಿಯೇ ಬಳಸುವ ಅನಿವಾರ್ಯತೆ ಇಲ್ಲ ಎನ್ನುವುದು. ಹಾಗೆ ಬಳಸಿದರೆ ಕೃಷಿ ಲಾಭದಾಯಕವಾಗಿ ಉಳಿಯುವುದಿಲ್ಲ ಎಂದೂ ಹೇಳಲಾಗುತ್ತಿದೆ. ಜೊತೆಗೆ ಜಾಗತೀಕರಣದಿಂದಾಗಿ ಕೃಷಿ ಎನ್ನುವುದು ಒಂದು ಅಂತಾರಾಷ್ಟ್ರೀಯ-ಅಂದರೆ ಕಾರ್ಪೊರೇಟೀಕೃತ-

ವ್ಯವಹಾರವಾಗಿರುವುದರಿಂದ ಇದು ಹುಟ್ಟಿಸುವ ಪೈಪೋಟಿಗೆ ಪ್ರಚಲಿತ ಭೂ ಕಾನೂನುಗಳು ತೊಡಕುಗಳಾಗಿ ಪರಿಣಮಿಸಿವೆ ಎಂಬುದು. ಹಾಗಾಗಿ ಭೂಮಿಯನ್ನು ಕಡಿಮೆ ಆದಾಯದ ಕಚ್ಚಾ ವಸ್ತುವನ್ನಾಗಿ ಬಿಡದೆ ಅದನ್ನು ಹೆಚ್ಚು ಲಾಭದಾಯಕವಾದ ಉದ್ಯೋಗ ನಿರ್ಮಾಣಗಳಿಗೆ, ಅಂದರೆ ಹೊಸ ಹೊಸ ಉದ್ಯಮಗಳಿಗೆ ಬಳಸಿಕೊಳ್ಳುವುದು ಹೊಸ ಕಾಲದ ವಿವೇಕದ ಕ್ರಮ ಎಂದೂ ವಾದಿಸಲಾಗುತ್ತಿದೆ.

ಆದರೆ ಈ ವಾದಕ್ಕೆ ಎದುರಾಗಿ ಈ ತಿದ್ದುಪಡಿಯಿಂದಾಗಿ ದೊಡ್ಡ ರೈತರು ಮತ್ತು ಉದ್ಯಮಪತಿಗಳು ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರನ್ನು ಹಲವು ಒತ್ತಡ-ಆಮಿಷಗಳಿಗೆ ಸಿಲುಕಿಸಿ ಅವರು ಕ್ರಮೇಣ ಬೀದಿಗೆ ಬೀಳುವಂತೆ ಮಾಡುತ್ತಾರೆ ಎಂದು ಆರೋಪಿಸುತ್ತಿದ್ದಾರೆ. ಈ ತಿದ್ದುಪಡಿಯ ಮೂಲಕ ಸೂಚಿತವಾಗಿರುವಂತೆ ಪ್ರಭುತ್ವವೇ ಹಣಬಲವಿರುವವರ ಪರವಾಗಿರುವುದರಿಂದ ಅದರ ಕೃಪಾಶ್ರಯದ ಬಂಡವಾಳಶಾಹಿ ಏನೆಲ್ಲ ಮಾಡಬಹುದು ಎಂಬುದನ್ನು ಅದರ ಚರಿತ್ರೆಯಿಂದ ಬಲ್ಲವರಿಗೆ ಈ ವಾದದಲ್ಲಿ ಹುರುಳಿಲ್ಲ ಎಂದು ಹೇಳಲಾರರು. ಏಕೆಂದರೆ ಬಂಡವಾಳದ ರಾಜಕಾರಣ, ಜನ ರಾಜಕಾರಣವನ್ನೂ ಆಪೋಶನ ತೆಗೆದುಕೊಳ್ಳಬಲ್ಲದ್ದು.

ಅದೇನೇ ಇರಲಿ, ರೈತ ವಲಯದ ವಾದ ಮತ್ತು ಆತಂಕದ ಹಿಂದೆ ಸುಪ್ತವಾಗಿರುವ ನಮ್ಮ ಬದುಕು ಕೊನೆಗೂ ಕೃಷಿ ಸಂಸ್ಕೃತಿ ಪ್ರಾಧಾನ್ಯತೆಯಿಂದ ಉದ್ಯಮ ಅರ್ಥಾತ್ (ಆಧುನಿಕ) ಕೈಗಾರಿಕೆ ಅರ್ಥಾತ್ ವ್ಯಾಪಾರ ಕೇಂದ್ರೀಯತೆಗೆ ಸ್ಥಿತ್ಯಂತರ ಹೊಂದುವ ಭಯ ರೈತ ವಲಯವನ್ನಷ್ಟೇ ಅಲ್ಲ, ನಮ್ಮೆಲ್ಲರನ್ನೂ ಇಂದು ಕಾಡಬೇಕು. ಇದು ಇಂದಿನ ಕೋರೋನಾ ಮಹಾಮಾರಿಯ ಹಿನ್ನೆಲೆಯಲ್ಲಿ ಹಲವು ಕುತೂಹಲಕರ ಪ್ರಶ್ನೆಗಳನ್ನು ಎತ್ತುತ್ತದೆ ಎಂಬುದನ್ನೂ ನಾವು ಅರಿಯಬೇಕು. ಮುಖ್ಯವಾಗಿ, ಈ ಕಾನೂನು ತಿದ್ದುಪಡಿ ರಾಜಕಾರಣದ ಕೇಂದ್ರದಲ್ಲಿರುವ ಆಲೋಚನಾ ಕ್ರಮದ ಬಗ್ಗೆ. ಇದನ್ನು ಹಲವು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಿಂತಕರು ಭೂಮಿಯನ್ನು ಒಂದು ಆರ್ಥಿಕ ಸರಕಾಗಿ ನೋಡುವ ಪ್ರಮೇಯವಾಗಿ ಪರಿಗಣಿಸಿ, ಇದರ ಪರಿಣಾಮಗಳನ್ನು ಚರ್ಚಿಸಿದ್ದಾರೆ. ಆದರೆ ಇ ಪ್ರಮೇಯ ಸ್ವಯಂಭೂ ಆದದ್ದೇನಲ್ಲ. ಇದು ಭೂಮಿಯ ಮೇಲಿನ ಬದುಕೇ ಒಂದು ಆರ್ಥಿಕ ಕಾರ್ಯಾಚರಣೆಯನ್ನಾಗಿ ಈಗ ನಾವು ಮಾಡಿಕೊಂಡಿರುವ ಮುಖ್ಯ ಪ್ರಮೇಯದ ಒಂದು ಉಪ ಪ್ರಮೇಯ ಮಾತ್ರವಾಗಿದೆ. ಇದನ್ನರಿಯದಿದ್ದರೆ, ರೈತ ವಲಯದ ವಕ್ತಾರರಾಗಲೀ, ಭೂಮಿಯನ್ನು ಒಂದು ಆರ್ಥಿಕ ಸರಕನ್ನಾಗಿ ಬಳಸಿ ತಮಗೋ, ದೇಶಕ್ಕೋ ಸಂಪತ್ತನ್ನು ಉತ್ಪಾದಿಸ ಬಯಸುವ ಹೊಸ ಉದ್ದಿಮೆದಾರರಾಗಲೀ, (ಈಗ ಆತ್ಯಂತಿಕ ಆಶಯದ ನೆಲೆಯಲ್ಲಿ ಈ ಇಬ್ಬರೂ ಪೂರ್ಣ ಬೇರೆಯಾಗೇನೂ ಉಳಿದಿಲ್ಲವೆಂಬುದು ಬೇರೆ ವಿಷಯ) ಈ ಒಟ್ಟು ವಿದ್ಯಮಾನದ ಪರಿಣಾಮಗಳ ಆಳ ಅಗಲಗಳನ್ನು ಅರಿಯಲಾರರು. ಹಾಗೆ ನೋಡಿದರೆ, ಕೊರೋನಾದಿಂದ ನಾವು ಏನು ಕಲಿತಿದ್ದೇವೆ? ಹಾಗಾಗಿ ನಾವು ನಮ್ಮ ಎಲ್ಲ ಹಿತಾಸಕ್ತಿಗಳನ್ನು ಮೀರಿ, ಈ ವಿದ್ಯಮಾನದ ಮೂಲಕ್ಕೆ ಹೋಗಿ ಅದರಲ್ಲಿ ನಮ್ಮ ಪಾತ್ರವೆಷ್ಟು ಮತ್ತು ಇದರಿಂದ ನಾವು

ಪಡೆಯುವುದೇನು. ಎಷ್ಟು ಮತ್ತು ಕಳೆದುಕೊಳ್ಳುವುದೇನು ಎಷ್ಟು ಎಂದು ಲೆಕ್ಕ ಹಾಕಿ ಅವರವರ ವಾದಗಳನ್ನು ಮಂಡಿಸಬೇಕಾಗಿದೆ. ಹಾಗೇ ಈ ತಿದ್ದುಪಡಿ ಇದ್ದಕ್ಕಿದ್ದಂತೆ ಬಂದಲ್ಲ: ಇದರಲ್ಲಿ ನಮ್ಮದೆಷ್ಟು ಪಾಲಿದೆ ಎಂದು ಯೋಚಿಸಬೇಕಿದೆ.

೨-

ನಮ್ಮದು ಪ್ರಜಾಪ್ರಭುತ್ವ. ಸಂವಿಧಾನದಲ್ಲಿ ಸಮಾಜವಾದ ಎಂಬುದು ಹೆಸರಿಗಷ್ಟೇ. ಅವಶೇಷದಂತೆ ಉಳಿದಿದ್ದು, ನಮ್ಮ ಸಂಸತ್ತು ಜಾಗತೀಕರಣವನ್ನು ಗ್ಯಾಟ್ ಒಪ್ಪಂದದ ಮೂಲಕ ಒಪ್ಪಿಕೊಂಡ ನಂತರ ಜಾರಿಗೆ ತರಲೇಬೇಕಾದ ಆರ್ಥಿಕ ಉದಾರೀಕರಣದ ಕ್ರಮಗಳು ಜನಜೀವನದಲ್ಲಿ ಹಲವು ಹೊಸ ಆರ್ಥಿಕ ಹಿತಾಸಕ್ತಿಗಳನ್ನು ಹುಟ್ಟುಹಾಕಿವೆ. ದುಡಿಮೆಯ ಹೊಸ ಮಾರ್ಗಗಳು ತೆರೆದುಕೊಂಡು ದುಡಿಮೆ ಎಂದರೆ ಆದಾಯ ಗಳಿಕೆ ಮಾತ್ರ ಎಂಬಂತಾಗಿ ದುಡಿಮೆಯ ಅರ್ಥವೇ ಬದಲಾಗಿದೆ. ಇದರಿಂದಾಗಿ ಹಲವು ವಿಪರೀತ ಆದಾಯಗಳ ದ್ವೀಪಗಳು ಸೃಷ್ಟಿಯಾಗಿವೆ. ನೈತಿಕವಾಗಿ ಈ ಬೆಳವಣಿಗೆ ಸರಿಯೋ ತಪ್ಪೋ, ಅವಂತೂ ಸಾಂವಿಧಾನಿಕ ಮಾನ್ಯತೆ ಪಡದು ಎಲ್ಲ ಪ್ರಜಾಸತ್ತಾತ್ಮಕ ಹಕ್ಕುಗಳಿಗೂ ಬಾಧ್ಯವಾಗಿವೆ. ಹಾಗಾಗಿ ಈ ವಿಪರೀತ ಆದಾಯಗಳ ದ್ವೀಪಗಳನ್ನು ಪ್ರತಿನಿಧಿಸುವ ಶಕ್ತಿಗಳು ಸಹಜವಾಗಿಯೇ ಈ ಹಕ್ಕನ್ನು ಚಲಾಯಿಸಿ ಆಳುವವರ ಮೇಲೆ ತಮ್ಮ ಈ ಆದಾಯಗಳ ಹೂಡಿಕೆಗೆ ಅವಕಾಶಗಳನ್ನು ಆಗ್ರಹಿಸುತ್ತಿವೆ. ಇದರ ಪರಿಣಾಮಗಳೇ ನಮ್ಮ ಹಳೆಯ ಒಂದೊಂದೇ ಕಾನೂನು ಈಗ ಈ ಆದಾಯ ದ್ವೀಪಗಳ ಬೇಡಿಕೆಗಳಿಗನುಸಾರವಾಗಿ, ಅವುಗಳ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ತಿದ್ದುಪಡಿಗಳಿಗೆ ಒಳಗಾಗುತ್ತಿರುವುದು. ನೀವು ಎಲ್ಲೆ ಇಲ್ಲದಷ್ಟು ಆದಾಯ ಪಡೆಯುವ ಅವಕಾಶಗಳನ್ನು ಕಲ್ಪಿಸಿ ಅವನ್ನು ಬಂಡವಾಳವಾಗಿ ಹೂಡಿ ಬೆಳೆಸಲು ಬೇಕಾದ ಅವಕಾಶಗಳನ್ನು ಸೃಷ್ಟಿಸದೇ ಹೋದರೆ ಅದು ಕರ್ತವ್ಯಲೋಪವಾಗುವುದಿಲ್ಲವೆ? ವಿಶೇಷವಾಗಿ, ಸ್ವತಃ ಸರ್ಕಾರವೇ ತನ್ನ ನೌಕರರಿಗೆ ಅವರು ಕನಸು ನನಸುಗಳಲ್ಲೂ ಕಲ್ಪಿಸಿಕೊಳ್ಳಲಾಗದಷ್ಟು ಸಂಬಳ ಭತ್ಯೆಗಳನ್ನು ನೀಡಲು ತೊಡಗಿದಾಗ? ಅವರು ತಿಂದು ತೇಗಿದ ಮೇಲೂ ಮಿಕ್ಕ ಹಣವನ್ನು ಏನು ಮಾಡಬೇಕು? ಎಷ್ಟು 'ಮಜಾ' ಮಾಡಲಾದೀತು?

ಆದುದರಿಂದ ಇಂದು ಭೂ ಸುಧಾರಣೆ ಕಾಯಿದೆ ಇತ್ಯಾದಿ ಇತ್ತೀಚೆಗೆ ತಿದ್ದುಪಡಿಯಾಗುತ್ತಿರುವ ಕಾಯಿದೆಗಳ ಪರಿಣಾಮಗಳನ್ನು ಅವುಗಳ ಜಿಡಿ ವ್ಯಾಪ್ತಿಯಲ್ಲೇ ನೋಡದೆ ಒಟ್ಟಾರೆ ಈ ಭುಮಿಯ ಮೇಲಿನ ಬದುಕನ್ನು ಕೇವಲ ಒಂದು ಆರ್ಥಿಕ ವಿದ್ಯಮಾನವಾಗಿ ನೋಡುವ ನಮ್ಮ ಬದಲಾದ ಜೀವನ ದೃಷ್ಟಿಕೋನದ ಹಿನ್ನೆಲೆಯಲ್ಲಿ ನೋಡಿ ಅವುಗಳಿಂದಾಗಿ ನಿರ್ಮಾಣವಾಗುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕಬೇಕಾಗಿದೆ. ಹಾಗೆ ಹುಡುಕತೊಡಗಿದಾಗ ಈ ಎಲ್ಲ ಸಮಸ್ಯೆಗಳೂ ಸೃಷ್ಟಿಯಾಗಿರುವುದು ಇಂದು ನಾವು ಭಾರತದಲ್ಲಿ ಮಾತ್ರವಲ್ಲ. ಜಗತ್ತಿನಾದ್ಯಂತ ಸೃಷ್ಟಿಯಾಗಿರುವ ಭೌತಿಕ ಆಸ್ತಿ, ಅದು ನಿರ್ಮಾಣವಾದ ರೀತಿಯೂ.

ಅದಕ್ಕನುಗುಣವಾಗಿಯೇ ಅದು ಶೇಖರಗೊಂಡಿರುವ ವಿನ್ಯಾಸವೂ ಅನೈತಿಕವಾದದ್ದೆಂದು ಗೊತ್ತಾಗುತ್ತದೆ.

ಈ ಆಸ್ತಿ ನಿರ್ಮಾಣ ಪ್ರಕ್ರಿಯೆ ಮನುಷ್ಯ ಎಂಬ ಜೀವಿಯು ಜೀವ ವಿಕಾಸ ಮಾರ್ಗದುದ್ದಕ್ಕೂ ಬೆಳೆಸಿಕೊಂಡು ಬಂದ ಅನೇಕ ಜೈವಿಕ, ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳನ್ನು ಧಿಕ್ಕರಿಸಿ ನಡೆದಿರುವುದನ್ನು ನಾವು ಗಮನಿಸಬೇಕು. ಇಂದು ಮನುಷ್ಯನ ಬದುಕು ಮನುಷ್ಯ ಬದುಕೆನ್ನಿಸಿಕೊಂಡು ಇತರೆಲ್ಲ ಜೀವಿಗಳ ಬದುಕುಗಳಿಗಿಂತ ಶ್ರೇಷ್ಠ ಎನ್ನಿಸಿಕೊಂಡಿರುವುದು ಈ ಮೌಲ್ಯಗಳಿಂದಲೇ. ಆದರೆ ಪಶ್ಚಿಮದ ದೇಶಗಳಿಗೆ ಹೋಲಿಸಿದರೆ ನಮ್ಮ ಬದುಕು ಹೀನಾಯವಾಗಿದೆ ಎಂಬ, ಆರ್ಥಿಕ ನೆಲೆಯಿಂದ ಸರಿಯಾದದ್ದೇ ಆದ, ಆದರೆ ಇದಕ್ಕೆ ನಾವು ನಂಬಿಕೊಂಡು ಬಂದಿದ್ದ ಜೀವನ ದೃಷ್ಟಿಯೇ ಸಂಪೂರ್ಣ ಹೊಣೆ ಎಂಬ ಬೌದ್ಧಿಕ ವಿವಶತೆಗೆ ಒಳಗಾದೆವು ಇದರ ಪರಿಣಾಮವಾಗಿ ಪಶ್ಚಿಮದ ಜೀವನ ದೃಷ್ಟಿಕೋನಕ್ಕೆ ಪ್ರಧಾನ ಆಧಾರವಾಗಿದ್ದ ನವ (ಅವರಿಗೂ ಅದು ಹೊಸದೇ ಆಗಿದ್ದ) ಅರ್ಥಶಾಸ್ತ್ರೀಯ ತತ್ವಗಳನ್ನು ಅಳವಡಿಸಿಕೊಂಡು ನಮ್ಮ ಬದುಕಿನ ಮಾದರಿಗಳು ಕ್ರಮೇಣ ಅವರದ್ದೇ ಆಗಿಬಿಟ್ಟಿವೆ. ಇದರ ಮುಂದಿನ ಪರಿಣಾಮವೆಂದರೆ ನಾವು ಅವರನ್ನು ಮುಟ್ಟಲು, ಸಾಧ್ಯವಾದರೆ ಅವರನ್ನು ಮೀರಿಸುವ ಧಾವಂತ ಮತ್ತು ಆ ಧಾವಂತದಲ್ಲಿ ಸೃಷ್ಟಿಯಾದ ಬೌದ್ಧಿಕ ಗುಲಾಮಗಿರಿ. ಹಾಗಾಗಿಯೇ ನಾವಿಂದು ಅವರಂತೆಯೇ ಮನುಷ್ಯ ಬದುಕೆಂದರೆ ಸದಾ ಆರ್ಥಿಕ ಚಕ್ರ ತಿರುಗುತ್ತಿರುವಂತೆ ನೋಡಿಕೊಳ್ಳುವ ಚಾಕರಿ ಎಂಬಂತಾಗಿ ಅದಕ್ಕೆ ನಾವು ಪಾರಂಪರಿಕವಾಗಿ ನಮ್ಮ ಬದುಕಿನ ಸಂಪನ್ನತೆಗೆ ಏನೆಲ್ಲ ಮೌಲ್ಯಗಳನ್ನು ಬೆಳೆಸಿಕೊಂಡು ಬಂದಿದ್ದೆವೋ ಅವನ್ನೆಲ್ಲ ಆ ಚಕ್ರದ ಚಲನೆಗೆ ಅರ್ಘವಾಗಿ ಅರ್ಪಿಸುತ್ತಿದ್ದೇವೆ, ಇದರಲ್ಲಿ ನಮ್ಮ ನೆಲ–ಜಲ–ಆಕಾಶ–ಪ್ರಾಣಿ–ಪಕ್ಷಿ–ಕ್ರಿಮಿ–ಕೀಟಗಳೂ ಸೇರಿವೆ. ನಮ್ಮ ಭೂಮಿಯ ಕಲ್ಪನೆ ತನ್ನೆಲ್ಲ ಶೀಲ ಕಳೆದುಕೊಂಡು ಆತ್ಯಂತಿಕವಾಗಿ ಅದು ಒಂದು ಆರ್ಥಿಕ ಸರಕಾಗಿರುವುದು. ಜಡವಾಗಿರುವುದು, ನಮ್ಮನ್ನೂ ಜಡ ಮಾಡಿರುವು ಇದೂ ಹೀಗೆ.

ಆದ್ದರಿಂದ ಭೂಮಿಯ ಪರಿಕಲ್ಪನೆ ಹೀಗೆ ಶೀಲ ಕಳೆದುಕೊಂಡ ಪ್ರಕ್ರಿಯೆಯನ್ನು ನಾವು ಈ ಪ್ರಕ್ರಿಯೆಯ ಪರಿಣಾಮವೇ ಎಂದು ಹೇಳಲಾಗುತ್ತಿರುವ ಕರೋನ ಮಹಾಮಾರಿ ತಂದೊಡ್ಡಿರುವ ಬಿಕ್ಕಟ್ಟಿನ ಕಾಲದಲ್ಲಾದರೂ ಅರಿತು ಮರುಪರಿಶೀಲನೆಗೆ ಒಡ್ಡಬೇಕಾಗಿದೆ. ಬಿಡಿ ವಿಶ್ಲೇಷಣೆ–ಬಿಡಿ ಪರಿಹಾರಗಳು ಈಗ ಪರಿಹಾರಗಳೇ ಅಲ್ಲ.

(೨೦೨೦ ರ ಸೆಪ್ಟೆಂಬರ್ 'ಹೊಸ ಮನುಷ್ಯ'ದಲ್ಲಿ ಪ್ರಕಟ)

೭೫ ನೇ ಸ್ವಾತಂತ್ರ್ಯೋತ್ಸವ : ಹೊರಗುತ್ತಿಗೆಯಾಗುತ್ತಿರುವ ಪ್ರಜಾಪ್ರಭುತ್ವ

'ಸಂಸದೀಯ ಪ್ರಜಾಸತ್ತೆಯ ದಮನ' ಎಂಬ ಶೀರ್ಷಿಕೆಯ ನಿಮ್ಮ ಸಂಪಾದಕೀಯ ಮತ್ತು 'ನಿಜ ಸ್ವಾತಂತ್ರ್ಯಕ್ಕಾಗಿ ಹೊಸ ರಾಜಕಾರಣ' ಎಂಬ ಎ. ನಾರಾಯಣ ಅವರ ಬರಹ (ಪ್ರವಾ: ೧೪.೮.) ಇದೀಗ ತಾನೇ ದೇಶ ಸಂಭ್ರಮ್ರದಿಂದ ಆಚರಿಸಿದ ೭೫ನೇ ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ಗಮನ ಸೆಳೆಯುವಂತಿವೆ. ಇವು ಕಳೆದ ೭೪ ವರ್ಷಗಳಲ್ಲಿ ನಮ್ಮ ಸ್ವಾತಂತ್ರ್ಯದ ಮೌಲಿಕತೆ ಕುಸಿದು ಬೀಳುತ್ತಿರುವ ಚಿತ್ರವನ್ನು ನಮ್ಮ ಮುಂದೆ ಇಟ್ಟಿವೆ. ಗಳಿಸಿದ ಸ್ವಾತಂತ್ರ್ಯವನ್ನು ಸಾಕಾರಗೊಳಿಸಿಕೊಳ್ಳಲು ತಾನು ಆಧಾರ ಮಾಡಿಕೊಂಡ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯೇ ಆ ಪ್ರಜಾಪ್ರಭುತ್ವದ ನಿಯಮಗಳ ಹೆಸರಿನಲ್ಲೇ–ಬಹುಮತದ ಪಕ್ಷ ಆಡಳಿತ ನಡೆಸುವ–ದಮನಗೊಳ್ಳುತ್ತಿರುವ ಚಿತ್ರವನ್ನು ಸಂಪಾದಕೀಯ ಬರಹ ನೀಡಿದರೆ, ಈ ಆಧಾರದ ಬೆನ್ನೆಲುಬಿನಂತಿರುವ ಪಕ್ಷ ವ್ಯವಸ್ಥೆ ತಿರುಳಲ್ಲೇ ಹೇಗೆ ಭ್ರಷ್ಟಗೊಂಡಿದೆ ಎಂಬುದನ್ನು ನಾರಾಯಣ ಅವರ ಬರಹ ವಿವರಿಸುತ್ತದೆ. ಈ ಬರಹ ಮುಂದುವರೆದು ಈ ರಾಜಕಾರಣಕ್ಕೆ ಪರ್ಯಾಯವಾದ ಹೊಸ ರಾಜಕಾರಣವನ್ನು ಪ್ರತಿಪಾದಿಸುತ್ತದೆ. ಪ್ರತಿಪಾದಿಸುತ್ತದೆ ಮಾತ್ರವಲ್ಲ; ಇದು ಸಾಧ್ಯವಿದೆ, ಸಾಧ್ಯವಾಗಬೇಕು ಎಂದೂ ಹೇಳುತ್ತದೆ.

ಸದುದ್ದೇಶಗಳೇ ಕಾರ್ಯಾಚರಣೆಗಳೂ ಆಗಿರುವಂತಿದ್ದರೆ ಎಷ್ಟು ಚೆನ್ನಿತ್ತು! ಏಕೆಂದರೆ ನಾರಾಯಣ ಅವರು ಬಣ್ಣಿಸುವ ರಾಜಕೀಯ ಅವನತಿ ಆರಂಭವಾಗಿ ದಶಕಗಳೇ ಆಗಿರುವಾಗ ಮತ್ತು ಅವರು ಹೇಳುವ ಹೊಸ ರಾಜಕಾರಣದ ಪ್ರಯತ್ನಗಳು ಈಗಾಗಲೇ ಹಲವು ನಡೆದಿವೆಯಾದರೂ ಅವೆಲ್ಲ ದೇಶದಲ್ಲಿ 'ಹೊಸ ರಾಜಕಾರಣ'ವನ್ನು ಸ್ಥಾಪಿಸಲು ವಿಫಲವಾಗಿವೆ ಏಕೆ? ಎಂಬ ಪ್ರಶ್ನೆ ಏಳುತ್ತದೆ. ಈ ದೃಷ್ಟಿಯಿಂದ ನಾರಾಯಣ ಅವರು ಮುಂದೆ ಹೇಳುವ ಎರಡು ಮಾತುಗಳು ಮುಖ್ಯವೆನಿಸುತ್ತವೆ. ಅವೆಂದರೆ, ಸ್ವಾತಂತ್ರ್ಯಾನಂತರದ ಕೆಲವು ದಶಕಗಳ ನಮ್ಮ ರಾಜಕೀಯ ವ್ಯವಸ್ಥೆ ಚೆನ್ನಾಗಿಯೇ ಇತ್ತು

ಮತ್ತು ಇಂದು ಹೊಸ ರಾಜಕಾರಣಕ್ಕಾಗಿ ಹೊಸದೊಂದು ಸ್ವಾತಂತ್ರ್ಯ ಹೋರಾಟವನ್ನು ಆರಂಭಿಸಬೇಕಾಗಿದೆ ಎಂಬುವುವು. ಅಂದರೆ ಸ್ವಾತಂತ್ರ್ಯ ಹೋರಾಟದ ಮೌಲ್ಯಗಳಿಂದ ನಾವು ದೂರ ಸರಿದಿದ್ದೇ ನಮ್ಮ ರಾಜಕೀಯ ವ್ಯವಸ್ಥೆಯ ಅವನತಿಗೆ ಕಾರಣವಾಗಿದೆ ಎಂದು ಅವರು ಹೇಳುತ್ತಿದ್ದಾರೆ ಎನ್ನಬಹುದು. ಆದರೆ ಈ ಸ್ವಾತಂತ್ರ್ಯ ಹೋರಾಟದ ಮೌಲ್ಯಗಳೆಂದರೆ ಯಾವುವು ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲದಿದ್ದರೆ ಇಂತಹ ಮಾತುಗಳೂ ಅಸ್ಪಷ್ಟವೆನಿಸಿ ಮುಂದೆ ದಾರಿ ಕಾಣದಾಗುತ್ತದೆ. ಈಗ ಆ ಸ್ವಾತಂತ್ರ್ಯ ಹೋರಾಟದ ಮೌಲ್ಯಗಳನ್ನು ಒಪ್ಪದವರೇ ಜನಮತ ಪಡೆದು ಅಧಿಕಾರಕ್ಕೆ ಬಂದಿದ್ದಾರೆ ಎಂಬುದನ್ನೂ ಈ ಸಂದರ್ಭದಲ್ಲಿ ಮರೆಯಲಾಗದು. ಹೀಗಾಗಿ ಹೊಸ ಸ್ವಾತಂತ್ರ್ಯ ಹೋರಾಟದ ಎಂಟೆದೆಯ ಮಾತಾಡುವ ಮುನ್ನ ನಮಗೆ ೧೯೪೭ರಲ್ಲಿ ಸ್ವಾತಂತ್ರ್ಯ ತಂದುಕೊಟ್ಟ ಹೋರಾಟ ಈಗ ತನ್ನ ಮೌಲ್ಯಗಳನ್ನು ಕಳೆದುಕೊಂಡಿರಲು ಏನು ಕಾರಣ ಎಂದು ಯೋಚಿಸಬೇಕಿದೆ. ಇದಕ್ಕಾಗಿ ಆ ಹೋರಾಟದ ಕೇಂದ್ರ ತತ್ವವನ್ನು ದಿಟ್ಟಿಸಿ ನೋಡಿ ಅದನ್ನು ಪುನರ್‌ಸಂಘಟಿಸಿಕೊಳ್ಳಬೇಕಿದೆ.

ನಮ್ಮ ಸ್ವಾತಂತ್ರ್ಯ ಹೋರಾಟವನ್ನು ನಿಜವಾದ ಜನಹೋರಾಟವನ್ನಾಗಿ ಮಾರ್ಪಡಿಸಿ ಅದನ್ನು ಹಲವು ಏಳುಬೀಳುಗಳೊಂದಿಗೆ ಮುನ್ನಡೆಸಿದವರು ಮಹಾತ್ಮ ಗಾಂಧಿ ಎಂದು ನಿಸ್ಸಂಶಯವಾಗಿ ಹೇಳಬಹುದು. ಕೊನೆಕೊನೆಯಲ್ಲಿ ಈ ಹೋರಾಟ ಹೆಚ್ಚು ಸಂಕೀರ್ಣವಾಗುತ್ತಾ ಅವರ ಕೈ ತಪ್ಪಿ ಹೋದಂತಾಗಿ ಅದಕ್ಕೆ ರಾಷ್ಟ್ರ ವಿಭಜನೆಯ ಕಳಂಕ ಅಂಟಿಕೊಂಡಿತಾದರೂ, ನಾವು ಯಾವ ಕಾರಣಗಳಿಗಾಗಿ ಸ್ವಾತಂತ್ರ್ಯ ಕಳೆದುಕೊಂಡಿದ್ದೆವು ಎಂಬುದರ ಬಗ್ಗೆ ಅವರು ನಡೆಸಿದ್ದ ಬಹು ವಿವೇಕಪೂರ್ಣ ಚಿಂತನೆಯನ್ನೇ ಆಧರಿಸಿ ಈ ಹೋರಾಟದ ಗುರಿ ಮತ್ತು ಮಾರ್ಗ–ಮುಖ್ಯವಾಗಿ ಸತ್ಯಾಗ್ರಹ–ರೂಪುಗೊಂಡಿತ್ತು ಎನ್ನಬಹುದು. ಇದು ಅವರ ಆದಿ ಗ್ರಂಥ 'ಹಿಂದ್ ಸ್ವರಾಜ್'ನಲ್ಲಿ ಬಹು ವಿವರವಾಗಿ ನಿರೂಪಿತಗೊಂಡಿದೆ. ಇದರ ಪ್ರಕಾರ ಭಾರತ ಎನ್ನುವುದು ಒಂದು 'ಜನಸಮುದಾಯ'ವಾಗಿ ತನ್ನ ಅಸ್ತಿತ್ವದ ಲಂಗರುಗಳನ್ನು ಕಳೆದುಕೊಂಡು ಬ್ರಿಟಿಷರ ಅಡಿಯಲ್ಲಿ ಒಂದು (ವಸಾಹತು) 'ದೇಶ'ವಾಗಿ ಮರುಸಂಘಟಿತಗೊಂಡದ್ದು ನಾವು ಪಶ್ಚಿಮದ ಜೀವನದೃಷ್ಟಿ ಮತ್ತು ಜೀವನ ಕ್ರಮಗಳಿಗೆ ಮಾರುಹೋದದ್ದರಿಂದಾಗಿ. ಇದರ ಅಂತಿಮ ಪರಿಣಾಮವೇ ೧೪–೧೫ನೇ ಶತಮಾನದ ಐರೋಪ್ಯ 'ಜ್ಞಾನಯುಗ'(ರೆನೈಸ್ಸಾನ್ಸ್) ತನ್ನ ತಾರ್ಕಿಕ ಅಂತ್ಯ ಕಂಡುಕೊಂಡ ೨ನೆಯ ವಿಶ್ವಯುದ್ಧದ ಪಾಳುಗಳ ಮಧ್ಯೆ ಹುಟ್ಟಿಕೊಂಡ 'ರಾಷ್ಟ್ರ ಪ್ರಭುತ್ವ' (ನೇಷನ್ ಸ್ಟೇಟ್) ಮತ್ತು ಅದನ್ನು ನಿರ್ವಹಿಸಲು ಪಶ್ಚಿಮವು ರೂಪಿಸಿಕೊಂಡಿದ್ದ ಪ್ರಾತಿನಿಧಿಕ ಸಂಸದೀಯ ಪ್ರಜಾಪ್ರಭುತ್ವಗಳಿಗೆ ನಮ್ಮ ಮಾನ್ಯತೆ. ಆದರೆ ಗಾಂಧಿ ಬಯಸಿದ್ದುದು ಭಾರತವನ್ನು ಒಂದು 'ರಾಷ್ಟ್ರ ಪ್ರಭುತ್ವ'ವಾಗಿ ಅಲ್ಲ; ಒಂದು ಜನಸಮುದಾಯವಾಗಿ ಅದರ ಆತ್ಮವಿದ್ದ–ಮೂಲ ಅಸ್ಮಿತೆ ಮತ್ತು ಶಕ್ತಿಗಳಿದ್ದ–ಗ್ರಾಮಗಳ ಒಕ್ಕೂಟ ವ್ಯವಸ್ಥೆಯಾಗಿ; ನೇರ ಪ್ರಜಾಪ್ರಭುತ್ವ ಮಾದರಿಯ 'ಗ್ರಾಮ ಸ್ವ–ರಾಜ್ಯ'ವಾಗಿ. ಇಲ್ಲಿಯೇ ಒಂದು ಮಾತು ಸ್ಪಷ್ಟಪಡಿಸಿಬಿಡಬೇಕು.

ಗಾಂಧಿ 'ಗ್ರಾಮ ಸ್ವರಾಜ್ಯ'ದ ಮಾತಾಡಿದಾಗ ಅವರ ಮನಸ್ಸಿನಲ್ಲಿದ್ದುದು ಅಂದಿನ ಗ್ರಾಮಗಳ ಚಿತ್ರವಲ್ಲ; ಬದಲಿಗೆ ಹೊಸದಾಗಿ ಪುನಾರಚಿಸಬೇಕಿದ್ದ ಮಾದರಿ ಗ್ರಾಮ.

ಆದರೆ ಸ್ವಾತಂತ್ರ್ಯ ಘೋಷಣೆಯ ಹೊತ್ತಿಗೆ ತಮ್ಮ ಶಿಷ್ಯ ಸಮುದಾಯದಿಂದಲೇ ಕೈ ಕಟ್ಟಿಸಿಕೊಳ್ಳುವ ಅಸಹಾಯಕತೆಗೆ ಈಡಾಗಿದ್ದ ಗಾಂಧಿ ಅನಿವಾರ್ಯವಾಗಿ ಸಂಸದೀಯ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡರಾದರೂ ಈ ಕಾರಣಗಳೊಂದಿಗೆ: ನಮ್ಮ ಜನ ಗ್ರಾಮ ಸ್ವರಾಜ್ಯಕ್ಕೆ ಅರ್ಹರಾಗಲು ಇನ್ನೂ ಹಲವು ತ್ಯಾಗಗಳಿಗೆ ಸಿದ್ಧರಾಗಬೇಕಿದೆ. (ಅವರು ಬದುಕಿದ್ದಾಗ ಹೊರಬಂದ 'ಹಿಂದ್ ಸ್ವರಾಜ್'ನ ಕೊನೆಯ ಆವೃತ್ತಿಯಾದ ಮೂರನೆಯ ಆವೃತ್ತಿಗೆ ಬರೆದ ಮುನ್ನುಡಿಯಲ್ಲಿ) ಅಂದರೆ ಗಾಂಧಿಯವರ ನಿಜವಾದ ಅರ್ಥದ ಸ್ವತಂತ್ರ ಭಾರತ ೧೯೪೭ರ ಆಗಸ್ಟ್ ೧೫ರ ಮಧ್ಯರಾತ್ರಿ ಉದಿಸಿ ೧೯೫೦ರ ಜನವರಿ ೨೬ರಂದು ರೂಪು ತಳೆದ ಪ್ರಾತಿನಿಧಿಕ ಸಂಸದೀಯ ಪ್ರಜಾಪ್ರಭುತ್ವದ ರಾಷ್ಟ್ರ ಪ್ರಭುತ್ವವಾಗಿರಲಿಲ್ಲ. ಏಕೆಂದರೆ ಅದು ಪ್ರಜೆ ಪ್ರಜಾಪ್ರಭುತ್ವದ ತಿರುಳಿನಂತೆ ತನ್ನನ್ನು ತಾನು ಆಳಿಕೊಳ್ಳುವ ಅಧಿಕಾರವನ್ನು ತನ್ನ ಪ್ರತಿನಿಧಿಗೆ ವಹಿಸಿ ತಾನು ಮತದಾನ ಮಾಡುವುದರ ಹೊರತಾಗಿ ಪ್ರಜಾಧಿಕಾರ ಮತ್ತು ಕರ್ತವ್ಯಗಳಿಂದ ವಿಮುಖನನ್ನಾಗಿ ಮಾಡಿತ್ತು. ಇದೇ ಇಂದಿನ ಪ್ರಜಾಪ್ರಭುತ್ವದ ಅವನತಿಗೆ ಮೂಲ ಕಾರಣವೆನ್ನಬಹುದು. ಇದೊಂದು ರೀತಿಯಲ್ಲಿ ಪ್ರಜಾಪ್ರಭುತ್ವದ ಜವಾಬ್ದಾರಿಗಳ ಹೊರಗುತ್ತಿಗೆ ಎನ್ನಬಹುದು!

ಹಾಗಾದರೆ ಸ್ವಾತಂತ್ರ್ಯ ಹೋರಾಟದ ಮೂಲಕ ಗಾಂಧಿ ಸಾಧಿಸಬೇಕೆಂದಿದ್ದ 'ಗ್ರಾಮ ಸ್ವರಾಜ್ಯ'ದಿಂದ ನಮ್ಮನ್ನು ವಿಮುಖಗೊಳಿಸಿ ಈ ಪ್ರಜಾಪ್ರಭುತ್ವದ ಹೊರಗುತ್ತಿಗೆ ಪದ್ಧತಿಗೆ ದೂಡಿದ, ಅಂದರೆ ನಾವು ಗಾಂಧಿ ಪ್ರಕಾರ ಮಾಡಲು ಆಗ (ಮತ್ತು ಈಗಲೂ) ಇನ್ನೂ ಸಿದ್ಧರಾಗಿರದ ತ್ಯಾಗಗಳು ಯಾವುವು? ಅವೆಂದರೆ ಅವರ ಅನುಯಾಯಿಗಳು ಮತ್ತು ಅವರ ವಿರೋಧಿಗಳು ಇಬ್ಬರೂ ಮರುಳಾಗಿದ್ದ 'ರಾಷ್ಟ್ರಪ್ರಭುತ್ವ'ವು ತನ್ನ ಹುಟ್ಟಿನಿಂದಲೇ ಒತ್ತಾಯಿಸುವ ಬಲಿಷ್ಠತೆ ಬೇಡುವ ನಿರಂತರ 'ಅಭಿವೃದ್ಧಿ'ಯ; ಕೊನೆಯಿಲ್ಲದ ತಹತಹಗಳು. ಯೋಚಿಸಿ ನೋಡಿ. ಇವೇ ಅಲ್ಲವೇ ನಮ್ಮ ಪ್ರತಿನಿಧಿಗಳನ್ನೂ, ಆ ಮೂಲಕ ನಮ್ಮ ಈ ಪ್ರಾತಿನಿಧಿಕ ಪ್ರಜಾಪ್ರಭುತ್ವವನ್ನೂ ರಿಪೇರಿ ಮಾಡಲು ಸಾಧ್ಯವಾಗದಷ್ಟು ಭ್ರಷ್ಟತೆಗೆ, ಅವನತಿಗೆ ತಳ್ಳಿರುವುದು? ಇಂದು ಕೋವಿಡ್‌ಗೆ ಕಾರಣವಾಗಿರುವ 'ಅಭಿವೃದ್ಧಿ' ಪರಿಯೂ ಇದೇ ಅಲ್ಲವೆ? ಎಲ್ಲಕ್ಕಿಂತ ಮುಖ್ಯವಾಗಿ ಮೊನ್ನೆ ತಾನೇ ಭೂಮಿಯ ಮೇಲಿನ ಬದುಕಿನ ಅಂತ್ಯದ ಆರಂಭದ ಎಚ್ಚರಿಕೆ ನೀಡಿರುವ ವಿಶ್ವಸಂಸ್ಥೆಯ ಪರಿಸರ ವರದಿಯೂ ಬೊಟ್ಟು ಮಾಡುವುದೂ ಮನುಷ್ಯನ ಈ ಸ್ವಯಂ ವಿನಾಶಕ ತಹತಹಗಳನ್ನೇ ಅಲ್ಲವೇ?

ಹಾಗಾಗಿ ನಾವು ನಮ್ಮ ಸಂವಿಧಾನ ಸಭೆಯ ಮೂಲಕ ಪರಿಕಲ್ಪಿಸಿಕೊಂಡ ಈ ರಾಷ್ಟ್ರ ವ್ಯವಸ್ಥೆ ಮತ್ತು ಅದರ ಸಂಚಾಲನಾ ತಂತ್ರದಲ್ಲೇ ಏನೋ ದೋಷವಿದೆ ಎನ್ನಿಸದಿರದು. ಈ ಕಾರಣದಿಂದಲೇ ಇಲ್ಲಿ ಯಾರು ಏನೇ ಆದರ್ಶ ಹೇಳಿಕೊಂಡು ಅಧಿಕಾರಕ್ಕೆ ಬಂದರೂ ಸ್ವಾತಂತ್ರ್ಯದ ರುಚಿ ಬದಲಾಗುತ್ತಿಲ್ಲ. ನಮ್ಮ ಮನಸ್ಸು ಮತ್ತು ದೇಹಗಳ ಸುತ್ತ

ಬಂಧನಗಳ ಹಗ್ಗಗಳು ಬಿಗಿಯಾಗುತ್ತಲೇ ಇವೆ, ನಾವು ಸೃಷ್ಟಿಯ ನಿರಾಳ ಮಕ್ಕಳಾಗುವ ಬದಲು ಸದಾ ಹೊಸ ಹೊಸ ಆಸೆಗಳು ಹುಟ್ಟಿಸುವ ಹೊಸ ಹೊಸಕಾನೂನುಗಳ ಅಡಿಗೆ ಸಿಕ್ಕಿಹಾಕಿಕೊಳ್ಳುತ್ತಾ ಹೋಗುವ ಸರ್ಕಾರದ ಮಕ್ಕಳಾಗುತ್ತಿದ್ದೇವೆ. ಆದುದರಿಂದ ಹೊಸ ರಾಜಕಾರಣಕ್ಕಾಗಿ ಹೊಸ ಸ್ವಾತಂತ್ರ್ಯ ಹೋರಾಟವನ್ನು ಬಯಸುವವರು ನಿಜವಾಗಿ ಹೊಸದಾಗಿ ಯೋಚಿಸಬೇಕಿದೆ: ಬೇಕಿರುವುದು ಹೊರ ಹೋರಾಟವೋ? ಅಥವಾ ಒಳಗಿನ ತಹತಹಗಳನ್ನು ಪಳಗಿಸುವ ನೈತಿಕ ತರಬೇತಿಯೋ?

('ಪ್ರಜಾವಾಣಿ' ಪತ್ರಿಕೆಯು ಪ್ರಕಟಿಸಲಾಗುತ್ತಿಲ್ಲ ಎಂದು ತಿಳಿಸಿದ; 'ಹೊಸ ಮನುಷ್ಯ'ದ ಸೆಪ್ಟಂ. ೨೦೨೧ರ ಸಂಚಿಕೆಯಲ್ಲಿ ಪ್ರಕಟವಾದ ಲೇಖನ)

ತಾಲಿಬಾನಿಗಳ ಆಫ್ಘನಿಸ್ತಾನ : ಒಂದು ಐತಿಹಾಸಿಕ ನೋಟ

ಜಗತ್ತಿನ ಅತ್ಯಂತ ಪ್ರಬಲ ಸೇನಾ ಶಕ್ತಿಯೆನಿಸಿರುವ ಅಮೆರಿಕಾದ ಸೇನೆಯನ್ನು ಸೀಮಿತ ಸೇನಾ ಶಕ್ತಿಯ ತಾಲಿಬಾನಿಗಳು ಮಣಿಸಿದ್ದಾರೆಂದರೆ ಅದು ಸ್ಥಳೀಯ ಜನಸಮುದಾಯದ ಒಂದು ಗಣನೀಯ ಭಾಗದ ಬೆಂಬಲವಿಲ್ಲದೆ ಸಾಧ್ಯವಿಲ್ಲ. ಇನ್ನೊಂದು, ಯಾವುದೇ ದೇಶದ ಹೋರಾಟಗಾರರು ತಮ್ಮ ಹೋರಾಟದಲ್ಲಿ ಜಯಶಾಲಿಯಾದ ಮೇಲೆ ತಾನು ಪ್ರತಿಪಾದಿಸಿದ ಮತ್ತು ನಂಬಿದ ಮೌಲ್ಯಗಳಿಗನುಸಾರವಾದ ಸರ್ಕಾರವನ್ನು ರಚಿಸುವುದು ಅದರ ಹಕ್ಕು. ಇಂದು ನಾವು ಇದ್ದುದರಲ್ಲಿ ಒಳ್ಳೆಯದೆಂದು ಪಶ್ಚಿಮದಿಂದ ಇಷ್ಟಪಟ್ಟು ಪಡೆದ ಒಂದು ಉದಾರವಾದಿ ಸಂಸದೀಯ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವವರಿಗೆ ತಾಲಿಬಾನಿಗಳ ನಂಬಿಕೆಗಳು ಅನಾಗರಿಕವೂ ಕ್ರೂರವಾಗಿಯೂ ಕಾಣಬಹುದು. ಆದರೆ ಅವು ತಮ್ಮ ಒಳಿತಿಗೆಂದೇ ಸಾರಲ್ಪಟ್ಟ ಧಾರ್ಮಿಕ ನಿರ್ದೇಶನಗಳನ್ನು ಪಾಲಿಸುವ ಧಾರ್ಮಿಕ ಶ್ರದ್ಧೆಯ ಭಾಗವೇ ಆಗಿರಬಹುದು. ಏಕೆಂದರೆ ಯಾವ ಆಡಳಿತಗಾರರೂ ಜನರಿಗೆ ಹಿಂಸೆ ಕೊಡುವಂತಹ ಕಾರ್ಯವೈಖರಿಯನ್ನು ಅನುಸರಿಸಬಯಸುವುದಿಲ್ಲ. ಆದ್ದರಿಂದ ಪಶ್ಚಿಮದ ಉದಾರವಾದಿ ಪ್ರಜಾಸತ್ತೆಯ ಸ್ವಾತಂತ್ರ್ಯ–ಸುಖ–ಸೌಲಭ್ಯಗಳ ರುಚಿ ಕಂಡಿರುವ ಆಫ್ಘನರೂ ಸೇರಿದಂತೆ 'ನಾವು' ಅನಾಗರಿಕ–ಕ್ರೂರ ಎಂದು ಕರೆಯುವ ಸರ್ಕಾರದ ವರ್ತನೆಗಳ ಮೂಲ ತಾಲಿಬಾನಿಗಳು ನಿಜ ಇಸ್ಲಾಂ ಎಂದು ನಂಬಿರುವ ಇಸ್ಲಾಂನ ಆವೃತ್ತಿಯಲ್ಲೇ ಇರುವಂತೆ ಕಾಣುತ್ತದೆ.

ಆಫ್ಘನಿಸ್ಥಾನವನ್ನು ಈಗ ಪೂರ್ಣ ವಶಪಡಿಸಿಕೊಂಡಿರುವ ತಾಲಿಬಾನ್ ಅಲ್ಲಿ ತನ್ನ ಹಂಗಾಮಿ ಸರ್ಕಾರ ರಚನೆ ಮಾಡಿರುವ ಹೊತ್ತಿನಲ್ಲಿ ಜಗತ್ತಿನ ಮೂಲೆ ಮೂಲೆಗಳಲ್ಲಿನ ಇಸ್ಲಾಮೇತರ ದೇಶಗಳಿಂದ ಅಲ್ಲಿನ ಜನರ ಬಗ್ಗೆ ಸಹಾನುಭೂತಿ ಮತ್ತು ತಾಲಿಬಾನಿಗಳ ಬಗ್ಗೆ ಖಂಡನೆ ಕೇಳಿ ಬರುತ್ತಿದೆ. ಅಲ್ಲಿ ಅಮೆರಿಕಾದ ಸೇನೆ ಸ್ವದೇಶಕ್ಕೆ ವಾಪಸಾಗುತ್ತಿದ್ದ ಮತ್ತು ಅಮೆರಿಕಾ ಪ್ರಾಯೋಜಿತ ಸ್ಥಳೀಯ ಸರ್ಕಾರ ನಿಧಾನವಾಗಿ ದೇಶದ ಮೇಲೆ

ಪಿಡಿತ ಕಳೆದುಕೊಳ್ಳುತ್ತಿದ್ದ ವೇಳೆಯಲ್ಲೇ ಆ ದೇಶದಲ್ಲಿದ್ದ ಆಫ್ಘನೇತರರು ಮಾತ್ರವಲ್ಲದೆ ಗಣನೀಯ ಸಂಖ್ಯೆಯ ಆಫ್ಘನರೂ ದೇಶಬಿಟ್ಟು ಹೋಗಲಾರಂಭಿಸಿದ್ದಾರೆ. ತಾಲಿಬಾನಿಗಳು ಇಂಥವರು ದೇಶಬಿಟ್ಟು ಹೋಗಲು ನಿಗದಿ ಮಾಡಿದ್ದ ಗಡುವು ಮೀರಿದ್ದರೂ ಇನ್ನೂ ಗಣನೀಯ ಸಂಖ್ಯೆಯ ಆಫ್ಘನರು ತಮ್ಮನ್ನು ತಮ್ಮೀ ತಾಯ್ನಾಡಿನಿಂದ ತೆರವುಗೊಳಿಸಲು ಅಮೆರಿಕಾವೂ ಸೇರಿದಂತೆ ವಿಶ್ವದ ಮಾನವ ಹಕ್ಕುಗಳ ವಿವಿಧ ವೇದಿಕೆಗಳಿಗೆ ಮೊರೆ ಹೋಗುತ್ತಲೇ ಇದ್ದಾರೆ.

ಜನ ಹೀಗೆ ತಮ್ಮ ತಾಯ್ನಾಡಿನದ್ದೇ ಸರ್ಕಾರ ರಚಿತವಾಗುತ್ತಿದ್ದಾಗ ತಾಯ್ನಾಡನ್ನು ತೊರೆಯಲು ಹಾತೊರೆಯುವುದೇತಕ್ಕೆ? ನಲವತ್ತು ವರ್ಷಗಳ ಹಿಂದೆ ಶೀತಲ ಸಮರ ಇನ್ನೂ ಅಸ್ತಿತ್ವದಲ್ಲಿದ್ದಾಗ ಉದಾರವಾದ ರಾಜಪ್ರಭುತ್ವವಾಗಿದ್ದ ಆಫ್ಘನಿಸ್ಥಾನವನ್ನು ಅಮೇರಿಕದ ಪ್ರಭಾವದಿಂದ 'ರಕ್ಷಿಸಲು' ಆ ದೇಶವನ್ನು ಆಕ್ರಮಿಸಿಕೊಂಡಿದ್ದ ಸೋವಿಯತ್ ಒಕ್ಕೂಟ ಅಲ್ಲಿ ತನ್ನ ಕೈಗೊಂಬೆ ಕಮ್ಯೂನಿಸ್ಟ್ ಸರ್ಕಾರವನ್ನು ಸ್ಥಾಪಿಸಿತ್ತು. ಆಗ ಅದರ ವಿರುದ್ಧ ಹೋರಾಡಿ ತಮ್ಮ ದೇಶವನ್ನು 'ಧರ್ಮ ವಿರೋಧಿ' ಕಮ್ಯೂನಿಸಂನಿಂದ ವಿಮೋಚನೆಗೊಳಿಸಿದ್ದವರು ಮುಜಾಹಿದ್ದೀನ್ ಹೆಸರಿನಲ್ಲಿದ್ದ ಈ ತಾಲಿಬಾನಿಗಳೇ. ಅವರಿಗೆ ಪರೋಕ್ಷವಾಗಿ ಬೆಂಬಲವಾಗಿ ನಿಂತಿದ್ದುದು ಅಮೆರಿಕಾದ ಸೇನೆ. ಆಗ ಸರ್ಕಾರ ರಚಿಸಿದ್ದ ತಾಲಿಬಾನಿಗಳ 'ಶರಿಯತ್' ಪ್ರಕಾರದ ಆಡಳಿತ ವೈಖರಿಯ ಭಾಗವಾಗಿ ವಿವಿಧ ತೆರೆನ ನಿರ್ಬಂಧ-ನಿಷೇಧಗಳ ಕೌರ್ಯಗಳನ್ನು ಅನುಭವಿಸಿದ್ದ ಆಫ್ಘನ್ ಜನತೆ ಬಾಣಲೆಯಿಂದ ಬೆಂಕಿಗೇ ಬಿದ್ದಂತಾಗಿ ತಾಲಿಬಾನಿಗಳಿಂದಲೂ ವಿಮೋಚನೆ ಬಯಸಿದ್ದರು.

ಯುದ್ಧಭೂಮಿಯಾದ ಬೌದ್ಧ ಧರ್ಮದ ನೆಲವೀಡು

ಆಫ್ಘನಿಸ್ಥಾನ ಎಂದೂ ಮೂಲಭೂತವಾದಿ ಇಸ್ಲಾಮೀ ದೇಶವಾಗಿರಲಿಲ್ಲ. ಎತ್ತರದ ಪರ್ವತ ಶ್ರೇಣಿಗಳಿಂದಲೂ, ಆಳದ ಕಣಿವೆಗಳಿಂದಲೂ ಆವೃತವಾದ ಪ್ರಕೃತಿ ರಮಣೀಯತೆಗೆ ಹೆಸರಾಗಿದ್ದ ಆ ದೇಶ ಸರಳ ಬದುಕಿನ ಬುಡಕಟ್ಟು ಜನರಿಂದ ಕೂಡಿತ್ತು. ಇತಿಹಾಸದಲ್ಲಿ ಗಾಂಧಾರ ದೇಶವೆಂದು ಪ್ರಸಿದ್ಧವಾಗಿದ್ದ ಈ ನಾಡು ಬೌದ್ಧ ಧರ್ಮದ ನೆಲವೀಡೂ ಆಗಿತ್ತು. ಬೊಮಿಯಾನ್ ಪರ್ವತಶ್ರೇಣಿಯಲ್ಲಿ ಕ್ರಿ.ಶ. ಆರನೇ ಶತಮಾನದಷ್ಟು ಹಿಂದೆಯೇ ಕೆತ್ತಿದ್ದ ಜಗತ್ತಿನ ಅತಿ ಎತ್ತರದ ಬುದ್ಧನ ಮೂರ್ತಿಗಳು ಇದಕ್ಕೆ ಸಾಕ್ಷಿಯಂತಿದ್ದವು. ಆದರೆ ಜಗತ್ತಿನಾದ್ಯಂತ ತೈಲ ಆರ್ಥಿಕತೆ ಬಲಗೊಂಡಂತೆ ಇಸ್ಲಾಮಿ ಮೂಲಭೂತವಾದ ಬಲಗೊಂಡು ಅಲ್‌ಖೈದಾ ಉಗ್ರ ಪಡೆಗಳ ರೂಪ ತಳೆದಾಗ ಭೌಗೋಳಿಕವಾಗಿ ಆಯಕಟ್ಟಿನ ಜಾಗದಲ್ಲಿರುವ ಆಫ್ಘನಿಸ್ಥಾನವೂ ಅದಕ್ಕೆ ಬಲಿಯಾದಾಗ ತಾಲಿಬಾನಿ ಆಂದೋಲನ ಅಲ್ಲಿ ಅರಂಭವಾಯಿತು. ಆಧುನಿಕ ಶಿಕ್ಷಣ ಧರ್ಮವಿರೋಧಿ ಎನಿಸಿತು. ಮಹಿಳೆಯರ ಶಿಕ್ಷಣ ಮತ್ತು ಉದ್ಯೋಗ ನಿಷೇಧಿತವಾಯಿತು. ಮಹಿಳೆಯರಿಗೆ ಬುರ್ಖಾ ಕಡ್ಡಾಯವಾಯಿತಲ್ಲದೆ ಅವರ ಒಂಟಿ ಮತ್ತು ಮುಕ್ತ ಸಂಚಾರ ದಂಡನಾರ್ಹ ಅಪರಾಧವೆನಿತು. ಎಲ್ಲ ತರಹದ ನೃತ್ಯ-ಸಂಗೀತ -ಚಿತ್ರಕಲೆ ಇತ್ಯಾದಿ

ಲಲಿತ ಕಲೆಗಳು ನಿಷೇಧಿತವಾದವು. ತಾಲಿಬಾನಿಗಳು ಆಫ್ಘನಿಸ್ತಾನವನ್ನು ಒಂದು ಇಸ್ಲಾಮಿ ಮೂಲಭೂತವಾದಿ ದೇಶವನ್ನಾಗಿ ಮಾಡಲು ಅವರ 'ಆಡಳಿತ'ಕ್ಕೆ ಬೇಕಾದ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಹೇಗೂ ಸೋವಿಯತ್ ಒಕ್ಕೂಟದ ಮತ್ತು ಅಮೆರಿಕಾದ ಸೇನೆಗಳು ಯುದ್ಧ ಕ್ಷೇತ್ರಗಳಲ್ಲಿ ಬಿಟ್ಟುಹೋಗಿದ್ದು, ಅಪಾರ ಪ್ರಮಾಣದಲ್ಲಿ ಲಭ್ಯವಿದ್ದವು. ಈ ಶಸ್ತ್ರಾಸ್ತ್ರಗಳನ್ನು ಬಳಸಿಯೇ ಅವರು ಅಂತಾರಾಷ್ಟ್ರೀಯ ಪ್ರವಾಸಿಗರ ಗಮನ ಸೆಳೆದಿದ್ದ ಬೊಮಿಯಾನ್ ಬೆಟ್ಟಗಳ ಮೇಲಿನ ವೈವಿಧ್ಯಮಯ ಬುದ್ಧ ಶಿಲ್ಪಗಳನ್ನು, ಅವು ಇಸ್ಲಾಂ ಧರ್ಮದ ಮೂರ್ತಿ ವಿರೋಧಿ ನಂಬಿಕೆಯನ್ನು ಉಲ್ಲಂಘಿಸುತ್ತವೆಂಬ ಕಾರಣದಿಂದ ಧ್ವಂಸ ಮಾಡಲಾಯಿತು. ಇದರ ಹಿಂದೆ ಇದ್ದ ಸೌದಿ ಅರೇಬಿಯಾ ಮೂಲದ ವಹಾಬಿ ಪಂಥದ(ಬಿನ್ ಲಾಡನ್ ನೇತೃತ್ವದ) 'ಅಲ್‌ಖೈದಾ' ಉಗ್ರರ ಪಡೆ ಆ ಹೊತ್ತಿಗೆ ಆಫ್ಘನಿಸ್ಥಾನದಲ್ಲಿ ಒಂದು ಪ್ರಬಲ ಶಕ್ತಿಯಾಗಿ ಮನೆ ಮಾಡಿತ್ತು.

ಅಮೆರಿಕಾ ಪ್ರಾಯೋಜಿತ ಪ್ರಜಾಸತ್ತೆಯ ಮುಕ್ತತೆಯ ಗಾಳಿ

ಇದೇ ವೇಳೆಯಲ್ಲಿ ೨೦೦೧ರಲ್ಲಿ ಅಮೆರಿಕಾದಲ್ಲಿ ೯/೧೧ ಎಂದೇ ಹೆಸರಾಗಿರುವ ವಿಶ್ವ ವ್ಯಾಪಾರ ಕೇಂದ್ರದ ಮೇಲಿನ ವೈಮಾನಿಕ ದಾಳಿ ನಡೆದು ಅದರ ಹಿಂದೆ ತಾಲಿಬಾನಿಗಳೂ ಸೇರಿದಂತೆ ವಿಶ್ವದ ಮುಸ್ಲಿಂ ಮೂಲಭೂತವಾದಿ ಉಗ್ರರ ಕೈವಾಡವಿದೆಯೆಂದು ಅರಿತ ಅಮೆರಿಕಾ, ತಾಲಿಬಾನಿಗಳನ್ನು ನಿಯಂತ್ರಿಸಲು ಇಪ್ಪತ್ತು ವರ್ಷಗಳ ಹಿಂದೆ ತನ್ನ ಸೇನೆಯನ್ನು ಆ ದೇಶಕ್ಕೆ ಕಳಿಸಿತು. ಸೇನಾ ಕಾರ್ಯಾಚರಣೆಯಿಂದ ಇದು ಸಾಧ್ಯವಾಗದೆಂದು ಬಹುಬೇಗ ಅರಿತ ಅಮೆರಿಕಾ ಅಲ್ಲಿ ತಾಲಿಬಾನಿಗಳ ಸರ್ಕಾರಕ್ಕೆ ಪರ್ಯಾಯವಾಗಿ ಒಂದು 'ಪ್ರಜಾಸತ್ತಾತ್ಮಕ' ಸರ್ಕಾರವನ್ನು ಪ್ರಾಯೋಜಿಸಿತು. ಇದರಡಿಯಲ್ಲಿ ಜನ, ವಿಶೇಷವಾಗಿ ಮಹಿಳೆಯರು ಸಂಸದೀಯ ಪ್ರಜಾಪ್ರಭುತ್ವವೊಂದು ಕೊಡಮಾಡುವ, ಪಾಶ್ಚಿಮಾತ್ಯ ನಾಗರೀಕತೆ ಕಲ್ಪಿಸಿಕೊಡುವ ಮುಕ್ತ ಅವಕಾಶಗಳನ್ನೂ, ಮುಕ್ತ ಮಾರುಕಟ್ಟೆ ತೆರೆದಿಡುವ ಎಲ್ಲ ಸುಖ-ಸೌಲಭ್ಯಗಳನ್ನೂ ಆನಂದಿಸಿದರು. ದೇಶದ ಇತ್ತೀಚಿನ ಇತಿಹಾಸದಲ್ಲಿ ಎಂದೂ ಅನುಭವಿಸದಿದ್ದ ಮಾನವ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ಅವರು ಅನುಭವಿಸಿದರು. ಮಹಿಳೆಯರು ಮನೆಗಳನ್ನು ಬಿಟ್ಟು ಹೊರಬಂದು ಶಿಕ್ಷಣ ಪಡೆದರು. ಉದ್ಯೋಗಸ್ಥರಾಗಿ ಪುರುಷರಿಗೆ ಸಮನಾದ ಸ್ವಾತಂತ್ರ್ಯ ಅನುಭವಿಸಿದರು.

ವಿಫಲವಾದ ಅಮೆರಿಕಾದ ಪ್ರಜಾಸತ್ತೆಯ ಪ್ರಾಯೋಜಕತ್ವ

ಆದರೆ ಇದೆಲ್ಲವೂ ವಿದೇಶಿ ಶಕ್ತಿಯೊಂದು ಪ್ರಾಯೋಜಿಸಿದ್ದ 'ವ್ಯವಸ್ಥೆ'ಯ ಭಾಗವಾಗಿತ್ತು. ಹಾಗಾಗಿ ಅದು ಬಹುಕಾಲ ನಡೆಯದಂತಾಗಿತ್ತು. ಅಮೆರಿಕಾ ಇಪ್ಪತ್ತು ವರ್ಷಗಳ ಕಾಲ ಎರಡು ದಶಲಕ್ಷ ಕೋಟಿ ಡಾಲರುಗಳನ್ನು ತಂದು ಅಲ್ಲಿ ಸುರಿದರೂ, ಅತ್ಯಾಧುನಿಕ ಶಸ್ತ್ರಾಸ್ತ್ರಗಳೊಂದಿಗೆ ಹೋರಾಡಿದ ಸೇನಾ ಕಾರ್ಯಾಚರಣೆಯ ಹೊರತಾಗಿಯೂ ದೇಶದ ಮೂಲೆ ಮೂಲೆಗಳಲ್ಲಿ ಸಕ್ರಿಯವಾಗಿದ್ದ ತಾಲಿಬಾನಿ ಹೋರಾಟಗಾರರ ದಾಳಿಗಳ ಎದುರು, ಅಲ್ಲಿ ಇಡೀ ದೇಶವನ್ನು ವ್ಯಾಪಿಸಿದ

ಒಂದು ಸ್ಥಿರವಾದ 'ಪ್ರಜಾಸತ್ತಾತ್ಮಕ' ಆಡಳಿತವನ್ನು ನೆಲೆಗೊಳಿಸಲಾಗಲಿಲ್ಲ. ಇದರಲ್ಲಿ ತಾಲಿಬಾನಿಗಳಿಗೆ ಶಸ್ತ್ರಾಸ್ತ್ರ ಪೂರೈಕೆ, ತರಬೇತಿ ಮತ್ತು ಧನ ಸಹಾಯದ ಮೂಲಕ ನೆರವಾಗುತ್ತಿದ್ದ ಪಾಕಿಸ್ತಾನದ ಪಾತ್ರವೂ ಇತ್ತು. ಕೊನೆಗೆ ಅಮೆರಿಕಾ ಹತಾಶವಾಗಿ ತನ್ನ ಈ ಪ್ರಯತ್ನವನ್ನು ಕೈಬಿಡುವ ತೀರ್ಮಾನಕ್ಕೆ ಬಂದು ಕಳೆದ ಆಗಸ್ಟ್ ತಿಂಗಳು ತನ್ನ ಸೇನೆಯನ್ನು ಪೂರ್ಣವಾಗಿ ಅಲ್ಲಿಂದ ಹಿಂತೆಗೆದುಕೊಂಡಿತು. ಅದರ ಬೆನ್ನಲ್ಲೇ ತಾಲಿಬಾನಿ ಪಡೆಗಳು ದೇಶವನ್ನು ಪೂರ್ಣವಾಗಿ ವಶಪಡಿಸಿಕೊಂಡವು. ಇದರ ಫಲವಾಗಿ ಅಲ್ಲಿ ಸ್ಥಾಪಿತವಾಗಿದ್ದ 'ಪ್ರಜಾಸತ್ತಾತ್ಮಕ' ಸರ್ಕಾರದ ಅಧಿಪತಿಗಳು ದೇಶಬಿಟ್ಟು ಪಲಾಯನಗೈದರು. ತಾಲಿಬಾನಿಗಳ ಪೂರ್ಣ ಆಡಳಿತಕ್ಕೆ ದಾರಿ ಮಾಡಿಕೊಟ್ಟರು. ಇಲ್ಲಿಗೆ ಜನ ಕಳೆದ ಇಪ್ಪತ್ತು ವರ್ಷಗಳ ಕಾಲ ಅನುಭವಿಸಿದ ಪ್ರಜಾಸತ್ತಾತ್ಮಕ ಸರ್ಕಾರದಡಿಯ ಮುಕ್ತತೆಯ ವಾತಾವರಣ ಕೊನೆಗೊಂಡಿತು.

ನಮ್ಮ ಮೌಲ್ಯಗಳು–ನಂಬಿಕೆಗಳು ಅವರದಾಗವು...

ಇದಕ್ಕಾಗಿ ಆಫ್ಘನ್ ಜನತೆಯ ಪರವಾಗಿ ಸಹಾನುಭೂತಿ ವ್ಯಕ್ತಪಡಿಸುವ ಜನ ಎರಡು ಅಂಶಗಳನ್ನು ಮರೆಯುತ್ತಾರೆನಿಸುತ್ತದೆ. ಒಂದು, ಜಗತ್ತಿನ ಅತ್ಯಂತ ಪ್ರಬಲ ಸೇನಾ ಶಕ್ತಿಯೆನಿಸಿರುವ ಅಮೆರಿಕಾದ ಸೇನೆಯನ್ನು ಸೀಮಿತ ಸೇನಾ ಶಕ್ತಿಯ ತಾಲಿಬಾನಿಗಳು ಮಣಿಸಿದ್ದಾರೆಂದರೆ ಅದು ಸ್ಥಳೀಯ ಜನಸಮುದಾಯದ ಒಂದು ಗಣನೀಯ ಭಾಗದ ಬೆಂಬಲವಿಲ್ಲದೆ ಸಾಧ್ಯವಿಲ್ಲ. ಇನ್ನೊಂದು, ಯಾವುದೇ ದೇಶದ ಹೋರಾಟಗಾರರು ತಮ್ಮ ಹೋರಾಟದಲ್ಲಿ ಜಯಶಾಲಿಯಾದ ಮೇಲೆ ತಾವು ಪ್ರತಿಪಾದಿಸಿದ ಮತ್ತು ನಂಬಿದ ಮೌಲ್ಯಗಳಿಗನುಸಾರವಾದ ಸರ್ಕಾರವನ್ನು ರಚಿಸುವುದು ಅವರ ಹಕ್ಕು. ಇಂದು ನಾವು ಇದ್ದುದರಲ್ಲಿ ಒಳ್ಳೆಯದೆಂದು ಪಶ್ಚಿಮದಿಂದ ಇಷ್ಟಪಟ್ಟು ಪಡೆದ ಒಂದು ಉದಾರವಾದಿ ಸಂಸದೀಯ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವವರಿಗೆ ತಾಲಿಬಾನಿಗಳ ನಂಬಿಕೆಗಳು ಅನಾಗರಿಕವೂ ಕ್ರೂರವಾಗಿಯೂ ಕಾಣಬಹುದು. ಆದರೆ ಅವು ತಮ್ಮ ಒಳಿತಿಗೆಂದೇ ಸಾರಲ್ಪಟ್ಟ ಧಾರ್ಮಿಕ ನಿರ್ದೇಶನಗಳೆಂದು ನಂಬಿ ಪಾಲಿಸುವ ಅವರಿಗೆ ಧಾರ್ಮಿಕ ಶ್ರದ್ಧೆಯ ಭಾಗವೇ ಆಗಿರಬಹುದು. ಏಕೆಂದರೆ ಯಾವ ಆಡಳಿತಗಾರರೂ ಜನರಿಗೆ ಹಿಂಸೆ ಕೊಡುವಂತಹ ಕಾರ್ಯವೈಖರಿಯನ್ನು ಅನುಸರಿಸ ಬಯಸುವುದಿಲ್ಲ. ಆದ್ದರಿಂದ ಪಶ್ಚಿಮದ ಉದಾರವಾದಿ ಪ್ರಜಾಸತ್ತೆಯ ಸ್ವಾತಂತ್ರ್ಯ–ಸುಖ–ಸೌಲಭ್ಯಗಳ ರುಚಿ ಕಂಡಿರುವ ಆಫ್ಘನರೂ ಸೇರಿದಂತೆ 'ನಾವು' ಅನಾಗರಿಕ–ಕ್ರೂರ ಎಂದು ಕರೆಯುವ ಸರ್ಕಾರದ ವರ್ತನೆಗಳ ಮೂಲ, ತಾಲಿಬಾನಿಗಳು ನಿಜ ಇಸ್ಲಾಂ ಎಂದು ನಂಬಿರುವ ಇಸ್ಲಾಂನ ಆವೃತ್ತಿಯಲ್ಲೇ ಇರಬಹುದೆಂದು ಯೋಚಿಸಿಲ್ಲ.

ಜಗತ್ತಿನ ಬಹುತೇಕ ಇಸ್ಲಾಮೀ ದೇಶಗಳು ನಾವು ನಾಗರಿಕ ಎಂದು ಕರೆಯುವ ಸ್ವಾತಂತ್ರ್ಯಗಳ ಮೇಲೆ ನಿರ್ಬಂಧಗಳಿರುವ 'ಧಾರ್ಮಿಕ' ಪ್ರಭುತ್ವಗಳೇ ಆಗಿದ್ದು ಅವು ಒಂದೊಂದೂ ಒಂದೊಂದು ರೀತಿಯ ಸರ್ಕಾರಗಳನ್ನು ಹೊಂದಿರುವುದು, ಇಸ್ಲಾಂ ಹಲವು ಆವೃತ್ತಿಗಳನ್ನು ಹೊಂದಿರುವುದನ್ನು ಸೂಚಿಸುತ್ತದೆಯಲ್ಲದೆ, ಅದು ಸಂಸದೀಯ

ಪ್ರಜಾಸತ್ತಾತ್ಮಕ ಸರ್ಕಾರದ ಪದ್ಧತಿಯು ಬೇಡುವ, ಸರ್ಕಾರವನ್ನು ಧರ್ಮದಿಂದ ದೂರವಿಡುವ ಸೆಕ್ಯುಲರಿಸಂನ್ನು ಒಪ್ಪುವುದಿಲ್ಲ. ಸೆಕ್ಯುಲರಿಸಂನ್ನು ಒಪ್ಪಿಕೊಂಡಿರುವ ಇಸ್ಲಾಮಿ ದೇಶಗಳು ಒಂದಲ್ಲ ಒಂದು ರೀತಿಯ ಸರ್ವಾಧಿಕಾರಗಳಿಗೆ ಒಳಪಟ್ಟ ಅಥವಾ ಪಾಕಿಸ್ತಾನದಂತೆ ದೇಶದಾಡಳಿತದಲ್ಲಿ ಮಿಲಿಟರಿಯೇ ನಿರ್ಣಾಯಕ ಶಕ್ತಿಯಾಗಿರುವ ಅಥವಾ ಬಾಂಗ್ಲಾದೇಶದಂತೆ ಮತೀಯ ಮೂಲಭೂತವಾದಿ ಪಕ್ಷವೊಂದು ವಿರೋಧ ಪಕ್ಷವಾಗಿರುವ ದೇಶವಾಗಿರುತ್ತವೆ. ಮೊದಲ ಮಹಾಯುದ್ಧದ ಪರಿಣಾಮವಾಗಿ ಇಸ್ಲಾಮಿ ರಾಷ್ಟ್ರಗಳ (ಒಟ್ಟೋಮನ್) ಸಾಮ್ರಾಜ್ಯ 'ಖಿಲಾಫತ್' ವಿಘಟನೆಗೊಂಡು ಅದರ ಖಲೀಫ ಪದಚ್ಯುತನಾಗಿ ಅದರ ಹೃದಯಸ್ಥಾನದಲ್ಲಿದ್ದ ತುರ್ಕಿಸ್ತಾನ ಮುಸ್ತಫಾ ಕೆಮಾಲ್ ಅತಾತುರ್ಕನೆಂಬ ಸೆಕ್ಯುಲರ್ ಸುಧಾರಣಾವಾದಿಯ ಪ್ರಯತ್ನಗಳಿಂದ ಆಗ ಇಸ್ಲಾಮಿಕ್ ಜಗತ್ತಿನ ಏಕೈಕ ಉದಾರವಾದಿ ಪ್ರಜಾಸತ್ತಾತ್ಮಕ ದೇಶವೆನಿಸಿದ್ದುದು, ಈಗ ಥಾಯಿಪ್ ಎರ್ಡೋಗನ್ ಎಂಬ ಸರ್ವಾಧಿಕಾರಿಯ ಆಡಳಿತಕ್ಕೆ ಸಿಲುಕಿ ಏನಾಗಿದೆ ನೋಡಿ!

ಪಶ್ಚಿಮದ ನಾಗರೀಕತೆಯೊಂದಿಗೆ ಇಸ್ಲಾಂನ ಐತಿಹಾಸಿಕ ಸಂಘರ್ಷ

ಹಾಗೆ ನೋಡಿದರೆ ತನ್ನ ಪ್ರಾಚೀನ ಇತಿಹಾಸದಲ್ಲಿ ಗಣಿತ, ಖಗೋಳಶಾಸ್ತ್ರ ಮತ್ತು ವಾಸ್ತುಶಿಲ್ಪ ಕ್ಷೇತ್ರಗಲ್ಲಿ ಜಾಗತಿಕ ಮಾನ್ಯತೆಯ ಸಾಧನೆಗಳನ್ನು ಮಾಡಿದ್ದ ಇಸ್ಲಾಂ, ತನ್ನ ಆಧುನಿಕ ಇತಿಹಾಸದುದ್ದಕ್ಕೂ ಪಶ್ಚಿಮದ ನಾಗರೀಕತೆಯನ್ನು 'ಸೈತಾನಿ' ನಾಗರೀಕತೆಯೆಂದು ಕರೆಯುತ್ತಾ ಅದರ ಎಲ್ಲ ಉತ್ಪನ್ನಗಳನ್ನೂ ವಿರೋಧಿಸುತ್ತಾ ಬಂದಿದೆ. ಅದು, ಸಮುದಾಯ ಮತ್ತು ಕುಟುಂಬ ವ್ಯವಸ್ಥೆಗಳನ್ನು ನಾಶ ಮಾಡುವಂತಹ ಭೌತಿಕ ಸಂಶೋಧನೆಗಳು ಮತ್ತು ಸಿದ್ಧಾಂತಗಳ ಮೂಲಕ ವ್ಯಕ್ತಿ ಸ್ವಾತಂತ್ರ್ಯವನ್ನು ಒಂದು ಪರಮ ಮೌಲ್ಯವನ್ನಾಗಿ ಎತ್ತಿಹಿಡಿಯುವುದೆಂಬುದೇ ಇದಕ್ಕೆ ಕಾರಣವಾಗಿದೆ. ಹಾಗಾಗಿ ಇದಕ್ಕೂ ಪಶ್ಚಿಮದ ನಾಗರೀಕತೆಯ ಮೂಲ ಮಾತೃಕೆಯಾದ ಕ್ರಿಶ್ಚಿಯನ್ ಧರ್ಮಕ್ಕೂ ಮಧ್ಯಪ್ರಾಚ್ಯದಿಂದ ಹಿಡಿದು ಯೂರೋಪಿನ ತುತ್ತತುದಿಯವರೆಗೆ ನಡೆದ ಘರ್ಷಣೆ ಇತಿಹಾಸದ ಅತ್ಯಂತ ರಕ್ತಸಿಕ್ತ ಅಧ್ಯಾಯಗಳಲ್ಲೊಂದಾಗಿ ದಾಖಲಾಗಿದೆ. ಸುಧಾರಣಾವಾದಿ ಪ್ರೊಟೆಸ್ಟಂಟ್ ಧರ್ಮದ ಹುಟ್ಟಿಗೆ ಕಾರಣವಾದ ಕ್ರಿಶ್ಚಿಯನ್ ಧರ್ಮದಲ್ಲಾದ ಕ್ರಾಂತಿ ಇಸ್ಲಾಮಿ ಪುರೋಹಿತಶಾಹಿಯಲ್ಲಿ ತಲ್ಲಣ ಹುಟ್ಟಿಸಿ ಅದು ಧರ್ಮ ಗ್ರಂಥಗಳಿಗೆ, ನಿಯಮ ನಿರ್ದೇಶನಗಳಿಗೆ ಅಂಟಿಕೊಳ್ಳುವುದಷ್ಟೇ ಅಲ್ಲದೆ ಅವನ್ನು ಮತ್ತಷ್ಟು ಕಠಿಣ ಮಾಡಲು ಪ್ರೇರೇಪಿಸಿತು.

ಇಸ್ಲಾಂನ ಖಡ್ಗ ಪ್ರಿಯತೆ: ಗಾಂಧಿ ವಿಶ್ಲೇಷಣೆ

ಇಸ್ಲಾಂ ಪಶ್ಚಿಮದ ಪ್ರಭಾವದ ಎದುರು ತಾನು ಮಡಿ ಮಡಿಯಾಗಿ ಉಳಿಯುವ ಹಠದಲ್ಲಿ ಕಾಲಕ್ಕೆ ತಕ್ಕ ಸುಧಾರಣೆಗಳನ್ನು ನಿರಾಕರಿಸುತ್ತಾ ಬಂದು ಒಂದು ಮುಚ್ಚಿಕೊಂಡ ಧರ್ಮವೆನಿಸಿಕೊಂಡುಬಿಟ್ಟಿದೆ. ಇದರ ಪರಿಣಾಮವೆಂದರೆ ಬಹುತೇಕ ಇಸ್ಲಾಮಿ ದೇಶಗಳು ತೈಲ ಮತ್ತು ಅನಿಲ ಸಮೃದ್ಧಿಯಿಂದ ಸಿರಿವಂತ ದೇಶಗಳಾದರೂ, ಅಲ್ಲಿ

ಪುರುಷ ಪಾರಮ್ಯದ ಪ್ರಬಲ ಪುರೋಹಿತಶಾಹಿ ಹಿಡಿತದಲ್ಲಿರುವ ಧರ್ಮವೇ ಅಲ್ಲಿನ ರಾಜಕಾರಣವನ್ನು ನಿರ್ದೇಶಿಸುತ್ತಿದೆ. ಜಾಗತಿಕ ಇಸ್ಲಾಮಿಕ್ ಸಾಮ್ರಾಜ್ಯದ ಕನಸನ್ನು ಹುಟ್ಟು ಹಾಕಿದೆ. ಅದು ಮೊದಲಿಂದಲೂ ಆಧ್ಯಾತ್ಮಿಕತೆಗಿಂತ ಹೆಚ್ಚಾಗಿ ಸಾಮಾಜಿಕ-ರಾಜಕೀಯ ಧರ್ಮವಾಗಿ 'ಖಡ್ಗ'ಕ್ಕೆ ಪ್ರಾಧಾನ್ಯ ನೀಡಿದ ಧರ್ಮವೆಂದೇ ಹೆಸರಾಗಿದೆ. ಭಾರತದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲೂ-ವಿಶೇಷವಾಗಿ ಖಿಲಾಫತ್ ಚಳುವಳಿ ಮತ್ತು ಮಾಪಿಳ್ಳೆ ದಂಗೆಯ ಸಂದರ್ಭಗಳಲ್ಲಿ ಈ ಖಡ್ಗ ಪ್ರಾಧಾನ್ಯತೆಯು ಚರ್ಚೆಗೆ ಬಂದು ಮಹಾತ್ಮ ಗಾಂಧಿಯವರ ಉದಾರ ನಿಲುವುಗಳ ಹೊರತಾಗಿಯೂ ಅದು ದೇಶ ರಕ್ತಸಿಕ್ತ ವಿಭಜನೆಯತ್ತ ಹೊರಳಲು ಒಂದು ಪ್ರಬಲ ಕಾರಣವಾಯಿತು. ಇಸ್ಲಾಂನಲ್ಲಿ, ಭಾರತದ ಭಕ್ತಿ ಚಳುವಳಿಯ ಸಂಸರ್ಗದಿಂದ 'ಸೂಫಿ' ಎಂಬ ಭಕ್ತಿ ಪಂಥ ರೂಪಿತವಾದರೂ, ಸಾಂಪ್ರದಾಯಿಕ (ವಹಾಬಿ) ಇಸ್ಲಾಂ ಅದನ್ನು ಅಮಾನ್ಯ ಮಾಡುವ ಸತತ ಪ್ರಯತ್ನಗಳನ್ನು ಮಾಡುತ್ತಾ ಬಂದಿದೆ. ಇನ್ನು ಸುನ್ನಿ ಬಹುಸಂಖ್ಯಾತರ ದೇಶಗಳಲ್ಲಿ ಅವರು ಮತ್ತು ಶಿಯಾಗಳ ನಡುವೆ ಮತ್ತು ಶಿಯಾ ಬಹುಸಂಖ್ಯಾತರ ದೇಶಗಳಲ್ಲಿ ಅವರು ಮತ್ತು ಸುನ್ನಿಗಳ ನಡುವಣ ಸಂಬಂಧದಲ್ಲಿ 'ಖಡ್ಗ'ವೇ ಪ್ರಧಾನವಾಗಿರುವುದನ್ನು ನಾವು ಈ ಆಧುನಿಕ ಜಗತ್ತಿನಲ್ಲೂ ಕಾಣುತ್ತಿದ್ದೇವೆ. ಗಡಿನಾಡ ಗಾಂಧಿ ಎಂದೇ ಹೆಸರಾಗಿದ್ದ ಖಾನ್ ಅಬ್ದುಲ್ ಗಫಾರ್ ಖಾನರ ವಾಯುವ್ಯ ಗಡಿ ಪ್ರಾಂತ್ಯ ಈಗ ಹೇಗೆ ಬಂದೂಕುಗಳ ನಾಡಾಗಿದೆ ಎಂಬುದು ಇಸ್ಲಾಂನಲ್ಲಿ ಅಂತರ್ಗತವಾಗಿರುವಂತೆ ತೋರುವ ಈ 'ಖಡ್ಗಪ್ರಿಯತೆ'ಯ ಬಗ್ಗೆ ಎಲ್ಲವನ್ನೂ ಹೇಳುವಂತಿದೆ. ಆದರೆ ಖಿಲಾಫತ್ ಚಳುವಳಿಯ ಸಂದರ್ಭದಲ್ಲಿ ಗಾಂಧಿಯವರು ವಿಶ್ಲೇಷಿಸಿದಂತೆ ಅದು ಪೈಗಂಬರರ ಮೂಲ ಉಪದೇಶಗಳ ಭಾಗವಾಗಿರದೆ, ಆ ಧರ್ಮ ಬೆಳೆದ ಸನ್ನಿವೇಶಗಳಲ್ಲಿ ಪಡೆದ ಗುಣವಾಗಿರಬಹುದು. ಹಾಗಾಗಿಯೇ ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅಸಂಖ್ಯಾತ ಮುಸ್ಲಿಮರು ಗಾಂಧಿಯವರ ಅಹಿಂಸಾತ್ಮಕ ಹೋರಾಟದ ಭಾಗವಾಗಲು ಸಾಧ್ಯವಾಯಿತು. ಆದರೆ ಈಗ ಇಸ್ಲಾಂ, ಮೇಲೆ ತಿಳಿಸಿದಂತೆ ಒಂದು ಜಾಗತಿಕ ರಾಜಕೀಯ ಶಕ್ತಿಯಾಗಿ ಬೆಳೆದು ನಿಂತಿದ್ದು ಅದು ಖಡ್ಗ ಪ್ರಿಯತೆಗೆ ವಾಪಸಾದಂತಿದೆ. ಐ.ಎಸ್.(ಇಸ್ಲಾಮಿಕ್ ಸ್ಟೇಟ್) ಎಂಬ ಸಂಘಟನೆ ಜಾಗತಿಕ ಇಸ್ಲಾಮಿ ಸಾಮ್ರಾಜ್ಯ ಸ್ಥಾಪಿಸುವ ಘೋಷಣೆಯೊಂದಿಗೆ ನಡೆಸುತ್ತಿರುವ ಬರ್ಬರ ಹಿಂಸಾಚಾರ ಮತ್ತು ಅದಕ್ಕೆ ಜಗತ್ತಿನಾದ್ಯಂತದ ಮುಸ್ಲಿಂ ಯುವಕ-ಯುವತಿಯರಿಂದ ದೊರೆಯುತ್ತಿರುವ ಬೆಂಬಲ ಇದಕ್ಕೆ ಸಾಕ್ಷಿಯಂತಿದೆ. (ಈಗ ಇದರ ಹಾವಳಿ ನಿಯಂತ್ರಣಕ್ಕೆ ಬಂದಂತಿದೆ.)

ಬದಲಾವಣೆ ಒಳಗಿನಿಂದ ಆರಂಭವಾಗಬೇಕು

ಹಾಗಾಗಿ ತಾಲಿಬಾನ್ ಆಡಳಿತದಲ್ಲಿ ಮಾತ್ರವಲ್ಲ, ಬಹುತೇಕ ಇಸ್ಲಾಮಿ ದೇಶಗಳಲ್ಲಿ 'ಪ್ರಜೆ' ಎಂಬ ಆಧುನಿಕ ಪರಿಕಲ್ಪನೆ ಅಸ್ತಿತ್ವದಲ್ಲಿ ಇರಲಾರದು. ಅಲ್ಲಿರುವುದು ಧಾರ್ಮಿಕ ಸದಸ್ಯತ್ವ, ಅಂದರೆ ಆಯಾ ದೇಶಗಳ ಪರಮ ಧರ್ಮಗುರುಗಳು ನಿರೂಪಿಸುವ ಷರಿಯತ್‌ಗೆ ನಿಷ್ಠೆ. ಹಾಗಾಗಿ ಇಂದು ಆಫ್ಘನಿಸ್ತಾನದ ತಾಲಿಬಾನಿಗಳನ್ನು ಶಪಿಸಿ

ಪ್ರಯೋಜನವಿಲ್ಲ. ಅವರೂ ಈಗ ಅಂತಾರಾಷ್ಟ್ರೀಯ ಒತ್ತಡಕ್ಕೆ ಒಳಗಾದಂತೆ ತಮ್ಮ ಸರ್ಕಾರ ಹಿಂದಿನಂತೆ ಕಠಿಣ ನಿರ್ಬಂಧಗಳನ್ನು ಹೇರುವುದಿಲ್ಲ ಎಂದು ತನ್ನ ಪ್ರಜೆಗಳಿಗೆ ಅಭಯ ನೀಡುತ್ತಿದೆ. ಆದರೆ ಅದನ್ನು ಯಾರೂ ನಂಬುತ್ತಿಲ್ಲ. ಆದ್ದರಿಂದ ಇಂದು ಅಗತ್ಯವಾಗಿರುವುದು ತಾಲಿಬಾನಿಗಳಿಗೆ ಜನ್ಮ ನೀಡುವ ಇಸ್ಲಾಂನ ಆವೃತ್ತಿಗಳ ಕುರಿತ ಚರ್ಚೆ, ಮಂಥನ ಮತ್ತು ಪ್ರಜಾಸತ್ತಾತ್ಮಕ ಉದಾರೀಕರಣ. ಆದರೆ ಅದು ಆಯಾ ದೇಶಗಳ ಒಳಗಿನಿಂದಲೇ ಆರಂಭವಾಗಿ ಹೊರಗಿನ ಬೆಂಬಲವನ್ನು ನಿರೀಕ್ಷಿಸಬಹುದೇ ಹೊರತು ಹೊರಗಿನ ಸಹಾನುಭೂತಿಗಳು ಮತ್ತು ಖಂಡನೆಗಳು ಯಾವುದೇ ಪ್ರಯೋಜನಕ್ಕೆ ಬರಲಾರವು.

ನಂತರದ ಟಿಪ್ಪಣಿ : ಆಫ್ಘನಿಸ್ತಾನದ ತಾಲಿಬಾನಿಗಳಲ್ಲೇ (ಮುಖ್ಯವಾಗಿ ಹಕ್ಕಾನಿ ಮತ್ತು ಮುಲ್ಲಾ ಗುಂಪುಗಳ ನಡುವೆ) ವಿಭಿನ್ನ ನಿಲುವುಗಳ ಹಲವು ಗುಂಪುಗಳಿದ್ದು ಈ ಕಾರಣದಿಂದಲೇ ಅಲ್ಲಿ ಒಂದು ನಿಯಮಿತ ಸರ್ಕಾರ ಅಸ್ತಿತ್ವಕ್ಕೆ ಬರಲಾಗಿಲ್ಲ. ಇದೂ ತಾಲಿಬಾನಿಗಳ ಮಧ್ಯೆ ಒಂದು ವಿಚಾರ ಮಂಥನಕ್ಕೆ ಕಾರಣವಾಗಬಹುದೆಂಬ ಅಭಿಪ್ರಾಯವಿದೆ. ಹಾಗೇ ಅಮೆರಿಕಾ ಪ್ರಾಯೋಜಿಸಿದ್ದ ಪ್ರಜಾಸತ್ತಾತ್ಮಕ ಆಡಳಿತದ ಅಡಿಯಲ್ಲಿ ರೂಪುಗೊಂಡ ಮಹಿಳೆಯರೂ ಗಣನೀಯ ಸಂಖ್ಯೆಯಲ್ಲಿರುವ ಮಾನವ ಹಕ್ಕುಗಳ ಗುಂಪುಗಳು ಸಕ್ರಿಯವಾಗಿ (ಈ ಗುಂಪುಗಳು ಈಗಾಗಲೇ ಪ್ರತಿಭಟನೆಗಳನ್ನು ನಡೆಸಿರುವ ಸುದ್ದಿಗಳು ಬರುತ್ತಿವೆ.) ತಾಲಿಬಾನಿ ಆಡಳಿತವನ್ನು ಮೃದುಗೊಳಿಸುವ ಮೂಲಕ ಅದು ನಂಬಿರುವ ಇಸ್ಲಾಂನ ಆವೃತ್ತಿಯನ್ನೂ ಪ್ರಭಾವಿತಗೊಳಿಸಬಹುದು ಎಂಬ ನಿರೀಕ್ಷೆಯೂ ಇದೆ.

('ಹೊಸ ಮನುಷ್ಯ'ದ ಅಕ್ಟೋಬರ್, ೨೦೨೧ರ ಸಂಚಿಕೆಯಲ್ಲಿ ಪ್ರಕಟ)

'ಸಂವಾದ' ಕೇಳಿದ ಎಂಟು ಪ್ರಶ್ನೆಗಳಿಗೆ ಉತ್ತರಗಳು

ಮೊದಲು ನಾವು ಈ ಪ್ರಗತಿಪರ ಅಥವಾ ಎಡಪಂಥೀಯ ಎಂಬ ಸಮವಸ್ತ್ರವನ್ನು ಕಿತ್ತೊಗೆಯಬೇಕು. ಅವು ಕೊಳಕಾಗಿ ಹರಿದು ಹೋಗಿವೆ ಎಂಬುದದನ್ನು ನಾವು ಒಪ್ಪಿಕೊಳ್ಳುವಂತಾಗಬೇಕು. ಆಗ ಇಂದಿನ ವಾಸ್ತವವನ್ನು ಅದಿದ್ದಂತೆ ನೋಡುವ ನೋಟ ಪ್ರಾಪ್ತವಾಗುತ್ತದೆ. ಬೌದ್ಧಿಕ ಮಾಯಾ ಭಾಷೆಯನ್ನು ತೊರೆದು ಜನರ ಜೊತೆ ಜನರ ಭಾಷೆಯಲ್ಲಿ ಮಾತನಾಡುತ್ತಾ ಜನರ ಜೊತೆ ಹೆಜ್ಜೆ ಹಾಕಲು ಸಾಧ್ಯವಾಗುತ್ತದೆ. ಸಮಾಜವಾದವೂ ಈ ಅಗ್ನಿದಿವ್ಯವನ್ನು ಹಾದುಹೋದರೆ ಮಾತ್ರ ಅದಕ್ಕೆ ಉಳಿವು. ಲೋಹಿಯಾ ಈ ಪ್ರಯತ್ನ ಮಾಡಿದರಾದರೂ ಅವರು ಸದ್ಯದ ರಾಜಕಾರಣಕ್ಕೇ ಹೆಚ್ಚು ಮನಸ್ಸು ಕೊಡಬೇಕಾದ ಅನಿವಾರ್ಯತೆಗೆ ಸಿಕ್ಕಿದ್ದರಿಂದ ಅದು ಅರೆಬರೆಯಾಗಿಯೇ ಉಳಿಯಿತು.?

೧. ಸ್ವಾತಂತ್ರ್ಯ ಪೂರ್ವ ಕಾಲದ ನಮ್ಮ ಹೋರಾಟಗಳು, ಆಶೋತ್ತರಗಳು, ಸ್ವಾತಂತ್ರ್ಯ ನಂತರದ ನಮ್ಮ ಸಂಘರ್ಷ, ನಿರೀಕ್ಷೆಗಳು, ಈ ಹೊತ್ತಿನ ವಾಸ್ತವತೆಯಲ್ಲಿ ಕಳೆದು ಹೋಗುತ್ತಿವೆ ಎಂಬ ತಲ್ಲಣ ಬಹುತೇಕರಲ್ಲಿ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಕನಸಿನ ಭಾರತದ ನಿರ್ಮಾಣಕ್ಕೆ ನಮ್ಮ ಚಿಂತನೆಗಳನ್ನು ವಸ್ತುಸ್ಥಿತಿಯ ಒರೆಗಲ್ಲಿಗೆ ಹಚ್ಚಿ ಪುನರ್ ನಿರೂಪಿಸಿಕೊಳ್ಳುವ ಅಗತ್ಯ ಕಾಣುತ್ತಿಲ್ಲವೇ?

ಪ್ರತಿ ಕಾಲಘಟ್ಟವೂ ತನ್ನ ಕಣ್ಣೋಟ ಮತ್ತು ಅಗತ್ಯಗಳಿಗೆ ತಕ್ಕಂತೆ ತನ್ನ ಆಶೋತ್ತರಗಳನ್ನು ರೂಪಿಸಿಕೊಳ್ಳುತ್ತದೆ. ಅವು ಸಹಜವಾಗಿ ಕೆಲವು ಚಿರಂತನ ಮೌಲ್ಯಗಳನ್ನೂ ಆಧರಿಸಿರುತ್ತವೆ. ಸಾಮಾನ್ಯವಾಗಿ ಈ ಚಿರಂತನ ಮೌಲ್ಯಗಳಿಗೆ ಧಕ್ಕೆಯಾಗದಂತೆ ವಿವಿಧ ಕಾಲಘಟ್ಟಗಳಲ್ಲಿ ಜನರ ಆಶೋತ್ತರಗಳು ಬದಲಾಗುವುದು ಸಹಜ. ಹಾಗಾಗಿ 'ನಮ್ಮ ಕನಸಿನ ಭಾರತ' ಎಂಬುದರಲ್ಲಿ 'ನಮ್ಮ' ಎನ್ನುವುದು ಸದಾ ಬದಲಾಗುತ್ತಿರುವ ಸಂಗತಿ ಎಂಬುದನ್ನು ಗಮನಿಸಿ ನಾವು ನೀವು ಹೇಳುವ

ಪುನರ್‌ನಿರೂಪಣೆಯ ಕೆಲಸಕ್ಕೆ ಕೈ ಹಚ್ಚಬೇಕು. ಈ ಕೆಲಸವ ಸದ್ಯದ ತೊಂದರೆ ಎಂದರೆ ಸ್ವಾತಂತ್ರ್ಯಪೂರ್ವ ಅಥವಾ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಪ್ರಚಲಿತವಿದ್ದ ಚಿರಂತನ ಮೌಲ್ಯಗಳ ಬಗ್ಗೆಯೇ ಇಂದು ಅಪನಂಬಿಕೆ ಶುರುವಾಗಿದೆ ಎಂಬುದು. ಉದಾ: ಅಹಿಂಸೆ, ಸಹಿಷ್ಣುತೆ, ಮಿತಿ ಹಾಕಿಕೊಂಡ ಸರಳ ಜೀವನ ಇತ್ಯಾದಿ. ಅಂದರೆ ಇದು ಮೌಲ್ಯ ಪಲ್ಲಟಗಳ ಕಾಲ. ಹಾಗಾಗಿ ಪುನರ್‌ನಿರೂಪಣೆಯ ಕೆಲಸ ಈ ವಿದ್ಯಮಾನದ ಒತ್ತಡಗಳನ್ನು ಗಣನೆಗೆ ತೆಗೆದುಕೊಂಡು ನಡೆಯಬೇಕು.

ಇನ್ನು ಈ ಒತ್ತಡಗಳನ್ನು ಸ್ಥೂಲವಾಗಿ ಹೀಗೆ ಸೂಚಿಸಬಹುದು: ಈ ಮೌಲ್ಯಗಳ ಪರಂಪರೆಯನ್ನು ಕಾಪಾಡಿಕೊಂಡು ಬರಬೇಕಾಗಿದ್ದ (ಅಂದರೆ ಯಾವ ಮೌಲ್ಯಗಳ ಹೆಸರಿನಲ್ಲಿ ಅಧಿಕಾರ ಮತ್ತು ಅದರ ಪರಿಣಾಮಗಳ ಪ್ರಯೋಜನಗಳನ್ನು ಪಡೆದವರೋ ಆ ತಲೆಮಾರುಗಳೇ ಕಾಲಕ್ರಮದಲ್ಲಿ ದಾರಿ ತಪ್ಪಿ, ಕಾಲಕ್ಕೆ ತಕ್ಕಂತೆ ಹೆಜ್ಜೆ ಹಾಕುವ ವ್ಯಾವಹಾರಿಕ (ಇದೇ ಆಧುನಿಕತೆ ಎಂಬ ಶಬ್ದದ ಮೂಲಾರ್ಥ) ಮಾರ್ಗ ಹಿಡಿದು ಈ ಮೌಲ್ಯಗಳಿಗೆ ದ್ರೋಹ ಬಗೆದದ್ದು. ಹಾಗಾಗಿ ನೀವು ಉಲ್ಲೇಖಿಸುವ ಕನಸಿನ ಭಾರತದ ಬಗ್ಗೆ ಈಗ ಹಳಹಳಿಸಿ ಪ್ರಯೋಜನವಿಲ್ಲ. ಹಾಗೆ ನೋಡಿದರೆ ಜೆ.ಹೆಚ್ ಪಟೇಲರು ಹೇಳುತ್ತಿದ್ದ 'ನಮ್ಮದೇನಿದ್ದರೂ ಪೂರ್ವಕ್ಕೆ ಮುಖ: ಪಶ್ಚಿಮಕ್ಕೆ ಪಯಣ'ವಾಗಿ ನಮ್ಮ ಕನಸಿನ ಭಾರತ ನಿಜವಾಗಿ ಯಾವುದೆಂಬುದು ನಮಗೇ ಸ್ಪಷ್ಟತೆ ಇಲ್ಲದಾಗಿದೆ. ಆ ಸ್ಪಷ್ಟತೆ ಇಲ್ಲದ ಪುನರ್‌ವ್ಯಾಖ್ಯಾನ ಇತ್ಯಾದಿಗಳೆಲ್ಲ ಕೇವಲ ಬೌದ್ಧಿಕ ಕಸರತ್ತುಗಳು ಮಾತ್ರ ಆಗಬಲ್ಲವು.

೨. ಭಾರತ ಅಳವಡಿಸಿಕೊಂಡ ಸಮಾಜವಾದಿ ರಾಷ್ಟ್ರದ ತಾತ್ವಿಕ ಬುನಾದಿಯು ಆಧುನಿಕ, ಪಾಶ್ಚಾತ್ಯ ಚಿಂತನೆಯ ಮೂಲದಲ್ಲಿದೆ; ಇದು ಎಲ್ಲಾ ಸಮಸ್ಯೆಗಳ ಮೂಲ ಎನ್ನುವ ವಾದಗಳನ್ನು ಮುಂದಿಡಲಾಗುತ್ತಿದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಸಮಾಜವಾದಿ ಚಿಂತನೆಯ ಒಬ್ಬ ದೀರ್ಘಕಾಲಿಕ ವಿದ್ಯಾರ್ಥಿಯಾಗಿ ಇತ್ತೀಚೆಗೆ ನನಗೆ ಅನಿಸುತ್ತಿರುವುದೇನೆಂದರೆ, ನಾವು ಚರಿತ್ರೆಯನ್ನು ಅರ್ಥೈಸಿಕೊಳ್ಳುವ ದಾರಿಯಲ್ಲಿ ನಮ್ಮ ಮನಸ್ಸುಗಳನ್ನು ಎಡ-ಬಲ ಅಥವಾ ಪ್ರಗತಿಪರ-ಯಥಾಸ್ಥಿತಿವಾದ ಎಂದು ಬಹಳ 'ವೈಜ್ಞಾನಿಕ'ವಾಗಿ ಒಡೆದುಕೊಂಡು ಇಂದು ದಿಕ್ಕೆಟ್ಟ-ಭಾಷೆ ಕಳೆದುಕೊಂಡ-ಸ್ಥಿತಿಯಲ್ಲಿದ್ದೇವೆ. ಪಶ್ಚಿಮದ ಆಧುನಿಕ ಚಿಂತನೆಯು ಚರಿತ್ರೆಯನ್ನು ನೋಡುವ, ಕಟ್ಟುವ ದೃಷ್ಟಿಯಲ್ಲೇ ಮೂಲಭೂತ ದೋಷವಿದ್ದಂತಿದೆ. ಮುಖ್ಯವಾಗಿ ಚರಿತ್ರೆ ಎಂದರೆ ವಿರೋಧಾಭಾಸಗಳ ಸಂಘರ್ಷಮಯ ಅನುಸಂಧಾನ ಅಥವಾ ಗತಿತಾರ್ಕಿಕತೆ ಎಂಬ ನೋಟ ಸಮಸ್ಯಾತ್ಮಕವಾದದ್ದು. ಇದು ಕಾಲವನ್ನು ಭೌತಿಕ ಅಳತೆಗೋಲಿನಲ್ಲಿ ವಿಂಗಡಿಸಿ, ಹಿಂದಿನದೆಲ್ಲವೂ ಕಳೆದುಹೋಗಲರ್ಹವಾದದ್ದು, ತಿರಸ್ಕಾರಾರ್ಹವಾದದ್ದು, ತ್ಯಾಜ್ಯ ಎಂಬ ತಾತ್ವಿಕ ತಳಹದಿಯ ಮೇಲೆ ನಿಂತದ್ದು. ಇದರಿಂದಾಗಿ ಚರಿತ್ರೆ ಯಾವಾಗಲೂ ಶುಭದತ್ತಲೇ ಚಲಿಸುತ್ತದೆ ಎಂಬ 'ಪ್ರಗತಿಶೀಲ' ನಂಬಿಕೆಗೆ ನಾವು ಬಲಿಯಾಗಿ ಒಂದು ಸಾಂಸ್ಕೃತಿಕ ನಿರಂತರತೆಯನ್ನು ಕಳೆದುಕೊಂಡಿದ್ದೇವೆ. ನಾವು

ಪ್ರಗತಿಪರರು ಅಥವಾ ಎಡಪಂಥೀಯರೆನಿಸಿಕೊಂಡವರು ಎದುರಿಸುತ್ತಿರುವ ಬಿಕ್ಕಟ್ಟಿನ ಮೂಲ ಇದೇ ಎಂದು ನನಗನ್ನಿಸಿದೆ. ಉದಾಹರಣೆಗೆ ನಾವು ಇಂದು ಮಾತನಾಡುವ (ಆರ್ಥಿಕ) ಶೋಷಣೆ ಮತ್ತು (ಸಾಮಾಜಿಕ) ಶ್ರೇಣೀಕರಣ ಎಂಬ ಸಂಗತಿಗಳನ್ನು ನಮ್ಮ ಭೂತಕಾಲಕ್ಕೆ ಜೋಡಿಸಿ ನೀಡುತ್ತಿರುವ ಅರ್ಥ ನಾವು ಚರಿತ್ರೆಯನ್ನು ನೋಡುವ, ಮೇಲೆ ಸೂಚಿಸಿದ ಮೂಲಭೂತ ದೋಷಪೂರ್ಣ ನೋಟಕ್ಕೆ ಅತ್ಯುತ್ತಮ ಉದಾಹರಣೆಗಳು. ಮುಖ್ಯವಾಗಿ ಹಿಂದೂ ಧರ್ಮ ಮತ್ತು ಜಾತಿ ಪದ್ಧತಿ ಕುರಿತಂತೆ ನಾವು ಕಟ್ಟಿಕೊಂಡ ಸಂಕಥನಗಳು ತುಂಬ ಸರಳೀಕೃತ ಮತ್ತು ಸಮಸ್ಯಾತ್ಮಕವಾದವುಗಳು ಎಂದು ನಾನು ಭಾವಿಸಿದ್ದೇನೆ. ಇವೇ ನಮ್ಮನ್ನು ಜನರ ಮನಸ್ಸಿನ ಗರ್ಭಗುಡಿಯಿಂದ ದೂರವಿಟ್ಟದ್ದೂ ಎಂದು ನನಗೆನ್ನಿಸುತ್ತಿದೆ. ಕಾಲದ ಪರಿಪ್ರೇಕ್ಷ್ಯಗಳನ್ನೇ ಪರಿಗಣಿಸದೆ ಶಬ್ದಗಳಿಗೆ ಕಲಿತ (ಪರ)ಭಾಷೆಯ ನಿಘಂಟಿನ ಅರ್ಥ ಹಚ್ಚತೊಡಗುವುದು ಮತ್ತು ಅದರ ಮೇಲೆ ರಾಜಕಾರಣವನ್ನು ಕಟ್ಟತೊಡಗುವುದು ಒಂದು ಅನಾಹುತಕಾರಿ, ಅಚಾರಿತ್ರಿಕ ನಡೆಯೇ ಹೌದು. ಅದರ ಫಲವನ್ನು ನಾವಿಂದು ಉಣ್ಣುತ್ತಿದ್ದೇವೆ. ಅದೇನೆಂದು ಸ್ಪಷ್ಟವಾಗಿ ಹೇಳುವ ಅಗತ್ಯವಿಲ್ಲದಷ್ಟು ಅದು ಸಮಕಾಲೀನ ರಾಜಕೀಯ ಪರಿದೃಶ್ಯದಲ್ಲಿ ಎದ್ದು ಕಾಣುತ್ತಿದೆ.

ಮೊದಲು ನಾವು ಈ ಪ್ರಗತಿಪರ ಅಥವಾ ಎಡಪಂಥೀಯ ಎಂಬ ಸಮವಸ್ತ್ರವನ್ನು ಕಿತ್ತೊಗೆಯಬೇಕು. ಅವು ಕೊಳಕಾಗಿ ಹರಿದುಹೋಗಿವೆ ಎಂಬುದನ್ನು ನಾವು ಒಪ್ಪಿಕೊಳ್ಳುವಂತಾಗಬೇಕು. ಆಗ ಇಂದಿನ ವಾಸ್ತವವನ್ನು ಅದಿದ್ದಂತೆ ನೋಡುವ ನೋಟ ಪ್ರಾಪ್ತವಾಗುತ್ತದೆ. ಬೌದ್ಧಿಕ ಮಾಯಾ ಭಾಷೆಯನ್ನು ತೊರೆದು ಜನರ ಜೊತೆ ಜನರ ಭಾಷೆಯಲ್ಲಿ ಮಾತನಾಡುತ್ತಾ ಜನರ ಜೊತೆ ಹೆಜ್ಜೆ ಹಾಕಲು ಸಾಧ್ಯವಾಗುತ್ತದೆ. ಸಮಾಜವಾದವೂ ಈ ಅಗ್ನಿ ದಿವ್ಯವನ್ನು ಹಾದುಹೋದರೆ ಮಾತ್ರ ಅದಕ್ಕೆ ಉಳಿವು. ಲೋಹಿಯಾ ಈ ಪ್ರಯತ್ನ ಮಾಡಿದರಾದರೂ ಅವರು ಸದ್ಯದ ರಾಜಕಾರಣಕ್ಕೇ ಹೆಚ್ಚು ಮನಸ್ಸು ಕೊಡಬೇಕಾದ ಅನಿವಾರ್ಯತೆಗೆ ಸಿಕ್ಕಿದ್ದರಿಂದ ಅದು ಅರೆಬರೆಯಾಗಿಯೇ ಉಳಿಯಿತು.?

೩. ಸಂಘ ಪರಿವಾರದ ಹಿಂದೂ ರಾಷ್ಟ್ರದ ನಿರ್ಮಾಣ ಮತ್ತು ದೇಶಪ್ರೇಮದ ಎರಡೇ ಅಜೆಂಡಾಗಳು ಬಿಜೆಪಿಗೆ ಅಭೂತಪೂರ್ವ ಗೆಲುವನ್ನು ತಂದುಕೊಟ್ಟವೇ? ಇಲ್ಲ, ಇನ್ನೂ ಸಂಕೀರ್ಣವಾದ ಬೇರೆ ವಿಷಯಗಳು ಇಲ್ಲಿ ಕೆಲಸ ಮಾಡಿವೆಯೇ? ಈ ಹಿನ್ನೆಲೆಯಲ್ಲಿ ಭಾರತದ ಜನರ ನಿರೀಕ್ಷೆಗಳನ್ನು ಹೇಗೆ ಅರ್ಥಮಾಡಿಕೊಳ್ಳಬೇಕು?

ನನ್ನ ದೃಷ್ಟಿಯಲ್ಲಿ ಬಿಜೆಪಿ ಹೊರನೋಟಕ್ಕೆ ಮಾತ್ರ ಒಂದು ರಾಜಕೀಯ ಪಕ್ಷ. ಆದರೆ ಮುಖ್ಯವಾಗಿ ಅದೊಂದು–ಬಹು ರೂಕ್ಷವಾದದ್ದಾದರೂ–ಖಚಿತ ಜೀವನ ದೃಷ್ಟಿಕೋನ. ಅದು ನಿಜವಾದ ಅರ್ಥದಲ್ಲಿ ಹಿಂದೂ ಧರ್ಮಕ್ಕೆ ಸಂಬಂಧಪಟ್ಟದ್ದಲ್ಲ. ಏಕೆಂದರೆ ಹಿಂದೂ ಧರ್ಮ ಚಾರಿತ್ರಿಕವಾಗಿ ಎಷ್ಟು ಚಲನಶೀಲವಾದದ್ದೆಂದರೆ ಅದು ಪ್ರತಿ ಕಾಲಘಟ್ಟದಲ್ಲೂ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಾ ಹೋಗುತ್ತಿರುವುದರಿಂದ ಅದು ರಾಜಕೀಯ ಮಾಡಬಯಸುವವರ ಅಳವಿಗೆ ಸಿಗುವಷ್ಟು ಸರಳವಾದದ್ದಲ್ಲ. ಮುಖ್ಯವಾಗಿ ಅದು, ತಿಲಕರ

ನಂತರ ಸ್ವಾತಂತ್ರ್ಯ ಹೋರಾಟದ ಅರ್ಥ ಮತ್ತು ದಿಕ್ಕುದೆಸೆಗಳನ್ನು ನಿರ್ಣಾಯಕವಾಗಿ ಬದಲಿಸಿದ ಗಾಂಧಿ ಈ ದೇಶದ ಜನ ಯೋಚಿಸುವ ಕ್ರಮವನ್ನೇ ಬದಲಿಸುವಂತೆ ಮಾಡಿದ್ದರ ವಿರುದ್ಧ ಆರಂಭವಾದ ದೊಡ್ಡದೊಂದು ವ್ಯವಸ್ಥಿತ ಪಿತೂರಿಯ ಸಫಲತೆಯ ಪರಿಣಾಮರೂಪ. ಗಾಂಧಿ ಕೊಲೆ ಅದರ ಆರಂಭದ ಹೆಜ್ಜೆಯಷ್ಟೆ.

ಆದುದರಿಂದ ನಾವು ಸಂಘ ಪರಿವಾರದ ಕಾರ್ಯಾಚರಣೆಯನ್ನು ಬರಿ ಹಿಂದೂ ಧರ್ಮ ಮತ್ತು ದೇಶ ಭಕ್ತಿಯ ಪದಗಳ ಮೂಲಕ ಅರ್ಥೈಸಿಕೊಳ್ಳಹೊರಡುವುದು ಶೈಕ್ಷಣಿಕ ಸೋಮಾರಿತನ ಮಾತ್ರವೆನಿಸಿಕೊಳ್ಳುತ್ತದೆ. ಹಿಂದೂ ಧರ್ಮ ಮತ್ತು ದೇಶಭಕ್ತಿ ಎಂಬುವು ಗಾಂಧಿ ರಾಜಕಾರಣದಿಂದಾಗಿ ಕಳೆದುಹೋಗುತಿದ್ದ ತಮ್ಮ ನಂಬಿಕೆಗಳ ಭಾರತವನ್ನು ಎತ್ತಿ ನಿಲ್ಲಿಸಲು ಅವರು ಬಳಸುತ್ತಿರುವ ಎರಡು ಸನ್ನೆಗೋಲುಗಳಷ್ಟೆ. ಹಾಗಾಗಿಯೇ ಅವರ ಹಿಂದೂಧರ್ಮ ತನ್ನ ನಿರಾಕಾರ ನಿರಂಜನತೆಯನ್ನು ಕಳೆದುಕೊಂಡು ಚೂಪಾದ ಪಶ್ಚಿಮ ಏಷ್ಯೀಕೃತ (ಒಕ್ಕೊರಲಿನ ಏಕದೇವ ಏಕಗ್ರಂಥವಾದಿ ಕ್ರಿಶ್ಚಿಯನ್-ಇಸ್ಲಾಮಿ) ರೂಪವನ್ನೂ, ದೇಶಭಕ್ತಿ ಎಂಬುದು ಮಿಲಿಟರಿ ಕೋದಂಡ(ರಾಮ) ಶಕ್ತಿಯ ಜೈಕಾರ ರೂಪವನ್ನೂ ಪಡೆದಿವೆ.

ಜನ ಯಾವಾಗಲೂ ಸಮೂಹವನ್ನು (ಮೂಲತಃ ಅನಿಯಂತ್ರಿತ ಸಮೂಹ ಕುರಿತ ವ್ಯಕ್ತಿಯ ಭಯದಿಂದಾಗಿ) ಒಟ್ಟಿಗೆ ಕರೆದುಕೊಂಡುಹೋಗಬಲ್ಲ ಎಂದು ತನಗೆ ಅನ್ನಿಸಿದ ನಾಯಕನ ಹಿಂದೆ ಹೋಗುತ್ತದೆ. ಹಾಗೆ ಹೋಗುವ ದಾರಿಯೇ ಅವರ ನಿರೀಕ್ಷೆಗಳ ದಾರಿಯೂ ಆಗಿರುತ್ತದೆ. ಹಾಗಾಗಿ ಈಗ ಹೊರಟಿರುವ ದಾರಿ ಅನಾಹುತಕಾರಿಯೆಂದು ಜನರಿಗೆ ಮನದಟ್ಟು ಮಾಡಬಲ್ಲ ಹೊಸ ದಾರಿಯೊಂದರ ಹೊಳಹುಳ್ಳ ನಾಯಕತ್ವ ಮಾತ್ರ ಸದ್ಯದ ಜನ ತಮ್ಮ ನಿರೀಕ್ಷೆಗಳನ್ನು ಮರುಪರಿಶೀಲನೆ ಮಾಡುವಂತೆ ಪ್ರೇರೇಪಿಸಬಲ್ಲುದು. ಇಂತಹ ನಾಯಕತ್ವ ಇಂದು ಮುಖ್ಯವಾಗಿ ಈ ದೇಶ ಮತ್ತು ಈ ದೇಶದ ಬಹುಸಂಖ್ಯಾತರ ಧರ್ಮವಾದ ಹಿಂದೂ ಧರ್ಮಕ್ಕಿರುವ ಸಂಬಂಧವನ್ನು ಅದರ ನಿರಂತರತೆಯನ್ನು ಕಾಪಾಡುತ್ತಿರುವ ಸಾಂಸ್ಕೃತಿಕ ನೆಲೆಯಲ್ಲಿ ಅರಿಯುವ ಪ್ರಯತ್ನ ಮಾಡಬೇಕು. ಗಾಂಧಿ ಇಂತಹ ಒಂದು ಪ್ರಯತ್ನ ಮಾಡಿದರು. ಈ ಪ್ರಯತ್ನದ ಭಾಗವಾಗಿಯೇ ಅವರು ಹಿಂದೂ ಧರ್ಮವನ್ನು ಹೊಸದಾಗಿ ನಿರೂಪಿಸುವ ಪ್ರಯತ್ನವನ್ನೂ ಮಾಡಿದರು. ಅದನ್ನು ಶಾಸ್ತ್ರಗ್ರಂಥಗಳ ವ್ಯಾಪ್ತಿಯಿಂದ ಹೊರತಂದು ಸಾಧು ಸಂತರ ಧರ್ಮವೆಂದು ನಿರೂಪಿಸಿದರು. ಇದರ ಫಲವಾಗಿ ಬೌದ್ಧ, ಜೈನ, ಕ್ರೈಸ್ತ, ಮುಸ್ಲಿಂ ಮತ್ತು ಪಾರ್ಸಿ ಧರ್ಮ(ಸಂವೇದನೆ)ಗಳೂ ಅದರಲ್ಲಿ ಮಿಳಿತಗೊಂಡವು. ಹಾಗೇ ಅವರು ದೇಶವನ್ನು ರಾಷ್ಟ್ರ ಪ್ರಭುತ್ವದ ಕಲ್ಪನೆಯಿಂದ ಬಿಡುಗಡೆಗೊಳಿಸಿ (ಗ್ರಾಮ) 'ಸ್ವರಾಜ್ಯ'ದ ಕಲ್ಪನೆ ನೀಡಿದರು. ಆದರೆ ಇವನ್ನು ಮುಟ್ಟಿ ನೋಡಲೂ, ಅದರ ಶಕ್ತಿ-ದೌರ್ಬಲ್ಯಗಳತ್ತ ಕಣ್ಣು ಹಾಯಿಸಲೂ ಪ್ರಗತಿಪರರು ಬಿಚ್ಚಲೊಲ್ಲದ ತಮ್ಮ ಸಂಪೂರ್ಣ ಭೌತವಾದಿ ಕಣ್ಪಟ್ಟಿಗಳಿಂದಾಗಿ ಸಿದ್ಧವಿಲ್ಲದಾಗ ಇವರು ಜನರ ನಿರೀಕ್ಷೆಗಳನ್ನು ಅರ್ಥ ಮಾಡಿಕೊಳ್ಳುವ ಪ್ರಶ್ನೆಯಾದರೂ ಎಲ್ಲಿ ಬಂತು?

೪. ಹಿಂದೂ ರಾಷ್ಟ್ರದ ಸಿದ್ಧಾಂತಕ್ಕೆ ದೊರೆತಿರುವ ಗೆಲುವಿನ ಸಂದರ್ಭದಲ್ಲಿ ದಮನಕ್ಕೆ ಒಳಗಾಗುತ್ತಿರುವ ಸಮುದಾಯಗಳ ನಡೆ, ನುಡಿ ಮತ್ತು ಭವಿಷ್ಯತ್ತಿನ ಸ್ವರೂಪ ಏನಾಗಬೇಕು?

ಬಿಜೆಪಿಯನ್ನು ಎಡಪಂಥೀಯರು ನೋಡುವ ಬಗೆಯೇ ಬೇರೆ, ಜನಸಾಮಾನ್ಯರು ನೋಡುವ ಬಗೆಯೇ ಬೇರೆ ಎಂಬುದನ್ನು ನಾವು ಆದಷ್ಟು ಬೇಗ ಅರಿತರೆ ಒಳ್ಳೆಯದು. ನಾನು ಮೊದಲೇ ಹೇಳಿದ ಹಾಗೆ ಇದನ್ನು ಹಿಂದೂ ರಾಷ್ಟ್ರ ಸಿದ್ಧಾಂತದ ಗೆಲುವು ಎಂದು ಸರಳವಾಗಿ–ಏಕಾಯಾಮದಲ್ಲಿ–ಅರ್ಥಮಾಡಿಕೊಳ್ಳುವುದೇ ತಪ್ಪು. ಹಾಗಿದ್ದಲ್ಲಿ ರಾಷ್ಟ್ರದ ಮೀಸಲು ಕ್ಷೇತ್ರಗಳ ಮುಕ್ಕಾಲು ಭಾಗ ಅವರ ಪಾಲಾಗುತ್ತಿರಲಿಲ್ಲ. ಇದು, ಸ್ಥೂಲವಾಗಿ ಹೇಳುವುದಾದರೆ ಕಾಂಗ್ರೆಸ್‌ನ ಸರ್ವ ರೀತಿಯ ಅವನತಿಯ ಪರಿಣಾಮ. ಇಲ್ಲಿ ಕಾಂಗ್ರೆಸ್ ಎಂದರೆ ಸ್ವಾತಂತ್ರ್ಯ ಹೋರಾಟದ ವಾರಸುದಾರಿಕೆಯ ಎಲ್ಲ ಪ್ರತಿನಿಧಿಗಳೂ –ಅಂದರೆ ಬಹುತೇಕ ಎಲ್ಲ ಬಿಜೆಪಿಯೇತರ ಪಕ್ಷಗಳು–ಸೇರುತ್ತಾರೆ. (ಹಾಗೆ ನೋಡಿದರ ಬಿಜೆಪಿಯ/ಜನಸಂಘದ ತಾಯಿಯೆನಿಸಿರುವ 'ಹಿಂದೂ ಮಹಾಸಭಾ' ಕಾಂಗ್ರೆಸ್‌ನ ಒಂದು ಟಿಸಿಲೇ.)

೫. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದ ಚರಿತ್ರೆಯಲ್ಲಿ ಸಂಘ ಪರಿವಾರ ಮತ್ತು ದಲಿತರು ಮಹಾತ್ಮ ಗಾಂಧಿಯವರ ಚಿಂತನೆಗಳನ್ನು ತೀವ್ರವಾಗಿ ವಿರೋಧಿಸಿದರು. ಈಗ ಬಲಪಂಥೀಯ ಶಕ್ತಿಗಳಂತೂ ಗಾಂಧಿಯನ್ನು ದಮನ ಮಾಡುವ ಹಠಕ್ಕೆ ಬಿದ್ದಿವೆ. ಪರಸ್ಪರ ವಿರೋಧಿ ನೆಲೆಯಲ್ಲಿರುವ ಈ ಎರಡೂ ಶಕ್ತಿಗಳ ಗಾಂಧೀ ವಿರೋಧವನ್ನು ಹೇಗೆ ಅರ್ಥಮಾಡಿಕೊಳ್ಳುವುದು?

ದಲಿತರು ಗಾಂಧಿಯನ್ನು ವಿರೋಧಿಸಿದರು ಎಂದು ಸಾರಾಸಗಟಾಗಿ ಹೇಳಲಾಗದು. ಎಪ್ಪತ್ತು–ಎಂಬತ್ತರ ದಶಕಗಳಲ್ಲಿ ಅಂಬೇಡ್ಕರ್ ವಿಗ್ರಹ ಪ್ರಭಾವಶಾಲಿಯಾದ ಮೇಲಷ್ಟೆ ಈ ವಿರೋಧ ಎದ್ದು ಕಾಣುವಂಥಾದದ್ದು. ಇದಕ್ಕೆ ಮತ್ತೆ ಕಾರಣ, ಸ್ವತಃ ಅಂಬೇಡ್ಕರ್ ಅವರು, ಚರಿತ್ರೆಯನ್ನು ಓದುವ ತಪ್ಪು ರೀತಿ ಎಂದು ನಾನು ಮೇಲೆ ವಿವರಿಸಿದ ಮಾರ್ಗದ ಅನುಯಾಯಿಯಾಗಿದ್ದದ್ದೇ ಕಾರಣ.

ಇನ್ನು ಸಂಘ ಪರಿವಾರದವರ ಗಾಂಧಿ ಕುರಿತ ನಿಲುವನ್ನು ನಾವು ತುಂಬ ಸರಳೀಕೃತವಾಗಿ, ವಿರೋಧಿ ನಿಲುವು ಎಂದು ಅರ್ಥ ಮಾಡಿಕೊಳ್ಳುವ ತಪ್ಪು ಮಾಡಬಾರದು. ಗಾಂಧಿ ರಾಜಕಾರಣವನ್ನು ಅವರು ಆತ್ಯಂತಿಕವಾಗಿ ವಿರೋಧಿಸಲು ಬಹುಮುಖ್ಯ ಕಾರಣವಾಗಿದ್ದುದು, ಗಾಂಧಿ ತಮ್ಮ ರಾಜಕಾರಣದಲ್ಲಿ ಮುಸ್ಲಿಮರನ್ನು ಒಳಗೊಳ್ಳಲು ಬಹುದೂರ ಹೋಗುತ್ತಿದ್ದರು ಎಂಬ ಕಾರಣದಿಂದಾಗಿ. ಗೋಡ್ಸೆಯ ಪಿಸ್ತೂಲಿನ ಕುದುರೆ ಚಲಿಸಿದ್ದೂ ಆ ದೂರ ಇವರ ಕಲ್ಪನೆಗೆ ಸಿಗದಷ್ಟು ಬೆಳೆದಾಗ. ಆ ದೂರ ಇವರ ಕಲ್ಪನೆಗೆ ಸಿಗದಿರಲು ಕಾರಣ, ಹಿಂದೂ ಧರ್ಮ ಕುರಿತ ಇವರ ಸ್ಥಗಿತ ಕಲ್ಪನೆ. ಅದು ಆ ಹೊತ್ತಿಗಾಗಲೇ ತಿಲಕರ ಹಿಂದೂ ಧರ್ಮದ ಪರಿಧಿಯನ್ನೂ–ಅಂದಿನ ಮುಸ್ಲಿಂ ರಾಜಕಾರಣದ ಪರಿಯಿಂದಾಗಿಯೂ–ಸಂಕುಚಿತಗೊಳಿಸಿಕೊಂಡು ಸಾವರ್ಕರ್ ರೂಪಿಸಿದ್ದ ಗಡಿರೇಖೆಗಳಲ್ಲಿ ಬಂಧಿತವಾಗಿತ್ತು. ಮುಖ್ಯವಾಗಿ ಅದು ಮುಸ್ಲಿಂ

ಧರ್ಮವನ್ನಲ್ಲದಿದ್ದರೂ ಮುಸ್ಲಿಂ ರಾಜಕಾರಣವನ್ನು ಗುರಿಯಾಗಿಟ್ಟುಕೊಂಡಿತ್ತು. ಹಾಗಾಗಿ ಸಂಘಪರಿವಾರದವರ ಗಾಂಧಿ ವಿರೋಧದ ನಿರ್ಣಾಯಕ ಆಧಾರ ಅದರ ಮುಸ್ಲಿಂ ವಿರೋಧ ಎನ್ನಬಹುದು. ಹಾಗಾಗಿಯೇ ಅವರು ಮುಸ್ಲಿಂ ರಾಜಕಾರಣದ ಆತಂಕ ಅಂತ್ಯಗೊಂಡಾದ ನಂತರ ಗಾಂಧಿಯವರನ್ನು ತಮ್ಮ 'ಪ್ರಾತಃಸ್ಮರಣೀಯ'ರ ಪಟ್ಟಿಗೆ ಸೇರಿಸಿಕೊಂಡರು. ಹಾಗೆ ನೋಡಿದರೆ ಈ ನೆಲೆಯ (ರಾಜಕಾರಣದ) ಹೊರತಾಗಿ ಬಿಜೆಪಿಗೂ ಕಾಂಗ್ರೆಸ್‌ಗೂ ಇಂದು ಅಂತಿಮವಾಗಿ ಏನು ವ್ಯತ್ಯಾಸವಿದೆ?

ಈ ದೃಷ್ಟಿಯಿಂದ ನೋಡಿದಾಗ ಬಿಜೆಪಿಯ ಇಂದಿನ ಬಹು ನಿರ್ಣಾಯಕವೆನ್ನಿಸುವ ಗೆಲುವಿಗೆ ಹಿಂದೂ ರಾಷ್ಟ್ರ ಸಿದ್ಧಾಂತ ಕಾರಣವೆನ್ನುವ ಬದಲು ಅದು (ಹಿಂದೂ) ಜನಮಾನಸದಲ್ಲಿ ವಿವಿಧ ರೀತಿಗಳಲ್ಲಿ ಬೆಳೆಸಿದ ಮುಸ್ಲಿಂ ವಿರೋಧವೇ ಕಾರಣವೆಂದು ಹೇಳಬಹುದು. ಅದೇ ಅವರ ಇಂದಿನ ಹಿಂದೂ ರಾಷ್ಟ್ರ ಸಿದ್ಧಾಂತದ ಮೂಲ ಸ್ಫೂರ್ತಿಯೂ ಆಗಿದ್ದಂತೆ ಕಾಣುತ್ತದೆ. ಅದೇನೇ ಇರಲಿ, ಇದು ಇಷ್ಟು ನಿರ್ಣಾಯಕವಾಗಿ ಹೇಗೆ ಸಾಧ್ಯವಾಯಿತು ಎಂಬ ಪರಿಶೀಲನೆಯಲ್ಲಿ, ಇದರಲ್ಲಿ ಮುಸ್ಲಿಮರ–ಅವರ ನಾಯಕತ್ವದ–ಪಾತ್ರವೂ ಇರಬಹುದೇ ಎಂಬ ಪ್ರಶ್ನೆಯನ್ನು ಕೇಳುವ ರಾಜಕೀಯ ಧೈರ್ಯ ವಹಿಸುವ ಕಾಲ ಈಗ ಎಡಪಂಥೀಯರಿಗೆ ಬಂದಿದೆ ಎನಿಸುತ್ತದೆ.

ಒಮ್ಮೆ ಈ ದೇಶದಲ್ಲಿ ಮುಸ್ಲಿಂ (ಮತ್ತು ಕ್ರೈಸ್ತ) ವಿರೋಧಿ ನೆಲೆಯ ರಾಜಕಾರಣವನ್ನು ನೆಲೆಗೊಳಿಸಿದ ನಂಬಿಕೆ ಬಂದಮೇಲೆ ಸಂಘ ಪರಿವಾರದವರಿಗೆ ಅಂಬೇಡ್ಕರ್ ಆಗಲೀ, ಗಾಂಧಿಯಾಗಲೀ ಸಮಸ್ಯೆಯಾಗಲಾರರು. ಏಕೆಂದರೆ ಈ ಇಬ್ಬರನ್ನೂ ಅವರ ಅನುಯಾಯಿಗಳು ಎನಿಸಿಕೊಂಡವರು ಅಷ್ಟು ಸವಕಲು ಮಾಡಿ ಕೂರಿಸಿದ್ದಾರೆ. ಗಾಂಧಿ–ಅಂಬೇಡ್ಕರ್ ಇರಲಿ, ಸಂಘ ಪರಿವಾರದವರ ಈವರೆಗಿನ ಪರಮ ಗುರಿಯಾಗಿದ್ದ ನೆಹರೂ ಅವರನ್ನೂ ಇತ್ತೀಚಿನ ದಿನಗಳಲ್ಲಿ ಮೋದಿ ಗೌರವದಿಂದ ಸ್ಮರಿಸತೊಡಗಿದ್ದಾರೆ ಎಂಬುದನ್ನೂ ನಾವು ಗಮನಿಸಬೇಕು. ಎಡಪಂಥೀಯರು ಪೂರ್ತಿ ತಮ್ಮ ವಿರುದ್ಧ ಕಟ್ಟಿದ್ದರೆಂದು ಅವರು ಭಾವಿಸಿದ್ದ ಚರಿತ್ರೆಯನ್ನು ಪೂರ್ತಿ ತಮ್ಮದಾಗಿಸಿಕೊಳ್ಳುವ ಸುಯೋಜಿತ ಕಾರ್ಯಕ್ರಮವಿದು. ಅದೇನೇ ಇರಲಿ, ಅಂಬೇಡ್ಕರ್ ಮತ್ತು ಅವರ ಅಂಧಾಭಿಮಾನಿಗಳೂ ಸೇರಿ ಕಟ್ಟಿದ ಗಾಂಧಿ ದ್ವೇಷ ಸಂಘ ಪರಿವಾರಕ್ಕೆ ಉಪಯೋಗಕ್ಕೆ ಬಂದಿದೆ ಎಂಬುದಂತೂ ಸತ್ಯ.

೬. ನಮ್ಮ ಎಲ್ಲಾ ಜನಪರ ಚಳುವಳಿಗಳು ಅಲ್ಪಾಯುಗಳಾಗತ್ತಿದ್ದು ಸಾರ್ವಕಾಲಿಕ ಜನಮನ್ನಣೆ ಹಾಗು ಬೆಂಬಲವನ್ನು ಪಡೆಯುವುದರಲ್ಲಿ ಯಾಕೆ ಸೋತಿವೆ?

ಜನಪರ ಚಳುವಳಿಗಳೆಂದು ನಾವು ಕರೆಯುವ ಚಳುವಳಿಗಳು ನಿಜವಾಗಿಯೂ ಜನಪರ ಚಳುವಳಿಗಳಾಗದಿದ್ದುದೇ ಅವು ಸೋಲಲು ಕಾರಣ. ಬರೀ ಹಕ್ಕು ಅಥವಾ ಬೇಡಿಕೆಗಳ ಆಧಾರದ ಮೇಲೆ ಕಟ್ಟಲಾಗುವ ಚಳುವಳಿ ಜನರನ್ನು ಚಳುವಳಿ ಎಂಬ ...ದ ದಾಳಗಳನ್ನಾಗಿ ಮಾತ್ರ ಕಾಣಬಲ್ಲುದು.

೭. ಭಾರತದ 'ಪ್ರಜಾಪ್ರಭುತ್ವ'ವು ಅದರ ತತ್ವ ಮತ್ತು ಆಚರಣೆಯಲ್ಲಿ ದ್ವಂದ್ವಗಳನ್ನು ಒಳಗೊಂಡಿದೆಯೇ? ಸಾಮ್ರಾಜ್ಯಶಾಹಿ ಆರ್ಥಿಕತೆಯ ಹಿನ್ನೆಲೆಯಲ್ಲಿ ರಾಜಕೀಯ ಸಿದ್ಧಾಂತವಾಗಿ ಪ್ರಜಾಪ್ರಭುತ್ವದ ಸಮಸ್ಯೆ ಮತ್ತು ಸವಾಲುಗಳೇನು?

ಇಂದು ಭಾರತದಲ್ಲಿ ಜಾರಿಯಲ್ಲಿರುವುದು ಪ್ರಾತಿನಿಧಿಕ–ಪರೋಕ್ಷ–ಪ್ರಜಾಪ್ರಭುತ್ವ. ಅಭಿವೃದ್ಧಿ ಎಂಬ ರಾಕ್ಷಸನ ಪ್ರವೇಶವಾಗುವವರೆಗೂ ಹೇಗೋ ನಡೆದುಕೊಂಡು ಹೋಗುತ್ತಿತ್ತು. ಆದರೆ ಈ ಅಭಿವೃದ್ಧಿ ಎಂಬ ಪರಮ ದುರಾಸೆಯ ಮಹಾದಂಧೆ ಪ್ರವೇಶವಾದೊಡನೆ ಪ್ರಾತಿನಿಧಿಕತೆ ಎಂಬುದೇ ಅರ್ಥ ಕಳೆದುಕೊಂಡು ಪ್ರಜಾಪ್ರಭುತ್ವವೆಂಬುದು ಒಂದು ಸಗಟು ವ್ಯಾಪಾರದ ಮಂಡಿಯಾಯಿತು. ಈ ಅಭಿವೃದ್ಧಿ ಎನ್ನುವುದು ತನ್ನ ರಚನಾತ್ಮಕ ಮೂಲಾರ್ಥವನ್ನು ಕಳೆದುಕೊಂಡು ಒಂದು ದಂಧೆಯಾಗಿದ್ದೇ ಬಂಡವಾಳಶಾಹಿಯು ನವ ಸಾಮ್ರಾಜ್ಯಶಾಹಿಯ ರೂಪ ತಳೆದು ಜಾಗತೀಕರಣ ಎಂಬ ಹೆಸರಿನಲ್ಲಿ ನಮ್ಮನ್ನು ಸುತ್ತುವರೆದಾಗ. ಇದನ್ನು ತಿಳಿದರೆ ಈ ಪ್ರಜಾಪ್ರಭುತ್ವವೆಂಬುದೂ ಈ ನವಸಾಮ್ರಾಜ್ಯಶಾಹಿಯ ಒಂದು ರಾಜಕೀಯ ಆಟವಾಗಿದೆ ಎಂಬುದು ಗೊತ್ತಾಗುತ್ತದೆ. ನಮ್ಮ ಪ್ರಜಾಪ್ರಭುತ್ವವೇ ಈಗ ನಿಧಾನವಾಗಿ ಸಂಸದೀಯ ಸ್ವರೂಪವನ್ನು ಕಳೆದುಕೊಂಡು (ಹೆಚ್ಚು ಕೇಂದ್ರೀಕೃತ) ಅಧ್ಯಕ್ಷೀಯ ಸ್ವರೂಪಕ್ಕೆ ತಯಾರಾಗುತ್ತಿರುವುದನ್ನು ನಾವು ಕಾಣಬಹುದು. ಆದ್ದರಿಂದ ಇದೆಲ್ಲದಕ್ಕೆ ಮೂಲವಾಗಿರುವ 'ಅಭಿವೃದ್ಧಿ' ಎಂಬುದರ ಕೈಕಾಲು ಮುರಿದರೆ ಪ್ರಜಾಪ್ರಭುತ್ವ ಪುನರುಜ್ಜೀವನಗೊಳ್ಳಬಹುದು. ಅದು ಕ್ರಮೇಣ ಸುಧಾರಿಸಲು ಅವಕಾಶವಾಗಿ ನೇರ (ಅಂದರೆ ಗರಿಷ್ಠ ಪ್ರಮಾಣದಲ್ಲಿ ವಿಕೇಂದ್ರೀಕೃತವಾದ) ಪ್ರಜಾಪ್ರಭುತ್ವವಾಗಿ ಮಾರ್ಪಾಡೂ ಆಗಬಹುದು. ಗಾಂಧಿ ಎಲ್ಲದಕ್ಕೂ ರಾಮಬಾಣದಂತೆ ಸೂಚಿಸಿದ 'ಗ್ರಾಮಸ್ವರಾಜ್ಯ'ದ ಹತ್ತಿರ ಬರಬಹುದು.

೮. ರಾಜಕೀಯ ನಾಯಕರ ಮತ್ತು ಪಕ್ಷಗಳ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಜನವಿರೋಧಿ ನೀತಿಗಳನ್ನು ಪ್ರಶ್ನಿಸುವುದರಲ್ಲಿ, ಪ್ರತಿರೋಧಿಸುವುದರಲ್ಲಿ, ಜನಸಾಮಾನ್ಯರಿಗೆ ಮನದಟ್ಟು ಮಾಡಿಸುವುದರಲ್ಲಿ ಪ್ರಗತಿಪರ ಚಿಂತಕರು, ಚಳವಳಿಗಾರರು ತಮ್ಮ ಒಲವಿನ ಪಕ್ಷ ಅಥವಾ ಸಂಘಟನೆಗಳ ಅಜೆಂಡಾಗಳಿಗೆ ಪೂರಕವಾದ ನಿಲುವನ್ನು ತೆಗೆದುಕೊಂಡು, ಪ್ರಾಮಾಣಿಕತೆ, ನಿಷ್ಠುರತೆ, ವಾಸ್ತವತೆಯನ್ನು ಪಕ್ಕಕ್ಕೆ ಸರಿಸಿದರೇ? ಜನಪರ ಚಿಂತನೆ ಮತ್ತು ಚಳವಳಿಗಳ ಆಶಯಗಳೂ ಸೀಮಿತವಾಗಿ ಬಿಟ್ಟವೇ

ಮಕ್ಕಳನ್ನು ಅತಿಯಾಗಿ ಪ್ರೀತಿಸಿ ಹಾಳು ಮಾಡಬೇಡಿ ಎಂಬುದು ಒಂದು ಹಳೆಯ ಒತಸುಡಿ. ಇದನ್ನು ನಮ್ಮ ಸಿದ್ಧಾಂತಗಳಿಗೂ, ವಾದಗಳಿಗೂ ಅನ್ವಯಿಸಬಹುದು. ಪ್ರಗತಿಪರರು ತಾವು ನಂಬಿದ ಸಿದ್ಧಾಂತಗಳಿಗೆ ಮಾಡಿದ್ದು ಅದನ್ನೇ. ಇದರಿಂದಾಗಿ ಅವರು ಸಿದ್ಧಾಂತಗಳನ್ನು ಕಾಲಕ್ಕೆ ತಕ್ಕಂತೆ ವ್ಯಾಖ್ಯಾನಿಸುವ, ಬೆಳೆಸುವ ಶಕ್ತಿಯನ್ನೇ ಕಳೆದುಕೊಂಡರು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಅವರು ಯೋಚಿಸುವ ಶಕ್ತಿಯನ್ನೇ ಕಳೆದುಕೊಂಡರು. ಈ ಶಕ್ತಿ ಪತನದಿಂದಾಗಿ ಪ್ರಗತಿಪರರಲ್ಲಿ ಉ...

ಅವನತಿ ಹಲವು ತೆರನಾದದ್ದು. ಇದೇ. ೨೦ ವರ್ಷಗಳ ಹಿಂದೆ ಪ್ರಗತಿಪರರ ಬಗ್ಗೆ ಇನ್ನೂ ಉಳಿದುಕೊಂಡಿದ್ದ ಜನರ ವಿಶ್ವಾಸಾರ್ಹತೆ ಈಗ ಕನಿಷ್ಟ ಮಟ್ಟಕ್ಕೆ ಬಂದಿರಲು ಕಾರಣ. ಮತ್ತೆ ಇದಕ್ಕೆ, ಮೂಲತಃ ಭೌತವಾದಿಗಳಾದ ಇವರು ಬರೀ ಇವೊತ್ತಿನಲ್ಲಿ ಬದುಕಬಯಸುವವರು. ಇವರ ಇವೊತ್ತಿನಲ್ಲಿ ನಿನ್ನೆ ಮತ್ತು ನಾಳೆಗಳು ಪೂರ್ತಿಯಾಗಿ ಕಾಣೆಯಾಗಿರುವುದೇ ಕಾರಣ.

ನಿಜ ಹೇಳಬೇಕೆಂದರೆ ಕನಿಷ್ಠ ಕಳೆದ ಇಪ್ಪತ್ತು ವರ್ಷಗಳಲ್ಲಿ ಸಾಮೂಹಿಕವಾಗಿ ಯೋಚಿಸಿದವರು, ಹಾಗೆ ಯೋಚಿಸಿದ್ದನ್ನು ಛಲದಿಂದ, ಶಿಸ್ತಿನಿಂದ ಕಟ್ಟಿದವರು ಸಂಘ ಪರಿವಾರದವರೇ. (ಮೋದಿಯವರ ಪ್ರಕಾರ ಇದು ಆರೆಸ್ಸೆಸ್ ಆರಂಭವಾದ ನಂತರದ ಐದು ತಲೆಮಾರುಗಳ ತ್ಯಾಗದ ಫಲ.) ಅದಕ್ಕೆ ಸಾಕ್ಷ್ಯ ಇಂದು ನಮ್ಮ ಕಣ್ಮುಂದೆಯೇ ಇದೆ. ಹಾಗಾಗಿ ನಾವು ಅವರಿಂದ ಕಲಿಯುವುದು ಬಹಳವಿದೆ.

(ಸಂವಾದದ ೨೦೧೯ರ ಆಗಸ್ಟ್ ಸಂಚಿಕೆಯಲ್ಲಿ ಪ್ರಕಟ)

ಇದೊಂದು ಅಕ್ಷಮ್ಯ ಅಮಾನವೀಯ ಸಾವು

ಫಾದರ್ ಸ್ಟ್ಯಾನ್ ಸ್ವಾಮಿಯವರ ಸಾವಿನ ಸುದ್ದಿ ಮಾನವೀಯತೆಯ ಪಸೆಯುಳ್ಳ ಯಾರನ್ನಾದರೂ ತಲ್ಲಣಗೊಳಿಸುವಂಥದ್ದಾಗಿದೆ. ಪಾರ್ಕಿನ್‌ಸನ್ ಕಾಯಿಲೆಯಿಂದ ನರಳುತ್ತಿದ್ದ ೮೪ ವರ್ಷ ವಯಸ್ಸಿನ ಈ ಅಸಹಾಯಕ ಹಿರಿಯ ಪ್ರಜೆಯನ್ನು ಎರಡು ವರ್ಷಗಳ ಹಿಂದಿನ ಭೀಮಾ ಕೋರೆಗಾಂವ್ ಹಿಂಸಾಚಾರದ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಮೀನು ಸುಲಭ ಸಾಧ್ಯವಿಲ್ಲದ ಕಾನೂನುಬಾಹಿರ ಚಟುವಟುವಟಿಕೆಗಳ ತಡೆ (ಯುಎಪಿಎ) ಕಾಯ್ದೆಯಡಿ ಬಂಧಿಸಿ ಕಳೆದ ಒಂಬತ್ತು ತಿಂಗಳುಗಳಿಂದ ವಿಚಾರಣೆಯಿಲ್ಲದೆ ಪುಣೆ ಸೆರೆಮನೆಯಲ್ಲಿಡಲಾಗಿತ್ತು.

ತಮ್ಮ ವಾಸಸ್ಥಾನವಾದ ಕಾಡುಗಳಲ್ಲಿ ಸರ್ಕಾರ ಮತ್ತು ಖಾಸಗಿ ಕಂಪನಿಗಳಿಂದ ನಡೆಯುತ್ತಿರುವ ಪರಿಸರ ವಿನಾಶದ ಮತ್ತು ಪ್ರಾಕೃತಿಕ ಸಂಪನ್ಮೂಲ ಲೂಟಿಯ ಗಣಿಗಾರಿಕೆಯ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಕಾರಣದಿಂದಾಗಿ ಸೆರೆಮನೆಗಳಿಗೆ ದೂಡಲ್ಪಟ್ಟಿದ್ದ ಜಾರ್ಖಂಡ್‌ನ ಆದಿವಾಸಿಗಳ ಮಾನವ ಹಕ್ಕುಗಳಿಗಾಗಿ ಈ ಹಿರಿಯ ಫಾದರ್ ಹೋರಾಟ ನಡೆಸಿದ್ದರು. ಇದೇ ಕಾರಣವಾಗಿ ಅವರ ಹೋರಾಟವನ್ನು ಪ್ರಭುತ್ವ ಅವರನ್ನು ಸರ್ಕಾರವನ್ನು ಕಾನೂನು ಬಾಹಿರವಾಗಿ ಪದಚ್ಯುತಗೊಳಿಸುವ ನಕ್ಸಲೀಯ ಪಿತೂರಿಯ ಭಾಗವೆಂದು ಪರಿಗಣಿಸಿ ಅವರ ಮೇಲೆ ಪ್ರಧಾನಿ ನರೇಂದ್ರ ಮೋದಿಯವರ ಕೊಲೆ ಯೋಜನೆಯ ಪಾಲುದಾರಿಕೆಯ ಆರೋಪವನ್ನು ಹೊರಿಸಿ ಸೆರೆಮನೆಗೆ ದೂಡಿತ್ತು. ಈ ಆರೋಪಕ್ಕೆ ಸರ್ಕಾರ ಒದಗಿಸಿರುವ ಸಾಕ್ಷ್ಯಗಳೆಲ್ಲವನ್ನೂ ಈ ಪ್ರಕರಣದ ತನಿಖೆ ನಡೆಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಕಳ್ಳ ತಂತ್ರಾಂಶ ಬಳಸಿ ಆರೋಪಿಗಳ ಗಣಕಗಳಿಗೆ ವರ್ಗಾಯಿಸಿದೆ ಎಂದು ಅಮೆರಿಕಾದ ತಂತ್ರಾಂಶ ಪರಿಣತ ಸಂಸ್ಥೆಯೊಂದರ ತನಿಖಾ ವರದಿ ತಿಳಿಸಿದೆ.

ಅದೇನೇ ಇದ್ದರೂ, ಈ ಗಂಭೀರ ಆರೋಪಗಳ ಕಾರಣಗಳಿಂದಾಗಿಯೇ ವಿಚಾರಣಾ ನ್ಯಾಯಾಲಯ ಹಿರಿ ವಯಸ್ಸಿನ, ಗಂಭೀರ ಕಾಯಿಲೆಗಳ ಆಧಾರದ ಮೇಲೆ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ತಿರಸ್ಕರಿಸಿತ್ತು. ಇವರನ್ನು ಬಂಧಿಸಿ ಮೊಕದ್ದಮೆ ಹೂಡಿದ್ದ ರಾಷ್ಟ್ರೀಯ ತನಿಖಾ ಸಂಸ್ಥೆ ಇವರ ಬಗ್ಗೆ ಎಷ್ಟು ಕಠಿಣ-ನಿರ್ದಯವಾಗಿತ್ತೆಂದರೆ, ಕುಡಿಯುವ ನೀರಿನ ಒಂದು ಲೋಟವನ್ನು ಕೂಡ ಹಿಡಿಯಲಾಗದಷ್ಟು ದುರ್ಬಲರಾಗಿದ್ದ ಸ್ವಾಮಿಯವರು ನೀರು ಕುಡಿಯಲು ಒಂದು ಹೀರು ಕೊಳವೆಯ (ಸ್ಟ್ರಾ) ಸೌಲಭ್ಯವನ್ನು ಕೇಳಿದಾಗ ಆ ಸೌಲಭ್ಯಕ್ಕೆ ಅವರು ಅರ್ಹರೆಂದು ಪರಿಶೀಲಿಸಿ ನ್ಯಾಯಾಲಯಕ್ಕೆ ತಿಳಿಸಲು ಅದಕ್ಕೆ ಇಪ್ಪತ್ತು ದಿನಗಳು ಬೇಕಾದವು! ಸ್ವತಂತ್ರವಾಗಿ ಊಟ ಮಾಡಲಾಗದ, ಸ್ನಾನ

ಮಾಡಲಾಗದ. ಏನನ್ನೂ ಬರೆಯಲಾಗದ ಸ್ಥಿತಿಯಲ್ಲಿರುವ ಇವರು ತನಗೆ ತನ್ನ ಆಪ್ತರ ಮಧ್ಯೆ ಪ್ರಾಣಬಿಡಲು ಅವಕಾಶಕೊಡಿ ಎಂದು ಕೋರಿ ಬಾಂಬೆ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಮಧ್ಯಂತರ ಜಾಮೀನು ಅರ್ಜಿ ಸಂಬಂಧವಾಗಿ ಆ ನ್ಯಾಯಾಲಯ 'ಇದು ಜಾಮೀನಿಗೆ ಅರ್ಹ ಸಂದರ್ಭ' ಎಂಬ ಅಭಿಪ್ರಾಯದೊಂದಿಗೆ ಕಳಿಸಿದ್ದ ನೋಟೀಸಿಗೆ ಎರಡು ತಿಂಗಳಾದರೂ ಈ ತನಿಖಾ ಸಂಸ್ಥೆ ಉತ್ತರ ಕೊಡದೆ ಈ ಸಾವನ್ನು ಹೆಚ್ಚು ವೇದನಾಮಯಗೊಳಿಸಿದೆ ಎಂದು ಹೇಳಲೇಬೇಕು. ಕೊನೆಗೆ ಕರೋನಾ ಸೋಂಕು ತಗುಲಿದೆ ಎಂಬ ವರದಿಯ ಹಿನ್ನೆಲೆಯಲ್ಲಿ ಸ್ಟ್ಯಾನ್ ಸ್ವಾಮಿಯವರು ತಮಗೆ ಸೆರೆಮನೆಯಲ್ಲಿಯೇ ಪ್ರಾಣಬಿಡಲು ಅವಕಾಶ ನೀಡಿ. ಆಸ್ಪತ್ರೆಗೆ ಸೇರಿಸುವುದು ಬೇಡವೆಂದು ಕೋರಿದರೂ ಅವರು ಆಸ್ಪತ್ರೆಯಲ್ಲೇ ಕೊನೆಯುಸಿರು ಎಳೆಯುವಂತೆ ನೋಡಿಕೊಂಡಿರುವ ಪ್ರಭುತ್ವ ಈ ಸಾವಿನ ಹೊಣೆಗಾರಿಕೆಯಿಂದ ಪಾರಾಗಲು ಪ್ರಯತ್ನಿಸಿದೆ.

ಇದೆಲ್ಲವೂ ನಮ್ಮ ಇಂದಿನ ಪ್ರಭುತ್ವ ಎಷ್ಟು ಸೇಡಿನ ಗೂಡಾಗಿ ಹೃದಯಹೀನವಾಗಿದ್ದು, ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಸೃಷ್ಟಿಸಲಾಗಿರುವ ನ್ಯಾಯಾಂಗ ವ್ಯವಸ್ಥೆಯನ್ನೂ ಹೇಗೆ ಅಸಹಾಯಕಗೊಳಿಸಿದೆ ಎಂಬುದನ್ನು ತಿಳಿಸುತ್ತದೆ. ಹಾಗೇ ಈ ದಾರುಣ ಸಾವು ನಮ್ಮ ಕಾನೂನು ಮತ್ತು ನ್ಯಾಯಾಂಗ ವ್ಯವಸ್ಥೆಯ ದೌರ್ಬಲ್ಯಗಳಿಂದ ಇನ್ನೂ ಅಪರಾಧಿಗಳೆಂದು ಸಾಬೀತಾಗಬೇಕಾದ ಸಕ್ರಮ ವಿಚಾರಣೆ ಇಲ್ಲದೆ ಒಂದಲ್ಲ ಒಂದು ಕಾರಣದಿಂದ ಸೆರೆಮನೆಗಳಲ್ಲಿ ಅನಾಮಿಕರಾಗಿ ದಿನನಿತ್ಯ ಸಾಯುತ್ತಿರುವ ಅಥವಾ ವರ್ಷಾನುಗಟ್ಟಲೆ ಸೆರೆಮನೆಗಳಲ್ಲಿ ಕೊಳೆಯುತ್ತಿರುವ ಲಕ್ಷಾಂತರ ಜನ 'ನಿರಪರಾಧಿ'ಗಳ ದುಃಸ್ಥಿತಿಯ ಬಗ್ಗೆ ನಮ್ಮ ಗಮನ ಸೆಳೆಯಬೇಕು. ನಮ್ಮ ಕಾನೂನು ಮತ್ತು ನ್ಯಾಯಾಂಗ ವ್ಯವಸ್ಥೆಯನ್ನು ಲೋಕತಂತ್ರದ ಉದ್ದೇಶಗಳಗನುಗುಣವಾಗಿ ಪ್ರಜಾಹಿತ ದೃಷ್ಟಿಯಿಂದ ಹೆಚ್ಚು ಮಾನವೀಯಗೊಳಿಸುವಂತೆ ಪ್ರಭುತ್ವವನ್ನು ಆಗ್ರಹಪಡಿಸಲು ಕಾರಣವಾಗಬೇಕು. ಸದ್ಯಕ್ಕೆ ಮುಖ್ಯವಾಗಿ ನಮ್ಮ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ನ್ಯಾ. ಮದನ್ ಬಿ. ಲೋಕೂರ್ ಅವರು ಹೇಳಿದಂತೆ ಸ್ಟ್ಯಾನ್ ಸ್ವಾಮಿಯವರ ಸಾವನ್ನು ಸೆರೆಮನೆಯಲ್ಲಿನ ಸಾವು (ಲಾಕ್‌ಪ್ ಡೆತ್) ಎಂದು ಪರಿಗಣಿಸಿ ಕಾನೂನುಬದ್ಧ ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಸೂಕ್ತ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು.

– ದೇವನೂರ ಮಹಾದೇವ, ಮೈಸೂರು, ಕಡಿದಾಳು ಶಾಮಣ್ಣ, ಭಗವತಿಕೆರೆ, ರಾಜೇಶ್ವರಿ ತೇಜಸ್ವಿ, ಮೂಡಿಗೆರೆ, ನಾಗೇಶ್ ಹೆಗಡೆ, ಬೆಂಗಳೂರು, ಬಿ.ಎನ್. ಶ್ರೀರಾಮ, ಮೈಸೂರು, ಸಾರಾ ಅಬೂಬಕರ್, ಮಂಗಳೂರು ವೈದೇಹಿ, ಮಣಿಪಾಲ, ಡಿ.ಎಸ್. ನಾಗಭೂಷಣ, ಸವಿತಾ ನಾಗಭೂಷಣ, ರಾಜೇಂದ್ರ ಚೆನ್ನಿ, ಶಿವಮೊಗ್ಗ ಮತ್ತು ಇತರರು

(೭. ೭. ೨೦೨೧ರ 'ಪ್ರಜಾವಾಣಿ'ಯಲ್ಲಿ ಪ್ರಕಟ)

ಕೆಲವು ಪ್ರತಿಸ್ಪಂದನಗಳು

ಕಾಂಗ್ರೆಸ್‌ಗೆ ಇದು ನಿಷ್ಠುರ ಆತ್ಮವಿಮರ್ಶೆಯ ಕಾಲ

ಪ್ರಸಕ್ತ ಲೋಕಸಭಾ ಚುನಾವಣೆಗಳ ಮತದಾನ ಕೊನೆಯ ಸುತ್ತಿಗೆ ಬರುತ್ತಿದ್ದಂತೆ ಸ್ಪರ್ಧೆ ವಿಪರೀತ ತುರುಸಾಗುತ್ತಿದ್ದು ಇದರ ಪರಿಣಾಮವೆಂಬಂತೆ ನಮ್ಮ ಪ್ರಧಾನಮಂತ್ರಿಯವರು 'ಮಾಜಿ ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ನಂಬರ್ ಒನ್ ಭ್ರಷ್ಟಾಚಾರಿ' ಎಂಬ ಮಾತನ್ನಾಡಿರುವುದು ಯಾವುದೇ ರೀತಿಯಲ್ಲಿ ಸದಭಿರುಚಿಯ ಮಾತು ಎನಿಸುವುದಿಲ್ಲ. ರಾಜೀವ್‌ಗಾಂಧಿಯವರು ಭ್ರಷ್ಟಾಚಾರಿಯಾಗಿದ್ದರೆಂದು ಯಾವ ನ್ಯಾಯಾಲಯವೂ ಹೇಳದಿರುವುದರಿಂದ. 'ಚೌಕೀದಾರನೇ ಕಳ್ಳ' ಎಂದು ಸರ್ವೋನ್ನತ ನ್ಯಾಯಾಲಯವೇ ಹೇಳಿದೆ ಎಂಬ ರಾಹುಲ್ ಗಾಂಧಿಯವರ ಬೇಜವಾಬ್ದಾರಿ ಹೇಳಿಕೆಯ ವಿರುದ್ಧ ನ್ಯಾಯಾಲಯದ ಮೆಟ್ಟಿಲೇರಿರುವ ಬಿಜೆಪಿಗೆ ತನ್ನ ಪ್ರಧಾನ ಮಂತ್ರಿಯ ಈ ಮಾತನ್ನು ಸಮರ್ಥಿಸಿಕೊಳ್ಳುವ ಯಾವ ನೈತಿಕ ಅಧಿಕಾರವೂ ಇಲ್ಲ.

ಆದರೆ ಕಾಂಗ್ರೆಸ್ ನಾಯಕರು ಮೋದಿಯವರ ಈ ಅನುಚಿತ ಮಾತನ್ನು ಅಲ್ಲಗಳೆಯುವ ನೆಪದಲ್ಲಿ ರಾಜೀವ್‌ಗಾಂಧಿಯವರ ಬಿಂಬವನ್ನು ಅತಿಶಯಗೊಳಿಸಿ ಅವರನ್ನೊಬ್ಬ ಸದುದ್ದೇಶದ ಪ್ರಗತಿಶೀಲ ಆಡಳಿತಗಾರರೆಂಬಂತೆ ಪ್ರಸ್ತುತಗೊಳಿಸ ಹೊರಟಿರುವ ರೀತಿ ನಿಜವಾಗಿ ಸಮಸ್ಯಾತ್ಮಕವಾಗಿದೆ. ಇದರಲ್ಲಿ ಅದು ಇತ್ತೀಚಿನ ವರ್ಷಗಳಲ್ಲಿ ಎದುರಿಸುತ್ತಿರುವ ಅಸ್ತಿತ್ವದ ದೊಡ್ಡ ಬಿಕ್ಕಟ್ಟಿನ ಸಮಸ್ಯೆಯೂ ಅಡಗಿದೆ ಎನ್ನಿಸುತ್ತಿದೆ. ಏಕೆಂದರೆ ಭಾರತದ ಇತ್ತೀಚಿನ ರಾಜಕೀಯ ಚರಿತ್ರೆಯಲ್ಲಿ ಬಿಜೆಪಿ ಗಳಿಸಿರುವ 'ಭಯಂಕರ' ಜನಪ್ರಿಯತೆಯ ಬಹುಪಾಲು ಕೀರ್ತಿ ರಾಜೀವ್‌ಗಾಂಧಿಯವರಿಗೇ ಸಲ್ಲಬೇಕು. ಕಾರಣಗಳು ಹೀಗಿವೆ: ಬಿಜೆಪಿ ತಾನು ದಿಢೀರನೆ ಬೆಳೆಯಲು ಹುಡುಕಿಕೊಂಡ ಬಾಬ್ರಿ ಮಸೀದಿ–ರಾಮಮಂದಿರ ಮತ್ತು ಮುಸ್ಲಿಂ ಮೂಲಭೂತವಾದ ಎಂಬ ರಾಜಕೀಯ ಕಾರ್ಯಕ್ರಮಗಳಿಗೆ ತಮ್ಮ ಮುಂದಾಲೋಚನೆ ಇಲ್ಲದ ಮತ್ತು ಸಂದರ್ಭದ ಒತ್ತಡಕ್ಕೆ ಮಣಿದ ದುರ್ಬಲ ರಾಜಕಾರಣದ ಮೂಲಕ ನೀರೆರೆದವರು ರಾಜೀವ್

ಗಾಂಧಿಯವರೇ. ದಶಕಗಳ ಕಾಲ ಮುಚ್ಚಲ್ಪಟ್ಟಿದ್ದ ಬಾಬ್ರಿ ಮಸೀದಿಯ ಬೀಗ ತೆಗೆಸಿ, ರಾಮಲಲ್ಲಾನ ಪೂಜೆಗೆ ಅನುಮತಿ ಕೊಟ್ಟವರು ರಾಜೀವ್‌ಗಾಂಧಿ. ಮುಂದಿನ ಹಂತವಾಗಿ ಮಂದಿರ ನಿರ್ಮಾಣಕ್ಕಾಗಿ ಕರಸೇವೆ ಮಾಡಲು ಬಿಜೆಪಿ ಮತ್ತವರ ಹಿಂದುತ್ವವಾದಿ ಮಿತ್ರ ಸಂಘಟನೆಗಳಿಗೆ ಅನುಮತಿ ನೀಡಿದವರೂ ರಾಜೀವ್‌ಗಾಂಧಿಯವರೇ. ಹೀಗೆ ಪ್ರೋತ್ಸಾಹಿಸಲ್ಪಟ್ಟ ಹಿಂದೂ ಕೋಮುವಾದಿ ರಾಜಕಾರಣಕ್ಕೆ ಒಂದು ಸಮರ್ಥನೆ ಒದಗಿಸುವಂತೆ ಷಾ ಬಾನು ಪ್ರಕರಣದಲ್ಲಿ ಹಸ್ತಕ್ಷೇಪ ನಡೆಸಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅಸಾಧುಗೊಳಿಸುವಂತಹ ಸಂವಿಧಾನ ತಿದ್ದುಪಡಿಗೆ ಕಾರಣರಾಗಿ ಮುಸ್ಲಿಂ ಮೂಲಭೂತವಾದ ಕುರಿತ ಚರ್ಚೆಗೆ ಇಂಬು ಕೊಟ್ಟವರೂ ರಾಜೀವ್ ಗಾಂಧಿಯವರೇ. ಕಾಂಗ್ರೆಸ್‌ಗೆ ಇದು ಆತ್ಮವಿಮರ್ಶೆಯ ಕಾಲ.

ಈ ದೃಷ್ಟಿಯಿಂದ ಕಾಂಗ್ರೆಸ್ ನಾಯಕರು ಇಂದು ಬಿಜೆಪಿಯ ಕೋಮುವಾದಿ ರಾಜಕಾರಣದ ಬಗ್ಗೆ ಬಗೆಬಗೆಯ ಭೀತಿ ಹುಟ್ಟಿಸುತ್ತಿರುವ ಮಾತುಗಳನ್ನಾಡುವಾಗ ತಮ್ಮ ಎದೆ ಮುಟ್ಟಿ ನೋಡಿಕೊಳ್ಳಬೇಕಾಗುತ್ತದೆ. ಬರೀ ಈ ವಿಷಯದಲ್ಲಿ ಮಾತ್ರವಲ್ಲ, ಬಿಜೆಪಿಯ 'ಧೂರ್ತ' ರಾಜಕಾರಣದ ವಿರುದ್ಧ ಮಾತನಾಡುವ ಎಲ್ಲರ ಬಾಯಿ ಕಟ್ಟುವಂತಹ, ಕಾಂಗ್ರೆಸ್‌ನ ಹಿಂದಿನ ದುರಾಚಾರಗಳ ಉದಾಹರಣೆಗಳನ್ನು ಬಿಜೆಪಿ ನಾಯಕರು ನೀಡಿ ಚರ್ಚೆಯನ್ನು ಮುಂದಕ್ಕೆ ಒಯ್ಯಲಾಗದಂತೆ ಮಾಡಿರುವುದಕ್ಕೂ ಕಾಂಗ್ರೆಸ್‌ನ ಇಂತಹ ನಿಷ್ಠುರ ಆತ್ಮವಿಮರ್ಶೆಯ ಕೊರತೆಯೇ ಕಾರಣವಾಗಿದೆ. ಅದು ನೆಹರೂ ಕುಟುಂಬದ ರಾಜಕಾರಣವಾಗಿರಬಹುದು. ತುರ್ತು ಪರಿಸ್ಥಿತಿ ಘೋಷಣೆಯಾಗಿರಬಹುದು. ರಾಜೀವ್ ಗಾಂಧಿಯವರು ಸಿಖ್ ಹತ್ಯಾಕಾಂಡವನ್ನು ಪರೋಕ್ಷವಾಗಿ ಸಮರ್ಥಿಸಿದ ಹೇಳಿಕೆ ಇರಬಹುದು ಅಥವಾ ಬಾಬ್ರಿ ಮಸೀದಿಯನ್ನು ಉರುಳಿಸುತ್ತಿರುವಾಗ ವಹಿಸಿದ್ದ ಸಂದೇಹಾಸ್ಪದ ಮೌನವೇ ಇರಬಹುದು ಅಥವಾ ಮನಮೋಹನಸಿಂಗ್ ಅವರ ಆಡಳಿತ ಕಾಲದ ಹಲವು ಭ್ರಷ್ಟಾಚಾರಗಳ ಹಗರಣಗಳೇ ಇರಬಹುದು.

ನಿಜ. ಅತ್ಯಂತ ಹೆಚ್ಚಿನ ಕಾಲ ಈ ದೇಶವನ್ನು ಕಾಂಗ್ರೆಸ್ ಆಳಿರುವುದರಿಂದ ಅದರ ಮುಖದ ಮೇಲೆ ಹೆಚ್ಚು ಕಪ್ಪು ಕಲೆಗಳಿರುವುದು ಸಹಜ. ಆದರೆ ಅದಕ್ಕೆ ತಾನು ಹೇಳುವ ಬಿಜೆಪಿಯ ಭೀತಿಯಿಂದ ದೇಶವನ್ನು ಪಾರು ಮಾಡುವ ನಿಜವಾದ ಕಳಕಳಿ ಇದ್ದರೆ ಅದು ಈ ಕಪ್ಪು ಕಲೆಗಳನ್ನು ಅಳಿಸಿಕೊಳ್ಳುವ ರೀತಿಯ ರಾಜಕಾರಣದ ಹೊಸ ಅಧ್ಯಾಯವನ್ನು ಆರಂಭಿಸಬೇಕು. ಅದಕ್ಕಾಗಿ ಅದು ತನ್ನ ಚರಿತ್ರೆಯ ತಪ್ಪು-ಒಪ್ಪುಗಳ ಬಗ್ಗೆ ಒಂದು ನಿಷ್ಠುರ ಆತ್ಮವಿಮರ್ಶೆಯ ಸಾರ್ವಜನಿಕ ಅಭಿಯಾನ ನಡೆಸುವ ದಿಟ್ಟತನ ತೋರಬೇಕು. ರಾಷ್ಟ್ರೀಯ ಹೋರಾಟ ಮತ್ತು ರಾಷ್ಟ್ರೀಯ ಶೀಲ ನಿರ್ಮಾಣದ ಮಹಾ ಪರಂಪರೆಯುಳ್ಳ ಕಾಂಗ್ರೆಸ್ ಈ ಪರಂಪರೆಯನ್ನು ಬಿಜೆಪಿ ಹಾಳು ಮಾಡುತ್ತಿದೆ ಎಂದು ಮಾಡುತ್ತಿರುವ ದೂಷಣೆಯ ರಾಜಕಾರಣ ಜನರಿಗೆ ಪ್ರಾಮಾಣಿಕವಾಗಿ ಕಾಣತೊಡಗುವುದು. ಬಿಜೆಪಿಯೊಂದಿಗೆ ಅದು ನಡೆಸುವ ಮಾತಿನ ವ್ಯರ್ಥ ಜಟಾಪಟಿಯಲ್ಲಲ್ಲ. ಬದಲಿಗೆ ಬಿಜೆಪಿ ಇಂದು ಬಹುಕಾಲ ಶ್ರಮಪಟ್ಟು ಕಟ್ಟಿ ನಿಲ್ಲಿಸಿರುವ ರಾಜಕೀಯ ಸಂಕಥನಕ್ಕೆ

ಪ್ರತಿಯಾಗಿ ಜನರ ಹೃದಯವನ್ನು ಮುಟ್ಟಬಲ್ಲಂತಹ ಒಂದು ಅಚಲವಾದ ತತ್ವ ಮತ್ತು ಅದಕ್ಕೆ ಕಟಿಬದ್ಧವಾದ ಒಂದು ಸದಸ್ಯ ಸಮೂಹದ ಬಲದೊಂದಿಗೆ ತನ್ನದೇ ಒಂದು ಹೊಸ ರಾಜಕೀಯ ಸಂಕಥನವನ್ನು ಕಟ್ಟತೊಡಗಿದಾಗ ಮಾತ್ರ. ನಿಜ ಹೇಳುವುದಾದರೆ, ಎಲ್ಲ ಪಕ್ಷಗಳಿಗಿಂತ ಕಾಂಗ್ರೆಸ್‌ಗೇ ಈ ಅರ್ಹತೆ ಮತ್ತು ಅವಕಾಶವಿರುವುದು. ಆದರೆ ಅದು ನೆಹರೂ-ಗಾಂಧಿಗಳ ಬದಲಾಗಿ ನೈತಿಕ ಸ್ಫೂರ್ತಿಗಾಗಿ ಮೂಲ ಗಾಂಧಿಗೆ ಮರಳಬೇಕು.

ಕಾಂಗ್ರೆಸ್ ಹೇಗೋ, ಯಾರೊಂದಿಗೋ, ಎಂಥದೋ ಅಧಿಕಾರದ ಹೊಂದಾಣಿಕೆ ಮಾಡಿಕೊಂಡು ಸದ್ಯ ಬದುಕುಳಿಯಬಹುದು. ಆದರೆ ಅದೆಂಥ ಬದುಕು ಮತ್ತು ಎಷ್ಟು ಕಾಲ?

('ಪ್ರಜಾವಾಣಿ': 'ಸಂಗತ' : ೬.೬. ೨೦೧೯)

ಪಕ್ಷಾಂತರಗಳ ಹಾವಳಿ: ಒಂದು ಪ್ರತಿಕ್ರಿಯೆ

ಇತ್ತೀಚಿನ ವರ್ಷಗಳಲ್ಲಿ ರಾಜ್ಯ ರಾಜಕಾರಣವನ್ನು ಅವನತಿಯತ್ತ ತಳ್ಳಿರುವ ಪಕ್ಷಾಂತರದ, ನಿರ್ದಿಷ್ಟವಾಗಿ 'ಆಪರೇಷನ್ ಕಮಲ'ದ ಹಾವಳಿಯನ್ನು ನಿಯಂತ್ರಿಸಲು ನಟರಾಜ್ ಹುಳಿಯಾರ್ ಅವರು ಸೂಚಿಸಿರುವ ಏಳು ಸೂತ್ರಗಳ ಪರಿಹಾರ (ಸಂಗತ: ಪ್ರವಾ: ೧೪.೨.೨೦೧೯) ಕುತೂಹಲಕಾರಿಯೂ, ಸ್ವಾರಸ್ಯಕರವೂ ಆಗಿದೆ. ಆದರೆ ಅವರು ಸಂಸತ್ತಿನ ಮಟ್ಟದಲ್ಲಿ ಮಾತ್ರ ಆಗಬಹುದಾದ ಪಕ್ಷಾಂತರ ನಿಷೇಧ ಕಾಯಿದೆಯ ತಿದ್ದುಪಡಿಗಾಗಿ ನೀಡಿರುವ ಸಲಹೆಯ ಹೊರತಾಗಿ ಅವರ ಪರಿಹಾರ ಸೂತ್ರಗಳು ಒಂದು ಪಕ್ಷಾಂತರ ಹಾವಳಿಗೆ ಕಾರಣವಾಗಿರುವ ರಾಜಕಾರಣದ ಸರ್ವಾಂಗೀಣ ಅವನತಿಯನ್ನು ಒಪ್ಪಿಕೊಂಡು ಅದರಲ್ಲೇ ಒಂದಿಷ್ಟು ಹೊಂದಾಣಿಕೆಯನ್ನು ಮಾತ್ರ ಪ್ರತಿಪಾದಿಸುವಂತಿದ್ದು ನಿರಾಶೆ ಹುಟ್ಟಿಸುತ್ತದೆ.

ನಮ್ಮ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಕಾರ ಶಾಸಕ ಎಂದರೆ ಮೂಲತಃ ಶಾಸನ ಮಾಡುವವನು. ಇವರಲ್ಲಿ ಕೆಲವರು ಸಚಿವರೂ ಆಗಿ ಆಡಳಿತ ನಡೆಸುವ ಜವಾಬ್ದಾರಿಯನ್ನೂ ನಿರ್ವಹಿಸಬಹುದಾಗಿದೆ. ಈ ಸಚಿವ ಸ್ಥಾನ ಒಂದು ವಿಶೇಷ ಜವಾಬ್ದಾರಿಯ ಸ್ಥಾನವಾಗಿದ್ದು, ಅದಕ್ಕೆ ಕೆಲವು ಅಗತ್ಯ 'ಯೋಗ್ಯತೆ'ಗಳೂ, 'ಪರಿಣತಿ'ಗಳೂ ಬೇಕಾಗುತ್ತವೆ. ಸಚಿವ ಸಂಪುಟದ ಮುಖ್ಯಸ್ಥನಾದ ಮುಖ್ಯಮಂತ್ರಿಗೆ ರಾಜ್ಯದ ಭವಿಷ್ಯದ ಬಗ್ಗೆ ದಾರ್ಶನಿಕವಾದ ಒಂದು ಮುನ್ನೋಟ(ವಿಷನ್)ವಿದ್ದು ಅದನ್ನು ಸಾಕಾರಗೊಳಿಸಲು 'ಯೋಗ್ಯ'ರಾದ ಸಚಿವ ಸಹೋದ್ಯೋಗಿಗಳನ್ನು ಆಯ್ಕೆ ಮಾಡಿಕೊಂಡು ಆಡಳಿತ ನಡೆಸುತ್ತಾನೆ ಎಂಬ ತಿಳುವಳಿಕೆ ಈ ವ್ಯವಸ್ಥೆಯಲ್ಲಿ ಅಂತರ್ಗತವಾಗಿದೆ. ಜನ ಕೂಡ ಈ ತಿಳುವಳಿಕೆಯ ಮೇಲೇ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳಿಸುತ್ತಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ತಿಳುವಳಿಕೆಗೆ ವಿರುದ್ಧವಾಗಿಯೇ ನಮ್ಮ ರಾಜ್ಯದ) ರಾಜಕಾರಣ ನಡೆದಿದೆ. ಬಹುಮತದ ಅಧಿಕಾರದ

ರಾಜಕಾರಣದ ಹಿಂದಿರುವ ಜನತೆಯ ಆಯ್ಕೆಯ ರಾಜಕೀಯ ದಿಕ್ಕುದೆಸೆಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ತೋರುವಂತಹ ಅವಕಾಶವಾದಿ ಮೈತ್ರಿ ರಾಜಕಾರಣವೂ ಸೇರಿದಂತೆ, ಪ್ರಜಾಪ್ರಭುತ್ವದ ತಿರುಳಿಗೇ ಕಂಟಕವಾಗುವಂತಹ 'ತಾಂತ್ರಿಕ'ವಾಗಿ ಮಾತ್ರ ಸರಿ ಎನ್ನಿಸುವಂತಹ ಹೊಂದಾಣಿಕೆ-ವ್ಯವಸ್ಥೆಗಳು ರೂಪಿತವಾಗುತ್ತಿವೆ. ಪಕ್ಷದ ಶಾಸಕರಿಗಿಂತ ಪಕ್ಷದ ಹೈಕಮಾಂಡ್‌ಗಳೆಂಬ ಕೆಲವೇ 'ಪ್ರತಿಷ್ಠಿತ' ನಾಯಕರ ಕೂಟಗಳು ನಿರ್ಣಾತಕ ನಿರ್ಧಾರಗಳನ್ನು ಪಕ್ಷದ ಮೇಲೇ ಹೇರಿ ಪ್ರಾತಿನಿಧಿಕ ಪ್ರಜಾಪ್ರಭುತ್ವದ ಒಳ ಸತ್ವ-ಸ್ಫೂರ್ತಿಗಳನ್ನೇ ನಾಶ ಮಾಡುತ್ತಿವೆ. ಇದರಿಂದಾಗಿ ಜನಪ್ರತಿನಿಧಿಗಳಾಗಬೇಕಿದ್ದ ಶಾಸಕರು ಪಕ್ಷಗಳ ಕೂಟವೊಂದರ ಗುಲಾಮಗಿರಿಗೆ ಈಡಾಗಿ ತಮ್ಮ ಘನತೆಯನ್ನೇ ಕಳೆದುಕೊಳ್ಳುತ್ತಿದ್ದಾರೆ. ಇದರ ಒಂದು ಅಡ್ಡ ಪರಿಣಾಮವೆಂದರೆ ಇವರು ದಾರಿ ತಪ್ಪಿ ಖರೀದಿಯ ವಸ್ತುಗಳಾಗುತ್ತಿರುವುದು. 'ಆಪರೇಷನ್ ಕಮಲ' ಎಂಬ ರೋಗ ಈ ಎಲ್ಲ ಬೆಳವಣಿಗೆಗಳ ಒಂದು ಪರಿಣಾಮವಷ್ಟೆ. ಹುಳಿಯಾರ್ ಈ ರೋಗದ ಮೂಲಕ್ಕೆ ಹೋಗದೆ ರೋಗಲಕ್ಷಣಗಳನ್ನಷ್ಟೇ ನಿವಾರಿಸುವ ಪ್ರಯತ್ನ ಮಾಡಿದ್ದಾರೆನಿಸುತ್ತದೆ.

ಹಾಗೆ ನೋಡಿದರೆ, ಶಾಸಕರು ಎಷ್ಟನೇ ಬಾರಿಗೆ ಆಯ್ಕೆಯಾಗಿದ್ದಾರೆ ಎಂಬುದನ್ನು ಗಣನೆಗೆ ತೆಗೆದುಕೊಂಡದ್ದೂ ಸೇರಿದಂತೆ ಹುಳಿಯಾರ್ ಅವರು ಸೂಚಿಸುವ ಸಚಿವ ಸ್ಥಾನಗಳ 'ರೊಟೇಶನ್' ವ್ಯವಸ್ಥೆಯ ಜಾರಿಯೂ ಅಷ್ಟು ಸರಳ-ಸುಲಭವಲ್ಲ. ಏಕೆಂದರೆ ಜಾತಿ-ಉಪಜಾತಿ-ಧರ್ಮ-ಲಿಂಗ-ಪ್ರದೇಶ ಇತ್ಯಾದಿಗಳನ್ನು ಆಧರಿಸಿದ 'ಸಾಮಾಜಿಕ ನ್ಯಾಯ'ದ ಒತ್ತಡಗಳ ರಾಜಕಾರಣದ ಪಾಲನೆಯಲ್ಲಿ ಅವರು ವಿಶೇಷ ಆದ್ಯತೆಯಂತೆ ಸೂಚಿಸುವ 'ತಜ್ಞತೆ' ಅಥವಾ 'ಯೋಗ್ಯತೆ'ಯ ಅಂಶಗಳು ಕಾಣೆಯಾಗುವ ಸಾಧ್ಯತೆಗಳೇ ಹೆಚ್ಚು. ಅದೀಗಾಗಾಲೇ ಕಳೆದ ಹತ್ತಾರು ವರ್ಷಗಳ ನಮ್ಮ ರಾಜಕಾರಣದಿಂದ ಸಾಬೀತಾಗಿದೆ. ಇನ್ನು, ಈ ರೊಟೇಶನ್‌ಗಳಿಗಾಗಿ ಸಂಪುಟ ಪುನಾರಚನೆಯೇ ಮುಖ್ಯಮಂತ್ರಿಗಳ ಪ್ರಮುಖ ಉದ್ಯೋಗವಾಗಿ ಪರಿಣಮಿಸಿ ಆಡಳಿತ ಅಸ್ತವ್ಯಸ್ತವಾದರೆ ಆಶ್ಚರ್ಯವಿಲ್ಲ. ಜೊತೆಗೆ, ಇಂತಹ 'ರೊಟೇಶನ್' ರಾಜಕಾರಣವನ್ನು ಒಪ್ಪಿ ಅದರ ನೇತೃತ್ವ ವಹಿಸಬಲ್ಲ ವ್ಯಕ್ತಿ ನುರಿತ 'ವೃತ್ತಿಪರ' ರಾಜಕಾರಣಿ ಆಗಿರಬಹುದೇ ಹೊರತು ಒಂದು ನಿರ್ದಿಷ್ಟ ರಾಜಕೀಯ ಬದ್ಧತೆ ಮತ್ತು ಮುನ್ನೋಟವುಳ್ಳ ದಕ್ಷ ಆಡಳಿತಗಾರನಾಗಿರಲು ಅಸಾಧ್ಯವೇ ಸರಿ!

ಪಕ್ಷಾಂತರದ ಹಾವಳಿಗೆ ಸಚಿವ ಹುದ್ದೆಯ ಆಕಾಂಕ್ಷೆಯೊಂದೇ ಕಾರಣವಾಗಿದ್ದಂತೆ ತೋರುವುದಿಲ್ಲ. ನಮ್ಮ ರಾಜಕಾರಣವು ಅಧಿಕಾರ ಎಂದರೆ ಒಂದು ಸೇವೆ-ಜವಾಬ್ದಾರಿ ಎನ್ನುವುದರ ಬದಲಾಗಿ ಕಾನೂನು ರಕ್ಷಣೆ ಇರುವ ಸಾಮಾಜಿಕ ಯಜಮಾನಿಕೆ ಮತ್ತು ಸಂಪಾದನೆಯ ಮಾರ್ಗ ಎನ್ನುವ ರೀತಿಯಲ್ಲಿ ತನ್ನನ್ನು ತಾನು ಕಟ್ಟಿಕೊಂಡಿರುವುದೇ ಇದರ ಮೂಲ ಕಾರಣ. ಹಾಗಾಗಿಯೇ ಇತ್ತೀಚೆಗೆ ಅಕ್ರಮ ಸಂಪತ್ತುಗಳ ಒಡೆಯರು ಒಂದಲ್ಲ ಒಂದು ಪಕ್ಷದಿಂದ ಶಾಸಕರಾಗಲು, ನಂತರ ಮಂತ್ರಿಗಳಾಗಿ ತಮ್ಮ ಅಕ್ರಮ

ಗಳಿಕೆಯನ್ನು ಕಾಪಾಡಿಕೊಳ್ಳಲು ಮತ್ತು ಹೆಚ್ಚಿಸಿಕೊಳ್ಳಲು ಮುಂದಾಗುತ್ತಿರುವುದು. ಹಾಗೇ. ಹಾಲಿ ರಾಜಕಾರಣಿಗಳು ತಮ್ಮ ಕುಟುಂಬಗಳ ಆದಷ್ಟೂ ಹೆಚ್ಚು ಸದಸ್ಯರನ್ನು ಶಾಸಕ-ಮಂತ್ರಿ ಮಾಡಿಸಲು ಯತ್ನಿಸುತ್ತಿರುವುದು. ಇಂತಹ ಸನ್ನಿವೇಶದಲ್ಲಿ ತತ್ವನಿಷ್ಠೆಯ ಮಾತಾಡುವುದು ಹಾಸ್ಯಾಸ್ಪದವಾದೀತು.

ಆದುದರಿಂದ ರಾಜ್ಯದ ಮಟ್ಟದಲ್ಲೇ ಸಾಧ್ಯವಿರಬಹುದಾದ ಒಂದು ಶಾಸನಾತ್ಮಕ ಉಪಕ್ರಮವನ್ನು ನಾನು ಸೂಚಿಸಬಯಸುವೆ. ಅದೆಂದರೆ ಶಾಸಕತ್ವ ಅಥವಾ ಸಚಿವ ಹುದ್ದೆ ಎಂಬುದು ಅಧಿಕಾರದ ಸ್ಥಾನಕ್ಕಿಂತ ಹೆಚ್ಚಾಗಿ ಸೇವೆಯ, ಜವಾಬ್ದಾರಿಯ ಹುದ್ದೆ ಎಂಬುದನ್ನು ಮನಗಾಣಿಸುವಂತೆ ಅವುಗಳಿಗಿರುವ ವಿಶೇಷ ಸೌಲಭ್ಯ, ರಕ್ಷಣೆ ಮತ್ತು ಅಧಿಕಾರಗಳನ್ನು ಕಾನೂನು ರೀತ್ಯವೇ ಆದಷ್ಟೂ ಮೊಟಕುಗೊಳಿಸುವುದು. ಇದು ಮೊದಲ ಹೆಜ್ಜೆಯಷ್ಟೆ, ಇದರಿಂದ ಶಾಸಕ ಅಥವಾ ಮಂತ್ರಿಯಾಗಲು ಚುನಾವಣೆಗಳ ಮೇಲೆ ವಿಪರೀತ ಹಣ ಖರ್ಚು ಮಾಡುವುದೂ ಸ್ವಲ್ಪವಾದರೂ ಹತೋಟಿಗೆ ಬರಬಹುದು. ಆಗ ಸೇವಾ ಮನೋಭಾವ ಉಳ್ಳ ಸಜ್ಜನರೂ ಒಂದಷ್ಟು ಜನ ಚುನಾವಣೆಗಳಿಗೆ ನಿಲ್ಲುವಂತಾಗಬಹುದು. ಆದರೆ ಇದನ್ನು ಮಾಡುವವರಾರು? ಆ ಇಚ್ಛೆ ನಮ್ಮ ರಾಜಕಾರಣದ ಒಡಲಲ್ಲಿ ಇದ್ದಿದ್ದಲ್ಲಿ ರಾಜಕಾರಣ ಇಂದು ಈ ದುಃಸ್ಥಿತಿ ತಲುಪುತ್ತಿರಲಿಲ್ಲ. ರಾಜಕಾರಣವನ್ನು ಸೇವೆಯೆಂದು ಮಾತ್ರ ಪರಿಗಣಿಸುವಂತೆ ಮಾಡುವ ಹೊಸ ರಾಜಕೀಯ ಸಂಸ್ಕೃತಿಯನ್ನು ಹುಟ್ಟು ಹಾಕುವಂತಹ ಜನಾಂದೋಲನವೊಂದೇ ಇದಕ್ಕೆ ಪರಿಹಾರ. ಆದರೆ ಅದರ ನೇತೃತ್ವ ವಹಿಸಬಲ್ಲವರಾರು?

(೧೭. ೨. ೨೦೧೯ರ ಪ್ರಜಾವಾಣಿಯ 'ಸಂಗತ'ದಲ್ಲಿ ಪ್ರಕಟ)

ಕುಟುಂಬ ರಾಜಕಾರಣ ಮತ್ತು ಪ್ರಜಾಪ್ರಭುತ್ವ

ಪ್ರಜ್ವಲ್ ರೇವಣ್ಣನವರ ಪರವಾದ ಚುನವಣಾ ಪ್ರಚಾರಾಂಭದ ಸಮಾರಂಭದಲ್ಲಿ ದೇವೇಗೌಡರು ಕಣ್ಣೀರಿಟ್ಟಿದ್ದಾರಂತೆ. (ಪ್ರವಾ: ೧೪ ಮಾರ್ಚ್) ಅದನ್ನನುಸರಿಸಿ ಅವರ ಮಗ, ಸೊಸೆ ಮತ್ತು ಮೊಮ್ಮಗನೂ ಕಣ್ಣೀರು ಸುರಿಸಿದ್ದಾರಂತೆ. ಕಾರಣ, ತಮ್ಮ ಕುಟುಂಬದ ಮೇಲೆ ವಿನಾಕಾರಣ ಕುಟುಂಬ ರಾಜಕಾರಣದ ಆರೋಪ ಮಾಡಲಾಗುತ್ತಿದೆ ಎಂಬುದು! ಈ ಸುದ್ದಿಯನ್ನೋದುತ್ತಿದ್ದಾಗ ಈ ಕಣ್ಣೀರ ಕಥೆ ಕೇಳಿದ ಶಾಲಾ ಬಾಲಕನೊಬ್ಬ 'ಏಕೆ, ದೇವೇಗೌಡರಿಗೆ ಕನ್ನಡ ಬರುವುದಿಲ್ಲವೆ? ಕುಟುಂಬ ರಾಜಕಾರಣವೆಂದರೆ ಏನು? ಅವರು ಮಾಡುತ್ತಿರುವುದು ಅದೇ ಎಂಬುದು ಅರ್ಥವಾಗದಷ್ಟು ಮುಗ್ಧರೇ ಅವರು?' ಎಂದು ಕೇಳಿದ!

ದೇವೇಗೌಡರ ಕುಟುಂಬದ ಸರ್ವ ಸದಸ್ಯರೂ ಸಾರ್ವಜನಿಕವಾಗಿ ಅಳುವುದಕ್ಕೆ ಹೆಸರುವಾಸಿ ಎಂದು ಎಲ್ಲರಿಗೂ ಗೊತ್ತು. ಮನಃಶಾಸ್ತ್ರಜ್ಞರನ್ನು ಕೇಳಿದರೆ, ವಯಸ್ಕರು ಹೀಗೆ ಅಮಾಯಕವಾಗಿ ಸಾರ್ವಜನಿಕವಾಗಿ ಅಳುವುದು, ತಮಗೆದುರಾದ ಪ್ರಶ್ನೆಗೆ

ತಾವು ಕೊಡಬಹುದಾದ ಉತ್ತರ ತಮ್ಮ ವರ್ತನೆಯನ್ನು ಇನ್ನಷ್ಟು ಬಯಲುಗೊಳಿಸುತ್ತದೆ ಎಂಬ ಅಸಹಾಯಕತೆ–ಆತಂಕಗಳ ಅರಿವಿನಿಂದ ಎಂದು ಹೇಳಿಯಾರು. ಆದರೆ ಹೊಳೆನರಸೀಪುರದ ಬಳಿಯ ಈ ಅಳುವಿನ ಕಾರ್ಯಕ್ರಮಕ್ಕೆ ಎರಡು ಕಾರಣಗಳಿದ್ದಂತೆ ಕಾಣುತ್ತದೆ. ಒಂದು, ಮಾರನೆಯ ದಿನಕ್ಕೆ ನಿಗದಿಯಾಗಿದ್ದ ವಂಶದ ಇನ್ನೊಂದು ಕುಡಿ ನಿಖಿಲ್ ಕುಮಾರಸ್ವಾಮಿಯವರ ಪಟ್ಟಾಭಿಷೇಕಕ್ಕೆ ಭೂಮಿಕೆ ಸಿದ್ಧಪಡಿಸುವುದು. ಇನ್ನೊಂದು, ನಿಜವಾಗಿಯೂ ಅವರ ಬಗೆಗಿನ ಸಹಾನುಭೂತಿಗೆ ಅರ್ಹವಾದುದು. ಅದೆಂದರೆ, ತಮ್ಮನ್ನು ಮಾತ್ರ ಏಕೆ ಕುಟುಂಬ ರಾಜಕಾರಣದ ಆರೋಪಕ್ಕೆ ಗುರಿ ಮಾಡಲಾಗುತ್ತಿದೆ ಎಂಬ ನೋವು! ಸಿದ್ಧರಾಮಯ್ಯ ಕುಟುಂಬ ರಾಜಕಾರಣ ಆರಂಭಿಸಿಲ್ಲವೆ? ಗುಂಡೂ ರಾವ್‌ರದ್ದು ಕುಟುಂಬ ರಾಜಕಾರಣವಲ್ಲವೆ? ಬಂಗಾರಪ್ಪ ಏನು ಕಡಿಮೆ? ಯಡಿಯೂರಪ್ಪ, ಖರ್ಗೆ, ಧರ್ಮಸಿಂಗ್, ಜಾರಕಿಹೊಳಿ, ಮುನಿಯಪ್ಪ, ಭೈರೇಗೌಡ, ರಾಮಲಿಂಗಾರೆಡ್ಡಿ, ಉದಾಸಿ, ಕತ್ತಿ ಹೀಗೆ ಪಕ್ಷಭೇದವಿಲ್ಲದೆ ಇವರದ್ದೆಲ್ಲವೂ ಕುಟುಂಬ ರಾಜಕಾರಣವಲ್ಲವೆ? ಎಂಬುದೇ ದೇವೇಗೌಡರ ಪ್ರಶ್ನೆಯಾಗಿರಬಹುದು! ಹಾಗಾಗಿಯೇ ಈ ಹಿಂದೆ ಇದೇ ಕಾರಣಕ್ಕೆ ಅವರನ್ನು ಟೀಕಿಸುತ್ತಿದ್ದ ಮತ್ತು ಅವರ ಪಕ್ಷವನ್ನು ಬಿಟ್ಟು ಬಂದ ನಮ್ಮ ವಿವಿಧ ಪಕ್ಷಗಳ ವಿವಿಧ ನಾಯಕರು ಈಗ ಈ ಬಗ್ಗೆ ಸೊಲ್ಲೆತ್ತುತ್ತಿಲ್ಲ! ಲಜ್ಜೆಗೆಟ್ಟ ಇಂದಿನ ಈ ರಾಜಕೀಯ ಚಿತ್ರದಲ್ಲಿ ತಮ್ಮನ್ನು ಮಾತ್ರ ಎತ್ತಿ ತೋರಿಸಲಾಗುತ್ತಿದೆ ಎಂಬುದು ದೇವೇಗೌಡರ ಅಳಲು ಇರಬಹುದು.

ಇದು ನಮ್ಮ ರಾಜ್ಯದ ಚಿತ್ರ ಮಾತ್ರ. ಇತರ ರಾಜ್ಯಗಳಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲೂ ಕುಟುಂಬ ರಾಜಕಾರಣದ ಹೆಬ್ಬಲೆಯೇ ಹರಡಿದೆ! ಆದರೆ ಈ ಎಲ್ಲ ಕುಟುಂಬ ರಾಜಕಾರಣಗಳಿಗೆ ಹೋಲಿಸಿದರೆ ದೇವೇಗೌಡರ ಕುಟುಂಬ ರಾಜಕಾರಣವೇ ಅವಕ್ಕೆ ಸಮಾನವಾಗಿ ಸವಾಲು ಹಾಕುವಷ್ಟು ಸುಪುಷ್ಟವಾಗಿರುವುದು! ಅಷ್ಟು ವಿಶಾಲವಾದದ್ದು, ಆಳಕ್ಕೆ ಬೇರುಬಿಟ್ಟುದುದು ಇವರ ಕುಟುಂಬ ರಾಜಕಾರಣ. ಈ ವಿಷಯದಲ್ಲಿ ದೇವೇಗೌಡರದ್ದು ಒಂದು ದೊಡ್ಡ ಸಾಧನೆಯೇ ಸರಿ! ಇನ್ನಾವ ಕಾರಣಕ್ಕಲ್ಲದಿದ್ದರೂ ರಾಜ್ಯದಲ್ಲಿನ ಕುಟುಂಬ ರಾಜಕಾರಣದ ಪ್ರಪಿತಾಮಹರೆಂಬ ಕಾರಣಕ್ಕಾದರೂ ಅವರ ಹೆಸರು ಕರ್ನಾಟಕದ ರಾಜಕೀಯ ಇತಿಹಾಸದ ಮಟ್ಟಿಗಾದರೂ ಅಜರಾಮರವಾಗಿರುತ್ತದೆ.

ದೇವೇಗೌಡರು ಕುಟುಂಬ ರಾಜಕಾರಣವನ್ನು ಪೋಷಿಸುವ 'ಜಾಣ' ರೀತಿ ಅನನ್ಯವಾದುದು. ಕೆಲ ತಿಂಗಳ ಹಿಂದೆ ತಮಗೆ ಹಾಸನ ಲೋಕಸಭಾ ಕ್ಷೇತ್ರದ ಜವಾಬ್ದಾರಿಯಿಂದ ದಣಿವಾಗಿದ್ದು, ಬೇರೆ ಯಾರೂ ಈ ಜವಾಬ್ದಾರಿಯನ್ನು ಹೊರಲು ಮುಂದೆ ಬರದಿರುವುದರಿಂದ ಬೇರೆ ನಿರ್ವಾಹವಿಲ್ಲದೆ ಮೊಮ್ಮಗ ಪ್ರಜ್ವಲರಿಗೆ ಆ ಜವಾಬ್ದಾರಿಯನ್ನು ಹಸ್ತಾಂತರಿಸಬೇಕಿದೆ ಎಂದು ಅಲವತ್ತುಕೊಂಡಿದ್ದರು. ಆಗ ಜನ ದೇವೇಗೌಡರಿಗೆ ನಿಜವಾಗಿ ವಯಸ್ಸಾಗಿದೆ; ಅಂತೂ ಅವರು ವಿಶ್ರಾಂತಿ ಬಯಸಿದ್ದಾರೆ ಎಂದು ತಿಳಿದು ಅವರ ವಿಶ್ರಾಂತ ಜೀವನಕ್ಕೆ ಶುಭ ಕೋರುವ ಸನ್ನಾಹದಲ್ಲಿದ್ದರು. ಆದರೆ ಅವರ ಈ ಯೋಜನೆ ತಮ್ಮ ಮೊಮ್ಮಗನ ರಾಜಕೀಯ ಪ್ರವೇಶಕ್ಕೆ ಒಂದು

ಸುಕ್ಷೇಮ ಕ್ಷೇತ್ರವನ್ನು ಕಲ್ಪಿಸಿಕೊಡುವುದೇ ಆಗಿತ್ತು ಎಂಬುದು ಅವರು ಈಗ ಸ್ವಜಾತಿ ಪ್ರಧಾನವಾದ ಇನ್ನೊಂದು ಕ್ಷೇತ್ರದ ತಲಾಶಿನಲ್ಲಿರುವುದರಿಂದ ಗೊತ್ತಾಗುತ್ತಿದೆ. ಆದರೂ ಅವರು ಜಾತ್ಯತೀತರು ಮತ್ತು ಅವರ ಪಕ್ಷ ಜಾತ್ಯತೀತ ಪಕ್ಷ!

ದೇವೇಗೌಡರೂ ಸೇರಿದಂತೆ ಕುಟುಂಬ ರಾಜಕಾರಣ ಮಾಡುವವರೆಲ್ಲರೂ, ವೈದ್ಯನ ಮಗ ವೈದ್ಯ, ಅಧಿಕಾರಿಯ ಮಗ ಅಧಿಕಾರಿಯಾಗುವುದು ಸರಿಯಾದರೆ ರಾಜಕಾರಣಿಯ ಮಗ ರಾಜಕಾರಣಿಯಾದರೆ ತಪ್ಪೇನು? ಎಂದು ಕೇಳುತ್ತಾರೆ. ಆದರೆ ಇತರರು ವರ್ಷಗಟ್ಟಲೆ ಆ ಉದ್ಯೋಗಕ್ಕಾಗಿ ಸಂಬಂಧಿತ ಜ್ಞಾನ ಕ್ಷೇತ್ರದಲ್ಲಿ ಕಷ್ಟಪಟ್ಟು ಅಭ್ಯಸಿಸಿ, ಸ್ಪರ್ಧಿಸಿ ಆ ಹುದ್ದೆಯನ್ನು ಗಳಿಸುತ್ತಾರೆ. ಆದರೆ ಇಂದು ರಾಜಕಾರಣ ಮುಟ್ಟಿರುವ ಪಾತಾಳ ಸ್ಥಿತಿಯಲ್ಲಿ ರಾಜಕಾರಣಿಗಳ ಮಕ್ಕಳಿಗೆ ಯಾವುದೇ ಪರಿಶ್ರಮ ಮತ್ತು ಅನುಭವವಿಲ್ಲದೆ ದೊರೆಯುವ ಕುಟುಂಬದ ಪ್ರಭಾವ ಜಾಲ, ಜಾತಿ ಮತ್ತು ಹಣಬಲಗಳೇ ಸಾಕು ಸ್ಪರ್ಧೆಗೆ ಮತ್ತು ಯಶಸ್ಸಿಗೆ. ಉದಾಹರಣೆಗೆ ಪ್ರಜ್ವಲ್ ಮತ್ತು ನಿಖಿಲ್‌ರನ್ನೇ ನೋಡಿ. ಈ ಹುಡುಗರು ಯಾವ ಸಂಸದೀಯ ಅನುಭವವೂ ಇಲ್ಲದೆ ನೇರವಾಗಿ ಸಂಸದೀಯ ಪ್ರಜಾಪ್ರಭುತ್ವದ ಅತ್ಯುನ್ನತ ಸಂಸ್ಥೆ ಎನಿಸಿರುವ ಸಂಸತ್ತಿಗೇ ಹೋಗಬಯಸಿದ್ದಾರೆ. ಅವರ ಪಕ್ಷದಲ್ಲೇ ಏಕೆ ಇದಕ್ಕೆ ಅರ್ಹರಾದವರು ಬೆಳೆಯಲಿಲ್ಲ? ಅಥವಾ ದೇವೇಗೌಡರು ಬೆಳೆಸಲಿಲ್ಲ? ಪ್ರಜಾಪ್ರಭುತ್ವವನ್ನು ಬೆಳೆಸಬೇಕಾದದ್ದು ಹೀಗೆಯೇ? ದೇವೇಗೌಡರಂತಹ ಹಿರಿಯ ರಾಜಕಾರಣಿಗಳು ಇದನ್ನೆಲ್ಲ ಯೋಚಿಸಬಲ್ಲವರಾಗಿದ್ದರೆ ಅವರು ಕುಟುಂಬ ರಾಜಕಾರಣದ ಆರೋಪಕ್ಕೆ ಸಿಕ್ಕಿ ಸಾರ್ವಜನಿಕವಾಗಿ ಅಳುವ ಕರುಣಾಜನಕ ಸ್ಥಿತಿ ಉಂಟಾಗುತ್ತಿರಲಿಲ್ಲ.

(೧೭.೩.೨೦೧೯ರ 'ಪ್ರಜಾವಾಣಿ' – 'ಸಂಗತ')

ದೇಶ ಮೊದಲು ಎಂದರೇನು?

ನರೇಂದ್ರ ಮೋದಿಯವರು ಏನಲ್ಲದಿದ್ದರೂ ಚತುರ ಮಾತುಗಾರರು. ಅದು ಮೊನ್ನೆ ಅವರು ಚಿತ್ರದುರ್ಗದಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡುತ್ತಾ, ತಮ್ಮ ಬಿಜೆಪಿಗೆ ದೇಶ ಮೊದಲಾದರೆ ವಿರೋಧ ಪಕ್ಷಗಳಿಗೆ ಕುಟುಂಬ ಮೊದಲು ಎಂದು ಹೇಳುವ ಮೂಲಕ ಇದನ್ನು ಸಾಬೀತುಪಡಿಸಿದ್ದಾರೆ. (ಪ್ರವಾ: ೧೦ ಏಪ್ರಿಲ್) ಕರ್ನಾಟಕದ ರಾಜಕಾರಣವನ್ನು ಗಮನಿಸುತ್ತಾ ಬಂದ ಸಾಮಾನ್ಯ ಜನರ ಮನಸ್ಸಿಗೆ ಮೋದಿಯವರ ಈ ಮಾತಿನ ಬಾಣ ಸರಾಗವಾಗಿ ಒಳಹೊಗುತ್ತದೆ. ಆದರೆ ಸದರಿ ಲೋಕಸಭಾ ಚುನಾವಣೆಗಳ ಸಂದರ್ಭವನ್ನು ಸೂಕ್ಷ್ಮವಾಗಿ ಗಮನಿಸಿದವರಿಗೆ ಮೋದಿಯವರ ಮಾತು ಸಂಪೂರ್ಣ ಸತ್ಯವೇನಲ್ಲ ಎಂದು ಗೊತ್ತಾಗುತ್ತದೆ. ಏಕೆಂದರೆ ಇವರ ಪಕ್ಷಕ್ಕೂ ರಾಜ್ಯದಲ್ಲಿ ಕುಟುಂಬ ರಾಜಕಾರಣದ ದೀರ್ಘ ಇತಿಹಾಸವಿದ್ದು, ಈ ಚುನಾವಣೆಗಳಲ್ಲೇ ಶಿವಮೊಗ್ಗ, ಹಾವೇರಿ, ದಾವಣಗೆರೆ ಮತ್ತು ಚಿಕ್ಕೋಡಿ ಕ್ಷೇತ್ರಗಳಲ್ಲಿ ಇವರು ಪೋಷಿಸುತ್ತಿರುವುದೂ ಕುಟುಂಬ ರಾಜಕಾರಣವನ್ನೇ ಎಂಬುದು ತಿಳಿಯುತ್ತದೆ.

ಇನ್ನು ಇವರ ದೇಶ ಮೊದಲು ಎಂಬ ಮಾತನ್ನಷ್ಟೇ ಪರಿಶೀಲಿಸೋಣ. ದೇಶ ಎಂದರೆ ಏನು? ಗಡಿ ಮತ್ತು ಸೈನ್ಯವೇ? ಅದರಲ್ಲಿ ಜನ ಮತ್ತು ಅವರ ಕಷ್ಟ-ಸುಖಗಳು ಸೇರಿಯೇ ಇಲ್ಲವೇ? ದೇಶವೆಂದರೆ ಗಡಿ-ಸೈನ್ಯ ಎಂದರೂ, ಮೋದಿಯವರ ಆಳ್ವಿಕೆಯ ಕಾಲದಲ್ಲೇ ನಮ್ಮ ಸೇನಾ ಸಂಸ್ಥಾಪನೆಗಳ ಮೇಲೆ ನೆರೆದೇಶದ ಹೆಚ್ಚು ದಾಳಿಗಳು ನಡೆದಿರುವುದು ಎಂಬುದನ್ನು ಜನ ಮರೆತಿಲ್ಲ. ಮುಖ್ಯವಾಗಿ ಉರಿ ಮತ್ತು ಪಠಾಣ್‌ಕೋಟ್ ದಾಳಿಗಳು. ನಂತರ ಇತ್ತೀಚಿನ ಪುಲ್ವಾಮಾ ದಾಳಿ. ಈ ಘಟನೆಗಳಿಗೆ ಮತ್ತು ಇದರಿಂದಾಗಿ ನಮ್ಮ ಸೇನೆ ಅನುಭವಿಸಿದ ಕಷ್ಟ ನಷ್ಟಗಳಿಗೆ ಯಾರ ಆಡಳಿತ ಹೊಣೆ? ಬಾಲಾಕೋಟ್ ನಿರ್ದಿಷ್ಟ ದಾಳಿ ನಡೆಸಿದ ವೀರ ಯೋಧರ ನೆನಪಲ್ಲಿ ತಮ್ಮ ಪಕ್ಷಕ್ಕೆ ಮತ ಹಾಕಬೇಕೆಂದು ಮೋದಿ ಹೊಸ ಮತದಾರರಿಗೆ ಕರೆ ಬೇರೆ ಕೊಟ್ಟಿದ್ದಾರೆ! ಇದು ಪಾಕಿಸ್ತಾನದೊಡನೆ ಯುದ್ಧ ಮಾಡಿ ಗೆದ್ದ ಈವರೆಗಿನ ಯಾವ ಸರ್ಕಾರವೂ ಇಳಿಯದಂತಹ ರಾಜಕೀಯ ಮಟ್ಟದ ಮಾತು ಎಂದು ವಿಷಾದದಿಂದ ಹೇಳಬೇಕಿದೆ. ನಮ್ಮ ವೀರಯೋಧರು, ದೇಶಕ್ಕೆ ಸೇರಿದವರು. ಬಂದು ಹೋಗುವ ಯಾವುದೇ ಸರ್ಕಾರದ ಅಥವಾ ಪಕ್ಷದ ಸ್ವತ್ತಲ್ಲ. ಆದರೆ ಮೋದಿಯವರು ನಮ್ಮ ಸೇನೆಯನ್ನು ತಮ್ಮ ಪಕ್ಷದ ಪರವಾಗಿ ಮತ ಯಾಚಿಸುವ ಸಾಧನವನ್ನಾಗಿ ಪರಿವರ್ತಿಸಿಕೊಂಡು ಸೇನೆಯ ಘನತೆ ಮತ್ತು ಪಾವಿತ್ರ್ಯಗಳಿಗೆ ಅಪಚಾರವೆಸಗಿದ್ದಾರೆ. ಇದರ ಜೊತೆಗೇ ಗಮನಿಸಬೇಕಾದ ಇನ್ನೆರಡು ಸಂಗತಿಗಳೆಂದರೆ, ಈ ನಿರ್ದಿಷ್ಟ ದಾಳಿಯ ಪರಿಣಾಮಗಳು ಬಿಜೆಪಿ ನಾಯಕರ ಬೊಗಳೆ ಮಾತುಗಳಾಚೆ ಅಂತಾರಾಷ್ಟ್ರೀಯ ವಲಯಗಳಲ್ಲಿ ಇನ್ನೂ ಖಚಿತವಾಗಿ ಸಾಬೀತಾಗಬೇಕಿದೆ ಎಂಬುದು ಒಂದು. ಇನ್ನೊಂದು ಸಂಗತಿ ಎಂದರೆ ಇಂತಹ ನಿರ್ದಿಷ್ಟ ದಾಳಿಗಳು ಈ ಹಿಂದಿನ ಸರ್ಕಾರಗಳ ಆಳ್ವಿಕೆಯ ಸಮಯಗಳಲ್ಲೂ ನಡೆದಿದ್ದು ಅವಕ್ಕೆ ಸಕಾರಣವಾಗಿಯೇ ಪ್ರಚಾರ ನೀಡಿಲ್ಲ ಎಂಬುದು.

ವಾಸ್ತವ ಮಟ್ಟದಲ್ಲಿ ಯೋಚಿಸುವುದಾದರೆ ದೇಶ ಅಂದರೆ ನಿಜವಾಗಿ ಜನ. ಅವರ ಕಷ್ಟ ಸುಖಗಳು. ಆದರೆ ಮೋದಿಯವರು ಈಗ ಈ ಹಿಂದಿನ ಚುನಾವಣೆಗಳ ಸಮಯದಲ್ಲಿ ಜನತೆಯ ಬದುಕನ್ನು ಹಸನು ಮಾಡುವುದಾಗಿ ಹೇಳಿದ್ದ ತಮ್ಮ ಯಾವ ಯೋಜನೆ, ವಾಗ್ದಾನಗಳ ಪ್ರಸ್ತಾಪವನ್ನೂ ಮಾಡದೆ ದೇಶ, ಸೇನೆ, ವಿರೋಧ ಪಕ್ಷ ಎಂದು ಭಾವಾವೇಶದ ಜಾಣ ಮಾತುಗಳನ್ನಾಡುತ್ತಿರುವುದೇಕೆಂದು ಅರ್ಥವಾಗುತ್ತಿಲ್ಲ. ಅವರೇ ವಾಗ್ದಾನ ಮಾಡಿದ್ದಂತೆ ವಿದೇಶಗಳಿಂದ ಕಪ್ಪು ಹಣ ತಂದು ನಮಗೆ ಹಂಚಲು ತಮಗೆ ಏಕೆ ಸಾಧ್ಯವಾಗಲಿಲ್ಲ? ರೈತರ ಬೆಳೆಗೆ ಸೂಕ್ತ ಬೆಲೆ ಕೊಟ್ಟು ಅವರ ಆದಾಯವನ್ನು ಹೆಚ್ಚಿಸುವ ಮೂಲಕ ಅವರ ಆತ್ಮಹತ್ಯೆಗಳನ್ನು ಏಕೆ ನಿಲ್ಲಿಸಲಾಗಲಿಲ್ಲ? ಕಪ್ಪುಹಣದ ವಿರುದ್ಧ, ಭಯೋತ್ಪಾದನೆಯ ವಿರುದ್ಧ ಮತ್ತು ನಕ್ಸಲ್ ಹಿಂಸೆಯ ವಿರುದ್ಧದ ಕಾರ್ಯಾಚರಣೆ ಎಂದು ಘೋಷಿಸಿ ಜಾರಿಗೆ ತಂದ ನೋಟು ಅಮಾನ್ಯೀಕರಣ ಇವಾವುದನ್ನೂ ಸಾಧಿಸದೆ, ಕೆಲವರು ಕಪ್ಪುಹಣ ಬಿಳಿ ಮಾಡಿಕೊಳ್ಳಲು ಅವಕಾಶ ಒದಗಿದ್ದು ಹೇಗೆ? ಕಾಶ್ಮೀರದಲ್ಲಿ ಹಿಂದೆಂದಿಗಿಂತ ಹೆಚ್ಚು ಪ್ರತ್ಯೇಕತಾವಾದದ ಪರ

ವಾತಾವರಣ ಸೃಷ್ಟಿಯಾಗಿ ಸ್ಥಳೀಯ ಜನರೂ ಭಯೋತ್ಪಾದನೆಯತ್ತ ಒಲಿಯುತ್ತಿರುವ ಹೊಸ ಬೆಳವಣಿಗೆಗೆ ಏನು ಕಾರಣ? ನಿಮ್ಮ ರಾಜ್ಯಪಾಲರೊಬ್ಬರು ಕಾಶ್ಮೀರಿಗಳನ್ನೂ ಅವರ ಉತ್ಪನ್ನಗಳೂ ಬಹಿಷ್ಕರಿಸಿ ಎಂಬ ದೇಶದ ಐಕ್ಯತೆ ಮತ್ತು ಸಮಗ್ರತೆಗಳಿಗೆ ಧಕ್ಕೆ ತರುವಂತಹ ಹೇಳಿಕೆ ನೀಡಿಯೂ ಅ ಸ್ಥಾನದಲ್ಲಿ ಹೇಗೆ ಮುಂದುವರೆದಿದ್ದಾರೆ? ದೇಶ ದಾಖಲೆಯ ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿರುವುದೇಕೆ? ಕೈಗಾರಿಕಾ ಉತ್ಪಾದನೆ ಮತ್ತು ವಿದೇಶಿ ಬಂಡವಾಳ ಹೂಡಿಕೆ ಅತಿ ಕೆಳಕ್ಕೆ ಇಳಿದಿರುವುದೇಕೆ? ಇವುಗಳ ನಡುವೆಯೂ ನಮ್ಮ ದೇಶದ ಪ್ರಗತಿ ದರ ಹೆಚ್ಚಿ, ಕೋಟ್ಯಾಧೀಶ್ವರರ ಸಂಖ್ಯೆಯೂ ಹೆಚ್ಚಲು ಹೇಗೆ ಸಾಧ್ಯ? ವಿಜಯ ಮಲ್ಯ, ನೀರವ ಮೋದಿ ಮುಂತಾದ ವಂಚಕರು ದೇಶಬಿಟ್ಟು ಹೊರಕ್ಕೆ ಹಾರಿದ್ದು ಹೇಗೆ? ಇತ್ಯಾದಿ ಜನ ಸಂಬಂಧಿ ಪ್ರಶ್ನೆಗಳಿಗೆ ಉತ್ತರವನ್ನಾಗಲೀ, ವಿವರಣೆಯನ್ನಾಗಲೀ ಮೋದಿಯವರು ಏಕೆ ನೀಡುತ್ತಿಲ್ಲ?

ಮೋದಿ ರಾಜ್ಯದ ಎರಡನೇ ಸುತ್ತಿನ ಮತದಾನದ ಮುನ್ನ ಪ್ರಚಾರಕ್ಕೆ ಬರುವ ಸಭೆಗಳಲ್ಲಾದರೂ ಈ ವಿಷಯಗಳ ಬಗ್ಗೆ ಮಾತನಾಡಿ, ತಮ್ಮ 'ಅಚ್ಛೇ ದಿನ'ಗಳನ್ನು ಜನ ಯಾವಾಗ ನಿರೀಕ್ಷಿಸಬಹುದು ಎಂಬುದನ್ನು ಹೇಳುವರು ಎಂದು ಆಶಿಸಬಹುದೇ?

(ಪ್ರಜಾವಾಣಿಯ ೧೨.೪.೨೦೧೯ರ ಸಂಚಿಕೆಯ 'ಸಂಗತ'ದಲ್ಲಿ ಪ್ರಕಟ)

ಪೇಜಾವರ ಶ್ರೀಗಳು ನಿಜವಾದ ದೇಶಭಕ್ತರಾಗಿದ್ದರೆ...

ಯಡಿಯೂರಪ್ಪನವರ 'ಪಾಕಿಸ್ತಾನದಲ್ಲಿನ ಬಾಲಾಕೋಟ್ ಮೇಲಿನ ನಮ್ಮ ವೈಮಾನಿಕ ದಾಳಿ ಬರಲಿರುವ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿಗೆ ಲಾಭ ತರಲಿದೆ' ಎಂಬ ಅಪ್ಪಟ ರಾಜಕೀಯ ಸಂಕುಚಿತತೆಯ ಹೇಳಿಕೆಯನ್ನು ಪೇಜಾವರ ಶ್ರೀಗಳು ಸಮರ್ಥಿಸಿದ್ದಾರೆ. (ಪ್ರವಾ: ೨, ಮಾರ್ಚ್) ಈ ಸಮರ್ಥನೆಯ ಭಾಗವಾಗಿ ಅವರು ಬುದ್ಧಿಜೀವಿಗಳಿಗೆ ರಾಷ್ಟ್ರಭಕ್ತಿ ಇಲ್ಲ ಎಂದೂ ಅಪ್ಪಣೆ ಕೊಡಿಸಿದ್ದಾರೆ. ಆದರೆ ಈ ಮೂಲಕ ಅವರು ತಮಗೆ ಬುದ್ಧಿ ಇಲ್ಲ ಎಂಬುದನ್ನು ಸಾಬೀತುಪಡಿಸಿದ್ದಾರೆ ಎಂದು ವಿಷಾದದಿಂದ ಹೇಳಬೇಕಿದೆ. ಏಕೆಂದರೆ, ರಾಷ್ಟ್ರದ ಮೇಲಿನ ನರೇಂದ್ರ ಮೋದಿಯವರ ಪ್ರಭಾವ ಅವರ ನೇತೃತ್ವದ ಸರ್ಕಾರದ ಹಲವು ವೈಫಲ್ಯಗಳ ಹಿನ್ನೆಲೆಯಲ್ಲಿ ಮಸುಕುಗೊಂಡಿರುವುದನ್ನು ಸಮೀಕ್ಷೆಗಳು ಮತ್ತು ಸಾರ್ವಜನಿಕಾಭಿಪ್ರಾಯಗಳು ಸೂಚಿಸುತ್ತಿದ್ದ ಕೆಲವೇ ದಿನಗಳ ಹಿಂದಷ್ಟೇ ರಾಜಕೀಯ ತಾಟಸ್ಥ್ಯ ಸೂಚಿಸುವ ಹೇಳಿಕೆ ನೀಡಿದ್ದ ಪೇಜಾವರರು ಈಗ ಸ್ವತಃ ಬಿಜೆಪಿಯ ನಾಯಕತ್ವವೇ ಮುಜುಗರಗೊಳ್ಳುವಂತೆ ಮಾಡಿದ ಯಡಿಯೂರಪ್ಪನವರ ಹೇಳಿಕೆಯನ್ನು ಸಮರ್ಥಿಸಿದ್ದಾರೆ. ಇದು ಸದ್ಯದ ಅವರ ಮನಃಸ್ಥಿತಿಯ ಬಗ್ಗೆ ಜನ ಆಮೂಲಾಗ್ರವಾಗಿ ಯೋಚಿಸುವಂತೆ ಮಾಡಿದೆ. ಅಂದರೆ ಇವರು ಯಡಿಯೂರಪ್ಪನವರ ಹೇಳಿಕೆಯ ಹಿಂದಿದ್ದ ಯುದ್ಧೋನ್ಮಾದದಿಂದ ಪ್ರೇರಿತರಾಗಿರುವುದು ಸ್ಪಷ್ಟವಾಗಿದ್ದು, ಇಂತಹ ಮಠಾಧೀಶರನ್ನು ಸಾಧು-ಸಂತರ ಸಾಲಿನಲ್ಲಿಟ್ಟು ಗೌರವಿಸುವುದು ಎಷ್ಟು ಉಚಿತ ಎಂದು ಜನರೂ ಯೋಚನೆ ಮಾಡುವಂತಾಗಿದೆ.

ಪೇಜಾವರ ಮಠಾಧೀಶರು ಯಡಿಯೂರಪ್ಪನವರ ಹೇಳಿಕೆಯನ್ನು ಸಮರ್ಥಿಸುತ್ತಾ ೧೯೭೧ರ ಬಂಗ್ಲಾ ಯುದ್ಧ ಇಂದಿರಾ ಗಾಂಧಿಯವರಿಗೆ ರಾಜಕೀಯ ಲಾಭ ತಂದಿತೆಂಬುದನ್ನು ನೆನಪಿಸಿದ್ದಾರೆ. ಈ ಹೋಲಿಕೆಯೇ ಹಾಸ್ಯಾಸ್ಪದವಾದದ್ದಾಗಿದೆ. ಏಕೆಂದರೆ ಅದು ನಿಜವಾಗಿ ಯುದ್ಧವೇ ಆಗಿದ್ದು ಅದರಲ್ಲಿ ನಮಗೆ ಅಭೂತಪೂರ್ವ ಜಯ ದೊರಕಿತ್ತು. ಆದರೆ ಆಗ ಇಂದಿರಾ ಅವರ ಪಕ್ಷದ ಯಾರೂ ಅದರಿಂದ ತಮ್ಮ ಪಕ್ಷಕ್ಕೆ ದೊರೆಯಬಹುದಾದ ಚುನಾವಣಾ ಲಾಭದ ಬಗ್ಗೆ ಮೂರ್ಖರಂತೆ ಮಾತಾಡಿರಲಿಲ್ಲ. ಬದಲಿಗೆ ಮೋದಿಯವರ ಪಕ್ಷದ ನಾಯಕರೇ ಆಗಿದ್ದ ಅಟಲ್ ಬಿಹಾರಿ ವಾಜಪೇಯಿಯವರೇ ಇಂದಿರಾ ಗಾಂಧಿಯವರನ್ನು 'ದುರ್ಗೆ' ಎಂದು ಕರೆದು ಕಾಂಗ್ರೆಸ್ಸಿನ ಚುನಾವಣಾ ವಿಜಯಕ್ಕೆ ನಾಂದಿ ಹಾಡಿದ್ದರು! ಆದರೆ ಈಗ ಪುಲ್ವಾಮಾ ದಾಳಿಯ ನಂತರ ನಡೆದಿರುವುದೆಲ್ಲ ಎರಡೂ ಕಡೆಯವರು ಹೇಳಿಕೊಂಡಿರುವಂತೆ, ಯಾವ ಕಡೆಯ ಯಾರ ಕೂದಲೂ ಒಂದಿಷ್ಟೂ ಕೊಂಕದೆ ಎರಡೂ ದೇಶಗಳ ನಾಯಕರು ತಂತಮ್ಮ ದೇಶಗಳ ಜನರ ಮಾನಸಿಕ ತೃಪ್ತಿಗಾಗಿ ನಿರ್ದೇಶಿಸಿದ ಬಿಡಿ ಕಸರತ್ತುಗಳೇ ಹೊರತು ಯಾವುದೆ ರಾಷ್ಟ್ರೀಯ ಉದ್ದೇಶಗಳಿಗಾಗಿ ನಡೆದ ಒಂದು ಸಣ್ಣ ಯುದ್ಧ ಮಾದರಿಯೂ ಅಲ್ಲ ಎಂಬುದು ಸ್ಪಷ್ಟ. ಈ ಸೇನಾ ಕಸರತ್ತುಗಳಲ್ಲಿ ನಮ್ಮ ಸೇನೆ ಎಷ್ಟು ವೀರೋಚಿತವಾಗಿ ಭಾಗವಹಿಸಿತ್ತು ಎಂದು ನಾವು ಹೇಳಿಕೊಳ್ಳುತ್ತೇವೆಯೋ ಹಾಗೇ ಪಾಕಿಸ್ತಾನದ ಜನರೂ ತಮ್ಮ ಸೇನೆಯ ಬಗ್ಗೆ ಹೇಳಿಕೊಳ್ಳುತ್ತಿರುವುದರಲ್ಲಿ ಅಸಹಜತೆ ಏನೂ ಇರಲಾರದು. ಪರಿಸ್ಥಿತಿ ಹೀಗಿರುವಾಗ ಪೇಜಾವರರಂಥವರು ಇದನ್ನು ೧೯೭೧ರ ಬಂಗ್ಲಾ ಯುದ್ಧಕ್ಕೆ ಹೋಲಿಸಿ ಮಾತಾಡಹೊರಟಿರುವುದು ಅವರ ರಾಜಕೀಯ ಪಕ್ಷಪಾತ ದೃಷ್ಟಿಯ ಮರುನಿರೂಪಣೆ ಮಾತ್ರವಾಗಿ ಕಾಣುತ್ತದೆ.

ಪೇಜಾವರರಂತಹವರು ನಿಜವಾದ ದೇಶಭಕ್ತರೇ ಆಗಿದ್ದರೆ ಅವರು ಮಾಡಬೇಕಾದ ಮೊದಲ ಕೆಲಸವೆಂದರೆ, ಭಾರತ-ಪಾಕಿಸ್ತಾನಗಳ ನಡುವಣ ಕೆಲ ದಿನಗಳ ಈ ಉದ್ವಿಗ್ನತೆಗೆ ಕಾರಣವಾದ ಪುಲ್ವಾಮಾ ದಾಳಿ ಏಕೆ ಮತ್ತು ಹೇಗೆ ನಡೆಯಿತೆಂದು ಮೋದಿಯವರನ್ನು ಕೇಳುವುದು. ಹಾಡು ಹಗಲೇ, ಅದೂ ರಾಷ್ಟ್ರೀಯ ಹೆದ್ದಾರಿಯಲ್ಲಿ ನಮ್ಮ ಯೋಧರು ನೋಡನೋಡುತ್ತಿದ್ದಂತೆಯೇ ಈ ದಾರುಣ ದಾಳಿ ನಡೆದಿದ್ದರ ಹಿಂದೆ ಇರುವುದು ಯಾವ, ಯಾರ ಮತ್ತು ಎಂತಹ ವೈಫಲ್ಯ ಎಂದೂ ಕೇಳಬೇಕು. ಹಾಗೇ ಎಲ್ಲ ರಾಜಕೀಯ ಪಕ್ಷಗಳೂ ಒಮ್ಮತದಿಂದ ಬೆಂಬಲಿಸಿದ ಭಾರತದ ಸೇನೆ ಬಾಲಾಕೋಟ್ ಮೇಲೆ ನಡೆಸಿದ ದಾಳಿಯ ಎಲ್ಲ ಕೀರ್ತಿಯನ್ನು ತಮ್ಮ ಪರಾಕ್ರಮವೇ ಎಂಬಂತೆ ಚುನಾವಣೋದ್ದೇಶದ ಸಾರ್ವಜನಿಕ ಸಭೆಗಳಲ್ಲಿ ಯುದ್ಧೋನ್ಮಾದಿ ಪರಾಕ್ರಮಶೀಲತೆಯ ಮಾತನ್ನಾಡುತ್ತಿರುವುದು ಎಷ್ಟು ಸರಿ ಎಂದೂ ಅವರು ಕೇಳಬೇಕು. ಜೊತೆಗೇ ಈ ದಾಳಿಯ ಮೂಲಕ ಉಗ್ರರ ಹಾವಳಿಯನ್ನು ಸಂಪೂರ್ಣ ಮಟ್ಟ ಹಾಕಿದ್ದೀರಾ? ಎಂದೂ ಕೇಳಬೇಕು. ಏಕೆಂದರೆ ಈ ದಾಳಿಯ ಮರುದಿನದಿಂದಲೇ ಕಾಶ್ಮೀರದಲ್ಲಿ ಉಗ್ರರ (ಪ್ರತಿ)ದಾಳಿ ನಿರಂತರವಾಗಿ ನಡೆದಿದ್ದು ನಮ್ಮ ಅನೇಕ ಸೈನಿಕರು

ಹುತಾತ್ಮರಾಗುತ್ತಿರುವ ಸುದ್ದಿ ಬರುತ್ತಲೇ ಇದೆ. ಹಾಗಾಗಿ ಎಲ್ಲಕ್ಕಿಂತ ಮುಖ್ಯವಾಗಿ ಈ ಸಂದರ್ಭದಲ್ಲಿ ಪ್ರಧಾನಿ ಮೋದಿಯವರನ್ನು ಕೇಳಬೇಕಾದ ಪ್ರಧಾನ ಪ್ರಶ್ನೆ ಎಂದರೆ ನಿಮ್ಮ ಆಡಳಿತ ಶೈಲಿ ಕಾಶ್ಮೀರ ಸಮಸ್ಯೆಯನ್ನು ಹೆಚ್ಚು ಸರಳಗೊಳಿಸಿದೆಯೋ ಅಥವಾ ಕಠಿಣಗೊಳಿಸಿದೆಯೋ ಎಂಬುದು.

ಕಾಶ್ಮೀರ ಸಮಸ್ಯೆಯನ್ನು ಹಿಂದಿನ ಎಲ್ಲ ಸರ್ಕಾರಗಳು ಹದಗೆಡಿಸಿವೆ ಮತ್ತು ಈ ಸಮಸ್ಯೆಗೆ ತಮ್ಮಲ್ಲಿ ವಿಶೇಷ ಮದ್ದಿದೆ ಎಂದು ಹೇಳುತ್ತಾ ಜನರನ್ನು ನಂಬಿಸಿ ಅಧಿಕಾರಕ್ಕೆ ಬಂದ ಮೋದಿಯವರು ತಮ್ಮ ಅಧಿಕಾರಾವಧಿಯ ಈ ಸುಮಾರು ಐದು ವರ್ಷಗಳಲ್ಲಿ ಕಾಶ್ಮೀರವನ್ನು ಯಾವ ಸ್ಥಿತಿಗೆ ತಂದಿದ್ದಾರೆ ಎಂಬುದನ್ನು ಜನತೆ ನೋಡುತ್ತಿದ್ದಾರೆ. ಈ ಅವಧಿಯಲ್ಲಿ ಪಠಾಣ್‌ಕೋಟ್ ಮತ್ತು ಉರಿ ದಾಳಿಗಳೂ ಸೇರಿದಂತೆ ಹಿಂದೆಂದಿಗಿಂತ ಹೆಚ್ಚು ಸಂಖ್ಯೆಯ ಮತ್ತು ಭೀಕರವೆನ್ನಿಸುವ ದಾಳಿಗಳು ನಮ್ಮ ಮೇಲೆ ನಡೆದಿವೆ. ರಾಜ್ಯದಲ್ಲಿ ನಡೆದಿರುವ ಸೇನಾ ಕಾರ್ಯಾಚರಣೆಗಳಲ್ಲಿ ಮಡಿದ ನಮ್ಮ ಸೈನಿಕರ ಮತ್ತು ನಾಗರೀಕರ ಸಂಖ್ಯೆಯೂ ಹಿಂದೆಂದಿಗಿಂತ ಗಣನೀಯವಾಗಿ ಹೆಚ್ಚಿದೆ. ಎಲ್ಲಕ್ಕಿಂತ ಮುಖ್ಯವಾಗಿ ಗಡಿಯಾಚೆಯ ಭಯೋತ್ಪಾದಕರ ಜೊತೆ ಈಗ ಸ್ಥಳೀಯ ಯುವಕರೂ ಶಾಮೀಲಾಗುವ ಹೊಸ ಬೆಳವಣಿಗೆಯೊಂದು ಆರಂಭವಾಗಿದೆ. ಮೊನ್ನೆಯ ಪುಲ್ವಾಮಾ ದಾಳಿಯಲ್ಲಿ ಆತ್ಮಾಹುತಿ ಮಾಡಿಕೊಂಡವನು ಒಬ್ಬ ಸ್ಥಳೀಯ ಯುವಕನೇ ಎಂಬುದನ್ನು ನಾವು ಗಮನಿಸಬೇಕು. ಈ ಎಲ್ಲ ಹಿನ್ನೆಲೆಯಲ್ಲಿ ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಲು ಮೋದಿಯವರು ನಿಜವಾಗಿ ಏನು ಮಾಡಿದ್ದಾರೆ ಎಂದು ಸ್ವತಃ ಪೇಜಾವರರಾದರೂ ವಿವರಿಸಬೇಕು.

('ಪ್ರಜಾವಾಣಿ' ಪ್ರಕಟಿಸದ ಬರಹ)

ಹತ್ಯಾ ರಾಜಕಾರಣಕ್ಕೆ ಜನ ಮಾನ್ಯತೆಯ ಯತ್ನ

ಪ್ರಗ್ಯಾ ಸಿಂಗ್ ಮಹಾತ್ಮ ಗಾಂಧಿಯವರನ್ನು ಕೊಂದ ನಾಥೂರಾಂ ಗೋಡ್ಸೆಯನ್ನು ದೇಶಭಕ್ತ ಎಂದು ಕರೆದ ಸುದ್ದಿ ರಾಷ್ಟ್ರಾದ್ಯಂತ ಮಾಧ್ಯಮಗಳಲ್ಲಿ ಸಂಚಲವನ್ನುಂಟು ಮಾಡಿತು. ಎಂದಿನಂತೆ ಪ್ರಧಾನ ಮಂತ್ರಿ ಮೋದಿಯವರು ಸಾಕಷ್ಟು ಕಾದು–ಪ್ರಗ್ಯಾಳ ಭೂಪಾಲ್ ಕ್ಷೇತ್ರದಲ್ಲಿ ಮತದಾನ ಮುಗಿದ ನಂತರವಷ್ಟೇ–ಇಂತಹ ಹೇಳಿಕೆಗಳನ್ನು ಎಂದಿಗೂ ಸಹಿಸಲಾಗದು ಎಂದು ಗುಡುಗಿದ್ದಾರೆ. ಸಹಿಸಲಾಗದ ಈ ಹೇಳಿಕೆ ನೀಡಿದ ವ್ಯಕ್ತಿ ತಮ್ಮ ಪಕ್ಷ ಲೋಕಸಭಾ ಚುನಾವಣೆಗಾಗಿ ಆಯ್ದ ಅಭ್ಯರ್ಥಿ ಎಂಬುದನ್ನು ಮರೆತಂತೆ ಆ ಪಕ್ಷದ ಮುಖಂಡರು ಅದು ಆಕೆಯ ವೈಯಕ್ತಿಕ ಹೇಳಿಕೆ, ಅದಕ್ಕೂ ಪಕ್ಷಕ್ಕೂ ಸಂಬಂಧವಿಲ್ಲ ಎಂಬ ಭಂಡ ತರ್ಕವನ್ನು ಮಂಡಿಸಿ ಪಾರಾಗಲೆತ್ನಿಸಿದ್ದಾರೆ! ಆದರೆ ಆಕೆಯನ್ನು ಪಕ್ಷದಿಂದ ಹೊರಹಾಕುವ ಮಾತೇ ಈ ಮುಖಂಡರಿಂದ ಹೊರಬರದಿರುವುದು ಆಕೆಯ ಹೇಳಿಕೆಯ ಬಗೆಗಿನ ತಮ್ಮ ಖಂಡನೆಗಳೆಲ್ಲ ಜನರ ಕೇವಲ ಕಣ್ಣೊರೆಸುವ ತಂತ್ರ ಮಾತ್ರ ಎಂದು ತಮ್ಮ ಬೆಂಬಲಿಗರಿಗೆ ನೀಡಿರುವ ಪರೋಕ್ಷ ಸೂಚನೆಯೇ ಆಗಿದೆ,

ಇದು ಪ್ರಗ್ಯಾ ಸಿಂಗ್‌ಳ ಅಭಿಪ್ರಾಯ ಮಾತ್ರವಲ್ಲ ಎಂಬುದು ಓರ್ವ ಕೇಂದ್ರ ಮಂತ್ರಿಯೂ ಸೇರಿದಂತೆ ನಮ್ಮ ರಾಜ್ಯದ ಇಬ್ಬರು ಸಂಸದರು ಆಕೆ ಹೇಳಿಕೆಯನ್ನು ರಾಜಾರೋಷವಾಗಿ ಬೆಂಬಲಿಸಿ ಬರೆದ ಟ್ವೀಟರ್‌ಗಳನ್ನು ಪಕ್ಷದ ಹಿರಿಯ ಮುಖಂಡರ ಸೂಚನೆಗಳ ನಂತರವಷ್ಟೇ ಅಳಿಸಿ ಹಾಕಿದ್ದಾರೆ ಎಂಬುದೂ ಮಹಾತ್ಮ ಗಾಂಧಿ ಕುರಿತಂತೆ ಈ ಪಕ್ಷದ ಧೋರಣೆ ನಿಜವಾಗಿ ಏನು ಎಂಬುದನ್ನು ಪರೋಕ್ಷವಾಗಿ ಸೂಚಿಸುವಂತಿದೆ.

ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದೊಡನೆ ಕೇಳಿಬಂದ ಗೋಡ್ಸೆಗೆ ಗುಡಿ ಕಟ್ಟುವ ಕಾರ್ಯಕ್ರಮ. ಗೋಡ್ಸೆ ಗಾಂಧಿಯನ್ನು ಕೊಲ್ಲುವ ಅಣಕು ಪ್ರದರ್ಶನ ಇತ್ಯಾದಿಗಳಲ್ಲದೆ ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಗಾಂಧಿ ಚಾರಿತ್ರ್ಯ ಹನನದ ಪ್ರಯತ್ನಗಳು ಗಾಂಧಿ ರೂಪಿಸಿಕೊಟ್ಟ ಭಾರತವನ್ನು ಕೆಡವಿ ಅದಕ್ಕೆ ತದ್ವಿರುದ್ಧವಾದ ಕಲ್ಪನೆಯ ಭಾರತವನ್ನು ಕಟ್ಟಬಯಸುವ ಗುಪ್ತ ಕಾರ್ಯಕ್ರಮವೊಂದರ ಸೂಚನೆಯಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅದು ಇಂದಿನ ಭಾರತೀಯ ಜನತಾ ಪಕ್ಷದ ಮೂಲರೂಪವಾದ ಭಾರತೀಯ ಜನಸಂಘದ ನಾಯಕರು ಸಾವರ್ಕರ್. ಗೋಲ್ವಾಲ್ಕರ್ ಮುಂತಾದ ತಮ್ಮ ತಾತ್ವಿಕ ಮಾರ್ಗದರ್ಶಕರಿಂದ ಸ್ಫೂರ್ತಿಯಾಗಿ ಪಡೆದಿದ್ದ ಹಿಂದುತ್ವದ ಮೌಲ್ಯಗಳನ್ನು ಆಧರಿಸಿದ ಭಾರತ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಗಾಂಧಿ ಈ ದೇಶದ ಸಮಷ್ಟಿ ನೆನಪಿನಿಂದ ಇನ್ನೂ ಅಳಿಸಿಹೋಗಿಲ್ಲ ಎಂಬುದು ಮೋದಿಯರಂತಹ ಬಿಜೆಪಿ ನಾಯಕರಿಗೆ ಗೊತ್ತಿದೆ. ಹಾಗಾಗಿಯೇ ಅವರು ಸತ್ಯ–ಅಹಿಂಸೆ–ಸ್ವದೇಶಿ–ಸರಳ ಜೀವನ–ಧರ್ಮ ಸಮನ್ವಯದ ಪ್ರತೀಕವಾಗಿರುವ ಮಹಾತ್ಮ ಗಾಂಧಿಯವರನ್ನು 'ಸ್ವಚ್ಛ ಭಾರತ' ಎಂಬ ಭೌತಿಕ ಶುಚಿಯ ಪ್ರತೀಕಾತ್ಮಕತೆಗೆ ಕುಬ್ಜಗೊಳಿಸಿ ಅವರಿಗೆ ಔಪಚಾರಿಕ ಮಾನ್ಯತೆ ನೀಡಿ ಕೈತೊಳೆದುಕೊಂಡಿದ್ದಾರೆ.

ಗಾಂಧಿ ಕುರಿತ ಬಿಜೆಪಿಯ ಧೋರಣೆಯ ಬಗ್ಗೆ ಇಷ್ಟೆಲ್ಲ ಹೇಳಿದ ಮೇಲೂ ಈ ಸಂದರ್ಭದ ಕೇಂದ್ರ ಪ್ರಶ್ನೆ ಹಾಗೇ ಉಳಿದಿದೆ. ಅದೆಂದರೆ. ಪ್ರಗ್ಯಾ ಸಿಂಗ್‌ರ ಹೇಳಿಕೆಗೆ ದೇಶದಲ್ಲಿ ಸಾರ್ವಜನಿಕ ಪ್ರತಿಕ್ರಿಯೆ ಹೇಗಿತ್ತು ಎಂಬುದು. ಬಿಜೆಪಿ ವಿರೋಧಿ ನಾಯಕರ. ವಿಶೇಷವಾಗಿ ಕಾಂಗ್ರೆಸ್ ನಾಯಕರ ಹೊರತಾಗಿ ಈ ಬಗ್ಗೆ ಯಾವುದೇ ಸಾರ್ವಜನಿಕ ವೇದಿಕೆಯ ಪರವಾಗಿ ಖಂಡನೆ ಅಥವಾ ಪ್ರತಿಭಟನೆ ವ್ಯಕ್ತವಾಯಿತೇ? ಹೆಚ್ಚೂ ಕಡಿಮೆ ಇಲ್ಲವೆಂದೇ ಹೇಳಬೇಕು. ಈ ಪರಿಸ್ಥಿತಿಯೇ ಪ್ರಗ್ಯಾ ಸಿಂಗ್ ಮತ್ತವರ ಗೆಳೆಯರಲ್ಲಿ ಗಾಂಧಿಯನ್ನು ಕೊಂದವನ ಸ್ತುತಿ ಮಾಡುವ ಧೈರ್ಯವನ್ನು ತುಂಬಿರುವುದು. ಈ ಮರ್ಮವನ್ನು ಅರಿಯದೆ ಗಾಂಧಿ ನಿಂದಕರ ಮೇಲೆ ಮುಗಿಬೀಳುವ ಕಾಂಗ್ರೆಸ್ ನಾಯಕರು ಜನರ ಕಣ್ಣಲ್ಲಿ ಹಾಸ್ಯಾಸ್ಪದರಾಗಿ ಕಾಣುತ್ತಿದ್ದಾರೆ.

ಗಾಂಧಿಯನ್ನು ನಿಂದಿಸುವುದು ತಪ್ಪು ಎಂದು ಇಂದಿನ ತಲೆಮಾರು ತಿಳಿಯುವಂತೆ ಮಾಡುವ ಅಥವಾ ಗಾಂಧಿ ಮೌಲ್ಯ ಪರಂಪರೆಯನ್ನು ಕಾಪಿಟ್ಟುಕೊಂಡು ಬರುವ ಹೊಣೆ ಹೊತ್ತ ಕಾಂಗ್ರೆಸ್ ಆ ಹೊಣೆಯಿಂದ ಬಹು ದೂರ ಸರಿದುಹೋಗಿರುವುದೇ ಇಂದಿನ ತಲೆಮಾರಿನಲ್ಲಿ ಮಹಾತ್ಮ ಗಾಂಧಿ ಕುರಿತು ಏನೆಲ್ಲ ಅಪಪ್ರಚಾರ ಮಾಡಿ

ಅವರನ್ನು ಕೊಂದವನ ಗುಣಗಾನ ಮಾಡುವ ಪುಂಡಾಟಿಕೆಗೆ ಅವಕಾಶವಾಗಿದೆ. ಗಾಂಧಿಗೆ ಇಂದು ಯಾರೂ ನೈತಿಕ ವಾರಸುದಾರರಿಲ್ಲದಿರುವುದೇ ಅವರ ಬಗ್ಗೆ ಹೊಸ ತಲೆಮಾರಿನವರಲ್ಲಿ ತಪ್ಪು ಗ್ರಹಿಕೆ ಉಂಟು ಮಾಡುವವರ ಪ್ರಯತ್ನಗಳು ಯಶಸ್ವಿಯಾಗಿ ನಡೆದಿವೆ.

ಗಾಂಧಿ ಭಾರತವೆಂದು ಹೇಳಲಾಗುವ ಬಹುತ್ವದ ಭಾರತ, ಧರ್ಮ ಸಮನ್ವಯದ ಭಾರತ, ಸ್ವದೇಶಿ–ಸ್ವರಾಜ್ಯದ ಭಾರತ ನಾಶವಾಗುತ್ತಿದೆ ಎಂದು ಯಾರೇ ಗಂಟಲು ಹರಿದುಕೊಂಡು ಕೂಗಿಕೊಂಡ ಮಾತ್ರಕ್ಕೆ ಜನರ ಮನದಲ್ಲಿ ಗಾಂಧಿಯ ನಿಜ ಚಿತ್ರ ಮೂಡುವುದಿಲ್ಲ. ಏಕೆಂದರೆ, ಹೀಗೆ ಇಂದು ಕೂಗುವವರ ಬದುಕಿನ ಮಾದರಿ ಮತ್ತು ರಾಜಕಾರಣದ ಪರಿಗಳನ್ನು ನೋಡುತ್ತಿರುವ ಜನರಲ್ಲಿ ಮೂಡುವ ಗಾಂಧಿ ಚಿತ್ರ ವಿಕ್ಷಿಪ್ತವಾಗಿರುವುದು ಸಹಜವೇ ಸರಿ. ಹಾಗಾಗಿಯೇ ಹೊಸ ತಲೆಮಾರಿನ ಜನರಲ್ಲಿ ಗಾಂಧಿಯವರ ಬಗ್ಗೆ ವಿಶಿಷ್ಟ ಗೌರವವೇನೂ ಇದ್ದಂತಿಲ್ಲ. ಇದು ಗಾಂಧಿ ಭಾರತವನ್ನು ಹೊಡೆದುರುಳಿಸಬಯಸುವವರ ಕೆಲಸವನ್ನು ಸುಲಭ ಮಾಡಿದೆ.

ಆದರೆ ಈ ಎಲ್ಲ ರಾಜಕಾರಣದ ಹಿಂದಿರುವ ಭಯಾನಕ ಸತ್ಯವೆಂದರೆ, ಇದು ಹತ್ಯಾ ರಾಜಕಾರಣಕ್ಕೆ ಒಂದು ಜನ ಮಾನ್ಯತೆ ಒದಗಿಸುವುದಾಗಿದೆ ಎಂಬುದು. ಈ ದೃಷ್ಟಿಯಿಂದ ಗಾಂಧಿ ವಿರೋಧಿಗಳು ಮಾತ್ರವಲ್ಲ, ಗಾಂಧಿ ವಾರಸುದಾರಿಕೆಯನ್ನು ಹೇಳಿಕೊಳ್ಳುವವರೂ ಅಪರಾಧಿ ಸ್ಥಾನದಲ್ಲಿ ನಿಲ್ಲುತ್ತಾರೆ.

('ಪ್ರಜಾವಾಣಿ': 'ಸಂಗತ' : ೨೨.೫. ೨೦೧೯)

ಭೈರಪ್ಪನವರು ಯೋಚಿಸಬೇಕು

ಹಿರಿಯ ಲೇಖಕರಾದ ಎಸ್.ಎಲ್. ಭೈರಪ್ಪನವರು ಬ್ರಿಟಿಷರು ಮತ್ತು ಕಾಂಗ್ರೆಸ್ಸಿನವರಂತೆಯೇ ಬಿಜೆಪಿಯವರೂ ಮುಸ್ಲಿಮರನ್ನು ಓಲೈಸತೊಡಗಿದ್ದಾರೆಂದು ವಿಷಾದ ವ್ಯಕ್ತಪಡಿಸಿದ್ದಾರೆ. (ಪ್ರವಾ:೧೧, ಜನವರಿ, ೨೦೨೧) ಬಹುಶಃ ಅವರಿಗೆ ಪೌರತ್ವ ತಿದ್ದುಪಡಿ ಕಾಯಿದೆಯಿಂದಾಗಿ ಭಾರತದ ಪ್ರಜೆಗಳಾಗಿರುವ ಮುಸ್ಲಿಮರಿಗೆ ಏನೂ ತೊಂದರೆಯಾಗದು ಎಂದು ಬಿಜೆಪಿ ಸ್ಪಷ್ಟಪಡಿಸುತ್ತಿರುವುದೇ ಓಲೈಕೆಯಾಗಿ ಕಂಡಿದೆ. ಸರ್ಕಾರವೊಂದು ಗೊಂದಲದ ಸಂದರ್ಭದಲ್ಲಿ ತನ್ನ ಒಂದು ಪ್ರಜಾವರ್ಗಕ್ಕೆ ಸ್ಪಷ್ಟನೆ ನೀಡುವುದೂ ಭೈರಪ್ಪನವರ ಪ್ರಕಾರ ಓಲೈಕೆ! ಇದು ಪ್ರಜಾಪ್ರಭುತ್ವದ ವಿಧಾನಗಳಲ್ಲಿ ಇವರಿಗೆ ಇರುವ ಬದ್ಧತೆ. ಇರಲಿ, ಮುಂದುವರೆದ ಅವರು ತಾವು ಭಾರತ ಬಿಟ್ಟು ಹೋದರೆ ಹಿಂದೂಗಳು ಮುಸ್ಲಿಮರು ತುಳಿಯುವರು ಎಂದು ಬ್ರಿಟಿಷರು ಹೇಳುತ್ತಿದ್ದರೆಂದೂ, ಅದಕ್ಕೆ ತಕ್ಕಂತೆ ಮುಸ್ಲಿಮರೂ ಬ್ರಿಟಿಷರನ್ನು ಭಾರತ ಬಿಟ್ಟು ಹೋಗದಂತೆ ಬೇಡಿಕೊಂಡರೆಂದೂ ಹೇಳಿದ್ದಾರೆ. ಈ ಮಾತುಗಳನ್ನು ಭೈರಪ್ಪನವರು ಯಾವ ಚರಿತ್ರೆಯ ಪುಸ್ತಕದಿಂದ ಹೆಕ್ಕಿ ಹೇಳುತ್ತಿದ್ದಾರೋ ತಿಳಿಯದಾಗಿದೆ.

ನಿಜ. ಸ್ವಾತಂತ್ರ್ಯ ಹೋರಾಟ ಸುಸಂಘಟಿತವಾಗುತ್ತಿದ್ದಂತೆ ಬ್ರಿಟಿಷ್ ಪ್ರಭುತ್ವ ಒಡೆದಾಳುವ ನೀತಿಯನ್ನು ಅನುಸರಿಸಿ ೧೯೦೯ರಲ್ಲಿ ಮುಸ್ಲಿಮರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡಿ ಆ ಸಮುದಾಯವನ್ನು ಓಲೈಸಲಾರಂಭಿಸಿತು. ಆದರೆ ಭಾರತದ ಮುಸ್ಲಿಮರ ಪ್ರತಿನಿಧಿಯೆಂದು ಬ್ರಿಟಿಷ್ ಪ್ರಭುತ್ವದಿಂದಲೇ ಮಾನ್ಯಮಾಡಲ್ಪಟ್ಟಿದ್ದ ಮುಸ್ಲಿಂ ಲೀಗ್ ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದ್ದ ಕಾಂಗ್ರೆಸ್‌ನೊಂದಿಗೆ ಕ್ರಮೇಣ ಅದರದೇ ಕಾರಣಗಳಿಗಾಗಿ ಭಿನ್ನಾಭಿಪ್ರಾಯ ತಾಳಿ ಸ್ವತಂತ್ರ ಪಾಕಿಸ್ತಾನದ ಬೇಡಿಕೆಯನ್ನು ಮಂಡಿಸಿತಾದರೂ, ಅದು ಸ್ವಾತಂತ್ರ್ಯದ ಗುರಿಯಿಂದ ವಿಚಲಿತವಾದುದನ್ನು ಸೂಚಿಸುವ ಯಾವ ದಾಖಲೆಯೂ ಇದ್ದಂತಿಲ್ಲ. ಹಾಗೆ ನೋಡಿದರೆ ಸ್ವಾತಂತ್ರ್ಯ ಹೋರಾಟವನ್ನು ನೇರವಾಗಿ ವಿರೋಧಿಸಿದವರೆಂದರೆ ಹಿಂದೂ ಮಹಾ ಸಭಾದವರು. 'ಭಾರತ ಬಿಟ್ಟು ತೊಲಗಿ' ಚಳುವಳಿ'ಗೆ ಬೆಂಬಲ ನೀಡಬಾರದೆಂದೂ, ಬದಲಿಗೆ ಬ್ರಿಟಿಷ್ ಪ್ರಭುತ್ವದೊಂದಿಗೆ ಸಹಕರಿಸಬೇಕೆಂದೂ 'ಹಿಂದೂ'ಗಳಿಗೆ ಕರೆ ಕೊಟ್ಟವರು ಅದರ ಅಧ್ಯಕ್ಷರಾಗಿದ್ದ ಸಾವರ್ಕರ್ ಅವರು. ಇದು ಅವರು ಸೆರೆಮನೆಯಿಂದ ಬಿಡುಗಡೆಗೊಳ್ಳಲು ಬ್ರಿಟಿಷ್ ಪ್ರಭುತ್ವಕ್ಕೆ ಬರೆದುಕೊಟ್ಟಿದ್ದ ಕ್ಷಮಾಪಣಾ ಪತ್ರದ ಒಕ್ಕಣೆಗೆ ತಕ್ಕಂತೆಯೇ ಇತ್ತೆಂಬುದು ಬೇರೆ ವಿಚಾರ. ಆದರೆ ಅವರ ಸಹಕಾರ ಹಸ್ತ ಅಷ್ಟಕ್ಕೇ ನಿಲ್ಲದೆ, ಎರಡನೇ ಮಹಾಯುದ್ಧದ ಸಂಬಂಧವಾಗಿ ಬ್ರಿಟಿಷ್ ಪ್ರಭುತ್ವದೊಂದಿಗೆ ಭಿನ್ನಮತ ತಾಳಿ ಕಾಂಗ್ರೆಸ್ ತಾನು ಅಧಿಕಾರದಲ್ಲಿದ್ದ ಎಲ್ಲ ಪ್ರಾಂತೀಯ ಸರಕಾರಗಳಿಗೆ ರಾಜೀನಾಮೆ ನೀಡಿದಾಗ, ಅದು ಸಿಂಧ್, ವಾಯುವ್ಯ ಗಡಿ ಪ್ರತ್ಯ ಮತ್ತು ಬಂಗಾಳಗಳಲ್ಲಿ ಮುಸ್ಲಿಂ ಲೀಗ್ ಜೊತೆ ಸೇರಿ ಸರ್ಕಾರಗಳನ್ನು ರಚಿಸುವವರೆಗೂ ವಿಸ್ತರಿಸಿತು. ಇನ್ನೂ ಆಘಾತಕಾರಿ ಸಂಗತಿ ಎಂದರೆ, ಸಿಂಧ್ ವಿಧಾನ ಸಭೆ ಸ್ವತಂತ್ರ ಪಾಕಿಸ್ತಾನವನ್ನು ಆಗ್ರಹಿಸಿ ನಿರ್ಣಯ ಅನುಮೋದಿಸಿದ ನಂತರವೂ ಹಿಂದೂ ಮಹಾಸಭಾದ ಸಚಿವರು ಆ ಸರ್ಕಾರದಿಂದ ಹೊರಬರಲಿಲ್ಲ. ಇದನ್ನು ಸಾವರ್ಕರ್ 'ಸಮಯೋಚಿತ ತಂತ್ರ'ವೆಂದು ಸಮರ್ಥಿಸಿಕೊಂಡರು.

ಚರಿತ್ರೆಯ ವಸ್ತು ಸ್ಥಿತಿ ಹೀಗಿರುವಾಗ ಭೈರಪ್ಪನವರು ಹೇಳುತ್ತಿರುವ ಸಂಗತಿಗಳು ಅಸಂಬದ್ಧವಾಗಿ ಕಾಣುತ್ತವೆ. ಇನ್ನು ಅವರು ಜೆಎನ್‌ಯು ವಿದ್ಯಾರ್ಥಿಗಳ ಪ್ರತಿಭಟನೆಯ ಬಗ್ಗೆ ಮಾತನಾಡುತ್ತಾ ವಿದ್ಯಾರ್ಥಿಗಳು ಪ್ರಯೋಗಾಲಯದಲ್ಲಿ ಉಪಕರಣಗಳಿಲ್ಲ, ಗ್ರಂಥಾಲಯದಲ್ಲಿ ಪುಸ್ತಕಗಳಿಲ್ಲ ಎಂದು ಪ್ರತಿಭಟಿಸಬೇಕೇ ಹೊರತು ರಾಜಕೀಯ ವಿಷಯಗಳತ್ತ ಗಮನ ಹರಿಸಬಾರದೆಂಬ ಅರ್ಥದ ಮಾತುಗಳನ್ನಾಡಿದ್ದಾರೆ. ಜೆಎನ್‌ಯು ವಿದ್ಯಾರ್ಥಿಗಳು ಪ್ರತಿಭಟಿಸುತ್ತಿರುವುದು ವಿವಿಧ ಶುಲ್ಕಗಳ ಏರಿಕೆಗಳಿಗೆ ಸಂಬಂಧಿಸಿದಂತಹ ಶೈಕ್ಷಣಿಕ ವಿಷಯಗಳ ಬಗ್ಗೆಯೇ ಎಂದು ತಿಳಿಸುತ್ತಾ, ಲೇಖಕರಾದ ಅವರು ಬರೆಯಲು ಹಾಳೆಯಿಲ್ಲ, ಲೇಖನಿಗಳು ದೊರಕುತ್ತಿಲ್ಲ ಅಥವಾ ಬರೆದುಕೊಳ್ಳಲು ಲಿಪಿಕಾರರು ಸಿಗುತ್ತಿಲ್ಲ ಎಂದು ದೂರಬಹುದೇ ಹೊರತು ರಾಜಕಾರಣದ ಬಗ್ಗೆ ಮಾತಾಡುವುದು ಉಚಿತವಲ್ಲ ಎಂದು ಅವರಿಗೆ ಹೇಳಿದರೆ ಎಷ್ಟು ಸಂಬದ್ಧವೆನಿಸೀತು? ಅವರು ಯೋಚಿಸಬೇಕು.

(೧೪, ಜನವರಿ, ೨೦೨೧ರ 'ಪ್ರಜಾವಾಣಿ'ಯ 'ವಾಚಕರವಾಣಿ'ಯಲ್ಲಿ ಪ್ರಕಟ)

'ಕ್ವಿಟ್ ಇಂಡಿಯಾ' ಚಳುವಳಿ: ಇನ್ನೊಂದಿಷ್ಟು ಮಾಹಿತಿ

ಭಾರತದ ಸ್ವಾತಂತ್ರ್ಯ ಹೋರಾಟದ ನಿರ್ಣಾಯಕ ಘಟ್ಟವೆನಿಸಿರುವ ಕನ್ನಡದಲ್ಲಿ 'ಭಾರತಬಿಟ್ಟು ತೊಲಗಿ' ಚಳುವಳಿಯೆಂದೂ ಹೆಸರಾಗಿರುವ ೧೯೪೨ರ 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಕಾಂಗ್ರೆಸ್ ಸಮಾಜವಾದಿಗಳು ವಹಿಸಿದ ಧೀರೋದಾತ್ತ ಪಾತ್ರ ಮತ್ತು ಅವರು ನಿರ್ವಹಿಸಿದ 'ಕಾಂಗ್ರೆಸ್ ಬಾನುಲಿ'ಯ ಮಹತ್ವದ ಬಗ್ಗೆ ನಟರಾಜ ಹುಳಿಯಾರ್ ಅವರು ಸಾಕಷ್ಟು ಉಪಯುಕ್ತ ಮಾಹಿತಿ ನೀಡಿದ್ದಾರೆ (ಪ್ರವಾ: ౭.౮.౨౦౨౧). ಕಾಲಚಕ್ರ ತನ್ನದೇ ತರ್ಕಕ್ಕನುಸಾರ ತಿರುಗಿ ಆ ಐತಿಹಾಸಿಕ ಚಳುವಳಿಯನ್ನು ತಮ್ಮದೇ ಕಾರಣಗಳಿಗಾಗಿ ವಿರೋಧಿಸಿದ್ದಲ್ಲದೆ ವಸಾಹತುಶಾಹಿ ಸರ್ಕಾರದೊಡನೆ ಕೈಜೋಡಿಸಲು ಮುಂದಾದವರು ದೇಶವನ್ನು ಆಳುತ್ತಿರುವಾಗ ಮತ್ತು ಈ ಚಳುವಳಿಯ ನಾಯಕರನೇಕರ ಚಾರಿತ್ರ್ಯ ಹನನದ ಜಿಗುಪ್ಸೆಕರ ಪ್ರಯತ್ನಗಳು ಮುಕ್ತವಾಗಿ ನಡೆಯುತ್ತಿರುವ ಈ ದಿನಗಳಲ್ಲಿ ಇಂದಿನ ಯುವಜನರು ಗಮನಿಸಬೇಕಾದ ಈ ಮಹತ್ವದ ಮಾಹಿತಿಯನ್ನು ನೀಡಿದ ಹುಳಿಯಾರರನ್ನು ಅಭಿನಂದಿಸುತ್ತಾ ಇದಕ್ಕೆ ಸಂಬಂಧಿಸಿದಂತೆಯೇ ಇನ್ನಷ್ಟು ಮಾಹಿತಿಯನ್ನು ಇಲ್ಲಿ ನೀಡಬಯಸುವೆ.

ಗಾಂಧೀಜಿಯವರು 'ಮಾಡು ಇಲ್ಲವೆ ಮಡಿ' ಎಂಬ ಕರೆಯನ್ನು ರಾಷ್ಟ್ರಕ್ಕೆ ನೀಡಿದ ಆಗಸ್ಟ್ ೮ರ ಮಾರನೆಯ ದಿನ ಭೂಗತರಾದ ರಾಮಮನೋಹರ ಲೋಹಿಯಾ ಅವರ ಗುಂಪಿನಲ್ಲಿ ಇದ್ದ ಇತರ ಯುವ ಸಮಾಜವಾದಿಗಳೆಂದರೆ, ರಮಾನಂದನ ಮಿಶ್ರ, ಕಮಲಾದೇವಿ ಚಟ್ಟೋಪಾಧ್ಯಾಯ,ಸಾಣೆ ಗುರೂಜಿ ಮತ್ತು ಪೂರ್ಣಿಮಾ ಬ್ಯಾನರ್ಜಿ. ಇವರೆಲ್ಲ ಮಾರುವೇಷದಲ್ಲಿ ಊರೂರುಗಳಲ್ಲಿ ಸಂಚರಿಸುತ್ತಾ ತಾವು ಮಾಡಬೇಕಿದ್ದ ಕಾರ್ಯಚರಣೆಗಾಗಿ ಜನಸಂಪರ್ಕ ಮತ್ತು ಹಣ ಸಂಗ್ರಹಣೆಯಲ್ಲಿ ತೊಡಗಿದ್ದರು. ಜೊತೆಗೆ ತಮ್ಮ ಗುಂಪು ಸಿದ್ಧಪಡಿಸುತ್ತಿದ್ದ ಕರಪತ್ರಗಳನ್ನು ಹಂಚುತ್ತಿದ್ದರು. ಈ ಸಂದರ್ಭದಲ್ಲಿ ಲೋಹಿಯಾ ಬರೆದ ಪ್ರಮುಖ ಕರಪತ್ರಗಳೆಂದರೆ, 'ಕ್ರಾಂತಿಗಾಗಿ ಸಿದ್ಧತೆ', 'ಹೋರಾಟದ ಮುನ್ನಡೆ' ಮತ್ತು 'ಸ್ವಯಮಾಡಳಿತ ಹೇಗೆ?' ಇದೆಲ್ಲದರ ಪರಿಣಾಮವೇ 'ಕಾಂಗ್ರೆಸ್ ರೇಡಿಯೋ' ಸ್ಥಾಪನೆ. ಇದಕ್ಕಾಗಿ ಲೋಹಿಯಾ ಕಲ್ಕತ್ತಾದಲ್ಲಿದ್ದ ಖ್ಯಾತ ಖಭೌತ ವಿಜ್ಞಾನಿ ಮೇಘಾನಂದ ಸಹಾ ಅವರಿಂದ ಉಪಕರಣಗಳ ಸಹಾಯ ಪಡೆದರಲ್ಲದೆ, ಅವುಗಳನ್ನು ಬಾನುಲಿ ವ್ಯವಸ್ಥೆಯಾಗಿ ಅಳವಡಿಸಲು ಮಜುಂದಾರ್ ಎಂಬ ಭಾರತೀಯ ವಾಯುದಳದ ಅಧಿಕಾರಿಯೊಬ್ಬರ ತಾಂತ್ರಿಕ ಸಹಕಾರವನ್ನೂ ಪಡೆದಿದ್ದರು. ಪದವಿ ಶಿಕ್ಷಣದ ಮತ್ತು ಜರ್ಮನಿಯಲ್ಲಿ ಸಂಶೋಧನೆ ನಡೆಸಿ ಬಂದ ನಂತರದ ಅವಧಿಯನ್ನು ಕಲ್ಕತ್ತಾದಲ್ಲಿ ಕಳೆದಿದ್ದ ಮತ್ತು ಆಗ ಸ್ವಾತಂತ್ರ್ಯ ಆಂದೋಲನದ ಯುವ ನಾಯಕರೂ ಆಗಿದ್ದ ಲೋಹಿಯಾ ಅವರಿಗೆ ಹಲವು ವಲಯಗಳ ಮತ್ತು ಸ್ತರಗಳ ಸಂಪರ್ಕಗಳಿದ್ದವು.

ಕಾಂಗ್ರೆಸ್ ಸಮಾಜವಾದಿ ಗುಂಪಿನ ಈ ಬಾನುಲಿಯಲ್ಲಿ, ದೇಶಭಕ್ತಿ ಗೀತೆಗಳು, ವಾರ್ತೆ, ಭಾಷಣಗಳು, ಘೋಷಣೆಗಳು ಮತ್ತು ಸಂದೇಶಗಳ ಜೊತೆಗೆ ಹೊರಗಿನಿಂದ

‘ಕಳ್ಳಸಾಗಣೆ’ ಮಾಡಿದ ಧ್ವನಿ ಮುದ್ರಣಗಳೂ ಇರುತ್ತಿದ್ದವು. ಅಂತಹ ಒಂದು ಮುಖ್ಯ ಧ್ವನಿಮುದ್ರಣವೆಂದರೆ, ಗಾಂಧಿಯವರ ಹುಟ್ಟಿದ ದಿನವಾದ ಅಕ್ಟೋಬರ್ ೨ನೇ ದಿನಾಂಕಕ್ಕಾಗಿ ಬ್ಯಾಂಕಾಕ್‌ನಿಂದ ಪಡೆದು ಪ್ರಸಾರ ಮಾಡಿದ ಸುಭಾಷ್‌ಚಂದ್ರ ಬೋಸ್ ಅವರ ಭಾಷಣ. ಗಾಂಧಿ ಸುಭಾಷರನ್ನು ಕಾಂಗ್ರೆಸ್ ಮಾತ್ರವಲ್ಲ, ದೇಶವನ್ನೂ ತ್ಯಜಿಸುವಂತೆ ಮಾಡಿದ್ದರು ಎಂದು ಇಂದು ಪ್ರಚಾರ ಮಾಡುತ್ತಿರುವ ಮತ್ತು ಅದನ್ನು ನಂಬುತ್ತಿರುವ ಜನರ ಕಣ್ಣು ತೆರೆಸುವಂತಿರುವ ಈ ಭಾಷಣದ ಕೆಲವು ಸಾಲುಗಳು ಹೀಗಿವೆ: ‘ನಮಗೆ ರಾಷ್ಟ್ರೀಯ ಆತ್ಮಗೌರವ ಮತ್ತು ಆತ್ಮವಿಶ್ವಾಸವನ್ನು ಕಲಿಸಿದ, ಭಾರತದ ಜನರಿಗೆ ಅವರು ಸಲ್ಲಿಸಿರುವ ಸೇವೆಗಾಗಿ ಮತ್ತು ಸ್ವಾತಂತ್ರ್ಯ ಸಾಧನೆಗಾಗಿ ಇಡಲು ನಮಗೆ ಕಲಿಸಿದ ದೃಢ ಹೆಜ್ಜೆಗಳಿಗಾಗಿ ಭಾರತದ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಬೇಕಾದಂತಹ ಅಮೂಲ್ಯ ಕೊಡುಗೆ ಸಲ್ಲಿಸಿರುವ ಮಹಾನ್ ವ್ಯಕ್ತಿ ಮಹಾತ್ಮ ಗಾಂಧಿ... ಅವರು ತಮ್ಮ ದೇಶಭಕ್ತ ಸಂಗಾತಿಗಳೊಂದಿಗೆ ಸೆರೆಮನೆಯಲ್ಲಿರುವ ಸದ್ಯದ ವಿಷಾದನೀಯ ಸಂದರ್ಭದಲ್ಲಿ ಅವರ ಕನಸನ್ನು ನನಸು ಮಾಡಲು ಅವರ ಅಭಿಮಾನಿಗಳು ಎಲ್ಲ ತ್ಯಾಗಗಳಿಗೆ ಸಿದ್ಧರಾಗಬೇಕಿದೆ’

ಈ ಭಾಷಣದ ಪ್ರಸಾರ ಈ ಬಾನುಲಿಗೆ ಸಂಬಂಧಿಸಿದಂತೆ ಬ್ರಿಟಿಷ್ ಸರ್ಕಾರಕ್ಕೆ ಕೊನೆಯ ಎಚ್ಚರಿಕೆಯ ಘಂಟೆಯಂತೆ ಕೇಳಿಸಿತೆಂಬಂತೆ ಶೀಘ್ರದಲ್ಲೇ ಈ ಜಾಗದ ಮೇಲೆ ಪೋಲೀಸರ ದಾಳಿಯಾಗಿ ಬಾನುಲಿ ಪ್ರಸಾರ ನಿಂತು ಹೋಯಿತು. ಭೂಗತ ಕ್ರಾಂತಿಕಾರಿಗಳೆಲ್ಲ ಅಸ್ಸಾಂ ಪ್ರವೇಶಿಸಿ ನಂತರ ನೇಪಾಳ ಗಡಿ ದಾಟಿ ಹೋದರು, ಅಲ್ಲಿ ಲೋಹಿಯಾ ಹಜಾರಿಭಾಗ್ ಸೆರೆಮನೆಯ ಗೋಡೆಯನ್ನು ಹಾರಿ ಪರಾರಿಯಾಗಿ ದೇಶಾದ್ಯಂತ ಯುವ ಕ್ರಾಂತಿಕಾರಿಯೆಂದು ಪ್ರಸಿದ್ಧರಾಗಿದ್ದ ಇನ್ನೋರ್ವ ಕಾಂಗ್ರೆಸ್ ಸಮಾಜವಾದಿ ಜಯಪ್ರಕಾಶ್ ನಾರಾಯಣರ ಜೊತೆ ಸೇರಿ ಬಿಹಾರದ ಗಡಿ ಭಾಗಗಳಲ್ಲಿ ಸ್ವರಾಜ್ಯ ಗ್ರಾಮಗಳನ್ನೂ, ದಳಗಳನ್ನೂ ಸ್ಥಾಪಿಸಿದ್ದೂ, ಆನಂತರ ಪೋಲೀಸರ ಕಣ್ಣು ಕಣ್ತಪ್ಪಿಸಲಾಗದೆ ಇಬ್ಬರೂ ಬೇರೆ ಬೇರೆಯಾಗಿ ಬಂಧಿಸಲ್ಪಟ್ಟು ಲಾಹೋರ್‌ಕೋಟೆ ಸೆರೆಮನೆ ಸೇರಿ ಚಿತ್ರಹಿಂಸೆಗೆ ಒಳಗಾದದ್ದೂ ಈಗ ಚರಿತ್ರೆ.

‘ಕ್ವಿಟ್ ಇಂಡಿಯಾ’ ಚಳುವಳಿಯನ್ನು ನೆನಪಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲೇ ಈ ಚಳುವಳಿಯ ಭಾಗವಾಗಿಯೇ ನಮ್ಮದೇ ಶಿವಮೊಗ್ಗ ಜಿಲ್ಲೆಯ ಈಸೂರು ಗ್ರಾಮದ ಜನ ತಮ್ಮ ಗ್ರಾಮವನ್ನು ‘ಸ್ವರಾಜ್ಯ ಗ್ರಾಮ’ವೆಂದು ಘೋಷಿಸಿಕೊಂಡು ನಡೆಸಿದ ವೀರ ಹೋರಾಟವನ್ನೂ ನಾವು ನೆನೆಯಬೇಕು. ಬ್ರಿಟಿಷ್ ಆಡಳಿತಶಾಹಿಯ ವಿರುದ್ಧ ೧೯೪೨ರ ಸೆಪ್ಟಂಬರ್ ಕೊನೆಯ ವಾರದಲ್ಲಿ ‘ಏಸೂರು ಕೊಟ್ಟರೂ ಈಸೂರು ಕೊಡೆವು’ ಎಂಬ ಘೋಷಣೆಯೊಂದಿಗೆ ನಡೆದ ಹೋರಾಟದ ಅಂತ್ಯದಲ್ಲಿ ೧೧ ಜನ ಗಲ್ಲು ಶಿಕ್ಷೆಗೂ ಮಹಿಳೆಯರೂ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಜನ ಜೀವಾವಧಿ ಶಿಕ್ಷೆಗೂ ಒಳಗಾಗಬೇಕಾಯಿತು ಎಂಬುದನ್ನೂ ನೆನೆಯುತ್ತಾ ಈ ಹುತಾತ್ಮರಿಗೆ. ವೀರರಿಗೆ ನಮ್ಮ ಶ್ರದ್ಧಾಂಜಲಿ ಸಲ್ಲಬೇಕಿದೆ.

ಮಾಪಿಳ್ಳೆ ದಂಗೆ ಎಂದೇ ಪ್ರಸಿದ್ಧವಾದ ಕೇರಳದ ಮಲಬಾರ್ (ಉತ್ತರ ಕೇರಳ) ಮುಸ್ಲಿಂ ಸಮುದಾಯದಿಂದ ೧೯೨೧ರ ಆಗಸ್ಟ್ ತಿಂಗಳಲ್ಲಿ ಅಖಿಲ ಭಾರತ ಖಿಲಾಫತ್ ಚಳುವಳಿಯ ಭಾಗವಾಗಿ ಆರಂಭವಾಗಿ ಭೂ ಮಾಲಿಕರು ಮತ್ತು ಭೂ ಕಾರ್ಮಿಕರ ನಡುವಣ ಘರ್ಷಣೆಯ ರೂಪ ತಾಳಿ ಕೊನೆಗೆ ಹಿಂದೂ-ಮುಸ್ಲಿಂ ಕೋಮು ಗಲಭೆಯಾಗಿ ಮಾರ್ಪಟ್ಟ ಒಂದು ಬರ್ಬರ ಹಿಂಸಾಚಾರದ ಅಧ್ಯಾಯವಾಗಿ ದಾಖಲಾಗಿದೆ. ಟಿಪ್ಪು ಸುಲ್ತಾನನ ವಶದಲ್ಲಿದ್ದಾಗ ಬಹುತೇಕ ಮಾಪಿಳ್ಳೆಗಳಾಗಿದ್ದ ಉಳುವ ರೈತರಿಗೆ ಭೂ ಹಕ್ಕು ನೀಡಲಾಗಿತ್ತಾದರೂ, ನಂತರ ಸಂಸ್ಥಾನ ಬ್ರಿಟಿಷರ ವಶವಾದಾಗ ರೈತರ ಈ ಹಕ್ಕುಗಳನ್ನು ವಾಪಸು ಪಡೆಯಲಾಯಿತು. ಹೀಗಾಗಿ ಖಿಲಾಫತ್ ಚಳುವಳಿಯೇ ಒಂದು ನೆಪವಾಗಿ ಮಾಪಳ್ಳೆ ರೈತರು ಬ್ರಿಟಿಷ್ ಪ್ರಭುತ್ವದ ವಿರುದ್ಧ ತಿರುಗಿಬಿದ್ದು ಸರ್ಕಾರದ ಆಸ್ತಿಪಾಸ್ತಿಗಳನ್ನು ನಾಶ ಮಾಡತೊಡಗಿದರು. ಆಗ ಸರ್ಕಾರ ದಮನಕಾರಿ ಕ್ರಮಗಳನ್ನು ಕೈಗೊಳ್ಳತೊಡಗಿದಾಗ ಮಾಪಿಳ್ಳೆಗಳ ಹಿಂಸೆ ಹಿಂದೂ ಜಮೀನ್ದಾರರ ವಿರುದ್ಧ ತಿರುಗಿ ಅದು ವ್ಯಾಪಕ ಅತ್ಯಾಚಾರ ಮತ್ತು ಬಲವಂತದ ಮತಾಂತರಗಳ ರೂಪ ತಳೆಯಿತು. ಆಗ ಬ್ರಿಟಿಷ್ ಸರ್ಕಾರ ಈ ಬರ್ಬರ ಕೋಮು ಹಿಂಸಾಚಾರವನ್ನು ಅಷ್ಟೇ ಬರ್ಬರವಾದ ಕ್ರಮಗಳ ಮೂಲಕ ಅಡಗಿಸಿತು. ಈ ಕಾರ್ಯಾಚರಣೆಯಲ್ಲಿ ಎರಡು ಸಾವಿರಕ್ಕೂ ಹೆಚ್ಚು ಜನ ಮಾಪಿಳ್ಳೆಗಳು ಹತರಾದರು.

ಕಾಂಗ್ರೆಸ್ ಮತ್ತು ಗಾಂಧಿ ಆರಂಭದಲ್ಲಿ ಮಾಪಿಳ್ಳೆಗಳ ಧರ್ಮನಿಷ್ಠೆ ಮತ್ತು ಹೋರಾಟದ ಕೆಚ್ಚನ್ನು ಮೆಚ್ಚಿದರಾದರೂ, ದಂಗೆ ಹಿಂಸೆ, ಅತ್ಯಾಚಾರ ಮತಾಂತರಗಳಿಗೆ ತಿರುಗಿದಾಗ ಅದನ್ನು ಖಂಡಿಸಿದರಾದರೂ, ಗಾಂಧೀಯವರಿಗೆ ಇದೊಂದು ಬೆಚ್ಚಿ ಬೀಳಿಸುವ ಘಟನೆಯೇ ಆಗಿತ್ತು, ತಮ್ಮ ಹಿಂದೂ-ಮುಸ್ಲಿಂ ಐಕ್ಯತೆಯ ಮತ್ತು ಅಹಿಂಸೆಯ ಸಂದೇಶ ಜನರ ಮಧ್ಯೆ ಅಷ್ಟೇನೂ ಪ್ರಭಾವಶಾಲಿಯಾಗಿಲ್ಲವೆಂದು ಅವರಿಗೆ ಅನಿಸತೊಡಗಿತು, ಆದರೆ ಇದರಿಂದ ತಮ್ಮ ಚಳುವಳಿಯ ಅಂತಿಮ ಯಶಸ್ಸಿನ ಬಗ್ಗೆ ಆತಂಕಪಡುವ ಅಗತ್ಯವಿಲ್ಲವೆಂದೂ ಅವರು ಭಾವಿಸಿದರು, ಮಾಪಿಳ್ಳೆಗಳ ಹೀನ ಕೃತ್ಯಗಳನ್ನು ಯಾವ ವಿವೇಕಿ ಮುಸ್ಲಿಮನೂ ಅನುಮೋದಿಸಿಲ್ಲವಾದ್ದರಿಂದ ಹಿಂದೂಗಳು ಉದ್ವಿಗ್ನರಾಗಬಾರದೆಂದು ಕೋರಿದರು. ಈ ಕೋರಿಕೆಯನ್ನು ಮನ್ನಿಸಿದವರಂತೆ ಜನ ಎಲ್ಲೂ ಪ್ರತಿ ಹಿಂಸೆಗೆ ಇಳಿಯಲಿಲ್ಲ.

('ಪ್ರಜಾವಾಣಿ' : 'ಸಂಗತ' : ೯.೮.೨೦೨೧)

ಮತಾಂತರಕ್ಕೆ ಕುಮ್ಮಕ್ಕು ಒಳಗಿನದೋ ಹೊರಗಿನದೋ?

ನನ್ನ ಪತ್ರಕ್ಕೆ(ವಾವಾ: ಸೆ. ೨೮) ಬಿ.ಎಸ್. ಜಯಪ್ರಕಾಶ ನಾರಾಯಣರು (ಮತಾಂತರ ನಿಷೇಧ ಕಾಯಿದೆಯನ್ನು ಮತ್ತೆ ಪ್ರತಿಪಾದಿಸಿ ಬರೆದಿರುವ ಪ್ರತಿಕ್ರಿಯೆಯನ್ನು (ವಾವಾ: ಸೆ.೩೦) ಗಮನಿಸಿದೆ. ಇವರು ಹೆಸರುಗಳನ್ನು ಉಲ್ಲೇಖಿಸಿದಾಕ್ಷಣ ಈ ಹೆಸರುಗಳ ಮಹನೀಯರ ಸುತ್ತ ಇವರು ಹೇಳುವ 'ವ್ಯವಸ್ಥಿತವಾಗಿ ಹಬ್ಬಿಸಲಾಗಿರುವ' ಮಿಥ್ಯೆಗಳು

ಮರೆಯಾಗುತ್ತವೆ ಎಂದು ನಂಬಿದಂತಿದೆ! ಏಕೆಂದರೆ ನಾನು ತಿಲಕರ ಬಗ್ಗೆ ಮತ್ತು ಸಾವರ್ಕರ್ ಬಗ್ಗೆ ಬರೆದ ಮಾತುಗಳ ಬಗ್ಗೆ ಒಂದೂ ಮಾತಾಡದೆ ಈ ಚರ್ಚೆಗೆ ಸಂಬಂಧಪಡದ ಗಾಂಧೀಜಿಯವರ ಹೆಸರನ್ನು, 'ಇವರು ಬಹುವಾಗಿ ಆರಾಧಿಸುವ' ಎಂಬ ಅವರದ್ದೇ ವೈಯಕ್ತಿಕ ಅಭಿಪ್ರಾಯವನ್ನು ಇಲ್ಲಿ ಅನವಶ್ಯಕವಾಗಿ ಕಾಣಿಸುತ್ತಾ, ಎಳೆದು ತಂದು ಅವರ ವಿರುದ್ಧ ಅಸಂಬದ್ಧ ಟೀಕೆಗಳನ್ನು ಮಾಡಿರುವುದು ವಿಷಾದಕರ.

ಗಾಂಧಿ ಬಾಲ್ಯದಲ್ಲೇ ಅಸ್ಪೃಶ್ಯತೆಯ ಅರ್ಥಹೀನತೆಯನ್ನು ಹೇಗೆ ಮನಗಂಡಿದ್ದರು ಎಂಬುದು ಅವರ ಆತ್ಮಚರಿತ್ರೆಯಲ್ಲೇ ದಾಖಲಾಗಿರುವುದನ್ನು ನಂಬದವರು ೧೮೯೮ರಷ್ಟು ಹಿಂದೆಯೇ ದ.ಆಫ್ರಿಕಾದಲ್ಲಿ ಅಸ್ಪೃಶ್ಯತೆಯ ಆಚರಣೆಯ ಕಾರಣದಿಂದ ತಮ್ಮ ಪತ್ನಿಯನ್ನೇ ಮನೆಯಿಂದ ಆಚೆ ನೂಕಲು ಹೊರಡುವಷ್ಟು ಆವೇಶಗೊಳ್ಳುವಷ್ಟು ಅಸ್ಪೃಶ್ಯತೆ ನಿವಾರಣೆಗೆ ಬದ್ಧರಾದವರನ್ನು ಯಾವುದೇ ಸಾಕ್ಷ್ಯವಿಲ್ಲದೆ ಅವರು ಹಿಂದೂ ಸಮಾಜದ ಈ ಪಿಡುಗಿನ ಬಗ್ಗೆ ದೀರ್ಘ ಕಾಲ ಸ್ಪಷ್ಟತೆಯನ್ನು ಹೊಂದಿರಲಿಲ್ಲ ಎಂದು ಹೇಳುವುದನ್ನು ಏನೆಂದು ಕರೆಯಬೇಕು? ಹಾಗೇ, ಅದು ಅಂತರ್ಜಾತಿ ವಿವಾಹವಾಗದ ಹೊರತು ಅದಕ್ಕೆ ತಮ್ಮ ಆಶ್ರಮದಲ್ಲಿ ಜಾಗವಿಲ್ಲವೆಂದೂ ಅಂತಹ ವಿವಾಹಗಳಲ್ಲಿ ವಧು-ವರರಲ್ಲಿ ಒಬ್ಬರು ಅಸ್ಪೃಶ್ಯರಾಗದ ಹೊರತು ಆ ದಂಪತಿಗಳಿಗೆ ತಮ್ಮ ವೈಯಕ್ತಿಕ ಆಶೀರ್ವಾದ ಲಭಿಸದು ಎಂದು ಬಹಿರಂಗವಾಗಿ ಘೋಷಿಸಿದ ವ್ಯಕ್ತಿಯನ್ನು ಅವರ ಯಾವುದೋ ಕಾಲದ ನಂಬಿಕೆಯನ್ನು ಉಲ್ಲೇಖಿಸುತ್ತಾ ಅವರು ವರ್ಣಾಶ್ರಮ ಧರ್ಮದ ಪ್ರತಿಪಾದಕರಾಗಿದ್ದರು ಎಂದು ಪ್ರಚಾರ ಮಾಡುವುದನ್ನು ಏನೆಂದು ಕರೆಯಬೇಕು?

ಮುಂದುವರೆದು ಇವರು,ಗಾಂಧಿಯವರು ಇಂಗ್ಲಿಶ್ ಶಿಕ್ಷಣ, ರೈಲು, ಅಂಚೆ, ಆಧುನಿಕ ಆಸ್ಪತ್ರೆಯ ವಿರುದ್ಧವಿದ್ದರು ಎಂದು ಬರೆದಿದ್ದಾರೆ. ಇದು ಗಾಂಧಿ ಕುರಿತ ಅರೆ ಸಾಕ್ಷರತೆ ಎನ್ನಬಹುದು. ಏಕೆಂದರೆ ಇದು ಗಾಂಧಿಯವರ 'ಹಿಂದ್‌ಸ್ವರಾಜ್; ಕೃತಿಯ ಅರೆಬರೆ ಓದಿನ ಫಲಶ್ರುತಿಯಾಗಿದೆ, ಈ ಮಾತನ್ನು ಸಂಕಿಪ್ತವಾಗಿ ವಿವರಿಸುವುದಾದರೆ, ಹಿಂದೂಸ್ತಾನದ ಸ್ವಾತಂತ್ರ್ಯಹರಣಕ್ಕೆ ಕಾರಣವೆಂದು ಅವರು ವಿಶ್ಲೇಷಿಸಿದ್ದ ಪಶ್ಚಿಮದ ಆಧುನಿಕ ನಾಗರೀಕತೆಯ ಸಾಧನಗಳಾದ ಇವುಗಳಿಗೆ ಮರುಳಾಗದಂತೆ ಅವರು ನೀಡಿದ್ದ ಎಚ್ಚರಿಕೆಯ ಕ್ರಮವದಷ್ಟೆ. ಗಾಂಧಿ ಅಂಚೆ, ರೈಲು ಎಲ್ಲವನ್ನೂ ಬಳಸುತ್ತಿದ್ದರು ಎಂಬ ವಾಸ್ತವಾಂಶವೇ ಅವರ ಈ ಎಚ್ಚರಿಕೆಯ ಅರ್ಥವನ್ನು ವಿವರಿಸುವಂತಿದೆ: ನಿಮ್ಮ ಬೇರುಗಳು ಕಳಚಿಹೋಗದಷ್ಟು ನೀವು ಅವುಗಳಿಂದ ಮರುಳಾಗದಿರಿ.

ಹೌದು ಗಾಂಧಿ ಗೋಮಾಂಸ ಸೇವನೆಯ ಪರವಾಗಿರಲಿಲ್ಲ. ಆದರೆ ತಮ್ಮ ಈ ನಂಬಿಕೆಯನ್ನು ಇತರರ ಮೇಲೆ ಹಿಂಸೆಯ ಮೂಲಕ ಹೇರುವುದರ ಪರವಾಗಿಯೂ ಇರಲಿಲ್ಲ. ಅವರು ಗೋ ರಕ್ಷಣೆಗಾಗಿ ಮನುಷ್ಯರನ್ನು ಕೊಲ್ಲುವುದರ ವಿರುದ್ಧವಿದ್ದರು. ಇದನ್ನೂ ಜಯಪ್ರಕಾಶರು ಹೇಳಿದ್ದರೆ ಚೆನ್ನಿತ್ತು. ಇನ್ನು ಇವರು ಸಾವರ್ಕರ್ ಬಗ್ಗೆ ಬರೆಯುತ್ತಾ, ಅಂಡಮಾನ್ ಜೈಲಿನಲ್ಲಿನ ಮುಸ್ಲಿಂ ಸಿಬ್ಬಂದಿಯ ಕಿರುಕುಳದಿಂದಾಗಿ ಅವರು ಮುಸ್ಲಿಂ ವಿರೋಧಿಯಾದರೆಂದು ಸೂಚಿಸುವ ಇವರು, ಜಿನ್ನಾನದ್ದೋ ಅಥವಾ

ಪಲವರಮ್ಮೋ ಕಿರುಕುಳದಿಂದ ಒಂದು ಇಡೀ ಧರ್ಮದವರ ವಿರುದ್ಧ ಒಂದು ಸಿದ್ಧಾಂತವನ್ನು ಮಂಡಿಸಿ, ಅವರ ವಿರುದ್ಧ ಬರ್ಬರ ಹಿಂಸಾಚಾರವನ್ನು ಪ್ರಚೋದಿಸುವ ವ್ಯಕ್ತಿಯ ಮಾನಸಿಕ ಸ್ಥಿರತೆಯ ಬಗ್ಗೆ ಆಲೋಚಿಸುವಂತೆ ಮಾಡಿದ್ದಾರೆ. ಈ ದೃಷ್ಟಿಯಿಂದ, ೧೯೩೯ರಲ್ಲಿ ಭಾರತವನ್ನು ಬ್ರಿಟಿಷ್ ಪ್ರಭುತ್ವವು ಎರಡನೇ ಮಹಾಯುದ್ಧದಲ್ಲಿ ಭಾಗವಹಿಸುವಂತೆ ಮಾಡಿದ ತೀರ್ಮಾನದ ವಿರುದ್ಧ ಪ್ರತಿಭಟಿಸಲು ಕಾಂಗ್ರೆಸ್ ತಾನು ಅಧಿಕಾರದಲ್ಲಿದ್ದ ಪ್ರಾಂತೀಯ ಸರ್ಕಾರಗಳಿಗೆ ರಾಜೀನಾಮೆ ನೀಡಿದಾಗ ಸಾವರ್ಕರ್ ಅವರ ಹಿಂದೂ ಮಹಾಸಭಾ, ಆ ಹೊತ್ತಿಗಾಗಲೇ ಪ್ರತ್ಯೇಕ ರಾಷ್ಟ್ರದ ಸೊಲ್ಲೆತ್ತಿದ್ದ ಜಿನ್ನಾರ ಮುಸ್ಲಿಂ ಲೀಗ್ ಜೊತೆ ಸೇರಿ ಎರಡು ಪ್ರಾಂತ್ಯಗಳಲ್ಲಿ ಸರ್ಕಾರ ರಚಿಸಿ ಬ್ರಿಟಿಷ್ ಪ್ರಭುತ್ವಕ್ಕೆ ತನ್ನ ನಿಷ್ಠೆಯನ್ನು ಪ್ರದರ್ಶಿಸಿದ್ದನ್ನು ಅರ್ಥ ಮಾಡಿಕೊಳ್ಳಲು ಕಷ್ಟವೇನೂ ಆಗದು.

ಇದೆಲ್ಲ ಅಂಬೇಡ್ಕರ್ ಅವರೂ ಸಕ್ರಿಯವಾಗಿ ಭಾಗವಹಿಸಿದ್ದ ಗಾಂಧಿ ವಿರೋಧಿ ರಾಜಕಾರಣದ ಭಾಗವಾಗಿತ್ತು, ಹಾಗಿರುವಾಗ ಜಯಪ್ರಕಾಶರು ಹೆಮ್ಮೆಯಿಂದ ತಿಳಿಸಿರುವಂತೆ ಹತ್ತು ಜನ ಸಾವರ್ಕರ್‌ಗಳು ಇದ್ದರೆ ಅಸ್ಪೃಶ್ಯತೆ ಸಂಪೂರ್ಣ ನಾಶವಾಗುವುದೆಂದು ಅಂಬೇಡ್ಕರ್ ಹೇಳಿದ್ದರಲ್ಲಿ ಆಶ್ಚರ್ಯವೇನಿರದು.

ಆದರೆ ಭಾರತದ ದುರದೃಷ್ಟವೆಂದರೆ ಸಾವರ್ಕರ್ ಮಾರ್ಗದ ಹಿಂದೂವಾದಿ ಸಂಘಟನೆಗಳು ಬಾಬಾಸಾಹೇಬರು ಈ ಮಾತನ್ನಾಡಿದ ನಂತರದ ಎಂಟು ದಶಕಗಳಲ್ಲಿ ದೇಶದಲ್ಲಿ ಭದ್ರ ಸರ್ಕಾರ ರಚಿಸುವಷ್ಟು ಬೆಳೆದಿದ್ದರೂ ಹತ್ತು ಜನ ಸಾವರ್ಕರ್‌ರು ಹುಟ್ಟಿ ಅಸ್ಪೃಶ್ಯತೆ ಸಂಪೂರ್ಣ ನಿವಾರಣೆ ಮಾಡಲು ಸಾಧ್ಯವಾಗಿಲ್ಲವಲ್ಲ? ಪ್ರತಿ ದಿನವೂ ದೇಶದ ಒಂದಲ್ಲ ಒಂದು ಮೂಲೆಯಿಂದ ಅಸ್ಪೃಶ್ಯರ ಮೇಲಿನ ಒಂದಲ್ಲ ಒಂದು ರೀತಿಯ ದೌರ್ಜನ್ಯಗಳು ವರದಿಯಾಗುತ್ತಲೇ ಇರುತ್ತವಲ್ಲ? ಮೊನ್ನೆ ತಾನೇ ನಮ್ಮ ಕರ್ನಾಟಕದ ಎರಡು ಹಳ್ಳಿಗಳಿಂದ ಕ್ರಮವಾಗಿ ಒಬ್ಬ ಯುವಕ ಪೂಜೆ ಮಾಡಲೆಂದು ಮತ್ತು ಒಂದು ಮಗು ತನ್ನ ಹುಟ್ಟು ಹಬ್ಬದ ಸಂತೋಷದಲ್ಲಿ ದೇವರ ದರ್ಶನಕ್ಕಾಗಿ ದೇವಾಲಯ ಪ್ರವೇಶಿದರೆಂದು ಅವರಿಬ್ಬರೂ ಅಸ್ಪೃಶ್ಯ ಜಾತಿಗೆ ಸೇರಿದ್ದಕ್ಕಾಗಿ ಊರುಗಳೇ ಒಂದಾಗಿ ದಂಡ ವಿಧಿಸಿದ ವರದಿಗಳು ಇವೆಯಲ್ಲ? ಹಾಗಾದರೆ ಮತಾಂತರಕ್ಕೆ ಕುಮ್ಮಕ್ಕು ಒಳಗಿನಿಂದ ಇದೆಯೋ ಹೊರಗಿನಿಂದ ಇದೆಯೋ ಜನ ಯೋಚಿಸಬೇಕು,

(ಸಂಗತ'ದಲ್ಲಿ ಪ್ರಕಟಿಸಲೆಂದು ಕಳಿಸಿದ್ದ ಈ ಬರಹವನ್ನು 'ಪ್ರಜಾವಾಣಿ' ೨.೧೦. ೨೦೨೧ ರಂದು 'ವಾಚಕರವಾಣಿ'ಯಲ್ಲಿ ಪ್ರಕಟಿಸಿತು)

ಭಾಗ–೨

ಪರಿಸರ–ಶಿಕ್ಷಣ–ಸಂಸ್ಕೃತಿ

ಮನುಷ್ಯನನ್ನು ಪ್ರಕೃತಿಯಿಂದ ಪ್ರತ್ಯೇಕಿಸುತ್ತಿರುವ 'ವಿಜ್ಞಾನ'ವೆಂಬ ಅ-'ಜ್ಞಾನ'

ಮನುಷ್ಯ ಹುಟ್ಟಿರುವುದೇ ಆದಷ್ಟೂ ಸುಖಪಡಲು ಎಂಬ ನಂಬಿಕೆಯ ಮೇಲೆ ನಡೆದಂತಿರುವ ನಮ್ಮ ಅಭಿವೃದ್ಧಿ ಕಥನದ ಹಾದಿಯಲ್ಲಿ ಇತ್ತೀಚೆಗೆ ಒಂದಾದರ ಮೇಲೊಂದರಂತೆ ನೈಸರ್ಗಿಕ ವಿಪತ್ತುಗಳು ಎರಗಿ ಕಂಗೆಡಿಸುತ್ತಿದ್ದರೂ ಅವನು ಬಹುಬೇಗ ಅದನ್ನು ಮರೆತು ಆ ಕಥನದ ದಾರಿಯಲ್ಲೇ ಮುಂದುವರಿಯುವಂತೆ ಮಾಡಿರುವ ಅವನ ಮರೆವಿಗೆ ಕಾರಣವಾದರೂ ಏನು? ಅವನು ಪೂರ್ತಿ ಲೌಕಿಕನಾಗಿ ಅಸ್ತಿತ್ವದ ಅಧ್ಯಾತ್ಮಿಕತೆಯನ್ನು–ಇರುವ ಎಲ್ಲವನ್ನೂ ಅಖಂಡವಾಗಿ, ಅವಿಭಾಜ್ಯವಾಗಿ ನೋಡುವ ಅರಿವಿನಲ್ಲಿ ಹುಟ್ಟುವ ಬೆರಗನ್ನು– ಕಳೆದುಕೊಂಡು ವಿಜ್ಞಾನ ಪಾರಮ್ಯದ ದಾಸನಾಗಿಬಿಟ್ಟಿರುವುದೇ ಇದಕ್ಕೆ ಕಾರಣವೇ? ಒಂದು ನಿಷ್ಠುರ ಪರೀಶೀಲನೆಯ ಪ್ರಯತ್ನ ಇಲ್ಲಿದೆ.

ಎಲ್ಲರಿಗೂ ನಮಸ್ಕಾರ

ಈವರೆಗೆ ನಾಗೇಶ್ ಹೆಗಡೆಯವರು ಮತ್ತು ಎಲ್ಲಪ್ಪ ರೆಡ್ಡಿಯವರು ಮಾತನಾಡಿದ್ದಾರೆ.. ಇಬ್ಬರೂ ಕೂಡ ಈವರೆಗೆ ಕೊಡಗಿನಲ್ಲಿ ಏನು ಅನಾಹುತ ಆಗಿದೆ, ಜಲಪ್ರಳಯ ಅಂತ ಏನು ಕರೀತೀವಿ, ಅದು ಯಾಕಾಯ್ತು, ಅದಕ್ಕೆ ಕಾರಣಗಳು ಏನು ಅಂತ ಹೇಳಿದ್ದಾರೆ. ಮತ್ತು ನಾವು ಹೇಗೆ ಇಂತಹ ಅನಾಹುತಗಳು ಮತ್ತೆ ಆಗದಂತೆ ನಮ್ಮ ಜೀವನ ಕ್ರಮಗಳನ್ನು, ಜೀವನ ಶೈಲಿಗಳನ್ನು ಬದಲಾವಣೆ ಮಾಡಿಕೊಳ್ಳುವ ಸಾಧ್ಯತೆಗಳು ಯಾವ್ಯಾವು ಅಂತ ಕೂಡ ವಿವರಿಸಿದ್ದಾರೆ. ಅಂದರೆ ಅವರೆಲ್ಲರೂ ಮಾತನಾಡಿರುವುದು ವಿಜ್ಞಾನದ ನೆಲೆಯಲ್ಲಿಯೇ. ಆದರೆ ಈಗ ನಾನು ಮಾತಾಡೋಕೆ ಹೊರಟಿರುವುದು ಬೇರನೇ ನೆಲೆಯಲ್ಲಿ.

ಇದಕ್ಕೆ ಕಾರಣ, ಇಂದು ಕೊಡಗು ಮತ್ತು ಕೇರಳದಲ್ಲಿ ಏನಾಗಿದೆ, ಅದೊಂದು ಬಿಡಿ ಘಟನೆ ಅಲ್ಲ. ಕಳೆದ ೫೦ ವರ್ಷಗಳಿಂದ ಜಗತ್ತಿನಾದ್ಯಂತ ಇಂಥ ಘಟನೆಗಳು–

ಅನಾಹುತಗಳು ನಡೆಯುತ್ತಲೇ ಬಂದಿವೆ ಮತ್ತು ಇದಕ್ಕೆ ಸಂಬಂಧಪಟ್ಟ ವೈಜ್ಞಾನಿಕ ಸಮೀಕ್ಷೆಗಳು ಮತ್ತು ಎಚ್ಚರಿಕೆಗಳು ಕೂಡ ವಿಜ್ಞಾನ ಪತ್ರಿಕೆಗಳು ಮಾತ್ರವಲ್ಲದೆ ಸಾಮಾನ್ಯ ಪತ್ರಿಕೆಗಳಲ್ಲೂ ಕೂಡ ಬಂದಿವೆ. ಐದು ವರ್ಷಗಳ ಹಿಂದೆ ಉತ್ತರಾಖಂಡದಲ್ಲಿ ಕೇರಳದಲ್ಲಿ ಆದದ್ದಕ್ಕಿಂತ ಹಲವು ಪಟ್ಟು ಹೆಚ್ಚು ಭೀಕರವಾದ ಜಲಪ್ರಳಯ ಆಯ್ತು. ಜಮ್ಮು ಮತ್ತು ಕಾಶ್ಮೀರ ಅತಿ ಸುಂದರ ಪ್ರಕೃತಿಯ ತಾಣ. ಅಲ್ಲಿ ಜಲಪ್ರಳಯವಾಯಿತು. ಮೇಘ ಸ್ಫೋಟವಾಗಿ ಯಾವುದೋ ಒಂದು ಹಿಮಾಲಯದ ನದಿಯಲ್ಲಿ ಪ್ರವಾಹ ಬಂದು ಹಿಮಾಚಲ ಪ್ರದೇಶದಲ್ಲಿ ಒಂದು ಕಟ್ಟೆ ಒಡೆದು ಹೋಗಿ ಸಾವಿರಾರು ಜನರ ಜೀವನ ಅಸ್ತವ್ಯಸ್ತವಾಯಿತು. ಕಳೆದ ವರ್ಷ ಮಹಾಮಳೆಗೆ ಸಿಕ್ಕಿ ಬಹುಭಾಗ ಚೆನ್ನೈ ನಗರವೇ ಮುಳುಗಿ ಹೋಯಿತು. ಮತ್ತೆ ಕರ್ನಾಟಕದಲ್ಲಿ ಕೆಲವೇ ವರ್ಷಗಳ ಹಿಂದೆ ರಾಯಚೂರು, ಕೊಪ್ಪಳ, ಎಲ್ಲೆಲ್ಲಿ ಗಣಿಗಾರಿಕೆ ನಡೆದಿತ್ತಲ್ಲ ಅಲ್ಲಿ ಮಾತ್ರವಲ್ಲದೆ, ಆಶ್ಚರ್ಯ ಅಂತಂದ್ರೆ ಗಣಿಯ ಅದಿರನ್ನು ಹೊನ್ನಾವರದವರೆಗೆ ಸಾಗಿಸುತ್ತಿದ್ದ ದಾರಿಯುದ್ದಕ್ಕೂ ಜಲಪ್ರಳಯ ಆಯಿತು. ಆಗಲೂ ಕೂಡ ಇಂಥ ಹಾಹಾಕಾರ ಎದ್ದಿತ್ತು. ಈಗಲೂ ಕೂಡ ಕೊಡಗು ಮತ್ತು ಕೇರಳದಲ್ಲಿ ಏನಾಗಿದೆ, ಅದರ ಬಗ್ಗೆ ಪತ್ರಿಕೆಗಳಲ್ಲಿ ವರದಿಗಳು ಬರ್ತಾ ಇವೆ. ಊರೂರೇ ಕೊಚ್ಚಿಕೊಂಡು ಹೋಗಿದೆ. ಗುಡ್ಡ ಗುಡ್ಡಗಳೇ ಕೊಚ್ಚಿಕೊಂಡು ಹೋಗಿವೆ. ಗ್ರಾಮ ಗ್ರಾಮಗಳೇ ಕೊಚ್ಚಿಕೊಂಡು ಹೋಗಿವೆ. ಅರ್ಧ ಕೇರಳ–ಉತ್ತರ ಕೇರಳ ನೀರಿನಲ್ಲಿ ಮುಳುಗಿ ಹೋಗಿದೆ. ಮತ್ತು ಅಲ್ಲಿರುವ ೧೨೦ ಅಣೆಕಟ್ಟುಗಳಲ್ಲಿ ಯಾವುದಾದರೂ ಒಂದೆರಡು ಅಣೆಕಟ್ಟುಗಳು ಒಡೆದುಹೋಗಿದ್ದರೂ ಸರ್ವನಾಶವಾಗುತ್ತಿತ್ತು ಕೇರಳದಲ್ಲಿ. ಇಂಥ ಸಂದರ್ಭದಲ್ಲೂ ಕೂಡ, ಮಡಿಕೇರಿಯಲ್ಲಿ ನಮ್ಮ ಜನಪ್ರತಿನಿಧಿಗಳು, ಕೆ.ಜಿ. ಬೋಪಯ್ಯ ಇರಬಹುದು ಅಥವಾ ಅಪ್ಪಚ್ಚು ರಂಜನ್ ಇರಬಹುದು ಅಥವಾ ನಮ್ಮ ಸಾಗರದ ತಿಮ್ಮಪ್ಪನವರು ಇರಬಹುದು, ಇವರೆಲ್ಲರೂ ಕೊಡಗಿನಲ್ಲಿ ಏನಾಗಿದೆಯೋ ಅದಕ್ಕೂ ಅಭಿವೃದ್ಧಿಗೂ ಸಂಬಂಧವೇ ಇಲ್ಲ ಅಂತಾನೆ ಹೇಳ್ತಾರೆ. ಯಾಕೆ? ಯಾಕೆ ಯಾರಿಗೂ ಎದೆಗೆ ಮುಟ್ತಾ ಇಲ್ಲ ಈ ದುರಂತ? ಈ ಅನಾಹುತ ಯಾಕೆ ಯಾರನ್ನೂ ತಟ್ತಾ ಇಲ್ಲ? ಇದು ಒಂದು ದಿವಸ ಬಂದು ಹೋಗುವ ಘಟನೆ ಅಂತ ಯಾಕೆ ಪರಿಗಣಿಸ್ತಿದ್ದಾರೆ? ಇದು ದುರಸ್ತಿ ಕಾಮಗಾರಿಗಳ ಮೂಲಕ ಪರಿಹರಿಸಬಹುದಾದ ಘಟನೆ ಅಂತ ಯಾಕೆ ಪರಿಗಣಿಸ್ತಿದಾರೆ? ಇದೆಲ್ಲ ಸಹಜ, ಆಗ್ತಾ ಇರುತ್ತೆ ಏನೂ ಮಾಡೋಕ್ಕಾಗಲ್ಲ ಇದು ಅಂತ ಯಾಕೆ ಪರಿಗಣಿಸ್ತಿದ್ದಾರೆ?

ಈ ಪ್ರಶ್ನೆಗೆ ನಾನು, ಯಾಕೆ ಹಿಂಗೆ ಆಗ್ತಾ ಇದೆ ಅಂತ ಉತ್ತರ ಹುಡುಕ್ತಾನೇ ಇದೀನಿ. ಮೂವತ್ತು ವರ್ಷಗಳ ಹಿಂದೆ ಮೈಸೂರಲ್ಲಿ ಒಂದು ವಿಶ್ವ ಕನ್ನಡ ಸಮ್ಮೇಳನ ನಡೀತು. ಆಗ ರಾಜ್ಯದಲ್ಲಿ ಬರ ಬಂದಿತ್ತು. ಬರ ಬಂದಿರೋದ್ರಿಂದ ವಿಶ್ವ ಕನ್ನಡ ಸಮ್ಮೇಳನ ಬೇಡ ಅಂತ ಕೆಲ ಎಡಪಂಥೀಯರು, ಪ್ರಗತಿಪರರು ಈ ಸಮ್ಮೇಳನವನ್ನು ಬಹಿಷ್ಕರಿಸಿ ಪ್ರತಿಭಟನೆ ಮಾಡಿದ್ರು. ಆಗ ಶಿವರಾಮ ಕಾರಂತರು ಒಂದು ಪ್ರಶ್ನೆ ಕೇಳಿದರು. "ಬರ ಇದೆ ಅಂದ್ಬಿಟ್ಟು ಮಸಾಲೆ ದೋಸೆ ತಿನ್ನೋದನ್ನು ನಿಲ್ಸಿದ್ದೀರಾ?" ಅಂತ. ಆ ಪ್ರಶ್ನೆ ಬಹಳ

ಮಾರ್ಮಿಕವಾದ ಪ್ರಶ್ನೆ. ಆಗ ಚಂದ್ರಶೇಖರ ಪಾಟೀಲರಂಥವರು ಅವರನ್ನು ಮಸಾಲೆ ದೋಸೆ ಕಾರಂತ ಅಂತ ಕರೆದು ಒಂದಿಷ್ಟು ಅಗ್ಗದ ರಂಜನೆಯನ್ನೂ ಒದಗಿಸಿದರು. ಆದರೆ ಕಾರಂತರ ಈ ಪ್ರಶ್ನೆ ಒಂದು ರೀತಿಯಲ್ಲಿ ನೈತಿಕತೆಯ ಪ್ರಶ್ನೆಯೂ ಆಗಿತ್ತು. ಬರ ಬಂದಿದ್ದರೆ ಬರದ ವಿರುದ್ಧ ಪ್ರತಿಭಟನೆ ಮಾಡುವವರು ಮಸಾಲೆ ದೋಸೆ ತಿನ್ನೋ ಚಪಲವನ್ನು ನಿಯಂತ್ರಿಸಿಕೊಂಡು ತಮ್ಮ ಜೀವನ ಶೈಲಿಯ ರುಚಿ ಅಭಿರುಚಿಗಳನ್ನು ಬದಲಾವಣೆ ಮಾಡಿಕೊಂಡಿದ್ದಾರಾ? ಅನ್ನೋ ಪ್ರಶ್ನೆ ಇದು. ಯಾರೂ ಕೇಳ್ಕೊಳ್ಳಿಲ್ಲ. ಕೇಳ್ಕೊಂಡಿದ್ದರೆ ಮಾತ್ರ ಅವರಿಗೆ ವಿಶ್ವ ಕನ್ನಡ ಸಮ್ಮೇಳನ ಬೇಡ ಅನ್ನುವ ನೈತಿಕತೆ ಇರುತ್ತಿತ್ತು. ಇದು ಕಾರಂತರ ಮಾತಿನ ತಿರುಳಾಗಿತ್ತು. ಈ ಪ್ರತಿಭಟನೆ ಪ್ರತಿಭಟನೆಗಾಗಿ ಮಾತ್ರ ಪ್ರತಿಭಟನೆ ಎಂಬಂತಾಗಿತ್ತು. ಹಾಗೇ ಇಂದು ಪರಿಸರದ ಬಗ್ಗೆ ಮಾತಾಡುವುದು ಒಂದು ಚಪಲ ಆಗಿ ಬಿಟ್ಟಿದೆ. ಅಂದರೆ ಗೀಗೀ ಪದಗಳಲ್ಲಿನ ಸಂದರ್ಭಕ್ಕೆ ತಕ್ಕ 'ಹೌದಪ್ಪ' ಅನ್ನುತ್ತ ಮಾತಾಡ್ತೀವಿ, ಮರೆತೀವಿ, ಮತ್ತೆ ವಾಪಸ್ ನಮ್ಮ ದಿನನಿತ್ಯದ ಅದೇ ಜೀವನಕ್ರಮಕ್ಕೆ ವಾಪಸ್ ಹೋಗ್ತೀವಿ.

ಈ ಕೊಡಗು ಕೇರಳದ ಅನಾಹುತ ಆದ ಮೇಲೆ ನಮ್ಮ ಮುಖ್ಯಮಂತ್ರಿಗಳಾಗಲಿ ಪ್ರಧಾನಮಂತ್ರಿಗಳಾಗಲಿ ಅಥವಾ ನಮ್ಮ ವಿಜ್ಞಾನಿಗಳಾಗಲಿ, ತಂತ್ರಜ್ಞಾನಿಗಳಾಗಲೀ– ಮಾಧವ ಗಾಡ್ಗೀಳ್, ಯಲ್ಲಪ್ಪ ರೆಡ್ಡಿ ಅಂಥವರನ್ನು ಬಿಟ್ಟುಬಿಡಿ ಅಂಥವರು ಅಪರೂಪ–ಈ ಬಗ್ಗೆ ಒಂದು ಚಿಂತನಾರ್ಹ ಮಾತಾಡಿದ್ದಾರಾ? ಉದಾಹರಣೆಗೆ, ನಮ್ಮ ಮುಖ್ಯಮಂತ್ರಿ ಕುಮಾರಸ್ವಾಮಿಯವರು, ಕರ್ನಾಟಕದ ನಮ್ಮ ಅಭಿವೃದ್ಧಿ ಯೋಜನೆಗಳನ್ನು ಪುನರ್ವಿಮರ್ಶೆ ಮಾಡ್ತೀವಿ ಅಂತ ಏನಾದ್ರೂ ಹೇಳಿದ್ದಾರಾ? ನಾನವರನ್ನು ಸುಮ್ಮನೆ ಟೀಕಿಸೋದಕ್ಕೆ ಈ ಮಾತಾಡ್ತಾ ಇಲ್ಲ. ಯಾಕೆ ನಮ್ಮ ಪ್ರಜ್ಞೆಯ ಒಳಗಡೆ ಅದು–ಈ ಮಹಾ ಮಾನವ ದುರಂತ– ಬಂದು ಸೇರಿಲ್ಲ? ಯಾಕೆ ನಮಗೆ ಸೂಕ್ತವಾಗಿ ಪ್ರತಿಕ್ರಿಯಿಸುವಂತಹ ಪ್ರಜ್ಞೆ ನಮ್ಮಲ್ಲಿ ಹುಟ್ಟಿಲ್ಲ ಅನ್ನೋದು ಪ್ರಶ್ನೆ.

ಇದಕ್ಕೆ ನಾನು ಕಂಡುಕೊಂಡಿರುವಂತಹ, ಸ್ವಲ್ಪ ನಿಮ್ಮೆಲ್ಲರಿಗೂ ಕಸಿವಿಸಿಯಾಗುವಂಥ, ಯಲ್ಲಪ್ಪ ರೆಡ್ಡಿ ಅಥವಾ ನಾಗೇಶ್ ಹೆಗಡೆಯವರಿಗೂ ಕೂಡ ಮುಜುಗರವಾಗುವಂಥ, ಒಂದು ಉತ್ತರ ನನಗೆ ಸಿಕ್ಕಿದೆ. ಅದೇನೆಂದರೆ ನಾವು ವಿಜ್ಞಾನ ಪಾರಮ್ಯವನ್ನು ಒಪ್ಪಿಕೊಂಡು ಬಿಟ್ಟಿದ್ದೇವೆ. ಧರ್ಮದ ಜಾಗದಲ್ಲಿ ವಿಜ್ಞಾನ ಬಂದು ಕೂತುಬಿಟ್ಟಿದೆ. ವಿಜ್ಞಾನವೇ ಪರಮ ಧರ್ಮ ಅಂತ ತಿಳ್ಕೊಂಡು ಬಿಟ್ಟಿದ್ದೇವೆ ನಾವು. ವಿಜ್ಞಾನವೇ ಪರಮ ಧರ್ಮ ಅಂತ ತಿಳ್ಕೊಂಡು ವಿಜ್ಞಾನದ ಉಪ ಉತ್ಪತ್ತಿಯಾದಂಥ ತಂತ್ರಜ್ಞಾನವನ್ನಾಧರಿಸಿದ ಬದುಕೇ ಶ್ರೇಷ್ಠ ಅಂದುಕೊಂಡು ಬಿಟ್ಟಿದ್ದೇವೆ ನಾವೆಲ್ಲ. ವಿಜ್ಞಾನಕ್ಕೆ ಕೂಡ ಮಿತಿ ಇದೆ, ವಿಜ್ಞಾನವನ್ನೇ ಏಕಮೇವಾದ್ವಿತೀಯವೆಂದು ಅನುಸರಿಸಿಕೊಂಡು ಹೋದರೆ ಅನಾಹುತ ತಪ್ಪಿದ್ದಲ್ಲ.

ವಿಜ್ಞಾನ ಅಂದ್ರೆ ತಂತ್ರಜ್ಞಾನದ ರೂಪದಲ್ಲಿ ನಾನು ಹೇಳ್ತಾ ಇರೋದು. ವಿಜ್ಞಾನ ಒಂದು ಪರಮ ಜ್ಞಾನವಲ್ಲ, ಅದು ಸಮಗ್ರ ಜ್ಞಾನವಲ್ಲ, ಅದು ಜಡವಸ್ತು ಅಥವಾ ಯಾವುದನ್ನೇ ಆಗಲಿ ಅದರ ನಿಶ್ಚಲ ಸ್ಥಿತಿಯಲ್ಲಿ ಅಧ್ಯಯನ ಮಾಡೋದಕ್ಕೆ

ಸಂಬಂಧಪಟ್ಟದ್ದು ಮಾತ್ರ. ಅದು ಅಳತೆಗೆ ಸಿಗುವಂತಹ ವಸ್ತುಗಳ ಅಧ್ಯಯನಕ್ಕೆ ಮಾತ್ರ ಸೀಮಿತವಾದಂಥ ಜ್ಞಾನ. ವಿಜ್ಞಾನ ಅಂದರೆ ನಾವೇನ್ ಅಂದುಕೊಂಡುಬಿಟ್ಟಿದ್ದೇವೆ, ಅದೇ ಪರಮಜ್ಞಾನ, ಅದನ್ನು ಚಾಲೆಂಜ್ ಮಾಡೋ ಹಾಗೇ ಇಲ್ಲ ಅಂತ. ಆ ಕಾರಣದಿಂದಾಗಿ ನಾವು ವಿಜ್ಞಾನ ಯುಗದಲ್ಲಿ ವಿಜ್ಞಾನ ಕಲ್ಪಿಸಿದಂಥ ಆಲೋಚನಾ ಮಾದರಿಗಳನ್ನು ನಂಬಿಕೊಂಡು ಮುಂದುವರೆಯುತ್ತಿದ್ದೇವೆ. ಇದೆಲ್ಲ ನಮ್ಮ ಎದೆಯೊಳಗೆ ಕಲ್ಲಿನ ಥರ ಕೂತ್ಕೊಂಡು ಬಿಟ್ಟಿದೆ. ಆದ್ದರಿಂದಲೇ ಇಂಥ ಅನಾಹುತಗಳು ಆದಾಗಲೂ ಕೂಡ ನಾವು ಮೂಲಭೂತವಾಗಿ ಯೋಚನೆ ಮಾಡಕ್ಕೆ ಸಾಧ್ಯ ಆಗ್ತಾ ಇಲ್ಲ. ನಮ್ಮ ಎಲ್ಲಾ ಒಳಗಿನ ಏನು ಕಲ್ಪನೆಗಳಿವೆ, ನಂಬಿಕೆಗಳಿವೆ, ಅವನ್ನ ಸಂದರ್ಭಕ್ಕೆ ತಕ್ಕಂತೆ ತಿದ್ದಿಕೊಂಡು, ಪರಿಷ್ಕರಿಸಿಕೊಂಡು ಅಥವಾ ಅದನ್ನ ಜೀರ್ಣಿಸಿಕೊಂಡು ಬೇರೆ ರೀತಿ ಆಲೋಚನೆ ಮಾಡೋ ಶಕ್ತಿ ನಮ್ಮಲ್ಲಿ ಕುಂದಿಹೋಗಿದೆ.

ಒಬ್ಬ ಗಾಂಧಿವಾದಿ ಇದ್ರು. 'ಸ್ಮಾಲ್ ಇಸ್ ಬ್ಯೂಟಿಫುಲ್' ಅನ್ನುವ ಒಂದು ಪರಿಕಲ್ಪನೆ ಕೊಟ್ಟವರು, ಶೂಮಾಕರ್ ಅಂತ ಜರ್ಮನ್ ಅರ್ಥಶಾಸ್ತ್ರಜ್ಞ, ಅವರು ಸುಮಾರು ನಲವತ್ತು ಐವತ್ತು ವರ್ಷಗಳ ಹಿಂದೆ ವಾರಣಾಸಿಯ ಗಾಂಧಿ ಸಂಶೋಧನಾ ಕೇಂದ್ರಕ್ಕೆ ಬಂದಿದ್ದರು. ಅಲ್ಲಿ ಅವರು ಭಾಷಣ ಶುರು ಮಾಡಿದ್ದು ಈ ಒಂದು ವಾಕ್ಯದೊಂದಿಗೆ: 'ನಮ್ಮ ಪುರಾತನರು ಏನಾದರೂ ವಾಪಸ್ ಈ ಭೂಮಿಗೆ ಬಂದು, ನಮ್ಮ ದಂತ ಚಿಕಿತ್ಸಾಲಯಕ್ಕೆ ಭೇಟಿ ನೀಡಿದರೆ, ಅವರು ನೋಡಿ ಆಶ್ಚರ್ಯ ಪಡುವುದು, "ಆಹಾ! ನನ್ನ ಮಕ್ಕಳು ಮೊಮ್ಮಕ್ಕಳು ದಂತ ಚಿಕಿತ್ಸೆಗೆ ಎಂತೆಂಥ ಸೂಕ್ಷ್ಮ ಉಪಕರಣಗಳನ್ನು, ಯಂತ್ರಗಳನ್ನು ಮದ್ದುಗಳನ್ನು ಕಂಡುಹಿಡಿದುಬಿಟ್ಟಿದ್ದಾರೆ!" ಅಂತಾನೋ ಅಥವಾ "ನನ್ನ ಮಕ್ಕಳು, ಮೊಮ್ಮಕ್ಕಳ ಹಲ್ಲುಗಳು ಯಾಕಿಷ್ಟು ಹಾಳಾಗಿವೆ?" ಅಂತಲೋ? ಅಂದರೆ, ವಿಜ್ಞಾನ ಏನು ಮಾಡಿದೆ ಅಂದರೆ, ನಮ್ಮ ಹಲ್ಲುಗಳನ್ನು ಹಾಳು ಮಾಡ್ತಾ ಇದೆ...! ಜೊತೆಗೆ ನಮ್ಮ ಹಲ್ಲುಗಳನ್ನು ಸರಿ ಮಾಡುವಂಥ ಬೆರಗುಗಳನ್ನು ಸೃಷ್ಟಿ ಮಾಡ್ತಾ ಇದೆ. ಅಂದರೆ ಅದು ತಂತ್ರಜ್ಞಾನದ ಉತ್ಪನ್ನಗಳ ಮೂಲಕ ಒಂದು ಕಡೆಯಿಂದ ಮನುಷ್ಯನ ಆರೋಗ್ಯವನ್ನು ಹಾಳು ಮಾಡ್ತಾ, ಇನ್ನೊಂದು ಕಡೆಯಿಂದ ಅದಕ್ಕೆ ಪರಿಹಾರ ಒದಗಿಸುವ ಭವ್ಯ ನಾಟಕ ಆಡ್ತಾ ಇದೆ. ಆದರೆ ಒಂದು ಮಾತು: ವಿಜ್ಞಾನವೇನೂ ನಮಗೆ ಹೊಸದಲ್ಲ. ಪರಂಪರಾಗತ ವಿಜ್ಞಾನ ಇದ್ದೇ ಇತ್ತು. ಆದರೆ ಇದು ಆಧುನಿಕ ವಿಜ್ಞಾನ. ಈ ಆಧುನಿಕ ವಿಜ್ಞಾನ ಹೇಗೆ ಬಂತು ಅಂತ ಆಮೇಲೆ ಹೇಳ್ತೀನಿ.

ಈ ವಿಜ್ಞಾನದ ಹಿಂದೆ ಇರುವಂಥಾದ್ದು ಆಧುನಿಕ ಅರ್ಥಶಾಸ್ತ್ರ. ಈ ಆಧುನಿಕ ಅರ್ಥಶಾಸ್ತ್ರ ಅಂದ್ರೆ ಏನು ಅಂತಂದ್ರೆ, ಆರ್ಥಿಕ ಚಕ್ರ ತಿರುಗ್ತಾನೇ ಇರಬೇಕು ಸದಾ. ಮನುಷ್ಯನ ಅಗತ್ಯಗಳು ಹೆಚ್ಚುತ್ತಲೇ ಇರಬೇಕು. ಹೆಚ್ತಾ ಇದ್ದಂಗೆ ಅದನ್ನ ಪೂರೈಸೋದಕ್ಕೋಸ್ಕರ ವಸ್ತುಗಳನ್ನ ನಿರ್ಮಾಣ ಮಾಡ್ತಾನೇ ಇರ್ಬೇಕು. ಅಂದ್ರೆ ನಿರಂತರ ಈ ಆರ್ಥಿಕ ಚಕ್ರ, Economic cycle, ತಿರಗ್ತಾನೇ ಇರಬೇಕು. ಅದಕ್ಕೆ ಬೇಕಾಗಿರೋ ಆಹಾರ ಕೊಡ್ತಾನೇ ಇರ್ಬೇಕು. ಅದೆಲ್ಲಿಂದ ಬರುತ್ತೆ? ಅದೆಲ್ಲವೂ ಈ

ನಿಸರ್ಗದಿಂದಲೇ–ಈ ಭೂಮಿ–ಆಕಾಶ–ನೀರು–ಗಾಳಿಗಳಿಂದಲೇ–ಬರಬೇಕು. ಇಂತಹ ಆಧುನಿಕ ಅರ್ಥಶಾಸ್ತ್ರ ಮತ್ತು ಆಧುನಿಕ ವಿಜ್ಞಾನವನ್ನು ನಂಬಿ ಈ ನಮ್ಮ ಬದುಕು ನಡಿತಾ ಇದೆ.

ಈ ವಿಜ್ಞಾನದ ಪರಿಮಿತಿ ಏನು ಅಂತ ಹೇಳ್ತೀನಿ. ಈ ಆಧುನಿಕ ವಿಜ್ಞಾನ ಅಂತ ಆರಂಭವಾದದ್ದು, ೧೩–೧೪ ನೇ ಶತಮಾನದಲ್ಲಿ. ಏನು ಯೂರೋಪಿನಲ್ಲಿ ಸಂಭವಿಸಿತು–ರೆನೈಸಾನ್ಸ್ ಅಥವಾ ಪುನರುಜ್ಜೀವನ ಅಂತ ಏನು ಕರೀತೀವಿ ಆ ಯುಗದಲ್ಲಿ. ಅದನ್ನ ಜ್ಞಾನ ಯುಗ ಅಂತಲೂ ಕರೀತೀವಿ. ನನ್ನ ಪ್ರಕಾರ ಅದು ಒಂದು ರೀತಿಯಲ್ಲಿ ಅಜ್ಞಾನ ಯುಗ. ಯಾಕೆಂದರೆ, ಅದು ಜ್ಞಾನದ ಸ್ಥಾನದಲ್ಲಿ ವಿಜ್ಞಾನವನ್ನು ತಂದು ಕೂರಿಸಿಬಿಟ್ಟಿತು. ನಿಜ, ಆಗ ಪ್ರಧಾನವಾಗಿ ಧರ್ಮ ನಮ್ಮನ್ನು ಆಳ್ತಾ ಇತ್ತು. ಆದರೆ ಆ ಧರ್ಮ ಮತಾಚಾರಗಳಾಗಿ ಮೌಢ್ಯಗಳ ಆಗರವಾಗಿತ್ತು. ಧರ್ಮಾಧಿಕಾರದ ಕ್ರೌರ್ಯ ಮಿತಿ ಮೀರಿತ್ತು. ಧರ್ಮಾಧಿಪತಿಗಳು ಏನು ಹೇಳುತ್ತಾರೋ ಅದು ನಡಿತಾ ಇತ್ತು. ಅದಕ್ಕೆ ಪ್ರತಿಕ್ರಿಯಿಸುತ್ತಾ, ಜನಪರತೆಯ ಉಬ್ಬರ–ಅಬ್ಬರಗಳಲ್ಲಿ ವಿಜ್ಞಾನ ಆ ಜಾಗವನ್ನು ಆಕ್ರಮಿಸಿಕೊಂಡುಬಿಟ್ಟಿತು. ಆಧುನಿಕ ವಿಜ್ಞಾನ. ಅಂದ್ರೆ ಈ ನ್ಯೂಟನ್‌ನ ಚಲನಶಾಸ್ತ್ರ, ಅಂದರೆ ನ್ಯೂಟೋನಿಯನ್ ಮೆಕ್ಯಾನಿಕ್ಸ್ ಶುರುವಾಯಿತಲ್ಲಾ, ಅದು ಮನುಷ್ಯ ಈ ಜಗತ್ತನ್ನು ಅರ್ಥ ಮಾಡಿಕೊಳ್ಳಬಲ್ಲ, ಅ ಈ ವಸ್ತುಗಳು ಯಾಕೆ ಚಲಿಸುತ್ತಿವೆ? ಆ ಚಲನೆಯ ದಿಕ್ಕಿಗೆ, ವೇಗಗಳಿಗೆ ಏನು ಕಾರಣ? ಇವೆಲ್ಲವನ್ನೂ ಅರಿಯುವಂಥ ಸೂತ್ರಗಳನ್ನು, ನಿಯಮಗಳನ್ನ ಕಂಡು ಹಿಡಿದುಕೊಂಡು ಬಿಟ್ಟಿದ್ದೇನೆ–ಅಂತ, ಅದು ಇಡೀ ಸೃಷ್ಟಿಯನ್ನು ಗುರುತ್ವಾಕರ್ಷಣೆಯ ಬಲದ ಪರಿಭಾಷೆಯಲ್ಲಿ ಒಂದು ಭೌತ ಪ್ರಪಂಚವನ್ನಾಗಿ ವ್ಯಾಖ್ಯಾನಿಸಿದ. ಆನಂತರ ಲ್ಯಾಪ್ಲಾಸ್ ಬಂದ. ಅವನು ಆಕಾಶಕಾಯಗಳ ಚಲನೆಯ ಸೂತ್ರವನ್ನು ಕಂಡುಹಿಡಿದ. ಡಾರ್ವಿನ್ ಬಂದು ಪಳಯುಳಿಕೆಗಳ ಅಧ್ಯಯನ ಮಾಡಿ ಜೀವ ವಿಕಾಸವಾದವನ್ನು ಮಂಡಿಸಿ ಜೀವ ಎಂಬುದನ್ನು ಭೌತ ಪ್ರಪಂಚದ ಚೌಕಟ್ಟಿಗೆ–ಅದರ ತರ್ಕ ಮತ್ತು ನಿಯಮಗಳ ವ್ಯಾಪ್ತಿಯಲ್ಲಿ ಅಳವಡಿಸಿದ. ಮುಂದೆ ಐನ್‌ಸ್ಟೀನ್ ಬಂದ. ಅವನು ಕಂಡುಹಿಡಿದ ಸಾಪೇಕ್ಷತಾ ತತ್ವವು ಭೌತ ಪ್ರಪಂಚವನ್ನು ಆಧುನಿಕ ವಿಜ್ಞಾನ ರಚಿಸಿಕೊಂಡ ಬಗೆಯನ್ನು ಅನುಮಾನಾಸ್ಪದಗೊಳಿಸಿ ಸಾರಾಂಶ ರೂಪದಲ್ಲೆಂಬಂತೆ. ಅಂತೂ ಆತ ಧರ್ಮ–ವಿಜ್ಞಾನಗಳ ಸಮನ್ವಯದ ಮಾತನಾಡಿದನಾದರೂ, ಭೌತವೆಂಬುದರ ಪುನರ್ವ್ಯಾಖ್ಯಾನವನ್ನೇನೂ ಮಾಡಲಿಲ್ಲ ಅದೇನೇ ಇರಲಿ, ಆ ಹೊತ್ತಿಗೆ ಆಧುನಿಕ ಭೌತ ವಿಜ್ಞಾನ ಮನುಷ್ಯನನ್ನು ಎಷ್ಟು ಬೆರಗುಗೊಳಿಸಿ ತನ್ನ ತಂತ್ರಜ್ಞಾನದ ರೂಪದಲ್ಲಿ ಒಂದು ಉದ್ಯಮವಾಗಿ ಬೆಳೆದು ಅವನ ಸುಖದ ಕಲ್ಪನೆಯನ್ನು ಹೇಗೆ ಉಬ್ಬಿಸಿತ್ತೆಂದರೆ ಈ ಸೃಷ್ಟಿ ಭೌತಮಾತ್ರವಾಗಿ ಕಾಣತೊಡಗಿ ಮನುಷ್ಯ ಅದರ ಒಡೆಯನಾಗಿ ಕಾಣತೊಡಗಿದ್ದ. ಹೀಗೆ ಈ ಆಧುನಿಕ ವಿಜ್ಞಾನ ಬೆಳೆದು, ಈ ಜಗತ್ತಿನ ಸೃಷ್ಟಿ ರಹಸ್ಯವನ್ನು ಅರಿಯಬಲ್ಲೆ, ಇದರ ಮೇಲೆ ನಾನು ಪ್ರಭುತ್ವವನ್ನು ಸಾಧಿಸಬಲ್ಲೆ, ನಾನು ಇಡೀ ಸೃಷ್ಟಿಯನ್ನು ಪುನರ್‌ರೂಪಿಸಬಲ್ಲೆ ಅಂತ

ಅವನಿಗೆ ಅನ್ನಿಸತೊಡಗಿತ್ತು. ಇದೆಲ್ಲ ದೇವರ ಸೃಷ್ಟಿ, ಅವನ ಲೀಲೆ ಅಂತ ನಾವೇನು ತಿಳಿದುಕೊಂಡಿದ್ದೆವಲ್ಲ, ಆ ದೇವರ ಜಾಗಕ್ಕೆ ವಿಜ್ಞಾನ, ಅದರ ಲೀಲೆ ಬಂತು. ಬಂದು, ಜಗತ್ತನ್ನು ತನ್ನಿಷ್ಟಬಂದಂತೆ ಪುನರ್ರೂಪಿಸಬಹುದು, ಹಾಗೆ ರೂಪಿಸಬಹುದಾದಂಥ ಜ್ಞಾನ ನನ್ನಲ್ಲಿದೆ ಎನಿಸುವಂತೆ ಮಾಡಿತು.

ಸೈನ್ಸನ್ನು ವಿಜ್ಞಾನ ಅಂತ ಕರೀತೀವಿ. ಭಾರತೀಯ ಪರಿಭಾಷೆಯಲ್ಲಿ, 'ವಿ' ಅಂದ್ರೆ ವಿಗ್ರಹ ಜ್ಞಾನ ಸೂಚಕ. ಅದು ಒಡೆದು ನೋಡುವ ಜ್ಞಾನ. ಒಡೆದು, ಒಡೆದು, ಒಡೆದು ನೋಡೋದು. ವಿ–ಶ್ಲೇಷಣೆ ಅದು. ಅನಲಿಸಿಸ್. ಅದಕ್ಕಿಂತ ಮುಂಚೆ ನಮ್ಮಲ್ಲೇನಿತ್ತು? ಸಂಶ್ಲೇಷಣ ಜ್ಞಾನ ಇತ್ತು. ಎಲ್ಲವನ್ನೂ ಒಟ್ಟಿಗೆ ನೋಡುವುದು. ಇಡೀ ಸೃಷ್ಟಿ ಒಂದು, ಅದರ ಭಾಗವಾಗಿ ನಾವು ಅಂತ ಯೋಚನೆ ಮಾಡ್ತಾ ಇದ್ವಿ. ಅದರಿಂದಲೇ ನಮ್ಮ ಪುರಾತನರು ಮರಗಿಡಗಳನ್ನು, ಪಕ್ಷಿ ಪ್ರಾಣಿಗಳನ್ನು, ಬಂಡೆಗಳನ್ನು, ಜಲಪಾತಗಳನ್ನು ಪೂಜೆ ಮಾಡ್ತಾ ಇದ್ದರು. ಇಡೀ ಒಂದು ಸೃಷ್ಟಿಯ ಭಾಗ ಮಾತ್ರ ನಾನು ಅನ್ನೋ ವಿನಯ ನಮ್ಮಲ್ಲಿತ್ತು. ಅದನ್ನು ಅಧ್ಯಾತ್ಮ ಅಂತ ಕರೆಯುತ್ತೇವೆ. ಅಧ್ಯಾತ್ಮದ ಬಗ್ಗೆ ಇಂದು ಕೆಟ್ಟ ವಿವರಣೆಗಳು ಬಂದುಬಿಟ್ಟಿವೆ. ಅಂದ್ರೆ ಬಹಳ ಸುಳ್ಳುಪಳ್ಳು ಗುರುಗಳು ಸೃಷ್ಟಿಯಾಗಿ ಬಿಟ್ಟಿದ್ದಾರೆ. ಆದರೆ ಅಧ್ಯಾತ್ಮ ಅಂದರೆ ಮತ್ತೇನೂ ಅಲ್ಲ. ಅದು ದೇವರು ಧರ್ಮಕ್ಕೆ ಸಂಬಂಧಪಟ್ಟ ವಿಷಯ ಅಲ್ಲ. ಅದು ಎಲ್ಲವನ್ನೂ ಸಮಗ್ರವಾಗಿ ನೋಡುವಂತಹ ಒಂದು ದೃಷ್ಟಿಕೋನ. ಸಮ್ಯಕ್ ಜ್ಞಾನದೃಷ್ಟಿ ಅದು. ನಾವ್ಯಾರೂ ಒಂಟಿಯಲ್ಲ, ನಾವೆಲ್ಲರೂ ಇನ್ನೊಬ್ಬರ ಜೊತೆಯಲ್ಲಿ ಇರ್ತಕ್ಕಂಥವರು. ಇನ್ನೊಬ್ಬರ ಜೊತೆಯಲ್ಲಿ ಮಾತ್ರ ಅಲ್ಲ, ಇನ್ನೊಂದರ ಜೊತೆಯಲ್ಲಿ. ಅದು ಬಂಡೆ ಇರಬಹುದು, ನದಿ ಇರಬಹುದು, ಕ್ರಿಮಿಕೀಟ ಪಕ್ಷಿಗಳು ಇರಬಹುದು, ಇವೆಲ್ಲವೂ ಒಂದು ಸಂಕುಲ. ಈ ಸಂಕುಲದ ಭಾಗವಾಗಿ ನಾವಿರಬೇಕು ಅನ್ನುವ ಭಾವನೆ, ನಂಬಿಕೆ ಅದು.

ಒಂದು ಉದಾಹರಣೆ ಕೊಡ್ತೀನಿ ನಿಮಗೆ. ಈ ಆಧುನಿಕ ವಿಜ್ಞಾನದ ಭಾಗವಾಗಿ ಜೀವ ವಿಕಾಸವಾದ ಅಂತ ಒಂದು ಸಿದ್ಧಾಂತ ಬಂತು ಅಂತ ಆಗಲೇ ಹೇಳೀದೆನಲ್ಲ Darwinian evolution theory ಅಂತ. ಅದೇನು ಹೇಳ್ತು, ಮಂಗನಿಂದ ಮಾನವ ಅಂತು. ಈ ವಾದದ ಪ್ರಕಾರವೇ ಮಂಗ ಯಾವಾಗ ಬಂದಿದ್ದು ವಿಕಾಸದಲ್ಲಿ? ಎಷ್ಟೋ ಸಾವಿರ ಸಾವಿರ ವರ್ಷಗಳಾದ ಮೇಲೆ. ನಿಜವಾದ ಸತ್ಯ ಏನು ಅಂದ್ರೆ ಮರದಿಂದ ಮಾನವ. ಮರ ಹುಟ್ಟಿದ್ದಕ್ಕೆ ಮಾನವ ಬಂದದ್ದು, ಮಂಗನಿಂದ ಅಲ್ಲ. ಇನ್ನೂ ಹಿಂದಕ್ಕೆ ಹೋಗಬೇಕು ನಾವು. ಏಕಕೋಶದ ಅಮೀಬಾಗೆ ಹೋಗಬೇಕು. ಅದೆಲ್ಲದರಿಂದ ನಾವು ಹುಟ್ಟಿ ಬಂದಿರುವುದು. ಅದೆಲ್ಲದರ ಜೊತೇಲೇ ನಾವು ಇರೋದಕ್ಕೆ ಸಾಧ್ಯ. ನಮ್ಮ ನೆರೆಹೊರೆ ಇರೋದ್ರಿಂದಾನೇ ನಾವು ಇರೋದಕ್ಕೆ ಸಾಧ್ಯ. ನೆರೆಹೊರೆ ಅಂದ್ರೆ ಸುತ್ತಮುತ್ತಲಿನ ಜನ ಅಷ್ಟೇ ಅಲ್ಲ. ಪ್ರಾಣಿ, ಪಕ್ಷಿ, ಗಾಳಿ, ನೀರು, ಪರ್ವತ ಎಲ್ಲವೂ ಸೇರಿ. ಅಂದರೆ ಪರಿಸರ.

ಛತ್ತೀಸ್‌ಗಢವನ್ನ ಒಂದು ದೊಡ್ಡ ನಕ್ಸಲರ ತಾಣ ಅಂತ ಕರೆಯುತ್ತಾರೆ. ಯಾರನ್ನ ನಾವು ನಕ್ಸಲೈಟ್ ಅಂತ ಕರೀತೀವಿ? ಅವರು ಯಾಕೆ ನಕ್ಸಲೈಟ್, ಅಂದ್ರೆ ಬದುಕುವ ದಾರಿಯಲ್ಲಿ ಹಿಂಸೆ ನಿಷಿದ್ಧವಲ್ಲ ಅಂತ ನಂಬುವ ಹಾಗೆ ಆದ್ರು? ಅಂತ ನಾವು ಯೋಚನೆ ಮಾಡಲ್ಲ. ಆದರೆ ಆ ಆದಿವಾಸಿ ಜನ ಎಂಥ ಅದ್ಭುತವಾದ ಜನ ಅಂದರೆ, ಅವರು ಜಲಪಾತಗಳನ್ನು ಪೂಜೆ ಮಾಡ್ತಾರೆ. ಗುಡ್ಡಗಳನ್ನು ಪೂಜೆ ಮಾಡ್ತಾರೆ. ಅದನ್ನ ನಾವು ಮೌಢ್ಯ ಅಂತ ಕರೆಯುತ್ತೇವೆ. ನಾಸ್ತಿಕತೆಯ ಹೆಮ್ಮೆಯಲ್ಲಿ ಧರ್ಮವನ್ನು ಬೈಬೇಕಾದರೆ ಅವರು ಕೋತಿಗಳನ್ನು ಪಕ್ಷಿಗಳನ್ನು ಬಂಡೆಗಳನ್ನು ಪೂಜೆ ಮಾಡುವಂತ ಧರ್ಮ ಅಂತ ಹೀಯಾಳಿಸ್ತೀವಿ. ಹಾಗೆ ಹೀಯಾಳಿಸೋದಕ್ಕೆ ಕಾರಣ ಇದೆ. ಯಾಕೆಂದರೆ ಯಾವ ಕಾರಣಕ್ಕೆ ಪೂಜೆ ಮಾಡ್ತಿದ್ದಾರೆ ಇವನ್ನೆಲ್ಲ ಅಂತ ನಮಗೆ ಗೊತ್ತಿರಲಿಲ್ಲ. ಯಾಕೆಂದ್ರೆ ನಮ್ಮ ಪ್ರಜ್ಞೆಯಲ್ಲಿ ಕಲ್ಲಿನಂತೆ ಬಂದು ಕೂತ ಆಧುನಿಕ ವಿಜ್ಞಾನದ ವಿಶ್ಲೇಷಣಾ ತರ್ಕಕ್ಕೆ ಈ ತಿಳುವಳಿಕೆ ಸಾಧ್ಯವಿಲ್ಲ. ಆದರೆ ಆ ಜನಕ್ಕೆ ಗೊತ್ತಿದೆ. ಆದಿವಾಸಿಗಳು ಅಂದರೆ ನಮ್ಮ ಪುರಾತನರು. ಅವರಲ್ಲೊಬ್ಬ ಮುದುಕನನ್ನ "ಜಲಪಾತವನ್ನು ಯಾಕೆ ಪೂಜೆ ಮಾಡ್ತೀಯಪ್ಪ ನೀನು?" ಅಂತ ಯಾರೋ ಕೇಳಿದರು. ಈ ಗಣಿಗಾರಿಕೆ ಒಂದು ಜಲಪಾತ ನಾಶವಾಗಬೇಕಾಗಿತ್ತು. ಅದರ ರಕ್ಷಣೆಗೋಸ್ಕರ ಅವರು ಧರಣಿ ಕೂತರು. "ಈ ಜಲಪಾತ ಹೋದರೆ ಹೋಯಿತು. ಆದರೆ ನಿಮ್ಮ ಬಡತನ ನಿವಾರಣೆಯಾಗುತ್ತೆ. ಗಣಿಗಾರಿಕೆಗೆ, ಬೇಕಾದಷ್ಟು ರಾಯಲ್ಟಿ ಕೊಡ್ತೀವಿ. ಅದರಿಂದ ನೀವು ಒಳ್ಳೊಳ್ಳೆಯ ಮನೆಗಳನ್ನು ಕಟ್ಟಬಹುದು. ರಸ್ತೆಗಳನ್ನು ಮಾಡ್ಕೋಬಹುದು. ಇಲ್ಲೊಂದು ಕಾರ್ಖಾನೆ ಮಾಡಬಹುದು. ನಿಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಉದ್ಯೋಗ ಸಿಗುತ್ತೆ" ಅಂತ. ಇದಕ್ಕೆ ಅವನು, ಆ ಮುದುಕ ಹೇಳಿದ "ದಿನಾ ಬೆಳಗ್ಗೆ ಎದ್ದು ನಾವು ಜಲಪಾತವನ್ನು ನೋಡಿ, ನಮಸ್ಕಾರ ಮಾಡಿದಾಗ, ನಮ್ಮ ಮನಸ್ಸು ಕ್ಲೀನ್ ಆಗ್ಬಿಡುತ್ತೆ. ಕ್ಲೀನ್ ಆದಾಗ ಜಗತ್ತನ್ನು ನೋಡುವ ಕ್ರಮವೇ ಬದಲಾಗಿಬಿಡುತ್ತದೆ. ಇದನ್ನು ರಕ್ಷಣೆ ಮಾಡಬೇಕು ಅನಿಸುತ್ತೆ. ಜಲಪಾತದ ಜೊತೆಗಿರತಕ್ಕಂಥ ಕ್ರಿಮಿ-ಕೀಟ ಪಕ್ಷಿಗಳ ಆದಿಯಾಗಿ ನದಿಯ ಎಲ್ಲವೂ ಸೇರಿ ನಾವೆಲ್ಲ ಒಂದು, ಇವೆಲ್ಲದರ ಜೊತೆಯಲ್ಲಿ ನಾವು ಸುರಕ್ಷಿತವಾಗಿದ್ದೇವೆ ಅನ್ನೋ ಭಾವ ಬರತ್ತೆ."

ಈ ಭಾವವನ್ನು ವಿಜ್ಞಾನ ನಾಶಮಾಡಿತು. ಧರ್ಮದ ಜಾಗದಲ್ಲಿ ವಿಜ್ಞಾನ ಬಂದು, ವಿಜ್ಞಾನವೇ ಪರಮ ಜ್ಞಾನ ಅಂತ ಆಗ್ಬಿಡ್ತು.

ತನ್ನ ತಾನರಿತರೆ ಅದೆ ಪ್ರಳಯ!

ನಾನು ಆಗಲೇ ಹೇಳಿದ ಹಾಗೆ ಈ ಆಧುನಿಕ ವಿಜ್ಞಾನ ವಿಶ್ಲೇಷಣಾ ಜ್ಞಾನ. ಕೇವಲ ಜಗತ್ತನ್ನು ಜಡವಾಗಿ ನೋಡುವಂತಹ ಜ್ಞಾನ. ಎಲ್ಲವೂ ಜಡವೆ, ಮನುಷ್ಯರನ್ನು ಬಿಟ್ಟು ಮತ್ತು ಅದು ವಿಶ್ಲೇಷಿಸುವುದು ಅಳತೆಗೆ ಸಿಗುವ ವಸ್ತುಗಳನ್ನು ಮಾತ್ರ. ಅಳತೆಗೆ

ಸಿಗದ ವಸ್ತುಗಳು. ವಿದ್ಯಮಾನಗಳು ಬೇಕಾದಷ್ಟಿವೆ ಜಗತ್ತಿನಲ್ಲಿ. ಉದಾಹರಣೆಗೆ. ನೀವು ಕೇಳಿರಬಹುದು, ಫಿಸಿಕ್ಸ್‌ನಲ್ಲಿ ಮೂಲಭೂತ ಕಣ–ಫಂಡಮೆಂಟಲ್ ಪಾರ್ಟಿಕಲ್ ಬಗ್ಗೆ. ಒಂದು ವಸ್ತುವನ್ನು ಒಡೆದು, ಒಡೆದು, ಒಡೆದು ನೋಡಿ ಅಣು, ಅಣುವಿನಲ್ಲಿ ಪರಮಾಣು, ಪರಮಾಣುವಿನಲ್ಲಿ ಪರಮಾಣು ಬೀಜ, ಅದರಲ್ಲಿ ಮತ್ತೆ ಸುತ್ತ ಇನ್ನಷ್ಟು ಕಣಗಳು.... ಒಡೀತಾನೆ ಇದೀವಿ ನಾವು, ಸಿಕ್ತಾನೇ ಇಲ್ಲ ಆ ಮೂಲ–ಭೂತ ಕಣ ಯಾವುದು ಅಂತ. ಸುಸ್ತಾಗಿ, ಸುಸ್ತಾದ ಹಂತದಲ್ಲಿ ದೊರೆತ ಕಣಕ್ಕೆ ದೇವಕಣ ಅಂತ ಹೆಸರು ಇಟ್ಟು ಬಿಟ್ವಿ. ಎಲ್ಲಿಗೆ ಬಂತು ನಮ್ಮ ವಿಜ್ಞಾನ! ಅವಾಗ್ಲಾದ್ರೂ ಈ ವಿಜ್ಞಾನಿಗಳಿಗೆ, ಅವರಿಗಿಂತ ಹೆಚ್ಚಾಗಿ ವಿಜ್ಞಾನವಾದಿಗಳಿಗೆ ನಮ್ಮ ಪುರಾತನರು ದೇವರು ಅಂದರೆ ಏನು ತಿಳಿದುಕೊಂಡಿದ್ದರು ಅಂತ ಗೊತ್ತಾಗಬೇಕಾಗಿತ್ತು. ದೇವರು ಅಂದ್ರೆ ಗಣಪತಿ–ವಿಷ್ಣು–ಈಶ್ವರ ಅಥವಾ ದುರ್ಗೆ ಮಾರಿ ಅಲ್ಲ. ನಮ್ಮ ಸೃಷ್ಟಿಯ ಮೂಲ. ನಾವೆಲ್ಲರೂ ಮನುಷ್ಯರು ಮಾತ್ರ ಅಲ್ಲ, ಈ ಗಿಡ, ಪಕ್ಷಿ–ಪ್ರಾಣಿ, ಕ್ರಿಮಿ–ಕೀಟ ಬಂಡೆ, ನದಿ ಎಲ್ಲವೂ ಬಂದಿರೋದು ಆ ಒಂದೇ ಮೂಲದಿಂದಲೇ ಆ ಮೂಲ ನಮಗೆ ಗೊತ್ತಿಲ್ಲ. ಅದನ್ನ ಅರ್ಥ ಮಾಡ್ಕೊಳ್ಳೋಕೆ ನಮ್ಮ ಕೈಲಿ ಆಗ್ತಿಲ್ಲ. ಆ ಒಂದು ನಮ್ರತೆ ಮನುಷ್ಯನಿಗೆ ಬರ್ತಿಲ್ಲ. ನಮ್ರತೆ ಇತ್ತು. ಆದರೆ ವಿಜ್ಞಾನ ಅದನ್ನು ಹಾಳು ಮಾಡ್ತು. ಎಲ್ಲವನ್ನೂ ನಾವು ತರ್ಕಕ್ಕೆ ಒಗ್ಗಿಸಿಕೊಂಡು, ಕಾರ್ಯ–ಕಾರಣಗಳ ಸಂಬಂಧದ ಮೂಲಕ ಅರ್ಥ ಮಾಡ್ಕೋಬಹುದು, ಎಲ್ಲವನ್ನೂ ಬದಲಾವಣೆ–ಮರು ಹೊಂದಾಣಿಕೆ –manipulate– ಮಾಡಬಹುದು ಅಂತ.

ಈ ಅಹಂಕಾರಿ ವಿಜ್ಞಾನ ಮಾಡಿರೋ ಅನಾಹುತಕ್ಕೆ ಒಂದು ಸಣ್ಣ ಉದಾಹರಣೆಯನ್ನು ಕೊಡ್ತೀನಿ. ನೀವೆಲ್ಲಾ ಹಿರೋಷಿಮಾ ನಾಗಸಾಕಿ ಮೇಲೆ ಬಾಂಬ್ ಹಾಕಿದ ಘಟನೆ ಬಗ್ಗೆ ಕೇಳಿರಬಹುದು. ಈ ಬಾಂಬ್ ದಾಳಿಯಿಂದಾಗಿ ಸಾವಿರಾರು ಜನ ಸತ್ತೋಗ್ಬಿಟ್ಟರು. ಲಕ್ಷಾಂತರ ಜನ ಅಂಗವಿಕಲರಾದರು. ಇನ್ನಷ್ಟು ಜನ ಜೀವನ ಪೂರ್ತಿ ರೋಗಿಗಳಾಗಿ ಸತ್ರು. ಆ ಬಾಂಬ್ ಹಾಕಿದನಲ್ಲ, ಆ ಪೈಲೆಟ್, ಅವನು ಬಾಂಬ್ ಹಾಕಿದ ಮೇಲೆ ಈ ದುರಂತ ನೋಡಿ, ಕೇಳಿ ವಿಲಿವಿಲಿ ಒದ್ದಾಡಿ ಸತ್ಹೋದ. ಯಾಕೇಂದ್ರೆ ಅವನೊಬ್ಬ ನಿಷ್ಠಾವಂತ ಕ್ರಿಶ್ಚಿಯನ್ ಆಗಿದ್ದ. ಕ್ರಿಶ್ಚಿಯನ್ನರ ಮೂಲ ನಂಬಿಕೆ, Thou shall not kill–ನಾನು ಇನ್ನೊಬ್ಬರನ್ನು ಕೊಲ್ಲುವುದಿಲ್ಲ ಅಂತ. ಅವನು ಈ ಪಾಪಪ್ರಜ್ಞೆಗೆ ಒಳಗಾಗಿ. ಹುಚ್ಚನಾಗಿ ಆತ್ಮಹತ್ಯೆ ಮಾಡ್ಕೊಂಡುಬಿಟ್ಟ. ಅದಾದ ಮೂವತ್ತು ವರ್ಷಗಳ ನಂತರ ವಿಯೆಟ್ನಾಮ್ ಯುದ್ಧ ನಡೆಯಿತು. ವಿಯೆಟ್ನಾಂ ಯುದ್ಧದಲ್ಲಿ ರಸಾಯನಿಕ ಬಾಂಬ್ ಹಾಕಿದರು, ಅದೇ ಅಮೆರಿಕದವರು. ಆ ಬಾಂಬ್ ಹಾಕಿದ ಪೈಲೆಟ್ ವಿಯಯಟ್ನಾಂನ ತನ್ನ ಸೇನಾ ನೆಲೆಯಲ್ಲೇ ಆರಾಮಾಗೇ ಇದ್ದ. ಆಗ ನಮ್ಮ ತರ ಕೆಲವು 'ತಲೆಹರಟೆ'ಗಳು ಅವನನ್ನು ಒಂದು ಪೇಟೆ ಬೀದಿಗೆ ಕರೆತಂದು, "ನೋಡಪ್ಪ, ವಿಯೆಟ್ನಾಮ್ ನಿನ್ನ ಶತ್ರು ದೇಶಾಂತ ತಾನೇ ಬಾಂಬ್‌ಗಳನ್ನು ಹಾಕಿ ಜನರನ್ನು ಕೊಲ್ತಿರೋದು?" ಅಂತ ಅವನ ಕೈಗೆ ಒಂದು ಮಚ್ಚನ್ನು ಕೊಟ್ಟು, "ನೋಡು, ಆ ರಸ್ತೆಯ ಮೇಲೆ ಒಬ್ಬಳು ಮುದುಕಿ ಹೋಗ್ತಾ ಇದ್ದಾಳೆ. ಅವಳು ವಿಯೆಟ್ನಾಮಿನ ಹೆಂಗಸು. ನೀನು ಹೋಗಿ ಆ ಹೆಂಗಸನ್ನು

ಕೊಂದ್ಬಿಟ್ಟು ಬರ್ತೀಯಾ?" ಅಂತ ಕೇಳಿದರು. ಇದರಿಂದ ಗಾಬರಿಯಾದ ಅವನು "ಏನು? ಏನು ಹೇಳ್ತಾ ಇದ್ದೀರಾ ನೀವು? ಆ ಅಮಾಯಕ ಹೆಂಗಸನ್ನು ಕೊಲ್ಲು ಅಂತ ಹೇಳ್ತಾ ಇದೀರಲ್ಲ! ಇದು ಅಧರ್ಮವಾಗುತ್ತೆ. Thou shall not kill ಅನ್ನೋ ನನ್ನ ಧರ್ಮಾದೇಶ ಉಲ್ಲಂಘನೆ ಆಗ್ತದೆ!" ಎಂದು ಹೌಹಾರಿದ. ಆಗ "ಆದರೆ ಅಲ್ಲಿ ಮತ್ತೆ ಅಷ್ಟೊಂದು ಜನರನ್ನು ಕೊಂದ್ಯಲ್ಲ ನೀನು ರಸಾಯನಿಕ ಬಾಂಬ್ ಹಾಕ್ಬಿಟ್ಟು, ಅದೇನು ಅಧರ್ಮವಲ್ವಾ?" ಅಂತ ಅವನ್ನನ್ನ ಕೇಳಿದ್ರೆ, ಅವನು ಅಮಾಯಕವಾಗಿ "ನಾನೇನು ಕೊಲ್ಲಲಿಲ್ಲಪ್ಪ. ಕಂಪ್ಯೂಟರ್ ಕೊಲ್ತು. ಕಂಪ್ಯೂಟರ್‌ನ ಯಾರೋ ಪ್ರೋಗ್ರಾಂ ಮಾಡಿದ್ರು. ನನ್ನ ಮೇಲಧಿಕಾರಿ ಹೇಳಿದ ಕಡೆ ನಾನು ವಿಮಾನ ತೆಗೆದುಕೊಂಡು ಹೋದೆ. ಅಷ್ಟೇ" ಎಂದು ಉತ್ತರಿಸಿದನಂತೆ. ಇದು ಆಧುನಿಕ ವಿಜ್ಞಾನದ ದುರಂತ. ತಂತ್ರಜ್ಞಾನದ ರೂಪದಲ್ಲಿ ಅದು ಹೀಗೆ ಧರ್ಮವನ್ನೇ ನಮ್ಮ ಸಂವೇದನೆಯಿಂದ ಪ್ರತ್ಯೇಕಿಸಿಬಿಟ್ಟಿದೆ. ನಮ್ಮ ಮನಸ್ಸಿನ ಸತ್ವವನ್ನೇ ಅದರ ಸಮಗ್ರತೆಯನ್ನೇ ಒಡೆದು ನಾಶ ಮಾಡ್ಬಿಟ್ಟಿದೆ. ಹೀಗೆ ವಿಜ್ಞಾನ ಧರ್ಮದ ಜಾಗಕ್ಕೆ ಬಂದು, ನಮ್ಮ ಸಂವೇದನೆಯನ್ನೇ ಕಡಿದುಹಾಕ್ಬಿಟ್ಟಿದೆ.

ಇನ್ನೂ ಒಂದು ಮುಖ್ಯವಾದ ಮಾತು ಹೇಳಬೇಕು ನಿಮಗೆ. ಈ ಆಧುನಿಕ ವಿಜ್ಞಾನ ಅನ್ನುವುದು ನಮಗೆ ಬಂದದ್ದು, ನಾನು ಆಗಲೇ ಹೇಳಿದ ಹಾಗೆ, ಜ್ಞಾನಯುಗದ ಒಂದು ಕೊಡುಗೆಯಾಗಿ. ಹಾಗೆ ಅದು ಬಂದದ್ದು ಧರ್ಮದ ವಿರುದ್ಧ ಒಂದು ಪ್ರತಿಕ್ರಿಯೆಯಾಗಿ, ಪ್ರೊಟೆಸ್ಟ್ ಆಗಿ ಕೂಡ. ಇದರ ಪರಿಣಾಮವಾಗಿ ಪ್ರೋಟೆಸ್ಟೆಂಟ್ ಧರ್ಮ ಅಂತ ಒಂದು ಬಂತು. ಈ ರೋಮನ್ ಕ್ಯಾಥೋಲಿಕ್ ಧರ್ಮದ ಸಂಪ್ರದಾಯವಾದದ ವಿರುದ್ಧ ಈ ಧರ್ಮ. ಕ್ರಿಶ್ಚಿಯನ್ ಧರ್ಮ ಅಂತ ಏನಿದೆ ಅದು ಪೂರ್ತಿ ಧರ್ಮಾಧಿಪತಿಗಳ ಕೈ ಸೇರಿಬಿಟ್ಟು ಅವರದೇ ಸರ್ವಾಧಿಕಾರ ಆಗಿಬಿಟ್ಟಿದೆ, ಆದ್ದರಿಂದ ಬೈಬಲ್ಲನ್ನು ಬರೀ ಲ್ಯಾಟಿನ್ ಭಾಷೆಯಲ್ಲಿ ಮಾತ್ರ ಇರಬೇಕಾಗಿಲ್ಲ ಎಲ್ಲ ಭಾಷೆಗಳಿಗೂ ಅನುವಾದ ಮಾಡಬೇಕು ಅನ್ನುವಂತಹ; ಹಲವು ಮಡಿ-ಮೈಲಿಗೆಗಳನ್ನು ಸಡಿಲಿಸುವ ಉದಾರವಾದಿ ಧರ್ಮ ಪ್ರಾಟೆಸ್ಟೆಂಟ್ ಧರ್ಮ. ಪೂರ್ವದ ಸಂಪ್ರದಾಯವಾದಿ ಧರ್ಮದ ಭಾರವಾದ ಪಾರಮಾರ್ಥಿಕತೆಗೆ ಪ್ರತಿಕ್ರಿಯಿಸ್ತಾ ತನ್ನ ಉದಾರವಾದದ ಭಾಗವಾಗಿ ಆ ಹೊಸ ಧರ್ಮ ಏನ್ ಹೇಳ್ತು ಅಂದ್ರೆ, ಈ ಜಗತ್ತು ಮನುಷ್ಯನ ಸುಖಕ್ಕಾಗಿ ದೇವರು ಕೊಟ್ಟಿರೋ ಕೊಡುಗೆ. ಮನುಷ್ಯನ ಸುಖ-ಸೌಲಭ್ಯಗಳಿಗಾಗಿ ದೇವರು ಕೊಟ್ಟಿರುವ ಕೊಡುಗೆನೇ ಈ ಭೂಮಿ.

ಅಲ್ಲಿಂದ ಶುರುವಾಯ್ತು ಈ ಆಧುನಿಕ ವಿಜ್ಞಾನದ ಆಟೋ ಸ್ಪರ್ಧೆ!. ಅಂದ್ರೆ ಈ ಭೂಮಿಯನ್ನು ದೇವರ ಕೊಡುಗೆ ಎಂದು ಹೇಳುವ ಮೂಲಕ ದೇವರಿಂದ ಅದನ್ನ ಬೇರೆ-ಪ್ರತ್ಯೇಕ ಮಾಡ್ಬಿಡ್ತು. ನಾವು ಸೃಷ್ಟಿಯೇ ದೇವರು ಅಂದ್ಕೊಂಡಿದ್ವಿ, ಇಲ್ಲ, ಸೃಷ್ಟಿನೇ ಬೇರೆ. ದೇವರೇ ಬೇರೆ ಅಂತ It separated God from the creation. ಈ ಭೂಮಿಯನ್ನು ನಮ್ಮ ಸುಖಕ್ಕೋಸ್ಕರ ಹೇಗಾದ್ರೂ ಬಳಸ್ಕೊಳ್ಳಬಹುದು. ಅಂದ್ರೆ, ಭೂಮಿ ಅನ್ನೋದು ಬಳಕೆದಾರಿಕೆ ವಸ್ತು, ಗ್ರಾಹಕ ವಸ್ತು ಆಗೋಗ್ಬಿಡ್ತು. It became

a consumer item. ಇದರಿಂದಾಗಿ ವಿಜ್ಞಾನ ಈ ಸೃಷ್ಟಿಯ ರಹಸ್ಯ ತಿಳಿಯುವ ಪ್ರಯತ್ನದಲ್ಲಿ ಮನುಷ್ಯನನ್ನು ಸೃಷ್ಟಿಯಾಚೆ ನಿಲ್ಲಿಸಿ ಅದನ್ನು ಒಂದು ಪ್ರಯೋಗ ವಸ್ತುವಾಗಿ ಬಳಸೋಕೆ ಶುರು ಮಾಡ್ತು ಮೊದಲು ಕುತೂಹಲಕ್ಕೋಸ್ಕರ, ನಂತರ ಮನುಷ್ಯನ ಸುಖಕ್ಕೋಸ್ಕರ. ಆದರೆ ಅಧ್ಯಯನದ ವಸ್ತುವನ್ನು ವಿರೂಪಗೊಳಿಸಿ ಅದರ ಸತ್ಯವನ್ನು ತಿಳಿಯುವ ವಿರೋಧಾಭಾಸದ, ಮೂರ್ಖತನದ ಪರಿಣಾಮವಿದು.

ಇದಕ್ಕೆಲ್ಲ ಕುಮ್ಮಕ್ಕು ಈ ಹೊಸ ಧರ್ಮದಲ್ಲೇ ಇತ್ತು. ಅದೇನೆಂದರೆ, ಮನುಷ್ಯ ಹುಟ್ಟಿರೋದೇ ಸುಖಕ್ಕೋಸ್ಕರ ಅಂತ ಅದು ಹೇಳ್ತು. ಸುಖ ಪಡುವುದು ಅವನ ಹಕ್ಕು ಅಂತ. ವಿಜ್ಞಾನ ಬೆಳೆಸಿದ ಒಂದು ಧರ್ಮ ಇದು. ದಯವಿಟ್ಟು ಇದನ್ನು ಯಾವುದೋ ಒಂದು ಧರ್ಮಧ ಆವೃತ್ತಿಯ ಟೀಕೆ ಎಂದು ಭಾವಿಸಬೇಡಿ. ಏಕೆಂದರೆ, ವಿಜ್ಞಾನನ್ವೇಷಣೆಯ ಸುಖಫಲಗಳು ಒಂದಾದರ ಮೇಲೊಂದು ಬರತೊಡಗಿದಂತೆ ಪಶ್ಚಿಮ-ಪೂರ್ವದವು ಎನ್ನದೆ ಎಲ್ಲ ಧರ್ಮಗಳೂ ಈ ಹೊಸ ಧರ್ಮದ ಸ್ಥಳೀಯ ಆವೃತ್ತಿಗಳೇ ಆದವು. ಇದರಿಂದಾಗಿ ಧರ್ಮ ಜ್ಞಾನಾನ್ವೇಷಣೆಯ ಹುರುಪನ್ನೇ ಕಳೆದುಕೊಂಡು ವಿಜ್ಞಾನಕ್ಕೆ ಶರಣಾಯಿತು. ಧರ್ಮ ಹೆಚ್ಚೆಂದರೆ ಹಳೆಯ ಧರ್ಮ ಗ್ರಂಥಗಳ ಪಠಣ, ನಿಮಿತ್ತ-ಆಚರಣೆಗಳ ವ್ಯವವಹಾರವಾಗಿ ಹೋಯಿತು. ಧರ್ಮ ರಾಜಕಾರಣವಾದ್ದದರ ಕಾರಣವೂ ಇಲ್ಲಿದ್ದಂತಿದೆ. ಅದರ ವಿವರಣೆ ಇಲ್ಲಿ ಬೇಡ.

ಇದೆಲ್ಲದರ ಒಟ್ಟರ್ಥ ಏನಂದ್ರೆ, ಮನುಷ್ಯ ಅಲ್ಲೀವರ್ಗೆ ದೇಹಾತ್ಮವಾಗಿದ್ದ. He was body and spirit. ಅಲ್ಲಿಂದ ಯಾವಾಗ ಮನುಷ್ಯ ಸುಖ ಪಡೋಕೇ ಬಂದಿದ್ದಾನೆ ಅನ್ನೋ ಕಲ್ಪನೆ ಬಂತೋ, ಅಲ್ಲಿಂದ ಕೇವಲ ಅವನು ದೇಹವಾಗಿ ಹೋದ. ದೇಹ ಸುಖವೇ ಮುಖ್ಯವಾಗಿ ಹೋಯ್ತು. ಇದರಿಂದಾಗಿ ದೇಹ ಸುಖಕ್ಕೋಸ್ಕರ ಅವನು ಅನ್ವೇಷಣೆ ಶುರು ಮಾಡ್ದ. ಸಾಹಸಗಳನ್ನ ಶುರು ಮಾಡ್ದ. ವಿಜ್ಞಾನ ಬೆಳೀತು. ಅದು ತಂತ್ರಜ್ಞಾನವಾಯ್ತು. ಹೊಸ ಹೊಸ ಸುಖದ ವಸ್ತುಗಳು ಬಂದ್ವು. ಮಾರುಕಟ್ಟೆ ಸೃಷ್ಟಿಯಾಯ್ತು. ಬಂಡವಾಳಶಾಹಿ ಬಂತು. ಸುಖದ ಸ್ಪರ್ಧೆ ಶುರುವಾಯ್ತು.. ಇದರಿಂದಾಗಿ ಮನುಷ್ಯನ ಸುಖಕ್ಕೆ ಮಿತಿಯೇ ಇಲ್ಲದಂತಾಗೋಯ್ತು. ಇದು ಸಾಲದು, ಅದು ಸಾಲದು, ಮತ್ತಷ್ಟು ಬೇಕು, ಮಗದಷ್ಟು ಬೇಕು ಎಂಬ ದಾಹ ಹೆಚ್ಚಾಗ್ತಾ ಹೋಯ್ತು. ಯಾಕೇಂದ್ರೆ ನನ್ನ ಆಜನ್ಮ ಸಿದ್ಧ ಹಕ್ಕದು, ಸುಖವಾಗಿರೋದು. ಇದೇ ಇಂದಿನ ನಮ್ಮ ತಣಿಯದ ಸುಖದ ದಾಹದ ರಹಸ್ಯ.

ಇದನ್ನ ನೋಡಿಯೇ, ಕಳೆದ ಶತಮಾನದ ಆರಂಭದಲ್ಲಿ ಮಹಾತ್ಮಾ ಗಾಂಧಿಯವರು ಈ ಆಧುನಿಕ ನಾಗರೀಕತೆ ಏನಿದೆ, ಅಂದ್ರೆ, ಮನುಷ್ಯನನ್ನು ದೇಹ ಮಾತ್ರವಾಗಿಯೇ ನೋಡುವ, ನೋಡಿಕೊಳ್ಳುವ ಅಂದರೆ ಮನಸ್ಸನ್ನು ದೇಹದ ವಿಸ್ತರಣೆ ಮಾತ್ರವೆಂಬಂತೆ ಪರಿಗಣಿಸುವ ನಾಗರೀಕತೆ-ಅಂದ್ರೆ, ಸುಖ ಪ್ರಧಾನವಾದ ನಾಗರೀಕತೆ- ಇದನ್ನ ಅಧರ್ಮ-ಅನೈತಿಕ ಅಂತ ಕರೆದ್ರು. ಇದು ಮನುಷ್ಯನನ್ನ ಎಲ್ಲಿಗೆ ಕರ್‍ಕೊಂಡು ಹೋಗುತ್ತೆ ಅಂದ್ರೆ ಅವನ ಸರ್ವನಾಶಕ್ಕೆ ಕಾರಣ ಆಗುತ್ತೆ ಇದು. ಹಿಂಸೆಗೆ ಕಾರಣ

ಆಗುತ್ತೆ ಇದು. ಯಾಕೇಂದ್ರೆ, ಸುಖದ ಸ್ಪರ್ಧೆಗೆ ಬಿದ್ದಾಗ ಸ್ಪರ್ಧೆಯಲ್ಲಿ ಹಿಂಸೆ ಖಚಿತ. ಈ ಹಿಂಸೆಯಿಂದ ಮನುಷ್ಯ ಮನುಷ್ಯನ್ನ ಮಾತ್ರ ಕೊಲ್ಲೋದಲ್ಲ, ಪ್ರಕೃತಿಯ ಮೇಲೆ ಆಕ್ರಮಣ. ನದಿಯ ಮೇಲೆ, ಬೆಟ್ಟಗಳ ಮೇಲೆ ಆಕ್ರಮಣ, ಇನ್ನೊಬ್ಬರ ಮೇಲಾಕ್ರಮಣ, ದೇಶಗಳ ಮೇಲಾಕ್ರಮಣ. ವಸಾಹತುಶಾಹಿ–Colonialisation... ಒಂದು ದೇಶ ಇನ್ನೊಂದು ದೇಶವನ್ನ ಆಕ್ರಮಿಸಿಕೊಳ್ಳೋ ಒಂದು ಪ್ರವೃತ್ತಿ ಶುರುವಾಗಿದ್ದು ಅದ್ರಿಂದ್ಲೇನೇ. ಯಾಕೇಂದ್ರೆ ಅಲ್ಲಿನ ಪ್ರಾಕೃತಿಕ ಸಂಪತ್ತನ್ನ ಕಾಪಾಡಿಕೊಂಡು ಇನ್ನೊಂದು ದೇಶದ ಪ್ರಾಕೃತಿಕ ಸಂಪತ್ತನ್ನ ಲೂಟಿ ಹೊಡೆಯೋದೇ ಅದಕ್ಕೆ ಕಾರಣವಾಗಿತ್ತು. ಅದಕ್ಕೇ ಗಾಂಧಿ ಹೇಳಿದರು, Technology is an instrument of colonialism. ತಂತ್ರಜ್ಞಾನ ಅಂದ್ರೆ ಮತ್ತೇನೂ ಅಲ್ಲ, ವಸಾಹತುಶಾಹಿಯ ಉಪಕರಣ. ಅಂದ್ರೆ ಇನ್ನೊಂದು ದೇಶವನ್ನು ಆಕ್ರಮಿಸಿಕೊಳ್ಳಕ್ಕೆ ನಾವು ಬಳಸಿಕೊಳ್ಳುವ ಒಂದು ಉಪಕರಣ. ಇನ್ನೊಂದು ದೇಶದ ಮೇಲೆ, ಇನ್ನೊಬ್ಬರ ಮೇಲೆ ಪ್ರಭುತ್ವ ಮಾಡೋದಕ್ಕೆ, ಪ್ರಕೃತಿಯ ಮೇಲೆ ಪ್ರಭುತ್ವ ಮಾಡೋದಕ್ಕೆ ನಾವು ಬಳಸಿಕೊಳ್ಳುವ ಉಪಾಯ, ತಂತ್ರಜ್ಞಾನ ಅನ್ನೋದು. ಹೀಗಾಗಿ ತಂತ್ರಜ್ಞಾನವೇ ಶ್ರೇಷ್ಠ ದೇವರಾಗಿ ಬಿಡ್ತು ನಮಗೆ. ಟೆಕ್ನಾಲಜಿ ಇಂಪ್ರೂವ್ ಮಾಡೋದು ರಾಷ್ಟ್ರಧರ್ಮ ಆಗೋಯ್ತು. ಮೋದಿಯವರಾಗಲಿ ಮನಮೋಹನ್‌ಸಿಂಗ್ ಆಗಲೀ, ರಾಜಕೀಯ ಪಕ್ಷಗಳ ಎಲ್ಲರೂ–ಅವರು ಇವರು ಅಂತ ಇಲ್ಲ, ಪ್ರತಿಯೊಬ್ಬರೂ, ನೆಹರೂವಿನಿಂದ ಹಿಡಿದು ಇವತ್ತಿನವರೆಗೆ–ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿದ್ವಿ, ದೊಡ್ಡ ದೊಡ್ಡ ಫ್ಯಾಕ್ಟರಿಗಳನ್ನು ಕಟ್ಟಿದ್ವಿ, ದೊಡ್ಡ ದೊಡ್ಡ ಸಂಸ್ಥೆಗಳನ್ನು ಕಟ್ಟಿದ್ವಿ. ಯಾಕೆ? ನಾವು ಸುಖವಾಗಿ ಇರಬೇಕು, ನಾವು ವ್ಯವಸ್ಥಿತವಾಗಿ ಇರ್ಬೇಕು ಅಂತ. ಅವರು ಸದುದ್ದೇಶದಿಂದಲೇ ಮಾಡಿದ್ದಾರೆ. ಆ ಸದುದ್ದೇಶದ ಹಿಂದೆ ಈ ವೈಜ್ಞಾನಿಕ, ವೈಚಾರಿಕವಾದ ಮಾದರಿ ಇತ್ತು.

ಆದರೆ ಇದರಿಂದಾಗಿ ಇವತ್ತೇನಾಗಿದೆ ಅಣೆಕಟ್ಟುಗಳು? ನೋಡಿದೀರಲ್ಲ ಇಂದಿನ ಅಣೆಕಟ್ಟುಗಳ ಸ್ಥಿತಿಯನ್ನ? ಅಣೆಕಟ್ಟುಗಳು ನಾಶವಾಗ್ತಾ ಇವೆ. ಅದರ ಕೆಪ್ಯಾಸಿಟಿಗಳು ಕಡಿಮೆ ಆಗ್ತಾ ಇವೆ. ಅದರ ರಿಪೇರಿಗೆ ಅದನ್ನು ಕಟ್ಟಿದ ಖರ್ಚಿನ ಹತ್ತರರಷ್ಟು ಖರ್ಚು ಇವತ್ತು ಆಗ್ತಾ ಇದೆ. ಇದರಿಂದ ಹಸಿರು ಕ್ರಾಂತಿ ಆಯ್ತು ಅಂತೀವಿ. ಏನೋ ನಮ್ಮ ಫಸಲನ್ನ ವೃದ್ಧಿ ಮಾಡಿ ಹೆಚ್ಚುತ್ತಿರುವ ಬಾಯಿಗಳಿಗೆ ಆಹಾರ ಪೂರೈಸಬೇಕು ಅಂತ. ಅದಕ್ಕೆ ಹೊಸ ಹೊಸ ಕ್ರಿಮಿ–ಕೀಟ ನಾಶಕಗಳನ್ನು. ರಸಾಯನಿಕ ಗೊಬ್ಬರಗಳನ್ನು ಕಂಡುಹಿಡಿದ್ವಿ, ಟ್ರ್ಯಾಕ್ಟರ್ ಬಂತು. ಏನಾಯ್ತು? ರೈತರ ಆತ್ಮಹತ್ಯೆ ಜಾಸ್ತಿ ಆಗ್ತಾ ಹೋಯ್ತು. ಜೊತೆಗೆ ಇನ್ನೊಂದು ಭೀಕರ ಸುದ್ದಿ, ಪಂಜಾಬಿನಿಂದ ಜೈಪುರಕ್ಕೆ ಕ್ಯಾನ್ಸರ್ ರೋಗಿಗಳ ರೈಲು ಬಂಡಿ ಹೊರಡುವಂತಾಯಿತು.

ಇವತ್ತು ಫುಕುವೋಕಾರನ್ನ ಓದಬೇಕು ನೀವು. ಫುಕುವೋಕಾ ಒಂದು ದೊಡ್ಡ ಮಾತನ್ನು ಹೇಳುತ್ತಾನೆ. ಆ ಸತ್ಯದ ಆಳಕ್ಕೆ ಹೋದಷ್ಟೂ ಇನ್ನಷ್ಟು ಸತ್ಯ ಕಾಣುತ್ತೆ ನಮಗೆ. ಏನು ಅಂತಂದ್ರೆ ಇಡೀ ಜೀವ ಜಗತ್ತಿನಲ್ಲಿ ಬದುಕೋದಕ್ಕೋಸ್ಕರ, ಮನುಷ್ಯ

ಮಾತ್ರ ದುಡೀತಾ ಇರೋದು. ಯಾವತ್ತು ಅವನು 'ದುಡಿಮೆ'ಗೆ ಬಿದ್ದನೋ ಅವತ್ತೇ ಅವನು ಸರ್ವನಾಶವಾದ –ಆತ್ಮನ ಸ್ವಾತಂತ್ರ್ಯ –ಕಳೆದುಕೊಂಡ ಅಂತ. ದುಡಿಮೆ ಸಹಜವಾಗಿ ಇರಬೇಕಾಗಿದ್ದದ್ದು, ಆಟದ ತರಹ ಆನಂದಕರವಾಗಿರಬೇಕಾಗಿದ್ದಿದ್ದು. ನಮ್ಮ ಜೀವನೋಪಾಯಕ್ಕಾಗಿ ಮಾಡಬೇಕಾಗಿದ್ದದ್ದು. ನಾವು ಜೀವಿಸಲಿಕ್ಕಾಗಿ ಇರಬೇಕಾಗಿದ್ದದ್ದು.. ಅದರ ಬದಲಾಗಿ ನಾವು ದೇಹ ಸುಖದ ಹಿಂದೆ ಬಿದ್ವಿ, ಸುಖದ ಸ್ಪರ್ಧೆಗೆ ಬಿದ್ವಿ, ಮತ್ತಷ್ಟು ಸುಖ, ಮಗದಷ್ಟು ಸುಖ, ಮಿತಿ ಇಲ್ಲದ ಸುಖ. ಇದನ್ನೇ ಗಾಂಧಿ ಹೇಳಿದ್ದು ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ ಅಂತ. ದುರಾಸೆಗಳಲ್ಲ, ಆಸೆಗಳು. ಆಸೆ ಅಂದ್ರೆ, ನಿಮ್ಮ ದೇಹ ಧಾರಣೆಗೆ ನೀವು ಈ ಜಗತ್ತಿನಲ್ಲಿ ನೆರೆಹೊರೆಯ ಮಧ್ಯೆ ಬದುಕುವುದಕ್ಕೆ ಏನು ಬೇಕು ಅವು ಅಗತ್ಯಗಳು. ನಿಮ್ಮ ಶೋಕಿಗೆ, ಮಜಾಕ್ಕೆ, ನಿಮ್ಮ ಚಪಲಗಳಿಗೆ ಇಂಬು ನೀಡುವುವು ಆಸೆಗಳು. ಆದ್ದರಿಂದ ಆಸೆಗಳನ್ನು ಕಂಟ್ರೋಲ್ ಮಾಡದ ಹೊರತು, ನೀವು ಈ ಜಗತ್ತನ್ನು ಉಳಿಸಿಕೊಳ್ಳಲಾರಿರಿ ಅಂತ ಹೇಳಿದರು. ಗಾಂಧಿ 'ಹಿಂದ್ ಸ್ವರಾಜ್'ನಲ್ಲಿ ತಾತ್ಪರ್ಯದಲ್ಲಿ ಹೇಳಿರೋದು ಇದನ್ನೇ.

ಇನ್ನೊಂದು ಸತ್ಯ ಅವರ ಈ ಮಾತಿನ ಹಿಂದೆ ಇತ್ತು. ಅದು ತುಂಬಾ ಮೂಲಭೂತವಾದ, ಕಣ್ಣಿಗೆ ಕಾಣುವ ಸತ್ಯ. ಅದು ಏನೂಂತಂದ್ರೆ, ಭೂಮಿ is a finite thing. ಭೂಮಿ ಅನ್ನೋದಕ್ಕೆ ಒಂದು ಮಿತಿ ಇದೆ. ಅದಕ್ಕೆ ಸುತ್ತಳತೆ ಇದೆ. ಅದಕ್ಕೊಂದು ಅಗಲ ಇದೆ. ಎತ್ತರ ಇದೆ. ಆದ್ದರಿಂದ ಆ ಭೂಮಿ ಮೇಲಿರುವ ನಮಗೂ ಕೂಡ ಒಂದು ಮಿತಿ ಇರಬೇಕು. ಗಾಂಧಿ ಹೇಳಿದ್ದು ಅದನ್ನೇನೆ. ಸದಾ ಏರುತ್ತಾ ಹೋಗುವ ಜೀವನಮಟ್ಟಕ್ಕೆ ಬದಲಾಗಿ ಮಿತಿಗಳುಳ್ಳ ಬದುಕು ನಡೆಸಬೇಕು. ಕೆಲವು ಮಿತಿಗಳನ್ನು ಹಾಕ್ಕೋಬೇಕು ನಾವು. ಸಂಯಮ ಇಟ್ಟುಕೊಳ್ಳಬೇಕು. ಇದು ವಿಜ್ಞಾನ ನಿಜವಾಗಿ ಧರ್ಮವಾಗುವ ಪರಿ. ಧರ್ಮ ರಾಜಕಾರಣವಾಗುವ ಪರಿ. ಅಥವಾ ಅರಿವಿನ ಅಖಂಡತೆ ಕಾಣಿಸಿಕೊಳ್ಳುವ ಪರಿ. ಆದರೆ ಆಧುನಿಕ ವಿಜ್ಞಾನದ ರುಚಿಗೆ ಬಿದ್ದಿರುವ ನಾವು ಇದನ್ನೆಲ್ಲ ವಿಜ್ಞಾನ ಅಂತ ಕರೆಯಲ್ಲ. ಧರ್ಮ ಅಂತ ಕರೆದುಬಿಡ್ತೇವಿ. ನಮ್ಮ ವೇದೋಪನಿಷತ್ತುಗಳು–ನಾನು ಹಿಂದೂ ಧರ್ಮದ ಬಗ್ಗೆ ಹೇಳ್ತಾ ಇಲ್ಲ. ಬೇರೆ ಧರ್ಮಗಳಲ್ಲೂ ಈ ತರದ ಗ್ರಂಥಗಳಿವೆ–ಶ್ರೇಯ ಮತ್ತು ಪ್ರೇಯ ಅನ್ನುವ ಕಲ್ಪನೆಗಳನ್ನು ಕೊಟ್ಟು ನಮಗೆ. ಶ್ರೇಯ ಅಂತಂದ್ರೆ ನಿನ್ನ ಒಳಲೋಕದ –ಆತ್ಮದ– ಶ್ರೇಯಸ್ಸು ಅಥವಾ ನಿನ್ನ ಚೈತನ್ಯವನ್ನು ಹಿಗ್ಗಿಸಿಕೊಂಡು ಪಡುವ ಆನಂದ. ಅದು ಜಗತ್ತನ್ನು ನೋಡುವ ಕ್ರಮಕ್ಕೆ ಸಂಬಂಧಿಸಿದ್ದು. ಇನ್ನು ಪ್ರೇಯಸ್ಸು ಅಂತ ಅಂದ್ರೆ ನಿನ್ನ ಲೌಕಿಕ ಯಶಸ್ಸು. ನೀನು ಏನು, ಎಷ್ಟು ಸಂಪಾದನೆ ಮಾಡ್ದೆ, ಎಷ್ಟು ಸುಖಪಟ್ಟೆ, ಇದು. ಮನುಷ್ಯ ಈ ಶ್ರೇಯಸ್ಸು ಮತ್ತು ಪ್ರೇಯಸ್ಸುಗಳ ನಡುವೆ ಸಮತೋಲನ ಸಾಧಿಸಿಕೊಂಡು ಹೋಗಬೇಕು ಅಂತ ಹೇಳುತ್ತೆ ಉಪನಿಷತ್ತು. ಅದನ್ನ ನಾವು ಮರೆತುಬಿಟ್ವಿ. ಇದು ವೈಜ್ಞಾನಿಕ ನಾಗರಿಕತೆ ಮಾಡಿರ್ತಕ್ಕಂಥ ದೊಡ್ಡ ಅನಾಹುತ.

ಆದರಿಂದಾಗಿ ನಾವು ವಿಜ್ಞಾನವೇ ಶ್ರೇಷ್ಠ ಅಂತ ಅಂದುಕೊಂಡ್ಬೋಗಿ, ವೈಜ್ಞಾನಿಕ ನಾಗರಿಕತೆ ಹಿಂದೆ ಬಿದ್ದು ನಾವು, ಈ ಮಿತಿಗಳಿಲ್ಲದ ಸದಾ ಏರುತ್ತಾ ಹೋಗುವ ಜೀವನಮಟ್ಟವೇ ಬದುಕಿನ ಶ್ರೇಷ್ಠಗುಣ ಅಂತ ತಿಳ್ಕೊಂಡು ಇರೋದ್ರಿಂದ ಏನಾಯ್ತು ಅಂದ್ರೆ, ಇಂಥವೆಲ್ಲ ಆಗ್ತಾ ಇವೆ. ನಮ್ಮ ಪರಂಪರೆಯಲ್ಲಿ ಮರಗಳನ್ನ, ಗಿಡಗಳನ್ನ ಭೂಮಿಯನ್ನ ಆಕಾಶವನ್ನ ಪೂಜೆ ಮಾಡ್ತಕ್ಕಂಥ ಒಂದು ಪರಿಪಾಠ ಇತ್ತು. ಅದನ್ನು ನಾವು ಮೌಢ್ಯ ಅಂತ ಕರೆದ್ವಿ. ಅದರ ಫಲವನ್ನು ನಾವು ಇವತ್ತು ವಿಜ್ಞಾನದ ಹೆಸರಿನಲ್ಲಿ ಮಾಡ್ತಕ್ಕಂಥ ಅನಾಹುತಗಳನ್ನ ನೋಡ್ತಾ ಇದೀವಿ. ಈಗ ಇನ್ನೊಂದು ವಾದ ಶುರುವಾಗಿದೆ. ಏನೂಂತಂದ್ರೆ, ಇಲ್ಲ ಇವನ್ನೆಲ್ಲ ಸರಿ ಮಾಡ್ಕೋಬಹುದು, ಸ್ವಲ್ಪ ಕಡಿಮೆ ಮಾಡ್ಕೋ ಬೇಕು ಅಷ್ಟೇ ಅಂತ. ಹಾಗಾದ್ರೆ ಎಷ್ಟು ಕಡಿಮೆ ಮಾಡಿಕೊಳ್ಳಬೇಕು? ಇದು ತರ್ಕ. ಇದು. ನಮ್ಮನ್ನು ಏನೂ ಮಾಡದ ಹಾಗೆ ಬಂಧಿಸುವ ತರ್ಕದ ಸರಪಳಿ. ಒಂದು ಸಾರಿ ಚೈನ್ ಶುರುವಾಯಿತು ಅಂತಂದ್ರೆ ನಿಲ್ಸೋಕೆ ಸಾಧ್ಯನೇ ಇಲ್ಲ. Unless you make up your mind to change the mode and direction of your life. ನಮ್ಮ ಜೀವನ ದೃಷ್ಟಿ ಬದಲಾಗದ ಹೊರತು ಜೀವನ ಶೈಲಿ ಬದಲಾವಣೆ ಆಗುವುದಿಲ್ಲ. ನಮ್ಮ ಭಾರತೀಯ ಅಥವಾ ಪೌರ್ವಾತ್ಯ, ಬೌದ್ಧ ಇರಬಹುದು, ಜೈನ ಇರಬಹುದು, ಟಿಬೇಟಿಯನ್ ಇರಬಹುದು ಅಥವಾ ಚೈನಾದ ತಾವೋ ಧರ್ಮ ಇರಬಹುದು. ಈ ಧರ್ಮಗಳ ಬೇರೆ ಬೇರೆ ರೂಪಗಳೇ ನಮ್ಮ ಏಷ್ಯಾ ಖಂಡದಲ್ಲಿ ಇರತಕ್ಕಂಥಾದ್ದು. ಅಥವಾ ಗಾಂಧಿ 'ಹಿಂದ್ ಸ್ವರಾಜ್'ನಲ್ಲಿ ಹೇಳೋಹಾಗೆ ಯಂತ್ರ ನಾಗರೀಕತೆ ಬರುವವರೆಗೆ ಪಶ್ಚಿಮದಲ್ಲೂ ಇಂತಹುದೇ ಧರ್ಮ, ಜೀವನದೃಷ್ಟಿ ಇದ್ದದ್ದು. ಇವು ಏನ್ ಮಾಡ್ತಾ ಇದ್ವು ಅಂದ್ರೆ, ಮನುಷ್ಯನ ಈ ಜನ್ಮ ಎತ್ತಿ ಬರ್ತಿವಲ್ಲ, ಮಾನವ ಜನ್ಮ ದೊಡ್ಡದು ಎಂದು ಬಿಡ್ತೀವಿ. ಯಾಕೆ ದೊಡ್ಡದು ಅಂತ ಅಂದ್ರೆ, reflective thinking f aculty –ಒಳಮುಖ ಚಿಂತನೆಯ–ನಮ್ಮನ್ನ ನಾವೇ ಪರಿಶೀಲಿಸಿಕೊಳ್ಳುವ ಶಕ್ತಿ ನಮಗೆ ಇದೆ, ಅದನ್ಯಾಕೆ ಬಳಸಿಕೊಳ್ಳಬೇಕು ಅಂತ ಹೇಳ್ತಾ ಇತ್ತು. ಮೊದಲು ನಿನ್ನನ್ನು ನೀನು ಅರ್ಥ ಮಾಡ್ಕೊ. ಯಾರು ನೀನು? ಮನುಷ್ಯ ಅಂದರೆ ಯಾರು? ಇದನ್ನ ತಿಳಿ. ಅದು ತಿಳಿದರೆ ಎಲ್ಲ ತಿಳಿಯುತ್ತೆ. ನಮ್ಮ ಅಲ್ಲಮ ಹೇಳಿದ್ದಾನಲ್ಲ. 'ತನ್ನ ತಾನರಿತರೆ ಅದೇ ಪ್ರಳಯ!!' ಅಂತ ಇವೊತ್ತು ಮನುಷ್ಯನಲ್ಲಿ ಈ ಅರಿವಿನ ಪ್ರಳಯ ಆಗಬೇಕಿದೆ. ನೈಸರ್ಗಿಕ ಪ್ರಳಯವನ್ನು ತಪ್ಪಿಸಬೇಕಾದರೆ.

ಮಿತಿಗಳಲ್ಲೇ ಪರಿಪೂರ್ಣತೆ ಮತ್ತು ಸೌಂದರ್ಯ ಸಾಧನೆ ಇಂದಿನ ಅಗತ್ಯ

ಮೊದಲು ನಿನ್ನನ್ನು ನೀನು ಅರ್ಥ ಮಾಡಿಕೋ. ಯಾರು ನೀನು? ಮನುಷ್ಯ ಅಂದರೆ ಏನು? ಎಲ್ಲಿದ್ದೆ ನೀನು? ಎಲ್ಲಿಂದ ಬಂದೆ ಇಲ್ಲಿಗೆ ನೀನು? ಎಲ್ಲಿಗೆ ಹೋಗುವೆ? ನಿನಗೆ ಈ ಮನುಷ್ಯ ಶಕ್ತಿ ಬಂದದ್ದು ಎಲ್ಲಿಂದ, ಯಾರಿಂದ, ಹೇಗೆ? ಯಾರು ನಿನಗೆ ಈ ಶಕ್ತಿ ಕೊಟ್ಟವರು? ಏನಾಗಿ ಬೆಳೀತೀಯ ನೀನು. ಏಕೆ? ಇದು ನಮ್ಮ ಮುಖ್ಯ ಪ್ರಶ್ನೆಗಳಗಬೇಕು.

ಸಾಮಾನ್ಯವಾಗಿ ಹೇಳಿದಂತೆ ನಮ್ಮ ತತ್ತ್ವ ಪರಂಪರೆ ಈ ಪ್ರಶ್ನೆಗಳ ಮೇಲೇ ನಿಂತಿದೆ. ಯಾರು ಬೇಕಾದರೂ ನಾವು ವೇದ ವೇದ ಉಪನಿಷತ್ತು ಪುರಾಣಗಳನ್ನು ತೆಗೆದುಕೊಳ್ಳಿ. ಒಂದು ಮಾತು ಕೇಳುತ್ತದೆ 'ಇದು ಏನು?' ಎಂದು ಕೇಳುವ ಮನಸ್ಸು, ಕೇಳುತ್ತಿರುವವನಿಗೆ ಅದು ಯಾವುದು ಮತ್ತು ಏನು ಎಂದರೆ ಏನೆಂದು ಸ್ಪಷ್ಟತೆ ಇಲ್ಲದಿದ್ದರೆ ಅದು ಏನೆಂದು ಸ್ಪಷ್ಟವಾಗುವುದಿಲ್ಲ ಎಂದು. ಪ್ರಶ್ನೆ ಕೇಳುವುದು ಬದುಕಿನ ಮೂಲ ತಿಳಿವಳಿಕೆ ಇದು. ಇದರ ಜೊತೆ ಈ ತಿಳಿವಳಿಕೆ ಇಲ್ಲದ ನಾವು ಶಾಲೆಯಲ್ಲಿ ಕಲಿತದ್ದನ್ನೆಲ್ಲ ಮತ್ತೆ ಹೊರಗೆ ಹಾಕಿ ಎಸೆಯುತ್ತಿದ್ದೇವೆ. ಇದು ಇಂದಿನ ವಿಪರ್ಯಾಸದ ಸ್ಥಿತಿ.

ನಾವು ಮಾಡಬೇಕು ನಿಜ. ಬದುಕುವುದಕ್ಕೆ, ಆದರೆ ಅದು ಈ ಪ್ರಶ್ನೆಗಳೊಂದಿಗೆ ನಡೆಯಬೇಕು. ಆಗ ನಮ್ಮ ಬದುಕು ಸಾರ್ಥಕ ಅನ್ನಿಸುತ್ತದೆ. ಕೃಷಿ, ನೇಯುವುದು, ನಾವೆಲ್ಲರು ನಿರ್ಮಿಸುವ ಅನ್ನವಾಗಿ ಗೊತ್ತು. ಆದರೆ ಅದನ್ನು ಬಿಟ್ಟು ನಾವು ಹುಟ್ಟುವುದೇ ಇರುತ್ತಿದ್ದೆವು. ಇಲ್ಲಿ ನಡೆಯುವ ಎಂತೆಂಥ ಬದುಕಿಗಿಂತ ನಾಳೆ ಹೆಚ್ಚು ನಡೆಯಬೇಕು. ಬದುಕಿಗಿಂತ ಹೆಚ್ಚಾಗಿ ಬದುಕಬೇಕು. ಇದೇ ತಂತ್ರಜ್ಞಾನ ಜಾಗತಿಕ ಆಧುನಿಕ ಬದುಕಿನ ತತ್ತ್ವ ಆಗಬೇಕು. ಒಳಗಿನ ಬದುಕು ಒಳಗಿನ ಮನಗಳು, ಒಳಗಿನ ಮತ್ತು ಹೊಸ ಹೊಸ ಸಾಧನ ಸಲಕರಣೆಗಳಿಂದ ಸಜ್ಜಾದ ಬದುಕು. ಇದು ನಮ್ಮನ್ನು ನಮ್ಮಲ್ಲೇ ಹುದುಗಿಸುವ ಬದುಕು. ಸಾಹಸಕ್ಕೆ ಕೆಲಸದ ಇದು ಎಲ್ಲರಿಗೂ ಸಿಗಬೇಕು ಅಂತೀರಿ. ಅದಕ್ಕೆ ಬೇಕಾದ ಸಿದ್ಧಾಂತಗಳನ್ನೆಲ್ಲ ಕಲಿತು ಸಿದ್ಧಮಾಡಿಕೊಂಡು ಬಿಟ್ಟಿದ್ದೀರಿ. ಆದರೆ ಇದು ಸಾಧ್ಯವಾ ಅಂತ ಈ ಬದುಕಿನ ಮೇಲೆ ಎಂದಾದರೂ ಯೋಚನೆ ಮಾಡಿದ್ದೀರಾ? ಅದಕ್ಕೇ ಈಗ ಹೊರಗಿನಲ್ಲಿ ಅಥವಾ ಕೇರಳದಲ್ಲಿ ಅನಾಹುತಗಳು ಆಯ್ತು ಅಥವಾ ಉತ್ತರಖಂಡದಲ್ಲಿ ಆಯ್ತು ಅಂತ ನಾವೇನಾದರೂ ನಮ್ಮ ಜೀವನ ಕ್ರಮಗಳಲ್ಲಿ ಬದಲಾವಣೆ ಮಾಡಿಕೊಂಡಿದ್ದೇವಾ? ಅನಗತ್ಯ ವಾಹನಗಳನ್ನು ನಿಲ್ಲಿಸಿದ್ದೇವಾ? ಜಾಗತಿಕ ಹೋಗುವುದನ್ನು ನಿಲ್ಲಿಸಿದ್ದೇವಾ? ಏಸಿ ಕಂಡೀಷನ್‌ಗಳನ್ನು ಹಾಕುವುದನ್ನು ನಿಲ್ಲಿಸಿದ್ದೇವಾ? ದೊಡ್ಡ ದೊಡ್ಡ ಕಾರುಗಳ ತಯಾರಿಕೆಗಳನ್ನು ನಿಲ್ಲಿಸಿದ್ದೇವಾ? ಬಲಿಷ್ಠವಾಗಬೇಕು ನಾವು. ಅದೇ ಮುಖ್ಯ ತತ್ತ್ವ ಇಂದು. ಬಲಿಷ್ಠತೆ ಇದೆಯಲ್ಲ ಇದು ಗಂಡು ಗುಣ. ಅದು ಯಾವಾಗಲೂ ಮೇಲಿನ ಮನುಷ್ಯನ ದೃಷ್ಟಿಯಿಂದ ಕಾಣುವ ಚಿತ್ರದ ಮಿಥ್ಯೆ ನಮಗೆ ಕೊಟ್ಟಿರುವಂಥದ್ದು. ಇದರಿಂದ ನಮ್ಮ ಹೆಣ್ಣು ಗುಣವನ್ನು ನಾವು ಮರೆತುಬಿಟ್ಟಿದ್ದೇವೆ. ಎಲ್ಲವನ್ನೂ ಹಾರತವ್ವುಲ್ಲದ ಹೆಂಗಸಿನ ಗುಣವದು. ಸಮೃದ್ಧಿಗಿರುವ ಮಾರ್ದವತೆ, ಅಂತಃಕರಣ, ದಯೆ, ಕರುಣಾ ಗುಣಗಳು ಅವು. ಅವುಗಳ ಹೆಸರೇ ಇಂದು ಅಳಿಸಿಹೋಗಿದೆ.

ಧರ್ಮ ಅಂದರೆ ಮತ್ತೇನಲ್ಲ ಕರುಣಾ ಅಂತ. ಧರ್ಮ ಅಂದ್ರೆ, ವೇದ ಪುರಾಣವಲ್ಲ. ಅಥವಾ ಕುರಾನ್ ಬೈಬಲ್ ಇವೆಲ್ಲ ಅಲ್ಲ. ಅವುಗಳ ಸಾರಾಂಶವೂ ಅಲ್ಲ. ಅವೆಲ್ಲ ಧರ್ಮದ ಹೊರಗಿನ ಆವರಣ. ಧರ್ಮ ಅಂದ್ರೆ ಮೂಲಭೂತ ಕರುಣಾ. ಕರುಣಾ ಅಂದ್ರೆ ಕರುಣೆ ಅಂತ ಅಲ್ಲ. ಕರುಣೆ ಅಂದ್ರೆ ಬೇರೆಯವರನ್ನು ಕೆಳಗಿಟ್ಟು ನೋಡುವುದು. ಆದರೆ

ಅನ್ಯೋನ್ಯ ಮರುಕ ಅಲ್ಲ. ಕರುಣಾ ಅಂದರೆ ನೆರೆಹೊರೆಯವರೊಂದಿಗೆ ಬದುಕುವ ಕ್ರಮ ಅದು. ಕರುಣಾ ಅಂದರೆ ಪ್ರತಿಯೊಂದು ವಸ್ತುವೂ ಇನ್ನೊಂದರ ಅವಲಂಬನದಲ್ಲಿದೆ. ಅವು ಬೇರೆ ಬೇರೆ ಅಲ್ಲ. ಪ್ರತ್ಯೇಕ ಅಲ್ಲ. ಪ್ರತಿಯೊಂದು ವಸ್ತುವೂ ಪ್ರತಿಯೊಂದು ಪ್ರಾಣಿ ಪಕ್ಷಿಯೂ ಪ್ರತಿಯೊಂದು ಜೀವವೂ ಪ್ರತಿಯೊಂದು ಪ್ರಾಕೃತಿಕ ಅಂಶವೂ, ಆಕಾಶ ಇರಬಹುದು, ಗಾಳಿ ಇರಬಹುದು, ನೀರು ಇರಬಹುದು, ಬಂಡೆ ಇರಬಹುದು, ಎಲ್ಲವೂ ಒಂದಕ್ಕೊಂದು ಸಂಬಂಧಿಸಿವೆ. ಇದೊಂದು ದೊಡ್ಡ ಅಖಂಡ ಜಾಲ. ಎಲ್ಲೋ ಒಂದು ಕಡೆ ಇದರಲ್ಲಿ ಸಣ್ಣ ರಂಧ್ರ ಆದರೂ, ಅದು ಹರಿದುಹೋದರೂ ಒಟ್ಟು ಜಾಲಕ್ಕೆ ಧಕ್ಕೆಯಾಗಿ ನನಗೆ ತೊಂದರೆಯಾಗ್ತದೆ ಅದರಿಂದ ಅನ್ನುವ ಅರಿವು ಮತ್ತು ಅದರಂತೆ ಬದುಕುವ ದಾರಿ. 'ಮಾಯಾಲೋಕ' ಅಂತ ಒಂದು ಕಾದಂಬರಿ ಇದೆ, ಪೂರ್ಣಚಂದ್ರ ತೇಜಸ್ವಿ ಅವರ ಕೊನೆಯ ಕಾದಂಬರಿ. ಇದು ಅವರ ಪರಿಸರ ಕಥೆಗಳ ಕಾದಂಬರಿ ರೂಪ ಅನ್ನಬಹುದು. ಇದರಲ್ಲಿ ಒಂದು ಘಟನೆ ಆಗುತ್ತದೆ. ನಾಗೇಶ್ ಹೆಗಡೆಯವರು ಹೇಳಿದ್ರಲ್ಲ, ಮಾಟ ಮಂತ್ರ ಈಗಲೂ ಇದೆ, ವಿಧಾನಸೌಧದಲ್ಲಿ ಒಂದು ಸ್ಪೆಲ್ ಹಾಕಿದ್ರೆ ಎಲ್ಲೆಲ್ಲೋ ಡಮಾರ್ ಅನ್ನುತ್ತೆ ಅಂತ ಹಂಗೆ. ಅದರಲ್ಲಿ ಒಂದು ಸಣ್ಣ ಊರದು. ಆ ಊರಲ್ಲಿ ಒಂದು ಸಣ್ಣ ಕೆರೆ ಇರುತ್ತೆ. ಆ ಸಣ್ಣ ಕೆರೆಯಲ್ಲಿ ಹುಂಡು ಕೋಳಿಗಳಿವೆ. ಹುಂಡು ಕೋಳಿಗಳು ತೇಲಿಕೊಂಡು, ಓಡಾಡಿಕೊಂಡು ಇವೆ. ಬೇರೆ ಊರಿನಿಂದ ಒಬ್ಬ ಅಪ್ಪಣ್ಣಪ್ಪ ಅನ್ನೋನು ಬರ್ತಾನೆ ಅಲ್ಲಿಗೆ. ಊರಿಗೆ ನೆಂಟ ಅವನು. ಒಂದು, ಒಂದು ಹುಂಡು ಕೋಳಿ ಶಿಕಾರಿ ಮಾಡ್ತಾನೆ. ಅವನು ಹೇಳ್ತಾನೆ. "ಇಂಥ ಕೋಳಿ ಮಾಂಸವನ್ನು ನಾನು ತಿಂದೇ ಇಲ್ಲ. ದೇವಲೋಕದ ರುಚಿ ಇದು" ಅಂತ. ಇದರ ಪರಿಣಾಮವಾಗಿ ಊರವರೆಲ್ಲ ಈ ಕೋಳಿಗಳನ್ನು ಕೊಲ್ಲುವುದು ತಿನ್ನುವುದು, ಕೊಲ್ಲುವುದು ತಿನ್ನುವುದು ಮಾಡ್ತಾರೆ. ಅವು ಮರಿ ಹಾಕಿದ ಹಾಗೂ ತಿನ್ನುವುದು. ಅವು ಸರ್ವನಾಶ ಆಗೋ ತನಕ ತಿಂದ್ರು. ಆ ಹುಂಡು ಕೋಳಿಗಳ ಸಂತತಿ ನಾಶವಾಗುತ್ತಿದ್ದ ಹಾಗೆ, ಆ ಕೆರೆ ಬತ್ತಿ ಹೋಗುತ್ತೆ. ಆ ಕೆರೆ ಬತ್ತಿ ಹೋದ ಕೆಲವೇ ವರ್ಷಕ್ಕೆ, ಆ ಊರ ಸುತ್ತಮುತ್ತ ಧಾರಾಕಾರ ಮಳೆಯಾಗಿ ಜಲ ಪ್ರಳಯ ಆಗುತ್ತೆ.

ಇಲ್ಲಿ ತೇಜಸ್ವಿ ಏನು ಹೇಳ್ತಾ ಇದಾರೆ ಅಂತಂದ್ರೆ, ಪ್ರಕೃತಿ ಅಂದರೆ ನಮಗೆ ಕಾಣುವ ಅಥವಾ ತರ್ಕಕ್ಕೆ ಗೊತ್ತಾಗುವ ವಿದ್ಯಮಾನ ಅಲ್ಲ. ನಮಗೆ ಕಾಣುವ ವಿದ್ಯಮಾನದ ಹಿಂದೆ ಕಾಣದ ವಿದ್ಯಮಾನಗಳೂ ನಡೀತಾ ಇರುತ್ತೆ. ಉದಾಹರಣೆಗೆ, ತೇಜಸ್ವಿಯವರ ಮನೆ ಹಿಂದೆ ಒಂದು ಕೆರೆ ಇರುತ್ತೆ. ಆ ಕೆರೆಗೆ ನೀರು ಪೂರೈಸುವಂಥ ಸಣ್ಣ ತೊರೆ ಇರುತ್ತೆ. ತೇಜಸ್ವಿ ಸ್ವಲ್ಪ ಹುಡುಗು ಸಾಹಸಿ. ಹಳೆ ಕಾಲದ ಮಾತಿದೆಯಲ್ಲ, ಋಷಿ ಮೂಲ, ನದಿ ಮೂಲ ಹುಡುಕ್ಬಾರ್ದು ಅಂತ. ನೋಡೇಬಿಡೋಣ ಈ ತೊರೆ ಮೂಲ ಎಲ್ಲಿದೆ ಅಂತ ಹೋಗ್ತಾರೆ. ಮನೆಯಾಚೆ ಒಂದಷ್ಟು ದೂರ ಆಚೆ ಹೋಗುತ್ತಿದ್ದ ಹಾಗೆ, ತೊರೆ ಸಣ್ಣ ಸಣ್ಣದಾಗಿ ಹೋಗಿ ಕೊನೆಗೆ ಮಾಯವಾಗ್ಬಿಡತ್ತೆ. ಆವಾಗ ಅನ್ಸುತ್ತೆ, ಕಾಣುವ ಸತ್ಯದ ಹಿಂದೆ ಯಾವಾಗಲೂ ಮೂಲದಲ್ಲಿ ಕಾಣದಿರುವ ಸತ್ಯವೊಂದಿರುತ್ತೆ ಅಂತ.

ಗೊತ್ತಾಗಬಿಲ್ಲ ಅದು. ಹುಡುಕೋಕಾಗೋದಿಲ್ಲ ಅದನ್ನ. ತೋಡಿದ್ರೂ ತೋಡಿದಂಗುಹೂ ಹಂವ್ರ ಕಾಣಬಿಲ್ಲ. ಎಲ್ಲೋ ಅಂತರ್ಗಾಮಿಯಾಗಿ ನೀರು ಹರೀತಾ ಇರುತ್ತೆ. ಸೈನ್ಸ್ ಏನ್ ಮಾಡ್ತು ಅಂದ್ರೆ. ಎಲ್ಲವೂ ಬರಿಗಣ್ಣಿಗೆ ಅಲ್ಲದಿದ್ರೂ ತಾನು ಕಂಡು ಹಿಡಿದ ಸೂಕ್ಷ್ಮಗ್ರಾಹಿ ಸಾಧನ ಸಲಕರಣೆಗಳಿಗೆ ಕಾಣುತ್ತೆ ಅಂದುಕೊಂಡು ಬಿಡ್ತು. ಅಷ್ಟು ಇಷ್ಟು ಕಾಣಬಹುದೇನೋ. ಆದರೆ ಕಾಣುವುದು ಎಂದರೆ ಅರ್ಥವಾಗುವುದು ಎಂದಲ್ಲವಲ್ಲ? ಆದರೆ ಅದು ಎಲ್ಲವನ್ನೂ ಅರ್ಥ ಮಾಡ್ಕೋಬಹುದು. ವಿವರಿಸಬಹುದು ಅಂತ ಅಂದುಕೊಂಡು ಬಿಡ್ತು. ಅಂದ್ರೆ ತನಗೆ ಕಾಣದ್ದು. ಅರ್ಥವಾಗದ್ದು ಏನು ಇಲ್ಲ ಅನ್ನುವ ಭಾವನೆ. ಇದು ಈಗ ನಿಧಾನವಾಗಿ ಬದಲಾಗ್ತಿದೆ ಅನ್ನೋದು ಬೇರೆ ವಿಷಯ. ಆದರೆ ಅದಿನ್ನೂ ವಿಜ್ಞಾನದ ಪಾರಮ್ಯದಲ್ಲಿ ನಂಬಿಕೆ ಇಟ್ಟಿರೋ ಸಾಮಾನ್ಯ ಜನಕ್ಕೆ ತಲುಪಿಲ್ಲ. ಅವರು ಆಧುನಿಕ ವಿಜ್ಞಾನವನ್ನೂ, ಅದು ನಿರಾಕರಿಸುವ ಸಗುಣ ದೇವರನ್ನೂ ಒಟ್ಟೊಟ್ಟಿಗೇ ಇಟ್ಟು ಪೂಜಿಸುತ್ತಿದ್ದಾರೆ! ಆಧುನಿಕ ವಿಜ್ಞಾನ ನಮ್ಮಲ್ಲಿ ಸೃಷ್ಟಿಸಿರೋ ಒಂದು ದೊಡ್ಡ–ಇವೊತ್ತಿನ ಎಲ್ಲ ಅನಾಹುತಗಳಿಗೆ ಕಾರಣವಾಗಿರುವ ಒಂದು ದೊಡ್ಡ ಮಾನಸಿಕ ಒಡಕು ಇದು.

ಕಾಣುವ ಮತ್ತು ಕಾಣದಿರುವ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಗಾಂಧಿಯವರ ಒಂದು ಉಪಕಥೆ ಇದೆ. ಅವರು ಒಮ್ಮೆ ಹಡಗಲ್ಲಿ ಹೋಗ್ತಾ ಇದ್ದಾಗ. ಅವರ ಆಪ್ತನೊಬ್ಬ. ಒಂದು ಬೈನಾಕುಲರ್ ಅಂದ್ರೆ ದೂರದರ್ಶಕ ಬಳಸ್ತಾ ಇರ್ತಾನೆ. ಗಾಂಧಿ ಅವನನ್ನು 'ಇದರಲ್ಲಿ ಏನು ನೋಡ್ತಿದೀಯಾ?' ಅಂತ ಕೇಳ್ತಾರೆ. ಅದಕ್ಕಾತ 'ಇದು ದೂರದರ್ಶಕ ಅಂತ. ನಮ್ಮ ಕಣ್ಣಿಗೆ ಕಾಣಿಸ್ದೇ ಇರೋ ವಸ್ತುಗಳನ್ನೆಲ್ಲ ಕಾಣಿಸೋ ಹಾಗೆ ಮಾಡುತ್ತೆ. ಬನ್ನಿ ನೀವು ನೋಡಿ' ಅಂತ ಹೇಳ್ತಾನೆ. ಆಗ ಗಾಂಧಿ ಹೇಳ್ತಾರೆ. 'ಕಣ್ಣಿಗೆ ಕಾಣುವ ಜಗತ್ತೇ ನನಗಿನ್ನೂ ಅರ್ಥ ಆಗಿಲ್ಲ. ಕಣ್ಣಿಗೆ ಕಾಣದ್ದನ್ನು ಕಟ್ಕೊಂಡು ನನಗೆ ಏನು ಆಗಬೇಕಾಗಿದೆ!' ಅಂತ. ಸೈನ್ಸ್‌ನ ಸಮಸ್ಯೆ ಇದೇ. ಕಾಣುವ ಜಗತ್ತನ್ನೇ ಅದಿನ್ನೂ ಅರ್ಥಮಾಡ್ಕಂಡಿಲ್ಲ. ಕಾಣದ ಜಗತ್ತಿನ ಕುತೂಹಲ ಹುಟ್ಟಿಸಿ ಆ ಕುತೂಹಲದ ಜಾಲದಲ್ಲೇ ಸಿಕ್ಕಹಾಕಿಕೊಂಡು ಹೊರಬರಲಾಗದೆ ಒದ್ದಾಡ್ತಾ ಇದೆ. ಅದು ಆಸ್ತಿಕತೆ–ನಾಸ್ತಿಕತೆಗಳ ನಡುವಣ ಸಂದಿಗ್ಧತೆಯಲ್ಲಿ ಸಿಕ್ಕಹಾಕಿಕೊಂಡಿದೆ.

ಆದ್ದರಿಂದ ನಾವು ವಿಜ್ಞಾನವನ್ನು ಪರಮ ಧರ್ಮ ಅಂತ ನಂಬುವದನ್ನು ನಿಲ್ಲಿಸಬೇಕು ಮೊದಲು. ಅದಕ್ಕೆ ಬದಲಾಗಿ ನಮ್ಮ ಪುರಾತನ ವಿವೇಕ ಏನಿತ್ತೋ ಅದನ್ನು–ಬೆಳಗ್ಗೆ ಎದ್ದು ಧ್ಯಾನ ಮಾಡಿ. ಪೂಜೆ ಮಾಡಿ ಅಂತ ಹೇಳ್ತಾ ಇಲ್ಲ ನಾನು –ಇದೊಂದು ಅಖಂಡ ಜಗತ್ತು. ನನ್ನ ಜೊತೆಯಲ್ಲಿ ಇರುವವರು. ಜನ. ಪ್ರಕೃತಿ ಇವೆಲ್ಲವೂ ನಮ್ಮ ಜೊತೆ ಸಾವಯವವಾಗಿ ಇರಬೇಕಾದದ್ದು; ಅದಿಲ್ಲ್ದೇ ಇದ್ದರೆ ನಾವು ಇರೋದಿಲ್ಲ ಅನ್ನುವ ಅರಿವನ್ನು ಮನನ ಮಾಡಿಕೊಳ್ಳಬೇಕು. ಅದರ ಭಾಗವಾಗಿ ಅದಕ್ಕೆ ಪೂರಕವಾದ ಶಿಕ್ಷಣವನ್ನು ನಾವು ಆರಂಭ ಮಾಡಿಕೊಳ್ಳಬೇಕು. ಆಗ ಸಹಜವಾಗಿಯೇ ಪರಿಸರ ಅಥವಾ ಭೂಮಿ ಸಂರಕ್ಷಣೆ ಈ ಶಿಕ್ಷಣದ ದೃಷ್ಟಿಕೇಂದ್ರವಾಗಿರುತ್ತದೆ.

ಇವತ್ತು ಶಿಕ್ಷಣ ಆಧುನಿಕವಾಗಿದೆ. ಆಧುನಿಕ ಶಿಕ್ಷಣ ಅಂತ ಅಂದರೆ ಏನೊಂದ್ರೆ, ಮಕ್ಕಳನ್ನು ತಂದೆ ತಾಯಿಗಳಿಂದ ಮತ್ತು ಅವರ ಊರುಗಳಿಂದ ದೂರ ತೆಗೆದುಕೊಂಡು ಹೋಗುವ ಒಂದು ಉಪಾಯ ದಂಥ ಆಗಿದೆ. ಬೆಂಗಳೂರು ಇತ್ಯಾದಿ ಮಹಾನಗರಗಳಲ್ಲಿರುವವರಿಗೆ ಊರೇ ಇಲ್ಲದಾಗಿದೆ. ಈಗ ಜಿಲ್ಲಾ ತಾಲ್ಲೂಕು ಕೇಂದ್ರಗಳಿಗೂ ಅದೇ ಗತಿ ಆಗುತ್ತಿದೆ. ಅವಕ್ಕೆಲ್ಲ ಬಿಡಿಭಾಗಗಳೇ ಇಲ್ಲ. ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಚಹರೆಗಳೇ ಇಲ್ಲದ ಹೊಟ್ಟೆ ಮಾತ್ರ ಇರುವ ಪೆಡಂಭೂತಗಳಾಗ್ತಾ ಇವೆ. ನಾನು ಅಂದ್ರೆ ಯಾರು ನಿಜವಾಗಿ? ಒಂದು ಊರಲ್ಲಿ ಹುಟ್ಟುತ್ತೀವಲ್ಲ, ಯಾವುದೋ ಒಂದು ಹಳ್ಳಿಯಲ್ಲಿ ನಾನು ಹುಟ್ಟಿದೆ. ನಾನು ಅಂತ ಅಂದ್ರೆ ಬರೀ ನಾನಲ್ಲ. ನನ್ನ ಬಳಗ, ನನ್ನ ಊರು, ನನ್ನ ನದಿ, ನನ್ನ ಬೆಟ್ಟ, ನನ್ನ ಗುಡ್ಡ, ಇದೆಲ್ಲವೂ ಸೇರಿ ನಾನಾಗಿರ್ತಕ್ಕಂತದ್ದು. ಆಗಲೇ ನಾನು ಜೀವಂತವಾಗಿರುವುದು. ವಿದ್ಯಾಭ್ಯಾಸ ನನ್ನನ್ನ ಏನ್ ಮಾಡ್ತು? ನನ್ನನ್ನು ತೆಗೆದುಕೊಂಡು ಹೋಗಿ ಬೆಂಗಳೂರಿಗೆ ಹಾಕ್ತು. ಕೆಲಸಕ್ಕೆ ದೆಹಲಿಗೆ ತೆಗೆದುಕೊಂಡು ಹೋಗಿ ಹಾಕ್ತು. ಈ ನದಿ, ತೊರೆ, ಈ ತೋಪು, ಈ ಮೈದಾನ, ಈ ಗುಡ್ಡ, ತಂದೆ, ತಾಯಿ, ಬಂಧು, ಬಳಗ, ಸ್ನೇಹಿತರು ಎಲ್ಲ ಹೋಯ್ತು. ಅದರ ಜೊತೆನಲ್ಲಿ ನನ್ನ ಸಂವೇದನೆಯೂ ಬಸಿದುಹೋಗುವಂತಾಯ್ತು. ಹೀಗೆ ಮನುಷ್ಯನನ್ನ ಒಂದು ಯಂತ್ರವನ್ನಾಗಿ ಮಾಡ್ತಾ ಇದೆ ಈ ಆಧುನಿಕ ಶಿಕ್ಷಣ.

ಆದ್ದರಿಂದ ಮೊದಲಾಗಿ ನಾವು ಈ ವಿಜ್ಞಾನವನ್ನು ಧರ್ಮದ ಜೊತೆ -ಮತ ಅಲ್ಲ- ಜೋಡಿಸಬೇಕಾಗಿದೆ. ಅದನ್ನು ಲೋಕ ಕಾರುಣ್ಯದ ಜೊತೆ ಜೋಡಿಸಬೇಕಾಗಿದೆ. ನಾವು ದಯವೇ ಧರ್ಮದ ಮೂಲವಯ್ಯ ಅಂತ ಹೇಳಿದ್ವಿ ಹಾಡಿದ್ವಿ. ಆದ್ರೆ ದಯೆ ಅಂದ್ರೆ ಏನು? ಅದು, Actively thinking about the others. ನನ್ನ ಜೊತೆಯಲ್ಲಿ ಇರುವವನು ನೆಮ್ಮದಿಯಿಂದ ಬಾಳಬೇಕು. ಅವನು ಹಾಗೆ ಬಾಳಿದರೆ ಮಾತ್ರ ನಾನು ನೆಮ್ಮದಿಯಿಂದ ಬಾಳ್ತೀನಿ ಅನ್ನುವ ಧರ್ಮ. ಅದರಲ್ಲಿ ನನ್ನ ಊರು, ನನ್ನ ಕೇರಿ. ನನ್ನ ಕೆರೆ, ತೊರೆ, ಗುಡ್ಡ ಎಲದರ ನೆಮ್ಮದಿಯೂ ಸೇರಿರುತ್ತದೆ. ಅದಕ್ಕೋಸ್ಕರನೇ ಗಾಂಧಿಯವರು ಆಧುನಿಕ ನಾಗರಿಕತೆಯ ವಿರುದ್ಧ ತಮ್ಮ ಚಿಂತನೆಯನ್ನು ಮಂಡಿಸಿದಾಗ ಮೂಲ ಕಾಂಗ್ರೆಸ್‌ನ ಸ್ವರಾಜ್ಯದ ಕಲ್ಪನೆಯನ್ನು ಮೂಲಭೂತವಾಗಿ ಬದಲಾಯಿಸಿ ಕೊಡುವಂತಾಗಿದ್ದು. ಸ್ವರಾಜ್ಯ ಅನ್ನೋದು ಬರೀ ದೇಶಕ್ಕೆ ಸಂಬಂಧಪಟ್ಟ ಕಲ್ಪನೆ ಅಲ್ಲ. ಇಂಗ್ಲಿಷರನ್ನ ಓಡಿಸಿ ನಾವು ಆಳಿಕೊಳ್ಳೋದು ಅಲ್ಲ. ಇಂಗ್ಲಿಷರು ಬಿತ್ತಿಹೋದ ಜೀವನದೃಷ್ಟಿ ಮತ್ತು ಕ್ರಮಗಳನ್ನೂ, ಆ ಮೂಲಕ ರಾಷ್ಟ್ರದ ಕಲ್ಪನೆಯನ್ನೂ ಬದಲಿಸಿಕೊಳ್ಳಬೇಕು. ನನ್ನ ಊರು, ನನ್ನ ಕೇರಿ, ಅದರ ಹಿತವನ್ನು ನಾನು ಮೊದಲು ಗಮನಿಸಬೇಕು. ಹಾಗೆ ಗಮನಕ್ಕೀಡಾದ ಊರುಗಳ ಒಕ್ಕೂಟವೇ ರಾಷ್ಟ್ರವೆನ್ನಿಸಿಕೊಳ್ಳಬೇಕು. ಆದ್ದರಿಂದ ನನ್ನ ಕಾರ್ಯಕ್ಷೇತ್ರ ಏನಿದ್ದರೂ ನನ್ನ ಊರು, ನನ್ನ ಕೇರಿ, ನನ್ನ ಸುತ್ತ-ಮುತ್ತ. ಅವರು ಹೇಳುತ್ತಾರೆ, ಸ್ವರಾಜ್ಯ ಎಂದರೆ ಏನಂತಂದ್ರೆ, ನಿನ್ನ ಕಾಲುಗಳು ಎಷ್ಟು ದೂರ ಹೋಗಬಲ್ಲವೋ ಅಷ್ಟು ಮಾತ್ರ, ವಾಹನಗಳಲ್ಲಿ ಹೋಗುವುದು ಅಲ್ಲ. ನೀನು ಮಾಡಬೇಕಾಗಿರತಕ್ಕ ಕೆಲಸ,

ನಿನ್ನ ಕೈ ಎಷ್ಟು ಮಾಡಕ್ಕೆ ಸಾಧ್ಯವೋ ಅಷ್ಟು ಕೆಲಸ. ಸೃಷ್ಟಿ ನಿನಗೆ ಕೊಟ್ಟಿರುವುದು ಕೈ ಮತ್ತು ಕಾಲು, ಕಣ್ಣು ಕಿವಿ. ಇವನ್ನೇ ನೀನು ಬಳಸು. ನಿನ್ನ ಊರಿನ ದನ ಎಷ್ಟು ದೂರ ಹೋಗುತ್ತವೋ ಅಷ್ಟೇ ನಿನ್ನ ಊರು.

ಈ ವಿಚಾರಗಳೆಲ್ಲ ಇವತ್ತಿನ ವಿಜ್ಞಾನದ ವ್ಯಾಪ್ತಿಯ ಎದುರಿನಲ್ಲಿ ಮತ್ತು ನಮ್ಮ ಊರುಗಳು ಬದಲಾಗಿರುವ ಈ ಸಂದರ್ಭದಲ್ಲಿ ನಮಗೆ ತುಂಬಾ ಹಾಸ್ಯಾಸ್ಪದವಾಗಿ ಕಾಣುತ್ತವೆ. ಆದರೆ ದೇಶ, ರಾಷ್ಟ್ರ ಎಂಬ ಕಲ್ಪಿತ ಭಾವನೆಯಲ್ಲಿ ಸಿಲುಕಿ ನಾವು ನಮ್ಮನ್ನ, ನಮ್ಮ ಊರುಗಳನ್ನ, ನಮ್ಮ ನೆರೆಹೊರೆಯನ್ನ ಮರೆತು ಎಲ್ಲವನ್ನೂ ಅಭಿವೃದ್ಧಿ ಎಂಬ ಎಂದೂ ನಿಲ್ಲದ ಕಾಮಗಾರಿ ನಿರ್ವಹಿಸುವ ದಂಧೆಕೋರ ರಾಜಕಾಣಿಗಳಿಗೆ, ಅಧಿಕಾರಶಾಹಿಗೆ ಅವರನ್ನು ಸಾಕುವ ಕಂಟ್ರ್ಯಾಕ್ಟುದಾರಗಳಿಗೆ, ವಾಣಿಜ್ಯೋದ್ಯಮಿಗಳಿಗೆ ವಹಿಸಿಕೊಟ್ಟಿರುವುದರಿಂದಲೇ ಇಂಥ–ಕೊಡಗು, ಕೇರಳಗಳಲ್ಲಾದಂಥ ಅನಾಹುತಗಳಿಗೆ ಒಳಗಾಗ್ತಾ ಇರುವುದು.

ಸ್ವರಾಜ್ಯ ಅಂತಂದ್ರೆ ನಮ್ಮ ಪರವಾಗಿ ಇನ್ನೊಬ್ಬರು ಆಳುವುದಲ್ಲ. ಈ ಪರೋಕ್ಷ ಪ್ರಜಾಪ್ರಭುತ್ವದಲ್ಲಿ ನಾವು ಆಳಲು ಪ್ರತಿನಿಧಿಗಳನ್ನು ಕಳಿಸುತ್ತೇವೆ. ಆ ಪ್ರತಿನಿಧಿಗಳು ಯಾರು ಏನು ಅಂತ ನಮಗೆ ಹತ್ತಿರದಿಂದ ನೋಡಿ ಗೊತ್ತಿರಲ್ಲ. ಸುಮ್ನೇ ಸುದ್ದಿ, ಪ್ರಚಾರ ಕೇಳಿ ಅಥವಾ ದುಡ್ಡಿನ, ಜಾತಿಯ ಆಮಿಷಗಳಿಗೆ ಒಳಗಾಗಿ ವೋಟ್ ಹಾಕಿ ಕಳಿಸ್ಬಿಡ್ತೇವೆ ಅಷ್ಟೇ. ಅದಕ್ಕೆ ಬದಲಾಗಿ ಸ್ವತಃ ನೀವೇ ಆಳಬೇಕು. ನಿಮ್ಮ ಗ್ರಾಮವನ್ನ, ಊರನ್ನ ಅಥವಾ ನೆರೆಹೊರೆಯನ್ನ. ಅದು ಸಾಧ್ಯವಾಗುವುದು, ನಾವು ಒಂದು ಚಿಕ್ಕ ಚಿಕ್ಕ ಸಮುದಾಯಗಳಾಗಿ ಸಂಘಟಿತಗೊಂಡು ನಮ್ಮ ಪ್ರತಿನಿಧಿಯನ್ನು ನಮ್ಮ ಆಪ್ತರಲ್ಲೇ ಒಬ್ಬನನ್ನೋ, ಒಬ್ಬಳನ್ನೋ ಆಯ್ದುಕೊಳ್ಳುವ ವ್ಯವಸ್ಥೆ ಆದಾಗ. ಆಗ ಅವನು ಅಥವಾ ಅವಳು ಸಮುದಾಯದ ಇಚ್ಛೆಗೆ ವಿರುದ್ಧ ಹೋಗಲು ಸಾಧ್ಯವಾಗದಷ್ಟು ನೈತಿಕ ಒತ್ತಡ ನಿರ್ಮಾಣ ಆಗುತ್ತೆ. ರಾಷ್ಟ್ರ ಕಟ್ಟುವ ಎಲ್ಲ ಕೆಲಸ ಇಲ್ಲಿಂದ ಹೀಗೆ ಆರಂಭವಾಗಬೇಕು, ನೋಟ ನಮ್ಮೂರಿನಿಂದ ರಾಷ್ಟ್ರದೆಡೆಗೆ; ರಾಷ್ಟ್ರದೆಡೆಯಿಂದ ನಮ್ಮೂರೆಡೆಗಲ್ಲ. 'ಸ್ವರಾಜ್ಯ'ದ ಅರ್ಥ ಇದು.

ಇದಕ್ಕೆ ಒಂದು ದೊಡ್ಡ ಸಂಕಲ್ಪ ಬೇಕು. ಪ್ರಗತಿ ಅಂದರೆ ವಿವೇಕವೇ ಹೊರತು, ವಿನಾಶವಲ್ಲ ಎಂಬ ಹೊಸ ಅರಿವು ಬೇಕು. ಈ ಅರಿವು ಮೂಡಿಸುವ ಕೆಲಸ ಇಂಥ ವೇದಿಕೆಗಳಿಂದ ನಡೆಯಬೇಕು. ಇಂತಹ ಸ್ವರಾಜ್ಯದಲ್ಲಿ ಊರು ಅಥವಾ ಸಮುದಾಯ ಮುಖ್ಯವಾಗಿ ಅನ್ಯ ಆಕರ್ಷಣೆಗಳು ನಿಯಂತ್ರಿತವಾಗುತ್ತವೆ. ನಮ್ಮೂರ ಪ್ರಾಕೃತಿಕ ಸಂಪತ್ತು ಮುಖ್ಯವೆನಿಸುತ್ತದೆ. ಅವನ್ನು–ನಮ್ಮ ಬೆಟ್ಟ ಗುಡಗ್ಗಗಳನ್ನು, ನದಿಗಳನ್ನು, ಅದರ ಮರಳನ್ನು, ಗೋಮಾಳಗಳನ್ನು, ಸೊಪ್ಪು ಬೆಟ್ಟಗಳನ್ನು, ನಮ್ಮ ಪ್ರಾಣಿ ಪಕ್ಷಿಗಳನ್ನು ಕಾಪಾಡಿಕೊಂಡು ನಾವೆಷ್ಟು ನೆಮ್ಮದಿಯಿಂದ ಬದುಕಬಹುದೋ ಅಷ್ಟು ಸುಖ–ಸೌಲಭ್ಯಗಳೊಂದಿಗೆ ಬದುಕುವ ಹೊಸ ಕ್ರಮ ನಿಧಾನವಾಗಿಯಾದರೂ ಆರಂಭವಾಗಬಹುದು.

ಇಂದು ಗಾಂಧಿ ಹೇಳುವ ಕನಿಷ್ಠ ಅಗತ್ಯಗಳ ಸಂತ ಜೀವನ ಅಸಾಧ್ಯ ಎನ್ನಿಸಬಹುದು. ಆದರೆ ಅವರ ಶಿಷ್ಯ ರಾಮಮನೋಹರ ಲೋಹಿಯಾ ಹೇಳುವ ಒಂದು ಸರಳ ಸಭ್ಯ ಜೀವನಮಟ್ಟ ಎಲ್ಲರಿಗೂ ಸಮ್ಮತಾರ್ಹವೆನಿಸಬಹುದು. ಅದು ಅತಿಗಳಿಗೆ ಹೋಗಿ ಪರಿಸರವನ್ನು ಹಾಳು ಮಾಡದಂಥಹ 'ಅಭಿವೃದ್ಧಿ' ಚಟುವಟಿಕೆಗಳಿಂದ ಕೂಡಿದ ಸಂಯಮದ, ಸಾಮುದಾಯಿಕತೆಯ ಮಿತಿಗಳುಳ್ಳ ಸರಳ ಸುಂದರ ಬದುಕು. ಇದನ್ನು ಲೋಹಿಯಾ ತಮ್ಮ ಸೌಂದರ್ಯ ಮೀಮಾಂಸೆಯಲ್ಲಿ ತನ್ನ ಮಿತಿಗಳಲ್ಲೇ ಪರಿಪೂರ್ಣವಾದ ಸೌಂದರ್ಯ ಎಂದು ಕರೆಯುತ್ತಾರೆ. ಪುರಾಣದ ಶ್ರೀರಾಮ ಮತ್ತು ನಮ್ಮ ಕಾಲದ ಗಾಂಧಿ ಇದಕ್ಕೆ ಎರಡು ಪ್ರತೀಕಗಳು. ಇದು ನಮ್ಮ ಮಿತಿಗಳ ವಿವೇಕದಲ್ಲಿ ಇದ್ದರೆ ಮಾತ್ರ ಸೌಂದರ್ಯ. ಆದರೆ ನಾವು ಈ ವಿವೇಕದ ಅರಿವಿನಾಚೆ ಹೋಗಿ, ಬೇರೆಯವರು ನಮ್ಮ ಹಾಗೆ ಬದುಕೋದಕ್ಕೆ ಸಿದ್ಧರಿದ್ದಾರಾ? ಅವರನ್ನು ಕನ್ವರ್ಟ್ ಮಾಡಕ್ಕೆ ಆಗತ್ತಾ ನಾವು? ಅಂತ ಯೋಚನೆ ಮಾಡೋದಕ್ಕೆ ಶುರು ಮಾಡಿದರೆ ಮತ್ತೆ ನಾವು ಅದೇ ಅನಾಹುತಕಾರಿ ಸ್ಥಿತಿಗೆ ವಾಪಸ್ ಬರ್ತೀವಿ. ಆದ್ದರಿಂದ ಸಣ್ಣ ಸಣ್ಣ ಸಮುದಾಯಗಳಾಗಿ ನಾವು ಬಾಳುವ ಮಾದರಿ ಕಂಡುಕೊಳ್ಳದ ಹೊರತು, ಇದು ಬಹಳ ದೊಡ್ಡ ಸವಾಲೇ ಆದರೂ, ಇದೆಲ್ಲ ಆಗಿಹೋಗದ ವ್ಯವವಹಾರ ಎಂದು ಯೋಚಿಸುವ ಸಿನಿಕರಾಗದೆ, ಆ ಕಡೆ ಗುರಿ ಇಟ್ಟುಕೊಂಡು ನಾವು ಯೋಚನೆ ಮಾಡದ ಹೊರತು, ಕ್ರಮವಾಗಿ ಒಂದೊಂದೇ ಹೆಜ್ಜೆ ಇಡದ ಹೊರತು ಈ ಕೇರಳ, ಕೊಡಗು ಅಥವಾ ಚಾಮರಾಜನಗರ ಯಾವುದೂ ಉಳಿಯುವುದಿಲ್ಲ. ಸರ್ವನಾಶಕ್ಕೆ ನಿಧಾನವಾಗೋ ದಿಢೀರೆಂದೋ ಗೊತ್ತಿಲ್ಲ, ನಾವು ಸಿದ್ಧವಾಗಬೇಕಾಗ್ತದೆ. ನಮಸ್ಕಾರ.

(ಇದು ೨೦೧೮ರ ಸೆಪ್ಟಂಬರ್ ಹತ್ತರಂದು ಚಾಮರಾಜನಗರದ ದೀನಬಂಧು ಮತ್ತು ಇತರ ಸ್ಥಳೀಯ ಸಂಘ-ಸಂಸ್ಥೆಗಳ ಆಶ್ರಯದಲ್ಲಿ ಪರಿಸರ ವಿಕೋಪಗಳ ಬಗ್ಗೆ ಆಯೋಜಿಸಿದ್ದ 'ಹಸಿರು ಚಾಮರ' ಎಂಬ ಕಾರ್ಯಾಗಾರದಲ್ಲಿ ಆಡಿದ ಮಾತುಗಳ ಬರಹ ರೂಪ; 'ಹೊಸ ಮನುಷ್ಯ'ದ ೨೦೧೯ರ ಫೆಬ್ರುವರಿ-ಮಾರ್ಚ್-ಏಪ್ರಿಲ್ ಸಂಚಿಕೆಗಳಲ್ಲಿ ಪ್ರಕಟ)

(ಧ್ವನಿಯಿಂದ ಲಿಪಿಗೆ : **ರೇಖಾಂಬ ಟಿ.ಎಲ್**)

ಕೋವಿಡ್ ಎಂಬ ನಾಗರೀಕತೆಯ ರೋಗ

'ಪ್ರಜಾವಾಣಿ' ಪತ್ರಿಕೆಯು ಜುಲೈ ೧೩ರಂದು (೨.೨೧) 'ಕೋವಿಡ್ ೩ನೇ ಅಲೆಯ ತೂಗುಕತ್ತಿ' ಎಂಬ ಮುಖ್ಯ ಶೀರ್ಷಿಕೆಯಡಿ ಕೋವಿಡ್ ಪಿಡುಗಿನ ಇನ್ನೂ ಕೊನೆಗಾಣದ ಅಪಾಯದ ಬಗ್ಗೆ ಮುಖಪುಟದ ಪ್ರಧಾನ ಸುದ್ದಿ ಮಾಡಿದೆ. ಈ ಪ್ರಧಾನ ಸುದ್ದಿಯ ಮೇಲ್ಭಾಗದಲ್ಲೇ ಈ ಸುದ್ದಿಯ ಭಾಗವಾಗಿ ಭಯ ಬಿಟ್ಟು ಬೀದಿಗಿಳಿದ ಜನ ಮತ್ತು ಆರೋಗ್ಯ ಸುಧಾರಣೆ ವ್ಯವಸ್ಥೆಗಾಗಿ ರೂ. ೧, ೫೦೦ಕೋಟಿ ಕ್ರಿಯಾಯೋಜನೆ ಎಂಬ ಉಪಶೀರ್ಷಿಕೆಗಳ ಎರಡು ಸುದ್ದಿಗಳಿವೆ. ಈ ಸುದ್ದಿ ವಿನ್ಯಾಸವೇ ನಮ್ಮ ಸಮೂಹ ಮಾಧ್ಯಮಗಳೂ ಸೇರಿದಂತೆ ಇಂದಿನ 'ವ್ಯವಸ್ಥೆ' ಕೋವಿಡ್ ಮಹಾಮಾರಿಯನ್ನು ನಿಭಾಯಿಸಲು ಅಳವಡಿಸಿಕೊಂಡಿರುವ ಮಾರ್ಗದ ಪರಿಚಯ ಮಾಡಿಕೊಡುವಂತಿದೆ.

ಇತ್ತೀಚೆಗೆ ತಾನೇ ಕೋವಿಡ್‌ನ ಎರಡನೆಯ ಅಲೆಗೆ ಸಿಕ್ಕಿ ಲಕ್ಷಾಂತರ ಜನ ಸಾವನ್ನಪ್ಪಿದ್ದಾರೆ. ಇದರಲ್ಲಿ ಹೆಚ್ಚೂಕಡಿಮೆ ಪ್ರತಿ ಕುಟುಂಬದ ಹತ್ತಿರದ ಅಥವಾ ದೂರದ ಒಬ್ಬಿಬ್ಬರು ಬಂಧುಗಳಾದರೂ ಸೇರಿದ್ದಾರೆ. ಹಾಗೇ ಈ ಸಾವು ಇವರಲ್ಲಿ ಕೆಲವರ ಅಂತಿಮ ಮುಖದರ್ಶನವಾಗಲೀ, ಸಮರ್ಪಕ ಸಂಸ್ಕಾರವಾಗಲೀ ಸಾಧ್ಯವಾಗದ ಪರಿಸ್ಥಿತಿಯನ್ನೂ ಜನ ಕಂಡಿದ್ದಾರೆ. ಉತ್ತರ ಭಾರತದಲ್ಲಂತೂ ಸಾವಿನ ವೇಗ ಮತ್ತು ಭಯಂಕರತೆ ಹೇಗಿತ್ತೆಂದರೆ ಸಂಬಂಧಿಕರಿಗೆ ಸೂಕ್ತ ಸಂಸ್ಕಾರ ನೆರವೇರಿಸಲು ಸ್ಮಶಾನದಲ್ಲಿ ಜಾಗ ಅಥವಾ ಅವಕಾಶ ಸಿಗಲಿಲ್ಲವೆಂತಲೋ, ಹಣಕಾಸಿನ ಕೊರತೆಯಿಂದಲೋ ಅವರು ಸತ್ತ ತಮ್ಮ ಆಪ್ತರ ಶವಗಳನ್ನು ನದಿಗಳಿಗೆ ಎಸೆದುಹೋದ ಅಥವಾ ನದಿಗಳ ಮರಳಿನಲ್ಲಿ ಹುಗಿದ ಸುದ್ದಿಯನ್ನೂ ನೋಡಿದ್ದೇವೆ. ಸತ್ತವರ ಮೇಲೆ ಮತ್ತು ಬದುಕುಳಿದವರ ಮೇಲೆ ಅವರ ಬಂಧುಗಳು ಲಕ್ಷಾಂತರ ರೂಪಾಯಿಗಳನ್ನು ವೈದ್ಯಕೀಯ ವೆಚ್ಚವಾಗಿ ಖರ್ಚುಮಾಡಿದ್ದಾರೆ. ಇದರಿಂದ ಲಕ್ಷಾಂತರ ರೂಪಾಯಿಗಳ ವೈದ್ಯಕೀಯ ವಿಮೆ ಮಾಡಿದವರೂ ಸೇರಿದಂತೆ ಸಾವಿರಾರು ಕುಟುಂಬಗಳು ದರಿದ್ರಾವಸ್ಥೆ ತಲುಪಿವೆ. ಮೊದಲೇ ಇದ್ದ ಮತ್ತು ಆನಂತರ ಸಾಕಷ್ಟು ವ್ಯಾಪಕಗೊಳಿಸಿದ ಅತ್ಯಾಧುನಿಕ ರೋಗಿ ಉಪಚಾರದ, ಔಷಧ, ವೆಂಟಿಲೇಟರ್ ಮತ್ತು ಆಮ್ಲಜನಕ ಪೂರೈಕೆಯ ಸುಧಾರಣೆಗಳ

ಹಾಗೂ ಕೋಟ್ಯಾಂತರ ರೂಪಾಯಿಗಳ ಮೌಲ್ಯದ ವೈದ್ಯಕೀಯ ವಿಮೆಗಳ ವ್ಯವಸ್ಥೆಯನ್ನು ಅಣಕಿಸುವಂತೆ ಕೋವಿಡ್ ಮಹಾಮಾರಿ ನಮ್ಮ ಕಣ್ಮುಂದೆಯೇ ಮಹಾದುರಂತವನ್ನೆಸಗಿ ಹೋಗಿದೆ. ರೋಗಕ್ಕೆ ಸಂಪೂರ್ಣವಲ್ಲದಿದ್ದರೂ ಒಂದು ಮಿತಿಯವರೆಗೆ ಮಾತ್ರ ರಕ್ಷಣೆ ಕೊಡುವುದೆಂದು ಹೇಳಲಾಗುವ ಎರಡು ಸರದಿಗಳ ಲಸಿಕೆಗಳ ಪೈಕಿ ಮೊದಲ ಸರದಿಯೇ ನಮ್ಮ ಜನಸಮುದಾಯದ ಶೇ.೧೦ರಷ್ಟು ಜನಕ್ಕೆ ಸಾಧ್ಯವಾಗಿಲ್ಲ.

ಇಂತಹ ಅನಿಶ್ಚಯದ ಮತ್ತು ಆತಂಕಗಳ ಪರಿಸ್ಥಿತಿಯಲ್ಲೂ ಜನ, ರೋಗದ ಸೋಂಕಿನ ವೇಗ ಸ್ವಲ್ಪ ತಹಬಂದಿಗೆ ಬಂದಿದೆ ಎಂಬ ವರದಿ ಪ್ರಕಟವಾಗಿ ಸರ್ಕಾರ ಜನಜೀವನದ ಮೇಲಿನ ತನ್ನ ಕೆಲ ನಿರ್ಬಂಧಗಳನ್ನು ಸಡಿಲಗೊಳಿಸುತ್ತಿದ್ದಂತೆ ಜನ ತಡೆಯಿಂದ ಮುಕ್ತಗೊಳಿಸಲ್ಪಟ್ಟ ಪ್ರವಾಹದೋಪಾದಿಯಲ್ಲಿ ಕಂಡ ಕಂಡ ಕಡೆ ಸಂದಣಿ ನಿರ್ಮಿಸುತ್ತಿದ್ದಾರೆ ಎಂದರೆ ಏನು ಹೇಳುವುದು? ಇದಕ್ಕೇನು ಕಾರಣ? ಇದನ್ನು ಯೋಚಿಸದೆ ಜನಸಂದಣಿಯ ಬಗ್ಗೆ ಆತಂಕ ಸೃಷ್ಟಿಸಿದರೆ ಪ್ರಯೋಜನವೇನು? ಜನವೇನು ಸೋಂಕಿನ ಮತ್ತು ಸಧ್ಯ ಸಾವಿನ ಭಯದಿಂದ ತಾವೀಗ ಮುಕ್ತರಾಗಿದ್ದೇರೆಂದು ಭಾವಿಸಿಬಿಟ್ಟಿದ್ದಾರೆಯೇ? ಪತ್ರಿಕೆಯ ಪ್ರಧಾನ ಸುದ್ದಿಯೇ ತಿಳಿಸುತ್ತಿರುವಂತೆ ಇನ್ನೊಂದೆರಡು ತಿಂಗಳಲ್ಲಿ ರೋಗದ ಮೂರನೆಯ ಅಲೆ ಅಪ್ಪಳಿಸುವ ಮುನ್ಸೂಚನೆಯನ್ನು ಹಲವು ವಿಜ್ಞಾನಿಗಳು ಮತ್ತು ಸರ್ಕಾರಗಳೂ ನೀಡಿವೆ. ಆದರೂ ಜನರ ಈ ವರ್ತನೆಗೆ ಕಾರಣವೇನು?

ಇದಕ್ಕೆ ಮುಖ್ಯ ಕಾರಣ ಜನರಿಗೆ ಕೋವಿಡ್‌ನ ಮೂಲ ಕಾರಣವಾವುದು ಎಂದು ಸ್ಪಷ್ಟವಾಗಿ ವಿವರಿಸದಿರುವುದು. ಈ ರೋಗವನ್ನು ಈವರೆಗೆ, ಬಂದು ಹೋಗುವ, ಕೆಲವು ತಾತ್ಪೂರ್ತಿಕ ಭೌತಿಕ ರಕ್ಷಣಾ ಕ್ರಮಗಳ ಮತ್ತು ಔಷಧೋಪಚಾರಗಳ ಮೂಲಕ ನಿವಾರಿಸಿಕೊಳ್ಳಬಹುದಾದ ರೋಗವೆಂದು ನಿರೂಪಿಸಿರುವುದು. ಹಾಗಾಗಿಯೇ ಜನ ಇತರ ರೋಗಗಳು ವಾಸಿಯಾದ ನಂತರ ಸಾಮಾನ್ಯ ಜೀವನಕ್ಕೆ ಮರಳುವಂತೆ ಮರಳುತ್ತಿದ್ದಾರೆ. ಆದರೆ ಕೋವಿಡ್ ಹೀಗೆ ನಿಜವಾಗಿಯೂ ವಾಸಿಯಾಗಿರುವ ಸಾಮಾನ್ಯ ರೋಗವೇ? ಈ ರೋಗವನ್ನು ಕುರಿತ ಮಾಹಿತಿ ಹಾಗೆ ಸೂಚಿಸುತ್ತಿಲ್ಲ. ಇಂದಿನ ಕರೋನಾ ಕೋವಿಡ್ ಕುಲದ ವೈರಾಣುವಿನ ಇತ್ತೀಚಿನ ರೂಪಾಂತರವಷ್ಟೆ. ಈ ರೂಪಾಂತರಗಳೂ, ಅವುಗಳ ನಿವಾರಣೆಗೆ ಮನುಷ್ಯನ ವೈದ್ಯಕೀಯ ಪ್ರಯೋಗಗಳು ಹೆಚ್ಚಿದಂತೆ ಅವಕ್ಕೆ ಸೆಡ್ಡುಹೊಡೆದಂತೆ ಹೆಚ್ಚುತ್ತಿವೆ. ಈ ವೈರಾಣುವಿನ ಜೈವಿಕ ಉತ್ಪತ್ತಿಯ ಮೂಲ ಏನೇ ಇರಲಿ ಇದರ ರೋಗಶಕ್ತಿಯ ಅವತಾರ ಮೊದಲು ಕಂಡದ್ದು ಜಗತ್ತಿನ ಅತಿ ಕೈಗಾರಿಕೀಕೃತ ಮತ್ತು ಜನಸಂದಣಿಯ ನಗರವೆನಿಸಿರುವ ಚೀನಾದ ವುಹಾನ್‌ನಲ್ಲಿ. ಇದು ಅಲ್ಲಿಂದ ರವಾನೆಯಾದದ್ದು ಅಲ್ಲಿಂದ ವಿಮಾನಗಳ ಮೂಲಕ ವಿವಿಧ ಉದ್ದೇಶಗಳಿಂದ ಇಟಲಿಯ ವಿವಿಧೆಡೆಗೆ ಪ್ರವಾಸಕ್ಕೆ ಹೊರಟ ಉಳ್ಳ ವರ್ಗದವರ ಮೂಲಕ. (ಈ ಓಂದೆ ಸ್ವಲ್ಪ ಕಾಲ ಇಟಲಿಯಲ್ಲಿ ಕಮ್ಯೂನಿಸ್ಟ್ ಸರ್ಕಾರವಿದ್ದಾಗ ಚೀನಾ ಆ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಮಾಡಿದ್ದರಿಂದಾಗಿ ಆ ದೇಶ ದೊಡ್ಡ

ಸಂಖ್ಯೆಯಲ್ಲಿ ಉದ್ಯಮ ಮತ್ತು ಉದ್ಯಮಿಗಳ ಜೀಡಾಗಿದೆ ಎಂದು ಹೇಳಲಾಗುತ್ತದೆ) ಜಗತ್ತಿನ ಅತಿದೊಡ್ಡ ಪ್ರವಾಸೀ ಆಕರ್ಷಣೆಯ ತಾಣವಾದ ಇಟಲಿ ಈ ರೋಗದ ಜಾಗತಿಕ ಪ್ರಸರಣ ಕೇಂದ್ರವಾಯಿತು. ಸೋಂಕು ಹರಡಿದ್ದು ವಿಮಾನ ಪ್ರಯಾಣಿಕರ ಮೂಲಕ. ಇದು ಭಾರತಕ್ಕೆ ಬಂದದ್ದು ಈ ಮಾರ್ಗದ ಮೂಲಕವೇ. ನಂತರ ಓಡಿದದ್ದು ಬೇರೆ ವಿವಿಧ ಮಾರ್ಗಗಳನ್ನು. ಜನರ ವಿವಿಧ ಉದ್ದೇಶಗಳ ಪ್ರಯಾಣದ ಮೂಲಕ.

ಮೇಲಿನ ವಿವರಗಳನ್ನು ಸಮಗ್ರವಾಗಿ ನೋಡಿದ ಯಾವುದೇ ಸೂಕ್ಷ್ಮ ಗ್ರಹಿಕೆಯ ಮನಸ್ಸಿಗೆ ಅನ್ನಿಸುವುದೇನೆಂದರೆ ಈ ಕೋವಿಡ್ ವ್ಯಕ್ತಿಗತವಾಗಿ ನೋಡಿದಾಗ ಒಂದು ದೈಹಿಕವಾದ ರೋಗವಾಗಿ ಕಂಡರೂ ಸಾಮಾಜಿಕವಾಗಿ, ಜಾಗತಿಕವಾಗಿ ನೋಡಿದಾಗ ಇದೊಂದು ಜೀವನ ದೃಷ್ಟಿಯ, ಜೀವನ ಕ್ರಮದ, ಒಂದು ನಾಗರೀಕತೆಯ ರೋಗವೆಂದು. ಇದರ ಮೊದಲ ಅವತಾರ ಕಂಡದ್ದು ಅತಿ ಕೈಗಾರಿಕೀಕೃತ ನಗರದಲ್ಲಿ. ನಂತರ ಇದು ಹರಡಿದ್ದು ಅಂತಾರಾಷ್ಟ್ರೀಯ ಪ್ರವಾಸೋದ್ಯಮವೂ ಸೇರಿದಂತಿರುವ ಜಾಗತಿಕ ಉದ್ಯಮಶೀಲತೆಯ ಸಾಧನವಾದ ವಿಮಾನಗಳ ಮೂಲಕ. ಜಾಗತಿಕವಾಗಿ ರೋಗ ಹರಡುವ ವ್ಯವಹಾರವನ್ನು ಉದ್ಯಮಶೀಲತೆ ಎಂದು ಕರೆಯಬೇಕೋ ದಂಧೆ ಎಂದು ಕರೆಯಬೇಕೋ ಅದಕ್ಕೆ ಬಲಿಯಾಗಿರುವ ಜನಸಮುದಾಯ ತೀರ್ಮಾನಿಸುವ ಕಾಲವೀಗ ಬಂದಿದೆ.

ಆದರೆ ಜನಕ್ಕೆ ಈ ತೀರ್ಮಾನಿಸುವ ಕಾಲವೀಗ ಬಂದಿದೆ ಎಂಬ ಪರಿವೆಯೇ ಇಲ್ಲ ಏಕೆಂದರೆ ದಂಧೆ ಒಂದು ಉದ್ಯಮ ಎಂಬ ಹೆಸರು ಪಡೆದು ಇಂತಹ ಉದ್ಯಮಶೀಲತೆಯ ಹೆಚ್ಚಳವೇ ದೇಶವೊಂದರ ಪ್ರಗತಿ ಸೂಚಕವೆಂಬ ನಂಬಿಕೆಯನ್ನು ಜಗತ್ತಿನ ವಿವಿಧ ರೂಪಗಳ ಮತ್ತು ಹಂತಗಳ ಉದ್ಯಮಿಗಳು ಬಿತ್ತಿದ್ದಾರೆ. ಇದನ್ನು ಜಾಗತೀಕರಣವೆಂದು ಕರೆಯಲಾಗಿದೆ. ನಮ್ಮ ದೇಶವೂ, ಸರ್ಕಾರಗಳೂ, ಜನರೂ ಇದಕ್ಕೆ ಹೊರತಲ್ಲ. ಏಕೆಂದರೆ ಜನ ನೋಡಿ ಹೇಗೆ ಬೀದಿಗಳನ್ನು ತುಂಬುತ್ತಿದ್ದಾರೆ. ಅದು ಅಂಗಡಿಗಳಾಗಿರಬಹುದು, ಪ್ರವಾಸಿ ತಾಣಗಳಾಗಿರಬಹುದು. ಜಿಮ್, ಈಜುಕೊಳ ಧಾರ್ಮಿಕ ತಾಣಗಳಾಗಿರಬಹುದು. ಎಲ್ಲದರ ಹಿಂದಿರುವುದು ಈ ಜಾಗತೀಕೃತ ಉದ್ಯಮಶೀಲತೆಯ ಹೆಗ್ಗುರುತಾದ ವಿವಿಧ ರೂಪಗಳ ಕೊಳ್ಳುಬಾಕ ಸಂಸ್ಕೃತಿಯೇ. ಜನ ಪೂಜಾಸ್ಥಳಗಳಿಗೆ ಹೋಗುವುದೂ ಯಶಸ್ಸನ್ನು, ಅದರಿಂದ ಸಿಗುವ 'ಶಾಂತಿ'ಯನ್ನು ಕೊಳ್ಳಲೆಂದೇ ಅಲ್ಲವೆ? ಯಶಸ್ಸನ್ನು ಅವಲಂಬಿಸದ ಶಾಂತಿ ಅಥವಾ ನೆಮ್ಮದಿಗೆ ಈ ಧಾರ್ಮಿಕ ಪೂಜಾ ಸ್ಥಳಗಳೇನೂ ಅವಶ್ಯಕವಿಲ್ಲವಲ್ಲವೆ?

ಆದರೆ ನಮ್ಮ ಸರ್ಕಾರ ಇಷ್ಟೆಲ್ಲ ಯೋಚಿಸುವ ಸ್ಥಿತಿಯಲ್ಲಿ ಇಲ್ಲ. ಏಕೆಂದರೆ ಅದಕ್ಕೆ ಕಾರಣವಾದ ರಾಜಕಾರಣ ನಿಂತಿರುವುದೇ ಇಂತಹ ಎಲ್ಲ ರೂಪಗಳ ಉದ್ಯಮಶೀಲತೆಗಳ ಮೇಲೇ; ಅರ್ಥಾತ್ ದಂಧೆಗಳ ಮೇಲೇ. ನಮ್ಮ ಮಂಡ್ಯ ಜಿಲ್ಲೆಯ ಬೇಬಿ ಬೆಟ್ಟದಲ್ಲಿನ ಗಣಿಗಾರಿಕೆ ಎಂಬೊಂದು ಪುಟ್ಟ 'ಉದ್ಯಮಶೀಲತೆ'ಯ ಬಗ್ಗೆ ಅದು ವರ್ಷಗಟ್ಟಲೆ ಬಗೆಹರಿಯದಂತೆ ಹೇಗೆ ವಾದ-ವಿವಾದಗಳ ಹುತ್ತ ನಿರ್ಮಿಸಿಬಿಡಲಾಗಿದೆ ಎಂಬುದೇ

ಒಂದು ಪುಟ್ಟ ಉದಾಹರಣೆ. ಕೋವಿಡ್‌ನ ಮುಖ್ಯ ಸಮಸ್ಯೆ ಎಂದರೆ ಸರ್ಕಾರಕ್ಕಾಗಲೀ, ಜನಗಳಿಗಾಗಲೀ, ಅದು ತಾವು ಶಾಶ್ವತವಾಗಿ ಮುಕ್ತವಾಗಬೇಕಾದ ರೋಗವಾಗಿ ಕಂಡಿಲ್ಲ. ಹಾಗಾಗಿಯೇ ನಮ್ಮ ಸರ್ಕಾರ ಈಗ ಮತ್ತೊಂದು ಸಾವಿರದ ಐದುನೂರುಕೋಟಿ ರೂಪಾಯಿಗಳ ವೆಚ್ಚದಾರೋಗ್ಯ ಸುಧಾರಣೆಯ ವೈದ್ಯಕೀಯ ಕ್ರಿಯಾಯೋಜನೆಯನ್ನು ಪ್ರಕಟಿಸಿದೆ. ಇದಕ್ಕೆ ಬೇಕಾದ ಹಣ ಸರ್ಕಾರಕ್ಕೆ ಒದಗಿಸುವ ವಿವಿಧ ಚಟುವಟಿಕೆಗಳಿಗಾಗಿ ಜನ ಬೀದಿಗೆ ನುಗ್ಗುತ್ತಿದ್ದಾರೆ. ಇದೊಂದು ವಿಷವ್ಯೂಹವಷ್ಟೆ.

(೧೫.೭. ೨೦೨೧ರ 'ಪ್ರಜಾವಾಣಿ'ಯಲ್ಲಿ ಪ್ರಕಟ)

ಬದಲಾಗಿರಿ ಇಲ್ಲವೇ 'ಶಾಶ್ವತ' ಲಾಕ್‌ಡೌನ್‌ಗೆ ತಯಾರಾಗಿರಿ!

ಕರೋನಾ ವೈರಾಣುವಿನ ಹಾವಳಿಯಿಂದ ತತ್ತರಿಸಿರುವ ದೇಶದ ಆರ್ಥಿಕತೆಯ ಚೇತರಿಕೆಗಾಗಿ ಮತ್ತು ಹಲವು ಜನವರ್ಗಗಳ ತತ್ಕಾಲೀನ ಸಂಕಷ್ಟ ನಿವಾರಣೆಗೆಂದು ಕೇಂದ್ರ ಸರ್ಕಾರ ೨೦ ಲಕ್ಷ ಕೋಟಿ ರೂಪಾಯಿಗಳ ಪ್ಯಾಕೇಜನ್ನು ಪ್ರಕಟಿಸಿದೆ. ಇದು ನಮ್ಮ ಇಂದಿನ ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ.೧೦ರಷ್ಟು ಮತ್ತು ಸದರಿ ವರ್ಷದ ಆಯವ್ಯಯದ ಮೂರನೇ ಎರಡು ಭಾಗದಷ್ಟು ಗಾತ್ರದ್ದು ಎಂದು ಸರ್ಕಾರ ಹೇಳಿಕೊಳ್ಳುತ್ತಿದ್ದರೂ ಇದರಲ್ಲಿ ಹಳೆಯ ಹಲವು ಯೋಜನೆಗಳು ಹೊಸ ರೂಪಗಳಲ್ಲಿ ಸೇರಿಕೊಂಡಿರುವುದರಿಂದ ಈ ಅಂಕಿ-ಅಂಶವನ್ನು ನಂಬಲಾಗದು ಎಂದು ಕೆಲವು ಆರ್ಥಿಕ ತಜ್ಞರು ಹೇಳುತ್ತಿದ್ದಾರೆ. ಇದರ ಹೊರತಾಗಿಯೂ, ಇದನ್ನು ವರ್ಷದ ಆಯವ್ಯಯದ ನಕ್ಷೆಯನ್ನು ಅಂದರೆ ರಾಷ್ಟ್ರದ ಸಾಮಾನ್ಯ ಜನಜೀವನದ ಇತರೆ ಅತ್ಯಗತ್ಯ ಚಟುವಟಿಕೆಗಳನ್ನು ಅಸ್ತವ್ಯಸ್ತಗೊಳಿಸದೆ. ಕರೋನಾ ಸಂಬಂಧವಾಗಿ ಮುಂದುವರೆಯುವ ನಿರ್ಬಂಧಗಳ ನಡುವೆಯೇ ಹೇಗೆ ಸಂಗ್ರಹಿಸಿ ವಿವಿಧ ರೂಪಗಳ ಬಂಡವಾಳಗಳನ್ನಾಗಿ ಹೂಡಲಾಗುವುದು ಎಂಬ ಕುತೂಹಲವಂತೂ ಇದ್ದೇ ಇದೆ.

ಅದೇನೇ ಇದ್ದರೂ, ಈ ಈ ಆರ್ಥಿಕ ಪ್ಯಾಕೇಜಿನ ವಿದ್ಯಮಾನ ಸೂಚಿಸುತ್ತಿರುವ ಒಂದು ಆತಂಕಕಾರಿ ಸಂಗತಿ ಎಂದರೆ, ಸರ್ಕಾರ ಬಹು ಸಂಕೀರ್ಣವಾದ ಕರೋನಾ ಸಮಸ್ಯೆಯನ್ನು ಬಹು ಸರಳೀಕರಿಸಿ ಆತ್ಯಂತಿಕವಾಗಿ ಅದನ್ನೊಂದು ಆರ್ಥಿಕ ವಿಪತ್ತೆಂದು ಮಾತ್ರ ಪರಿಗಣಿಸಿರುವುದು. ಕರೋನಾ ಮೂಲತಃ ಇಂದಿನ ಮಾನವ ನಾಗರೀಕತೆಯ ಸತ್ವ ಮತ್ತು ದಿಕ್ಕುಗಳನ್ನು ಕುರಿತ ಪ್ರಶ್ನೆ ಎಂಬ ಅರಿವೇ ಇದರಲ್ಲಿ ಕಾಣೆಯಾಗಿದೆ. ಈ ಮಹಾಮಾರಿಯ ಮೂಲ ನಮ್ಮ ಸದ್ಯದ ಜೀವನ ಪದ್ಧತಿ ಮಾನವ ಕೇಂದಿತವಾಗಿದ್ದು, ಇತರ ಜೀವಜಗತ್ತನ್ನು ನಿರ್ದಯವಾಗಿ ಕಡೆಗಣಿಸಿ ನಿಸರ್ಗದ ಮೇಲೆ ನಡೆಸಿರುವ ಮಿತಿಯಿಲ್ಲದ ದಾಳಿ ಮತ್ತು ಇದಕ್ಕಾಗಿ ಅದು ಅನಿವಾರ್ಯವಾಗಿ ರೂಪಿಸಿಕೊಂಡ ವ್ಯಾಪಕ ಮತ್ತು ದಟ್ಟ ಖಂಡಾಂತರ ಜನ ಸಂಚಾರ ಎಂಬ ಸಂಗತಿ ಈ ಅರಿವಿನ ಕೇಂದ್ರವಾಗಿದೆ. ಈ ಜೀವನಪದ್ಧತಿ, ಅಂದರೆ ನಮ್ಮ ಆಶೆ-ಆಕಾಂಕ್ಷೆಗಳು ಮತ್ತು ಅವರಿಂದ ಹುಟ್ಟುವ ಬೇಡಿಕೆಗಳ ಒತ್ತಡಗಳು ಇಂದು ಅಂತಿಮವಾಗಿ ಎಂತಹ ಕೈಗಾರಿಕೀಕರಣಕ್ಕೆ ಕಾರಣವಾಗಿದೆ ಎಂದರೆ ಮನುಷ್ಯ ತನ್ನೊಬ್ಬನ ಸುಖ-ಸೌಲಭ್ಯಗಳ

ಹೊರತಾಗಿ ಇನ್ನೆಲ್ಲವನ್ನೂ ಮರೆತು ಮುನ್ನುಗ್ಗುತ್ತಾ ತನ್ನ ಸಮುದಾಯ ಪ್ರಜ್ಞೆಗೇ ಎರವಾಗಿದ್ದಾನೆ. ತನ್ನ ಸಮುದಾಯದ ಒಂದು ದೊಡ್ಡ ಭಾಗವನ್ನೇ ನಿರ್ವಸಿತರನ್ನಾಗಿ ಮಾಡಿಬಿಟ್ಟಿದ್ದಾನೆ; ಅತಂತ್ರ–ಅಲೆಮಾರಿಗಳನ್ನಾಗಿ ಪರಿವರ್ತಿಸಿಬಿಟ್ಟಿದ್ದಾನೆ.

ತಮ್ಮ ಪ್ಯಾಕೇಜ್ ಭಾಷಣದಲ್ಲಿ ಪ್ರಧಾನಿಯವರು ದೇಶದ ಬೀದಿ ಬೀದಿಗಳಲ್ಲಿ ನಾಶವಾಗುತ್ತಿರುವ ನಮ್ಮ ಕಾರ್ಮಿಕ ಸೋದರರ ಬದುಕಿನ ಪರಿಯ ನೆದರೇ ಇಲ್ಲದಂತೆ ಮತ್ತೆ ಅದೇ ನಗರ ಕೇಂದ್ರಿತವಾದ ಅತ್ಯಾಧುನಿಕ ತಂತ್ರಜ್ಞಾನಾಧಾರಿತ ಮೂಲ ಸೌಕರ್ಯಗಳ ನಿರ್ಮಾಣದೊಂದಿಗೆ ಜಾಗತಿಕ ಬೇಡಿಕೆ–ಪೂರೈಕೆ ಸರಪಳಿಯಲ್ಲಿ ಪ್ರಮುಖ ಸ್ಥಾನ ಪಡೆದು ಈ ವಿಪತ್ತನ್ನು ಮಹಾ ಅವಕಾಶವನ್ನಾಗಿ ಪರಿವರ್ತಿಸಿಕೊಳ್ಳುವಂತೆ ನೀಡಿರುವ ಕರೆ ಈ ಅತಂಕವನ್ನು ಸ್ಪಷ್ಟಪಡಿಸುವಂತೆಯೇ ಇದೆ. ಇದು ಕರೋನಾ ನೆಪದಲ್ಲಿ ಅವರು ಮಾಡಿರುವ, ಕರೋನಾ ಪೂರ್ವದಲ್ಲೇ ಆರ್ಥಿಕ ದುಃಸ್ಥಿತಿಗೆ ಕಾರಣವಾಗಿದ್ದ ತಮ್ಮ ಮೂಲ ಆರ್ಥಿಕ ಚಿಂತನೆಯ ಪುನರುಚ್ಚಾರವೇ ಆಗಿದೆ. ಆರ್ಥಿಕ ಪ್ಯಾಕೇಜಿನ ಮೂರನೇ ಹಂತದಲ್ಲಿ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಪ್ರಕಟಿಸಿರುವ ಹೊಸ ಗಣಿಗಾರಿಕೆಗಳ ಮತ್ತು ಹೊಸ ವಿಮಾನಯಾನ ಮಾರ್ಗಗಳು; ಅವಕ್ಕೆ ಅಗತವಾದಾಗಿ ಹೊಸೊಸ ವಿಮಾನ ನಿಲ್ದಾಣಗಳ ನಿರ್ಮಾಣ ಯೋಜನೆಗಳ ಪ್ರಸ್ತಾವನೆ ಹಾಗೂ ಅವುಗಳಿಗಾಗಿ ಖಾಸಗಿಯವರಿಗೆ ಕಂಟ್ರ್ಯಾಕ್ಟುಗಳನ್ನು ನೀಡುವ ಪ್ರಸ್ತಾವನೆಗಳು ಇದನ್ನು ಸಾಬೀತುಪಡಿಸುವಂತೆಯೇ ಇವೆ.

ಪ್ರಧಾನಿಯವರ ಇಡೀ ಪ್ಯಾಕೇಜು ಭಾಷಣದಲ್ಲಿ ಹೊಸದೆನಿಸಬಹುದಾದ ಏಕೈಕ ಮಾತೆಂದರೆ 'ಸ್ಥಳೀಯ' ಉತ್ಪಾದನೆಯ ಮೂಲಕ ಸಾಧಿಸಲು ಸೂಚಿಸಲಾಗಿರುವ 'ಆತ್ಮನಿರ್ಭರತೆ'ಯದ್ದು; ಅರ್ಥಾತ್ 'ಸ್ವಾವಲಂಬನೆ'ಯದ್ದು. ಆದರೆ ಇದು ಇವರದ್ದೇ ವಿಫಲ 'ಮೇಕ್ ಇನ್ ಇಂಡಿಯಾ'ದ ಹೊಸ ಪ್ರಸ್ತುತಿಯಷ್ಟೇ ಎಂದು ವಿರೋಧ ಪಕ್ಷಗಳು ಟೀಕಿಸಿದ್ದಾರೆ. ಪ್ರಧಾನಿಯವರು ಕರೋನಾ ಹಾವಳಿಯಿಂದ ಯಾವುದೇ ಪಾಠ ಕಲಿಯದೆ ಅದೇ ತಮ್ಮ ಹಳೆಯ 'ಬಲಿಷ್ಠ ಮತ್ತು ವಿಶ್ವಗುರು ಭಾರತ'ದ ಕನಸಿಗೆ ಆಧಾರವಾದ 'ಭವ್ಯ' ಆರ್ಥಿಕ ನೀತಿಯ ನುಡಿಗಟ್ಟನ್ನು ಬದಲಾಯಿಸಿಕೊಳ್ಳದೆ ಜಾಗತಿಕ ಬೇಡಿಕೆ–ಪೂರೈಕೆಯ ಸರಪಳಿಯ ಪರಿಭಾಷೆಯಲ್ಲಿ ಮಾತನಾಡಿರುವಲ್ಲಿ ಕಾಣುವ ರಾಜಕೀಯ ಮೊಂಡುತನ ಈ ಟೀಕೆಯನ್ನು ನಿಜವೆನ್ನಿಸುವಂತೆ ಮಾಡಿದೆ. ಕರೋನಾ ನಮಗೆ ಕಲಿಸುತ್ತಿರುವ ಪಾಠಗಳಾದರೂ, ಪ್ರಧಾನಿ 'ಸ್ಥಳೀಯತೆ'ಯ ಮಾತಾಡುವಾಗ ಅದರ ಅರ್ಥ ಬರೀ ಜಾಗಕ್ಕೆ ಸೀಮಿತವಾಗದೆ, ಆ ಜಾಗದ ಜನಜೀವನದ ನೆಮ್ಮದಿಗೂ ಸಂಬಂಧಿಸಿದ್ದು ಎಂಬ ಅರಿವನ್ನು ಅವರಲ್ಲಿ ಮೂಡಿಸಬೇಕಿತ್ತು. ಹಾಗೇ, ಕರೋನೋತ್ತರ ಸಂದರ್ಭದ ಸ್ಥಳೀಯ ಆರ್ಥಿಕತೆ ಎಂದರೆ, ಪ್ರಕೃತಿಗೆ ಇನ್ನಷ್ಟು ಘಾತ ಮಾಡದೆ ಪಡೆಯಬಹುದಾದ ಸಂಪನ್ಮೂಲಗಳು ಮತ್ತು ಹೆಚ್ಚು ಜನ ಸಂಚಾರ ಅಂದರೆ ವಲಸೆಗಳ ಅಗತ್ಯವಿಲ್ಲದ ಕಸುಬುಗಳಿಗೆ ಸಂಬಂಧಿಸಿದ ಉದ್ಯಮ ಎಂಬ ಅರಿವನ್ನು ಕೂಡ. ಈ ಅರಿವನ್ನೊಳಗೊಳ್ಳದ 'ಆತ್ಮ ನಿರ್ಭರತೆ'ಯ ಮಾತು ಆತ್ಮದ ಅರಿವೇ ಇಲ್ಲದವರ ಮಾತು ಮಾತ್ರವೆನಿಸಿಕೊಳ್ಳುತ್ತದೆ.

ಆದರೆ ಈ ಅರಿವುಳ್ಳ ಆರ್ಥಿಕತೆ ಸರ್ಕಾರದ ನೀತಿಯಾಗಿ ಜಾರಿಯಾಗತೊಡಗಿದರೆ ಸಹಜವಾಗಿಯೇ ಇಂದು ಅನಿವಾರ್ಯಗಳಂತೆ ಆಗಿ ಹೋಗಿರುವ ಜನರ ಅನೇಕ 'ಅಗತ್ಯ'ಗಳು ಅನಗತ್ಯಗಳಾಗಿ ಮಾರ್ಪಾಡಾಗತೊಡಗುತ್ತವೆ. ಇದರ ಕ್ರಮೇಣ ಪರಿಣಾಮವೆಂದರೆ, ಕೈಗಾರಿಕೀಕರಣದ ದಿಕ್ಕು ಮತ್ತು ಸ್ವರೂಪ ಬದಲಾಗುತ್ತಾ ಹೋಗುತ್ತದಲ್ಲದೆ, ಮನುಷ್ಯನ ಬದುಕಿನ ಆವೇಗವೂ ನಿಧಾನವಾಗಿ ಕಡಿಮೆಯಾಗುತ್ತಾ ಅವನು ಹೊಸ ಪರಿಸ್ಥಿತಿಯ ಎಲ್ಲ ಆಯಾಮಗಳಿಗೂ ಅಂದರೆ ಅವನ ಜೀವನ ಶೈಲಿ, ಉದ್ಯೋಗದ ಶ್ರೇಣಿಗಳು ಮತ್ತು ಸ್ವರೂಪಳಿಗೆ ಹೊಂದಿಕೊಳ್ಳತೊಡಗುತ್ತಾನೆ,

ಆದರೆ ಈ ಪ್ರಕ್ರಿಯೆ ಈವರೆಗಿನ ಆರ್ಥಿಕತೆ ಈ ದೇಶದ ಬಹುಪಾಲು ಜನಕ್ಕೆ ಹತ್ತಿಸಲಾಗಿರುವ ವಿಲಾಸಪ್ರಿಯ ಜೀವನ ಶೈಲಿಯ ಚಾಳಿಯ ಹಿನ್ನೆಲೆಯಲ್ಲಿ ಅಷ್ಟು ಸುಲಭದ ಕೆಲಸವಾಗಲಾರದು. ಇದಕ್ಕಿಂತ ಹೆಚ್ಚಾಗಿ ಜನರಲ್ಲಿ ಹೊಸ ಸುಖ-ಸಾಧನ ಸೌಲಭ್ಯಗಳ ಆಸೆ-ಆಕಾಂಕ್ಷೆಗಳನ್ನು ಬಡಿದೆಬ್ಬಿಸಿ ಲಾಭ ಮಾಡಿಕೊಳ್ಳಬಯಸುವ ಬಂಡವಾಳಿಗರು ಮತ್ತು ಇದನ್ನು 'ಅಸಭಿವೃದ್ಧಿ' ಎಂದು ನಂಬಿ ಅವರ ಬೆನ್ನಿಗಿರುವ ರಾಜಕಾರಣಿಗಳು ಸುಮ್ಮನೆ ಕೂರಲಾರರು. ಆದುದರಿಂದ ಕರೋನಾ ವಿರುದ್ಧ ನಡೆಯಬೇಕಾದ ಕಾರ್ಯಾಚರಣೆಯ ಮುಖ್ಯ ಘೋಷಣೆ 'ಬದಲಾಗಿ; ಇಲ್ಲವೇ ಒಂದಲ್ಲ ಒಂದು ರೀತಿಯ ಶಾಶ್ವತ ಲಾಕ್‌ಡೌನ್‌ಗೆ ತಯಾರಾಗಿರಿ!' ಎಂದಾಗಬೇಕು.

ಈ ಶಾಶ್ವತ ಲಾಕ್‌ಡೌನ್ ಎಂದರೆ ಮನುಷ್ಯನ ಸಾಮಾಜಿಕತೆಯ ಸತ್ವವನ್ನು ಕಳೆದುಕೊಂಡ ನಿರ್ಬಂಧಿತ ಬದುಕು. ಇದರ ಪರಿಣಾಮಗಳನ್ನು ನೆನೆಸಿಕೊಂಡರೇ ಉಸಿರುಗಟ್ಟುವಂತಾಗುತ್ತದೆ. ಏಕೆಂದರೆ ಇದು ಮನುಷ್ಯ ಚೈತನ್ಯದ- ತನ್ನ ಸಾಮಾಜಿಕ ಒಡನಾಟಗಳ ವಿವಿಧ ರೂಪಗಳಲ್ಲಿ (ಕುಟುಂಬ, ಗೆಳೆತನ, ಕೂಟ, ವಿಹಾರ, ಸಾಹಸ, ಕ್ರೀಡೆ, ಮನರಂಜನೆ ಇತ್ಯಾದಿ) ಅವನು ಪಡೆಯುತ್ತಾ ಬಂದಿರುವ ಪಾರಮಾರ್ಥಿಕ ತೃಪ್ತಿ ಮತ್ತು ಸಾರ್ಥಕತೆಗಳ ಮೂಲ ಸ್ರೋತವನ್ನೇ ಬತ್ತಿಸತೊಡಗುವಂತಹುದು, ಆದುದರಿಂದ ಈ ಮುಖ್ಯ ಘೋಷಣೆಯನ್ನು ಹಿನ್ನೆಲೆಯಾಗಿಟ್ಟುಕೊಂಡ ಕಾರ್ಯಾಚರಣೆ ನಮ್ಮ ಬದುಕನ್ನು ಅದರ ಎಲ್ಲ ನೆಲೆಗಳಲ್ಲಿ ಮತ್ತು ಅರ್ಥಗಳಲ್ಲಿ ಸ್ಥಳೀಯವನ್ನಾಗಿಸಿಕೊಳ್ಳುವ ಮೂಲಕ ಅದರ ವಿಲಾಸಪ್ರಿಯತೆ ಒಂದು ಮಿತಿ ಮೀರಲಾಗದಂತಹ ಪರಿಸ್ಥಿತಿಯನ್ನು ನಿರ್ಮಿಸಬಲ್ಲುದು. ಹಾಗೂ ಕರೋನಾ ವೈರಾಣುವಿಗೆ ತಾವಿಲ್ಲದಂತೆ ಮಾಡಬಹುದು. ಇದರ ಪರಿಣಾಮಗಳು ನಮ್ಮ ಬದುಕನ್ನು ಮಾತ್ರವಲ್ಲ, ಅದನ್ನು ನಿರ್ಧರಿಸುತ್ತಿರುವ ರಾಜಕಾರಣವನ್ನೂ ನಿರ್ಣಾಯಕವಾಗಿ ಬದಲಿಸಬಲ್ಲುದು. ಅಷ್ಟೇ ಅಲ್ಲ, ಭಾರತ ತನ್ನ ಬಲಿಷ್ಠತೆಯ ಮೂಲಕ 'ವಿಶ್ವಗುರು'ವಾಗುವ ಮೋದಿಯವರ ಕನಸೂ ನನಸಾದೀತು. 'ಬಲಿಷ್ಠತೆ'ಯ ಅರ್ಥ ಬೇರೆಯೇ ಆಗಿ ಅದು ಜಗತ್ತಿನಾದ್ಯಂತ ಗೌರವಾರ್ಹವಾಗಿರುತ್ತದಷ್ಟೆ.

('ಹೊಸ ಮನುಷ್ಯ' ಮೇ, ೨೦೨೦ರಲ್ಲಿ ಪ್ರಕಟ; 'ಪ್ರಜಾವಾಣಿ' ಪ್ರಕಟಿಸದ ಲೇಖನ)

ಕರೋನಾ: ಪರ್ಯಾಯ ಆರ್ಥಿಕತೆಗೆ ದಾರಿಯಾಗಲಿ

ಕರೋನಾ ವೈರಾಣುವಿನ ಇತ್ತೀಚಿನ ಅವತಾರವಾದ ಕೋವಿಡ್–೧೯ ಜಗತ್ತಿನಾದ್ಯಂತ ಮಾಡುತ್ತಿರುವ ಹಾವಳಿಯ ಮೂಲಕ್ಕೆ ಹೋದವರೆಲ್ಲರಿಗೆ ಈ ಎರಡು ಅಂಶಗಳು ಮನವರಿಕೆಯಾಗಿರುವಂತೆ ಕಂಡು ಬರುತ್ತದೆ: ೧. ಈ ರೋಗ ನಮ್ಮ ಜೀವನ ಪದ್ಧತಿಯ ಸಂಚಿತ ಫಲ. ೨. ಈ ರೋಗ ಹೀಗೆ ಒಮ್ಮೆಗೆ ಜಗತ್ತಿನಾದ್ಯಂತ ಹರಡಿ ಅನಾಹುತ ಉಂಟಾಗಿರಲು ಮುಖ್ಯ ಕಾರಣ, ಮನುಷ್ಯನ ವಿಪರೀತ– ವಿಶೇಷವಾಗಿ ಅಂತಾರಾಷ್ಟ್ರೀಯ ಮಟ್ಟದ–ಓಡಾಟ. ಆದರೆ ಆಶ್ಚರ್ಯದ ಸಂಗತಿ ಎಂದರೆ ಈ ರೋಗದ ಹಾವಳಿಯ ವಿರುದ್ಧ–ನಮ್ಮ ಸರ್ಕಾರದ ಇತ್ತೀಚಿನ ಭಾರಿ ಪ್ಯಾಕೇಜೂ ಸೇರಿದಂತೆ–ಜಗತ್ತು ಕೈಗೊಳ್ಳುತ್ತಿರುವ ಕ್ರಮಗಳು ಈ ಎರಡು ಸಂಗತಿಗಳನ್ನು ಗಮನಿಸಿಯೇ ಇಲ್ಲವೆಂಬಂತೆ ರೂಪುಗೊಳ್ಳುತ್ತಿರುವುದು.

ಈ ಕ್ರಮಗಳನ್ನು ಎರಡು ಬಗೆಗಳಾಗಿ ವಿಂಗಡಿಸಬಹುದು. ಒಂದು ಈ ರೋಗವನ್ನು ನಿವಾರಿಸಿಕೊಳ್ಳುವ ದಿಕ್ಕಿನ ಕ್ರಮ. ಇನ್ನೊಂದು ಈ ರೋಗದ ಹಾವಳಿಯಿಂದ ದೇಶಗಳ ಆರ್ಥಿಕತೆಗಳಿಗೆ ಆಗಿರುವ ನಷ್ಟವನ್ನು ಸರಿಪಡಿಸಿಕೊಳ್ಳುವ ದಿಕ್ಕಿನ ಕ್ರಮ. ಸದ್ಯಕ್ಕೆ ರೋಗ ನಿವಾರಣೆಯ ವಿಷಯದಲ್ಲಿ ದಿಕ್ಕೇ ತೋಚದಂತಾಗಿರುವ ಸರ್ಕಾರಗಳು ಭೌತಿಕ ದೂರ, ಮುಖಗವಸು ಪ್ರತ್ಯೇಕ ವಾಸ ಮುಂತಾದ ಮುನ್ನೆಚ್ಚರಿಕೆ ಕ್ರಮಗಳ ಮೂಲಕ ಅದರ ಹರಡುವಿಕೆಯನ್ನಷ್ಟೇ ತಡೆಯುವ ಪ್ರಯತ್ನಗಳನ್ನು ನಡೆಸಿವೆ. ರೋಗ ಉಲ್ಬಣಗೊಳ್ಳದಂತೆ ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವುದಷ್ಟೇ ಸದ್ಯದ ಚಿಕಿತ್ಸಾ ಕ್ರಮವಾಗಿದೆ. ರೋಗವನ್ನು ಗುಣಪಡಿಸಬಲ್ಲ ಲಸಿಕೆ ಇನ್ನೂ ಪ್ರಯೋಗಗಳ ಹಂತದಲ್ಲಿದ್ದು, ಅವು ದೈನಂದಿನ ಬಳಕೆಗೆ ದೊರೆಯಲು ಇನ್ನೂ ಸಾಕಷ್ಟು ಕಾಲ ಅಗತ್ಯವೆಂದು ಹೇಳಲಾಗುತ್ತಿದೆ. ಆದರೆ ಈ ಲಸಿಕೆಗಳೂ ಈ ರೋಗವನ್ನು ತತ್ಕಾಲೀನವಾಗಿ ವಾಸಿ ಮಾಡಬಲ್ಲುದೇ ಹೊರತು ಸದಾ ಕಾಲಕ್ಕೆ ತಡೆಯುವುದಿಲ್ಲ ಎನ್ನಲಾಗುತ್ತಿದೆ.

ಅಂದರೆ ಆಧುನಿಕ ಕಾಲದ ಎಲ್ಲ ಸಾಂಕ್ರಾಮಿಕ ರೋಗಗಳಂತೆ ಈ ರೋಗ ತನ್ನ ರೂಪಾಂತರಗಳಲ್ಲಿ ಮರುಕಳಿಸುವ ಗುಣ ಹೊಂದಿದೆ. ಇದರರ್ಥ ಇಷ್ಟೆ: ಈ

ರೋಗಕ್ಕೆ ಕಾರಣವಾಗಿರುವ ಕರೋನಾ ವೈರಾಣು ನಮ್ಮೊಂದಿಗೆ ಬದುಕಲೆಂದೇ ಬಂದಿದೆ! ಕೋವಿಡ್-೧೯ ಎಂಬುದು ನಮ್ಮ ಜೀವನಪದ್ಧತಿಯ ಸಂಚಿತ ಫಲ ಎಂದು ಹೇಳಲಾಗುತ್ತಿರುವುದು ಈ ಅರ್ಥದಲ್ಲೇ. ಇದನ್ನು ಇಂದು ಜಗತ್ತಿನ ಪರಿಸರ ವಿಜ್ಞಾನಿಗಳು, ಸಮಾಜ ವಿಜ್ಞಾನಿಗಳು ಮತ್ತು ರಾಜಕೀಯ ಚಿಂತಕರೆಲ್ಲರೂ ಒಕ್ಕೊರಲಿನಿಂದ ಹೇಳುತ್ತಿದ್ದಾರೆ. ಆದರೆ ಅವರ ಈ ಮಾತು ಸರ್ಕಾರಗಳನ್ನು ನಡೆಸುತ್ತಿರುವವರ ಕಿವಿಗಳಿಗಿರಲಿ, ಈ ರೋಗದ ಹಾವಳಿಯಿಂದ ಭೀತರಾಗಿರುವ ಸಾಮಾನ್ಯ ಜನರ ಕಿವಿಗಳಿಗೂ ಬೀಳುತ್ತಿಲ್ಲ ಇದಕ್ಕೆ ಈಗ ನಾವು ಅನುಸರಿಸುತ್ತಿರುವ ಜೀವನಪದ್ಧತಿ ಸಹಜ ಜೀವನಪದ್ಧತಿಯಾಗಿದ್ದು ಅದಕ್ಕೆ ಪರ್ಯಾಯವಿಲ್ಲ ಎಂಬ ನಂಬಿಕೆಯನ್ನು ಸ್ವತಃ ಈ ಜೀವನಪದ್ಧತಿಯೇ ನಮ್ಮೊಳಕ್ಕೆ ಅಂತರ್ಗತಗೊಳಿಸಿರುವುದೇ ಕಾರಣವಾಗಿದೆ.

ನಮ್ಮದೀಗ ವಿಜ್ಞಾನ-ತಂತ್ರಜ್ಞಾನಗಳು ಬಂಡವಾಳಿಗರ ಲಾಭೋದ್ದೇಶದ ಹೊಸ ಹೊಸ ಹೂಡಿಕೆಗಳಿಂದ ಕಂಡು ಹಿಡಿಯುವ ಹೊಸ ಹೊಸ ಸುಖ ಸಾಧನಗಳ ಉತ್ಪಾದನೆ ಮತ್ತು ಮಾರುಕಟ್ಟೆಗಳು ಪೋಷಿಸುವ, ಜೀವನ ಮಟ್ಟ ಸದಾ ಏರುತ್ತಾ ಹೋಗುವ ರೋಚಕತೆಯ ಜೀವನ ಪದ್ಧತಿ. ಅಂದರೆ ಒಂದು ವಸ್ತು ಜೀವನಕ್ಕೆ ನಿಜವಾಗಿ ಬೇಕಿರಲಿ, ಬೇಡದಿರಲಿ ಅವನ್ನು ಕಂಡುಹಿಡಿಯುವ, ಉತ್ಪಾದಿಸುವ, ಮಾರುವ ಆರ್ಥಿಕ ಚಕ್ರ ಸದಾ ತಿರುಗುತ್ತಿರುವಂತೆ ನೋಡಿಕೊಳ್ಳುವುದೇ ಮಾನವ ಜೀವನದ ಸುಖ-ಸಮೃದ್ಧಿ-ಸಾರ್ಥಕತೆ ಎಂಬ ನಂಬಿಕೆಯನ್ನು ಆಧರಿಸಿದ್ದು ಇದು. ಆದರೆ ಈ ನಂಬಿಕೆ ಮತ್ತು ಅದರ ಹಿಂದಿನ ಸಂಕೀರ್ಣ ಭೌತಿಕ ಕಾರ್ಯಚರಣೆಗಳು ನಮ್ಮ ಜೀವನದ ಮೂಲ ಆಸರೆಯಾದ ಈ ಭೂಮಿ ಮತ್ತು ಅದರ ವಾತಾವರಣವನ್ನು ಏನು ಮಾಡುತ್ತಿದೆ ಎಂಬುದರ ಮರೆವನ್ನು ಉಂಟು ಮಾಡಿದೆ ಕೂಡ. ಈ ಮರೆವಿನ ಫಲವೇ ಪ್ರಕೃತಿಯ ಸಹಜ ಭಾಗವಾಗಿದ್ದ ಕರೋನಾ ವೈರಾಣು ಇಂದು ಅಸಹಜವಾಗಿ ಹೊರಬಿದ್ದು ನಮ್ಮನ್ನು ಮಾರಕವಾಗಿ ಕಾಡುತ್ತಿರುವುದು.

ಕರೋನಾ ಮಹಮಾರಿಯನ್ನು ನಿಜವಾಗಿ ಎದುರಿಸುವ ಬಗೆ ಎಂದರೆ ಸದ್ಯದ ನಮ್ಮ ಜೀವನ ಪದ್ಧತಿಯನ್ನೂ, ಇದನ್ನು ಪೋಷಿಸುತ್ತಿರುವ ಆರ್ಥಿಕ ಪದ್ಧತಿಯನ್ನೂ ಮರುಪರಿಶೀಲನೆಗೊಡ್ಡುವುದೇ ಆಗಿದೆ. ಆದರೆ ಇಂದಿನ ಸರ್ಕಾರಗಳು ಮಾಡುತ್ತಿರುವುದಾದರೂ ಏನನ್ನು? ಅವು ಈಗ ಜಖಂಗೊಂಡಿರುವ ತಂತಮ್ಮ ಆರ್ಥಿಕತೆಗಳನ್ನು ಮತ್ತೆ ಹಾಗೇ ಮರಳಿ ಕಟ್ಟುವ ಆತ್ಮಹತ್ಯೆಯ ದಾರಿ ಹಿಡಿದಂತಿವೆ. ಹಾಗಾಗಿ ಸಮಾಜದ ಪ್ರಜ್ಞಾವಂತರು ಈ ಬಗ್ಗೆ, ಸರ್ಕಾರದ ವಲಯಗಳಲ್ಲಿ ಮತ್ತು ಜನಸಾಮಾನ್ಯರ ಮಧ್ಯೆ ಎಚ್ಚರ ಮೂಡಿಸುವ ತುರ್ತು ಅಗತ್ಯವಿದೆ. ಈಗ ಹಾಳಾಗಿರುವ ಆರ್ಥಿಕತೆಯ ನಿಜ ಕೈ ಕಾಲುಗಳಂತಿದ್ದ ಬಹುಪಾಲು ಕಾರ್ಮಿಕರ, ಅದಕ್ಕೆ ಮೂಲ ಚೈತನ್ಯ ಒದಗಿಸುತ್ತಿದ್ದ ಅಂತಾರಾಷ್ಟ್ರೀಯ ವ್ಯವಹಾರಸ್ಥರ ಮತ್ತು ಈ ವ್ಯವಹಾರವಲ್ಲಿ

ಪಾಲು ಪಡೆಯಲು ಹೋಗಿದ್ದ ವಿವಿಧ ತೆರನ 'ಗಿರಾಕಿ'ಗಳ ಪಾಡು ಇಂದೇನಾಗಿದೆ ಮತ್ತು ಅವರು ಎಂತಹ ಮಾನವ ಬಿಕ್ಕಟ್ಟನ್ನು ಸೃಷ್ಟಿಸಿದ್ದಾರೆ ಎಂದು ಯೋಚಿಸಿದರೆ ಸಾಕು, ಪರ್ಯಾಯ ಆರ್ಥಿಕತೆಯ ಕೇಂದ್ರ ಸ್ಥಳೀಯತೆಯಾಗಿರಬೇಕು ಎಂಬ ಸುಳಿವು ಸಿಕ್ಕೀತು. ಆ ಕೇಂದ್ರದಿಂದಲೇ ಅದರ ಇತರೆಲ್ಲ ರೂಪುರೇಷೆಗಳು ಮೂಡಿಯಾವು. ಇದರ ವ್ಯಾವಹಾರಿಕ ನಕ್ಷೆಯೊಂದನ್ನು ತಯಾರಿಸಿ ಜನರ ಬೆಂಬಲ ಸಂಘಟಿಸುವುದು ಇಂದಿನ ತುರ್ತಾಗಿದೆ.

(ಹೊಸ ಮನುಷ್ಯ ಏಪ್ರಿಲ್, ೨೦೨೦)

ಶಿಕ್ಷಣ : ಲೋಹಿಯಾ ವಿಚಾರಗಳು

ರಾಮಮನೋಹರ ಲೋಹಿಯಾ ಅವರು ನಮ್ಮ ಮುಖ್ಯ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರು. ಅವರು ಸಮಾಜವಾದಿ ತತ್ವದಲ್ಲಿ ನಂಬಿಕೆ ಇಟ್ಟ ರಾಜಕಾರಣಿಯಾಗಿದ್ದರು. ಹಾಗಾಗಿ ಅವರು ಪ್ರತಿಪಾದಿಸಿದ ವಿಚಾರಗಳೆಲ್ಲವೂ ಸಮಾಜವಾದಿ ದೃಷ್ಟಿಯನ್ನೇ ಹೊಂದಿದವಾಗಿದ್ದವು. ಸಮಾಜವಾದಿ ದೃಷ್ಟಿ ಎಂದರೆ ಸಮಾನ ಅವಕಾಶಗಳ ಮೂಲಕ ಸರ್ವರೂ ಪರಸ್ಪರ ಸಮಾನತೆಯ ಭಾವನೆಯೊಂದಿಗೆ ಬದುಕಲು ಬೇಕಾದ ಮನೋವೃತ್ತಿ ಎನ್ನಬಹುದು. ಆದರೆ ನಮ್ಮ ಚರಿತ್ರೆ ಸಮಾನತೆಯಲ್ಲಿ ನಂಬಿಕೆ ಇಟ್ಟು ಬೆಳೆದ ಸಮಾಜವಲ್ಲ. ಅದು ಅನೇಕ ತಾರತಮ್ಯಗಳ ಜೊತೆಗೆ ಪರಕೀಯ ಆಳ್ವಿಕೆಯ ಕಾರಣದಿಂದಾಗಿ ಗುಲಾಮಿ ಮನೋವೃತ್ತಿಯನ್ನೂ ಬೆಳೆಸಿಕೊಂಡಿದ್ದ, ಸ್ವತಂತ್ರವಾಗಿ ಆಲೋಚಿಸುವ ಶಕ್ತಿಗೆ ಕುಂದುಂಟು ಮಾಡಿಕೊಂಡಿದ್ದ ಸಮಾಜವಾಗಿತ್ತು. ಹಾಗಾಗಿ ಇಲ್ಲಿ ಸಮಾನ ಅವಕಾಶಗಳ ಸಮಾಜದ ಸೃಷ್ಟಿ ಮಾಡಲು ಹಳೆಯ ಸಾಮಾಜಿಕ ಮನೋಭಾರಗಳಿಂದ ಮುಕ್ತವಾದ ಸ್ವತಂತ್ರ ಚಿಂತನೆಯನ್ನು ಬೆಳೆಸಬೇಕೆಂಬುದು ಲೋಹಿಯಾ ಅವರ ಸಮಾಜವಾದಿ ರಾಜಕಾರಣದ ಮುಖ್ಯ ತತ್ವವಾಗಿತ್ತು. ಶಿಕ್ಷಣ ಕುರಿತ ಅವರ ವಿಚಾರಗಳೂ ಈ ತತ್ವಕ್ಕೇನೂ ಹೊರತಾಗಿರಲಾರವು.

ಲೋಹಿಯಾ ಶಿಕ್ಷಣ ಎಂಬ ನಿರ್ದಿಷ್ಟ ವಿಷಯದ ಬಗ್ಗೆಯೇ ಎಲ್ಲೂ ವಿಚಾರ ಮಂಡಿಸಿದಂತೆ ಕಾಣುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಅವರು ತಮ್ಮ ಇಡೀ ರಾಜಕೀಯ ಜೀವನವನ್ನು ವಿರೋಧ ಪಕ್ಷದಲ್ಲಿದ್ದುಕೊಂಡೇ ಕಳೆದು ಆಡಳಿತದ ವಲಯಕ್ಕೆ ಅವರು ಪ್ರವೇಶಿಸದೇ ಇದ್ದುದೇ ಇರಬಹುದು. ಆದರೆ ಅವರು ತಮ್ಮ ರಾಜಕೀಯ ತತ್ವವನ್ನು ಪ್ರತಿಪಾದಿಸಿದ, ವಿಷದೀಕರಿಸಿದ ಸಂದರ್ಭಗಳಲ್ಲೆಲ್ಲ ಶಿಕ್ಷಣದ ಹಲವು ಆಯಾಮಗಳ ಕುರಿತು ಆಳವಾದ ಮಾತುಗಳನ್ನು ಆಡಿದ್ದಾರೆ. ಹಾಗೆ ನೋಡಿದರೆ ಅವರ ಸಮಾಜವಾದಿ ತತ್ವವೇ ಒಂದು ಶಿಕ್ಷಣದ ಕಾರ್ಯಸೂಚಿಯಂತಿದೆ. ಶಿಕ್ಷಣದ ಗುರಿ ಸಮಾನತೆಯನ್ನು ಸಾಧಿಸುವುದೇ ಆಗಿರಬೇಕು ಎಂಬುದಕ್ಕಿಂತ ಶಿಕ್ಷಣವನ್ನು ಕುರಿತ ಮೌಲಿಕ ಮಾತು ಇನ್ನೊಂದಿರಲು ಸಾಧ್ಯವೇ?

ಈ ಸಮಾನತೆಯ ಸಾಧನೆ ಶಿಕ್ಷಣದ ಮೂಲಕ ಆಗಲು ಸಾಧ್ಯವಾಗುವುದು ಸಮಾನ ಶಿಕ್ಷಣ ಪದ್ಧತಿಯ ಮೂಲಕ ಮಾತ್ರ. ಹಾಗಾಗಿಯೇ ಅವರು ಅವರ ಕಾಲದ ಪ್ರತಿಷ್ಠಿತ

ಶಾಲೆಗಳ ಬಹಿಷ್ಕಾರ ಮತ್ತು ನಿಷೇಧಗಳನ್ನು ಪ್ರತಿಪಾದಿಸುತ್ತಿದ್ದರು. ಅವರ ಕಾಲದಲ್ಲಿ ಇಂಗ್ಲಿಷ್ ಮಾಧ್ಯಮದ ಶಾಲೆಗಳ ವಿಪರೀತ ಹಾವಳಿ ಇರಲಿಲ್ಲ. ಆದರೂ ಆಗಲೇ ಅವರು ಇಂಗ್ಲಿಷ್ ಮಾಧ್ಯಮದ ಶಿಕ್ಷಣ ಮಾಡುವ ಅನಾಹುತಗಳ ಬಗ್ಗೆ ಜಾಗೃತಿ ಉಂಟು ಮಾಡುವ ಆಂದೋಲನವನ್ನೇ ನಡೆಸಿದರು. ಕಳೆದ ಶತಮಾನದ ಅರವತ್ತರ ದಶಕದ ಅವರ 'ಅಂಗ್ರೇಜಿ ಹಟಾವೋ!' ('ಇಂಗ್ಲಿಷ್ ತೊಲಗಿಸಿ') ಆಂದೋಲನ ಸಾರ್ವಜನಿಕ ಜೀವನದಲ್ಲಿ ಒಂದು ಸಾಮಾಜಿಕ-ಸಾಂಸ್ಕೃತಿಕ ಆಂದೋಲನವನ್ನೇ ಉಂಟು ಮಾಡಿತು ಎಂದು ಹೇಳಬೇಕು. ಈ ಆಂದೋಲನದ ಮೂಡಿಸಿದ ಎಚ್ಚರದ ಹಿನ್ನೆಲೆಯಲ್ಲೇ ನಮ್ಮ ಮಾತೃಭಾಷೆಗಳನ್ನು ಗೌರವಿಸುವ ಹೊಸ ಎಚ್ಚರವೂ ನಮ್ಮಲ್ಲಿ ಉಂಟಾದದ್ದು ಎನ್ನಬಹುದು. ಇಂಗ್ಲಿಷ್ ಮಾಧ್ಯಮದ ಶಿಕ್ಷಣ ನಮ್ಮ ಗುಲಾಮಿ ಮನಃಸ್ಥಿತಿಯ ಮುಂದುವರಿದ ಸ್ಥಿತಿಯಾಗಿದ್ದು, ವಿದ್ಯಾರ್ಥಿಗಳು ತಮ್ಮದಲ್ಲದ ಭಾಷೆಯನ್ನು ಕಲಿಯುವಲ್ಲೇ ತಮ್ಮ ಕಲಿಕಾ ಸಾಮರ್ಥ್ಯದ ಅರ್ಧ ಶಕ್ತಿಯನ್ನು ವ್ಯಯಿಸುವಂತಾಗಿ ಅವರ ಒಟ್ಟು ಕಲಿಕೆಯ ಮಟ್ಟವೇ ಕುಂಠಿತವಾಗುತ್ತದೆ ಎಂದು ಅವರು ಹೇಳುತ್ತಿದ್ದರು. ಹಾಗಾಗಿಯೇ ನಮ್ಮ ಶಿಕ್ಷಣ ಕ್ಷೇತ್ರ ಸೃಜನಶೀಲತೆಯನ್ನೇ ಕಳೆದುಕೊಂಡು ನಮ್ಮಿಂದ ವಿದ್ವತ್ತಿನ ಯಾವುದೇ ಕ್ಷೇತ್ರದಲ್ಲಿ ಜಾಗತಿಕ ಮಟ್ಟದ ಅಥವಾ ಗಣನೀಯವೆನ್ನಬಹುದಾದ ಅಧ್ಯಯನ-ಸಂಶೋಧನೆಗಳು ಸಾಧ್ಯವಾಗಿಲ್ಲ ಎಂದು ಅವರು ವಿಶ್ಲೇಷಿಸಿದ್ದರು.

ಅವರ ಇಂಗ್ಲಿಷ್ ವಿರೋಧ ಅದು ವಿದೇಶಿ ಭಾಷೆ ಎಂಬ ಕಾರಣಕ್ಕಾಗಿರಲಿಲ್ಲ. ಬದಲಿಗೆ, ಅದೊಂದು ಚಾರಿತ್ರಿಕ ಕಾರಣಗಳಿಂದಾಗಿ ನಮ್ಮ ಮೇಲ್ಜಾತಿ ಮತ್ತು ಮೇಲ್ವರ್ಗಗಳು ಹಿಡಿತ ಸಾಧಿಸಿರುವ ಪಾಳೆಗಾರಿಕೆಯ ಭಾಷೆಯಾಗಿರುವುದೇ ಕಾರಣವಾಗಿತ್ತು, ಹಾಗಾಗಿ ಈ ಭಾಷೆ ಆಳುವವರು ಮತ್ತು ಆಳಿಸಿಕೊಳ್ಳುವವರು ಎಂಬ ಎರಡು ವರ್ಗಗಳನ್ನು ಸೃಷ್ಟಿಸಿ ಪ್ರಜಾಪ್ರಭುತ್ವದ ಪ್ರಯೋಗವನ್ನೇ ನಿರರ್ಥಕಗೊಳಿಸುವುದೆಂದು ಅವರು ಭಾವಿಸಿದ್ದರು. ಭಾರತೀಯ ಭಾಷೆಗಳು ದುರ್ಬಲವಾಗಿದ್ದು ಶಿಕ್ಷಣ ಕ್ಷೇತ್ರದ ಉನ್ನತ ವಲಯಗಳಲ್ಲಿ-ವಿಶೇಷವಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ-ಅವುಗಳ ಬಳಕೆ ಸಾಧ್ಯವಿಲ್ಲ ಎಂಬ ವಾದವನ್ನು ಲೋಹಿಯಾ ಒಪ್ಪುತ್ತಿರಲಿಲ್ಲ. ರಷ್ಯಾ, ಜರ್ಮನಿ, ಫ್ರಾನ್ಸ್, ಚೀನಾ, ಜಪಾನ್ ದೇಶಗಳಿಗೆ ಸಾಧ್ಯವಾದದ್ದು ನಮಗೇಕೆ ಸಾಧ್ಯವಿಲ್ಲ ಎಂದು ಅವರು ಪ್ರಶ್ನಿಸಿದರು. ಇದು ಸರ್ಕಾರದಲ್ಲಿರುವವರ ಇಚ್ಛಾಶಕ್ತಿಯ ಕೊರತೆ ಮತ್ತು ಇಂಗ್ಲಿಷ್‌ನ್ನು ಆಳುವವರ ಭಾಷೆಯಾಗಿ ಕಾಪಾಡಿಕೊಳ್ಳಬಯಸುವ ಸ್ಥಾಪಿತ ಹಿತಾಸಕ್ತಿಗಳ ಹುನ್ನಾರವೆಂದು ಅವರು ಬಣ್ಣಿಸುತ್ತಿದ್ದರು.

ದೇಶ ಆಧುನಿಕವಾಗಬೇಕು. ಆದರೆ ಯೂರೋಪನ್ನು ಅನುಕರಿಸುವ ರೀತಿಯಲ್ಲಲ್ಲ ಎಂದು ಲೋಹಿಯಾ ಹೇಳುತ್ತಿದ್ದರು. ನಮ್ಮ ಶಿಕ್ಷಣ ವಿದೇಶಿ ಪ್ರಭುತ್ವ ತನ್ನ ಆಳ್ವಿಕೆಯ ಲಾಭಗಳಿಗಾಗಿ ರೂಪಿಸಿಕೊಟ್ಟ ಶಿಕ್ಷಣ ವ್ಯವಸ್ಥೆಯು ನಮಗೆ ಕಲಿಸಿದ ಪರಿಕಲ್ಪನೆಗಳ ಬಂಧನಗಳಿಂದ ನಾವು ಮುಕ್ತರಾಗಬೇಕೆಂದು ಅವರು ಬಯಸಿದ್ದರು. ಈ ಎಲ್ಲ ಪರಿಕಲ್ಪನೆಗಳನ್ನು ದೇಶೀಕರಿಸಬೇಕೆಂದು ಅವರು ಹೇಳುತ್ತಿದ್ದರು. ಉದಾಹರಣೆಗೆ,

ಬಂಡವಾಳಶಾಹಿ, ಕಾರ್ಮಿಕ, ಶೋಷಣೆ, ಸಮಾನತೆ, ಶಿಕ್ಷಣ, ಕೊನೆಗೆ ಸಮಾಜವಾದದ ಅರ್ಥವನ್ನೂ ನಾವು ನಮ್ಮ ವಸಾಹತೋತ್ತರ ಸಂದರ್ಭಕ್ಕೆ ತಕ್ಕಂತೆ–ನಮ್ಮದೇ ಕಣ್ಣೋಟದ ಆಧಾರದ ಮೇಲೆ–ಪುನರನ್ವೇಷಿಸಿಕೊಳ್ಳಬೇಕೆಂದು ಅವರು ಅಭಿಪ್ರಾಯಪಡುತ್ತಿದ್ದರು. ಇದಕ್ಕಾಗಿಯೇ ಅವರು 'ಖೋಜ್ ಪರಿಷದ್' (ಅಂದರೆ, ಹೊಸ ಹುಡುಕಾಟದ ಒಂದು ಅದ್ಯಯನ ಕೇಂದ್ರ) ಎಂಬ ಸಂಸ್ಥೆಯ ಕನಸನ್ನೂ ಅವರು ತಮ್ಮ ಸಮಾಜವಾದಿ ರಾಜಕಾರಣದ ಭಾಗವಾಗಿ ಕಂಡಿದ್ದರು. ಲೋಹಿಯಾ ಅವರು ಗಾಂಧೀಜಿಯ ಅನುಯಾಯಿಯೇ ಆಗಿದ್ದರೂ, ಅವರಂತೆ ಆಧುನಿಕ ತಂತ್ರಜ್ಞಾನದ ಸಾರಾ ಸಗಟು ವಿರೋಧಿಯಾಗಿರಲಿಲ್ಲ. (ಹಾಗೆ ನೋಡಿದರೆ ಗಾಂಧೀಜಿಯೂ ಅಕ್ಷರಶಃ ಅರ್ಥದಲ್ಲಿ ತಂತ್ರಜ್ಞಾನದ ಸಗಟು ವಿರೋಧಿಯಾಗಿರಲಿಲ್ಲ. ಸಮೂಹದಿಂದ (ಅಂದರೆ ಸಾಮಾನ್ಯ ಜನರಿಂದ) ಉತ್ಪಾದನೆ ಸಾಧ್ಯವಾಗಲು ಅನುಕೂಲವಾಗುವ ತಂತ್ರಜ್ಞಾನವನ್ನು– ಉದಾ: ಹೊಲಿಗೆ ಯಂತ್ರ–ಅವರು ಸ್ವಾಗತಿಸುತ್ತಿದ್ದರು ಮತ್ತು ಅಂತಹ ಯಂತ್ರಗಳನ್ನು ತಯಾರಿಸುವ ಕಾರ್ಖಾನೆಗಳು ಸರ್ಕಾರದ ವಶದಲ್ಲಿರಬೇಕೆಂದು ಅವರು ಪ್ರತಿಪಾದಿಸುತ್ತಿದ್ದರು) ಲೋಹಿಯಾ ಅವರು ಕಡಿಮೆ ಪ್ರಮಾಣದ (ಸ್ಥಳೀಯವಾಗಿ–ಸಹಕಾರ ತತ್ವದ ಅಡಿಯಲ್ಲಿ–ಕ್ರೋಢೀಕರಿಸಬಹುದಾದ) ಸಣ್ಣ ಪ್ರಮಾಣದ ಬಂಡವಾಳವನ್ನು ಮಾತ್ರ ಬೇಡುವ ಮತ್ತು ಸ್ಥಳೀಯ ಸಮೂಹವು ತನ್ನ ಸಾಮಾಜಿಕ ಶಾಂತಿಗೆ ಭಂಗವಾಗದಂತೆ ನಿಭಾಯಿಸಬಲ್ಲ ಮಧ್ಯಸ್ಥ (ಇಂಟರ್‌ಮೀಡಿಯೇಟ್) ತಂತ್ರಜ್ಞಾನದ ಪರವಾಗಿದ್ದರು. ಇದನ್ನು ಅವರು 'ಸಣ್ಣ ಘಟಕ ತಂತ್ರಜ್ಞಾನ' (ಸ್ಮಾಲ್ ಯೂನಿಟ್ ಟೆಕ್ನಾಲಜಿ) ಎಂದು ಕರೆಯುತ್ತಿದ್ದರು. ಇದನ್ನು ಸಾಮಾಜಿಕ ಅಶಾಂತಿ ಮತ್ತು ಕಾರ್ಮಿಕ ಶೋಷಣೆಗೆ ಕಾರಣವಾಗುವ ಬಂಡವಾಳಶಾಹಿ ಬೃಹತ್ ತಂತ್ರಜ್ಞಾನಕ್ಕೆ ಪರ್ಯಾಯ ತಂತ್ರಜ್ಞಾನವಾಗಲಿದ್ದು, ಇಂತಹ ತಂತ್ರಜ್ಞಾನದ ಅಗತ್ಯವನ್ನು ಮನವರಿಕೆ ಮಾಡಿಕೊಳ್ಳುವಂತಹ ದೇಶಿ ಮನಸ್ಸನ್ನು ನಿರ್ಮಿಸುವ ಶಿಕ್ಷಣ ಕ್ರಮವನ್ನು ಅವರು ಪ್ರತಿಪಾದಿಸುತ್ತಿದ್ದರೆಂದು ಹೇಳಬಹುದು. (ಲೇಖನದ ಕೊನೆಯಲ್ಲಿನ ಅಡಿ ಟಿಪ್ಪಣಿಯನ್ನೂ ನೋಡಿ)

ಲೋಹಿಯಾ ಒಂದು ನಾಗರೀಕತೆಯ ಗರಿಷ್ಠ ದಕ್ಷತೆ ಮತ್ತು ಸಮಗ್ರ ದಕ್ಷತೆಯ ಪರಿಕಲ್ಪನೆಗಳೂ ಶಿಕ್ಷಣ ಕ್ಷೇತ್ರ ಕುರಿತ ಅವರ ವಿಚಾರಗಳ ಮೂಲದಿಂದಲೇ ಹುಟ್ಟಿದವು ಎಂದು ಹೇಳಬೇಕು. ಅವರ ಪ್ರಕಾರ ಜಗತ್ತಿನ ಇಂದಿನ ನಾಗರೀಕತೆ ವೈಜ್ಞಾನಿಕ ನಾಗರೀಕತೆಯಾಗಿದ್ದು ಇದು ತನ್ನ ಗರಿಷ್ಠ ದಕ್ಷತೆಯನ್ನು ಮುಟ್ಟಿ ಮಾನವ ಜನಾಂಗ ಆ ದಾರಿಯ ವಿಕಾಸದ ಉತ್ತುಂಗವನ್ನು ಮುಟ್ಟಿ ಹಲವು ತೆರನ ಒಡಕು ಮತ್ತು ಯುದ್ಧ ಸೇರಿದಂತೆ ಬಹುಮುಖ ಹಿಂಸೆಯ ದೊಡ್ಡ ಪ್ರಪಾತದ ಅಂಚಿನಲ್ಲಿದೆ. ಈ ನಾಗರೀಕತೆಯಲ್ಲಿ ಮಾನವನ ಬುದ್ಧಿಶಕ್ತಿ ಮತ್ತು ಪ್ರತಿಭೆಯ ವಿವಿಧ ನೆಲೆಗಳಿಗೆ ಸಮಾನ ಅವಕಾಶವಿರದೆ ಮನುಷ್ಯನ ಮನಸ್ಸು–ಮಿತಿಯಿಲ್ಲದ ಸುಖ ಸಂಪತ್ತುಗಳ ಶೇಖರಣೆಯ– ಏಕೋದ್ದೇಶಿತ ಏಕಾಕಾರದ್ದು ಆಗಿರುವುದೇ ಇದಕ್ಕೆ ಕಾರಣವಾಗಿದೆ. (ನಮ್ಮ ಸಮಾಜದಲ್ಲಿನ ಇತ್ತೀಚೆಗೆ ಕಂಡು ಬರುತ್ತಿರುವ ಇಂಗ್ಲಿಷ್ ಮಾಧ್ಯಮ ಕುರಿತ

ಹಪಾಹಪಿ ಕೆಲವರು ವಿಕ್ಷಿಪ್ತವಾಗಿ ವ್ಯಾಖ್ಯಾನಿಸುತ್ತಿರುವಂತೆ ಸಮಾನತೆಯ ದಾಹದ ಅಭಿವ್ಯಕ್ತಿಯಾಗಿರದೆ, ಹಿಂಸಾತ್ಮಕ ಮತ್ತು ವಿಭಜನಶೀಲ ವೈಜ್ಞಾನಿಕ ನಾಗರೀಕತೆಯ ಕೊನೆಯ ಜ್ವಾಲೆಯತ್ತಣ ಪತಂಗ ಪಯಣವೇ ಆಗಿದೆ.) ಆದುದರಿಂದ ಮನುಷ್ಯನ ಬುದ್ಧಿ ಮತ್ತು ಪ್ರತಿಭೆಯ ಬಹುಮುಖ ಸಾಧ್ಯತೆಗಳ ಅನ್ವೇಷಣೆಯ ಸಮಗ್ರ ದಕ್ಷತೆಯ ಪ್ರಯೋಗ ಮಾತ್ರ ಗರಿಷ್ಠ ದಕ್ಷತೆಯ ಅನಾಹುತದಿಂದ ಮನುಷ್ಯನನ್ನು ರಕ್ಷಿಸಬಹುದು. ಇದನ್ನು ಲೋಹಿಯಾ ಬಂಡವಾಳಶಾಹಿ ಮತ್ತು ಸಾಮ್ಯವಾದಿ (ಕಮ್ಯುನಿಸ್ಟ್) ಸಮಾಜಗಳೆರಡೂ ಆರಾಧಿಸುವ ವೈಜ್ಞಾನಿಕ ನಾಗರೀಕತೆಗೆ ಪರ್ಯಾಯವಾದ; ಯಾವುದೇ ಒಂದು ಸಾಮರ್ಥ್ಯದ ಅತಿಯನ್ನು ಸಾಧ್ಯ ಮಾಡದ ಮಾನವ ಪ್ರತಿಭೆ ಮತ್ತು ಸಾಮರ್ಥ್ಯಗಳ ಬಹುಮುಖ ಬೆಳವಣಿಗೆಗೆ ಅವಕಾಶವಿರುವ ಸಮಾಜವಾದಿ ನಾಗರೀಕತೆ ಎಂದು ಕರೆದರು. ಇದರಿಂದ ನಿರ್ಮಾಣವಾಗುವ ಮನುಷ್ಯನನ್ನು 'ಹೊಸ ಮನುಷ್ಯ' ಎಂದೂ ಕರೆದರು. ಈ ಹೊಚ್ಚ ಹೊಸ ಮನುಷ್ಯನ ನಿರ್ಮಾಣಕ್ಕೆ ಅವಕಾಶವಿರುವ ಬಹುಮುಖತೆಯ ಶಿಕ್ಷಣವನ್ನು ಅವರು ಒತ್ತಾಯಿಸಿದರು. ಅವರ ಪ್ರಕಾರ ಇಂತಹ ಬಹುಮುಖ ಶಿಕ್ಷಣ ಕೇವಲ ಒಳ್ಳೆಯ ವಿಜ್ಞಾನಿಯನ್ನು ಮಾತ್ರವಲ್ಲ,- ಜೊತೆಗೇ ಒಳ್ಳೆಯ ಚಿತ್ರಕಾರ, ಒಳ್ಳೆಯ ಸಂಗೀತಗಾರ, ಒಳ್ಳೆಯ ಲೇಖಕ, ಒಳ್ಳೆಯ ತತ್ವಜ್ಞಾನಿ, ಒಳ್ಳೆಯ ಇತಿಹಾಸಕಾರ, ಒಳ್ಳೆಯ ಆಡಳಿತಗಾರರನ್ನೂ ನಿರ್ಮಿಸಿ ಸಮಾಜದಲ್ಲಿ ಒಂದು ಸಮತ್ವವನ್ನು ಉಂಟು ಮಾಡುವುದು.

(**ಅಡಿ ಟಿಪ್ಪಣಿ :** 'ಸಣ್ಣ ಘಟಕ ತಂತ್ರಜ್ಞಾನ'ದ ಪ್ರಯತ್ನಗಳು ನಮ್ಮಲ್ಲಿ ಔಪಚಾರಿಕ ನೆಲೆಯಲ್ಲಿ ವ್ಯಾಪಕವಾಗಿ ನಡೆಯಲಿಲ್ಲವಾದರೂ, ನಮ್ಮ ಗ್ರಾಮಾಂತರ ಮತ್ತು ಅರೆ ಪಟ್ಟಣ ಪ್ರದೇಶಗಳಲ್ಲಿ ನಮ್ಮ ಸಾಮಾನ್ಯ ಜನರೇ ವೈಯಕ್ತಿಕ ಮತ್ತು ಸಾಮೂಹಿಕ ಸಾಹಸಗಳ ಮೂಲಕ ಕೃಷಿ, ನೀರಾವರಿ ವಿದ್ಯುತ್ ಮುಂತಾದ ಕ್ಷೇತ್ರಗಳಲ್ಲಿ ಪ್ರಯೋಗ ಮಾಡಿ ಆಚರಣೆಗೆ ತಂದಿರುವುದನ್ನು ನಾವು ಕಾಣಬಹುದು. ಆದರೆ, ಸಮಾಜವಾದಿ ಪಕ್ಷಗಳು ಅಧಿಕಾರದಲ್ಲಿದ್ದ ಜರ್ಮನಿ, ಫ್ರಾನ್ಸ್ ಸ್ವೀಡನ್, ಸ್ವಿಟ್ಜರ್‌ಲೆಂಡ್ ಮುಂತಾದ ಪಶ್ಚಿಮ ಯೂರೋಪ್‌ನ ಕೆಲ ದೇಶಗಳಲ್ಲಿ ಜರ್ಮನಿಯ ಗಾಂಧಿವಾದಿ ಅರ್ಥಶಾಸ್ತ್ರಜ್ಞ ಷೂಮಾಕರ್ ಅವರ 'ಸ್ಮಾಲ್ ಈಸ್ ಬ್ಯೂಟಿಫುಲ್'–'ಸಣ್ಣದು ಸುಂದರ'–ಪುಸ್ತಕ/ತತ್ವದ ಸ್ಫೂರ್ತಿಯಲ್ಲಿ–ಔಪಚಾರಿಕವಾಗಿಯೇ ಇದು 'ಅಪ್ರಾಪ್ರಿಯೇಟ್ ಟೆಕ್ನಾಲಜಿ ಎಂಬ ಹೆಸರಿನಲ್ಲಿ ಅನೇಕ ಯಶಸ್ವಿ ಪ್ರಯೋಗಗಳನ್ನು ಕಂಡವು. ಮಾವೋ ಕಾಲದ ಚೀನಾ ಮತ್ತು ಹೊಚಿ ಮಿನ್ ಕಾಲದ ವಿಯಟ್ನಾಂಗಳಲ್ಲೂ ಇಂತಹ ಪ್ರಯೋಗಗಳು ವ್ಯಾಪಕವಾಗಿ ನಡೆದವು.)

(ಚಾಮರಾಜನಗರದ 'ದೀನಬಂಧು' ಸಂಸ್ಥೆ ಹೊರತರುತ್ತಿರುವ 'ಅನುಭವಲೋಕ' ಮಾಸಿಕದ ಶಿಕ್ಷಣ ಕುರಿತ ವಿಶೇಷಸಂಚಿಕೆಗಾಗಿ ಬರೆದ ಲೇಖನ)

ಧರಮ್‌ಪಾಲ್ ಕುರಿತ ಕೆ.ವಿ. ಅಕ್ಷರ ಅವರ ಲೇಖನದ ಬಗ್ಗೆ

ಪ್ರಿಯ ಅಕ್ಷರ,

ನೀವು ವಿಶ್ವಾಸಪೂರ್ವಕವಾಗಿ ಕಳಿಸಿದ ಧರಮ್‌ಪಾಲ್ ಸಾಹಿತ್ಯ ಕುರಿತ ಲೇಖನವನ್ನು ಈಗ ತಾನೇ ಓದಿ ಮುಗಿಸಿದೆ. ಇದರಲ್ಲಿ ನೀವು ಧರಮ್‌ಪಾಲ್ ಅವರ ವಿಚಾರಗಳನ್ನು ಸಾಕಷ್ಟು ಸಮಗ್ರವಾಗಿ ಪರಿಚಯ ಮಾಡಿಕೊಟ್ಟಿರುವಿರಲ್ಲದೆ, ಅವರ ವಿಚಾರಗಳ ಹಿನ್ನೆಲೆಯಲ್ಲಿ ಸಮಕಾಲೀನ ಸಂದರ್ಭಕ್ಕೆ ಸಂಬಂಧಪಟ್ಟಂತೆ ಉಚಿತ ಪ್ರಶ್ನೆಗಳನ್ನೂ ಎತ್ತಿದ್ದೀರಿ. ಧರಮ್‌ಪಾಲ್ ಅವರು ಜೆ.ಸಿ. ಕುಮಾರಪ್ಪ ಮತ್ತು ಆನಂದ ಕುಮಾರಸ್ವಾಮಿಯವರಂತೆಯೇ ನಾವು ಆಧುನಿಕತೆಯ ಉಬ್ಬರದಲ್ಲಿ ನಿರ್ಲಕ್ಷಿಸಿದ ಬಹು ಅಮೂಲ್ಯ ಪ್ರತಿಭೆಗಳು.

ನಾನು ತೊಂಬತ್ತರ ದಶಕದಲ್ಲಿ ಧರಮ್‌ಪಾಲ್‌ರನ್ನು ಒಮ್ಮೆ ಭೇಟಿ ಮಾಡಿದ್ದೆ. ಅವರು ಬೆಂಗಳೂರು ವಿಶ್ವವಿದ್ಯಾಲಯದ ಗಾಂಧಿ ಭವನಕ್ಕೆ ಭೇಟಿ ನೀಡಲು ಬಂದಾಗ ಆಕಸ್ಮಿಕವಾಗಿ ನಾನೂ ಅಲ್ಲಿದ್ದು ಅವರನ್ನು ಮಾತಾಡಿಸಿದ್ದ ನೆನಪು ಇನ್ನೂ ಹಸಿರಾಗಿದೆ. ಯಾರೋ ನನ್ನನ್ನು ಲೋಹಿಯಾ ಅಭಿಮಾನಿ ಎಂದು ಪರಿಚಯಿಸಿದಾಗ ಅವರು ಬಹು ಉಲ್ಲಸಿತರಾಗಿ 'Oh, he was the only creative Gandhian of our times. Others are quakes!' ಎಂದು ಹೇಳಿದ ಮಾತುಗಳು ಆಗ ನನ್ನ ಮನಸ್ಸನ್ನು ಬೆಚ್ಚಗೆ ಮಾಡಿದ್ದರ ಅನುಭವ ನನ್ನನಲ್ಲಿ ಇನ್ನೂ ಜೀವಂತವಿದೆ. ನಂತರ ಗಾಂಧಿ ಭವನದಲ್ಲಿನ ಅವರ ವಾಸ್ತವ್ಯದ ಬಗ್ಗೆ ಯಾರದೋ ಬಳಿ ಹೇಳಿದ ಮಾತು ಆಗ ನಮ್ಮ ಕೆಲ ಗೆಳೆಯರ ಬಾಯಲ್ಲಿ ಕೇಳಿದ್ದೆ. ಗಾಂಧಿ ಭವನದ ಅತಿಥಿ ಗೃಹ ಎಲ್ಲ ಆಧುನಿಕ ಸೌಲಭ್ಯಗಳಿಂದ ಸಜ್ಜಾಗಿ ಅವರನ್ನು 'ಚಕಿತ'ಗೊಳಿಸಿತಂತೆ. ಆದರೆ ಅವರು ಸ್ನಾನ ಮಾಡಲು ಗೀಸರ್‌ನ ಸ್ವಿಚ್ ಹಾಕಿದಾಗ ವಿದ್ಯುತ್ ಇರಲಿಲ್ಲ ಮಾತ್ರವಲ್ಲ, ಅಂದು ಇಡೀ ದಿನ ವಿದ್ಯುತ್ ಬರಲಿಲ್ಲವಂತೆ. ಇದು ನಮ್ಮ ಅಬಿವೃದ್ಧಿ ಮಾದರಿಯ ಅಶ್ಲೀಲತೆ ಎಂದು ಅವರು ಹೇಳಿದ್ದರಂತೆ!

ನಾನು ಏಳೆಂಟು ವರ್ಷಗಳ ಹಿಂದೆಯೇ 'ದ ಬ್ಯೂಟಿಫುಲ್ ಟ್ರೀ' ಓದಿದ್ದೆ. (ಮೈಸೂರಿನ ಗೆಳೆಯ ರಾಮಶೇಷರ ಪಿಡಿಎಫ್ ಕೃಪೆಯಿಂದ!) ಆರೇಳು ವರ್ಷಗಳ ಹಿಂದೆ ಕುವೆಂಪು ವಿಶ್ವವಿದ್ಯಾಲಯದಲ್ಲಿ ಬಾಲಗಂಗಾಧರರನ್ನು 'ಮುಖಾಮುಖಿ'ಯಾದ ಸಂದರ್ಭದಲ್ಲಿ ಜಾತಿ ಪದ್ಧತಿ ಕುರಿತ ಅವರ ವಾದದ ಅರ್ಧ ಸತ್ಯದ ಬಗ್ಗೆ ನಾನು ಮಾತಾಡಹೊರಟಾಗ ಅವರು ತುಂಬ ಒರಟಾಗಿ ನೀವು ಮೊದಲು ಧರಮ್‌ಪಾಲರನ್ನು ಓದಿ ನನ್ನ ಬಳಿ ಚರ್ಚೆಗೆ ಬನ್ನಿ ಎಂದು ನನ್ನತ್ತ ಕಿರುಚಿದ ಮೇಲೂ ಆ ಪುಸ್ತಕವನ್ನು ಮತ್ತೊಮ್ಮೆ ಗಮನಿಸಿದ್ದೆ. (ರೈತ ಸಂಘದ ಪ್ರೊ. ನಂಜುಂಡಸ್ವಾಮಿಯವರೂ ಹೀಗೆ ತಮ್ಮ ಮಾತುಗಳನ್ನು ಪ್ರಶ್ನಿಸಿದವರನ್ನು ಮೊದಲು ಅದು ಓದಿಕೊಂಡು ಬನ್ನಿ, ನಿಮ್ಮೂರ ಚರಿತ್ರೆ ತಿಳಿದುಕೊಂಡು ಬನ್ನಿ ಎಂದು ಹೇಳಿ ಕಂಗೆಡಿಸಿ ಕಳಿಸುತ್ತಿದುದನ್ನೂ ನಾನು ನೋಡಿದ್ದೆ) ಆದರೆ ಈ ಪುಸ್ತಕವನ್ನು ಎರಡು ಬಾರಿ ಗಮನಿಸಿದಾಗಲೂ ನನ್ನಲ್ಲಿ ಹಲವು ಪ್ರಶ್ನೆಗಳು ಎದ್ದಿದ್ದು ಮಾತ್ರ ನಿಜ.

ಈ ಪುಸ್ತಕ ತಿಳಿಸುವಂತೆ ಆಧುನಿಕ ಪೂರ್ವ ಭಾರತದಲ್ಲಿ ಶಾಲಾ ಶಿಕ್ಷಣ ಅಷ್ಟು ವ್ಯಾಪಕವಾಗಿದ್ದಿದ್ದಲ್ಲಿ ನಮ್ಮ ಹಿರಿಯರಿಗಾದರೂ ಅದರ ನೆನಪುಗಳು ಒಂದಲ್ಲ ಒಂದು ರೂಪದಲ್ಲಿ ಸಾಗಿಬರಬೇಕಿತ್ತಲ್ಲವೇ? ಇತ್ತೀಚಿನವರೆಗೂ ನಮ್ಮ ದೇಶದ ಅಕ್ಷರತೆ ತುಂಬಾ ನಗಣ್ಯ ಪ್ರಮಾಣದಲ್ಲೇ ಇತ್ತಲ್ಲವೆ? ಕಳೆದ ಶತಮಾನದಲ್ಲೂ ನಮ್ಮ ಜನ ಶಾಲೆಗಳಿಗೆ ಸೇರಲು ಯಾಕೆ ಹಿಂಜರಿಯುತ್ತಿದ್ದರು? ಸಾರ್ವತ್ರಿಕ ಶಿಕ್ಷಣದ ಪರಂಪರೆಯೇ ನಮಗಿದ್ದಿದ್ದಲ್ಲಿ ಮಹಾರಾಷ್ಟ್ರದಲ್ಲಿ ಮಹಿಳೆಯರಿಗೆ ಓದು ಬರಹ ಕಲಿಸಲು ಹೋಗುತ್ತಿದ್ದ ಸಾವಿತ್ರಿಬಾಯಿ ಫುಲೆಯವರತ್ತ ಸಮಾಜ ಸಗಣಿ ಎರಚುವಷ್ಟು ಅಸಹನೆ ಏಕಿರುತ್ತಿತ್ತು? ಅಲ್ಲಿ ಶಾಲೆಗಳಿಗೆ ಶೂದ್ರ-ದಲಿತ ಮತ್ತು ಮಹಿಳೆಯರಿಗೆ ಸರ್ಕಾರದ ಆದೇಶದಂತೆ ಪ್ರವೇಶ ದೊರಕಿದಾಗ ತಿಲಕರಂಥವರೇ ಏಕೆ ಅದನ್ನು ಬದುಕು-ಸಾವಿನ ಪ್ರಶ್ನೆಯಂತೆ ಕಡೆ ತನಕ (ನ್ಯಾಯಾಲಯಗಳಿಗೂ ಹೋಗಿ!) ವಿರೋಧಿಸಿದರು? ನಮ್ಮ ರಾಜ್ಯದಲ್ಲೇ ಉನ್ನತ ಶಿಕ್ಷಣಾಧಿಕಾರಿ ಸಿ.ಆರ್ ರೆಡ್ಡಿಯವರ ಕಾಲದಲ್ಲಿ ಎಲ್ಲ ಜಾತಿಗಳಿಗೆ ಒಟ್ಟಿಗೆ ಶಿಕ್ಷಣ ಕೊಡುವ ಪದ್ಧತಿಗೆ ವಿರೋಧ ಬಂದು ಅವರು ರಾಜ್ಯವನ್ನೇ ತೊರೆದುಹೋಗುವಂತಾದುದೇಕೆ?

ನನ್ನ ಊಹೆಯಂತೆ ಧರಮ್‌ಪಾಲ್ ಹೇಳುವ ಶಾಲೆಗಳು ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಾಗಿರದೆ-ಅವನ್ನು ಒಂದು ವ್ಯವಸ್ಥೆಯಾಗಿ ನಡೆಸಲಾದರೂ ಸ್ಥಳೀಯ ಅಧಿಕಾರ ರಚನೆಗಳು ಎಲ್ಲಿದ್ದವು?- ಅವು ಕೆಲವು ಸಮುದಾಯಗಳು ನಡೆಸುತ್ತಿದ್ದಂತಹ 'ಕೂಲಿಮಠ'ಗಳ ಮಾದರಿಯದ್ದಾವಗಿರಬೇಕು. ಅಂದಿನ ಜನಸಂಖ್ಯೆಯ ಹಿನ್ನೆಲೆಯಲ್ಲಿ ನೋಡಿದಾಗ ಅವರು ಹೇಳುವಂತೆ ಬಿಹಾರ-ಬಂಗಾಳಗಳೆರಡರಲ್ಲೇ ಲಕ್ಷಾಂತರ ಸಂಖ್ಯೆಯಲ್ಲಿರಲಾರವು. ಒಟ್ಟು ವಿದ್ಯಾಥಿಗಳ ಸಂಖ್ಯೆ ಅದಿರಬಹುದು. ನಿಜ, ಮೆಕಾಲೆ ನಂತರದ ನಮ್ಮ ಶಿಕ್ಷಣ ಪದ್ಧತಿ ದಾರಿ ತಪ್ಪಿತು. ಆದರೆ ಅದಕ್ಕಿಂತ ಮುಂಚೆ ಎಲ್ಲ

ಸರಿಯಿತ್ತು ಎಂದು ಹೇಳಲು 'ವರದಿ'ಗಳ ಹೊರತಾಗಿ ಇನ್ನಾವ 'ಜೀವಂತ ಸ್ಪಂದನೆ'ಯ ಸಾಕ್ಷಿಗಳೂ ದೊರಕುತ್ತಿಲ್ಲ. ಈ ದಿಸೆಯಲ್ಲಿ ಇನ್ನಷ್ಟು 'ಉತ್ಖನನ' ಅಗತ್ಯವೇನೋ.

ನಿಜ, ಬ್ರಿಟಿಷರು ಬರುವ ಮುನ್ನ ಈ ದೇಶ ಮೃತ ಸ್ಥಿತಿಯಲ್ಲಿತ್ತು ಎಂದು ಹೇಳುವ ಆಧುನಿಕರ ಮಾತು ಮರುಳರ ಮಾತಷ್ಟೆ. ದೇಶ ತನ್ನದೇ 'ವ್ಯವಸ್ಥೆ' ಮತ್ತು ಮೌಲ್ಯಗಳಿಗನುಸಾರ ಜೀವಂತವೇ ಇತ್ತು. ಆದರೆ ಅದು ಎಲ್ಲ ರೀತಿಯಲ್ಲಿ ನ್ಯಾಯಯುತವಾಗಿತ್ತು ಎಂದು ಹೇಳಲು ನನಗೆ ಧೈರ್ಯ ಸಾಲದು. ಆದರೆ ಇದು ಆಧುನಿಕರ ದೃಷ್ಟಿಯನ್ನು ವಕ್ರ ಎಂದು ಕರೆಯಲು ನಮ್ಮನ್ನು ಹಿಂಜರಿಸಬಾರದು ಎಂದೂ ನಾನು ಭಾವಿಸಿದ್ದೇನೆ. ಮುಖ್ಯವಾಗಿ ಜಾತಿ ಪದ್ಧತಿ (ಇದನ್ನು ಬಾಲಗಂಗಾಧರರು ಜಾತಿ 'ವ್ಯವಸ್ಥೆ' ಎಂದು ಕರೆದುಕೊಂಡು, ಅವರ ನಿಘಂಟಿನ ಅರ್ಥದ ವ್ಯವಸ್ಥೆಯ ಗುಣಗಳು ಅದರಲ್ಲಿಲ್ಲ ಎಂದು ವಾದಿಸುತ್ತಾ ತಾವೂ ದಾರಿ ತಪ್ಪಿ ಇತರರನ್ನೂ ದಾರಿ ತಪ್ಪಿಸಿದ್ದಾರೆಂದು ನನ್ನ ಅನ್ನಿಸಿಕೆ.) ಆಧುನಿಕರು ಚಿತ್ರಿಸಿದಷ್ಟು ರೂಕ್ಷವಾಗಿ ಇದ್ದಿರಲಿಲ್ಲವೇನೋ. ಆದರೆ ಅದು (ಕನಿಷ್ಟ ಅದರ ಆಧುನಿಕ ಪೂರ್ವ ರೂಪದಲ್ಲಿ) ಯಾವುದೇ ಅರ್ಥದಲ್ಲಿ ನ್ಯಾಯಯುತವಾಗಿತ್ತು ಎಂದು ನಂಬಲು ನನಗೆ ಸಾಧ್ಯವಾಗುತ್ತಿಲ್ಲ. ನನ್ನ ಪ್ರಕಾರ ಇಂದು ಜಾತಿ ಪದ್ಧತಿ ಎನ್ನುವುದು ರೂಢಿ-ನಿಮಗಳಿಗಿಂತ ಹೆಚ್ಚಾಗಿ ಮಾನಸಿಕ ಅನುಭವಕ್ಕೆ ಬರುವ ಒಂದು ವಾತಾವರಣ ರೂಪದಲ್ಲಿದೆ ಎನಿಸುತ್ತದೆ.

ಇನ್ನು ಪಂಚಾಯತ್‌ಗಳ ಬಗ್ಗೆ ಧರಮ್‌ಪಾಲ್ ಅವರ ಬರಹದ ಬಗ್ಗೆ ಹೇಳುವುದಾದರೆ, ಅವರು ಸಮಾಜವಾದಿ ಆಂದೋಲನದೊಂದಿಗೆ ಹೊಂದಿದ್ದ ಸ್ನೇಹದ ಪರಿಣಾಮವಾಗಿ ಜೆಪಿಯವರು ಆರಂಭಿಸಿದ್ದ 'ಅಖಿಲ ಭಾರತ ಪಂಚಾಯತ್ ಪರಿಷತ್'ನ ಸ್ಫೂರ್ತಿಯಲ್ಲಿ (ಈ ಕೆಲಸಕ್ಕಾಗಿ ಜೆಪಿಯವರಿಗೆ ಮ್ಯಾಗ್ಸಸ್ಸೇ ಪ್ರಶಸ್ತಿ ಲಭಿಸಿತ್ತು) ಮತ್ತು ಸರ್ಕಾರಿ ಪ್ರಾಯೋಜಿತ ಎಸ್.ಕೆ. ಡೇ ಅವರ ಅಧ್ಯಯನಕ್ಕೆ ಸಮಾನಾಂತವಾಗಿ ಈ ಕೆಲಸ ಮಾಡಿದರೆಂದು ಕಾಣುತ್ತದೆ. ಇದರ ಪ್ರಸ್ತಾಪ ನನ್ನ ಜೆಪಿ ಕುರಿತ ಪುಸ್ತಕದಲ್ಲಿ ಸಂಕ್ಷಿಪ್ತವಾಗಿ ಬರುತ್ತದೆ.

ಸದ್ಯಕ್ಕೆ ಇಷ್ಟು ಯೋಚಿಸಲು, ಬರೆಯಲು ನೆಪ ಮಾಡಿಕೊಟ್ಟ ನಿಮ್ಮ ಬರಹಕ್ಕಾಗಿ ನಿಮಗೆ ಧನ್ಯವಾದಗಳು.

(೧೭ ಫೆಬ್ರುವರಿ, ೨೦೧೯)

'ಗಾಂಧಿ ಕಥನ' : ಸಂಪಾದಕರಿಗೆ ಪತ್ರ

ಪ್ರಿಯ ಸಂಪಾದಕರೇ,

ನನ್ನ 'ಗಾಂಧಿ ಕಥನ' ಕುರಿತಂತೆ 'ಸಂವಾದ'ದ ೨೦೧೯ರ ನವೆಂಬರ್ ಸಂಚಿಕೆಯಲ್ಲಿ ಗೆಳೆಯ ರಾಜೇಂದ್ರ ಚೆನ್ನಿಯವರು ಬರೆದ ಅವಲೋಕನ ನೋಡಿದೆ. ಈ ಅವಲೋಕನಕ್ಕಾಗಿ ಚೆನ್ನಿಯವರಿಗೂ, ಇದನ್ನು ಪ್ರಕಟಿಸಿದ ತಮಗೂ ಧನ್ಯವಾದಗಳನ್ನು ತಿಳಿಸಬಯಸುತ್ತೇನೆ.

ತನ್ನ ಪುಸ್ತಕದ ವಿಮರ್ಶೆಯ ಬಗ್ಗೆ ಲೇಖಕ ಉಸಿರೆತ್ತಬಾರದೆಂಬ ನಮ್ಮ ಸಾಹಿತ್ಯ ಲೋಕದ 'ಸಭ್ಯತೆ'ಯ ನಿಯಮ ನನಗೆ ಗೊತ್ತಿರುವುದಾದರೂ, ಆ ನಿಯಮದ ಉಲ್ಲಂಘನೆಯಾಗಲಾರದೆಂಬ ವಿಶ್ವಾಸದಿಂದ ಈ ಅವಲೋಕನ ಬರಹದಲ್ಲಿನ ಎರಡು ವಿಷಯಗಳ ಬಗ್ಗೆ ನಾಲ್ಕು ಮಾತು ಬರೆಯುತ್ತಿದ್ದೇನೆ–

೧. ನಾನು ಗಾಂಧಿ ಕುರಿತ ಒಂದು 'ವ್ಯವಸ್ಥಿತ ಕೈಪಿಡಿ' ಬರೆಯಹೊರಟು ಈ ಕೃತಿಯನ್ನು ಬರೆದಿದ್ದೇನೆ ಎಂಬ ಅಭಿಪ್ರಾಯ ಉಂಟಾಗುವಂತಹ ಕೆಲವು ವಾಕ್ಯಗಳು ಚೆನ್ನಿಯವರ ಬರಹದಲ್ಲಿವೆ. ಆದರೆ ಅದು ತಪ್ಪು ಗ್ರಹಿಕೆ ಅಥವಾ ನನ್ನ ಮಾತುಗಳಲ್ಲಿನ ದೋಷ. ವಾಸ್ತವ ಸಂಗತಿ ಎಂದರೆ, ಈ ಕೃತಿಯ ಪ್ರಕಾಶಕರಾದ ಎಂ.ಸಿ. ನರೇಂದ್ರ ಅವರು ತಮ್ಮ ಶಾಲೆಯಲ್ಲಿ ಮಕ್ಕಳಿಗೆ ಗಾಂಧಿ ಪಾಠ ಹೇಳಲು ಒಂದು ವ್ಯವಸ್ಥಿತ ಕೈಪಿಡಿ ಲಭ್ಯವಿಲ್ಲ ಎಂದು ಅಲವತ್ತುಕೊಂಡಾಗ ಅದನ್ನು ನಾನು ಬರೆದುಕೊಡುವುದಾಗಿ ಹೇಳಿದೆ. ಅನತಿ ಕಾಲದಲ್ಲಿ ಅದನ್ನು ಬರೆಯಲು ಆರಂಭಿಸಿ ಅದರ ಚೌಕಟ್ಟಿಗಾಗಿ ಅದಕ್ಕೊಂದು ಮುನ್ನುಡಿಯನ್ನೂ ಬರೆದೆನೆಂದು 'ಗಾಂಧಿ ಕಥನ' ಕೃತಿಯ 'ಲೇಖಕನ ಮಾತು'ಗಳಲ್ಲಿ ಹೇಳಿರುವುದು ನಿಜ. ಆದರೆ ಮಕ್ಕಳಿಗಾಗಿ ಗಾಂಧಿಯನ್ನು ಪರಿಚಯಿಸುವಲ್ಲಿನ ಸದ್ಯದ ಕಷ್ಟಗಳು ಮನದಟ್ಟಾಗುತ್ತಿದ್ದಂತೆ ಆ ಯೋಜನೆಯನ್ನು ಕೈಬಿಟ್ಟೆನೆಂದೂ ಈ 'ಲೇಖಕನ ಮಾತು'ಗಳಲ್ಲಿಯೇ ಸ್ಪಷ್ಟವಾಗಿ ಹೇಳಿರುವೆ. ಹಾಗಾಗಿ (ಕೈಬಿಟ್ಟ) ಆ ಯೋಜನೆಗೂ ಸದ್ಯದ ಈ ಕೃತಿಗೂ ಸಂಬಂಧವಿಲ್ಲ. ಆದರೆ ಚೆನ್ನಿಯವರ ಈ ಅವಲೋಕನ ಬರಹದಲ್ಲಿ ಆಗಿರುವ ಅದರ ಪ್ರಸ್ತಾಪದ ರೀತಿ, ಕೈಬಿಟ್ಟ ಆ ಮುನ್ನುಡಿ ಈ ಕೃತಿಯದ್ದೆಂಬಂತೆ ಸೂಚಿತವಾಗಿದೆ. ಇದು ಈ ಕೃತಿ ಕುರಿತಂತೆ ತಪ್ಪು ಗ್ರಹಿಕೆಗೆ ಕಾರಣವಾಗಬಹುದೆಂಬ ಸಂದೇಹದಿಂದಷ್ಟೇ ಈ ಸ್ಪಷ್ಟೀಕರಣ.

೨. ಚೆನ್ನಿಯವರು ಕೃತಿಯಲ್ಲಿನ ಮಾಹಿತಿಯ ಬಗ್ಗೆ ಬರೆಯುತ್ತಾ ಪೂನಾ ಒಪ್ಪಂದದ ವಿಷಯದಲ್ಲಿ ಗಾಂಧಿ ತಪ್ಪಿತಸ್ಥರೆಂಬ ತಮ್ಮ ಅಭಿಪ್ರಾಯವನ್ನು ನಮೂದಿಸಿದ್ದಾರೆ. ಅವರ

ಅಭಿಪ್ರಾಯವನ್ನು ನಾನು (ಒಪ್ಪದೆಯೂ) ಗೌರವಿಸುತ್ತಲೇ ಹೇಳುವುದಾದರೆ, ಈ ಅವಲೋಕನದಲ್ಲಿ ಈ ಪುಸ್ತಕದ ಸ್ವರೂಪದ ಬಗ್ಗೆ ಅವರೇ ಹೇಳಿರುವ ಪ್ರಸ್ತಾವನೆಯ ಮಾತುಗಳ ಹಿನ್ನೆಲೆಯಲ್ಲಿ ಈ ಅಭಿಪ್ರಾಯ ವ್ಯಕ್ತಡಿಸುವಿಕೆ ಇಲ್ಲಿ ಅನುಚಿತವಾಗಿ ಕಾಣುತ್ತದೆ. ಅಂಬೇಡ್ಕರ್ ವಿಚಾರಗಳ ಪ್ರಾಧಾನ್ಯದ 'ಸಂವಾದ'ದಂತಹ ಪತ್ರಿಕೆಗಾಗಿ ಈ ಅವಲೋಕನ ಬರೆದ ಕಾರಣಕ್ಕೇ ಇದು ಚೆನ್ನಿಯವರಿಗೆ ಅನಿವಾರ್ಯವಾಗಿ ಕಂಡಿರಬಹುದು. ಹಾಗಿದ್ದರೆ ಅದು ನನ್ನ ಪ್ರಕಾರ ತಪ್ಪು. ಏಕೆಂದರೆ ಈ ಪುಸ್ತಕದಲ್ಲಿ ನಿರೂಪಿತವಾಗಿರುವ ಘಟನಾವಳಿಯನ್ನು ಗಮನಿಸಿದ ಮತ್ತು ಇತರ ಹಲವು ಕೃತಿಗಳನ್ನು ಓದಿಕೊಂಡ ಚೆನ್ನಿಯವರಂತಹ ಬಹುಶ್ರುತರಿಗೆ, ಪೂನಾ ಒಪ್ಪಂದದ ಸಂದರ್ಭದಲ್ಲಿ ಮಾತ್ರವಲ್ಲ, ಇನ್ನೂ ಹಲವು ಕಡೆ ಗಾಂಧಿ ತಪ್ಪಿತಸ್ಥರಂತೆ ಕಾಣುವ ಸಾಧ್ಯತೆ ಇತ್ತೆಂದು ನನ್ನ ಭಾವನೆ. ಆದರೆ ಅವರು ಇದೊಂದನ್ನೇ ಇಲ್ಲಿ ಏಕೆ ಹೇಳುತ್ತಾರೆ? ಹಾಗಿದ್ದರೆ ಮಿಕ್ಕೆಲ್ಲ ಸಂದರ್ಭಗಳಲ್ಲಿ ಗಾಂಧಿ ಸರಿಯಾದ ನಿರ್ಧಾರಗಳನ್ನೇ ತೆಗೆದುಕೊಂಡಿದ್ದರೆಂಬುದು ಚೆನ್ನಿಯವರ ಅಭಿಪ್ರಾಯವೇ? ಹಾಗಿರಲಾರದೆಂಬ ವಿಶ್ವಾಸವೇ ಈ ನನ್ನ ತಕರಾರಿಗೆ ಕಾರಣ.

ಈ ಪುಸ್ತಕ ಬರೆಯುತ್ತಿದ್ದಾಗ ನನಗೇ ಹಲವು ಕಡೆ ಗಾಂಧಿ ತಪ್ಪು ನಿರ್ಧಾರ ಕೈಗೊಂಡಿದ್ದಾರೆ ಎನಿಸಿದೆ. ಆದರೆ ಪುಸ್ತಕದ ರಚನಾ ವಿನ್ಯಾಸದಲ್ಲಿ ಮಾಹಿತಿಯೇ–ನನ್ನ ಕೈ ಮೀರಿ–ಒಂದು (ಪರ ಅಥವಾ ವಿರೋಧದ) ಅಭಿಪ್ರಾಯದ ರೂಪ ತಳೆಯುತ್ತಿದೆ ಎನಿಸಿದಾಗ ಅದಕ್ಕೊಂದು ಚುಚ್ಚುಮದ್ದಾಗಿ ಆ ಸಂದರ್ಭದಕ್ಕೆ ಸಂಬಂಧಿಸಿದಂತೆ ಇತರ ಜೀವನ ಚರಿತ್ರಕಾರರ ವ್ಯಾಖ್ಯಾನಗಳನ್ನು ಉಲ್ಲೇಖಿಸಿದ್ದರ ಹೊರತಾಗಿ ಯಾವುದೇ ಕಾರಣದಿಂದಲೂ ಪುಸ್ತಕ ಗಾಂಧಿಯವರನ್ನು ಕುರಿತ ನನ್ನ ಅಥವಾ ಯಾರದೇ ವಿಮರ್ಶೆಯಾಗಬಾರದೆಂಬ ಎಚ್ಚರದಿಂದ ಬರೆದ ಕೃತಿ ಇದು. ಗಾಂಧಿ ಕುರಿತಂತೆ ಸಮಗ್ರ ಮಾಹಿತಿ ಇಲ್ಲದ; ಆದರೆ ಅವರನ್ನು ಕುರಿತು ಬಂದಿರುವ ನೂರಾರು ವಿಮರ್ಶೆಗಳಿಂದ ಗೊಂದಲಗೊಂಡಿರುವ ಜನರ ಅವಗಾಹನೆಗಾಗಿ ಬರೆದ ಪುಸ್ತಕವಿದು. ಆದರೆ ಇದರಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದೇನೋ ನನಗೆ ತಿಳಿಯದು.

೩. ಚೆನ್ನಿಯವರು ನಾಗಭೂಷಣರು ಸಮಾಜವಾದ, ಲೋಹಿಯಾವಾದ, ಮಾರ್ಕ್ಸ್‌ವಾದ ಇತ್ಯಾದಿ ರಾಜಕೀಯ ಚಿಂತನೆಗಳಲ್ಲಿ ಪರಿಣತಿ ಹೊಂದಿದ್ದಾರೆಂಬ ಅರ್ಥದ ಮಾತನ್ನಾಡುತ್ತಾ, ಈ ಕಾರಣದಿಂದಲೇ ಈ ಪುಸ್ತಕದ ಘೋಷಿತ ಉದ್ದೇಶವನ್ನು ನಿರ್ಲಕ್ಷಿಸಿ ಪೂನಾ ಒಪ್ಪಂದದ ಸಂದರ್ಭದ ಪ್ರಶ್ನೆಯೂ ಸೇರಿದಂತೆ ಹಲವು ವಲಯಗಳಿಂದ ಪ್ರಶ್ನೆಗಳನ್ನು ಆಹ್ವಾನಿಸುತ್ತಾರೆ ಎನ್ನುತ್ತಾರೆ. ಆದರೆ ಗಾಂಧಿ ಕುರಿತ ನನ್ನ ನಿಲುವು–ವಿಮರ್ಶೆಗಳನ್ನು ಈಗಾಗಲೇ ನನ್ನ ಹಲವು ಬರಹಗಳಲ್ಲಿ (ಮುಖ್ಯವಾಗಿ ನನ್ನ 'ಲೋಹಿಯಾ ಜೊತೆಯಲ್ಲಿ' ಮತ್ತು 'ಇಂದಿಗೆ ಬೇಕಾದ ಗಾಂಧಿ' ಪುಸ್ತಕಗಳಲ್ಲಿ) ಮಂಡಿಸಿರುವುದರಿಂದ ಈ ಪ್ರಶ್ನೆಗಳನ್ನು ಈ ಪುಸ್ತಕದ ಚೌಕಟ್ಟನ್ನು ಅರಿತವರಾಗಿಯೂ ಕೇಳುವುದರಲ್ಲಿ ಅರ್ಥವಿಲ್ಲ ಎಂದು ನಾನು ಭಾವಿಸಿದ್ದೇನೆ ಮತ್ತು ಈ ಪುಸ್ತಕ ಬರೆಯುತ್ತಿರುವ ಸಂದರ್ಭದಲ್ಲೇ ನನ್ನಲ್ಲಿ ನನ್ನ ಈ ನಿಲುವು–ವಿಮರ್ಶೆಯ

ಮರುಪರಿಶೀಲನೆಯೂ ನಡೆದಿದ್ದು ಅದನ್ನು ಪ್ರತ್ಯೇಕವಾಗಿ ಬರೆಯುವ ಉದ್ದೇಶವೂ ಇದೆ.

ಹಾಗೆ ನೋಡಿದರೆ, ನಾನು ಗಾಂಧಿ-ಅಂಬೇಡ್ಕರ್‌ಗೆ ಸಂಬಂಧಿಸಿದ ವಿವರ ಮತ್ತು ಘಟನೆಗಳನ್ನು ಹ್ರಸ್ವಗೊಳಿಸಿದ್ದೇನೆ ಎಂಬ ಚೆನ್ನಿವರ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಈ ಪುಸ್ತಕದ ಚೌಕಟ್ಟಿನ ಮಿತಿಗಳೊಳಗೇ, ಈ ವಿಷಯವಾಗಿ ಇಲ್ಲಿ ದಾಖಲಾಗಿರುವಷ್ಟು ಘಟನೆ ಮತ್ತು ಮಾಹಿತಿಯ ವಿವರ ನನಗೆ ತಿಳಿದಂತೆ ಕನ್ನಡದಲ್ಲಿ ಈವರೆಗೆ ಎಲ್ಲಿಯೂ ಕಂಡುಬಂದಿಲ್ಲ. ಅಂಬೇಡ್ಕರ್ ನವ ಭಾರತದ ಕಾನೂನು ಮಂತ್ರಿಯಾಗಿ ಮತ್ತು ಸಂವಿಧಾನ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುವ ಜವಾಬ್ದಾರಿಯನ್ನು ಸ್ವೀಕರಿಸುವ ಹೊತ್ತಿಗೆ (ಅಮೃತಾ ಕೌರ್ ಬಳಿ ಅವರು ಮಂಡಿಸಿದ್ದ) ನಿಮ್ನ ವರ್ಗಗಳಿಗೆ ಪ್ರತ್ಯೇಕ ಮತಕ್ಷೇತ್ರಗಳ ತಮ್ಮ ಷರತ್ತನ್ನು ಕೈಬಿಟ್ಟಿದ್ದರು ಎಂಬ ಮಾಹಿತಿಯೂ ಇದರಲ್ಲಿ ಸಿಕ್ಕಿದೆ ಎಂಬುದನ್ನು ಚೆನ್ನಿಯವರು ಗಮನಿಸಿದಂತಿಲ್ಲ.

೪. ಇನ್ನು ಗಾಂಧಿ ಮತ್ತು ಬಂಡವಾಳಶಾಹಿ ನಡುವಣ ಸಂಬಂಧದ ಬಗ್ಗೆ ಹೆಚ್ಚು ಬೆಳಕು ಚೆಲ್ಲಬಹುದಿತ್ತು ಎಂಬ ಚೆನ್ನಿಯವರ ಮಾತಿನ ಬಗ್ಗೆ ಹೇಳುವುದಾದರೆ, ಈ ಪುಸ್ತಕದಲ್ಲಿ ಬರುವ ಜೆಪಿ-ಗಾಂಧಿ ಸಂವಾದ, ಲೂಯಿ ಫಿಶರ್ ಮತ್ತು ರೊಮೈನ್ ರೊಲ್ಯಾಂಡ್‌ರು ಗಾಂಧಿಯೊಂದಿಗೆ ನಡೆಸುವ ಪ್ರಶ್ನೋತ್ತರಗಳಲ್ಲದೆ 'ಹರಿಜನ್'ನ ಸಂಚಿಕೆಯೊಂದರಲ್ಲಿ ಒಬ್ಬ ವಿದೇಶಿ ಕಮ್ಯೂನಿಸ್ಟ್ ವಕ್ತಾರನಿಗೆ ನೀಡುವ ಉತ್ತರ ಹಾಗೂ ಅವರ ಅಪರಿಗ್ರಹ ಮತ್ತು ಟ್ರಸ್ಟೀಶಿಪ್ ಪರಿಕಲ್ಪನೆಗಳನ್ನು ಕುರಿತ ನಿರೂಪಣೆಗಳಲ್ಲೇ ಅದರ ಪರಿಚಯವಿದೆ ಎಂದು ನಾನು ಭಾವಿಸಿದ್ದೇನೆ. ಆದರೆ ಚರ್ಚೆಯಿಲ್ಲ. ಏಕೆಂದರೆ ಪುಸ್ತಕದ ಉದ್ದೇಶವೇ ಅದಲ್ಲ. (ಈಗಾಗಲೇ ಈ ಪುಸ್ತಕದ ಗಾತ್ರ ಮತ್ತು ಬೆಲೆ ಕನ್ನಡದ ಸಾಮಾನ್ಯ ಓದುಗನ ಕೈ ಮತ್ತು ಕಿಸೆಗೆ ಭಾರವಾಗುವುದೇನೋ ಎಂಬ ಆತಂಕದ ಮಿತಿ ತಲುಪಿದೆ.) ಒಟ್ಟಿನಲ್ಲಿ ಹೇಳುವುದಾದರೆ, ಇದು ರಾಜಕೀಯ ಚಿಂತನೆಗಳು ಸಂಸ್ಥೀಕರಿಸಲ್ಪಟ್ಟ (Institutionalised) ಮನಸ್ಸುಗಳ ಓದಿಗಾಗಿ ಬರೆದ ಪುಸ್ತಕವಲ್ಲ. ಆದರೆ ಅವರೂ ಓದಿ ತಮ್ಮೊಳಗಿನ ಈ ಸಂಸ್ಥೀಕರಣದ ಸಮಸ್ಯೆಗಳ ಬಗ್ಗೆ ಪುನರಾಲೋಚಿಸಲು ಅವಕಾಶವಿದೆ.

ಕೊನೆಯದಾಗಿ, ಚೆನ್ನಿಯವರು ಅವರ ಮುಂದೆಯೇ ಮಂಡಿಸಿರುವ ಈ ಎಲ್ಲ ನನ್ನ ಸಾರ್ವಜನಿಕ ಹಿತಾಸಕ್ತಿಯ ರಿಟ್ ಪೆಟಿಶನ್‌ಗಳ ಹೊರತಾಗಿಯೂ ಈ ಪುಸ್ತಕದ ಬಗ್ಗೆ ನನ್ನ ನಿರೀಕ್ಷೆಯನ್ನೂ ಮೀರಿ ಬಹು ಒಳ್ಳೆಯ ಮಾತುಗಳನ್ನಾಡಿದ್ದಾರೆ ಎಂದು ತಿಳಿಸಬಯಸುವೆ. ಅವು ನನ್ನಲ್ಲಿ ಹೆಮ್ಮೆ ಮತ್ತು ಸಾರ್ಥಕ ಭಾವವನ್ನುಂಟು ಮಾಡಿವೆ. ಅವರಿಗೆ ಮತ್ತೆ ಹೃತ್ಪೂರ್ವಕ ಧನ್ಯವಾದಗಳನ್ನು ಹೇಳಬಯಸುತ್ತೇನೆ.

– ಡಿ.ಎಸ್. ನಾಗಭೂಷಣ, ಶಿವಮೊಗ್ಗ

(ಸಂವಾದ, ಡಿಸೆಂಬರ್, ೨೦೧೯ರ ಸಂಚಿಕೆ)

‘ಗಾಂಧಿ ಕಥನ’ ಕುರಿತ ನನ್ನ ಕಥನ

ಕಳೆದ ವರ್ಷದ ಸೆಪ್ಟಂಬರ್ ೨೯ರ ಬೆಳಿಗ್ಗೆ ೧೦ ಘಂಟೆಯ ಹೊತ್ತಿಗೇ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ತುಂಬಿ ತುಳುಕಿ ಅದರ ಮೇಲುಪ್ಪರಿಗೆಯಲ್ಲೂ ಜನ ಸೇರಿದ್ದರು. ಹತ್ತೂವರೆ ಹೊತ್ತಿಗೆ ಖ್ಯಾತ ಗಾಯಕಿ ಸಂಗೀತಾ ಕಟ್ಟಿಯವರಿಂದ ಮೀರಾ ಭಜನೆಗಳ ಮಧುರ ಗಾಯನದಿಂದ ಮಹಾತ್ಮ ಗಾಂಧಿಯವರ ೧೫೦ನೇ ಜನ್ಮವರ್ಷಾಚರಣೆಯ ಸಮಾರಂಭ ಆರಂಭವಾಗಿತ್ತು, ಅಂದು ಅಲ್ಲಿ ನಾನು ಇದೇ ಸಂದರ್ಭಕ್ಕೆಂದು ಒಂದು ವರ್ಷದ ಕಾಲ ತಪಸ್ಸಿನಂತೆ ಕೂತು ಬರೆದ ‘ಗಾಂಧಿ ಕಥನ’ ಗ್ರಂಥದ ಬಿಡುಗಡೆಗೆ ವೇದಿಕೆ ಸಿದ್ಧವಾಗಿತ್ತು. ಒಂದು ವರ್ಷ ಕಾಲ ನನ್ನ ಬೆನ್ನು ಬಿದ್ದು ಈ ಪುಸ್ತಕವನ್ನು ಬರೆಸಿದ್ದ ಬೆಂಗಳೂರಿನ ಎಂ. ಮೂನಿಸ್ವಾಮಿ ಅಂಡ್ ಸನ್ಸ್ ಎಂಬ ಪ್ರಕಾಶನ ಸಂಸ್ಥೆಯ ಎಂ.ಸಿ ನರೇಂದ್ರ ಅವರು ಈ ಸಮಾರಂಭವನ್ನು ಏರ್ಪಡಿಸಿದ್ದರು. ಇವರು ನಿಜ ಗಾಂಧಿವಾದಿಯೂ ಆಗಿದ್ದ ಮಾಜಿ ಸಚಿವ ಎಂ. ಚಂದ್ರಶೇಖರ್ ಅವರ ಮಗನಾಗಿ ಅವರ ಹೆಸರಿನಲ್ಲಿ ಸ್ಥಾಪಿಸಿರುವ ಎಂ. ಚಂದ್ರಶೇಖರ ಪ್ರತಿಷ್ಠಾನದ ಆಶ್ರಯದಲ್ಲಿ ಈ ಸಮಾರಂಭವನ್ನು ಏರ್ಪಡಿಸಿದ್ದರು. ಶಿವಮೊಗ್ಗದ ಲೋಹಿಯಾ ಜನ್ಮ ಶತಾಬ್ಧಿ ಪ್ರತಿಷ್ಠಾನವೂ ಇದರೊಂದಿಗೆ ಕೈ ಜೋಡಿಸಿತ್ತು. ಇದಕ್ಕೆ ಕಾರಣ, ಗಾಂಧಿ ಕುರಿತ ಯಾವ ಪುಸ್ತಕದಲ್ಲೂ ಕಾಣದ ಗಾಂಧಿ–ಸಮಾಜವಾದಿಗಳ ಸಂಬಂಧವನ್ನು ಈ ಪುಸ್ತಕದಲ್ಲಿ ಮೊದಲಿಂದ ಕೊನೆವರೆಗೂ ನಿರೂಪಿಸುವ ಪ್ರಯತ್ನ ಮಾಡಲಾಗಿತ್ತು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದ ಈ ಸಮಾರಂಭದಲ್ಲಿ ಹಿರಿಯ ಸಾಹಿತಿ ದೇವನೂರ ಮಹಾದೇವ ‘ಗಾಂಧಿ ಕಥನ’ ಕೃತಿಯನ್ನು ಬಿಡುಗಡೆ ಮಾಡಿದರು. ಅಂದೇ ಪುಸ್ತಕದ ಸುಮಾರು ಮೂರು ನೂರು ಪ್ರತಿಗಳು ಖರ್ಚಾದವು. ಆದರೆ ಮೈಸೂರಿನ ‘ಆಂದೋಲನ’ ಪತ್ರಿಕೆಯ ಹೊರತಾಗಿ ಬೆಂಗಳೂರಿನವೂ ಸೇರಿದಂತೆ ಕರ್ನಾಟಕದ ಯಾವ ಪತ್ರಿಕೆಯೂ ಈ ಸಮಾರಂಭದ ಬಗೆಗೆ ಒಂದು ಸಾಲು ವರದಿಯನ್ನೂ ಪ್ರಕಟಿಸಲಿಲ್ಲ.. ‘ಪ್ರಜಾವಾಣಿ’ ಮಾತ್ರ ಅಮಾಯಕವಾಗಿ ದೇವನೂರ ಮಹಾದೇವ ಅವರ ‘ಭಾಷಣ’ವನ್ನು ಮಾತ್ರ

ವಿವರವಾಗಿ ವರದಿ ಮಾಡಿತ್ತು. ಇದು ನಮ್ಮ ಪತ್ರಿಕೋದ್ಯಮ ತಲುಪಿರುವ ಸ್ಥಿತಿ. ಆದರೇನು, ಈ ಗ್ರಂಥ ವರ್ಷ ಮುಗಿಯುವ ಮುನ್ನವೇ ಐದು ಮುದ್ರಣಗಳನ್ನು (ಇವುಗಳಲ್ಲಿ ಎರಡು, ಹೆಚ್ಚಿನ ಮಾಹಿತಿ ಸೇರ್ಪಡೆಗೊಂಡ ಪರಿಷ್ಕೃತ ಆವೃತ್ತಿಗಳು) ಕಂಡು ಆರನೇ ಮುದ್ರಣಕ್ಕೆ ಸಿದ್ಧವಾಗುತ್ತಿದೆ. ಈ ಪುಸ್ತಕದ ಪುಟ ಸಂಖ್ಯೆ ೧೮ ಪುಟಗಳ 'ಗಾಂಧಿ ಚಿತ್ರ ಸಂಪುಟ'ವೂ ಸೇರಿದಂತೆ ಒಟ್ಟು ೭೨೨ ಪುಟಗಳು. ಮೊದಲ ಮುದ್ರಣದ ಸಂದರ್ಭದಲ್ಲಿ ಸಾದಾ ಪ್ರತಿಗೆ ಆರು ನೂರು ರೂಪಾಯಿಗಳ (ಉತ್ತಮ ಪ್ರತಿಗೆ ಎಂಟು ನೂರು ರೂಪಾಯಿಗಳ) ಬೆಲೆ ಇಟ್ಟಿದ್ದ ಪ್ರಕಾಶಕರು ಪುಸ್ತಕ ಕುರಿತ ಬೇಡಿಕೆಯ ತೀವ್ರತೆಯಲ್ಲಿ ಗಾಂಧಿ ಕುರಿತ ಜನರ ಆಸಕ್ತಿಯ ತೀವ್ರತೆಯನ್ನು ಗಮನಿಸಿ ಹರ್ಷಿತರಾಗಿ ಆ ಬೆಲೆಯನ್ನು ಲಾಭ-ನಷ್ಟಗಳ ಪರಿವೆ ಇಲ್ಲದೆ ೩೫೦ ರೂಪಾಯಿಗಳಿಗೆ ಇಳಿಸಿದರು. ಈಗ ಅದರ ಬೆಲೆ ರೂ. ೩೮೦/- ಪ್ರತಿ ಮುದ್ರಣಕ್ಕೂ ಮುಖಪುಟ ವಿನ್ಯಾಸ ಬದಲಿಸಿದರು. ವರ್ಷದ ಕೊನೆಯಲ್ಲಿ 'ಪ್ರಜಾವಾಣಿ' ನಡೆಸಿದ ಪುಸ್ತಕ ಸಮೀಕ್ಷೆಯಲ್ಲಿ ಪಾಲ್ಗೊಂಡ ಗಣ್ಯ ಸಾಹಿತಿ-ಓದುಗರ ಪೈಕಿ ಬಹುಪಾಲು ಜನ 'ಗಾಂಧಿ ಕಥನ'ವನ್ನು ವರ್ಷದ ಅತ್ಯುತ್ತಮ ಕೃತಿ ಎಂದು ಅಭಿಪ್ರಾಯಪಟ್ಟರು.

ಜನ ಪುಸ್ತಕವನ್ನು ಆಸಕ್ತಿಯಿಂದ ಕೊಳ್ಳುತ್ತಾ ಹೋದರು. ಕೆಲವರು ಐದು-ಹತ್ತು-ಇಪ್ಪತ್ತು-ಐವತ್ತು-ನೂರು ಪ್ರತಿಗಳನ್ನು ಕೊಂಡು ತಮ್ಮ ಆಪ್ತರಿಗೆ ಹಂಚಿದ್ದೂ ಉಂಟು. ಈಗ ನಾಲ್ಕನೇ ಮತ್ತು ಐದನೇ ಮುದ್ರಣದ ಎಲ್ಲ ಎರಡು ಸಾವಿರ ಪ್ರತಿಗಳನ್ನೂ, ಪ್ರಕಾಶಕರು ನೀಡುತ್ತಿರುವ ಇನ್ನಷ್ಟು ಸುಲಭ ಬೆಲೆಯಲ್ಲಿ ಕೊಳ್ಳುತ್ತಿರುವವರು ಗದಗದ 'ಕೆ. ಎಚ್. ಪಾಟೀಲ ಪ್ರತಿಷ್ಠಾನ'ದ ಪರವಾಗಿ ಡಿ.ಆರ್ ಪಾಟೀಲರು. ಇವರು ಮುಂದೆ ಇನ್ನೂ ಎರಡು ಸಾವಿರ ಪ್ರತಿಗಳು ಬೇಕೆಂದು ಹೇಳುತ್ತಿದ್ದಾರೆ. ಇದಕ್ಕೆ ಅವರಿಗೆ ಪ್ರೇರಣೆ ನೀಡಿದವರು ಗಾಂಧಿ ಕಾರ್ಯಕರ್ತರಾದ ಗೆಳೆಯ ಜಿ.ಬಿ. ಶಿವರಾಜು ಅವರು. ಡಿ.ಆರ್. ಪಾಟೀಲರು ಈ ಕೃತಿಯನ್ನು ಮೊದಲ ಮುದ್ರಣದಲ್ಲೇ ಓದಿ ರೋಮಾಂಚಿತರಾಗಿದ್ದಾಗಿ ನನಗೆ ಕರೆ ಮಾಡಿ ಮಾತಾಡಿದ್ದರು. ಬಹುಶಃ ಆ ರೋಮಾಂಚನದ ಫಲವೇ ಈ ಬೃಹತ್ ಪುಸ್ತಕ ಯಜ್ಞ, ಗಾಂಧಿ ಹಬ್ಬ. ೨೦೨೦ರ ಅಕ್ಟೋಬರ್ ೧೩ರಂದು ಗದಗದಲ್ಲಿ ನಡೆಯುವ ಸಮಾರಂಭದಲ್ಲಿ ಕೃತಿಯನ್ನು ಗದಗ ಜಿಲ್ಲೆಯ ಜನರಿಗಾಗಿ ಲೋಕಾರ್ಪಣೆ ಮಾಡಲಾಗುವುದಂತೆ.

ಈ ಕೃತಿಯ ಲೇಖಕನಾಗಿ ನಾನು ಇದನ್ನೆಲ್ಲ ಕಂಡು ನಿಜವಾಗಿಯೂ ನಿಬ್ಬೆರಗಾಗಿದ್ದೇನೆ. ಇತ್ತೀಚಿನ ವರ್ಷಗಳಲ್ಲಿ ರಾಜಕೀಯ (ಬಿರು)ಗಾಳಿ ಬೀಸುತ್ತಿರುವ ದಿಕ್ಕನ್ನು ಕಂಡು, ಇದರ ಅಬ್ಬರದ ಮರೆಯಲ್ಲಿ ಉದ್ದೇಶಪೂರ್ವಕವಾಗಿ ಮತ್ತು ವ್ಯವಸ್ಥಿತವಾಗಿ ನಡೆದಿರುವ ಗಾಂಧಿ ಅವಹೇಳನದ, ಅಪಪ್ರಚಾರದ ಕಾರ್ಯಾಚರಣೆಗಳನ್ನು ಕಂಡು ವಿಚಲಿತನಾಗಿ, ಗಾಂಧಿ ನಮ್ಮ ಜನಮನದಿಂದ ಮರೆಯಾಗಿ ಹೋಗುತ್ತಿದ್ದಾರೆ ಎಂಬ ಆತಂಕಕ್ಕೀಡಾಗಿದ್ದ ನಾನು ಈ ಪುಸ್ತಕ ಕುರಿತ ಜನ ತೋರುತ್ತಿರುವ ಆಸಕ್ತಿ, ಪ್ರೀತಿ ಮತ್ತು ಅಭಿಮಾನಗಳನ್ನು ಕಂಡು ಪುಳಕಿತನಾಗಿದ್ದೇನೆ. ನಾಡಿನಾದ್ಯಂತ ಸಣ್ಣದಾಗಿಯಾದರೂ

ಗಾಂಧಿ ಕುರಿತ ಹೊಸ ಸಂಚಲನ, ಜಾಗೃತಿ ಕಾಣತೊಡಗಿದೆ. ಇದು ಇಂದಿನ ರಾಜಕೀಯ ಬೆಳವಣಿಗೆಗಳು ತನ್ನ ಭ್ರಷ್ಟ, ಮತೀಯ ಮತ್ತು ಪ್ರಜಾಪ್ರಭುತ್ವ ವಿರೋಧಿ ಖೂಳತನಗಳಿಂದ ಕುಲಗೆಟ್ಟು ಹೋಗಿದ್ದರೂ, ಎಲ್ಲವೂ ಇನ್ನೂ ಕಳೆದುಹೋಗಿಲ್ಲ ಎಂಬ ಆಸೆಯನ್ನು ನನ್ನಲ್ಲಿ ಹುಟ್ಟಿಸಿದೆ. ಈ ನಾಡ ಮಣ್ಣಿನಲ್ಲಿ ಗಾಂಧಿ ಜೀವ ಎಲ್ಲೋ ಸುಪ್ತವಾಗಿ ಇನ್ನೂ ಪುಟಿಯುತ್ತಿದೆ.

'ಗಾಂಧಿ ಕಥನ' ಪುಸ್ತಕ ಓದಿದ ಹಲವರು ನನಗೆ ಕರೆ ಮಾಡಿ ಮಾತಾಡಿದ್ದಾರೆ. ಇನ್ನು ಕೆಲವರು ಉತ್ಸಾಹದಿಂದ ಸುದೀರ್ಘವಾಗಿ ಪತ್ರ ಬರೆದಿದ್ದಾರೆ. ದ.ಕ.ದ ಓರ್ವ ಗೃಹಿಣಿಯಂತೂ ಪುಸ್ತಕ ಓದಿ ಎಷ್ಟು ಉತ್ಸಾಹಿತರಾದರೆಂದರೆ ಪ್ರತಿ ದಿನ ತಾವು ಓದಿದ್ದನ್ನು ಸಾರಾಂಶ ರೂಪದಲ್ಲಿ ಟಿಪ್ಪಣಿ ಮಾಡಿಕೊಂಡು ಮರುದಿನ ತಮ್ಮ ಮತ್ತು ನೆರೆಹೊರೆಯ ಮಕ್ಕಳನ್ನು ಕೂಡಿಸಿಕೊಂಡು ಆ ಟಿಪ್ಪಣಿಗಳ ಆಧಾರದ ಮೇಲೆ ಒಂದು ತಿಂಗಳ ಕಾಲ ಗಾಂಧಿ ಕಥೆ ಹೇಳಿದ್ದಾರೆ. ಜೊತೆಗೆ ಅದನ್ನೆಲ್ಲ ಧ್ವನಿಮುದ್ರಿಸಿಕೊಂಡು ರಾಜ್ಯಾದ್ಯಂತ ಇರುವ ತಮ್ಮ ಬಂಧು ಮಿತ್ರರು ಮತ್ತು ಗೆಳೆಯರಿಗೆ ಕಳಿಸಿ ಅವರಲ್ಲಿ ಗಾಂಧಿ ಆಸಕ್ತಿಯನ್ನೂ, ಚರ್ಚೆಯನ್ನೂ ಹುಟ್ಟು ಹಾಕಿದ್ದಾರೆ.

ಇವರೆಲ್ಲರೇನೂ, ಸಾಹಿತಿಗಳಲ್ಲ. ಬೇರೆ ಪರಿಣಿತ ಕ್ಷೇತ್ರಗಳ ಗಣ್ಯ ವ್ಯಕ್ತಿಗಳೂ ಅಲ್ಲ. ಬಹಳ ಜನ ಸಾಮಾನ್ಯ ಓದುಗರು. ಇವರಲ್ಲಿ ಕೆಲವರು ನನಗೇ ಗೊತ್ತಿದ್ದಂತೆ ಗಾಂಧಿ ಕುರಿತು ಅಷ್ಟೇನೂ ಒಳ್ಳೆಯ ಅಭಿಪ್ರಾಯ ಇಲ್ಲದಿದ್ದವರು. ಇಂಥವರ ಪೈಕಿ ಕೆಲವರು ನನ್ನನ್ನು ಸಂಪರ್ಕಿಸಿದಾಗ ಕುತೂಹಲ ಹುಟ್ಟಿಸಿದವರೊಂದಿಗೆ ವಿವರವಾಗಿ ಮಾತನಾಡಿದ್ದೇನೆ. ಪುಸ್ತಕ ಏಕೆ ಇಷ್ಟು ಇಷ್ಟವಾಯಿತೆಂದು ಕೇಳಿದ್ದೇನೆ. ಇವರೆಲ್ಲರ ಒಂದು ಸಾಮಾನ್ಯ ಮಾತೆಂದರೆ, ನಮಗೆ ನಿಜವಾದ ಗಾಂಧಿಯ ಪರಿಚಯವೇ ಆಗಿರಲಿಲ್ಲ. ಅವರ ಕುಟುಂಬ, ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಅವರ ಬದುಕು-ಹೋರಾಟಗಳ ನಿಜ ವಿವರಗಳೇ ಗೊತ್ತಿರಲಿಲ್ಲ. ಸ್ವತಃ ಗಾಂಧಿಯವರ ಕೆಲ ಕೃತಿಗಳ ಅನುವಾದಗಳ ಹೊರತಾಗಿ, ಇದನ್ನೆಲ್ಲ ಪರಿಣಮಕಾರಿಯಾಗಿ ಗೊತ್ತು ಮಾಡುವ ಸಾಹಿತ್ಯವೂ ಕನ್ನಡದಲ್ಲಿ ಇಲ್ಲ. ಗಾಂಧಿ ಎಂದರೆ ನಿಜ ಜೀವನದಲ್ಲಿ ಆಚರಣೆ ಸಾಧ್ಯವಿಲ್ಲದ ಸತ್ಯ-ಅಹಿಂಸೆಗಳ ಓರ್ವ ಆದರ್ಶವಾದಿ ಬೋಧಕ; ನಾವು ಮುಟ್ಟಲು ಸಾಧ್ಯವಿಲ್ಲದಷ್ಟು ಎತ್ತರದಲ್ಲಿರುವ ಮಹಾತ್ಮ ಎಂದುಕೊಳ್ಳುತ್ತಲೇ ಬೆಳೆದವು. ಆದರೆ ಈ ಪುಸ್ತಕ ಗಾಂಧಿಯನ್ನು ನಮ್ಮಂತೆಯೇ ರಕ್ತ ಮಾಂಸಗಳಿಂದ ಕೂಡಿದ, ನಮ್ಮಂತೆಯೇ ಹಲವು ದ್ವಂದ್ವ-ಸಂಕಟ-ದೌರ್ಬಲ್ಯಗಳನ್ನು ಎದುರಿಸುತ್ತಾ, ಅವುಗಳೊಂದಿಗೆ ಅನುಸಂಧಾನ ಮಾಡುತ್ತಾ ತನ್ನ ವ್ಯಕ್ತಿತ್ವವನ್ನು ಕಟ್ಟಿಕೊಂಡ ವ್ಯಕ್ತಿ ಎಂಬುದನ್ನು, ಅವರ ಪ್ರೇಮ ಪ್ರಸಂಗಗಳನ್ನು ಸಾಕಷ್ಟು ವಿವರವಾಗಿ ಹೇಳುತ್ತಲೇ ಮನದಟ್ಟು ಮಾಡುತ್ತದೆ. ಹೀಗೆ ಅವರ ವ್ಯಕ್ತಿತ್ವವನ್ನು ಎಲ್ಲ ಸಾಧ್ಯ ಪಾರ್ಶ್ವಗಳಿಂದಲೂ, ಆದರೆ ಯಾವುದೇ ಆರಾಧನಾ ಭಾವವಿಲ್ಲದೆ ಪ್ರಸ್ತುತಪಡಿಸುತ್ತದೆ. ಆದರೆ ಇಲ್ಲಿ ಭಾವಪೂರ್ಣತೆಗೇನೂ

ಕೊರತೆ ಇಲ್ಲ. ಇದೆಲ್ಲ ಸರಳ. ನೇರ ಭಾಷೆಯಲ್ಲಿ ಘಟನೆಗಳ ಸರಮಾಲೆಯಾಗಿ ಕಥಾ ರೂಪದಲ್ಲಿ ಹರಿದಿದೆ.

ಇನ್ನು ಗಾಂಧಿ ಎಂದರೆ ದೇಶ ವಿಭಜನೆಗೆ ಕಾರಣನಾದ ಮುಸಲ್ಮಾನರ ಮಿತ್ರ, ಹಿಂದೂಗಳ ಶತ್ರು ಎಂದು ಭಾವಿಸಿದ್ದವರೆಂದು ನನಗೆ ಖಚಿತವಾಗಿ ಗೊತ್ತಿದ್ದ ಜನರ ಪೈಕಿ ಒಬ್ಬರ ಈ ಪ್ರತಿಕ್ರಿಯೆ ಸಾಧಾರಣವಾಗಿ ಇಂತಹ ಬಹುಪಾಲು ಓದುಗರೆಲ್ಲರ ಪ್ರತಿಕ್ರಿಯೆಗಳನ್ನು ಪ್ರತಿನಿಧಿಸುತ್ತದೆ ಎಂದು ಹೇಳಬಹುದು: 'ಇಲ್ಲ, ನಾನು ಅವಸರದ ದೇಶ ಮತ್ತು ಹಿಂದೂ ಭಕ್ತಿಯ ಆವೇಶದಲ್ಲಿ ತಪ್ಪು ದಾರಿಗೆ ಎಳೆಯಲ್ಪಟ್ಟಿದ್ದೆ. ಗಾಂಧಿ ನಮ್ಮವರು, ಎಲ್ಲರವರು. ನಿಜವಾಗಿ ಹಿಂದೂಗಳ ಹೆಮ್ಮೆ ಎಂದು ನನಗೀಗ ಅನ್ನಿಸತೊಡಗಿದೆ.' ಗಾಂಧಿ ಕುರಿತ ಪುಸ್ತಕವೊಂದರ ಯಶಸ್ಸಿಗೆ ಇನ್ನೇನು ಬೇಕು?

(೨೦೨೧ರ ಮಾರ್ಚ್‌ವರೆಗೆ 'ಗಾಂಧಿ ಕಥನ' ೧೯ ಮುದ್ರಣಗಳನ್ನು ಕಂಡಿದೆ. ಒಟ್ಟು ೨೦ ಸಾವಿರ ಪ್ರತಿಗಳು ಮಾರಾಟವಾಗಿವೆ)

('ಆಂದೋಲನ'ದ 'ಹಾಡು ಪಾಡು': ೨.೧೦.೨೦೨೦ರ ಸಂಚಿಕೆಯಲ್ಲಿ ಪ್ರಕಟ)

ರಾಜ್‌ಕುಮಾರ್ ಪುರಾಣ

ಕರ್ನಾಟಕದ ಎಲ್ಲ ಸಾಮಾಜಿಕ ಸ್ತರಗಳಿಗೆ ಸೇರಿದ ಕನಿಷ್ಟ ಮೂರು ತಲೆಮಾರುಗಳ ಪ್ರಜ್ಞೆಯನ್ನು ಒಂದಲ್ಲ ಒಂದು ನೆಲೆಯಲ್ಲಿ ರೂಪಿಸಿದ ಶಕ್ತಿ ರಾಜ್‌ಕುಮಾರ್ ಎಂಬುದು ನಿರ್ವಿವಾದದ ಸಂಗತಿ ಎಂಬುದು ನನ್ನ ನಂಬಿಕೆ. ಕನ್ನಡ ಎಂದರೆ ರಾಜ್‌ಕುಮಾರ್ ಎಂಬ ನಂಬಿಕೆ ಜನಸಾಮಾನ್ಯರ ಮಟ್ಟದಲ್ಲಿ ನೆಲೆಯೂರಿದ್ದುದನ್ನೂ ನಾನು ಕಂಡಿದ್ದೇನೆ. ಅಷ್ಟರಮಟ್ಟಿಗೆ ರಾಜ್‌ಕುಮಾರ್ ಕನ್ನಡ ರಾಜ್ಯದ ಏಕೀಕರಣ ಸಂದರ್ಭದಲ್ಲಿ ಹುಟ್ಟಿಕೊಂಡ ಕನ್ನಡ ಭಾಷೆ–ಸಂಸ್ಕೃತಿಗಳನ್ನು ಕುರಿತ ಹೊಸ ಎಚ್ಚರ ಮತ್ತು ನವೋತ್ಸಾಹಗಳ ವಾಹಕರೂ, ಅದಕ್ಕೊಂದು ಸಾಮಾಜಿಕ ಅಭಿವ್ಯಕ್ತಿಯನ್ನು ನೀಡಿ ಸಾಧಕರೂ ಆದರು. ಅವರ ಮೊದಲ ಚಿತ್ರ 'ಬೇಡರ ಕಣ್ಣಪ್ಪ' ಬಿಡುಗಡೆಯಾದದ್ದು(೧೯೫೪) ಕರ್ನಾಟಕ ಏಕೀಕರಣ ಚಳುವಳಿಯ ಸಂದರ್ಭದಲ್ಲೇ ಮತ್ತು ಕನ್ನಡ ಚಿತ್ರರಂಗವೆಂಬುದು ಸಾಮಾನ್ಯ ಜನತೆಯ ಹೆಚ್ಚಿನ ಆಸಕ್ತಿ–ಕುತೂಹಲಗಳನ್ನು ಸೆಳೆಯಲಾರಂಭಿಸಿದ್ದೂ ಈ ಚಿತ್ರದ ಮೂಲಕವೇ ಎಂಬುದನ್ನು ನಾವು ಮರೆಯಲಾಗದು.

ಕನ್ನಡ ರಾಜ್ಯದ ಏಕೀಕರಣದ ಶಕ್ತಿಗಳು ಗರಿಗೆದರತೊಡಗಿದ್ದ ಸಂದರ್ಭದಲ್ಲಿ ಹುಟ್ಟಿದ ನನ್ನಂಥವನಿಗೆ ನವ ಕರ್ನಾಟಕವನ್ನು ಕಟ್ಟಿದವೆಂದು ನಾನು ಭಾವಿಸಿರುವ ಮೂರು ಮನಸ್ಸುಗಳಲ್ಲಿ ರಾಜ್‌ಕುಮಾರ್ ಅವರೂ ಒಬ್ಬರು ಎಂಬ ಭಾವನೆ ಇರಲು ಕಾರಣವಿದೆ. ಇತರಿಬ್ಬರೆಂದರೆ ಪ್ರಖರ ವೈಚಾರಿಕರಾದ ಶಿವರಾಮ ಕಾರಂತರು ಮತ್ತು ವೈಚಾರಿಕತೆಯನ್ನು ಅಧ್ಯಾತ್ಮಿಕತೆಯೊಂದಿಗೆ ವಿಶಿಷ್ಟ ಹದದಲ್ಲಿ ಬೆಸೆದ ಕುವೆಂಪು ಅವರು. ಇವರಿಬ್ಬರೂ ಹೆಚ್ಚು ಓದಿಕೊಂಡ ಕನ್ನಡ ಜನವರ್ಗಗಳಲ್ಲಿ ಪ್ರಭಾವಶಾಲಿಗಳಾಗಿದ್ದರೆ ರಾಜ್‌ಕುಮಾರ್ ಈ ಜನವರ್ಗಗಳೂ ಸೇರಿದಂತೆ ಇಡೀ ಕನ್ನಡ ಸಮುದಾಯದಲ್ಲಿ ಕನ್ನಡ ವ್ಯಕ್ತಿತ್ವ ಎಂಬುದೊಂದನ್ನು–ಅವರ ಮುಖಚರ್ಯೆಯಲ್ಲಿ ಕಾಣುವ ಕನ್ನಡದ್ದೇ ಅನ್ನಿಸುವ ಭಾವಸೌಂದರ್ಯವನ್ನು ಗಮನಿಸಿ–ಕಲ್ಪಿಸಿಕೊಟ್ಟು ಅದನ್ನು ಸಾಮಾಜಿಕವಾಗಿ ಕಟ್ಟಿದ ಚಾರಿತ್ರಿಕ ವ್ಯಕ್ತಿಯೇ ಆಗಿ ಪರಿಣಮಿಸಿದರು. ರಾಜ್‌ಕುಮಾರ್ ಅವರ ಈ ಕೊಡುಗೆಯ ಹಿಂದೆ ಕಾರಂತ ಮತ್ತು ಕುವೆಂಪು ಅವರ ಪಾಲೂ ಇತ್ತು ಎಂಬುದನ್ನು

ನಾವು ಮರೆಯಬಾರದು. ಏಕೆಂದರೆ ಅಂದಿನ-ಅರವತ್ತು ಮತ್ತು ಎಪ್ಪತ್ತರ ದಶಕಗಳ ಕಾಲವಧಿಯ-ರಾಜ್‌ಕುಮಾರ್ ಅವರ ಚಿತ್ರಗಳ ನಿರ್ಮಾಣದ ಹಿಂದೆ ಇದ್ದ ಚಿತ್ರಕಥಾ ಲೇಖಕರು, ಸಂಭಾಷಣಾಕಾರರು ಮತ್ತು ನಿರ್ದೇಶಕರು ಕಾರಂತ-ಕುವೆಂಪು ಅವರು ಇತರ ಸಾಹಿತ್ಯಿಕ-ಸಾಂಸ್ಕೃತಿಕ ವ್ಯಕ್ತಿಗಳ ಜೊತೆ ಸೇರಿ ನಿರ್ಮಿಸುತ್ತಿದ್ದ ಕನ್ನಡ ಸಂಸ್ಕೃತಿಯ ವಾರಸುದಾರರೇ ಆಗಿ ಅದರ ನುಡಿಗಟ್ಟುಗಳ ಮೂಲಕವೇ ತಮ್ಮ ಕಸುಬುದಾರಿಕೆಯನ್ನು ನಿರ್ವಹಿಸುತ್ತಿದ್ದರು. ಕೆಲವೇ ಖ್ಯಾತ ಹೆಸರುಗಳನ್ನು ಹೇಳುವುದಾದರೆ, ಹೆಚ್.ಎಲ್.ಎನ್. ಸಿಂಹ, ಗುಬ್ಬಿ ವೀರಣ್ಣ, ಜಿ.ವಿ. ಅಯ್ಯರ್. ಬಿ.ಆರ್. ಪಂತುಲು, ಬಿ.ಎಸ್. ರಂಗಾ, ಕು. ರಾ. ಸೀತಾರಾಮಶಾಸ್ತ್ರಿ, ಹುಣಸೂರು ಕೃಷ್ಣಮೂರ್ತಿ, ಚಿ. ಸದಾಶಿವಯ್ಯ, ಸೋರಟ್ ಅಶ್ವತ್ಥ್, ಆರ್. ನಾಗೇಂದ್ರರಾವ್: ಎಂ.ಆರ್. ವಿಠಲ್, ವೈ.ಆರ್. ಸ್ವಾಮಿ ಇತ್ಯಾದಿ.

ರಾಜ್‌ಕುಮಾರ್ ಅವರಿಗೆ ಕರ್ನಾಟಕ ಏಕೀಕರಣದ ಸಂದರ್ಭದ ಕನ್ನಡ ಕುರಿತ ನವೋತ್ಸಾಹ ಅನಾಯಾಸವಾಗಿ ಆಧುನಿಕ ಕರ್ನಾಟಕದ ಚರಿತ್ರೆಯಲ್ಲಿ ಒಂದ ಐತಿಹಾಸಿಕ ಪಾತ್ರವನ್ನು ನೀಡಿತೆಂದು ಹೇಳಬಹುದಾದರೂ, ಅದರಲ್ಲಿ ಅವರು ಯಶಸ್ವಿಯಾಗಲು ಅವರ ಪ್ರತಿಭೆ ಮತ್ತು ಪರಿಶ್ರಮಗಳ ಪಾಲು ಕಡಿಮೆ ಏನಲ್ಲ ಎಂಬುದನ್ನೂ ನಾವು ಮರೆಯಲಾಗದು. ಕನ್ನಡ ರಂಗಭೂಮಿಯ ಎಲ್ಲ ಸಾರ ಸರ್ವಸ್ವದ ಜೊತೆಗೆ ಆಕರ್ಷಕ ದೇಹಸಿರಿಯನ್ನೂ ವರವಾಗಿ ಪಡೆದು ಬಂದಿದ್ದ ಅವರು ಸಹಜವಾಗಿಯೇ ಕನ್ನಡದ ವರನಟನೆನಿಸಿಕೊಂಡರು. ಪೌರಾಣಿಕ-ಐತಿಹಾಸಿಕ-ಜಾನಪದ ಪಾತ್ರಗಳಿಂದ ಅವರು ಸಮಕಾಲೀನ ಸಾಮಾಜಿಕ ಪಾತ್ರಗಳಿಗೂ ಸುಲಭವಾಗಿ ಜಾರಿಕೊಂಡ ಪರಿ ಅವರ ಹುಟ್ಟು ಪ್ರತಿಭೆಗೆ ಸಾಕ್ಷಿಯಾಗಿದೆ. ಜೊತೆಗೆ ಸಾರ್ವಜನಿಕ ಜೀವನದಲ್ಲಿನ ಅವರ ಸಭ್ಯ ನಡವಳಿಕೆ, ಸೌಜನ್ಯಶೀಲತೆಗಳು ಸಾಮಾಜಿಕ ಸಭ್ಯತೆಯ ಮಿತಿಗಳನ್ನು ಮೀರಿಹೋಗದಂತಹ ರೀತಿಯಲ್ಲಿ ಅವರು ಪಾತ್ರಗಳನ್ನು ನಿರ್ವಹಿಸುವಲ್ಲಿ (ನಂತರದ ದಿನಗಳಲ್ಲಿ ಚಿತ್ರ ಸಾಹಿತಿಗಳ ಜೊತೆಗೂಡಿ ಪಾತ್ರಗಳನ್ನು ರೂಪಿಸುವಲ್ಲಿ) ತೋರಿದ ಎಚ್ಚರ ಗಮನಾರ್ಹವಾದದ್ದು. ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ಕಾಲದ ಇತರ ಮುಖ್ಯ ನಟರು ಹಣ-ಅವಕಾಶಗಳನ್ನನುಸರಿಸಿ ಇತರ ಭಾಷಾ ಚಿತ್ರಗಳೆಡೆಗೆ ಆಕರ್ಷಿತರಾಗುತ್ತಿದ್ದಾಗ ಇವರು ಒಂದೆರಡು ಅನ್ಯಭಾಷಾ ಚಿತ್ರಗಳಲ್ಲಿ ನಟಿಸಿದ ನಂತರ ಕನ್ನಡ ಭಾಷಾ ಚಿತ್ರಗಳಿಗೇ ತಮ್ಮ ಪ್ರತಿಭೆಯನ್ನು ಮುಡಿಪಾಗಿಡಲು ತೆಗೆದುಕೊಂಡ ನಿರ್ಧಾರ ರಾಜ್‌ಕುಮಾರ್ ಓರ್ವ ಜನನಾಯಕನಾಗಿ ಸ್ಥಾಪಿತವಾಗಲು ಕಾರಣವಾದವು. ಅವರ ಬಾಯಲ್ಲಿ ಹೊಮ್ಮುತ್ತಿದ್ದ ಕನ್ನಡ ತನ್ನೆಲ್ಲ ಶಕ್ತಿ-ಸೊಬಗು ಮತ್ತು ನಿಖರ ಬಾಗು ಬಳುಕುಗಳೊಂದಿಗೆ ಒಂದು ಹೊಸ ಶೋಭೆಯನ್ನು ಪಡೆದುದು ಕನ್ನಡದ ಒಂದು ಭಾಗ್ಯವೇ ಆಗಿತ್ತು. ಬಹುಶಃ ಅದರಿಂದಾಗಿಯೇ ಅವರು ಉತ್ತರ-ದಕ್ಷಿಣ-ಪೂರ್ವ-ಪಶ್ಚಿಮವೆನ್ನದೆ ಕನ್ನಡ ನಾಡಿನ ಎಲ್ಲ ಭಾಗಗಳ ಜನರ ಮನ ಗೆಲ್ಲಲು ಸಾಧ್ಯವಾಯಿತು.

-೨-

ನನಗೆ ನೆನಪಿರುವಂತೆ, ನಾನು ನೋಡಿದ ರಾಜ್‌ಕುಮಾರ್ ಅವರ ಮೊದಲ ಚಿತ್ರ ಬಹುಶಃ 'ರಣಧೀರ ಕಂಠೀರವ' ಇರಬಹುದು. ಅದನ್ನು ನಾನು ನೋಡಿದ್ದು ಬಹುಶಃ

೧೯೬೧ರಲ್ಲಿ. ಆಗ ನನಗೆ ಒಂಬತ್ತು ವರ್ಷ. ಆ ಎಳೆ ವಯಸ್ಸಿನಲ್ಲೇ ಅವರ ಆ ರಾಜಗಾಂಭೀರ್ಯದ ಮುಖಚಹರೆಗೆ ಮಾರುಹೋದ ನಾನು ಮುಂದಿನ ಐವತ್ತು ವರ್ಷಗಳ ಕಾಲ ಏನೆಲ್ಲ ನೆಪಗಳು ದೊರೆತರೂ ಅವರ ಮೋಹದ ಬಲೆಯಿಂದ ಹೊರಬರಲಾಗಲಿಲ್ಲ! ಹೌದು, ಅದು ಮೋಹವೇ. ಆ ಮೋಹಕ್ಕೆ ಕಾರಣ ಹಲವಾರು. ಮುಖ್ಯವಾಗಿ ನಾನು ನನ್ನ ಬಾಲ್ಯದಲ್ಲಿ–ನನ್ನ ಹದಿನೈದನೇ ವಯಸ್ಸಿನವರೆಗೆ ಆಗತಾನೇ ವಿದ್ಯೆಗೆ ಕಣ್ದೆರೆಯುತ್ತಾ ಸಾಮಾಜಿಕ ಉನ್ನತಿಯ ಆಕಾಂಕ್ಷೆ, ಛಲ ಮತ್ತು ಪರಿಶ್ರಮಗಳೊಂದಿಗೆ ವ್ಯಕ್ತಿತ್ವಗಳನ್ನು ಕಟ್ಟಿಕೊಳ್ಳಲು ತುಡಿಯುತ್ತಿದ್ದ ಸದಸ್ಯರ ಕುಟುಂಬವೊಂದರ ಮಗನಾಗಿ ಒಂದು ಸಣ್ಣ ಊರಿನ ಸಂಚಾರಿ ಚಿತ್ರಮಂದಿರದಲ್ಲಿ ನೋಡಿದ ಅವರ ವೈವಿಧ್ಯಮಯ ಕಪ್ಪು–ಬಿಳುಪು ಚಿತ್ರಗಳು. 'ರಣಧೀರ ಕಂಠೀರವ'ದ ನಂತರ ನಾನು ನೋಡಿದ 'ಸ್ಕೂಲ್ ಮಾಸ್ಟರ್' ಚಿತ್ರದಲ್ಲಿ ರಾಜ್‌ಕುಮಾರ್‌ರನ್ನು ಹುಡುಕಿ ನಿರಾಶನಾಗಿದ್ದು ಇನ್ನೂ ನೆನಪಿದೆ. ನಂತರ ನಾನು ಸಾಲು ಸಾಲಾಗಿ ನೋಡಿದ್ದು ಬರೀ ರಾಜ್‌ಕುಮಾರ್ ಚಿತ್ರಗಳನ್ನೇ. 'ಬೇವು ಬೆಲ್ಲ' ಎಂಬ ಒಂದು ಚಿತ್ರದ ಅಪವಾದದ ಹೊರತಾಗಿ! ಆ ಚಿತ್ರ ನನ್ನ ಬಾಲ್ಯದ ಕಣ್ಣುಗಳಿಗೂ ಎಷ್ಟು ಕೆಟ್ಟದಾಗಿ ಕಂಡಿತೆಂದರೆ, ಅದರಲ್ಲಿ ರಾಜ್‌ಕುಮಾರ್ ಇಲ್ಲದ್ದು ಒಳ್ಳೆಯದೇ ಆಯಿತು ಎನಿಸಿತ್ತು! ಆ ಹೊತ್ತಿಗಾಗಲೇ ರಾಜ್‌ಕುಮಾರ್ ಅಷ್ಟರಮಟ್ಟಿಗೆ ನಮ್ಮವರೆನಿಸಿಕೊಂಡುಬಿಟ್ಟು ಅವರ ಹಿತವೇ ನಮ್ಮ ಹಿತವೆನಿಸಿಕೊಳ್ಳುವಂತಾಗಿತ್ತು!!

ಇದಕ್ಕೆ ಕಾರಣವಿರದಿರಲಿಲ್ಲ. 'ರಣಧೀರ ಕಂಠೀರವ' ಚಿತ್ರದ ನಂತರ ನಾನು ನೋಡಿದ 'ಮಹಿಷಾಸುರ ಮರ್ಧಿನಿ', 'ಭೂ ಕೈಲಾಸ', 'ಅಣ್ಣ ತಂಗಿ', 'ದಶಾವತಾರ', 'ಸೋದರಿ', 'ಓಹಿಲೇಶ್ವರ', 'ಹರಿಭಕ್ತ', 'ಭಕ್ತ ಕನಕದಾಸ', 'ಕಿತ್ತೂರು ಚೆನ್ನಮ್ಮ', 'ಗಾಳಿಗೋಪುರ', 'ಕರುಣೆಯೇ ಕುಟುಂಬದ ಕಣ್ಣು', 'ಕುಲವಧು', 'ನವಕೋಟಿ ನಾರಾಯಣ', 'ಭಕ್ತ ಚೇತ', 'ಕೈವಾರ ಮಾಹತ್ಮೆ', 'ಮಹಾತ್ಮ ಕಬೀರ', 'ವಾಲ್ಮೀಕಿ', 'ಸಂತ ತುಕಾರಾಂ', 'ಕಣ್ತೆರೆದು ನೋಡು', 'ಸರ್ವಜ್ಞಮೂರ್ತಿ', 'ಸತಿಶಕ್ತಿ', 'ನಂದಾದೀಪ', 'ತುಂಬಿದ ಕೊಡ', 'ಜೀವನ ತರಂಗ', 'ಸ್ವರ್ಣಗೌರಿ', 'ಆಶಾಸುಂದರಿ', 'ಪ್ರತಿಜ್ಞೆ', 'ಮುರಿಯದ ಮನೆ' 'ಶ್ರೀರಾಮಂಜನೇಯ ಯುದ್ಧ', 'ನಾಂದಿ', 'ಮನಮೆಚ್ಚಿದ ಮಡದಿ', 'ಕಲಿತರೂ ಹೆಣ್ಣೇ', 'ಬೆಟ್ಟದ ಹುಲಿ', 'ಚಂದ್ರಹಾಸ', 'ಚಂದವಳ್ಳಿಯ ತೋಟ', 'ಸತ್ಯ ಹರಿಶ್ಚಂದ್ರ' ಮುಂತಾದ ಚಿತ್ರಗಳಲ್ಲಿನ ರಾಜ್‌ಕುಮಾರರ ಪಾತ್ರ ವೈವಿಧ್ಯ ನನ್ನನ್ನು ಮರುಳುಗೊಳಿಸಿತ್ತು. ಮಹಿಷಾಸುರ ಮತ್ತು ರಾವಣರಾಗಿ ಮೆರೆಯುವ ರುದ್ರಮನೋಹರ ಭೀಭತ್ಸತೆಯ ಅಟ್ಟಹಾಸವೆಲ್ಲಿ, ಕನಕದಾಸ–ಪುರಂದರ–ಚೇತ–ತುಕಾರಾಮರಾಗಿ ಮೆರೆಯುವ ಭಕ್ತಿಪರವಶತೆಯ ಶಾಂತಿ–ಶರಣಾಗತಿಗಳ ಭಾವವೆಲ್ಲಿ? 'ಅಣ್ಣ ತಂಗಿ', 'ಕರುಣೆಯೇ ಕುಟುಂಬದ ಕಣ್ಣು', 'ತುಂಬಿದ ಕೊಡ', 'ಬೆಟ್ಟದ ಹುಲಿ' 'ವೀರಕೇಸರಿ' ಚಿತ್ರಗಳ ತುಂಟ ರಸಿಕತೆಯ ಚೇತೋಹಾರಿ ಲವಲವಿಕೆಯಲ್ಲಿ? 'ಕಣ್ತೆರೆದು ನೋಡು', 'ನಂದಾದೀಪ', 'ಜೀವನತರಂಗ', 'ಮನಮೆಚ್ಚಿದ ಮಡದಿ', 'ನಾಂದಿ', 'ಚಂದವಳ್ಳಿಯ ತೋಟ'ದ

ಆದರ್ಶ ನಾಯಕ ಪಾತ್ರಗಳ ತುಂಬಿ ತುಳುಕದ ವಿಷಾದಗಳ ಘನ ಗಾಂಭೀರ್ಯಗಳೆಲ್ಲಿ? 'ಸ್ವರ್ಣಗೌರಿ', 'ಆಶಾ ಸುಂದರಿ', 'ಸತಿಶಕ್ತಿ' ಮುಂತಾದ ಜಾನಪದ ಶೈಲಿಯ ಚಿತ್ರಗಳಲ್ಲಿನ ನಾಯಕ ಪಾತ್ರಗಳಲ್ಲಿನ ಉಲ್ಲಾಸಮಯವಾದ ಸಮ್ಮೋಹನಕಾರಿ ಊರ್ಜೆಯೆಲ್ಲಿ?

ಇನ್ನು ಇವೆಲ್ಲಕ್ಕೆ ಕಿರೀಟವಿಟ್ಟಂತೆ 'ಸತ್ಯ ಹರಿಶ್ಚಂದ್ರ' ಚಿತ್ರದ ಹರಿಶ್ಚಂದ್ರ ಪಾತ್ರದ ಅಭಿನಯ ಪ್ರತಿಭೆಯ ವಿಸ್ತಾರ ಯಾರನ್ನಾದರೂ ಬೆರಗುಗೊಳಿಸುವಂತಹದು. ಘಂಡರೀಬಾತಿಯವರು ಚಂದ್ರಮತಿಯಾಗಿ ಈ ಪಾತ್ರದಲ್ಲಿ ರಾಜ್‌ಕುಮಾರ್‌ಗೆ ಸರಿಸಮವಾದ ಪ್ರತಿಭೆಯೊಂದಿಗೆ ನಟಿಸಿರುವರಾದರೂ, ಕೊನೆಯ ಸ್ಮಶಾನ ದೃಶ್ಯದಲ್ಲಿ ಘಂಡರೀಬಾಯಿಯವರ ಪಾತ್ರ ನಿರ್ವಹಣೆ ಗೋಳಿನ ಮುದ್ದೆಯಾಗಿ ಕೊಂಚ ಹದ ತಪ್ಪಿದಂತೆ ಕಾಣುವ ಸಂದರ್ಭದಲ್ಲಿ ಕೊಂಚ ಹೆಚ್ಚೂ ಅಲ್ಲದ, ಕೊಂಚ ಕಡಿಮೆಯೂ ಅನ್ನಿಸದ ರಾಜ್‌ಕುಮಾರ್ ಅವರ ಸಂದರ್ಭದ ಹದವರಿತ ನಟನಾ ಪ್ರತಿಭೆ ಅವರನ್ನು ಮೇರುನಟನನ್ನಾಗಿ ಮಾನ್ಯ ಮಾಡುವಷ್ಟು ಅನನ್ಯವಾದದ್ದು. ಇದನ್ನು ಅನನ್ಯ ಮಾಡಿರುವುದರಲ್ಲಿ ಘಂಟಸಾಲ ತಮ್ಮ ವಿಶಿಷ್ಟ ಪ್ರತಿಭೆಯೊಂದಿಗೆ ವೈವಿಧ್ಯಮಯ ರಸೋತ್ತುಂಗಗಳಲ್ಲಿ ಹಾಡಿರುವ 'ವಿಧಿ ವಿಪರೀತ ವಿಧಿಯಾಘಾತ ವಿಧಿ ವಿಲಾಸವೇನನಹಾ!' ಎಂಬ ಹುಣಸೂರು ಕೃಷ್ಣಮೂರ್ತಿ ಅವರ ರಚನೆಯ ಪಾಲೂ ಇದೆ ಎಂದು ಹೇಳದಿದ್ದರೆ ತಪ್ಪಾಗುತ್ತದೆ.

ಇದೇ ವೇಳೆಯಲ್ಲಿ ರಾಜ್‌ಕುಮಾರ್ ಅವರ ನಟನಾ ಪ್ರತಿಭೆಯನ್ನು ಈ ಮೊದಲು ಕನ್ನಡ ಜನಮನದಲ್ಲಿ ಸ್ಥಾಪಿಸಿದ ಇನ್ನೊಂದು ಚಿತ್ರದ ಪ್ರಸ್ತಾಪವನ್ನೂ ಇಲ್ಲಿ ಮಾಡಬೇಕು. ಅದೆಂದರೆ 'ಭಕ್ತ ಕನಕದಾಸ'. ಈ ಚಿತ್ರ ವ್ಯವಸ್ಥೆಯ ವಿರುದ್ಧ ಸಾತ್ವಿಕ ಹೋರಾಟ ನಡೆಸುವ ಪಾತ್ರಧಾರಿಯಾಗಿ ರಾಜ್‌ಕುಮಾರ್ ಸಾಮಾನ್ಯ ಕನ್ನಡಿಗರ ಮನದಲ್ಲಿ ಸ್ಥಾಪಿತವಾಗಲು ಏನೆಲ್ಲ ಪರಿಕರಗಳು ಬೇಕೋ ಅವೆಲ್ಲವೂ ಈ ಚಿತ್ರದಲ್ಲಿದ್ದವು. ವೆಂಕಟರಾಜು ಅವರ ಮೃದು ಮಧುರವಾದ ಅನನ್ಯ ಸಂಗೀತ ಸಂಯೋಜನೆಯಲ್ಲಿ ಪಿ.ಬಿ. ಶ್ರೀನಿವಾಸ್ ಭಕ್ತಿಭಾವ ಪರವಶತೆಯಲ್ಲಿ ಹಾಡಿರುವ ಕನಕದಾಸರ ಕೀರ್ತನೆಗಳು, ಹುಸಿಮಡಿಯ ಸಮಾಜವನ್ನು ಪ್ರತಿನಿಧಿಸುವ ಹನುಮಂತಾಚಾರ್ ಮತ್ತು ಬಳಗದ ರಂಜನೀಯ ನಟನೆ, ಹೆಚ್. ರಾಮಚಂದ್ರ ಶಾಸ್ತ್ರಿಗಳು ಬಹು ಸಹಜವಾಗಿ ನಿರ್ವಹಿಸಿರುವ ವ್ಯಾಸರಾಯರ ಪಾತ್ರದ ಘನತೆ ಮತ್ತು ಇವೆಲ್ಲವನೂ ಹದಗೆಡದಂತೆ ಒಂದು ಸರಳ ಸುಂದರ ಪರಿಣಾಮಕಾರಿ ಚಿತ್ರವಾಗಿಸಿರುವ ವೈ. ಆರ್. ಸ್ವಾಮಿಯವರ ದಿಗ್ದರ್ಶನ ಸಾಮರ್ಥ್ಯ ಈ ಚಿತ್ರವನ್ನು ಕನ್ನಡ ಚಿತ್ರರಂಗದ ಒಂದು ಮೈಲಿಗಲ್ಲು ಚಿತ್ರವನ್ನಾಗಿಸಿದೆ. 'ಈತನೀಗ ವಾಸುದೇವನು' ಹಾಡನ್ನೊಳಗೊಂಡ ದೃಶ್ಯ ಈ ಚಿತ್ರದ ಎಲ್ಲ ಸೊಬಗನ್ನೂ ಹೇಳುವಷ್ಟು ವಿಶಿಷ್ಟವಾಗಿದೆ. ಇತ್ತೀಚೆಗೆ ಮಡಿ ಮೈಲಿಗೆಗಳ ಹುಸಿತನವನ್ನು ಗೇಲಿ ಮಾಡುವ ಹನುಮಂತಾಚಾರ್ ಬಳಗದ ದೃಶ್ಯಗಳನ್ನು ತೆಗೆದು ಈ ಚಿತ್ರವನ್ನು ಪ್ರದರ್ಶಿಸುವ ಪರಿಪಾಠವೊಂದು ಆರಂಭವಾಗಿದ್ದು, ಇದು ಕನ್ನಡ ವೀಕ್ಷಕ ವರ್ಗದ ಅಭಿರುಚಿ ಎಷ್ಟು ಸಂಕುಚಿತಗೊಂಡಿದೆ ಎಂಬುದರ ಸೂಚನೆಯಾಗಿದೆ ಎಂದಷ್ಟೇ

ಹೇಳಬಹುದು. ಅದೇನೇ ಇರಲಿ, ಈ ಚಿತ್ರದ ಸಾಲಿಗೆ ಸೇರುವ –ರಾಜ್‌ಕುಮಾರ್‌ರನ್ನು ಕನ್ನಡ ಸಮಾಜದ ಪರಂಪರೆಯ ವಾರಸುದಾರರನ್ನಾಗಿ ಮಾಡಿದ–ಇನ್ನೊಂದು ವಿಶಿಷ್ಟ ಚಿತ್ರವೆಂದರೆ 'ಸರ್ವಜ್ಞಮೂರ್ತಿ'.

ಇಲ್ಲಿ ಇನ್ನೊಂದು ಸಂಗತಿಯನ್ನು ಹೇಳಿಬಿಡಬೇಕು. ನನ್ನ ತಂದೆಯಿಂದ ಬಲವಾಗಿ ಏಟು ತಿಂದಾಗ ಬಿಟ್ಟರೆ ನಾನು ಮೊದಲಬಾರಿ ಬಿಕ್ಕಿ ಬಿಕ್ಕಿ ಅತ್ತದ್ದು 'ಕಿತ್ತೂರು ಚೆನ್ನಮ್ಮ'ದಲ್ಲಿ ರಾಜ್‌ಕುಮಾರ್ ಅಭಿನಯಿಸಿದ ಮಲ್ಲಸರ್ಜನ ಶವವನ್ನು ಸೆರೆಮನೆಯಿಂದ ಹೊತ್ತು ತರುವ ದೃಶ್ಯ ನೋಡಿ! ಅದರ ಹಿನ್ನೆಲೆಯಲ್ಲಿ ಕೇಳುತ್ತಿದ್ದ 'ಅಹೋ ರಾತ್ರಿ ನಿಲದೋಡಿ ತಾ ಬಂದಿದೇ, ಕರುನಾಡ ವೀರಮಣಿಯ ತಂದಿದೇ' ಎಂಬ ಪಿ.ಬಿ. ಶ್ರೀನಿವಾಸ್ ಹಾಡಿದ್ದ ಶೋಕಗೀತೆಯ ಪರಿಣಾಮವೂ ಇದರಲ್ಲಿದ್ದೀತು. ಆದರೆ ಈ ಆರ್ದ್ರತೆಗೆ ನಿಜವಾಗಿ ಇಂಬುಕೊಟ್ಟಿದ್ದುದು ಚೆನ್ನಮ್ಮನು (ಬಿ. ಸರೋಜಾದೇವಿ) ಮಲ್ಲಸರ್ಜನ ಸೊಬಗಿಗೆ ಮಾರುಹೋಗಿ ಹಾಡುವ 'ನಯನದಲಿ ದೊರೆಯಿರಲು ಯಾರ ಕಾಣಲಿ, ಎದುರಿನಲಿ ನೀನಿರಲು ಯಾರ ಬೇಡಲಿ' ಎಂಬ ಹಾಡಿಗೆ ತಕ್ಕನಾಗಿ ನನಗೆ ಕಂಡಿದ್ದ ರಾಜ್‌ಕುಮಾರ್ ಅವರ ವ್ಯಕ್ತಿತ್ವದಲ್ಲಿನ ಬೆಡಗು ಮತ್ತು ಮಲ್ಲಸರ್ಜನನ್ನು ಸರಪಳಿಯಿಂದ ಬಿಗಿದು ಟಿಪ್ಪುವಿನ ಮುಂದೆ ತಂದಾಗ ಆತ ಸರಪಳಿಗಳನ್ನು ಜಗ್ಗುತ್ತಾ ಪ್ರದರ್ಶಿಸುವ ವೀರೋಚಿತ ಪ್ರತಿಭಟನೆ ಮಾತುಗಳಿಗಿಂತ ಆತನ ಮುಖಭಾವದಲ್ಲಿ ವ್ಯಕ್ತವಾಗುವ ಮೈನವಿರೇಳುಸುವಂತಹ ಅದ್ಭುತ ಅಭಿನಯ ಪರಿ!

ಈ ಮೂಲಕ ನಾನು ಹೇಳಹೊರಟಿರುವುದೇನೆಂದರೆ, ಆ ಹೊತ್ತಿಗೆ ರಾಜ್‌ಕುಮಾರ್ ಒಬ್ಬ ವ್ಯಕ್ತಿಯಾಗಿ ಮಾತ್ರವಲ್ಲದೆ, ಒಂದು ಶಕ್ತಿಯಾಗಿ–ಒಂದು ಚಿತ್ರ ಕುಟುಂಬವಾಗಿ–ಮೂಡಿ ಇತರೆ ಭಾರತೀಯ ಭಾಷೆಗಳ ಚಿತ್ರರಂಗಳಿಗೆ ಹೋಲಿಸಿದಂತೆ ಬಹಳ ಹಿಂದುಳಿದಂತೆ ತೋರುತ್ತಿದ್ದ ಕನ್ನಡ ಚಿತ್ರರಂಗಕ್ಕೆ ಒಂದು ಖಚಿತ ಗುರುತು ನೀಡಿ ಅದು ತನ್ನದೇ ಘನತೆಯೊಂದಿಗೆ ತನ್ನ ಕಾಲ ಮೇಲೆ ತಾನೇ ನಿಂತುಕೊಳ್ಳಲಾರಂಭಿಸುವ ಆತ್ಮವಿಶ್ವಾಸವನ್ನು ನಿರ್ಮಿಸಿದ್ದರು ಎಂದು. ಕನ್ನಡ ಚಿತ್ರರಂಗವನ್ನೇ ನಂಬಿದ್ದ, ಮುಖ್ಯವಾಗಿ ನಟ–ನಟಿಯರ ಒಂದು ಸಮುದಾಯಕ್ಕೆ ಅವರು ಕನ್ನಡ ಚಿತ್ರರಂಗವನ್ನು ನಂಬಿ ಬದುಕಬಹುದೆಂಬ ಭರವಸೆಯನ್ನು ಹುಟ್ಟಿಸಿದರು. ಹಾಗಾಗಿಯೇ ಆಗ ರಾಜ್‌ಕುಮಾರ್ ಎಂದರೆ ನಮಗೆ ಬರೀ ರಾಜ್‌ಕುಮಾರ್ ಅಲ್ಲದೆ, ಲೀಲಾವತಿ, ಹರಿಣಿ, ಪಂಡರೀಬಾಯಿ, ನರಸಿಂಹರಾಜು, ಬಾಲಕೃಷ್ಣ, ಅಶ್ವಥ್, ಜಯಶ್ರೀ, ಪಾಪಮ್ಮ, ರಮಾದೇವಿ, ಎಂ.ಎನ್. ಲಕ್ಷ್ಮೀದೇವಿ, ಉದಯಕುಮಾರ್, ಆರ್. ನಾಗೇಂದ್ರ ರಾವ್, ಈಶ್ವರಪ್ಪ, ರಾಮಚಂದ್ರ ಶಾಸ್ತ್ರಿ, ರಾಘವೇಂದ್ರ ರಾವ್, ಹನುಮಂತಾಚಾರ್, ಕುಪ್ಪುರಾಜ್, ವಾದಿರಾಜ್, ಕಮೆಡಿಯನ್ ಗುಗ್ಗು, ಗಣಪತಿಭಟ್, ಟಿ.ವಿ. ಸಿಂಗ್ ಠಾಕೂರ್, ಎಂ.ಆರ್. ವಿಠಲ್, ವೈ.ಆರ್. ಸ್ವಾಮಿ, ಜಿ.ಕೆ. ವೆಂಕಟೇಶ್, ವಿಜಯಭಾಸ್ಕರ್, ರಾಜನ್–ನಾಗೇಂದ್ರ, ಎಸ್. ಜಾನಕಿ, ಪಿ. ಸುಶೀಲಾ–ಇವರೆಲ್ಲ ಚಿತ್ರದಲ್ಲಿರಲಿ, ಇಲ್ಲದಿರಲಿ–ನೆನಪಿಗೆ ಬರುತ್ತಿದ್ದರು. ವಿಶೇಷವಾಗಿ ರಾಜ್‌ಕುಮಾರ್–ಲೀಲಾವತಿ–ಬಾಲಕೃಷ್ಣ ನರಸಿಂಹರಾಜು–ಲಕ್ಷ್ಮೀದೇವಿ–

ರಮಾದೇವಿ ಇದ್ದ ಚಿತ್ರವೆಂದರೆ ಅದು ಪ್ರೇಕ್ಷಕರ ಪಾಲಿಗೆ ಒಂದು ರಸದೌತಣವೇ ಸರಿ! ಜೊತೆಗೆ ಅಚ್ಚ ಕನ್ನಡದ ಸಂಗೀತವೆಂದು ಕರೆಯಬಹುದಾದ ಜಿ.ಕೆ. ವೆಂಕಟೇಶ್ ಅವರ ಸಂಗೀತ ನಿರ್ದೇಶನ, ಪಿ.ಬಿ. ಶ್ರೀನಿವಾಸ್-ಅವರು ಹುಟ್ಟು ಕನ್ನಡಿಗರಲ್ಲದಿದ್ದರೂ-ರಾಜ್‌ಕುಮಾರ್ ಬಾಯಿಂದ ಹೊರಡುತ್ತಿದ್ದ ಹೊಸ ಶೋಭೆಯ ಕನ್ನಡದ ಪಲುಕಿಗೆ ಹೊಂದುವಂತಹ ತಮ್ಮ ಮೃದುಮಧುರ ಕಂಠದಲ್ಲಿ ಹಾಡಿದ ಇಂಪಾದ ಗೀತೆಗಳು! ಅಂದ ಮಾತ್ರಕ್ಕೆ ಅಂದು ಇತರ ಸಂಗೀತ ನಿರ್ದೇಶಕರೂ, ಹಿನ್ನಲೆ ಗಾಯಕ-ಗಾಯಕಿಯರೂ ಇರಲಿಲ್ಲವೆಂದಲ್ಲ. ರಾಜ್‌ಕುಮಾರ್ ಅವರ ಚಿತ್ರವ್ಯಕ್ತಿತ್ವ ವಿಕಾಸವಾಗುತ್ತ ಬಂದ ಪರಿಪ್ರೇಕ್ಷ್ಯವನ್ನು ವಿವರಿಸುವ ಪ್ರಯತ್ನದ ಭಾಗವಾಗಿ ಆಡುತ್ತಿರುವ ಮಾತುಗಳಷ್ಟೇ ಇವು.

ಇದೆಲ್ಲದರ ಪರಿಣಾಮವೆಂದರೆ, ರಾಜ್‌ಕುಮಾರ್ ಇಲ್ಲದ ಚಿತ್ರಗಳೂ-ಅವು ಆಗ ಅಪರೂಪವಾದವುಗಳಾದರೂ-ಯಾವುದೇ ತಾರತಮ್ಯವನ್ನೆದುರಿಸದೆ ಕನ್ನಡ ಚಿತ್ರರಂಗದ ಅವಿಭಾಜ್ಯ ಅಂಗಗಳಾದವು. ಉದಾ: 'ನವಜೀವನ', 'ಪತಿಯೇ ದೈವ', 'ಆನಂದಬಾಷ್ಪ', 'ಅಮರಶಿಲ್ಪಿ ಜಕಣಾಚಾರಿ', 'ಶ್ರೀಶೈಲ ಮಹಾತ್ಮೆ', 'ಜೇನುಗೂಡು', 'ವಿಜಯನಗರದ ವೀರಪುತ್ರ', 'ರತ್ನಮಂಜರಿ' ಮುಂತಾದ ರಾಜ್‌ಕುಮಾರ್ ಇಲ್ಲದ ಚಿತ್ರಗಳೂ ಜನಮನ್ನಣೆ ಗಳಿಸಿದವು. ಈ ಮಾತುಗಳ ಮೂಲಕ ನಾನು ರಾಜ್‌ಕುಮಾರ್‌ರಿಂದಲೇ ಕನ್ನಡ ಚಿತ್ರರಂಗ ಬದುಕಿ ಉಳಿದುಕೊಂಡಿತು ಎಂದು ಖಂಡಿತ ಹೇಳುತ್ತಿಲ್ಲ. ರಾಜ್‌ಕುಮಾರ್ ಬರುವ ಬಹುಕಾಲ ಮುಂಚಿನಿಂದಲೂ ಕನ್ನಡ ಚಿತ್ರಗಳು ತಯಾರಾಗುತ್ತಿದ್ದವು; ಪ್ರದರ್ಶಿತವಾಗುತ್ತಿದ್ದವು. 'ಜಗನ್ಮೋಹಿನಿ' ಎಂಬ ಚಿತ್ರ ದಾವಣಗೆರೆಯಲ್ಲಿ ರಜತಮಹೋತ್ಸವವನ್ನೂ ಆಚರಿಸಿಕೊಂಡಿತ್ತು ಎಂದು ಕೇಳಿರುವೆ. ಗುಬ್ಬಿ ವೀರಣ್ಣ, ಸುಬ್ಬಯ್ಯ ನಾಯ್ಡು, ಕೆಂಪರಾಜ ಅರಸು, ಎಚ್.ಎಲ್. ಎನ್. ಸಿಂಹ, ಹೊನ್ನಪ್ಪ ಭಾಗವತರ್, ಕಲ್ಯಾಣ್ ಕುಮಾರ್ ಹರಿಣಿ, ಫಂಡರೀಬಾಯಿ ಮುಂತಾದವರು ಅದನ್ನು ಮುನ್ನಡೆಸಿದ್ದರು. ಆದರೆ ರಾಜ್‌ಕುಮಾರ್ ಕನ್ನಡ ಜನರ ಕಲ್ಪನಾಶೀಲತೆಯನ್ನು ಸೆಳೆದು ಬೆಳೆಸಿದ ಪರಿಯಿಂದಾಗಿ ಅವರು ಆಗ ಕನ್ನಡ ಚಿತ್ರರಂಗದ ಕೇಂದ್ರಬಿಂದುವಾದರಾದರೂ ಸೂತ್ರಧಾರರೇನಾಗಲಿಲ್ಲ ಎಂದಷ್ಟೇ ನಾನು ಹೇಳುತ್ತಿರುವುದು. ಜೊತೆಗೇ, ಈವರೆಗೆ ಕನ್ನಡ ಚಿತ್ರರಂಗದಲ್ಲಿ ಬಾಳಿ ಬದುಕಿದ ಯಾರನ್ನು ಬಿಟ್ಟು ಬೇಕಾದರೂ ಕನ್ನಡ ಚಿತ್ರರಂಗವನ್ನು ಕಲ್ಪಿಸಿಕೊಳ್ಳಬಹುದು. ಅದರಿಂದ ಅದರ ಬಿಂಬಕ್ಕೆ ಒಂದು ಮಟ್ಟದ ಊನವಾಗಬಹುದಷ್ಟೆ. ಆದರೆ ರಾಜ್‌ಕುಮಾರರನ್ನು ಬಿಟ್ಟು ಕನ್ನಡ ಚಿತ್ರರಂಗವನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ? ಸದ್ಯಕ್ಕಂತೂ ಸಾಧ್ಯವಿಲ್ಲ ಎಂಬ ಮಾತನ್ನೂ ಇಲ್ಲಿ ಹೇಳಿಬಿಡಬೇಕು.

ರಾಜ್‌ಕುಮಾರ್ ಹೀಗೆ ಕನ್ನಡ ಚಿತ್ರರಂಗದ ಆಧಾರ ಸ್ಥಂಭವಾಗಿ ಸ್ಥಾಪಿತವಾಗಿದ್ದು ಅವರ ಚಿತ್ರ ಬದುಕಿನ ಈ ಘಟ್ಟದಲ್ಲೇ. ಮುಂದೆ ಅವರು ನೂರು-ಇನ್ನೂರು ಚಿತ್ರಗಳನ್ನು ದಾಟಿ ನಟಿಸಿ 'ನಟ ಸಾರ್ವಭೌಮ', 'ರಸಿಕರ ರಾಜ' ಇತ್ಯಾದಿ ಬಿರುದುಗಳನ್ನು ಗಳಿಸಿ

ಬೃಹತ್ ತಾರೆಯಾಗಿ, ಚಿತ್ರೋದ್ಯಮಿಯಾಗಿ, 'ಅಣ್ಣಾವ್ರು' ಎಂಬ ಅಭಿದಾನದಿಂದ 'ಯಜಮಾನ್ರು', 'ದೊಡ್ಡವ್ರು' ಎಂಬ ಗೌರವನಾಮಗಳನ್ನು ಪಡೆದು ತಮ್ಮ ಚಿತ್ರವ್ಯಕ್ತಿತ್ವದ ಮಿತಿಗಳನ್ನೂ ಮೀರಿದ ಬಿಂಬವಾಗಿ ಬೆಳೆದು ಅವರನ್ನು ವೀರಪ್ಪನ್ ಎಂಬ ಕಿರಾತಕ ಅಪಹರಿಸಿದಾಗ ಇಡೀ ಕನ್ನಡ ನಾಡೇ, ಅದರ ಪ್ರಭುತ್ವವೇ ಅಲುಗಾಡಿಸುವಷ್ಟು ವಿಸ್ತಾರವಾದರೂ ಆ ಬೆಳವಣಿಗೆಯ ಬೀಜಶಕ್ತಿ ಸಂಚಿತವಾಗಿದ್ದುದು ಆರಂಭದ ಈ ಕಪ್ಪು-ಬಿಳುಪು ಚಿತ್ರಗಳ ಮೂಲಕವೇ. ಏಕೆಂದರೆ ಸ್ವತಃ ರಾಜ್‌ಕುಮಾರ್ ಅವರೇ ಆಗ ತಮ್ಮ ಬದುಕು ಕಟ್ಟಿಕೊಳ್ಳುವ ಸಾಹಸದಲ್ಲಿ ತೊಡಗಿದ್ದರು. ಅದಕ್ಕಾಗಿ ತಮ್ಮೆಲ್ಲ ಒಳಸತ್ವವನ್ನೂ ಧಾರೆ ಎರೆಯುವ ಯೋಗ ತಲ್ಲೀನತೆಯಲ್ಲಿದ್ದರು. ಬದುಕಿನ ಮುಗ್ಧತೆಯ ತೇವ ಇನ್ನೂ ಪೂರ್ತಿ ಆರದ ಹಂತವದು. ರಾಜ್‌ಕುಮಾರ್ ಅವರ ಆ ಹಂತದ ಚಿತ್ರಗಳಲ್ಲಿನ ಮುಖಭಾವಗಳನ್ನು ಕಲ್ಪಿಸಿಕೊಂಡರೇ ಇದು ಗೊತ್ತಾಗುವುದು. 'ಬೇಡರ ಕಣ್ಣಪ್ಪ'ದ 'ಕಾಯೋ ತಂದೆಯೇ, ದೇವಾ ಕರುಣಿಸೋ' ಎಂದು ಹಾಡುವ ಬಡಕಲು ಮುಖವು 'ಭೂಕೈಲಾಸ'ದ 'ದೇವದೇವ ಧವಳಾಚಲ ಮಂದಿರ ಗಂಗಾಧರನಿಗೆ ನಮೋ ನಮೋ' ಎಂದು ಹಾಡುವ ಹೊತ್ತಿಗೆ ಅದು ಗಳಿಸಿಕೊಂಡ ಘನ ಗಾಂಭೀರ್ಯ 'ಸರ್ವಜ್ಞಮೂರ್ತಿ'ಯಲ್ಲಿ ಅರೆಬೆತ್ತಲಾಗಿ ನಿಂತ ಸಂತತನದಲ್ಲಿ ಮಾಗಿ 'ಕನ್ಯಾರತ್ನ'ದ 'ಬಿಂಕದ ಸಿಂಗಾರಿ, ಮೈ ಡೊಂಕಿನ ವಯ್ಯಾರಿ' ಎಂದು ಹಾಡುವ ಶೃಂಗಾರ ಭಾವವನ್ನು ಗಳಿಸಿಕೊಂಡು ವಿಕಾಸವಾಗುತ್ತಾ ಬಂದ ಬಗೆ ಕನ್ನಡ ಜನಮನದ ಮುಗ್ಧತೆಯೂ ವಿಕಾಸವಾಗುತ್ತಾ, ಬಿರಿಯುತ್ತಾ ಬಂದ ಬಗೆಯೂ ಹೌದು ಎಂದು ನಾನು ಭಾವಿಸುತ್ತೇನೆ. ಎಳೆ ಮಗುವಿನ ಮುಗ್ಧತೆ ಹದಿಹರೆಯದಲ್ಲಿ ತಲುಪುವ ಬಿರಿಯುವ ಮಗ್ಧತೆಯಂತೆಯೇ ಇದು. 'ಭಕ್ತ ಕನಕದಾಸ' ಈ ಸ್ಥಿತಿಯ ಪರಿಪೂರ್ಣ ಚಿತ್ರವೆಂದು ನಾನು ಭಾವಿಸಿದ್ದೇನೆ.

ಎಷ್ಟಾದರೂ ರಾಜ್‌ಕುಮಾರ್ ಕಡುಬಡತನದ ಹಿನ್ನೆಲೆಯಿಂದ ಬಂದವರು. ಕೊಳ್ಳೇಗಾಲ ಸೀಮೆಯ ಮಹದೇಶ್ವರ ಬೆಟ್ಟಗಳ ತಪ್ಪಲಿನ–ಆಗ ತಮಿಳ್ನಾಡಿಗೆ ಸೇರಿದ್ದ–ಒಂದು ಅನಾಮಿಕ ಹೈದ ಅವರು. ಅಪ್ಪ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರ ರಂಗಭೂಮಿ ಅನುಭವದ ಹಿನ್ನೆಲೆಯನ್ನೇ ನಂಬಿ ಕೇವಲ ಮೂರನೇ ತರಗತಿವರೆಗೆ ಮಾತ್ರ ಓದಿದ ಈ ಹುಡುಗ ಕನಸಿದ್ದು ಎರಡು ಹೊತ್ತು ಹೊಟ್ಟೆ ತುಂಬ ಊಟ ಮತ್ತು ತಲೆಯ ಮೇಲೆ ಒಂದು ಸೂರನ್ನು ಮಾತ್ರವಿರಬಹುದು. ಆದರೆ ಈ ಹುಡುಗನ ಸಂಸ್ಕಾರ, ಪ್ರತಿಭೆ ಯಾರ ಊಹೆಗೂ ನಿಲುಕದ್ದಾಗಿತ್ತು. ಸಿಕ್ಕ ಒಂದು ಅವಕಾಶವನ್ನು ಬಳಸಿಕೊಂಡು–ಆದರೆ ಆತುರ ಪಡದೆ, ಘಾತುಕತನವನ್ನು ತೋರದೆ–ತನ್ನ ಬದುಕನ್ನು ಕಟ್ಟಿಕೊಳ್ಳುತ್ತಾ ಹೋದ ಬಗೆ ಅಂದಿನ ಕನ್ನಡ ಜನಮನಕ್ಕೆ ಆದರ್ಶಪ್ರಾಯವಾಗಿಯೇ ಕಂಡಿತ್ತು. ಅದು ಇಡೀ ದೇಶ ದುರಾಸೆಯಿಲ್ಲದ ಒಂದು ಸರಳ ಸಭ್ಯತೆಯ ಶಿಸ್ತಿನಲ್ಲಿ ಬದುಕನ್ನು ಕಟ್ಟಿಕೊಳ್ಳುವ ಆದರ್ಶಕ್ಕೆ ಬದ್ಧವಾಗಿದ್ದ ಕಾಲ. ಮುತ್ತುರಾಜ ಎಂಬ ಅಚ್ಚಕನ್ನಡದ ಗ್ರಾಮೀಣ ಮೂಲಹೆಸರಿನ ಈ ಯುವಕ ತಮ್ಮಂತೆಯೇ ಬಡತನ ಮತ್ತು ಸಾಮಾಜಿಕ ಅಸಹಾಯಕತೆಯ ಹಿನ್ನೆಲೆಯಿಂದ ಬಂದು ಸ್ವಪ್ರಯತ್ನದಿಂದ

ಬದುಕಿನ ಒಂದೊಂದೇ ಮೆಟ್ಟಿಲು ಏರುವಲ್ಲಿ ಎದುರಿಸುತ್ತಿದ್ದ ಬದುಕಿನ ವೈವಿಧ್ಯಮಯ ಸಂದರ್ಭಗಳನ್ನು ರೂಪಕಗಳಾಗಿ ಅವರ ಚಲನಚಿತ್ರಗಳ ಮೂಲಕ ಕಾಣುತ್ತಿದ್ದ ಬಹುತೇಕ ಕನ್ನಡ ಜನತೆಗೆ ತಮ್ಮನ್ನು ಅವರೊಂದಿಗೆ ಗುರುತಿಸಿಕೊಳ್ಳುವುದು ಸಹಜವೇ ಅನ್ನಿಸಿಬಿಟ್ಟಿತ್ತು.

ರಾಜ್‌ಕುಮಾರ್ ಪಾತ್ರ ನಿರ್ವಹಿಸಿದ ಕಸುಬುದಾರರ ಪಟ್ಟಿಯೇ ಒಂದು ವ್ಯಾಪಕ ಅಧ್ಯಯನಕ್ಕೆ ಆಕರವಾಗಬಲ್ಲುದು. ದನಗಾಹಿ, ಕುರುಗಾಹಿ, ಚಮ್ಮಾರ, ಕಮ್ಮಾರ, ನೇಕಾರ, ಮಂತ್ರವಾದಿ, ಕೂಲಿಕಾರ, ಅಸ್ಪೃಶ್ಯ ಭೂರಹಿತ ಕಾರ್ಮಿಕ, ಹೋಟೆಲ್ ಕಾರ್ಮಿಕ, ರೈತ, ಗುಮಾಸ್ತ, ಅಧಿಕಾರಿ, ಪತ್ರಕರ್ತ, ಶಾಲಾ ಮಾಸ್ತರು, ಉಪನ್ಯಾಸಕ, ಜಮೀನ್ದಾರ, ಉದ್ಯಮಪತಿ, ಪಾಳೇಗಾರ, ಸಾಮಂತರ ರಾಜ, ದೊರೆ, ಚಕ್ರವರ್ತಿ, ಪತ್ತೇದಾರ (ಸಿಐಡಿ) ಹೀಗೇ ಒಂದೇ ಎರಡೆ? ಈ ಪಾತ್ರಗಳ ಮೂಲಕವೇ ಅವರು ತಂದೆ ಎಂದರೆ ಹೇಗಿರಬೇಕು, ಅಣ್ಣ ಎಂದರೆ ಹೇಗಿರಬೇಕು, ತಮ್ಮ ಎಂದರೆ ಹೇಗಿರಬೇಕು, ಗಂಡ ಎಂದರೆ ಹೇಗಿರಬೇಕು, ಪ್ರೇಮಿ ಎಂದರೆ ಹೇಗಿರಬೇಕು, ದೊರೆ ಎಂದರೆ ಹೇಗಿರಬೇಕು, ಭಕ್ತ ಎಂದರೆ ಹೇಗಿರಬೇಕು, ದೇವರು–ರಾಕ್ಷಸರೂ ಹೇಗಿದ್ದಾರು ಎಂಬ ಆದರ್ಶಗಳ ಅಚ್ಚನ್ನು ನಿರ್ಮಿಸಿಕೊಟ್ಟರು. ಜೊತೆಗೆ ಈ ಪಾತ್ರಗಳು ದುಡಿಮೆಯ ಘನತೆ, ಸ್ನೇಹ, ಕೊಟ್ಟ ಮಾತು, ಇವುಗಳ ಜೊತೆಗೆ ಸಮಾನತೆ, ಸರಳತೆ, ನ್ಯಾಯ, ಪ್ರತಿಭಟನೆ, ವಿನಯ, ಶ್ರದ್ಧೆ ಮುಂತಾದ ಘನ ಮೌಲ್ಯಗಳ ಪ್ರತೀಕಗಳೂ ಆಗಿ ಕೆಲಸ ಮಾಡಿದವು. ಚಿತ್ರಸಾಹಿತಿ ಮತ್ತು ನಿರ್ದೇಶಕರಿಗೂ ಅಂತಹ ಪಾತ್ರ ನಿರ್ಮಿತಿಯು ಮೇಲೆ ಹೇಳಿದ ಕಾರಣಗಳಿಂದಾಗಿ ಕಾಲದ ಅಗತ್ಯವೂ ಆಗಿತ್ತು. ಅಲ್ಲದೆ, ಆ ಕಾಲಾವಧಿಯಲ್ಲಿ ಹೆಚ್ಚು ಕನ್ನಡ ಚಿತ್ರಗಳು ನಿರ್ಮಾಣಗೊಳ್ಳದ ಕಾರಣದಿಂದಾಗಿ ಜೀವನ ನಿರ್ವಹಣೆ ಕಷ್ಟವಾಗಿ ರಾಜ್‌ಕುಮಾರ್ ಸೇರಿದಂತೆ ಕನ್ನಡ ನಟನಟಿಯರು ತಂಡಗಳನ್ನು ಕಟ್ಟಿಕೊಂಡು ರಾಜ್ಯಾದ್ಯಂತ ಮೊಕ್ಕಾಂ ಮಾಡಿ ಜನಪ್ರಿಯ ನಾಟಕಗಳನ್ನು ಪ್ರದರ್ಶಿಸತೊಡಗಿದ್ದೂ, ತದನಂತರದಲ್ಲೇ ಉತ್ತರ ಕರ್ನಾಟಕದಲ್ಲಿ ಸಂಭವಿಸಿದ ಪ್ರವಾಹ ಪರಿಹಾರ ನಿಧಿ ಸಂಗ್ರಹಕ್ಕಾಗಿ ಇವರೆಲ್ಲ ರಾಜ್ಯ ಪ್ರವಾಸ ಮಾಡಿ ಜನರ ಮಧ್ಯೆ ಬೆರೆತದ್ದೂ ಕನ್ನಡ ಚಿತ್ರರಂಗವೆಂದರೆ 'ರಾಜ್‌ಕುಮಾರ್ ಪರಿವಾರ' ಎಂಬ ಭಾವನೆ ಬೆಳೆಯಲು ಸಹಾಯಕವಾಗಿ ರಾಜ್‌ಕುಮಾರ್ ಸಾಮಾನ್ಯ ಕನ್ನಡಿಗರ ಹೃದಯದಲ್ಲಿ ಚಿರಸ್ಥಾಯಿಯಾದ ಸ್ಥಾನವನ್ನೇ ಗಿಟ್ಟಿಸಿಕೊಂಡರು.

ಇದೇ ಸಂದರ್ಭದಲ್ಲಿ ಅರವತ್ತರ ದಶಕದ ಕೊನೆಯ ವರ್ಷಗಳ ಹೊತ್ತಿಗೆ 'ಮಂತ್ರಾಲಯ ಮಹಾತ್ಮೆ' ಎಂಬ ಚಿತ್ರದ ಬಗ್ಗೆ ಎದ್ದ ವಿವಾದ ವಿಶೇಷ ಪ್ರಸ್ತಾಪಕ್ಕೆ ಅರ್ಹವಾದದ್ದು. ರಾಜ್‌ಕುಮಾರ್ ಹುಟ್ಟಿನಿಂದ ಮಾಂಸಾಹಾರಿ ಎಂಬುದು ಬಹಳ ಜನಕ್ಕೆ ಗೊತ್ತಾದದ್ದು ಆಗಲೇ. ಇದು ಕೆಲವರಲ್ಲಿ ಕಸಿವಿಸಿ ಉಂಟುಮಾಡಿದರೆ ಬಹಳ ಜನರಲ್ಲಿ ಹೆಮ್ಮೆಗೂ ಕಾರಣವಾಯಿತು. ಆದರೆ ಈ ವಿವಾದಕ್ಕೆ ಯಾವ ಪ್ರಚೋದಕ ಪ್ರತಿಕ್ರಿಯೆಯನ್ನೂ ನೀಡದ ರಾಜ್‌ಕುಮಾರ್ ಆ ಚಿತ್ರದ ಚಿತ್ರೀಕರಣದ ಸಮಯದುದ್ದಕ್ಕೂ ಸಸ್ಯಾಹಾರಿಯಾಗಿ ಕೆಲವು ಮಡಿ ಮೈಲಿಗೆಗಳನ್ನು ಕಾಪಾಡಿಕೊಳ್ಳುವುದಾಗಿ ಹೇಳಿ ಅದರಂತೆ

ನಡೆದುಕೊಳ್ಳುವುದಷ್ಟೇ ಅಲ್ಲದೆ ರಾಘವೇಂದ್ರ ಸ್ವಾಮಿಗಳ ಪಾತ್ರವನ್ನು ಮನೋಜ್ಞವಾಗಿ ಅಭಿನಯಿಸಿ ಎಲ್ಲರ ಮನಗೆದ್ದರು. ಎಲ್ಲರ ಎಂದು ಹೇಳಲಾಗದೇನೋ! ಏಕೆಂದರೆ ಆ ಚಿತ್ರ ಗಲ್ಲಾಪೆಟ್ಟಿಗೆಯ ದೃಷ್ಟಿಯಿಂದ ಅಷ್ಟೇನೂ ಯಶಸ್ವಿಯಾಗಲಿಲ್ಲ. (ಆದರೆ ಎಷ್ಟೋ ವರ್ಷಗಳ ನಂತರ ಯಾರೋ 'ಪವಿತ್ರಾತ್ಮ'ರು ರಾಘವೇಂದ್ರ ಸ್ವಾಮಿಗಳನ್ನು ಕುರಿತ ಇನ್ನೊಂದು ಚಿತ್ರವನ್ನು ಹುಟ್ಟಿನಿಂದಷ್ಟೇ ಸಸ್ಯಾಹಾರಿಯಾದ ನಟರೊಬ್ಬರಿಗೆ ಆ ಪಾತ್ರ ನೀಡಿ ನಿರ್ಮಿಸಿ ಹಳೆಯ ಮೈಲಿಗೆಯನ್ನು ಮಡಿಗೊಳಿಸಿದರು ಎಂಬುದನ್ನೂ ನಾವಿಲ್ಲಿ ಗಮನಿಸಬೇಕು.) ಅದಾಗ್ಯೂ ನಿಜ ಸಂಗತಿ ಏನೆಂದರೆ ರಾಘವೇಂದ್ರಸ್ವಾಮಿಗಳನ್ನು ಕುರಿತ ಭಕ್ತಿ ರಾಜ್ಯಾದ್ಯಂತ ಹಬ್ಬಿ 'ರಾಘವೇಂದ್ರ ಮಟನ್ ಸ್ಟಾಲ್', 'ರಾಘವೇಂದ್ರ ಹೇರ್‌ಕಟಿಂಗ್ ಸಲೂನ್' ಇತ್ಯಾದಿಗಳು ಆರಂಭವಾಗಿ ಮಂತ್ರಾಲಯದ ಭಕ್ತರು ಜಾಸ್ತಿಯಾದದ್ದು 'ಮಂತ್ರಾಲಯ ಮಹಾತ್ಮೆ'ಯ 'ಮಹಾತ್ಮೆ'ಯಿಂದಲೇ. ಇದನ್ನೆಲ್ಲ ಇಲ್ಲಿ ಏಕೆ ಹೇಳುತ್ತಿರುವೆನೆಂದರೆ, ರಾಜ್‌ಕುಮಾರ್ ಈ ಪ್ರಸಂಗದಿಂದ ಜನಸಾಮಾನ್ಯರ ಮನಸ್ಸಿನಾಳವನ್ನೇ ಹೇಗೆ ಪ್ರವೇಶಿಸಿದರು ಎಂಬುದನ್ನು ಸೂಚಿಸಲು.

ರಾಜ್‌ಕುಮಾರ್ ಅವರ ಈ ಶೋಭಾಯಾತ್ರೆ ಒಂದು ಮುಖ್ಯ ಘಟ್ಟ ತಲುಪಿದ ಸಂದರ್ಭವೆಂದರೆ ಅವರ ನೂರನೆಯ ಚಿತ್ರ 'ಭಾಗ್ಯದ ಬಾಗಿಲು' ಬಿಡುಗಡೆಯಾದಾದಾಗ. ಆ ಹೊತ್ತಿಗೆ ಅವರ ರಂಗಭೂಮಿ ಹಿನ್ನೆಲೆಯ ಪ್ರತಿಭೆಯ ಎಲ್ಲ ಪ್ರಯೋಗಗಳೂ ಒಂದು ಮಗಿತಾಯಕ್ಕೆ ಬಂದಂತಾಗಿದ್ದು, ಅವರು ಹೆಚ್ಚಾಗಿ ಜನಪ್ರಿಯ ಸಾಮಾಜಿಕ ಪಾತ್ರಗಳತ್ತ ಹೊರಳಿದ್ದರು. ಅವರು ನಿರ್ಮಾಪಕರಿಗೆ ಹಾಕಿದ ಹಣವನ್ನು ಸ್ವಲ್ಪವಾದರೂ ಲಾಭದೊಂದಿಗೆ ವಾಪಸ್ ತರುವ ಖಚಿತ ಭರವಸೆ ನೀಡುವ ನಾಯಕ ನಟರಾಗಿ ಮಾರ್ಪಾಟಾಗಿದ್ದರು. ಅಂದರೆ ಸಿನಿಮಾ ಮಾರುಕಟ್ಟೆಯ ಒಂದು 'ಬಂಡವಾಳ'ದ ರೂಪ ಪಡೆದಿದ್ದರು. ಹಾಗಾಗಿಯೇ ಇಂತಹ ಮೇರುನಟನ ನೂರನೇ ಚಿತ್ರ ಅವರ ಪ್ರತಿಭೆಯ ಒಂದು ಮೈಲಿಗಲ್ಲನ್ನು ಸೂಚಿಸುವ ಚಿತ್ರವಾಗದೆ, ಈವರೆಗಿನ ಅವರ ಎಲ್ಲ ಕಲಾಸಾಧನೆ ಗಳಿಸಿಕೊಂಡಿದ್ದ ಒಂದು ಸಮತೋಲನ ಅವರ ಕೈ ತಪ್ಪಿದಂತಾಗಿ 'ನಾನೇ ರಾಜಕುಮಾರ, ಕನ್ನಡ ನಾಡಿನ ಪ್ರೇಮದ ಕುವರ, ನ್ಯಾಯವನುಳಿಸಿ ಅನ್ಯಾಯವನಳಿಸಲು ಬಂದ ಕಿಶೋರ' ಎಂಬ ಹುಸಿ ಘೋಷಣೆಗಳ ಹಾರಾಟದ ಹಾಡನ್ನು ಹಾಡುವ ಬಡಕಲು ಕಥೆಯ ಅಗ್ಗದ ಮನರಂಜನೆಯ ಒಂದು ಕಳಪೆ ಚಿತ್ರದ ರೂಪದಲ್ಲಿ ಹೊರಬಂತು.

ಇದು ರಾಜ್‌ಕುಮಾರ್ ಅವರ ಚಿತ್ರರಂಗದ ಬದುಕಿನ ಎರಡನೆಯ ಹಂತದ ಆರಂಭ. ಮೊದಲ ಹಂತಕ್ಕೆ ಹೋಲಿಸಿದಂತೆ ಎಚ್ಚರದಪ್ಪಿದ ಬಹು ರೂಕ್ಷ ಹಂತವಿದು. ನಿಜ, ಆಗವರು ಓರ್ವ ಯಶಸ್ವಿ ನಟ ಮಾತ್ರಾರಾಗಿದ್ದರು; ಉದ್ಯಮದ ಯಾವ ಸೂತ್ರವೂ ಅವರ ಕೈಯಲ್ಲಿರಲಿಲ್ಲ. ಆದರೆ ಉದ್ಯಮವು ತಮ್ಮನ್ನು ಬಳಸಿಕೊಳ್ಳಲು ಅವರು ಅವಕಾಶ ಮಾಡಿಕೊಟ್ಟರು. ಇದಕ್ಕೆ ಮುಖ್ಯ ಕಾರಣ ಅವರು ಅಪ್ರತಿಮ ಪ್ರತಿಭಾವಂತರೇ ಆಗಿದ್ದರೂ, ಯಶಸ್ಸಿನ ಅಪಾಯಗಳ ಅರಿವಿಲ್ಲದೆ 'ಜನಪ್ರಿಯತೆ'ಯ ಮರುಳಿಗೆ

ಒಳಗಾದದ್ದು. ಇದರ ಪರಿಣಾಮವೆಂದರೆ ಅವರು ಮೃದುಸೂಕ್ಷ್ಮ ಸಂವೇದನೆಗಳ ಪ್ರೇಕ್ಷಕ ವರ್ಗದ ನಿರೀಕ್ಷೆಗಳಿಗೆ ಎರವಾದರು. ಆಗ ಅವರಿಗೆ ಯಶಸ್ಸು, ಯೌವ್ವನ, ಅಭಿಮಾನಿ ಸಂಘಗಳ ಸ್ಥಾಪನೆಯ ಉಬ್ಬರ ಮತ್ತು ಆ ಮೂಲಕ ದೊರೆತ ಹೊಸದೊಂದು ತಲೆಮಾರಿನ ಪ್ರೇಕ್ಷಕ ವರ್ಗದ ಹುಚ್ಚು ಅಲೆಯ ಆರಾಧನೆಯ ಉನ್ಮಾದವೂ ಇತ್ತು, ಇದರ ಆಸುಪಾಸಿನಲ್ಲಿಯೇ ಅವರ 'ಎಮ್ಮೆ ತಮ್ಮಣ್ಣ', 'ಬೀದಿ ಬಸವಣ್ಣ', 'ಕಿಲಾಡಿ ರಂಗ', 'ಚೂರಿ ಚಿಕ್ಕಣ್ಣ', 'ಮನಸ್ಸಿದ್ದರೆ ಮಾರ್ಗ', 'ಧೂಮಕೇತು', 'ಮಿಸ್ಟರ್ ರಾಜ್‌ಕುಮಾರ್', 'ಭಲೇ ರಾಜ', 'ಭಲೇ ಜೋಡಿ' ಮುಂತಾದ ಶಿಳ್ಳೆ–ಚಪ್ಪಾಳೆಗಳ ಅಗ್ಗದ ಜನಪ್ರಿಯತೆಯ, ಪರಭಾಷಾ ಚಿತ್ರಗಳ ದುರ್ವಾಸನೆ ಹೊಡೆಯುವ ದಿಕ್ಕೆಟ್ಟ ಚಿತ್ರಗಳು ಬಂದದ್ದು. ಇವುಗಳ ಮಧ್ಯೆಯೇ ಅವರ ಮೂಲಪ್ರತಿಭೆಯ ಮಾನ್ಯತೆಯ ಕುರುಹುಗಳಂತೆ 'ಬಂಗಾರದ ಹೂವು', 'ಸರ್ವಮಂಗಳಾ', 'ಮಾರ್ಗದರ್ಶಿ', 'ಪ್ರೇಮಮಯಿ', 'ಸಂಧ್ಯಾರಾಗ', 'ಹಣ್ಣೆಲೆ ಚಿಗುರಿದಾಗ', 'ನಮ್ಮ ಸಂಸಾರ', 'ಕುಲಗೌರವ', 'ಇಮ್ಮಡಿ ಪುಲಿಕೇಶಿ', 'ಶ್ರೀಕೃಷ್ಣ ದೇವರಾಯ' ಮುಂತಾದ ಕೌಟುಂಬಿಕ, ಐತಿಹಾಸಿಕ ಮತ್ತು ಸರಳ ಸೌಂದರ್ಯದ ಹಾಗೂ ಲಲಿತ ಮನರಂಜನೆಯ ಚಿತ್ರಗಳಲ್ಲಿ ನಟಿಸಿದರಾದರೂ, ಅವರ ಬಿಂಬ ಒಡೆದಿತ್ತು. ಕಾರಣ, ಅವರ ಮೂಲ ಪ್ರೇಕ್ಷಕವರ್ಗವೂ ಒಡೆದುಹೋಗಿತ್ತು. ರಾಜ್‌ಕುಮಾರ್ ಇಂತಹ ಜನಪ್ರಿಯತೆಯ ಹಾದಿ ಹಿಡಿಯುತ್ತಾರೆ ಎಂಬ ಅನುಮಾನವನ್ನೂ ಇಟ್ಟುಕೊಳ್ಳದ ಒಂದು ಶಿಕ್ಷಿತ ಮಧ್ಯಮ ವರ್ಗದ ಪ್ರೇಕ್ಷಕರು ರಾಜ್‌ಕುಮಾರರಿಂದ ದೂರ ಸರಿದರು; ಶಾಶ್ವತವಾಗಿ ಅಲ್ಲದಿದ್ದರೂ.

ರಾಜ್‌ಕುಮಾರ್ ಹಾದಿ ತಪ್ಪಿ ಈ ಸಗಟು ಮತ್ತು ಸ್ಥೂಲ ಜನಪ್ರಿಯತೆಯ, ಆದರೆ ಬಹು ಯಶಸ್ಸಿನ ಹಾದಿ ಹಿಡಿಯಲು ಬಹುಶಃ ಇನ್ನೊಂದು ಕಾರಣವೂ ಇತ್ತು. ಆಗ ರಾಜ್‌ಕುಮಾರ್ ಚಿತ್ರಗಳಿಗೆ ಸಮಾನಾಂತರವಾಗಿ ಅವನ್ನು 'ಹಳೆಯ ಜಾಡಿನವು' ಎಂಬಂತೆ ಮಸುಕುಮಾಡಬಲ್ಲ ಚಿತ್ರಗಳು ಬರಲಾರಂಭಿಸಿದ್ದವು. 'ಸುಬ್ಬಾಶಾಸ್ತ್ರಿ' ಅಂತಹವುಗಳಲ್ಲಿ ಮೊದನೆಯದು. ಅದರ ಬೆನ್ನಲ್ಲೇ ಪುಟ್ಟಣ್ಣ ಕಣಗಾಲ್ ಎಂಬ ಹೊಚ್ಚಹೊಸ ನಿರ್ದೇಶನ ಪ್ರತಿಭೆಯ 'ಬೆಳ್ಳಿಮೋಡ' ಬಂತು. ನಂತರ 'ಗೆಜ್ಜೆ ಪೂಜೆ', 'ಕಪ್ಪು ಬಿಳುಪು' ಬಂದವು. ಕನ್ನಡ ಚಿತ್ರರಂಗದಲ್ಲಿ ನಾಯಕಿ ಪ್ರಧಾನವಾದ; ಮತ್ತೂ ಮುಖ್ಯವಾಗಿ ನಿರ್ದೇಶಕ ಪ್ರಧಾನವಾದ ಚಿತ್ರಗಳ ಪರಂಪರೆಯೊಂದು ಆರಂಭವಾಯಿತು. ಈ ಮಧ್ಯೆ 'ನಮ್ಮ ಊರು' ಎಂಬ ಯಶಸ್ವಿ ಚಿತ್ರದ ಮೂಲಕ ರಾಜೇಶ್ ಎಂಬ ನಟ ರಾಜ್‌ಕುಮಾರ್‌ಗೆ ಪ್ರತಿಸ್ಪರ್ಧಿಯಂತೆ ಕಾಣಿಸಿಕೊಂಡರು. ಎಲ್ಲಕ್ಕಿಂತ ಮುಖ್ಯವಾಗಿ ಹೊಸ ಸಂವೇದನೆಯ 'ಸಂಸ್ಕಾರ', ನಂತರ 'ಕಾಡು', 'ವಂಶವೃಕ್ಷ'ಗಳಂತಹ ಹೊಸ ಅಲೆಯ ಸಿನಿಮಾಗಳು ಸುದ್ದಿ ಮಾಡಿ ಕನ್ನಡ ಚಿತ್ರರಂಗವನ್ನು ಒಂದು ಹೊಸ ಎತ್ತರಕ್ಕೆ ಒಯ್ದುವು. ಈ ಎಲ್ಲ ರೀತಿಯ ಉತ್ಪಾತಗಳಿಂದ ಪಾರಾಗಿ ಉಳಿಯಲು ರಾಜ್‌ಕುಮಾರ್ ಅವರಿಗೆ ಇದ್ದದ್ದು ಬಹುಶಃ ಒಂದೇ ದಾರಿ. ಅದು ಮಧ್ಯಮ ವರ್ಗದ ಒಂದು 'ಗಣ್ಯ' ಭಾಗದ ಸಂವೇದನೆಗಳ ಬಗ್ಗೆ ತಲೆ ಕೆಡಿಸಿಕೊಳ್ಳದೇ ತಮ್ಮದೇ ಒಂದು ಪ್ರೇಕ್ಷಕ ವರ್ಗವನ್ನು ಉಳಿಸಿಕೊಂಡು

ಬೆಳೆಸುವುದೇ. ಬೆಳೆಯುವುದೇ ಆಗಿತ್ತು. ಈ ಇಕ್ಕಟ್ಟು ಅವರನ್ನು ಒಂದು ದ್ವಂದ್ವಕ್ಕೆ ತಳ್ಳಿದಂತೆ ಅವರ ಚಿತ್ರ ಬಳಗದಲ್ಲಿ ಅಭಿರುಚಿಯ ಹೊಸ ಸಮನ್ವಯದ ಪ್ರಯೋಗಕ್ಕೂ ಕಾರಣವಾದಂತೆ ತೋರುತ್ತದೆ. 'ಉಯ್ಯಾಲೆ', 'ಮಣ್ಣಿನಮಗ', 'ಕಸ್ತೂರಿನಿವಾಸ', 'ಮೇಯರ್ ಮುತ್ತಣ್ಣ', 'ಮಲ್ಲಮ್ಮನ ಪವಾಡ', 'ಕರುಳಿನ ಕರೆ' ಮುಂತಾದವು ಇದಕ್ಕೆ ಸಾಕ್ಷಿಯಂತಿವೆ. 'ಜೇಡರಬಲೆ'ಯಿಂದ ಆರಂಭವಾದಂತೆ ರಾಜ್‌ಕುಮಾರ್ ಅವರ ಅಭಿನಯ ಪ್ರತಿಭೆಗೆ ಆಧುನಿಕತೆಯ ಬೆಡಗಿನ ಆಯಾಮ ನೀಡಿದ ಬಾಂಡ್ ಚಿತ್ರಗಳ ಸರಣಿ ಆರಂಭವಾಗಿದ್ದೂ ಆಗಲೇ.

ಈ ಪ್ರಯೋಗಶೀಲತೆ ತನ್ನ ಸಾರ್ಥಕತೆಯನ್ನು ಕಂಡುಕೊಂಡದ್ದು 'ಬಂಗಾರದ ಮನುಷ್ಯ' ಎಂಬ ಚಿತ್ರದಲ್ಲಿ ಎಂದು ಹೇಳಬಹುದು. ಇದರ ದಾಖಲೆ ಯಶಸ್ಸನ್ನು ಬಹುಶಃ ಈವರೆಗೆ ಯಾರೂ ಸಮರ್ಥವಾಗಿ ವಿವರಿಸಲು ಸಾಧ್ಯವಾಗಿಲ್ಲ. ಹಾಗೆ ನೋಡಿದರೆ ಇದನ್ನು ನಮ್ಮ ಪ್ರಧಾನ ಲಹರಿ ಚಿತ್ರಗಳ ಎಲ್ಲ ಒಳ್ಳೆಯ ಗುಣಗಳೂ ಒಟ್ಟಿಗೇ ಮೇಳವಿಸಿದ್ದ ಚಿತ್ರವಿದು ಎಂದು ಸರಳವಾಗಿ ಸಾರಾಂಶೀಕರಿಸಿ ಹೇಳಿಬಿಡಬಹುದು. ಆದರೆ ಇದರ ಯಶಸ್ಸಿನ ಹಿಂದೆ ಇದ್ದ ಮುಖ್ಯ ಶಕ್ತಿ ಎಂದರೆ ಸಿದ್ದಲಿಂಗಯ್ಯ ಎಂಬ ನಮ್ಮ ಹಳ್ಳಿಗಾಡಿನ ಬದುಕಿನ ಕಷ್ಟ-ಸುಖಗಳ ಎಲ್ಲ ಸೂಕ್ಷ್ಮಗಳನ್ನೂ ಸಾವಯವವಾಗಿ ಗ್ರಹಿಸಿ ಅವನ್ನು ಒಂದು ಜನರ ಕಥೆಯಾಗಿ ತೆರೆಯ ಮೇಲೆ ಮಂಡಿಸಲು ಸೂಕ್ತವಾದ ಅವಕಾಶಕ್ಕಾಗಿ ಕಾಯುತ್ತಿದ್ದ ವಿಶಿಷ್ಟ ಪ್ರತಿಭೆ ಎಂದು ನಾನು ಭಾವಿಸಿದ್ದೇನೆ. 'ಹಳ್ಳಿಯಾದರೇನು ಶಿವಾ, ದಿಳ್ಳಿಯಾದರೇನು ಶಿವಾ' ಹಾಡಿನ ಖ್ಯಾತಿಯ 'ಮೇಯರ್ ಮುತ್ತಣ್ಣ' ಚಿತ್ರದಲ್ಲಿ ಒಂದು ಸಣ್ಣ ಹೊಳಹಿನಂತೆ ಕಾಣಿಸಿಕೊಂಡಿದ್ದ ಈ ಪ್ರತಿಭೆಯ ಪೂರ್ಣ ರೂಪ ಸಾಕಾರಗೊಳ್ಳಲು ಸಾಧ್ಯವಾದದ್ದು 'ಬಂಗಾರದ ಮನುಷ್ಯ' ಚಿತ್ರದ ಬೃಹತ್ ಯೋಜನೆಯಲ್ಲಿ. ಈ ಚಿತ್ರದಲ್ಲಿ ರಾಜ್‌ಕುಮಾರ್ ಈ ಹೊತ್ತಿಗೆ ಬೆಳೆಸಿಕೊಂಡಿದ್ದ ತಮ್ಮದೇ ಹೊಸದೊಂದು ವಿಶಿಷ್ಟ ಪ್ರೇಕ್ಷಕ/ಅಭಿಮಾನಿ ವರ್ಗ ಇನ್ನಷ್ಟು ವಿಸ್ತಾರಗೊಳ್ಳುವ ರೀತಿಯ; ನಗರದ ಸ್ಪರ್ಶ ಪಡೆದು ಉನ್ನತಿಯ ಕನಸು ಕಾಣುತ್ತಿದ್ದ ತನ್ನದಲ್ಲದ-ಗಂಡ ಕಳೆದುಕೊಂಡ ತನ್ನ ಅಕ್ಕನ- ಒಂದು ಗ್ರಾಮೀಣ ಕುಟುಂಬದ 'ನಾಯಕತ್ವ' ವಹಿಸುವ ಒಂದು ಆದರ್ಶ ಪಾತ್ರದಲ್ಲಿ ತಮ್ಮ ದೇಹಸಿರಿಯೂ ಸೇರಿದಂತೆ ಆ ಪಾತ್ರ ಬೇಡುವ ಎಲ್ಲ ಬಣ್ಣ-ಬೆಡಗುಗಳಿಗೂ ತಮ್ಮ ಪ್ರತಿಭೆಯ ಕಾಣಿಕೆ ನೀಡಿ ತಾವು ಕಳೆದುಕೊಂಡಿದ್ದ ಮಧ್ಯಮ ಗಣ್ಯವರ್ಗದ ಪ್ರೀತಿಯನ್ನು ಮತ್ತೆ ಸಂಪಾದಿಸಿಕೊಂಡರು. ಈ ಚಿತ್ರದ ಯಶಸ್ಸಿಗೆ ಈ ಎಲ್ಲ ಅಂಶಗಳು ಮತ್ತು ಒಳ್ಳೆಯ ಸಾಹಿತ್ಯ, ಸಂಗೀತ, ಛಾಯಾಗ್ರಹಣ, ಧ್ವನಿಗ್ರಹಣಗಳ ಜೊತೆಗೆ ರಾಚೂಟಪ್ಪನ ಪಾತ್ರದಲ್ಲಿನ ಟಿ.ಎನ್. ಬಾಲಕೃಷ್ಣರ ಅಭಿನಯ ಪ್ರತಿಭೆಯ ಪಾಲು ದೊಡ್ಡದು ಎಂಬುದನ್ನೂ ಇಲ್ಲಿ ಹೇಳಿದರೆ ತಪ್ಪಾಗಲಾರದು. (ಆದರೆ ಸಿದ್ಧಲಿಂಗಯ್ಯನವರ ಈ ಪ್ರತಿಭೆ ಹೆಚ್ಚು ನಿಜತ್ವದಲ್ಲಿ ಕಾಣಿಸಿಕೊಂಡದ್ದು ನಂತರದ 'ದೂರದ ಬೆಟ್ಟ' ಚಿತ್ರದ ಮೊದಲ ಭಾಗದಲ್ಲಿ ಮತ್ತು ಹೆಚ್ಚು ಪ್ರಬುದ್ಧವಾಗಿ ಪ್ರತಿಬಿಂಬಿತಗೊಂಡದ್ದು 'ಬೂತಯ್ಯನ ಮಗ ಅಯ್ಯು' ಚಿತ್ರದಲ್ಲಿ ಎಂಬುದನ್ನೂ ಇಲ್ಲಿ ಹೇಳಬೇಕು.)

'ಬಂಗಾರದ ಮನುಷ್ಯ' ರಾಜ್‌ಕುಮಾರ್ ಅವರ ಬದುಕಿನಲ್ಲಿ ಹೇಗೋ ಕನ್ನಡ ಚಿತ್ರರಂಗದ ಇತಿಹಾಸದಲ್ಲೂ ಒಂದು ಸ್ಥಿತ್ಯಂತರವನ್ನು ಉಂಟು ಮಾಡಿದ ಚಿತ್ರವೆಂದೂ ಅದನ್ನು ಗುರುತಿಸಬಹುದು. ಏಕೆಂದರೆ ಈ ಚಿತ್ರದ ನಂತರ ಕನ್ನಡ ಚಿತ್ರರಂಗದಲ್ಲಿ ರಾಜ್‌ಕುಮಾರ್ ಅವರ ಓಟವನ್ನು ಯಾರೂ ತಡೆಯಲಾರದಾದರು. ಹಾಗೇ ಈ ಚಿತ್ರದ ದಾಖಲೆ ಯಶಸ್ಸಿನಿಂದ ಸ್ಫೂರ್ತಿ ಪಡೆದಂತೆ ಕನ್ನಡ ಚಿತ್ರರಂಗವೂ ಹೆಚ್ಚು ಮಹತ್ವಾಕಾಂಕ್ಷೆಯಲ್ಲಿ ಕನ್ನಡ ಚಿತ್ರಗಳ ಮೇಲೆ ಹೆಚ್ಚೆಚ್ಚು ಬಂಡವಾಳವನ್ನು ಹೂಡತೊಡಗಿತು. ಈ ಚಿತ್ರದ ನಂತರ ರಾಜ್‌ಕುಮಾರ್ ಹಲವು ಕಪ್ಪು ಬಿಳುಪು ಚಿತ್ರಗಳಲ್ಲಿ ನಟಿಸಿದರಾದರೂ ಅನತಿ ಕಾಲದಲ್ಲೇ ಅವರು ಬಣ್ಣದ ನಾಯಕರಾಗಿ ಪರಿವರ್ತಿತರಾಗಿದ್ದರು. ಎರಡು ಕನಸು–ಗಂಧದ ಗುಡಿ–ದಾರಿ ತಪ್ಪಿದ ಮಗ–ಸಂಪತ್ತಿಗೆ ಸವಾಲ್–ಬಂಗಾರದ ಪಂಜರ–ಭಕ್ತ ಕುಂಬಾರ–ಬಭ್ರುವಾಹನ–ಮಯೂರ–ಪ್ರೇಮದ ಕಾಣಿಕೆ–ಹುಲಿಯ ಹಾಲಿನ ಮೇವು– ಹೀಗೆ ಸಾಲು ಸಾಲಾಗಿ ರಾಜ್‌ಕುಮಾರ್ ಅವರ ಸರ್ವಾಂಗೀಣ ಪ್ರತಿಭೆಯನ್ನು ವಾಣಿಜ್ಯಕ ನೆಲೆಯಲ್ಲೂ ಸೂರೆ ಮಾಡಿ ಸರ್ವ ರೀತಿಯ ಪ್ರೇಕ್ಷಕರಿಗೂ 'ರಾಜ್‌ಕುಮಾರ್' ಎಂಬ ಹೆಸರಿನ ಸಮಗ್ರ ಮನರಂಜನೆಯ ರಸದೌತಣ ನೀಡುವಂತಹ ಚಿತ್ರಗಳು ಬಂದವು.

ಇದರ ಪರಿಣಾಮವೆಂದರೆ, ಆ ಹೊತ್ತಿಗೆ ಪುಟ್ಟಣ್ಣ ಕಣಗಾಲ್, ವಿಷ್ಣುವರ್ಧನ್, ಅನಂತನಾಗ್ ಎಂಬ ತಾರೆಗಳು ಕನ್ನಡ ಚಿತ್ರರಂದಗದ ದಿಗಂತದಲ್ಲಿ ಕಾಣಿಸಿಕೊಂಡು ಕನ್ನಡ ಚಿತ್ರರಂಗವನ್ನು ಬಹುಆಯಾಮಕಗೊಳಿಸಿದ್ದರೂ, ಕನ್ನಡ ಚಿತ್ರರಂಗವೆಂದರೆ ರಾಜ್‌ಕುಮಾರ್ ಅವರೇ ಎಂದೆನ್ನುವಷ್ಟರ ಮಟ್ಟಿಗೆ, ಎಲ್ಲ ಸ್ಪರ್ಧಿಗಳನ್ನೂ, ಸ್ಪರ್ಧೆಗಳನ್ನೂ ಮೆಟ್ಟಿ ಅವರು ತಮ್ಮ ಒಂದಾದಮೇಲೊಂದರಂತೆ ಗಲ್ಲಾಪೆಟ್ಟಿಗೆಯನ್ನು ಬಾಚಿದ ಚಿತ್ರಗಳ ನಾಯಕರಾಗಿ ಹೆಚು ಅಬ್ಬರವಿಲ್ಲದ, ಆದರೆ ಮೃದು ರೋಮಾಂಚನದ ಸದಭಿರುಚಿಯ ಮನರಂಜನೆಯ ಚಿತ್ರಗಳ ಮೂಲಕ ಚಿತ್ರರಂಗವನ್ನು ಆಳತೊಡಗಿದರು. ಹೇಗೂ ಅವರು ಈ ಹೊತ್ತಿಗೆ ಹಿನ್ನೆಲೆ ಗಾಯಕರ ಹಂಗನ್ನೂ ತೊರೆದು ಜನಮೆಚ್ಚಿದ ಗಾಯಕರೂ ಆಗಿದ್ದರಲ್ಲ! ರಾಜ್‌ಕುಮಾರ್ ಅವರ ತಮ್ಮ ವರದಪ್ಪ, ಸಾಹಿತಿ ಚಿ. ಉದಯಶಂಕರ ಮತ್ತು ನಿರ್ಮಾಪಕ–ನಿರ್ದೇಶಕ ಜೋಡಿ ದೊರೆ–ಭಗವಾನ್‌ರು ಈ ಹಂತದಲ್ಲಿ ರಾಜ್‌ಕುಮಾರ್ ಚಿತ್ರಗಳ ಸ್ವರೂಪ ಮತ್ತು ಹದವನ್ನು ನಿರ್ಧರಿಸುತ್ತಿದ್ದರೆಂಬ ವರದಿಗಳಿದ್ದು, ಇದು ರಾಜ್‌ಕುಮಾರ್ ಎಂಬುದು ಕೇವಲ ಒಂದು ಅಭಿನಯ ಪ್ರತಿಭೆಯ ಹೆಸರು, ಒಂದು ಉದ್ಯಮ ಅಥವಾ ಕೈಗಾರಿಕೆಯಾಗದೆ ಒಂದು ಜನಸ್ನೇಹಿ ಸಮೂಹ ಮಾಧ್ಯಮ ರೂಪದಲ್ಲಿ ವ್ಯವಸ್ಥಿತವಾಗಲು ನೆರವಾಯಿತೆಂದೇ ಹೇಳಬೇಕು. ಹೀಗೆ ರಾಜ್‌ಕುಮಾರ್ ಈಗ ಆಧುನಿಕ ಕರ್ನಾಟಕದ ಚರಿತ್ರೆಯಲ್ಲಿನ ಒಂದು ದಂತಕಥೆಯೇ ಆಗಿಬಿಟ್ಟಿದ್ದರು.

ಬಹುಶಃ ಈ ಹಂತದಲ್ಲೇ ರಾಜ್‌ಕುಮಾರ್ ಕುಟುಂಬ ಮತ್ತು ಹತ್ತಿರದ ಸಂಬಂಧಿಕರು ಚಿತ್ರನಿರ್ಮಾಣ, ಚಿತ್ರ ವಿತರಣೆ ಚಟುವಟಿಕೆಗಳಲ್ಲಿ ತೊಡಗಿ ಚಿತ್ರರಂಗವನ್ನು ಒಂದು

(ಹಣ)ಹೂಡಿಕೆಯ ಕ್ಷೇತ್ರವನ್ನಾಗಿಯೂ ಪರಿವರ್ತಿಸಿಕೊಂಡದ್ದು ಎಂದು ಕಾಣುತ್ತದೆ. 'ಶಂಕರ್‌ಗುರು' ಎಂಬ ಪೂರ್ಣ ಪ್ರಮಾಣದ ಸಗಟು ಮನರಂಜನೆಯ ಚಿತ್ರದ ಅಪೂರ್ವ ಯಶಸ್ಸು ರಾಜ್‌ಕುಮಾರ್ ಎಂಬ ಹೆಸರೀಗ ಒಬ್ಬ ನಟನ ಹೆಸರು ಮಾತ್ರವಾಗಿರದೆ ಖಚಿತವಾಗಿ ಕೈ ತುಂಬುವ ಪ್ರತಿಫಲದ ಒಂದು ಹೂಡಿಕೆಯ ಹೆಸರೂ ಆಗಿದೆ ಎಂಬುದನ್ನು ಸಾರ್ವತ್ರಿಕವಾಗಿ ಸಾಬೀತುಗೊಳಿಸಿತು. ಇದೆಲ್ಲದರ ಪರಿಣಾಮವಾಗಿ ರಾಜ್‌ಕುಮಾರ್ ಎಂಬುದು ಕನ್ನಡ ಚಿತ್ರೋದ್ಯಮದಲ್ಲಿ ಒಂದು ಪಟ್ಟಭದ್ರ ಹಿತಾಸಕ್ತಿಯ ಹೆಸರೂ ಆಗಿ ಅನೇಕ ವಿವಾದಗಳಿಗೆ ಕಾರಣವಾದದ್ದೂ ಉಂಟು. ಗಂಗಾಧರ ಮೊದಲಿಯಾರ್ ಅಪಹರಣದ ಪ್ರಕರಣ ಸುಮಾರು ಈ ಹೊತ್ತಿನಲ್ಲೇ ಆದದ್ದು ಎಂದು ಕಾಣುತ್ತದೆ. ಇದರ ಜೊತೆಗೇ ರಾಜ್‌ಕುಮಾರ್ ಅವರ ಮಕ್ಕಳೂ ಚಿತ್ರರಂಗ ಪ್ರವೇಶಿಸುವ ಸಿದ್ಧತೆಯಲ್ಲಿದ್ದರು. ಪತ್ನಿ ಪಾರ್ವತಮ್ಮನವರು ರಾಜ್‌ಕುಮಾರ್ ಅವರ ಚಿತ್ರಗಳನ್ನು ಕುರಿತ ಎಲ್ಲ ವ್ಯವಹಾರಗಳನ್ನೂ ತಮ್ಮ ಸುಪರ್ದಿಗೆ ತೆಗೆದುಕೊಂಡು ಒಂದು ಚಿತ್ರದ ಸರ್ವ ವಿವರಗಳನ್ನೂ ರಾಜ್‌ಕುಮಾರ್ ಕುಟುಂಬವೇ ನಿರ್ಧರಿಸುವ ವ್ಯವಸ್ಥೆ ನಿರ್ಮಾಣವಾಯಿತು. ನಂತರದ ಬಹುಪಾಲು ಚಿತ್ರಗಳು ಏಕವ್ಯಕ್ತಿ ಕೇಂದ್ರಿತವಾದದ್ದು ಸಹಜವೇ. ರಾಜ್‌ಕುಮಾರ್ ಅವರ ವಯಸ್ಸನ್ನು ಮರೆಮಾಚಲೋ ಎಂಬಂತೆ ಅವರ ಜೊತೆಯಾಗಿ ತುಂಬು ಯೌವ್ವನದ ಹೊಸ ಹೊಸ ನಾಯಕಿಯರ ಪರಿಚಯವೂ ಆಯಿತು.

ಈ ಹಂತದ ರಾಜ್‌ಕುಮಾರ್ ಅವರ ಚಿತ್ರಗಳೆಲ್ಲವನ್ನೂ ನಾನು ನೋಡಿಲ್ಲ. ನೋಡಿದವುಗಳನ್ನೇ ಅವಲೋಕಿಸಿ ಹೇಳುವುದಾದರೆ 'ಭಾಗ್ಯವಂತರು', 'ಹೊಸಬೆಳಕು', 'ಸನಾದಿ ಅಪ್ಪಣ್ಣ', 'ಭಕ್ತ ಪ್ರಹ್ಲಾದ', 'ಶಬ್ದವೇಧಿ' ಮುಂತಾದ ನಾಲ್ಕೈದು ಚಿತ್ರಗಳನ್ನು ಬಿಟ್ಟರೆ ಮಿಕ್ಕಾವ ಚಿತ್ರಗಳೂ ರಾಜ್‌ಕುಮಾರ್ ಅವರ ನಿಜ ಪ್ರತಿಭೆಗೆ ಅವಕಾಶಗಳನ್ನೇ ನೀಡಿಲ್ಲ ಎಂದು ನನಗನಿಸಿದೆ. ಈ ಹಂತದ ಎಲ್ಲ ಚಿತ್ರಗಳಲ್ಲೂ ಅವರ ಚಿತ್ರಗಳ ಪತ್ರಿಕಾ ವಿಮರ್ಶೆಯ ಭಾಷೆಯಲ್ಲೇ ಹೇಳುವುದಾದರೆ, ಅವರು 'ಲೀಲಾಜಾಲ'ವಾಗಿ ಅಭಿನಯಿಸಿದರಷ್ಟೆ! ಬಾಲ್ಯದಿಂದಲೂ ರಾಜ್‌ಕುಮಾರ್ ಅವರ ಮಹಾ ಅಭಿಮಾನಿಯಾಗಿ ಬೆಳೆದ ನನಗೆ ಈ ಹಂತದಲ್ಲಿ ಉಂಟಾಗುತ್ತಿದ್ದ ಒಂದು ಕಸಿವಿಸಿ ಎಂದರೆ, ಈ ರಾಜ್‌ಕುಮಾರ್‌ಗೆ ತಮಗೆ ವಯಸ್ಸಾಗಿದೆ ಎಂದು ಎಂದೂ–ಕಣ್ಣು, ಗದ್ದ ಮತ್ತು ಕೊರಳ ಸುತ್ತಮುತ್ತಲಿನ ಮುಚ್ಚಲಾಗದ ಸುಕ್ಕುಗಳ ತಮ್ಮ ಮುಖ ಕಾಣಿಸುವ ಈ ಚಿತ್ರಗಳ ತುಣುಕುಗಳನ್ನು ನೋಡಿದಾಗಲೂ–ಅನ್ನಿಸಿಯೇ ಇಲ್ಲವೇ ಎಂಬುದು. ಈ ಕೆಲವು ಚಿತ್ರಗಳಲ್ಲಿ ಅವರು ಮಧ್ಯ ವಯಸ್ಕ ಮತ್ತು ಹಿರಿಯರ ಪಾತ್ರಗಳಲ್ಲಿ ಕಾಣಿಸಿಕೊಂಡಾಗ ಮಾತ್ರ (ಉದಾ: 'ಭಾಗ್ಯವಂತರು', 'ಜೀವನಚೈತ್ರ') ಅಲ್ಲಿ ನನ್ನ ನಿಜ ರಾಜ್‌ಕುಮಾರ್‌ರನ್ನು ಕಾಣುತ್ತಿದ್ದೆ! ಅಂತಹ ಸಂದರ್ಭಗಳಲ್ಲೆಲ್ಲ, ಅಯ್ಯೋ! ನಮ್ಮ ರಾಜ್‌ಕುಮಾರ್ ಈಗ ಇಂತಹ ಪಾತ್ರಗಳಲ್ಲೇ ಕಾಣಿಸಿಕೊಳ್ಳಬಾರದೇಕೆ ಎಂದು ಹಲುಬಿದ್ದೇನೆ. ಆದರೆ ರಾಜ್‌ಕುಮಾರ್‌ಗೆ ಹಾಗೆನ್ನಿಸದಿದ್ದುದು ನಮ್ಮಂಥಹ ಅಭಿಮಾನಿಗಳ ದುರಾದೃಷ್ಟ.

ಅವರು ತಮ್ಮ ಸುತ್ತ ಕಟ್ಟಿಕೊಂಡಿದ್ದ ಬಣ್ಣದ ಕೋಟೆಯ ಅಸಹಾಯಕ ಬಂದಿಯಾಗಿದ್ದರು. ಇದರಿಂದಾಗಿ ಅವರು ತಮ್ಮ ಅಭಿನಯ ಪ್ರತಿಭೆಯ ಎಲ್ಲ ವೈವಿಧ್ಯವನ್ನೂ ಪ್ರದರ್ಶಿಸುವ ಅವಕಾಶಗಳಿಂದ ವಂಚಿತರಾದರು. (ಅವರು 'ಕರುಣೆಯೇ ಕುಟುಂಬದ ಕಣ್ಣು' ಮತ್ತು 'ಸತಿಶಕ್ತಿ' ಎಂಬೆರೆಡು ಚಿತ್ರಗಳ ಹೊರತಾಗಿ ಈ ಮಿಕ್ಕಾವ ಚಿತ್ರಗಳಲ್ಲೂ-ಪೌರಾಣಿಕವಾದ ರಾಕ್ಷಸ ಪಾತ್ರಗಳು ಇದಕ್ಕೆ ಅಪವಾದ-'ಖಳ' ಪಾತ್ರವನ್ನು ನಿರ್ವಹಿಸಿಲ್ಲ ಎಂಬುದು ಗಮನಾರ್ಹ.) ಈ ದೃಷ್ಟಿಯಿಂದ ಯಾವುದೇ ನಿಷಿದ್ಧತೆ ಅಥವಾ ಮುಜುಗರಗಳಿಲ್ಲದೆ ಎಲ್ಲ ರೀತಿಯ ಪಾತ್ರಗಳನ್ನೂ ನಿರ್ವಹಿಸುತ್ತಿದ್ದ ಅನಂತ್‌ನಾಗ್ ನನಗೆ ಹೆಚ್ಚು ಅಚ್ಚುಮೆಚ್ಚು. ಹಾಗೆ ನೋಡಿದರೆ ಇವರು ಹೊಸ ಕಾಲದ ನಟರು. ಅಭಿನಯದ ಹೊಸ ಪಾಠಶಾಲೆಯ ವಿದ್ಯಾರ್ಥಿ. ಹಾಗಾಗಿ ಒಂದು ಮಾದರಿಯ ಅಭಿನಯದಲ್ಲಿ ಅವರು ರಾಜ್‌ಕುಮಾರ್‌ಗಿಂತ ಒಳ್ಳೆಯ ನಟರು. ಆದರೆ ಇವರಿಗೆ ರಾಜ್‌ಕುಮಾರ್ ಅವರಿಗೆ ಇದ್ದ ಪಾರಂಪರಿಕ ರಂಗಭೂಮಿಯ ಹಿನ್ನೆಲೆಯ ಶಕ್ತಿಗಳು ಇರಲಿಲ್ಲ, ದೌರ್ಬಲ್ಯಗಳೂ ಇರಲಿಲ್ಲ. ಹಾಗಾಗಿ ಈ ಇಬ್ಬರನ್ನೂ ಸಾರಾಸಗಟಾಗಿ ಹೋಲಿಸಲಾಗದು. ರಾಜ್‌ಕುಮಾರ್ ಅವರ ಅಭಿನಯ ಪ್ರತಿಭೆಯ ವೈವಿಧ್ಯ ಅನಂತ್‌ನಾಗ್ ಅವರಿಗೆ ಇರಲಿಲ್ಲ ಎಂದು ಹೇಳಬಹುದಷ್ಟೆ. ಅದಕ್ಕೆ ಕಾರಣವೂ ಇತ್ತಲ್ಲ. ಇಬ್ಬರೂ ಕನ್ನಡ ಸಮಾಜದ ಎರಡು ಬೇರೆ ಬೇರೆ ಕಾಲಮಾನ, ಹಿನ್ನೆಲೆ ಮತ್ತು ತಲೆಮಾರುಗಳಿಗೆ ಸೇರಿದವರು.

ರಾಜ್‌ಕುಮಾರ್ ಈಗ ನಮ್ಮೊಂದಿಗಿಲ್ಲ. ತಮ್ಮ ಬದುಕಿನ ಕೊನೆಯ ದಿನಗಳಲ್ಲಿ ಅವರು ವೀರಪ್ಪನ್ ಎಂಬ ದುರುಳನ ಕೈಗೆ ಸಿಕ್ಕಿ ಹಾಕಿಕೊಂಡು ಪಡಬಾರದ ಪಾಡುಪಟ್ಟರು. ಇಡೀ ಕನ್ನಡ ನಾಡಿನ ಜನತೆ ಆತಂಕಗೊಂಡಿತ್ತು. ಕನ್ನಡ ಚಿತ್ರರಂಗಕ್ಕೆ ಕನ್ನಡ ಚಿತ್ರರಂಗವೇ ಸ್ಥಗಿತಗೊಂಡಂತಾಗಿತ್ತು. ಹಾಗಾಗಿಯೇ ಕರ್ನಾಟಕ ಸರ್ಕಾರಕ್ಕೆ ಕರ್ನಾಟಕ ಸರ್ಕಾರವೇ ಟೊಂಕಕಟ್ಟಿ ನಿಂತು ಅವರ ಬಿಡುಗಡೆಗಾಗಿ ಸರ್ವ ಪ್ರಯತ್ನ ಮಾಡಿತು. ಜನತೆಯ ಪ್ರಾರ್ಥನೆ ಫಲಿಸಿ ಅವರು ಕಾಡಿನಿಂದ ನಾಡಿಗೆ ವಾಪಸು ಬಂದರು. ಆದರೆ ಅವರು ಮೊದಲಿನ ರಾಜ್‌ಕುಮಾರ್ ಆಗಿರಲಿಲ್ಲ. ಹಾಗಾಗಿಯೇ ಅವರು ಬಹು ಕಾಲ ಉಳಿಯಲಿಲ್ಲ. ಅವರು ನಿಧನರಾದ ದಿನ ಇಡೀ ಕರ್ನಾಟಕವೇ ದೊಡ್ಡ ಆಘಾತ ಎದುರಿಸಿದಂತೆ ತಲ್ಲಣಿಸಿತು. ಆಧುನಿಕ ಕರ್ನಾಟಕದ ಇತಿಹಾಸದ ಒಂದು ಅಧ್ಯಾಯ ಮುಗಿದಿತ್ತು. ಅವರ ಕನಸಿನ 'ಭಕ್ತ ಅಂಬರೀಶ' ಹಾಗೇ ಉಳಿದಿತ್ತು. ಅದರಿಂದೇನೂ ಜನ ನಿರಾಶರಾಗಿಲ್ಲ. ಏಕೆಂದರೆ ರಾಜ್‌ಕುಮಾರ್ ಐದು ದಶಕಗಳ ಕಾಲ ಜನರ ಬಗ್ಗೆ ಗೌರವವಿಟ್ಟು-ಅವರನ್ನು 'ಅಭಿಮಾನಿ ದೇವರುಗಳು' ಎಂದು ಕರೆದು-ತಮ್ಮ ಪ್ರತಿಭೆ-ಪರಿಶ್ರಮ-ಸೌಜನ್ಯಪೂರ್ಣ ನಡವಳಿಕೆ-ಶಿಸ್ತಿನ ಬದುಕು-ಉದ್ಯಮಶೀಲತೆಗಳ ಮೂಲಕ ಕನ್ನಡ ಚಿತ್ರರಂಗದ ಮಿತಿಗಳಲ್ಲೇ ಅವರಿಗೆ ಏನೆಲ್ಲ ಕೊಡಲು ಸಾಧ್ಯವಾಯಿತೋ ಅದನ್ನೆಲ್ಲ ಕೊಟ್ಟು ತೆರಳಿದ್ದರು. ಕಾಲ ದೂರದಲ್ಲಿ ನಿಂತು ನೋಡಿದಾಗ ಅವರ ಬದುಕಿನಲ್ಲಿ ವಿಮರ್ಶೆಗೆ ಹಲವು ಅಂಶಗಳು ಸಿಕ್ಕಾವು. ಆದರೆ

ಅವೆಲ್ಲ ಅವರ ಅನುಪಮ ಕೊಡುಗೆಯನ್ನು–ಕನ್ನಡದ ಎರಡು ಮೂರು ತಲೆಮಾರುಗಳು ಈಗ ಏನಾಗಿದ್ದಾವೋ ಹಾಗೆ ಆಗಲು ಕಾರಣರಾದದ್ದನ್ನು–ಮಾನ್ಯ ಮಾಡಿದ ನಂತರ ಗಣನೆಗೆ ಬರುವಂತಹವು. ಹಾಗಾಗಿಯೇ ರಾಜ್‌ಕುಮಾರ್ ಅವರಿಗೆ ಕನ್ನಡ ಜನತೆ ಕಣ್ಣೀರಿನ ಮಾತ್ರವಲ್ಲ, ಧನ್ಯತೆಯ ಅಶ್ರುತರ್ಪಣವನ್ನೂ ಸಲ್ಲಿಸಿದೆ.

ಇಂತಹ ರಾಜ್‌ಕುಮಾರ್‌ರ ಚಿತ್ರಗಳನ್ನೇ ನೋಡಿ ಬೆಳೆದ ಮೆಗಾ ತಾರೆ ರಜನೀಕಾಂತ್ ಕಂಠೀರವ ಸ್ಟುಡಿಯೋದಲ್ಲಿ ರಾಜ್‌ಕುಮಾರ್ ಅವರ ಸಮಾಧಿ ಸಂಕೀರ್ಣದ ಉದ್ಘಾಟನೆಗೆ ಬಂದವರು ಈ ಸ್ಥಳ ಮುಂದೆ ಒಂದು ಹರಕೆಯ ತೀರ್ಥಸ್ಥಳವಾಗುವುದೆಂದು ಹೇಳಿದ್ದು ಆಶ್ಚರ್ಯವೇನಲ್ಲ. ಆದರೆ ಈ ಸಮಾಧಿಯ ಪಕ್ಕಕ್ಕೇ ಈಗ ನಟ ಅಂಬರೀಷರ ಸಮಾಧಿ ನಿರ್ಮಾಣಕ್ಕೆ ಈಗಿನ ಸರ್ಕಾರ ನಿರ್ಧರಿಸಿ ಒಂದು ಐತಿಹಾಸಿಕ ತಪ್ಪು ಮಾಡಿದೆ ಎಂದು ಇಲ್ಲಿ ಹೇಳದೆ ವಿಧಿಯಿಲ್ಲ. ಹೋಲಿಸಲಾಗದಷ್ಟು ಅಂತರಗಳ ಪ್ರತಿಭೆ. ಐತಿಹಾಸಿಕ ಮಹತ್ವ ಮತ್ತು ವ್ಯಕ್ತಿತ್ವಗಳು ಇವು.

(ದೊಡ್ಡಹುಲ್ಲೂರು ರುಕ್ಕೋಜಿ ಅವರು ರಾಜ್‌ಕುಮಾರ್ ಅವರ ಬಗ್ಗೆ ಸಂಪಾದಿಸುತ್ತಿರುವ ವಿಶೇಷ ಸಂಪುಟಕ್ಕಾಗಿ ಬರೆದ ಲೇಖನ, ೨೦೧೯ರ ಫೆಬ್ರವರಿ–ಏಪ್ರಿಲ್ 'ಅಕ್ಷರ ಸಂಗಾತ'ದ ಸಂಚಿಕೆಯಲ್ಲಿ ಪ್ರಕಟ)

ಹಿಂದುತ್ವ ಮತ್ತು ಸೆಕ್ಯುಲರಿಸಂ: ಜಿಕೆಜಿಯವರಿಗೆ ಒಂದು ಪತ್ರ

ದಿನಾಂಕ: ೧೧ ಮಾರ್ಚ್, ೨೦೧೩

ಹಿರಿಯರಾದ ಪ್ರೊ. ಗೋವಿಂದರಾವ್ ಅವರಲ್ಲಿ,

ವಂದನೆಗಳು ತಾವು ಡಾ. ಚಿದಾನಂದಮೂರ್ತಿಯವರ ಲೇಖನವೊಂದಕ್ಕೆ ಬರೆದ ಉತ್ತರದ ಕರಡನ್ನು ವಾಸುದೇವಮೂರ್ತಿಯವರು ಮೇಲ್ ಮಾಡಿದ್ದಾರೆ. ನಿಮ್ಮ ಈ ಸುದೀರ್ಘ ಪ್ರತಿಕ್ರಿಯೆಯನ್ನು ಈಗ ತಾನೇ ಓದಿ ಮುಗಿಸಿದೆ. ನಿಮ್ಮ ಈ ಬರಹದಿಂದ ಚಿದಾನಂದಮೂರ್ತಿಯವರ ಮೂಲ ಲೇಖನದ ಸಂಪೂರ್ಣ ಸ್ವರೂಪ ಪರಿಚಯವಾಗುವಂತಿಲ್ಲವಾದ್ದರಿಂದ ನಿಮ್ಮ ಈ ಬರಹ ಅವರಿಗೆ ಸಮರ್ಪಕ ಉತ್ತರವೋ ಅಲ್ಲವೋ ಎಂದು ನಾನು ಹೇಳಲಾರೆ. ಆದರೆ ಸ್ಥೂಲ ನೆಲೆಯಲ್ಲಿ ನಿಮ್ಮ ಬರಹವನ್ನು ನೋಡಿದಾಗ ನನಗೆ ಈ ಪತ್ರೋತ್ತರ ಎರಡು ವಿಭಿನ್ನ ನೆಲೆಗಳಲ್ಲಿ ಸ್ಥಿತಗೊಂಡ, ಎರಡು ವಿಭಿನ್ನ ಭಾಷೆ, ನುಡಿಗಟ್ಟು ಮತ್ತು ಉಪಮೆ-ರೂಪಕಗಳ ಬಳಕೆಯಲ್ಲಿ ತರಬೇತಿ ಹೊಂದಿದ, ಹಾಗಾಗಿ ಒಮ್ಮತ ಸಾಧ್ಯವಾಗದ ಎರಡು ಮನಸ್ಸುಗಳ ಮುಖಾಮುಖಿಯಾಗಿ ಮಾತ್ರ ಕಾಣಿಸುತ್ತದೆ. ಅವರು ಹಿಂದುತ್ವದ ಬೈಬಲ್ ಪಠಿಸಿದ್ದರೆ ನೀವು ಸೆಕ್ಯುಲರಿಸಂನ ಬೈಬಲ್ ಪಠಿಸಿದಂತಿದೆ. ಈ ಎರಡೂ ಮನಸ್ಸುಗಳನ್ನು ಬೆಸೆಯಬಹುದಾದ ಸತ್ಯ ಈ ಎರಡೂ ಬೈಬಲ್‌ಗಳ ಆಚೆಯೇ ಉಳಿದುಕೊಂಡಿದೆ ಎಂದು ನನಗನ್ನಿಸಿದೆ.

ಹಿಂದೂ ಧರ್ಮವೆಂದರೇನು ಎಂಬ ಪ್ರಶ್ನೆಯನ್ನು ಆಧರಿಸಿ ನಿರ್ದಿಷ್ಟ ಉದಾಹರಣೆ ಅಥವಾ ಉಲ್ಲೇಖಗಳೊಂದಿಗೆ ಮಾಡುವ ವಾದ ನಿರರ್ಥಕವೆಂದೇ ನನ್ನ ಭಾವನೆ. ಏಕೆಂದರೆ ಒಂದು ಆಕಾರವಿಲ್ಲದ ಈ ಧರ್ಮ ಅದರ ಉದಾಹರಣೆ-ಉಲ್ಲೇಖಗಳ ಆಚೆಯೇ ಸಂಭವಿಸುವ ವಿಶ್ವಾತ್ಮಕವೆನ್ನಬಹುದಾದ ಅನುಭಾವ-ಅನುಭೂತಿಗಳಿಗೆ ಮಾತ್ರ ಒದಗುವಂತಹದು. ಅದನ್ನೇ ಗಾಂಧಿ ಇದು ಋಷಿ ಮುನಿಗಳ-ಶ್ಲೋಕ ಪಠಣಗಳ-ಧರ್ಮವಲ್ಲ; ಸಾಧು-ಸಂತರ ದರ್ಮ ಎಂದು ಗುರುತಿಸುವ ಮೂಲಕ ಹೇಳಿದ್ದು. ಅಂದರೆ ಅದು ಜನಮನದ ನಡುವೆ ನಡೆಯುವ ಪರೀಕ್ಷೆಯಲ್ಲಿ ನಿತ್ಯ ವಿಕಾಸವಾಗುತ್ತಾ ಹೋಗುವಂತಹದ್ದು. ಸನಾತನವಾದದ್ದು-ನಿತ್ಯನೂತನವಾದದ್ದು.

ಹಿಂದೂ ಧರ್ಮವೆಂಬ ಸ್ಥಾಪಿತ ಆಕಾರದ ವಲಯದೊಳಗೆ ನಡೆಯುವ ನಮ್ಮ ಆಧುನಿಕ ಸಂದರ್ಭದ ಚರ್ಚೆಗಳು ಮರಳುಗಾಡಿನ ಏಕಾಕಾರದ, ಚೌಕಟ್ಟುಗಳ

ಧರ್ಮಗಳ ಪರಿಪ್ರೇಕ್ಷ್ಯದಲ್ಲಿಯೇ ನಡೆಯಬೇಕಾದ ಒತ್ತಾಯಗಳಿಗೆ ಒಳಗಾಗುವುದರಿಂದ ಆ ಧರ್ಮ ತನ್ನ ವಿಕಾರ ರೂಪದಲ್ಲೇ ಪ್ರಸ್ತುತಗೊಳ್ಳುವ ಅಪಾಯವಿದೆ. ಹಿಂದೂ ಧರ್ಮವೆಂದೊಡನೆ ಜಾತಿ ಪದ್ಧತಿ, ಅಸ್ಪೃಶ್ಯತೆಯ ಮಾತಾಡತೊಡಗುವುದು ಈ ಕಾರಣದಿಂದಲೇ. ಈ ಅನಿಷ್ಟಗಳ ಹೊರತಾಗಿಯೂ ಹಿಂದೂ ಧರ್ಮವಿದೆ ಎಂಬ ಅರಿವಿನೊಂದಿಗೆ ಮಾತಾಡುವುದರಿಂದ ಮಾತ್ರ ಇಂದಿನ ಹಿಂದೂವಾದಿಗಳ ವಾದಗಳನ್ನು ನಾವು ಸಮರ್ಥವಾಗಿ ಎದುರಿಸಬಹುದು; ಸಾಧ್ಯವಾದರೆ ಅವರ ಮನ ಗೆಲ್ಲಬಹುದು ಎಂದು ನಾನು ಭಾವಿಸಿದ್ದೇನೆ.

ಹಿಂದೂ ಧರ್ಮವು ಹಿಂದೂಯೇತರ ಧರ್ಮಗಳ (ನನ್ನ ಪ್ರಕಾರ ಅವು ಧರ್ಮಗಳೇ ಅಲ್ಲ; ಹಿಂದುತ್ವದಂತೆ ಅವು ಮತಗಳು ಮಾತ್ರ.) ಸಹವಾಸದಿಂದಾಗಿ ಪಡೆದ ಲಾಭಗಳನ್ನಷ್ಟೇ ಹೇಳುವ ಮೂಲಕ (ಇದು ನಮ್ಮ ಸೆಕ್ಯುಲರಿಸ್ಟರ ಒಂದು ರೋಗವೇ ಆಗಿಬಿಟ್ಟಿದೆ.) ನಾವು ಪೂರ್ಣ ಸತ್ಯವನ್ನು ಹೇಳುತ್ತಿಲ್ಲವಾಗಿ ನಮ್ಮ ವಿಶ್ವಾಸಾರ್ಹತೆ ಅನುಮಾನಕ್ಕೀಡಾಗಿರುವುದೂ ಸತ್ಯ. ಇದಕ್ಕೆ ಕಾರಣ, ಗಾಂಧಿ ರಾಜಕಾರಣದ ಸಂಕೀರ್ಣತೆಯನ್ನು ಆಧುನಿಕತೆಯ ಮಾಯಾಜಾಲಕ್ಕೆ ಸಿಕ್ಕಿ ಅರಿಯಲಾಗದೆ ಅದನ್ನು ಸರಳೀಕರಿಸಿ ಕ್ರಮೇಣ ವಿಕಾರಗೊಳಿಸುತ್ತಾ ಬಂದ ಕಾಂಗ್ರೆಸ್‌ನ ಕೆಟ್ಟ ರಾಜಕಾರಣ.

ಗಾಂಧಿಯನ್ನು ಪದೇ ಪದೇ ಉಲ್ಲೇಖಿಸುವ ನಾವೂ ಕಾಂಗ್ರೆಸ್‌ನ ಈ ಕೆಟ್ಟ ರಾಜಕಾರಣದ ಮಾದರಿಗಳಾಗಿಯೇ ಪ್ರಸ್ತುತಗೊಳ್ಳುತ್ತಿದ್ದೇವೆ. ಹೀಗಾಗಿ ಚಿದಾನಂದ ಮೂರ್ತಿಯಂಥವರ ವಾದವನ್ನು ಅವರು ಪೂರ್ಣ ದಾರಿ ತಪ್ಪಿದ್ದು, ಪೂರ್ಣ ಸರಿ ದಾರಿಯಲ್ಲಿರುವ ನಾವು ಸಮರ್ಥವಾಗಿ ಎದುರಿಸಬಹುದೆಂಬ ಭಾವನೆ ನನ್ನ ಪ್ರಕಾರ ನಮ್ಮನ್ನೇ ಮತ್ತಷ್ಟು ದಾರಿ ತಪ್ಪಿಸುವಂತಹದ್ದು. ಇದಕ್ಕೆ ನಮ್ಮ ಕಡೆಯಿಂದಲೂ ಒಂದಷ್ಟು ಆತ್ಮನಿರೀಕ್ಷಣೆ, ಅಭ್ಯಾಸ ಮತ್ತು ಅದರಿಂದ ಹುಟ್ಟುವ ಹೊಸ ಭಾಷೆ–ನುಡಿಗಟ್ಟುಗಳಿಂದ ಸಜ್ಜಾಗುವ ನಿಶ್ಚಯವೊಂದೇ ಪರಿಹಾರ. ಈ ಹೊಸ ಅಭ್ಯಾಸದ ದಾರಿ ಹಿಡಿಯುವುದರ ಮೂಲಕ ಮಾತ್ರ ಇಂದಿನ ಆತಂಕಕಾರಿ ಮೋದಿ ರಾಜಕಾರಣವನ್ನು ಎದುರಿಸಲು ಸಾಧ್ಯ.

ಚಿದಾನಂದಮೂರ್ತಿಯವರು ಯಾವ ಸಂದರ್ಭದಲ್ಲಿ ಯಾವ ಉದ್ದೇಶದಿಂದ ನಿಮಗೆ ಪತ್ರ ಬರೆದರೋ/ಲೇಖನ ಕಳಿಸಿದರೋ ನನಗೆ ತಿಳಿಯದು. ಆದುದರಿಂದ ನಿಮ್ಮ ಈ ಬರಹ ಅವರ ಮೇಲೆ ಎಂತಹ ಪರಿಣಾಮ ಬೀರುವುದೋ ನಾ ಹೇಳಲಾರೆ. ಆದರೆ ಇದು ನಿಮ್ಮೊಂದಿಗೆ ಆತ್ಮೀಯವಾಗಿ; ಆದರೆ ತೀವ್ರವಾಗಿ ಸಂವಾದಿಸಲು ಅವಕಾಶ ಕಲ್ಪಿಸಿದೆ. ಇದಕ್ಕಾಗಿ ನಿಮಗೆ ಧನ್ಯವಾದಗಳು.

ವಂದನೆಗಳೊಂದಿಗೆ

–ಡಿ.ಎಸ್. ನಾಗಭೂಷಣ

ಧಾರ್ಮಿಕತೆಯನ್ನು ಜನಕೇಂದ್ರಿತಗೊಳಿಸಿದ ಅಪರೂಪದ ಮಠಾಧೀಶರು

ನಾನು ಯಾವುದೇ ಮಠವಿಲ್ಲದ ಜಾತಿಯಲ್ಲಿ ಹುಟ್ಟಿದವನು. ಈಗಲೂ ನಾನು ಹುಟ್ಟಿದ ಜಾತಿಗೆ–ಈಗ ನಾನು ಅದರಲ್ಲಿಲ್ಲ ಎಂಬುದು ಬೇರೆ ಮಾತು–ಮಠವೆಂಬುದು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಹೀಗಾಗಿ ಮೊದಲಿಂದಲೂ ಮಠ–ಮಠಾಧೀಶರ ಗೊಡವೆಗೆ ಹೋದವನಲ್ಲ ನಾನು. ಅಂಥವರು ಊರಿಗೆ ಬಂದಾಗ ದೂರದಿಂದಷ್ಟೇ ಅವರ ದರ್ಶನ. ಆದರೆ ನಾನು ಬೆಳೆದು ಸಾರ್ವಜನಿಕ ಜೀವನದಲ್ಲಿ ಪಾತ್ರ ವಹಿಸಬೇಕಾಗಿ ಬಂದಾಗ ಹಲವು ಮಠಾಧೀಶರ ವೈಯಕ್ತಿಕ ಸಂಪರ್ಕಕಕ್ಕೆ ಬರಬೇಕಾಯಿತು. ಆ ಹೊತ್ತಿಗೆ ನಾನು ಬಾಲ್ಯದಲ್ಲಿ ಕಂಡ ಮಠ–ಮಠಾಧೀಶರ ಸ್ವರೂಪಗಳೇ ಬದಲಾಗಿದ್ದವು. ಅವೆಲ್ಲ, ಅವರೆಲ್ಲ ಸಾರ್ವಜನಿಕ ಜೀವನದ ಒಂದಲ್ಲ ಒಂದು ನೆಲೆಯ ಅಧಿಕಾರ ಕೇಂದ್ರಗಳಾಗಿದ್ದವು/ರು. ಹಾಗಾಗಿ ನಾನು ಈ ವ್ಯವಸ್ಥೆಯಿಂದ ಒಂದು ವಿಮರ್ಶಾತ್ಮಕ ದೂರವನ್ನೇ ಕಾಯ್ದುಕೊಂಡು ಬರುತ್ತಿದ್ದೇನೆ.

ಆದರೂ ನಾನು ಈಗ ಗದುಗಿನ ತೋಂಟದಾರ್ಯ ಸಿದ್ಧಲಿಂಗ ಸ್ವಾಮಿಗಳ ಬಗ್ಗೆ ಸಂತೋಷದಿಂದ ಬರೆಯಲು ಕಾರಣವಿದೆ. ಅವರ ಆಪ್ತ ಒಡನಾಟ ಹೆಚ್ಚಿಗಿಲ್ಲ. ಒಮ್ಮೆ ಮಾತ್ರ ನನ್ನ ಪತ್ನಿ ಭಾಗವಹಿಸಲು ಆಹ್ವಾನಿಸಲ್ಪಟ್ಟಿದ್ದ ಕವಿಗೋಷ್ಠಿಯ ಕಾರಣವಾಗಿ ಗದುಗಿಗೆ ಹೋಗಿದ್ದಾಗ ಅವರೊಡನೆ ಅವರ ಮಠದ ಆವರಣದಲ್ಲೇ ಉಭಯ ಕುಶಲೋಪರಿ ಮಾತಾಡುವ ಸಂದರ್ಭ ಒದಗಿತ್ತಷ್ಟೆ. ಆ ಮೊದಲ ಸಂದರ್ಭದಲ್ಲೇ ಅವರು ತಮ್ಮ ಅನೌಪಚಾರಿಕ ಸರಳ ಸಜ್ಜನಿಕೆಯ ವರ್ತನೆಯಿಂದ ನನ್ನನ್ನು ಸೆಳೆದರು. ಇವರೊಂದಿಗೆ ಸಮಾನ ಸಂವಾದ ಸಾಧ್ಯ ಎನಿಸಿ ನನಗೆ ಆತ್ಮೀಯರೆನಿಸಿದರು. ಈ ಮಧ್ಯೆ ಅವರ ಮಠದ ಹಲವಾರು ಪ್ರಕಟಣೆಗಳನ್ನು ತರಿಸಿಕೊಂಡು ಓದಿದ್ದೆ. ಮಠೀಯ ಜಾತೀಯತೆಯ ದುರ್ವಾಸನೆ ಇಲ್ಲದ ಎಲ್ಲ ಸ್ತರದ ಓದುಗರಿಗೂ ಧಾರ್ಮಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಾಹಿತಿ ಮತ್ತು ಶಿಕ್ಷಣ ನೀಡುವ ಪುಸ್ತಕಗಳವು. ಪರಿಚಯಾತ್ಮಕ

ಕಿರು ಪುಸ್ತಕಗಳಿಂದ ಹಿಡಿದು ವಿದ್ವತ್ಪೂರ್ಣ ಉದ್ಗ್ರಂಥಗಳವರೆಗೆ. ಹಾಗಾಗಿಯೇ ಅವರನ್ನು ಜನ 'ಪುಸ್ತಕಗಳ ಸ್ವಾಮಿ' ಎಂದು ಗುರುತಿಸುತ್ತಿದ್ದರು ಎಂದು ಕೇಳಿದ್ದೇನೆ.

ಆನಂತರ ನಾನು ಅವರನ್ನು ಸಕ್ರಿಯವಾಗಿ ನೋಡಿದ್ದು ಬಳ್ಳಾರಿಯ ಲೋಹಿಯಾ ಪ್ರಕಾಶನದ ಗೆಳೆಯ ಸಿ. ಚೆನ್ನಬಸವಣ್ಣನವರ ಮಗಳ ಮದುವೆಯಲ್ಲಿ. ಅದೊಂದು ಆಹ್ವಾನಿತ ಜನರ ಬೃಹತ್ ಸಂಖ್ಯೆಯ ದೃಷ್ಟಿಯಿಂದ ಅದ್ದೂರಿ ಮದುವೆಯೇ. ಆದರೆ ಅದರ ಭಾಗವಾಗಿ ಚೆನ್ನಬಸವಣ್ಣ ಯೋಜಿಸಿದ್ದ ಪುಸ್ತಕ ಸಂಸ್ಕೃತಿ ಕಾರ್ಯಕ್ರಮದ ಭಾಗವಾಗಿ ನಾನು ಮತ್ತು ನನ್ನ ಪತ್ನಿ ಅಲ್ಲಿ ಹಾಜರಿದ್ದೆವು. ಆ ಮದುವೆಯ ಪೌರೋಹಿತ್ಯದ ನೇತೃತ್ವ ವಹಿಸಿದ್ದವರು ತೋಂಟದಾರ್ಯ ಸ್ವಾಮಿಗಳೇ. ವೈದಿಕ ವಿವಾಹದ ಶಾಸ್ತ್ರಗಳಿಗೆ ಹೋಲಿಸಿದರೆ ಇವರ ಪೌರೋಹಿತ್ಯದ ಈ ವಿವಾಹದಲ್ಲಿ ಶಾಸ್ತ್ರಗಳ ಸಂಖ್ಯೆ ಕಡಿಮೆ ಇದ್ದು, ಅವು ವಚನಗಳ ಮಾಧ್ಯಮದಲ್ಲಿ ಕನ್ನಡದಲ್ಲಿ ನಡೆಯುತ್ತಿದ್ದುದರಿಂದ ನಾನು ಕುತೂಹಲದಿಂದಲೇ ಅದನ್ನು ಗಮನಿಸಿದೆ. ಈ ಶಾಸ್ತ್ರಾಚಾರಗಳಲ್ಲಿ ಸ್ವಾಮೀಜಿಯವರಗೆ ಸಹಾಯಕರಾಗಿದ್ದ ಓರ್ವ ಮರಿಸ್ವಾಮಿ ಏಕೋ ನನ್ನ ಗಮನ ಸೆಳೆದು ಚೆನ್ನಬಸವಣ್ಣನವರಲ್ಲಿ ಅವರ ಹಿನ್ನೆಲೆ ವಿಚಾರಿಸಿದೆ. ನನಗೆ ಈ ಸಂಬಂಧ ಗೊತ್ತಾದ ಮಾಹಿತಿ ಎಂದರೆ ಆ ಸಹಾಯಕ ಮರಿಸ್ವಾಮಿ ಹುಟ್ಟಿನಿಂದ ಬ್ರಾಹ್ಮಣರಾಗಿದ್ದು ಈಗ ಗದುಗಿನ ಮಠದಲ್ಲಿ ಸ್ವಾಮಿಗಳ ಶಿಷ್ಯರಾಗಿದ್ದಾರೆಂದು. ಇದು ನನಗೆ ಸೋಜಿಗವೆನಿಸಿತು ಮತ್ತು ನನ್ನ ಮನಸ್ಸಿನಲ್ಲಿ ಇನ್ನೊಂದು ಸಾಧ್ಯತೆಯ ಬಗ್ಗೆಯೂ ಆಲೋಚನೆ ಹುಟ್ಟಿಸಿತು.

ನಾನು ಬಳ್ಳಾರಿಯಿಂದ ಶಿವಮೊಗ್ಗಕ್ಕೆ ವಾಪಸು ಬಂದನಂತರ ಸ್ವಾಮೀಜಿಗೆ ಒಂದು ಪತ್ರ ಬರೆದೆ. ನೀವು ನಿಜವಾಗಿ ಬಸವಣ್ಣನ ತತ್ವವನ್ನು ನಿಮ್ಮ ಅನುಯಾಯಿಗಳಲ್ಲಿ ಬಿತ್ತಬೇಕಾದರೆ ಓರ್ವ ಅಸ್ಪೃಶ್ಯನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಆ ಶಿಷ್ಯರೊಂದಿಗೆ (ಬೇಕಾದರೆ ಬ್ರಾಹ್ಮಣ ಶಿಷ್ಯರೂ ಇರಲಿ) ಮದುವೆ ಇತ್ಯಾದಿ ಔಪಚಾರಿಕ ವಿಧಿಗಳನ್ನು ನಡೆಸಿಕೊಡಲು ಹೋದರೆ ಒಳಿತಲ್ಲವೆ? ಅದು ಬಸವ ತತ್ವಕ್ಕೆ ಹೆಚ್ಚು ನ್ಯಾಯ ಒದಗಿಸಿದಂತಲ್ಲವೆ? ಎಂದು ಆ ಪತ್ರದಲ್ಲಿ ಕೇಳಿದ್ದೆ. ಅದಕ್ಕೆ ಸ್ವಾಮೀಜಿ ನಾಲ್ಕೈದು ದಿನಗಳಲ್ಲೇ ಉತ್ತರ ಬರೆದು, ನನ್ನ ಸಲಹೆ ಯೋಗ್ಯವಾದುದೆಂದೂ, ಆದರೆ ಅದರ ಕಾಲ ಇನ್ನೂ ಬಂದಿಲ್ಲವೆಂದೂ, ಬಂದಾಗ ಅದನ್ನು ಅನುಷ್ಠಾನಗೊಳಿಸುವವರಲ್ಲಿ ತಾವೇ ಮೊದಲಿಗರಾಗಿರುವುದಾಗಿ ತಿಳಿಸಿದರು.

ಈ ಮಧ್ಯೆ ಈ ಸಮಾಚಾರವನ್ನು ನಾನು ಮಠವನ್ನು ಹತ್ತಿರದಿಂದ ಬಲ್ಲ ಕೆಲ ಗೆಳೆಯರೊಂದಿಗೆ ಹಂಚಿಕೊಂಡಾಗ ಅವರು ಗದುಗಿನ ಮಠ ಜಾತ್ಯತೀತತೆಯ ವಿಷಯದಲ್ಲಿ ಮಾಡಿರುವ ಹಲವು ಪ್ರಯೋಗಗಳನ್ನು ನನಗೆ ತಿಳಿಸಿದರು. ಈ ಮಠದ ಆಡಳಿತದಲ್ಲಿ ಮುಸ್ಲಿಮರೂ ಸೇರಿದಂತೆ ಎಲ್ಲ ಜಾತಿ–ಧರ್ಮಗಳ ಜನ ಪಾಲು ಪಡೆದಿದ್ದಾರೆಂದೂ, ಓರ್ವ ದಲಿತ ಬರೆದ ಅಂಬೇಡ್ಕರ್ ಪುರಾಣವನ್ನು ಮಠ ಪ್ರಕಟಿಸಿದ್ದಲ್ಲದೆ ಅದರ ವಾಚನವನ್ನು ಮಠದಲ್ಲಿ ಏರ್ಪಡಿಸಲಾಗಿತ್ತೆಂದೂ, ಮಠದ

ಪರವಾಗಿ ನಡೆಯುವ ಜಾತ್ರೆಯ ಮುಖ್ಯ ಉಸ್ತುವಾರಿಯನ್ನು ಓರ್ವ ಮುಸ್ಲಿಮರಿಗೆ ನೀಡಿದ ದಾಖಲೆಯೂ ಮಠದ್ದಾಗಿದೆ ಎಂದು ತಿಳಿಸಿದರು. ಆದರೆ ಮದುವೆ-ಪೌರೋಹಿತ್ಯದ ವಿಷಯದಲ್ಲಿ ಅವರು ಬರಲೆಂದು ಕಾದಿದ್ದ ದಿನ ಬರುವ ಮುನ್ನವೇ ಅವರ ಸಾವು ಅನಿರೀಕ್ಷಿತವಾಗಿ ಸಂಭವಿಸಿ ಅವರು ಇನ್ನೊಂದು ಮಹಾಪರಿವರ್ತನೆಯ ಹೆಜ್ಜೆಯನ್ನು ಇಡುವುದು ತಪ್ಪಿ ಹೋಯಿತು.

ಸಿದ್ಧಲಿಂಗ ಸ್ವಾಮಿಗಳು ವಚನಸಾಹಿತ್ಯದ ಅಂತರಾಳವನ್ನು ಚೆನ್ನಾಗಿ ಬಲ್ಲವರಾಗಿ ಅದನ್ನು ತಮ್ಮ ಚೇತನದಲ್ಲಿ ಅಂತರ್ಗತಗೊಳಿಸಿಕೊಂಡವರಾಗಿದ್ದರು. ಹಾಗಾಗಿಯೇ ಅವರು ಧರ್ಮ ಎಂದರೆ ಧ್ಯಾನ, ಪೂಜೆ, ಉಪದೇಶ-ಪ್ರವಚನ-ಪ್ರಸಾದಗಳೆಂದು ತಿಳಿದಿರಲಿಲ್ಲ. ಜನರ ಸಮಸ್ಯೆಗಳಿಗೆ ಮಿಡಿಯುತ್ತಿದ್ದ ಜೀವ ಅವರದ್ದು. ಹಾಗಾಗಿಯೇ ಅವರು ಕಪ್ಪತ ಗುಡ್ಡ ಪ್ರದೇಶದಲ್ಲಿ ಗಣಿಗಾರಿಕೆ ಆರಂಭಿಸುವ ನಿರ್ಧಾರವನ್ನು ಸರ್ಕಾರ ಪ್ರಕಟಿಸಿದಾಗ ಅದರ ವಿರುದ್ಧ ಜನರನ್ನು ಸಂಘಟಿಸಿ ಪ್ರತಿಭಟಿಸಿ ಅದನ್ನು ನಿಲ್ಲಿಸಿದರು. ಹಾಗೇ ಬಹುರಾಷ್ಟ್ರೀಯ ಕಂಪನಿ ಉಕ್ಕು ಸ್ಥಾವರ ಸ್ಥಾಪನೆಗೆ ನೆರವಾಗಲು ರಾಜ್ಯ ಸರ್ಕಾರ ಗದಗದ ಸುತ್ತಮುತ್ತ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಆಜ್ಞೆ ಹೊರಡಿಸಿದಾಗ ರೈತರು ಸಿಡಿದೆದ್ದರು. ಅವರು ನೇತೃತ್ವಕ್ಕೆ ಧಾವಿಸಿದ್ದು ಈ ಸ್ವಾಮೀಜಿಯೆಡೆಗೆ. ಸ್ವಾಮೀಜಿ ರೈತರ ಆಹ್ವಾನಕ್ಕೆ ಸ್ಪಂದಿಸಿದರು, ಮಠ ಬಿಟ್ಟು ಬಂದು ರೈತರ ಹೊಲಗಳಿಗೆ ಧಾವಿಸಿದರು. ರೈತರೊಂದಿಗೆ ರೈತರಾಗಿ ಅವರ ಪ್ರತಿಭಟನೆಗೆ ನಾಯಕತ್ವ ನೀಡಿದರು. ಸರ್ಕಾರ ಕಾರ್ಖಾನೆಗೆ ನೀಡಿದ್ದ ಅನುಮತಿಯನ್ನು ಹಿಂತೆಗೆದುಕೊಂಡಿತು.

ಈ ಹೊತ್ತಿಗೆ ನಾನು 'ಹೊಸ ಮನುಷ್ಯ; ಎಂಬ ಸಮಾಜವಾದಿ ಮಾಸಿಕವನ್ನು ಆರಂಭಿಸಿದ್ದೆ. ಸಾಮೀಜಿಯವರಿಗೂ ಕಳಿಸಿದ್ದೆ., ಅವರು ತುಂಬು ಹೃದಯದಿಂದ ಹರಸಿ ಪತ್ರಿಕೆಗೆ ಐದು ವರ್ಷಗಳ ಚಂದಾ ನೀಡಿದ್ದರು. ಹಾಗಾಗಿ ನಾನು ಈ ರೈತರ ಪ್ರತಿಭಟನೆಗೆ ಮಠಾಧೀಶರೊಬ್ಬರು ನೀಡಿದ ನಾಯಕತ್ವದ ಸುತ್ತಮುತ್ತ ಕೆಲವು ಪ್ರಶ್ನೆಗಳನ್ನು ರೂಪಿಸಿ ಅವರಿಗೆ ಕಳಿಸಿದೆ ಕೂಡಲೇ ಉತ್ತರಗಳು ಬಂದವು. ಅದನ್ನು ಸಂದರ್ಶನದ ರೂಪದಲ್ಲಿ ಪತ್ರಿಕೆಯ ಎರಡನೆಯ ಸಂಚಿಕೆಯಲ್ಲೇ (ಸೆಪ್ಟಂಬರ್, ೨೦೧೧) 'ಸಮಕಾಲೀನ' ಅಂಕಣದಲ್ಲಿ **ಮಠಾಧಿಪತಿಗಳು ನೀರು, ಭೂಮಿ, ಗಾಳಿ, ಬೆಳಕಿನಂತಿರಬೇಕು: ತೋಂಟದಾರ್ಯ ಎಂಬ ಶೀರ್ಷಿಕೆಯಡಿ** ಪ್ರಕಟಿಸಿದೆ.

ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆದುದಲ್ಲದೆ ಡಾಕ್ಟೋರೇಟ್ ಪದವಿಯನ್ನೂ ಪಡೆದಿದ್ದ ಸಿದ್ಧಲಿಂಗ ಸ್ವಾಮಿಗಳು ಉತ್ಕಟ ಕಾವ್ಯಪ್ರೇಮಿಯೂ ಆಗಿದ್ದರು. ನನ್ನ ಪತ್ನಿಗೆ ಅವಳ ಕಾವ್ಯಕ್ಕಾಗಿ ಪ್ರಶಸ್ತಿಗಳು ಬಂದಾಗಲೆಲ್ಲ ಅವಳನ್ನು ಅಭಿನಂದಿಸಿ ಪತ್ರ ಬರೆಯುತ್ತಿದ್ದರು. ಅವಳು ತನ್ನ ಹೊಸ ಸಂಕಲನಗಳು ಪ್ರಕಟವಾದಾಗಲೆಲ್ಲ ಅದರ ಒಂದು ಪ್ರತಿಯನ್ನು ಅವರಿಗೆ ಕಳಿಸುವುದನ್ನು ಮರೆಯುತ್ತಿರಲಿಲ್ಲ. ಹಾಗೇ ಸ್ವಾಮೀಜಿಯೂ ತಪ್ಪದೆ ಕವನ ಸಂಕಲನ ತಮಗೆ ತಲುಪಿದ್ದನ್ನೂ, ಅದನ್ನು ಓದಿ

ಸಂತೋಷಪಟ್ಟಿದ್ದನ್ನೂ ಸ್ವತಃ ತಾವೇ, ಕೆಲವೊಮ್ಮೆ ತಮ್ಮ ಆಪ್ತಸಹಾಯಕರ ಮೂಲಕ ಪತ್ರ ಬರೆದು ತಿಳಿಸಲು ಮರೆಯುತ್ತಿರಲಿಲ್ಲ.

ಹಲವು ಕಡೆ ತಮ್ಮ ಭಾಷಣಗಳಲ್ಲಿ ಅವಳ ಪದ್ಯಗಳ ಸಾಲುಗಳನ್ನೂ ಉಲ್ಲೇಖಿಸುತ್ತಿದ್ದರೆಂದು ಅವರ ಭಾಷಣಗಳನ್ನು ಕೇಳಿ ನಮ್ಮ ಗೆಳೆಯರು ನಮಗೆ ತಿಳಿಸುತ್ತಿದ್ದರು. ಅವರು ಪದೇ ಪದೇ ಉಲ್ಲೇಖಿಸುತ್ತಿದ್ದ ಮೆಚ್ಚಿನ ಕವನವೆಂದರೆ

ರಾಮಕೃಷ್ಣ ಶಿವ

ಕಚ್ಚಿ ರುಚಿ ನೋಡಿದ
ಹಣ್ಣಿಗೆ ತುಟಿ ಹಚ್ಚಿದನಲ್ಲ
ಆ ರಾಮ ನನಗೆ ಪ್ರಿಯನಾಗಲಿ

ಒಂದಗಳು ಅನ್ನವನೆ
ಉಕ್ಕಿಸಿ
ಹಸಿವಿನ ಸೊಕ್ಕಡಗಿಸಿದನಲ್ಲ
ಆ ಕೃಷ್ಣ
ನನಗೆ ಪ್ರಿಯನಾಗಲಿ

ಸತ್ತು ಒರಗಿದ ಸತಿಯ
ಹೊತ್ತು ತಿರುಗಿದನಲ್ಲ
ಆ ಶಿವ ನನಗೆ ಪ್ರಿಯನಾಗಲಿ.

ಮಹಾನ್ ಕನ್ನಡ ಪ್ರೇಮಿಯಾಗಿ 'ಕನ್ನಡ ಸ್ವಾಮಿ'ಗಳೆಂದು ಪ್ರಸಿದ್ಧರಾಗಿದ್ದ ಗದುಗಿನ ಈ ತೋಂಟದಾರ್ಯ ಸ್ವಾಮಿಗಳು ನಾನು ೨೦೧೭ರಲ್ಲಿ ನನಗೆ ರಾಜ್ಯ ಸರ್ಕಾರ ಸಾಹಿತ್ಯ ಸಾಧನೆಗಾಗಿ ನೀಡಿದ ನೀಡಿದ ರಾಜ್ಯೋತ್ಸವ ಪ್ರಶಸ್ತಿಯನ್ನು ಕನ್ನಡವನ್ನು ಶಾಲಾ ಶಿಕ್ಷಣ ಮಾಧ್ಯಮವನ್ನಾಗಿ ಮಾಡಲು ರಾಜ್ಯ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ ಎಂಬ ಕಾರಣಕ್ಕೆ ತಿರಸ್ಕರಿಸಿದಾಗ ನನ್ನನ್ನು ಮನಸಾರೆ ಅಭಿನಂದಿಸಿ ಪತ್ರ ಬರೆದ ಮಹನೀಯರಲ್ಲಿ ಸ್ವಾಮೀಜಿಯೂ ಒಬ್ಬರು.

ಇಂತಹ ಸಾಂಸ್ಕೃತಿಕ-ಸಾಮಾಜಿಕ ನೆಲೆಗಳನ್ನೊಳಗೊಂಡ ಧಾರ್ಮಿಕತೆಯನ್ನು ಮೈಗೂಡಿಸಿಕೊಂಡ ಸ್ವಾಮೀಜಿ ಓರ್ವ ಆದರ್ಶ ಮಠಾಧೀಶರಾಗಿದ್ದರು. ಈ ಜಾಗತೀಕರಣದ ಕಾಲಮಾನದಲ್ಲಿ ಅವರಿನ್ನೂ ಬಹಳ ವರ್ಷಗಳ ಕಾಲ ಕನ್ನಡಿಗರಿಗೆ ಅವರ ಹಲವು ನೆಲೆಗಳ ಸಮಸ್ಯೆಗಳಿಗೆ ಮಾರ್ಗದರ್ಶನ ನೀಡುವರೆಂಬ ಭರವಸೆ,

ನಿರೀಕ್ಷೆ ನಮ್ಮೆಲ್ಲರಲ್ಲಿ ಇತ್ತು. ಆದರೆ ಜನಸಾಮಾನ್ಯರ ಬದುಕಿಗೆ ಸಂಬಂಧಿಸಿದಂತೆ ಹಚ್ಚಿಕೊಂಡಿದ್ದ ವೈವಿಧ್ಯಮಯ ಕಾರ್ಯಭಾರಗಳ ಒತ್ತಡಕ್ಕೆ ಒಳಗಾಗಿಯೋ ಏನೋ ಅವರು ತಮ್ಮ ೬೯ ವರ್ಷಗಳ ವಯಸ್ಸಿನಲ್ಲಿಯೇ ೨೦೧೮ರ ಅಕ್ಟೋಬರ್ ೨೦ರಂದು ನಮ್ಮನ್ನಗಲಿ ಹೋದರು. ನಮ್ಮ ಹೊಸ ಮನುಷ್ಯ ಪತ್ರಿಕೆ ತನ್ನ ೨೦೧೮ರ ನವೆಂಬರ್ ಸಂಚಿಕೆಯಲ್ಲಿ ಈ ಮಹಾ ಜನ ಸೇವಕನಿಗೆ ಒಂದು ನುಡಿನಮನ ಸಲ್ಲಿಸಿತು:

ಮಾದರಿ ಮಠಾಧೀಶ ಸಿದ್ಧಲಿಂಗ ಸ್ವಾಮೀಜಿ

ಕೆಲವು ದಿನಗಳ ಹಿಂದಷ್ಟೇ ಹಠಾತ್ತಾಗಿ ನಮ್ಮನ್ನು ಅಗಲಿಹೋದ ಗದುಗಿನ ತೋಂಟದ ಸಿದ್ಧಲಿಂಗ ಸ್ವಾಮೀಜಿ ಓರ್ವ ಅಪರೂಪದ ಮಠಾಧೀಶರಾಗಿದ್ದರು. ನಮ್ಮ ಒಂದೊಂದು ಮಠವೂ ಒಂದೊಂದು ಜಾತಿ–ಉಪಜಾತಿಗಳ ಆಶ್ರಯದಾಣಗಳಾಗಿ ಆಯಾ ಸಮುದಾಯಗಳ ಸಂಕುಚಿತ ಹಿತಾಸಕ್ತಿಗಳನ್ನು ರಕ್ಷಿಸುವ ಶಕ್ತಿಕೇಂದ್ರಗಳಂತೆ ವರ್ತಿಸುತ್ತಿದ್ದಾಗ ಇವರ ಮಠ ಎಲ್ಲ ಜಾತಿ–ಧರ್ಮಗಳ ಜನರ ಪ್ರೀತಿ–ವಿಶ್ವಾಸಗಳಿಗೆ ಪಾತ್ರವಾಗಿದ್ದ ಒಂದು ಸಾಮಾಜಿಕ–ಸಾಂಸ್ಕೃತಿಕ–ಧಾರ್ಮಿಕ ಕೇಂದ್ರವಾಗಿತ್ತು.

ಕನ್ನಡ ಸಾಹಿತ್ಯ–ಸಂಸ್ಕೃತಿಗಳ ಆಳವಾದ ತಿಳುವಳಿಕೆ ಹೊಂದಿ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನೂ ಪಡೆದಿದ್ದ ಸಿದ್ಧಲಿಂಗ ಸ್ವಾಮೀಜಿಯವರು 'ಕನ್ನಡ ಜಗದ್ಗುರು' ಎಂದೇ ಪ್ರಸಿದ್ಧರಾದವರು.. ತಮ್ಮ ಮಠದ ವತಿಯಿಂದಲೇ ಪುಸ್ತಕ ಪ್ರಕಾಶನವನ್ನು ಆರಂಭಿಸಿ ಕರ್ನಾಟಕದ ಇತಿಹಾಸ, ಪರಂಪರೆ ಅಧ್ಯಾತ್ಮಿಕ ವಿಚಾರ ಮತ್ತು ಅಪರೂಪದ ಸಾಧಕರ ಬದುಕನ್ನು ಕುರಿತ ಅನೇಕ ವಿದ್ವತ್ಪೂರ್ಣ ಮತ್ತು ಜನಪ್ರಿಯ ಗ್ರಂಥಗಳನ್ನು ಪ್ರಕಟಿಸಿರುವರು. ಅವರ ಮಠದಲ್ಲಿ ನಡೆಯುತ್ತಿದ್ದ ವಾರದ 'ಶಿವಾನುಭವ' ಗೋಷ್ಠಿ ಜಾತಿ–ಮತ ಸಂಪ್ರದಾಯಗಳಿಂದ ದೂರವಿದ್ದುದಾಗಿತ್ತು. ಇತ್ತೀಚೆಗೆ ಪ್ರಕಟವಾದ 'ಮಹಾತ್ಮ ಗಾಂಧಿ : ರಾಮಮನೋಹರ ಲೋಹಿಯಾ ಅವರು ಕಂಡಂತೆ' ಪುಸ್ತಕದ ಬಗ್ಗೆ ನಡೆದ ಗೋಷ್ಠಿ ಇದಕ್ಕೆ ಉದಾಹರಣೆಯಾಗಿತ್ತು. ಕನ್ನಡಕ್ಕೆ ಕುತ್ತು ಬಂದಾಗಲೆಲ್ಲ ಅವರು ಜನ ಜಾಗೃತಿಗೆ ಮುಂದಾಗಿ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟವರು. ಕನ್ನಡ ಮಾಧ್ಯಮದ ವಿರುದ್ಧ ಸರ್ವೋನ್ನತ ನ್ಯಾಯಾಲಯದ ತೀರ್ಪು ಬಂದಾಗ ಅವರು ನೊಂದರು. ಈ ತೀರ್ಪಿನ ಸಂಬಂಧವಾಗಿ ರಾಜ್ಯ ಸರ್ಕಾರ ಏನೂ ಮಾಡುತ್ತಿಲ್ಲವೆಂದು ಪ್ರತಿಭಟಿಸಿ ನಾನು ಕಳೆದ ವರ್ಷ ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸಲು ನಿರಾಕರಿಸಿದಾಗ ನನ್ನನ್ನು ಅಭಿನಂದಿಸಿ ಸ್ವಾಮೀಜಿ ದೀರ್ಘ ಪತ್ರ ಬರೆದಿದ್ದರು

ಮಠಾಧೀಶರಾಗಿ ಧಾರ್ಮಿಕ ಸಂಗತಿಗಳಿಗಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಳ್ಳಲೊಲ್ಲದ ಸ್ವಾಮೀಜಿ ಹಲವು ಜನಾಂದೋಲನಗಳ ನೇತೃತ್ವ ವಹಿಸಿದ್ದಲ್ಲದೆ, ಅನಿವಾರ್ಯವಾದಾಗ ತಾವೇ ಆಂದೋಲನಗಳಿಗೆ ಚಾಲನೆ ನೀಡಿದ್ದೂ ಉಂಟು. ಗೋಕಾಕ ಚಳುವಳಿ, ಪೋಸ್ಕೋ ಭೂ ಸ್ವಾಧೀನ ವಿರೋಧಿ ಚಳುವಳಿ, ಕಪ್ಪತಗುಡ್ಡ ಪರಿಸರ ಸಂರಕ್ಷಣಾ ಚಳುವಳಿಗಳು ಇದಕ್ಕೆ ಉದಾಹರಣೆಗಳು. ಪೊಸ್ಕೋ ವಿರೋಧಿ ಚಳುವಳಿಯ ಸಂದರ್ಭದಲ್ಲಿ ನಮ್ಮ ಪತ್ರಿಕೆ ಅವರನ್ನು ಸಂದರ್ಶಿಸಿತ್ತು. (ಸೆಪ್ಟಂ. ೨೦೧೧) ಆಗ

ಪತ್ರಿಕೆಯ ಒಂದು ಪ್ರಶ್ನೆಗೆ ಅವರು ಹೀಗೆ ಉತ್ತರಿಸಿದ್ದರು : 'ಮಠಾಧಿಪತಿಗಳು ನೀರು, ಭೂಮಿ, ಗಾಳಿ, ಬೆಳಕಿನಂತಿರಬೇಕು. ಎಲ್ಲರ ಹಿತ ಕಾಯಬೇಕು. ಭಾರತೀಯ ತತ್ವಜ್ಞಾನದಲ್ಲಿ ಇಹಕ್ಕಿಂತ ಪರಕ್ಕೆ ಲಕ್ಷ್ಯ ಕೊಟ್ಟವರೇ ಹೆಚ್ಚು. ಪರದಷ್ಟೇ ಇಹಕ್ಕೂ ಬೆಲೆ ಕೊಟ್ಟವರು ಬಸವಣ್ಣ. ಆ ಬಸವ ಪರಂಪರೆಯ ವ್ಯಾಪ್ತಿಯಲ್ಲಿಯೇ ನಮ್ಮ ಮಠ ಇರುವುದರಿಂದ ಈ ಚಳುವಳಿಯಲ್ಲಿ ಭಾಗವಹಿಸುವುದು ನನ್ನ ಕರ್ತವ್ಯವಾಯಿತು'

ಬಸವ ಪರಂಪರೆಯ ನಿಷ್ಠುರ ಅನುಯಾಯಿಗಾಗಿ ಅಡ್ಡಪಲ್ಲಕ್ಕಿ, ಕಿರೀಟಧಾರಣೆ, ಪೀಠಾರೋಹಣ ಇತ್ಯಾದಿ ಡಂಭಾಚಾರಗಳನ್ನು ತ್ಯಜಿಸಿದ್ದ ಸ್ವಾಮೀಜಿ ಕಾಯಕ, ದಾಸೋಹ, ಅಕ್ಷರ ಪ್ರಸಾರಗಳ ಸಂಸ್ಕೃತಿಯನ್ನು ಪೋಷಿಸಿದವರು. 'ಹೊಸ ಮನುಷ್ಯ' ಪತ್ರಿಕೆಗೆ ಚಂದಾ ನೀಡಿ ಅದರ ಅಭಿಮಾನದ ಓದುಗರಾಗಿದ್ದ ಸ್ವಾಮೀಜಿ, ಲಿಂಗಾಯತ ಸ್ವತಂತ್ರ ಧರ್ಮ ಚಳುವಳಿಯನ್ನು ಅದರ ಜಾತಿ ಸಂಕುಚಿತ ರಾಜಕಾರಣಕ್ಕಾಗಿ ನಾನು ವಿರೋಧಿಸಿದಾಗ ಮುನಿಸಿಕೊಂಡದ್ದೂ ಉಂಟು. ಆದರೆ ನನ್ನ ವಿರೋಧವನ್ನು ಅವರಿಗೆ ವೈಯಕ್ತಿಕವಾಗಿ ವಿವರಿಸುವ ಅವಕಾಶ ನನಗೆ ದೊರೆಯುವ ಮುನ್ನವೇ ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಇಂತಹ ಮಾದರಿ ಮಠಾಧೀಶರನ್ನು ಈ ದಿನಗಳಲ್ಲಿ ಜನ ಮತ್ತೆ ಪಡೆಯವುದು ಕಷ್ಟ.

(ಡಾ. ತೋಂಟದ ಸಿದ್ಧಲಿಂಗಸ್ವಾಮಿಗಳ ಸ್ಮೃತಿ ಸಂಚಯ 'ಸಮಾಜಮುಖಿ'ಗಾಗಿ ಬರೆದ ಲೇಖನ: ೨೦೨೧)

ಮೀಸಲಾತಿ: ಒಂದು ಮರುಚಿಂತನೆ:
ನ್ಯಾ. ನಾಗಮೋಹನ ದಾಸ್ ಅವರಿಗೆ ಒಂದು ಪತ್ರ

ರಾಜ್ಯದಲ್ಲಿ ಶಿಕ್ಷಣ ಮತ್ತು ಸರ್ಕಾರಿ/ಸಾರ್ವಜನಿಕ ಉದ್ಯೋಗ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣವನ್ನು ಅವುಗಳ ಜನಸಂಖ್ಯಾನುಸಾರ ಹೆಚ್ಚಿಸುವ ವಿಷಯ ಕುರಿತು ಅಧ್ಯಯನ ಮಾಡಿ ವರದಿ ನೀಡಲು ಈ ಹಿಂದಿನ ರಾಜ್ಯ ಸರ್ಕಾರ ನೇಮಿಸಿದ್ದ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಏಕ ಸದಸ್ಯ ಆಯೋಗ ಹಲವು ಸಾಹಿತಿ/ಚಿಂತಕರಿಗೆ ಅವರ ಅಭಿಪ್ರಾಯ ಕೋರಿ ಪತ್ರ ಬರೆದಿತ್ತು. ಅದಕ್ಕೆ ಉತ್ತರವಾಗಿ ಡಿ.ಎಸ್. ನಾಗಭೂಷಣ ಅವರು ಆಯೋಗಕ್ಕೆ ಬರೆದ ಪತ್ರ ಇದು. ಚಾರಿತ್ರಿಕ ಕಾರಣಗಳಿಂದಾಗಿ ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವ ಅವಕಾಶಗಳನ್ನು ಕಳೆದುಕೊಂಡಿದ್ದ ಸಮುದಾಯಗಳ ಸಬಲೀಕರಣದ ಮೂಲ ಉದ್ದೇಶದಿಂದ ಚಾಲ್ತಿಗೆ ಬಂದ ಮೀಸಲಾತಿ ಎಂಬ ಪರಿಕಲ್ಪನೆ ಇಂದು ದೇಶ ಅಭಿವೃದ್ಧಿ ಹೊಂದಿದಂತೆ ಅದರ ಫಲಗಳಲ್ಲಿನ ಹೆಚ್ಚಿನ ಪಾಲಿಗಾಗಿ ವ್ಯಕ್ತವಾಗುತ್ತಿರುವ ಹಪಾಹಪಿಯಾಗಿ ಮಾರ್ಪಾಡಾಗುತ್ತಿರುವ ಇಂದಿನ ದಿನಗಳಲ್ಲಿ ಪ್ರತಿ ಸಮುದಾಯವೂ ತನ್ನನ್ನು ಹೆಚ್ಚು ಹಿಂದುಳಿದಿರುವಂತೆ ಪ್ರತಿಬಿಂಬಿಸಿಕೊಳ್ಳಲು ನಡೆಸಿರುವ ವಿವಿಧ ರೀತಿಯ ಪ್ರಯತ್ನ ಮೀಸಲಾತಿ ಪರಿಕಲ್ಪನೆಯನ್ನು ಬುಡಮೇಲುಗೊಳಿಸುತ್ತಿರುವಂತೆ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಈ ಪತ್ರ ಕುತೂಹಲ ಹುಟ್ಟಿಸಬಹುದು..

ದಿನಾಂಕ: ೪, ಡಿಸೆಂಬರ್, ೨೦೧೯

ಇವರಿಗೆ:

ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಆಯೋಗ

ನೃಪತುಂಗ ರಸ್ತೆ,

ಬೆಂಗಳೂರು

ಮಾನ್ಯರೇ,

ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಶಿಕ್ಷಣ ಮತ್ತು ಸಾರ್ವಜನಿಕ ಉದ್ಯೋಗ ವಲಯಗಳಲ್ಲಿ ಅವುಗಳಿಗಿರುವ ಮೀಸಲಾತಿ ಪ್ರಮಾಣವನ್ನು ಅವುಗಳ ಸದ್ಯದ ಜನಸಂಖ್ಯಾ ಪ್ರಮಾಣಕ್ಕನುಸಾರವಾಗಿ ಹೆಚ್ಚಿಸುವ ವಿಷಯದ ಬಗ್ಗೆ ನನ್ನಿಂದ ಅಹವಾಲು ಪಡೆಯಲು ತಾವು ಬರೆದಿರುವ ೧೯-೧೧-೨೦೧೯ರ ಪತ್ರಕ್ಕಾಗಿ ವಂದನೆಗಳು.

ಈ ವಿಷಯಕ್ಕೆ ಸಂಬಂಧಿಸಿದ ನನ್ನ ಅಹವಾಲೆಂಬುದು ಏನಿಲ್ಲವಾದರೂ ಒಂದು ಅಭಿಪ್ರಾಯವನ್ನು ತಿಳಿಸಲು ಈ ಅವಕಾಶವನ್ನು ಬಳಸಿಕೊಳ್ಳಲು ಇಚ್ಛಿಸುತ್ತೇನೆ.

ನಮ್ಮ ಸಮಾಜದಲ್ಲಿನ ಪಾರಂಪರಿಕ ಜಾತಿ ಪದ್ಧತಿ ಮತ್ತು ಅದರ ಅತಿ ದುಷ್ಟಫಲವಾದ ಅಸ್ಪೃಶ್ಯತೆಯ ಕಾರಣದಿಂದಾಗಿ ಉಂಟಾಗಿದ್ದ ಅವಕಾಶಗಳ ತೀವ್ರ ಅಸಮಾನತೆ ಹಾಗೂ ಸಾಮಾಜಿಕ ಮತ್ತು ಆರ್ಥಿಕ ಅಸಮತೋಲನಗಳ ನಿವಾರಣೆಗಾಗಿ ಜಾತಿ ಆಧಾರಿತ/ಸಾಮಾಜಿಕ ಆಧಾರಗಳ ಮೀಸಲಾತಿ ಆರಂಭವಾಯಿತಷ್ಟೆ. ಹಾಗೇ, ನಮ್ಮ ಸಂವಿಧಾನದಲ್ಲಿ ಇದಕ್ಕಾಗಿ ಅಂದಿನ ಪರಿಸ್ಥಿತಿಯ ಅಂದಾಜಿನ ಪ್ರಕಾರ ಅವುಗಳ ಜನಸಂಖ್ಯಾಧಾರಿತ ಪ್ರಮಾಣನುಸಾರವಾಗಿ ಆ ಮೀಸಲಾತಿಯನ್ನು ನಿಗದಿಪಡಿಸಲಾತಷ್ಟೆ. ಆದರೆ ಈ ಸಾಂವಿಧಾನಿಕ ಮೀಸಲಾತಿಯ ವ್ಯವಸ್ಥೆ ಆರಂಭವಾದ ಸುಮಾರು ಏಳು ದಶಕಗಳ ನಂತರವೂ ಇದೇ ಚಿಂತನೆಯ ಆಧಾರದ ಮೇಲೆ ಮೀಸಲಾತಿಯ ಬಗ್ಗೆ ಆಲೋಚಿಸುವುದು ಎಂದರೆ ಈ ಏಳು ದಶಕಗಳಲ್ಲಿ ಅದರ ಉದ್ದೇಶ ಸಾಧನೆಗಳಿಗೆ ಸಂಬಂಧಪಟ್ಟಂತೆ ಆಗಿರುವ ಬೆಳವಣಿಗೆಗಳನ್ನು ಅಲಕ್ಷಿಸುವುದೆಂದೇ ಅರ್ಥ.

ಮೀಸಲಾತಿಯ ಘನ ಉದ್ದೇಶ ಪ್ರತಿ ಪ್ರಜೆ ಮತ್ತು ಸಮುದಾಯ ಉನ್ನತಿ/ಪ್ರಗತಿಯ ಸಮಾನ ಅವಕಾಶಗಳನ್ನು ಪಡೆಯುವಂತಹ ವ್ಯವಸ್ಥೆಯನ್ನು ನಿರ್ಮಾಣ ಮಾಡುವುದಾಗಿತ್ತೇ ಹೊರತು ಅವರಿಗೆ ಅವರ ಜನಸಂಖ್ಯಾ ಪ್ರಮಾಣಾನುಸಾರ ಶಿಕ್ಷಣ ಮತ್ತು ಉದ್ಯೋಗಗಳ ಅಧಿಕೃತ ಗ್ಯಾರಂಟಿ ನೀಡುವುದಾಗಿರಲಿಲ್ಲ. ಆರಂಭದಲ್ಲಿ ಈ ಸಮುದಾಯಗಳ ಜನಸಂಖ್ಯೆಯನ್ನು ಮೀಸಲಾತಿ ಪ್ರಮಾಣ ನಿಗದಿ ಮಾಡಲು ಆಧಾರವನ್ನಾಗಿ ಮಾಡಿಕೊಂಡಿದ್ದರೆ ಅದು ಈ ಸಮುದಾಯಗಳು ಅಂದು ಎದುರಿಸುತ್ತಿದ್ದ ಅವಕಾಶಗಳ ತೀವ್ರ ಅಸಮಾನತೆಯನ್ನು ಸಮಾಜದ ಮುಖಕ್ಕೆ ಕನ್ನಡಿಯಂತೆ ಹಿಡಿಯಲು ರೂಪಿಸಿಕೊಂಡ ಒಂದು ಅಳತೆಯ ಹೆಗ್ಗುರುತಾಗಿತ್ತು. ಆದರೆ ಇಂದು ಪರಿಸ್ಥಿತಿ ಹಾಗಿಲ್ಲ. ಪರಿಶಿಷ್ಟ ಜಾತಿ-ಪಂಗಡಗಳ ಜನ ನಿರೀಕ್ಷಿಸಿದ ಪ್ರಮಾಣದಲ್ಲಿ ಸಮಾಜದ ಮುಖ್ಯ ಪ್ರವಾಹದೊಂದಿಗೆ ಲೀನವಾಗಿಲ್ಲದಿದ್ದರೂ, ಅವರೂ ಪ್ರಗತಿಶೀಲ ಸಮಾಜದ ಒಂದು ಗಣನೀಯ ಭಾಗವಂತೂ ಆಗಿರುವರು. ಹಾಗಾಗಿಯೇ ಇಂದೂ ಮೀಸಲಾತಿ ಅಗತ್ಯವಿದೆಯಾದರೂ, ಅದಕ್ಕಾಗಿ ಮಾಡಿಕೊಂಡ ಮೂಲ ಪರಿಗಣನೆಗಳು ಹಾಗೇ ಮುಂದುವರೆಯಬಾರದು ಎಂದು ಹೇಳಬೇಕಾಗುತ್ತದೆ.

ಮೀಸಲಾತಿಯ ಉದ್ದೇಶ ಶ್ರೇಣೀಕೃತ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಆಚರಣೆಗಳ ಕಾರಣದಿಂದಾಗಿ ಅಗತ್ಯವಾಯಿತು ಎಂದು ಹೇಳುವುದಾದರೆ, ಅದರ ಉದ್ದೇಶ ಅವನ್ನು

ತೊಡೆದುಹಾಕುವುದೂ ಆಗಬೇಕಲ್ಲವೆ? ಆದರೆ ಈ ಉದ್ದೇಶ ಈಡೇರಿದೆಯೇ ಎಂದು ಕೇಳಿಕೊಂಡಾಗ ಗೊಂದಲದ ಉತ್ತರಗಳು ಸಿಗುತ್ತವೆ. ಜಾತಿ ಆಧಾರಿತ ಮೀಸಲಾತಿಯನ್ನು ಯಾವುದೇ ನೆಲೆಯಲ್ಲಿಯೂ ಪರಿಷ್ಕರಿಸದೆ ಮುಂದುವರೆಸಲಾಗುತ್ತಿರುವ ಸರ್ಕಾರದ ಕ್ರಮ ಮತ್ತು ಈಗ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣವನ್ನು ಅವುಗಳ ಈಗಿನ ಜನಸಂಖ್ಯಾ ಪ್ರಮಾಣಾನುಸಾರವಾಗಿ ಹೆಚ್ಚಿಸಬೇಕೆಂಬ ಅವುಗಳ ಬೇಡಿಕೆ ಹಾಗೂ ಈ ಬೇಡಿಕೆಯನ್ನು ಪರಿಶೀಲಿಸಲು ಸರ್ಕಾರ ಆಯೋಗವೊಂದನ್ನು ನೇಮಿಸಿರುವ ನಿರ್ಧಾರ ಕಳೆದ ಏಳು ದಶಕಗಳ ಮೀಸಲಾತಿ ಕಾರ್ಯಕ್ರಮ ನಮ್ಮ ಜಾತಿ ವ್ಯವಸ್ಥೆಯ ಶ್ರೇಣೀಕರಣ ಮತ್ತು ಅಸ್ಪೃಶ್ಯತೆಯ ಸಮಸ್ಯೆಯನ್ನು ಒಂದಿಷ್ಟೂ ಪರಿಹರಿಸಿಲ್ಲವೇನೋ ಎಂಬ ಸಂದೇಹವನ್ನುಂಟು ಮಾಡುವಂತಿದೆ. ಆದರೆ ಬರಿಗಣ್ಣಿಗೆ ಕಾಣುವಂತೆಯೇ, ಈ ಸಮಸ್ಯೆಗಳು ಪೂರ್ಣ ಪರಿಹಾರವಾಗಿದೆ ಎಂದು ಯಾರೂ ಹೇಳಲಾರರಾದರೂ, ಪರಿಸ್ಥಿತಿ ಗಣನೀಯವಾಗಿ ಬದಲಾಗಿದೆ ಎಂದು ಯಾವುದೇ ಹಿಂಜರಿಕೆ ಇಲ್ಲದೆ ಹೇಳುವಷ್ಟು ಚಿತ್ರ ಸ್ಪಷ್ಟವಾಗಿದೆ. ಇದು ಕೇವಲ ಅಭಿಪ್ರಾಯ ಅಥವಾ ದೃಷ್ಟಿ-ಕೋನ ಮಾತ್ರವಾಗಿರದೆ, ಅಂಕಿ ಅಂಶಗಳ ಮೂಲಕ ಸಾಬೀತು ಮಾಡಬಹುದಾದಷ್ಟು ದತ್ತಾಂಶಗಳು ಲಭ್ಯವಿವೆ. ಹಾಗಾಗಿ ಮೀಸಲಾತಿಯ ಆರಂಭದ ಆಧಾರಗಳನ್ನೇ ಈಗಲೂ ನಂಬಿ ಅವನ್ನು ಮುಂದುವರೆಸಬೇಕೆಂಬ ಬೇಡಿಕೆ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತಾ ಆಚರಣೆಗೆ ನೀಡುವ ಪರೋಕ್ಷ ಮಾನ್ಯತೆಯೇ ಆದೀತು. ಇಂದೂ ಹಲವೆಡೆ ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆ ಆಚರಣೆಯ ಹಲವು ಕ್ರೂರ ರೂಪಗಳು ಕಂಡುಬರುತ್ತಿದ್ದರೆ ಅದಕ್ಕೆ ಒಂದು ಮುಖ್ಯ ಕಾರಣ ಮೀಸಲಾತಿಯ ಈ ಸ್ಥಗಿತ ರೂಪದ ವಿಕ್ಷಿಪ್ತ ಪರಿಣಾಮಗಳೇ ಆಗಿದ್ದರೆ ಆಶ್ಚರ್ಯವಿಲ್ಲ. ನಮ್ಮ ಸಮಾಜದ ಪ್ರತಿ ಸಮುದಾಯವೂ ಮೀಸಲಾತಿಯೂ ಸೇರಿದಂತೆ ಸರ್ಕಾರದ ಹಲವು ಸೌಲಭ್ಯಗಳನ್ನು ಬಳಸಿಕೊಂಡು ತಾನು ಲೌಕಿಕವಾಗಿ ಹೆಚ್ಚು ಮುಂದುವರೆದಷ್ಟೂ ಸರ್ಕಾರದ ಲೆಕ್ಕದಲ್ಲಿ ಹಿಂದುಳಿದಂತೆ ತೋರಿಸಲು ಹಾತೊರೆಯುವಂತಹ ಒಡಕು ಮನಸ್ಸಿಗೆ ತುತ್ತಾಗಿರಲೂ ಇದೇ ಕಾರಣವಾಗಿರುವಂತಿದೆ. ಪ್ರತಿ ಸಮುದಾಯವೂ ಒಂದಲ್ಲ ಒಂದು ಮಟ್ಟದಲ್ಲಿ ಆರ್ಥಿಕ ಅವಕಾಶಗಳ ಮೂಲಕ ಮೇಲೇರಿವೆಯಾದರೂ, ಹಳೆಯ ಶ್ರೇಣೀಕರಣ ಮತ್ತು ಅದರ ಆಚರಣಾ ರೂಪಗಳ ಮಾನ್ಯತೆ ಮುಂದುವರೆದೇ ಇದೆಯಲ್ಲದೆ ಪ್ರತಿ ಸಮುದಾಯದ ಸಬಲೀಕರಣವು ಈ ಶ್ರೇಣೀಕರಣದ ವ್ಯಕ್ತ ರೂಪಗಳನ್ನು ಬಿರುಸುಗೊಳಿಸಿದೆ. 'ಕೆಳಜಾತಿ'ಗಳಲ್ಲೂ ಕಂಡು ಬರುತ್ತಿರುವ ಮರ್ಯಾದಾ ಹತ್ಯೆಗಳು, ಜಾತಿ-ಉಪಜಾತಿಗಳ ಪರಸ್ಪರ ತೀವ್ರ ಪ್ರತ್ಯೇಕೀಕರಣ ಮತ್ತು ಈ ಪ್ರಕ್ರಿಯೆಯ ಸಾಧನವಾಗಿ ಮಠಗಳ ಸ್ಥಾಪನೆ ಹಾಗೂ ಅವುಗಳ ವರ್ತನೆ-ವ್ಯವಹಾರಗಳ ಪರಿ ಇದರ ಸೂಚನೆಗಳೇ ಆಗಿವೆ. ಹಾಗಾಗಿ ಮೀಸಲಾತಿಯ ಫಲವಾದ ಉನ್ನತೀಕರಣವು ಸಮುದಾಯಗಳ ಹೊರ ರೂಪಗಳನ್ನು ಬದಲಿಸಿರಬಹುದೇ ಹೊರತು ಒಳರೂಪಗಳನ್ನಲ್ಲ; ಹಾಗೇ, ಸಮಾಜದಲ್ಲಿ ಒಟ್ಟಾರೆ ಅವಕಾಶಗಳ ಅಸಮಾನತೆಗಳನ್ನು ಸೃಷ್ಟಿಸಿದ ಅವುಗಳ ಮನೋರಂಗವನ್ನಲ್ಲ. ಮೀಸಲಾತಿ (ಭೌತಿಕ) ಉನ್ನತೀಕರಣದ

ಹಪಾಹಪಿಯನ್ನು ಸೃಷ್ಟಿಸಿತೇ ಹೊರತು, ಸಹಬಾಳ್ವೆ–ಸೋದರತೆಗಳನ್ನಲ್ಲ. ಪರಿಶಿಷ್ಟ ಜಾತಿ–ಪಂಗಡಗಳೂ ಈ ಮಾತಿಗೆ ಹೊರತಾಗಿಲ್ಲ.

ಇಂತಹ ಆಘಾತಕರ ಪರಿಸ್ಥಿತಿ ಉಂಟಾಗಲು ಮುಖ್ಯ ಕಾರಣ ಅವಕಾಶಗಳ ಅಸಮಾನತೆ ಮತ್ತು ಅದರ ಹಿಂದಿನ ಸಾಮಾಜಿಕ ದಮನ ಮತ್ತು ಅವಮಾನಗಳ ಹಿಂದಿರುವ ಜಾತಿವ್ಯವಸ್ಥೆಯ ಎಲ್ಲ ಸಾರ್ವಜನಿಕ ರೂಪಗಳನ್ನು (ಅಸ್ಪೃಶ್ಯತಾ ಆಚರಣೆಯಂತೆಯೇ) ಅಮಾನ್ಯ ಮಾಡುವ, ಕನಿಷ್ಠ ಅವುಗಳ ವಿರುದ್ಧ ಜನಜಾಗೃತಿ ಉಂಟು ಮಾಡುವ ಒಂದು ಸಾಂಸ್ಕೃತಿಕ ಚಳುವಳಿಯ ಅಗತ್ಯವನ್ನು ಮನಗಾಣದಿದ್ದುದು. ಹಾಗಾಗಿ ಮೀಸಲಾತಿ ಎಂಬುದು ಸಾಮಾಜಿಕ ಸಮಾನತೆಯ ಒಂದು ಹೊರ ಪ್ರಯತ್ನ ಮಾತ್ರವಾಗಿದ್ದು ಅದು ತನ್ನ ಉದ್ದೇಶದಲ್ಲಿ ಭಾಗಶಃ ಮಾತ್ರ ಸಫಲವಾಗಿದೆ. ಈ ಅರೆಬರೆ ಸಫಲತೆ ಅರೆಬರೆ ವಿಫಲತೆಯೂ ಆಗಿ ಈ ಸಮುದಾಯಗಳಿಗೆ ಕಾಣತೊಡಗಿರಬಹುದಾಗಿದ್ದು, ಅದೇ ಮೀಸಲಾತಿ ಕಾರ್ಯಕ್ರಮವನ್ನು ಅದರ ಮೂಲ ರೂಪದಲ್ಲಿ ಸಾರಾಸಗಟಾಗಿ ಮುಂದುವರೆಸಬೇಕೆಂಬ ಬೇಡಿಕೆ ಹುಟ್ಟಲು, ಹೆಚ್ಚಲು ಕಾರಣವಾಗಿದೆ.

ಈ ಸಂಬಂಧವಾಗಿ ನಾನು ತಿಳಿಸಬಯಸುವ ಇನ್ನೂ ಮೂರು ಮುಖ್ಯ ಸಂಗತಿಗಳೆಂದರೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯಾ ಪ್ರಮಾಣ ಎಷ್ಟು ಹೆಚ್ಚಾಗಿದೆಯೋ ನನಗೆ ತಿಳಿಯದು. ಅದು ಇತರ ಸಮುದಾಯಗಳ ಏರಿಕೆಯ [ಪ್ರಮಾಣಕ್ಕಿಂತ ಹೆಚ್ಚಾಗಿದ್ದರೆ ಅದಕ್ಕೆ ಒಂದು ಕಾರಣ, ಸಾಮಾಜಿಕ ನ್ಯಾಯ ಎಂಬುದು ೩ನೇ ಪುಟದಿಂದ)

ಸುಲಭ ರಾಜಕಾರಣದ ಸಾಧನವಾದ ಇತ್ತೀಚಿನ ವರ್ಷಗಳಲ್ಲಿ ಈ ಜಾತಿ–ಪಂಗಡಗಳ ಪಟ್ಟಿಗೆ ಹೊಸ ಹೊಸ ಜಾತಿ–ಸಮುದಾಯಗಳನ್ನು ಅಗತ್ಯ ಅಧ್ಯಯನ–ಔಪಚಾರಿಕತೆಗಳಿಲ್ಲದೆ ಅವಸರರವಸರವಾಗಿ ಸೇರಿಸುತ್ತಾ ಹೋದದ್ದು ಇರಬಹುದು. ಈ ಸಂಗತಿಯನ್ನೂ ಆಯೋಗ ಪರಿಶೀಲಿಸಿ ಈ ಪಟ್ಟಿಯನ್ನು ಪುನರ್‌ಪರಿಶೀಲಿಸುವಂತೆ ಸರ್ಕಾರಕ್ಕೆ ಸಲಹೆ ಮಾಡಬಹುದು.

ಇನ್ನೊಂದು ಸಂಗತಿ ಎಂದರೆ, ಪರಶಿಷ್ಟ ಜಾತಿ–ಪಂಗಡಗಳ ಮೀಸಲಾತಿ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಿದರೆ, ಗರಿಷ್ಠ ಮೀಸಲಾತಿ ಪ್ರಮಾಣವಾಗಿ ಸರ್ವೋಚ್ಚ ನ್ಯಾಲಯವು ನಿಗದಿ ಮಾಡಿರುವ ಗಡಿರೇಖೆಯ ಮೇಲೆ ಒತ್ತಡ ಬಿದ್ದು ಇತರ ಮೀಸಲಾತಿಗಳ ಪ್ರಮಾಣದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಬಹುದು ಅಥವಾ ನಿಗದಿತ ಗರಿಷ್ಠ ಮೀಸಲಾತಿಯನ್ನು ಹೆಚ್ಚಿಸುವ ಸಾಧ್ಯತೆಯನ್ನೂ ತೆರೆಯಬಹುದು. ಆಯೋಗ ಇದರ ಸಾಧಕ–ಬಾಧಕಗಳನ್ನೂ ಪರಿಶೀಲಿಸಿ ತನ್ನ ಶಿಪಾರ್ಸುಗಳನ್ನು ರೂಪಿಸಬೇಕಾಗುತ್ತದೆ.

ಮೂರನೆಯ ಸಂಗತಿ ಎಂದರೆ, ಜನಸಂಖ್ಯಾ ಪ್ರಮಾಣದ ಮೀಸಲಾತಿ ಎಂಬುದನ್ನು ಒಂದು ತತ್ವವಾಗಿ ಒಪ್ಪಿಕೊಳ್ಳಲಾಯಿತು ಎಂದರೆ, ಜಾತಿ ಮೀಸಲಾತಿಯ ವ್ಯಾಪ್ತಿಗೆ ಬರುವ

ಪ್ರತಿ ಜಾತಿಯೂ ಅದನ್ನು ಆಗ್ರಹಿಸಲಾರಂಭಿಸುತ್ತದೆ. ಇದು ಅಂತಿಮವಾಗಿ, ಯಾವುದರ ದುಷ್ಪರಿಣಾಮಗಳ ನಿವಾರಣೆಗಾಗಿ ಮೀಸಲಾತಿಯನ್ನು ಜಾರಿಗೆ ತರಲಾಯಿತೋ ಆ ಜಾತಿ ಸಮಾಜವನ್ನು ಗಟ್ಟಿಗೊಳಿಸುವುದರಲ್ಲಿ ಅದು ಸಫಲವಾಗುತ್ತದಷ್ಟೆ.

ಆದುದರಿಂದ ತಮ್ಮ ಆಯೋಗಕ್ಕೆ ನನ್ನ ಸಲಹೆ ಏನೆಂದರೆ, ನಮ್ಮ ರಾಜ್ಯದ ಮಟ್ಟಿಗಾದರೂ ನಮ್ಮ ಪರಿಶಿಷ್ಟ ಜಾತಿ–ಪಂಗಡಗಳು ಈವರೆಗೆ ಅನುಭವಿಸಿರುವ ಮೀಸಲಾತಿಯಿಂದಾಗಿ ಈ ಪಂಗಡಗಳು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಳಿಸಿರುವ ಮಾನ್ಯತೆಗಳ (ಅಕ್ಷರತೆ, ಉದ್ಯೋಗ ವಲಯಗಳಲ್ಲಿ ಏರಿರುವ/ಇಳಿದಿರುವ ಮಟ್ಟ, ಸಾಹಿತ್ಯ–ಸಂಸ್ಕೃತಿ–ಲಲಿತ ಕಲೆ–ಕ್ರೀಡೆ–ರಾಜಕಾರಣ–ವ್ಯಾಪಾರ–ಉದ್ಯಮ–ಸಂಪತ್ತಿನ ಶೇಖರಣೆ–ವರಮಾನ/ಇತರೆ ತೆರಿಗೆ ಪಾವತಿ–ಭ್ರಷ್ಟಾಚಾರ ಮತ್ತು ಅಪರಾಧ ಕ್ಷೇತ್ರಗಳಲ್ಲಿನ ಅವುಗಳ ಸ್ಥಾನಮಾನಗಳ ಗಳಿಕೆ/ಇಳಿಕೆಗಳ ಪ್ರಮಾಣಗಳಿಗೆ ಸಂಬಂಧಪಟ್ಟಂತೆ ವೈಜ್ಞಾನಿಕ ಆಧಾರದಲ್ಲಿ ಸೂಚ್ಯಂಕಗಳನ್ನು ರೂಪಿಸಿ, ಇವು ಈ ಸಮುದಾಯಗಳಿಗೆ ಉನ್ನತೀಕರಣದ/ಸಮಾನತೆಯ ಸಾಧ್ಯತೆಗಳ ಪ್ರಮಾಣವನ್ನು ಹೆಚ್ಚಿಸಿವೆಯೇ, ಇಲ್ಲವೆ ಎಂಬುದನ್ನು ನಿರ್ಧರಿಸಿ, ಅದರ ಆಧಾರದ ಮೇಲೆ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸುವ ಅಥವಾ ಇಳಿಸುವ ಬಗ್ಗೆ ಶಿಫಾರ್ಸು ಮಾಡಬಹುದು.

ಮೀಸಲಾತಿಯ ಉದಾತ್ತ ಮತ್ತು ಅಂತರ್ಗತ ಉದ್ದೇಶಗಳ ಸರಿಯಾದ ಗ್ರಹಿಕೆ, ಇದರ ಜಾರಿಯ ಅವಧಿ ಹೆಚ್ಚಿದಷ್ಟೂ ಅದರ ಪ್ರಮಾಣ ಕಡಿಮೆಯಾಗುತ್ತಾ ಹೋಗಬೇಕೆಂಬುದನ್ನೇ ಹೇಳುತ್ತದೆ ಎಂಬುದು ನನ್ನ ಅಭಿಪ್ರಾಯ. ಇದಕ್ಕೆ ಅಡ್ಡಿಯಾಗಿರುವ ಅಂಶಗಳನ್ನು ಆಯೋಗ ಗುರುತಿಸಿ ಅವುಗಳ ಪರಿಹಾರಕ್ಕಾಗಿ ಸಲಹೆಗಳನ್ನು ನೀಡಬಹುದಾಗಿದೆ. ಅಂತಿಮವಾಗಿ ಹೇಳಬೇಕಾದ ಮಾತೆಂದರೆ ಮೀಸಲಾತಿ ಕುರಿತ ಚರ್ಚೆಯ ಯಾವತ್ತಿನ ಕೇಂದ್ರ ವ್ಯಕ್ತಿಯಾದ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೇಂದ್ರ ಆಶಯವಾದ 'ಜಾತಿ ವಿನಾಶ'ದತ್ತ ನಮ್ಮ ಹೆಜ್ಜೆಗಳು ಇವೆಯೇ? ಅಥವಾ ಅದಕ್ಕೆ ವಿರುದ್ಧ ದಿಕ್ಕಿನಲ್ಲಿವೆಯೇ? ಎಂಬುದನ್ನು ನಾವು ಪ್ರತಿ ಹೆಜ್ಜೆ ಇಡುವಾಗಲೂ ಪರಿಶೀಲಿಸಿಕೊಳ್ಳಬೇಕಿದೆ.

ಇಷ್ಟು ಯೋಚಿಸಿ ಹೇಳಲು ಅನುವು ಮಾಡಿಕೊಟ್ಟ ತಮಗೆ ಹೃತ್ಪೂರ್ವಕ ವಂದನೆಗಳು.

ವಿಶ್ವಾಸದ

(ಡಿ.ಎಸ್. ನಾಗಭೂಷಣ)

ದ್ವಿಭಾಷಾ ಸೂತ್ರದ ಆಗ್ರಹವೊಂದೇ ಪರಿಹಾರ

ಕೇಂದ್ರ ಸರ್ಕಾರ ದಕ್ಷಿಣ ಭಾರತದ, ವಿಶೇಷವಾಗಿ ತಮಿಳ್ನಾಡಿನ ಜನರ ವಿರೋಧಕ್ಕೆ ಮಣಿದು ತನ್ನ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡಿನಿಂದ ಹಿಂದಿ ಕಲಿಕೆಯನ್ನು ಕಡ್ಡಾಯಗೊಳಿಸುವ ವಿಧಿಯನ್ನು ಕೈಬಿಟ್ಟಿರುವುದಾಗಿ ಘೋಷಿಸಿದೆ. ಆದರೆ ಈ ವಿಧಿಯನ್ನು ಕೈಬಿಟ್ಟಿರುವುದರಿಂದ ಹಿಂದಿ ಕಲಿಕೆಯ ಬಲೆಯಿಂದ ಹಿಂದೀಯೇತರ ಮಕ್ಕಳೇನೂ ಬಿಡುಗಡೆಗೊಂಡಿಲ್ಲ ಎಂಬುದನ್ನು ಬಹುಜನರು ಗಮನಿಸಿದಂತಿಲ್ಲ. ಏಕೆಂದರೆ ಕರಡಿನಲ್ಲಿ ತ್ರಿಭಾಷಾ ಸೂತ್ರದ ಜಾರಿಯನ್ನೇನೂ ಕೈಬಿಟ್ಟಿಲ್ಲ. ಅಂದರೆ ಒಂದನೇ ತರಗತಿಯಿಂದಲೇ ಹಿಂದಿಯೇತರ ಮಕ್ಕಳು ಮೂರು ಭಾಷೆಗಳನ್ನು ಕಲಿಯಲೇಬೇಕು. ಒಂದು ಪ್ರಾದೇಶಿಕ ಭಾಷೆ ಮತ್ತೊಂದು ಅನಿವಾರ್ಯವಾದ ಇಂಗ್ಲಿಷ್ ನಂತರ ಅವರು ಕಲಿಕೆಯ ಮೂರನೆಯ ಭಾಷೆಯಾಗಿ, ಅವಕಾಶಗಳೆಲ್ಲವೂ ಪ್ರಾದೇಶಿಕ ಹಿತಗಳನ್ನು ನಿರ್ಲಕ್ಷಿಸಿ ಅಖಿಲ ಭಾರತ ಸ್ಪರ್ಧೆಗಳ ವ್ಯಾಪ್ತಿಗೆ ಸೇರುತ್ತಿರುವ ಇಂದಿನ ಸಂದರ್ಭದಲ್ಲಿ ಹಿಂದಿಯ ಹೊರತಾಗಿ ಮತ್ತಾವ ಭಾಷೆಯ ಆಯ್ಕೆ ಸಾಧ್ಯ? ಆರನೇ ತರಗತಿಯ ಹಂತದಲ್ಲಿ ಒಂದು ಭಾಷೆಯನ್ನು ಬದಲಿಸಲೂ ಅವಕಾಶವೀಯುವ ಈ ನೀತಿ ಯಾವ ಭಾಷೆಗೆ ಕುತ್ತಾಗಲಿದೆ ಎಂಬುದು ಸ್ಪಷ್ಟ.

ಆಶ್ಚರ್ಯವೆಂದರೆ ರಾಷ್ಟ್ರೀಯ ಕರಡು ನೀತಿಯಲ್ಲಿ ಪ್ರಾದೇಶಿಕ ಭಾಷೆಯ ಕಲಿಕೆಯ ಪ್ರಸ್ತಾಪ ಮಾಡುವಾಗ ಅದನ್ನು ಮಾತೃ/ರಾಜ್ಯ ಭಾಷೆ ಎಂದು ನಿರ್ದಿಷ್ಟವಾಗಿ ಹೇಳಿಲ್ಲ. ಏಕೆ? ಇದು ತುಂಬ ಮಹತ್ವದ ಪ್ರಶ್ನೆ. ಈ ಪ್ರಶ್ನೆಯನ್ನು ನಾವು ಕೇಳಿಕೊಂಡಾಗ ಈ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಎಂಬುದರಲ್ಲಿನ 'ರಾಷ್ಟ್ರೀಯ' ಎಂಬುದರ ರಾಜಕೀಯ ಅರ್ಥ ಸ್ಪಷ್ಟವಾಗತೊಡಗುತ್ತದೆ. ಹಿಂದಿಯನ್ನು ವಿರೋಧಿಸುತ್ತಿರುವವರು ಈ 'ರಾಷ್ಟ್ರೀಯ' ಎಂಬ ಪರಿಕಲ್ಪನೆಯ ಹಿಂದಿರುವ ಸಂಕುಚಿತ ಮತ್ತು ಆಕ್ರಮಣಕಾರಿ ರಾಜಕೀಯದತ್ತ ಗಮನ ಹರಿಸದೆ ಹಿಂದಿ ಭಾಷೆಯ ಔಪಚಾರಿಕ ಕಲಿಕೆಯನ್ನಷ್ಟೇ ವಿರೋಧಿಸುತ್ತಿರುವುದೇ ಈ ಹಿಂದಿ ಹೇರಿಕೆ ಎನ್ನುವುದು ಪದೇ ಪದೇ ತಲೆ ಎತ್ತಿ ನೆಪ ಮಾತ್ರಕ್ಕೆ ಮಾಯವಾಗುತ್ತಿರುವುದಕ್ಕೆ ಕಾರಣವಾಗಿದೆ. ಹಲವು ವರ್ಷಗಳಿಂದ ಹಲವು

ನೆಲೆಗಳಲ್ಲಿ ಜಾರಿಯಲ್ಲಿರುವ ಇಂತಹ 'ರಾಷ್ಟ್ರೀಯ'ತೆಯ ಕಾರಣದಿಂದಾಗಿ ನಮ್ಮ ಮಕ್ಕಳೆಲ್ಲ 'ರಾಷ್ಟ್ರೀಯ ಮಾನ್ಯತೆ'ಯ ಹಂಬಲದಲ್ಲಿ ಈಗಾಗಲೇ ಅನೌಪಚಾರಿಕವಾಗಿ ಹಿಂದಿ ಭಾಷೆಗೆ ಶರಣಾಗಿದ್ದಾರೆ ಎಂಬುದನ್ನು ಇವರು ಗಮನಿಸಿದಂತಿಲ್ಲ. ಇದರ ಭಾಗವಾಗಿ ನಮ್ಮ ಮಕ್ಕಳು–ಮೊಮ್ಮಕ್ಕಳು ತಮ್ಮ ಮಾತೃ/ರಾಜ್ಯ ಭಾಷೆಗಳನ್ನು 'ಕೆಲಸಕ್ಕೆ ಬಾರದ' ಭಾಷೆಗಳೆಂದು ದೂರ ತಳ್ಳಿ ಇಂಗ್ಲಿಷ್–ಹಿಂದಿ ಸಂಸ್ಕೃತ ಭಾಷೆಗಳ ಕಡೆ ಚಲಿಸುತ್ತಿರುವುದರ ದುರಂತವೂ ಇವರಿಗೆ ಅರ್ಥವಾದಂತಿಲ್ಲ.

ರಾಷ್ಟ್ರೀಯ ಎನ್ನುವುದಕ್ಕೆ ಆಧುನಿಕ ಭಾರತದಲ್ಲಿ ಪ್ರದಾನ ಮಾಡಲಾಗಿರುವ ಅರ್ಥವೇ ನಮ್ಮ ಮಕ್ಕಳು ನಮ್ಮ ಭಾಷೆಗಳ ಬಗ್ಗೆ ಅಸಡ್ಡೆ ತಾಳಿ ಅನ್ಯ ಭಾಷೆಗಳ ಕಡೆ ಹೊರಳಿ ನವ 'ಘನತೆ'ಯನ್ನು ಪಡೆಯುವ ಪ್ರಯತ್ನ ಮಾಡುವಂತೆ ಪ್ರೇರೇಪಿಸಿರುವುದು. ಭಾರತದ ಭಾಷಾ, ಸಾಂಸ್ಕೃತಿಕ ಮತ್ತು ಸಂಪ್ರದಾಯಗಳ ಬಹುಳತೆ ಅದರ ಏಕತೆಗೆ ಅಪಾಯಕಾರಿಯಾದದ್ದು ಎಂಬ ಆತಂಕವನ್ನು ಆಧರಿಸಿದ 'ರಾಷ್ಟ್ರೀಯತೆ'ಯೇ ಈ ದುರಂತಕ್ಕೆ ಕಾರಣವೆಂದು ನಾವು ಅರಿಯದೇ ಹೋಗಿದ್ದೇವೆ. ಈ ರಾಷ್ಟ್ರೀಯ ಭಾವನೆಯನ್ನು ಸಾಕಾರಗೊಳಿಸಲೇ ಕೇಂದ್ರ ಹಿಂದಿಯನ್ನು ರಾಷ್ಟ್ರದ ಆಡಳಿತ ಭಾಷೆಯನ್ನಾಗಿ ಮಾಡುವ ಕ್ರಮಗಳಿಗೆ ಪದೇ ಪದೇ ಕೈ ಹಾಕುವಂತೆ ಮಾಡುತ್ತಿದೆ. ಇದೇನೂ ಯಾವುದೇ ಪಕ್ಷ ಅಥವಾ ಸರ್ಕಾರಕ್ಕೆ ಸೀಮಿತವಾದ ಸಂಗತಿಯಲ್ಲ. ಏಕೆಂದರೆ ಯಾವುದೇ ಪಕ್ಷ ಅಥವಾ ಮೈತ್ರಿಕೂಟ ಅಧಿಕಾರಕ್ಕೆ ಬಂದರೂ ಸರ್ಕಾರ ಹಿಂದಿ ಪ್ರಾಧಾನ್ಯತೆಯ ಸರ್ಕಾರವೇ ಆಗಿರುವ ಹಾಗೆ ನಮ್ಮ ರಾಷ್ಟ್ರ ರಾಜಕಾರಣ ಸಂಯೋಜಿಸಲ್ಪಟ್ಟಿದೆ. ಅದು ಸಂವಿಧಾನ ಹೇಳುವ ಒಕ್ಕೂಟವೆಂಬ ಸಮನ್ವಯ ತತ್ವವನ್ನು ಧಿಕ್ಕರಿಸುವಷ್ಟು ವಾಸ್ತವ ನೆಲೆಯಲ್ಲಿ ಬಲಿಷ್ಠವಾಗಿದೆ.

ಹಿಂದಿ ಭಾಷೆಯ ಕುಟುಂಬಕ್ಕೆ ಸೇರಿದ ರಾಜ್ಯಗಳ ಸಂಸತ್ ಸದಸ್ಯರ ಸಂಖ್ಯೆ ಯಾವಾಗಲೂ ಹಿಂದಿಯೇತರ (ಮುಖ್ಯವಾಗಿ ದ್ರಾವಿಡ ಮೂಲ) ಭಾಷೆಗಳ ರಾಜ್ಯಗಳ ಸಂಸತ್ ಸದಸ್ಯರಿಗಿಂತ ಹೆಚ್ಚೂ ಕಡಿಮೆ ನಾಲ್ಕು ಪಟ್ಟು ಹೆಚ್ಚಿರುವುದರಿಂದ ಮತ್ತು ಪ್ರಜಾ ಪ್ರಭುತ್ವವೆಂಬುದು ತನ್ನೆಲ್ಲ ಬಹುಮುಖ ವಿವೇಕವನ್ನು ಕಳೆದುಕೊಂಡು ಈಗ ಬಹುಮತದ ಲೆಕ್ಕಾಚಾರವನ್ನಷ್ಟೇ ಆಧರಿಸಿದ ಲಾಭೋದ್ಯಮ ದೃಷ್ಟಿಯ ಅಧಿಕಾರ ಚಲಾವಣೆಯ ಆಟವಾಗಿ ಅವನತಿಗೊಂಡಿರುವುದರಿಂದ ನಮ್ಮ ರಾಜಕೀಯ ಚೌಕಟ್ಟಿನಲ್ಲಿ 'ರಾಷ್ಟ್ರೀಯ' ಎನ್ನುವುದು ಸಾಂಸ್ಕೃತಿಕವಾಗಿ 'ಹಿಂದೀಯ' ಎಂಬ ಅರ್ಥ ಪಡೆದಿರುವುದು ಸಹಜವೇ ಆಗಿದೆ. ಇದು ಅಲ್ಪಸಂಖ್ಯಾತ ಹಿಂದೀಯೇತರ ಜನರ ರಾಷ್ಟ್ರೀಯತೆಯನ್ನು ಅನುಮಾನಿಸುತ್ತಾ ಅವರನ್ನು ಹಿಂದೀಕರಣದ ಮೂಲಕ ರಾಷ್ಟ್ರೀಕರಿಸುವ ಹಲವು ಪ್ರಯತ್ನಗಳಿಗೆ ಕಾರಣವಾಗಿದೆ.

ಹಾಗಾಗಿಯೇ ಈಗ ಕೇಂದ್ರ ಸರ್ಕಾರದ ಎಲ್ಲ ನೇಮಕಾತಿಗಳೂ, ಶಿಕ್ಷಣ ಪ್ರವೇಶಾತಿ ಪರೀಕ್ಷೆಗಳೂ ಪ್ರಾದೇಶಿಕ ಪ್ರಾತಿನಿಧ್ಯದ ಪ್ರಶ್ನೆಯನ್ನು ನಿರ್ಲಕ್ಷಿಸುತ್ತಾ ಅಖಿಲ ಭಾರತವಾಗುತ್ತಿವೆ. ಇದೆಲ್ಲದರ ಸಂಚಿತ ಪರಿಣಾಮವಾಗಿ ನಮ್ಮ ರಾಜ್ಯಗಳಲ್ಲಿನ ಶಾಲೆಗಳಲ್ಲಿ

ರಾಜ್ಯ ಭಾಷೆಗಳಿಗೆ ಮಾನ್ಯತೆಯೇ ಇಲ್ಲದ ಕೇಂದ್ರ ಪಠ್ಯಕ್ರಮಗಳ ಶಾಲೆಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಇಂತಹ ಸಗಟು ಅಖಿಲ ಭಾರತೀಯತೆಯ ಇತ್ತೀಚಿನ ಆವೃತ್ತಿಯಾಗಷ್ಟೇ ಈ ರಾಷ್ಟ್ರೀಯ ಶಿಕ್ಷಣ ನೀತಿ ಪ್ರಕಟವಾಗಿದೆ.

ಹಾಗಾಗಿ ನಮ್ಮ ಸದ್ಯದ ಹಿಂದಿ ವಿರೋಧವು ನಾವು ರೋಗದ ಚಿಕಿತ್ಸೆ ಕಡೆ ಗಮನ ಹರಿಸದೆ ಒಂದು ರೋಗ ಲಕ್ಷಣವನ್ನಷ್ಟೇ ನಿವಾರಿಸಿಕೊಳ್ಳಹೊರಟಿರುವ ಸಮೀಪ ದೃಷ್ಟಿ ದೋಷದ ಪ್ರತೀಕವಾಗಿದೆ. ಹೆಚ್ಚೆಂದರೆ, ಹಿಂದಿಗೆ ಅನೌಪಚಾರಿಕ ಕಲಿಕೆಯ ಅವಕಾಶವಿರಬಹುದಾದ ದ್ವಿಭಾಷಾ ನೀತಿಗಾಗಿ ಆಗ್ರಹಿಸುವುದೊಂದೇ ಇದಕ್ಕೆಲ್ಲ ಪರಿಹಾರ.

('ಪ್ರಜಾವಾಣಿ': 'ಸಂಗತ' : ೬.೬. ೨೦೧೯)

ರಾಷ್ಟ್ರೀಯ ಶಿಕ್ಷಣ ನೀತಿಯ ತ್ರಿಭಾಷಾ ಸೂತ್ರ ಮತ್ತು ಕನ್ನಡಿಗರ ಕರ್ಮ ಕಥೆ!

ಮಕ್ಕಳು ಬಾಲ್ಯದಲ್ಲಿ ಎಷ್ಟು ಭಾಷೆಗಳನ್ನಾದರೂ ಕಲಿಯಬಲ್ಲರು ಎಂದು ನಮ್ಮ ಕೆಲ ಭಾಷಾತಜ್ಞರು ಹೇಳುತ್ತಿದ್ದಾರೆ. ಮಗು ಬಾಲ್ಯದಲ್ಲಿ ಹೆಚ್ಚೆಚ್ಚು ಭಾಷೆಗಳನ್ನು ಕಲಿತರೆ ಒಳ್ಳೆಯದು ಎಂದು ನಮ್ಮ ಕೆಲ ಶಿಕ್ಷಣ ತಜ್ಞರು ಹೇಳುತ್ತಾರೆ. ಅದರಂತೆಯೇ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು ಬರೆದ ಕಸ್ತೂರಿ ರಂಗನ್ ಮತ್ತವರ ಸಹೋದ್ಯೋಗಿಗಳೂ ಹೇಳುತ್ತಾ, ಸದ್ಯ ನಮ್ಮ ಮಕ್ಕಳ ಮೇಲೆ ದಯೆ ತೋರಿಸಿ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಮೂರು ಭಾಷೆಗಳನ್ನು ಮಾತ್ರ ಕಲಿಸುವಂತೆ ಶಿಫಾರ್ಸು ಮಾಡಿದ್ದಾರೆ! ದೇಶದ ಒಟ್ಟಾರೆ ಅಭಿವೃದ್ಧಿಗಾಗಿ ಮಾಡಿರುವ ಶಿಫಾರ್ಸು ಎಂಬ ಹೆಗ್ಗಳಿಕೆಯೂ ಇದಕ್ಕಿದೆ.

ಆದರೆ ಅಮೆರಿಕಾ ಮತ್ತು ಎಲ್ಲ ಐರೋಪ್ಯ ದೇಶಗಳಲ್ಲಿ ಆಯಾ ದೇಶಗಳ 'ಹಿತ ದೃಷ್ಟಿ'ಯಿಂದ ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಒಂದು ಭಾಷೆಯನ್ನು ಮಾತ್ರ ಕಲಿಸಲಾಗುತ್ತಿದೆ! ಅದು ಆಯಾ ದೇಶಗಳ ಜನರ ಮಾತೃ-ಪರಿಸರ ಭಾಷೆ. ಇನ್ನು ಜಪಾನ್, ಚೀನಾ, ಈಜಿಪ್ಟ್‌ನಂತಹ ದೇಶಗಳಲ್ಲಿ ಶಿಕ್ಷಣ ಮಾಧ್ಯಮ ಆಯಾ ದೇಶಗಳ ಭಾಷೆಗಳಲ್ಲಿದ್ದು, ಒಂದು ಭಾಷೆಯಾಗಿ ಮಾತ್ರ ಇಂಗ್ಲಿಷ್ ಕಲಿಸಲಾಗುತ್ತಿದೆ. ಸದ್ಯ ಈ ದೇಶಗಳಲ್ಲಿ ಶಾಲಾ ಶಿಕ್ಷಣದಲ್ಲಿ ಖಾಸಗಿಯವರಿಗೆ ಅವಕಾಶವಿಲ್ಲದಿರುವುದರಿಂದ ಶಿಕ್ಷಣ ದಂಧೆಕೋರರೂ ಅಲ್ಲಿ ಮಾತೃಭಾಷಾ ಶಿಕ್ಷಣದ ವಿರುದ್ಧ ನ್ಯಾಯಾಲಯಗಳ ಮೆಟ್ಟಿಲು ಏರಲು ಸಾಧ್ಯವಿಲ್ಲದಾಗಿದೆ!

ಆದರೆ ನಾಡಿನ ಸಾಂಸ್ಕೃತಿಕ ಅಡಿಪಾಯದ ಭದ್ರತೆಯನ್ನು ಖಚಿತಪಡಿಸುವ ಶಾಲಾ ಶಿಕ್ಷಣದ ಜವಾಬ್ದಾರಿಯನ್ನು ಖಾಸಗಿಯವರಿಗೆ ಒಪ್ಪಿಸುತ್ತಾ ಬಂದಿರುವ ಸರ್ಕಾರಗಳಿರುವ ನಮ್ಮ ದೇಶದ ಪರಿಸ್ಥಿತಿ ನೋಡಿ. ನಮ್ಮ ಮಕ್ಕಳಿಗೆ ಅವರ ಭಾಷೆಯಲ್ಲೇ ಶಿಕ್ಷಣದ ಗ್ಯಾರಂಟಿಯಿಲ್ಲದಿದ್ದರೂ, ದೇಶದ ಹಿತದೃಷ್ಟಿಯಿಂದ ಮೂರು ಭಾಷೆಗಳ ಕಲಿಕೆಗೆ ಶಿಕ್ಷಣ ತಜ್ಞರಿಂದಲೇ ಶಿಫಾರ್ಸು! ನಾವು ವಸಾಹತುಶಾಹಿಯಿಂದ ಬಿಡುಗಡೆಗೊಂಡು ಒಂದು

ನವ ವಸಾಹತುಶಾಹಿಯಲ್ಲಿ ಸಿಕ್ಕಿಕೊಂಡಿದ್ದೇವೆ ಎನಿಸುತ್ತಿಲ್ಲವೇ? ಈಗ ಗೃಹಮಂತ್ರಿ ಅಮಿತ್ ಶಾ ಅವರು ಹಿಂದಿಯನ್ನು ಎಲ್ಲರ ಮೇಲೂ ಹೇರಲು ನಡೆಸಿರುವ ಸನ್ನಾಹ ನೋಡಿದರೆ ನವ ವಸಾಹತುಶಾಹಿಯ ಜೊತೆಗೆ ಬಹುಸಂಖ್ಯಾತವಾದಿ ನವ ರಾಷ್ಟ್ರೀಯತೆಯೂ ಭಾರತದ ಮಣ್ಣಿನ ಭಾಷೆಗಳನ್ನು ತುಳಿಯುವ ವ್ಯವಸ್ಥಿತ ರಾಜಕೀಯ ಯೋಜನೆಯೇ ಸಿದ್ಧವಾಗುತ್ತಿರುವಂತಿದೆ. ನಮ್ಮ ಭಾಷಾ ತಜ್ಞರೇನೋ ತಮ್ಮ ತಜ್ಞತೆಯನ್ನೆಲ್ಲ ಬಳಸಿ ಮಗು ಎಷ್ಟು ಭಾಷೆಗಳನ್ನಾದರೂ ಕಲಿಯಬಲ್ಲುದು ಎನ್ನುತ್ತಾರೆ. ಆದರೆ ಅದು ಬಹುಭಾಷಾ ಪರಿಸರದಲ್ಲಿದ್ದಾಗ ಮಾತ್ರ ತನ್ನ ಅಗತ್ಯಗಳಿಗಾಗಿ, ಯಾರದೇ ಒತ್ತಾಯವಿಲ್ಲದೆ ಸಹಜವಾಗಿ ಹಲವು ಭಾಷೆಗಳನ್ನು 'ಅನೌಪಚಾರಿಕವಾಗಿ' ಕಲಿಯಬಲ್ಲುದು. ಆದರೆ ಶಾಲೆಯೆಂಬ ಪೂರ್ವನಿಗದಿತ ಪಠ್ಯಕ್ರಮದ ಪ್ರಯೋಗಾಲಯದಲ್ಲಿ ಅದನ್ನು ಭಾಷಾ ಪ್ರಯೋಗಪಶುವಾಗಿ ಮಾಡುವುದು ಎಷ್ಟು ಮಾನವೀಯ ಎನಿಸಿಕೊಳ್ಳಬಹುದು? ಯಾರಾದರೂ ಯೋಚಿಸಿದ್ದಾರೆಯೇ? ಒಂದು ಮಗು ಐದು ಕೆಜಿ ಭಾರವನ್ನು ಹೊರಬಲ್ಲುದು ಎಂಬುದು ಪ್ರಯೋಗಸಿದ್ಧವಾದಾಕ್ಷಣ ಅದರ ತಲೆ ಮೇಲೆ ಐದು ಕೆಜಿ ಭಾರವನ್ನು ಕಡ್ಡಾಯವಾಗಿ ಹೊರಿಸುವುದು–ಅದೂ ಅದರ ಹಿತದೃಷ್ಟಿಯಿಂದಲೇ ಹೇಳುತ್ತಾ–ಹೃದಯವಂತಿಕೆ ಎನಿಸುವುದೇ? ಮಗುವಿನ ಹಿತ, ದೇಶದ ಹಿತ ಎನ್ನುವುದು ಅಮಾನವೀಯವಾಗಬಾರದು. ಇದು ನ್ಯಾಯಾಂಗವೂ ಸೇರಿದಂತೆ ನಮ್ಮ ರಾಷ್ಟ್ರ ಜೀವನದ ಸರ್ವ ವಲಯಗಳಿಗೂ ವ್ಯಾಪಿಸಿರುವ ಹಿತ ಎಂದರೆ ಆರ್ಥಿಕ ಹಿತ ಮತ್ತು ಅದೇ ಎಲ್ಲ ಹಿತಗಳ ಮೂಲ ಎಂಬ ಪಶ್ಚಿಮದ ರೂಕ್ಷ ಆಧುನಿಕ ಜೀವನ ದೃಷ್ಟಿಯ ಕುರುಡು ಅನುಕರಣೆಯಾಗಿದೆ. ಒಂದು ರಾಷ್ಟ್ರಕ್ಕೆ ಇಂತಹ ಶಿಕ್ಷಣ ತಜ್ಞರ, ಭಾಷಾ ತಜ್ಞರ ಮತ್ತು ದೇಶದ ಹಿತ ಕಾಯುವ ಪೋಲೀಸರ ಹಾವಳಿಯಿಂದಾಗಿ ಇಂದು ಕರ್ನಾಟಕದಲ್ಲಿ ಎಂತಹ ಪರಿಸ್ಥಿತಿ ಉಂಟಾಗಿದೆ ಎಂಬುದಕ್ಕೆ ಒಂದು ಸಣ್ಣ ಉದಾಹರಣೆ ಇಲ್ಲಿದೆ. ಸಂಬಂಧಪಟ್ಟವರಿಗೆ ಮುಜುಗರವಾಗಬಾರದೆಂದು ಇಲ್ಲಿನ ಹೆಸರುಗಳಲ್ಲಿ ಸ್ವಲ್ಪ ಬದಲಾವಣೆ ಮಾಡಲಾಗಿದೆಯಷ್ಟೆ.

ಚಂದ್ರಶೇಖರಮೂರ್ತಿ ಮತ್ತು ದ್ರಾಕ್ಷಾಯಿಣಿ ಎಂಬ ನನ್ನ ಪರಿಚಿತ ದಂಪತಿಗಳ ಕುಟುಂಬವೊಂದು ಬೆಂಗಳೂರಿನ ಬಡಾವಣೆಯೊಂದರಲ್ಲಿ ಉಚ್ಚರಿಸಲೂ ಕನ್ನಡ ಅಕ್ಷರಗಳಲ್ಲಿ ಬರೆಯಲೂ, ಕಷ್ಟವಾಗುವಂತಹ ಹೆಸರಿನ ಅಪಾರ್ಟ್‌ಮೆಂಟ್ ಸಂಕೀರ್ಣವೊಂದರಲ್ಲಿ ವಾಸಿಸುತ್ತಾರೆ. ಅವರಿಬ್ಬರೂ ಶಾಲಾ ಶಿಕ್ಷಣವನ್ನು ಪೂರ್ತಿಯಾಗಿ ಕನ್ನಡದಲ್ಲೇ ಮುಗಿಸಿ ಎಂಜಿನಿಯರ ಮತ್ತು ಶಾಲಾ ಶಿಕ್ಷಕಿಯಾದವರು. ಅವರ ಮಗ–ಸೊಸೆ: ಫಣೀಂದ್ರನಾಥ ಮತ್ತು ಜ್ಯೋತಿಶ್ರೀ. ಅವರು ಇಂಗ್ಲಿಷ್ ಮಾಧ್ಯಮದಲ್ಲಿ ಓದಿದರೂ ಎರಡನೆಯ ಭಾಷೆಯಾಗಿ ಕನ್ನಡವನ್ನು ಕಲಿತವರು. ಇಬ್ಬರೂ ಬೆಂಗಳೂರಿನ ಎರಡು ವಿದ್ಯಾ ಸಂಸ್ಥೆಗಳಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಇವರಿಗೆ ಮೂರು ಜನ ಮಕ್ಕಳು: ಕಾರ್ತಿಕ್ ತೇಜಸ್ವಿ, ಸುಷ್ಮಾ ಪ್ರಿಯದರ್ಶಿನಿ ಮತ್ತು ಹರ್ಷಿತಾ ಅಮೃತವರ್ಷಿಣಿ. ಇವರಲ್ಲಿ ಕಾರ್ತಿಕ್‌ನ ಕನ್ನಡ ಜ್ಞಾನ ಅಷ್ಟಕ್ಕಷ್ಟೆ, ಏಕೆಂದರೆ (ಕನ್ನಡದವರೇ ನಡೆಸುತ್ತಿದ್ದ)

ಅವನು ಕಲಿತ ಖಾಸಗಿ ಶಾಲೆಯಲ್ಲಿ ಎರಡನೇ ಭಾಷೆಯಾಗಿಯೂ ಕನ್ನಡ ಕಲಿಕೆಗೆ ಅವಕಾಶವಿರಲಿಲ್ಲ. ಜೊತೆಗೆ ಶಾಲಾ ಅವರಣದಲ್ಲಿ ಕನ್ನಡ ಮಾತಾಡಿದರೆ ದಂಡ ವಿಧಿಸಲಾಗುತ್ತಿತ್ತಂತೆ. ಹಾಗಾಗಿ ಅವನು ಮೊದಲ ಎರಡು ಭಾಷೆಗಳಾಗಿ ಇಂಗ್ಲಿಷ್ ಮತ್ತು ಸಂಸ್ಕೃತ ಕಲಿಯಬೇಕಾಯಿತು. ಇನ್ನು ಇಬ್ಬರು ಆ ಹೆಣ್ಣು ಮಕ್ಕಳನ್ನು ಕೇಳಿದರೆ ಅವರು ಬಹು ವಯ್ಯಾರದಿಂದ ತಮಗೆ ಕನ್ನಡ ಕಂಡರೇ ಭಯ ಎಂದು ಹೇಳುತ್ತಾರೆ! ಏಕೆಂದರೆ ಅದರಲ್ಲಿ ಓದಲು, ಬರೆಯಲು ಕಷ್ಟವಾಗುವ ಘರ್ಜನೆ, ಕೃತಜ್ಞತೆ, ಶೀರ್ಷಾಸನ ಮುಂತಾದ ಭಯಂಕರ ಶಬ್ದಗಳಿವೆಯಂತೆ! ಮನೆಯಲ್ಲೂ ಇಂಗ್ಲಿಷ್ ಮಾತನಾಡುವ ಈ ಕುಟುಂಬದ ಸದಸ್ಯರ ಹೆಸರುಗಳನ್ನು ಗಮನಿಸಿದರೆ ಇದಕ್ಕಿಂತ ದೊಡ್ಡ ಆತ್ಮದ್ರೋಹ ಇನ್ನೊಂದಿರಲು ಸಾಧ್ಯವಿಲ್ಲ ಎನ್ನಿಸದಿರಲಾರದು. ಆದರೆ ಇಂತಹ ಆತ್ಮದ್ರೋಹಿ ಮಾತುಗಾರಿಕೆಗೆ ಪ್ರೇರಣೆ ನೀಡಿದ ಲಾಬಿಯ ಪೂರ್ವಾಪರಗಳು ಈಗ ಎಲ್ಲರಿಗೂ ಗೊತ್ತಿರುವಂತಹವೇ ಆಗಿವೆ. ಹೇಗಿದ್ದರೂ ನಮ್ಮ ಸರ್ವೋಚ್ಚ ನ್ಯಾಯಾಲಯದ ಪ್ರಕಾರ ಇದೆಲ್ಲ ಅವರವರ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ವಿಷಯವಷ್ಟೆ!

ನಾನು ಕುಟುಂಬದ ಹಿರಿಯರಾದ ನನ್ನ ಗೆಳೆಯ ಮೂರ್ತಿಯವರನ್ನು ಇದೆಲ್ಲ ಏನು? ಎಂದು ಕೇಳಿದರೆ ಅವರು 'ಈಗ ನಮ್ಮದೇನೂ ನಡೆಯುವುದಿಲ್ಲ ಸ್ವಾಮಿ!' ಎಂದು ಕೈಯಾಡಿಸುತ್ತಾರೆ! ಇದು ಇಂದಿನ ಕನ್ನಡಿಗರ ಕರ್ಮ ಕಥೆ!

('ಹೊಸ ಮನುಷ್ಯ'ದ ನವೆಂಬರ್, ೨೦೨೦ರ ಸಂಚಿಕೆಯಲ್ಲಿ ಪ್ರಕಟ)

ಭಾಗ–೩

ಸಾಹಿತ್ಯ

'ತೇಜಸ್ವಿ ನೆನಪಲ್ಲಿ ಅಲ್ಮೇರಾ ರಿಪೇರಿ' : ಮುನ್ನುಡಿ

ನನ್ನ ಯುವ ಮಿತ್ರ ಮಲ್ಲಿಕಾರ್ಜುನ ಹೊಸಪಾಳ್ಯ ವೃತ್ತಿಯಿಂದ ಜಲನಿರ್ವಹಣಾ ಸಲಹಾಕಾರರು. ಜಲನಿರ್ವಹಣೆಯಲ್ಲಿನ ಅವರ ಆಸಕ್ತಿ ಮತ್ತು ಪರಿಣಿತಿಗಳಿಗೆ ಅವರು ಸುತ್ತಮುತ್ತಲ ಪರಿಸರವನ್ನು ಸೂಕ್ಷ್ಮವಾಗಿ ಗಮನಿಸುವ ಗುಣವೇ ಕಾರಣವಿರಬಹುದೆಂದು ಅವರೊಂದಿಗೆ ಹಲವಾರು ಬಾರಿ ಮಾತಾಡಿದಾಗಲೆಲ್ಲ ನನಗೆ ಅನ್ನಿಸಿದೆ. ಆದರೆ ಈ ಆಸಕ್ತಿ ಪರಿಸರದೊಂದಿಗೆ ಅದರೊಳಗಿನ ಜನರ ಬದುಕಿಗೂ ವಿಸ್ತರಿಸಿ ಅವರನ್ನು ಬರಹಗಾರರನ್ನಾಗಿಯೂ ಮಾಡಿದೆ ಎಂಬುದು ಈ ಪುಸ್ತಕ ನೋಡಿದಾಗಲೇ ನನಗೆ ಗೊತ್ತಾದದ್ದು. ಅವರೊಮ್ಮೆ ಶಿವಮೊಗ್ಗದ ನಮ್ಮ ಮನೆಗೆ ಬಂದಿದ್ದಾಗ ನಡೆದ ಬೆಕ್ಕಿನ ಪ್ರಕರಣವನ್ನು ಅವರು ಒಂದು ಲೇಖನವನ್ನಾಗಿ ಮಾಡಿ ನಮ್ಮ 'ಹೊಸ ಮನುಷ್ಯ' ಪತ್ರಿಕೆಗೆ ಪ್ರಕಟಣೆಗಾಗಿ ಕಳಸಿದಾಗಲೇ ಈ ಮನುಷ್ಯನಿಗೆ ಬರೆಯುವ ಖಯಾಲಿ ಅಂಟಿಕೊಂಡಿದೆ ಎಂಬುದು ಗೊತ್ತಾಗಿದ್ದರೂ ಮತ್ತು ಅವರ ಅಂತಹ ಇನ್ನೊಂದು ಬರಹವನ್ನು ಕಂಡ ಮೇಲೂ, ಅದೊಂದು ಹುಡುಗು ಚಟವೆಂದೇ ನಾನು ತಿಳಿದಿದ್ದೆ, ಹತ್ತಾರು ಲೇಖನಗಳನ್ನೊಳಗೊಂಡ ಈ ಸಂಗ್ರಹಕ್ಕೆ ನಾನೊಂದು ಮುನ್ನುಡಿ ಬರೆದುಕೊಡಬೇಕೆಂದು ಕೆಲವು ದಿನಗಳ ಹಿಂದೆ ಅವರು ತುಮಕೂರಿಂದ ಕರೆ ಮಾಡಿ ನನ್ನನ್ನು ಕೇಳುವವರೆಗೆ. ತಮ್ಮ ತುಮಕೂರು ಸೀಮೆಯ ಮಟ್ಟದಲ್ಲಿ ಪ್ರಶಸ್ತಿ ಪುರಸ್ಕೃತವಾದ ಕಥೆಯೊಂದನ್ನು ತಾವು ಬರೆದಿರುವುದಾಗಿ ತಮ್ಮ ಇತ್ತೀಚಿನ ಶಿವಮೊಗ್ಗ ಭೇಟಿಯಲ್ಲಿ ತಿಳಿಸಿದ್ದರ ಹೊರತಾಗಿ, ಯಾವ ಪೂರ್ವ ಸೂಚನೆಯೂ ಇಲ್ಲದೆ ಕನ್ನಡ ಸಾಹಿತ್ಯಲೋಕಕಕ್ಕೆ ಒಬ್ಬ ಬರಹಗಾರನಾಗಿ ವಿದ್ಯುಕ್ತವಾಗಿ ಪ್ರವೇಶಿಸಲು ಸಿದ್ಧವಾಗಿ ನಿಂತ ಹೊಸಪಾಳ್ಯರ ಈ ಭಂಗಿ ಒಂದು ಕ್ಷಣ ನನ್ನನ್ನು ಚಕಿತಗೊಳಿಸಿದ್ದಂತೂ ನಿಜ.

ನಾನು ಎಂದಿನಂತೆ, 'ನಾನು ಯಾರಿಗೂ ಮುನ್ನುಡಿ ಬರೆದಿಲ್ಲ; ಬರೆಯುವುದೂ ಇಲ್ಲ' ಎಂದು ಹೊಸಪಾಳ್ಯರಿಗೆ ತಿಳಿಸಿದೆ. ನಾನು ಮುವ್ವತ್ತೈದು ವರ್ಷಗಳ ಹಿಂದೆ ಭದ್ರಾವತಿಯ ಪುರಾತನ ಗೆಳೆಯ ಎಂ. ಚಂದ್ರಶೇಖರಯ್ಯನವವರ ಕಥಾ ಸಂಕಲನವೊಂದಕ್ಕೆ ಬರೆದ ಮುನ್ನುಡಿಯ ಹೊರತಾಗಿ ಈವರೆಗೆ ಯಾರ ಪುಸ್ತಕಕ್ಕೂ ಮುನ್ನುಡಿ ಬರೆದಿಲ್ಲ. ಮೂರು

ವರ್ಷಗಳ ಹಿಂದೆ ಹಿರಿಯರೊಬ್ಬರ ಒತ್ತಾಯಕ್ಕೆ ಮಣಿದು ಅವರ ಪುಸ್ತಕಕ್ಕೆ ಬರೆದ ಮುನ್ನುಡಿಯು ಪುಸ್ತಕ ಸಹಿತವಾಗಿ ಪ್ರಕಟವಾಗದೆ ಹಾಗೇ ಉಳಿದಿದ್ದು ಅವರೂ ಈಗ ತೀರಿಕೊಂಡಿದ್ದಾಗಿದೆ! ಕಾರಣ ಬಹುಶಃ ನನ್ನ ಮುನ್ನುಡಿಯ ಕೆಲ ಮಾತುಗಳು ಅವರಿಗೆ ಇಷ್ಟವಾಗದೇ ಇರಬಹುದು. ಇದನ್ನೆಲ್ಲ ಬಲ್ಲ ನನ್ನ ಹಿರಿ-ಕಿರಿಯ ಲೇಖಕ ಮಿತ್ರರು ಇತ್ತೀಚಿಗೆ ನನಗೆ ಮುನ್ನುಡಿಯ ಕಾಟ ಕೊಡುವುದನ್ನು ನಿಲ್ಲಿಸಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಈ ಹೊಸಪಾಳ್ಯ ಎಂಬ ಹೊಸ ಪಿಳ್ಳೆಯ ಧೈರ್ಯ ನೋಡಿ ನನಗೆ ಆಶ್ಚರ್ಯವೂ, ಮೆಚ್ಚುಗೆಯೂ ಒಟ್ಟಿಗೇ ಉಂಟಾದವು.

ನಾನು ಮುನ್ನುಡಿ ಬರೆಯಲು ನಿರಾಕರಿಸಲು ಕಾರಣ, ಒಮ್ಮೆ ಈ ಮುನ್ನುಡಿ ಬರೆಯುವ ದೌರ್ಬಲ್ಯಕ್ಕೆ ಬಿದ್ದರೆ, ಅದರಿಂದ ಪಾರಾಗುವುದು ಕಷ್ಟ. ಅದರ ಫಲವಾಗಿ ಕೆಟ್ಟ ಪುಸ್ತಕಗಳನ್ನು ಅನಿವಾರ್ಯವಾಗಿ ಓದಲು ಕಾಲವನ್ನು ವ್ಯರ್ಥ ಮಾಡಿಕೊಳ್ಳುವುದಲ್ಲದೆ, ಸೌಜನ್ಯಕ್ಕಾದರೂ ಕೆಲವಾದರೂ ಒಳ್ಳೆಯ ಮಾತುಗಳನ್ನು ಬರೆಯಲು ಅದರಲ್ಲಿಲ್ಲದ ಒಳ್ಳೆಯ ಅಂಶಗಳನ್ನು ಸೃಷ್ಟಿಸುವ ಸುಳ್ಳು ಮಾತುಗಾರಿಕೆಗೆ ತೊಡಗಬೇಕಾಗುತ್ತದೆ. ಇದು ಯಾರದ್ದೇ ಸೃಜನಶೀಲ ಚಿಂತನೆಗೆ ಬಹು ಅಪಾಯಕಾರಿ; ಮತ್ತು ಚಿಂತಕನ ಆತ್ಮಹತ್ಯೆಯೇ ಹೌದು. ಅಲ್ಲದೆ ಕನ್ನಡ ಸಾಹಿತ್ಯದಲ್ಲಿನ ಗುಂಪುಗಾರಿಕೆಯು ಸೃಷ್ಟಿಸಿರುವ ಒಳ್ಳೆಯ ಸಾಹಿತ್ಯ ಮತ್ತು ಕೆಟ್ಟ ಸಾಹಿತ್ಯದ ನಡುವಣ ಗೊಂದಲಕ್ಕೆ ನಮ್ಮ ಕೊಡುಗೆಯನ್ನೂ ಸಲ್ಲಿಸುತ್ತಾ ಸಾಹಿತ್ಯಾಭಿರುಚಿಯನ್ನೇ ಕೆಡಿಸಿದ ಪರಮ ಪಾಪಕ್ಕೂ ಗುರಿಯಾಗಬೇಕಾಗುತ್ತದೆ. ನನ್ನ ಪ್ರಕಾರ ಸಾಹಿತ್ಯವೆಂಬುದು ಒಂದು ಸಂಸ್ಕೃತಿಯ ಪರಮ ಪಾಕವಾಗಿದ್ದು, ಯಾವುದೇ ಕಾರಣದಿಂದ ಅದರ ರುಚಿ ಕೆಡಿಸುವುದೆಂದರೆ ಆ ಸಮುದಾಯದ ಸಾರ್ವತ್ರಿಕ ಕಲ್ಯಾಣಕ್ಕೇ ಘಾಸಿ ಮಾಡುವುದೇ ಆಗಿರುತ್ತದೆ.

ಹೀಗಾಗಿಯೇ ನಾನು ಮಲ್ಲಿಕಾರ್ಜುನ ಹೊಸಪಾಳ್ಯರ ಕೋರಿಕೆಯನ್ನು ತಳ್ಳಿ ಹಾಕಿದೆ. ಜೊತೆಗೆ ಇನ್ನೊಂದು ಅವರಿಗೇ ವಿಶಿಷ್ಟ ಕಾರಣವೂ ಇತ್ತೆಂದು ಕಾಣುತ್ತದೆ. ಪೂರ್ಣಚಂದ್ರ ತೇಜಸ್ವಿಯವರ ಮಹಾ ಅಭಿಮಾನಿಯಾದ ಹೊಸಪಾಳ್ಯ, ಅವರ ಬರವಣಿಗೆಯ ಖದರಿಂದ ಮೋಹಿತರಾದಂತೆ ತೇಜಸ್ವಿಯವರ ಅನುಕರಣೆಯಲ್ಲಿ ಬರೆದಿದ್ದ ಅವರ ಒಂದೆರೆಡು ಲೇಖನಗಳನ್ನು ನೋಡಿ, ಇವರು ಬರೆಯುವುದು ಮಾತಿನ ಚಾತುರ್ಯ ಪ್ರದರ್ಶನದ ಒಂದು ಸಣ್ಣ ಚಟಕ್ಕಾಗಿ ಮಾತ್ರ ಎಂಬ ಅಭಿಪ್ರಾಯ ನನ್ನದಾಗಿತ್ತು. ನಾನು ಓದಿದ್ದ ಮತ್ತು ಈ ಸಂಗ್ರಹದಲ್ಲೂ ಸೇರಿರುವ 'ಕಾಗೋಡು ಸತ್ಯಾಗ್ರಹದ ಮಾರ್ಗದಲ್ಲಿ ಬೆಕ್ಕು' ಮತ್ತು 'ತೇಜಸ್ವಿ ನೆನಪಲ್ಲಿ ಅಲ್ಮೇರಾ ರಿಪೇರಿ' ಎಂಬ ಪ್ರಬಂಧಗಳೇ ಇದಕ್ಕೆ ಸಾಕ್ಷಿಯಂತಿದ್ದವು. ಲಘು ಶೈಲಿಯಲ್ಲಿ ಸ್ವಾರಸ್ಯಕರವಾಗಿ ಬರೆಯುವ ಅಭ್ಯಾಸಕ್ಕಾಗಿ ವಸ್ತುಗಳನ್ನು ಹುಡುಕಿಕೊಂಡಿರುವ ಕಸರತ್ತಿನಂತೆ ಈ ಪ್ರಬಂಧಗಳು ನನಗೆ ಕಂಡಿದ್ದವು. ಆದರೆ ಅವರು ಬಿಡಲಿಲ್ಲ. 'ಒಮ್ಮೆ ಓದಿ ಕೊಡಿ ಸಾಕು' ಎಂದರು. ಅದು ಅವರ ಒತ್ತಾಯದ ಇನ್ನೊಂದು ಮಜಲು ಎಂಬುದು ನನಗೆ ಗೊತ್ತಿತ್ತು.

ಹೊಸಪಾಳ್ಯ ನನಗೆ ಬಹು ಇಷ್ಟವಾದ ಹುಡುಗ. ಕಾರಣ ಹಲವು. ಮೂಲತಃ ಅಪ್ಪಟ ಹಳ್ಳಿಗನಾದ ಈತ ನಮ್ಮ ಕಾಲದ ಸಮಾಜವಾದಿ, ದಲಿತ ಮತ್ತು ರೈತ ಚಳುವಳಿಗಳ ಮಧ್ಯೆ ಮಾಗಿ ತನ್ನ ಮದುವೆಯಿಂದ ಹಿಡಿದು ಬದುಕು ಸಾಗಿಸುತ್ತಿರುವ ಸಾಹಸಮಯ ರೀತಿ ಮತ್ತು ಬದ್ಧತೆಗಳವರೆಗೆ. ಜೊತೆಗೆ ಅವರ ಸಾಹಿತ್ಯ-ಸಂಸ್ಕೃತಿ ಪ್ರೇಮ. ಇನ್ನೂ ಒಂದು ಸುಪ್ತ ಕಾರಣವಿದ್ದೀತು. ಹೊಸಪಾಳ್ಯ ನಾನು ಬೆಳೆದ ತ್ಯಾಮಗೊಂಡ್ಲು ಎಂಬ ಊರಿನ ಆಸುಪಾಸಿನವರು. ಅವರ ಮಾತು ಭಾವ ಭಂಗಿಗಳಲ್ಲಿ ಅದರ ದಟ್ಟ ಗಮಲು ನನ್ನನ್ನು ಹಲವುಬಾರಿ ನೆನಪುಗಳಾಗಿ ಉನ್ಮಾದಗೊಳಿಸಿದೆ! ಇದೆಲ್ಲದರ ಒಟ್ಟು ಪರಿಣಾಮವೆಂಬಂತೆ ನಾನು ಅವರ ಒತ್ತಾಯಕ್ಕೆ ಕೊನೆಗೂ ಮಣಿದು, 'ಬೆನ್ನುಡಿ ಬರೆದುಕೊಡಲು ನೋಡುತ್ತೇನೆ' ಎಂದು ಮಾತು ಮುಗಿಸಿದೆ. ಅವರು 'ಆಯಿತು, ನಿಮ್ಮಿಷ್ಟ ಸಾರ್' ಎಂದರು. ಬಚಾವಾದೆ ಎಂದುಕೊಳ್ಳುತ್ತಿದ್ದ ಹಾಗೇ ಶಿವಮೊಗ್ಗದಲ್ಲಿನ ನನ್ನದೊಂದು ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಅವರು ಅಚಾನಕ್ಕೆಂಬಂತೆ ಬಂದು ಪುಸ್ತಕದ ಕರಡನ್ನು ನನ್ನ ಕೈಗೆ ಇಟ್ಟೇ ಬಿಟ್ಟರು.

ಅಂದು ರಾತ್ರಿಯೇ ನಾನು ಈ ಹುಡುಗ ಏನೆಲ್ಲ ವಿಷಯಗಳ ಬಗ್ಗೆ ಬರೆದಿದ್ದಾನೆಂದು ನೋಡುವ ಕುತೂಹಲದಿಂದ ಕರಡಿನ ಮೇಲೆ ಕಣ್ಣಾಡಿಸಿದೆ. 'ಪಲಾವೀಕರಣ' ಎಂಬ ಶೀರ್ಷಿಕೆಯಿಂದಲೇ ಕುತೂಹಲ ಕೆರಳಿಸಿದ ಲೇಖನವನ್ನು ಓದುತ್ತಾ ಹೋದಂತೆ ಅದು ನನ್ನನ್ನು ಬಿಡದೆ ಕೊನೆವರೆಗೆ ಕಚ್ಚಿಕೊಂಡುಬಿಟ್ಟಿತು. ತೊಂಬತ್ತರ ದಶಕದಲ್ಲಿ ಜಾಗತೀಕರಣ, ಉದಾರೀಕರಣಗಳ ಜೊತೆಗೇ ತಮ್ಮ ಮಧುಗಿರಿ ಸೀಮೆಯಲ್ಲಿ ಪಲಾವ್ ಎಂಬ ಖಾದ್ಯ ಪರಿಚಯವಾಗಿ ಸಂಭವಿಸಿದ 'ಪಲಾವೀಕರಣ' ಎಂಬ ವಿದ್ಯಮಾನವನ್ನು ಹೊಸಪಾಳ್ಯ ಅದರ ಹತ್ತೂ ಪಾರ್ಶ್ವಗಳಿಂದ ವರ್ಣಿಸಿರುವ ರೀತಿ ಅವರು ಲೇಖಕನಾಗಿ ಪ್ರಬುದ್ಧಗೊಂಡಿದ್ದಾರೆ ಎಂಬುದನ್ನು ನನಗೆ ಖಚಿತಪಡಿಸಿತು, ಅದು ತನ್ನ ಕೈವಶವಾಗಿದ್ದ ಆ ಸೀಮೆಯ ಭಾಷೆಯ ಸೊಗಡಿನ ಶಕ್ತಿ ಪ್ರದರ್ಶನದ ಖಯಾಲಿಯನ್ನೂ, ತೇಜಸ್ವಿಯವರ ಪ್ರಭಾವದಿಂದ ರೂಢಿಸಿಕೊಂಡಿದ್ದ ಲಘು ಹಾಸ್ಯ ಶೈಲಿಯ ಚಟವನ್ನೂ ಮೀರಿ ಒಂದು ಯಶಸ್ವಿ ಸಾಹಿತ್ಯ ರಚನೆಯಾಗಿ ಬೆಳೆದಿತ್ತು. ಮಧುಗಿರಿಯೇನು, ಬೆಂಗಳೂರು-ತುಮಕೂರು ಗ್ರಾಮಾಂತರ ಸೀಮೆಯಲ್ಲಿ ಶತಮಾನಗಳಿಂದ ಬೇರೂರಿದ್ದ ವಿವಿಧ ಬಗೆಯ ಚಿತ್ರಾನ್ನಗಳ ಸಂಸ್ಕೃತಿಯನ್ನು ಈ ಪಲಾವ್ ತಾನು ಪ್ರವೇಶಿಸಿದ ಒಂದೆರೆಡು ವರ್ಷಗಳಲ್ಲೇ ಬುಡಮೇಲು ಮಾಡಿದ ಸಾಂಸ್ಕೃತಿಕ ಕ್ರಾಂತಿಯ ಪ್ರತಿ ಹೆಜ್ಜೆಯನ್ನೂ ಲೇಖಕರು ವರ್ಣಿಸಿರುವ ರೀತಿ, ಅದಕ್ಕಾಗಿ ಆಯ್ದುಕೊಂಡಿರುವ ದಟ್ಟ ಗ್ರಾಮ ಸೊಗಡಿನ ಸಂದರ್ಭಗಳು, ಪಾತ್ರಗಳು ಮತ್ತು ಕಥೆ-ಉಪಕಥೆಗಳು, ಖಾದ್ಯ ಚರಿತ್ರೆಯ ಆಕರಗಳು ಈ ಲೇಖನವನ್ನು ಒಂದು ವಿಶಿಷ್ಟ ಲಲಿತ ಪ್ರಬಂಧವನ್ನಾಗಿ ಮಾಡಿತ್ತು. ಈ ಪ್ರಬಂಧವೇ ಒಂದು ಬರಹ ರೂಪದ ರುಚಿಕಟ್ಟಾದ ಪಲಾವ್‌ನಂತಿತ್ತು! ಈ ಲೇಖನವನ್ನು ಓದಿದ ಮೇಲೆ ಅನಿಸಿದ್ದೆಂದರೆ, ಬರೆಯುವುದು ಚಟವೇ ಆಗಿ ಕಾಣಲಿ, ಭಾಷೆಯ ಪ್ರದರ್ಶನಪ್ರಿಯತೇ ಆಗಲಿ ನಾವು ಲಘುವಾಗಿ

ಗಣಿಸದೆ ಅವನ್ನು ಯುವ ಬರಹಗಾರನೊಬ್ಬ ಪ್ರಬುದ್ಧ ಬರಹಗಾರನೊಬ್ಬನಾಗಿ ಮೂಡುವ ಸಾಧ್ಯತೆಗಳನ್ನಾಗಿ ನೋಡಬೇಕು ಎಂಬುದು ಬಹಳ ಬಾರಿ ಈ ಸಾಧ್ಯತೆಗಳು ಚಟ ಮತ್ತು ಪ್ರದರ್ಶನಪ್ರಿಯತೆಗಳಾಗಿಯೇ ಮುರುಟಿಹೋಗಬಹುದಾದದರೂ; ಹೊಸಪಾಳ್ಯರಲ್ಲಾಗಿರುವಂತೆ ಕೆಲವರಲ್ಲಾದರೂ ಸಾರ್ಥಕ ಸಫಲತೆಯನ್ನೂ ಕಾಣಬಹುದು.

ಈ ಅನಿಸಿಕೆ ಮೂಡಿದ ಫಲವಾಗಿ ನಾನು ಕೂಡಲೇ ಮತ್ತಷ್ಟು ಕುತೂಹಲದಿಂದ 'ನೆಟ್ಟಿ ಪ್ರವಾಸ' ಎಂಬ ಪುಟ್ಟ ಲೇಖನವನ್ನು ಆರಿಸಿ ಓದಿದೆ. 'ಪಲಾವೀಕರಣ' ಒಂದು ಲಘು ಹರಟೆಯಾಗಿ ಹೊರಟು ಒಂದು ವಿಶಿಷ್ಟ ಲಲಿತ ಪ್ರಬಂಧದ ಘನತೆಯನ್ನು ಪಡೆದರೆ ಈ ಲೇಖನ ಲಲಿತ ಪ್ರಬಂದದ ಮೇರೆಯನ್ನೂ ಮೀರಿ ಒಂದು ನಿಜ ಅನುಭವವನ್ನು ಸೊಗಸಾದ ಶೈಲಿ ಮತ್ತು ಭಾಷೆಯಲ್ಲಿ ಸಾಕ್ಷಾತ್ಕರಿಸುವ ಸೃಜನಶೀಲ ಪ್ರಯತ್ನವಾಗಿ ಕಂಡು ಇವರ ಬರವಣಿಗೆಯ ಹರವಿನ ಬಗ್ಗೆ ಕುತೂಹಲವನ್ನು ಹುಟ್ಟುಹಾಕಿತು. ಜೀನ್ಸ್-ಟೀ-ಷರ್ಟ್‌ಗಳನ್ನೇರಿಸಿದ ಪಟ್ಟಣಗಳ ಗೆಳೆಯರ ತಂಡವೊಂದು ಮಲೆನಾಡಿನ ಮೂಲೆಯ ಹಳ್ಳಿಯೊಂದಕ್ಕೆ ಬಂದು ಪ್ರಯೋಗಶೀಲ ರೈತರೊಬ್ಬರ ಗದ್ದೆಯಲ್ಲಿ ಒಂದು ದಿನ ನಾಟಿ ಕೆಲಸ ಮಾಡಿ ಆ ರೈತರ ಆತಿಥ್ಯವನ್ನು ಸ್ವೀಕರಿಸಿ ಹೋಗುವ ಪ್ರಸಂಗವನ್ನು ಹೇಳುವ ಈ ಪುಟ್ಟ ಬರಹ ಗ್ರಾಮೀಣ ಬದುಕಿನ ಸಾಂಸ್ಕೃತಿಕ ಸ್ಪರ್ಶ ಮತ್ತು ಅದರ ಸಮಕಾಲೀನ ಬಿಕ್ಕಟ್ಟುಗಳ ಸೂಕ್ಷ್ಮ ದರ್ಶನಗಳೊಂದಿಗೆ ಒಂದು ಸರಳ; ಆದರೆ ಸಾರ್ಥಕ ಸಾಹಿತ್ಯ ರಚನೆಯೇ ಆಗಿ ನಮ್ಮ ಗಮನ ಸೆಳೆಯುತ್ತದೆ.

ರುಚಿಗಾಗಿ ಈ ಎರಡು ಪ್ರಬಂಧಗಳನ್ನು ಓದಿದ ನಂತರ ಮಾರನೆಯ ಬೆಳಿಗ್ಗೆಯೇ ಹೊಸಪಾಳ್ಯರಿಗೆ ಕರೆ ಮಾಡಿ ನಾನು ಮುನ್ನುಡಿಯನ್ನೇ ಬರೆಯುವುದಾಗಿ ಹೇಳಿ ಅವರನ್ನು ಖುಷಿಪಡಿಸಿದೆ. ಏಕೆಂದರೆ ಈ ಎರಡು ರುಚಿಯಾದ ಲೇಖನಗಳನ್ನು ಓದುತ್ತಿದ್ದಂತೆಯೇ ನನ್ನೊಳಗೆ ಈ ಮುನ್ನುಡಿಯ ಮಾತುಗಳು ನಿಧಾನವಾಗಿ ಹರಳುಗಟ್ಟತೊಡಗಿದ್ದವು. ಆ ಉತ್ಸಾಹದಲ್ಲೇ ಈ ಇಡೀ ಪುಸ್ತಕವನ್ನು ಓದಿದೆ. ನನ್ನ ನಿರೀಕ್ಷೆ ಬಹುಮಟ್ಟಿಗೆ ಕೈಕೊಡಲಿಲ್ಲ. ಈ ಲೇಖಕರ ಶಕ್ತಿ ಇರುವುದು ಎಲ್ಲ ಒಳ್ಳೆಯ ಲೇಖಕರಲ್ಲಿರುವಂತೆಯೇ ಬದುಕಿನ ಸಕಲ ವಿವರಗಳನ್ನೂ ಸೂಕ್ಷ್ಮವಾಗಿ ಗಮನಿಸುವ ಅವರ ಆಸಕ್ತಿ ಮತ್ತು ಸಾಮರ್ಥ್ಯದಲ್ಲಿ ಮತ್ತು ಅವನ್ನು ಬದುಕಿನ ಒಂದು ಸಣ್ಣ ದರ್ಶನ ಕೊಡುವ ರೀತಿಯಲ್ಲಿ ಸಂಯೋಜಿಸುವ ಸೃಜನಶೀಲತೆಯಲ್ಲಿ. ಅದಕ್ಕೆ ನೆಪವಾಗಿ ಬರುವುದು ಅವರ ಅಪ್ಪಟ ಗ್ರಾಮೀಣ ಸೊಗಡಿನ ಕಚ್ಚಾ ಭಾಷೆ. ಈ ದರ್ಶನ ಅಪ್ಪಟ ಪಾರಮಾರ್ಥಿಕವಾದದ್ದೇ ಆಗಿರಬೇಕಿಲ್ಲ, ಅದು 'ಪಕ್ಕದ ಮನೆಯ ಮುದ್ದಣ ಮನೋರಮೆಯರು'ವಿನಲ್ಲಿ ಕಾಣುವ ದಾಂಪತ್ಯದ ವಿಶಿಷ್ಟ ಸೊಗಸೇ ಇರಬಹುದು, ಕರಡಿ ಬೇಟೆ ಕಥೆಗಳಲ್ಲಿನ ನಮ್ಮ ಬಯಲು ಸೀಮೆಯ ಪ್ರಾಕೃತಿಕ ವಿವರಗಳಲ್ಲಿ ಮೂಡುವ ಬಂಡೆ ಬೆಟ್ಟಗಳು, ಕುರುಚಲು ಕಾಡು ಮತ್ತು ಅವುಗಳ ಮಧ್ಯೆ ಬದುಕುವ ವೈವಿಧ್ಯಮಯ ಜನರ ವರ್ತನಾ ವಿಶೇಷಗಳೇ ಇರಬಹುದು ಅಥವಾ 'ಕೊರೆವ ಚಳಿ, ಉರಿವ ಬಿಸಿಲಿನ ಮಾಗಿಕಾಲ'ದಲ್ಲಿನ ಋತು

ವರ್ಣನೆಯಲ್ಲಿನ ಸೌಂದರ್ಯದ ಸವಿಯೇ ಇರಬಹುದು ಅಥವಾ 'ಪರಿಸರ ಸಂರಕ್ಷಕರು ಮಾಡಿದ ಕೊಲೆ'ಯಲ್ಲಿನ ದುರಂತದ ಚೂಪು ಇರಬಹುದು ಅಥವಾ ಎಲ್ಲಕ್ಕಿಂತ ಮುಖ್ಯವಾಗಿ 'ಕೆನೆತ್ ಆಂಡರ್ಸನ್ ಹುಲಿ ಬೇಟೆಯ ಜಾಡಿನಲ್ಲಿ'ಯಲ್ಲಿನ ಕಾಣುವ ಅನ್ವೇಷಣಾತ್ಮಕವಾದ ಕುತೂಹಲದ ದಟ್ಟ ಅನುಭವದ ಕಂಪನಗಳೇ ಇರಬಹುದು. ಈ ಎಲ್ಲವೂ ನಮ್ಮನ್ನು ನಮಗೆ ಅಪರಿಚಿತವಾದ ಲೋಕಗಳಿಗೆ ಒಯ್ದು ನಮ್ಮ ಬದುಕಿನ ದಿಗಂತಗಳನ್ನು ಕೊಂಚವಾದರೂ ವಿಸ್ತರಿಸುವಂತಿವೆ ಮತ್ತು ನಮ್ಮ ಬದುಕಿನ ಜಾಡನ್ನು ಒಮ್ಮೆ ಮರುಪರಿಶೀಸುವಂತೆ ಪ್ರೇರೇಪಿಸುತ್ತವೆ. ಉದಾಹರಣೆಗೆ, 'ಪರಿಸರ ಸಂರಕ್ಷಕರು ಮಾಡಿದ ಕೊಲೆ' ಎಂಬ ಪ್ರಬಂಧದಲ್ಲಿ ಪರಿಸರ ಸಂಸ್ಥೆಯೊಂದರ ಆವರಣದಲ್ಲಿ ಬೆಳೆಯುತ್ತಿದ್ದ ಅಪರೂಪದ ಗಾತ್ರದ ಕಣಜದ ಗೂಡೊಂದನ್ನು ಅದರ ಹುಳುಗಳು ಅಲ್ಲಿ (ತಮ್ಮದೇ ಕುತೂಹಲಕ್ಕಾಗಿ) ಸುಳಿದಾಡುವ ಸಿಬ್ಬಂದಿಯನ್ನು ಕಚ್ಚುತ್ತಿವೆ ಎಂಬ ದೂರಿನ ಮೇಲೆ ಸುಟ್ಟು ಹಾಕಿದ ಅವಿವೇಕವನ್ನು ವಿಷಣ್ಣತೆಯಿಂದ ಹೇಳುತ್ತಾ ಅದನ್ನು ಕೊನೆಗೊಳಿಸುವುದು ಈ ಉಪ ಕಥೆಯೊಂದಿಗೆ:

'ಹೇರಿಂದ್ಯಾಪನಹಳ್ಳಿ ವೆಂಕಟಮ್ಮನ ಮನೆ ಊರಿನ ನಡೂಮಧ್ಯ ಇದೆ. ಅಲ್ಲಿ ಕಡಜದ ಗೂಡು ಒಂದೂವರೆ ವರ್ಷದಿಂದ ಇತ್ತು. ಆ ಮನೆಯವರು ಕಡಜ ಗೂಡು ಕಟ್ಟಲು ಶುರು ಮಾಡಿದ ಮೇಲೆ ಶಾಸ್ತ್ರ ಕೇಳಿದರಂತೆ. ಶಾಸ್ತ್ರದಲ್ಲಿ ಎಲ್ಲ ಒಳ್ಳೆಯದಾಗುತ್ತದೆ ಎಂದು ಬಂದಾಗ ಅವರು ಗೂಡಿನ ತಂಟೆಗೆ ಹೋಗದೆ ಗೂಡಿದ್ದ ರೂಮನ್ನು ಬಳಸುತ್ತಲೇ ಇರಲಿಲ್ಲ. ಹುಳುಗಳೂ ಸಹ ಯಾರಿಗೂ ಕಡಿದಿರಲಿಲ್ಲ. ನಮ್ಮ ಸಂಸ್ಥೆಯಾದರೋ ಜೀವ ವೈವಿಧ್ಯ ಸಂರಕ್ಷಣೆಗೆಂದೇ ಇದ್ದದ್ದು. ರೈತರಿಗೂ ನಮ್ಮ ಸಂಸ್ಥೆಗೂ ಇರುವ ವ್ಯತ್ಯಾಸದ ಬಗ್ಗೆ ತುಂಬಾ ಹೊತ್ತು ಇಬ್ಬರೂ ಮಾತಾಡಿದೆವು'

ಈ ಎಲ್ಲ ಬರಹಗಳಲ್ಲಿ ನನಗೆ ಇಷ್ಟವಾದದ್ದು ಹೊಸಪಾಳ್ಯ ಎಲ್ಲವನ್ನೂ ಕಥೆಯಂತೆ ಹೇಳುವ ಅವರ ಸರಳ ಶೈಲಿ. ಆ ಮೂಲಕ ಅವರು ಲೋಕದ ವಿವರಗಳ ಬಗ್ಗೆ ಹುಟ್ಟಿಸುವ ಹೊಸ ಕುತೂಹಲ. ಜೊತೆಗೆ ಕಳೆದುಹೋಗುತ್ತಿರುವ ನಮ್ಮ ಗ್ರಾಮ ಸಂಸ್ಕೃತಿ ಮತ್ತು ಮುಖ್ಯವಾಗಿ ನಮ್ಮ ಕೃಷಿ ಸಂಸ್ಕೃತಿಯ ದಟ್ಟ ನೆನಪುಗಳ ಸರಮಾಲೆ. ಈ ಸರಮಾಲೆ ಬಿಚ್ಚಿಕೊಳ್ಳುವುದೂ ಸ್ಥಳೀಯ ಬಾಗು ಬಳುಕುಗಳ ನಾಟ್ಯದೊಂದಿಗೆ ಬರಹಗಳನ್ನೂ ಕುಣಿಯುವಂತೆ ಮಾಡುವ ಭಾಷೆಯ ಕಚ್ಚಾ ಸೌಂದರ್ಯ. ನಮ್ಮ ಸಾಹಿತ್ಯದಲ್ಲಿ ಈವರೆಗೆ ಹೆಚ್ಚಿಗೆ ಕಾಣದ ಬೆಂಗಳೂರು–ತುಮಕೂರು ಮಧ್ಯದ ಸೀಮೆಯ ಕನ್ನಡ ಭಾಷೆ ಇಲ್ಲಿ ತಾನೇ ತಾನಾಗಿ ಮರೆದಿದೆ. ನಮ್ಮ ಸಾಹಿತ್ಯ ಲೋಕದಿಂದ ಮಾತ್ರವಲ್ಲದೆ ನಮ್ಮ ಭಾಷಾ ಒಡಲಿನಿಂದಲೂ ಮಾಯವಾಗುತ್ತಿರುವ 'ವತ್ತಾರಿಕೆದ್ದು', 'ಸರೊತ್ನಾಗೆ' 'ವತ್ತಲಿಸಿಕೊಂಡು', 'ಕಣ್ಣು ಇಮಿರೋಗದಾ?' 'ಯಸೋಟ್ನೋವೋಗ್ಲೀಂತ'. 'ಐಟ್ಲಗಾ!' ಮುಂತಾದ ಶಬ್ದ ಪ್ರಯೋಗಗಳು ಇಲ್ಲಿ ಜೀವಂತವಾಗಿ ಸನ್ನಿವೇಶಗಳನ್ನು ನಿರ್ಮಿಸುವ ಪರಿ ಲೇಖಕರ ಸೃಜನಶೀಲತೆಯ ಇನ್ನೊಂದು ಮುಖವನ್ನು ಪರಿಚಯಿಸುವಂತಿದೆ.

ಯುಗಾದಿ ಹಬ್ಬ ಕುರಿತ ಇಲ್ಲಿನ ಪ್ರಬಂಧ ಇವರ ಸೃಜನಶೀಲತೆಯ ಮತ್ತೊಂದು ಮುಖವನ್ನು ಪರಿಚಯಿಸುವಂತಿದೆ. ಕಥೆಯೊಳಗೊಂದು ಕಥೆ ಹೇಳುತ್ತಾ ತಮ್ಮ ಇಂದಿನ ಕಥೆಯನ್ನೂ ಹೇಳುವ ನೆಪದಲ್ಲಿ ತಮ್ಮ ಗ್ರಾಮ ಸಂಸ್ಕೃತಿಯ ನೆನಪಿನ ಬುತ್ತಿಯನ್ನು ಬಿಚ್ಚಿ ಬೆರಗುಗೊಳಿಸುವ ರೀತಿ ಅನನ್ಯವಾದದ್ದು. ಇನ್ನು ಕರಡಿ ಬೇಟೆ ಕಥೆಗಳು ಮತ್ತು ಆಂಡರ್ಸನ್ನನ ಹುಲಿಬೇಟೆ ಜಾಡು ಕುರಿತ ಪ್ರಬಂಧಗಳಲ್ಲಿ ಕಥನ ಶೈಲಿ ಶ್ರೇಷ್ಠ ಪತ್ತೇದಾರಿ ಬರಹಗಳಷ್ಟೇ ಉಸಿರು ಬಿಗಿಹಿಡಿದು ಓದುವಂತೆ ಮಾಡುವ ಗುಣವನ್ನು ಪಡೆದುಕೊಂಡಿದೆ. ಇದಕ್ಕೆಲ್ಲ ಮುಖ್ಯ ಕಾರಣ, ಈ ಮೊದಲೇ ಸೂಚಿಸಿದಂತೆ, ಕಥನದ ಪರಿಸರದ ಪ್ರತಿ ವಿವರವನ್ನೂ ಕಥನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಬಲ್ಲ ಲೇಖಕರ ನಿರೂಪಣಾ ಶೈಲಿ ಮತ್ತು ಭಾಷಾ ಸಂಪತ್ತು. ಆದರೂ ಒಂದು ಮಾತು ಹೇಳಬೇಕು. ಕೆಲವೆಡೆ ನಿರೂಪಣೆಯನ್ನು ಹೆಚ್ಚು ರೋಚಕ ಮತ್ತು ಅಥೆಂಟಿಕ್ ಮಾಡಲು ಹೋಗಿ ಅನಗತ್ಯವಾದೆಡೆಯಲ್ಲೆಲ್ಲಾ ಹೇರಳವಾಗಿ ಅಶ್ಲೀಲ ಪದಗಳ ಸುರಿಮಳೆಯೇ ಆಗಿದೆ. ಎರಡಕ್ಷರಗಳ ಒಂದು ಪದವಂತೂ ಎಲ್ಲೆಲ್ಲೂ ಪ್ರತ್ಯಕ್ಷವಾಗಿ ಅದು ಹೊಸಪಾಳ್ಯರಿಗೆ ಬಹುಪ್ರಿಯವಾದ ಪದ ಎಂಬುದನ್ನು ಘೋಷಿಸುವಂತಿದೆ!

ಈ ಬರವಣಿಗೆಯಲ್ಲಿ ನಾನು ಇಷ್ಟಪಡದ ಇನ್ನೊಂದು ಅಂಶವೆಂದರೆ ನಿರೂಪಣೆಯನ್ನು 'ಓದುಗ'ರ ದೃಷ್ಟಿಯಿಂದ ಸಹಜಗೊಳಿಸಲೋ ಎಂಬಂತೆ ಅದರಲ್ಲಿ ಇಂಗ್ಲಿಷ್ ಶಬ್ದಗಳನ್ನು ಹಿಂಡು ಹಿಂಡಾಗಿ ಬಳಸುವ ಚಾಳಿ. ಉದಾಹರಣೆಗೆ 'ಸಡನ್ನಾಗಿ' 'ಅಲರ್ಟಾದರು', 'ಸ್ಟನ್ ಆಗಿಹೋದರು', 'ರೂಮು', 'ಕ್ಲಾರಿಫಿಕೇಷನ್ನು' ಇತ್ಯಾದಿ ಇತ್ಯಾದಿ. ಕೆಲವೆಡೆಯಂತೂ ವಾಕ್ಯಗಳಲ್ಲಿ ಪ್ರತ್ಯಯ ಮತ್ತು ಕ್ರಿಯಾಪದಗಳನ್ನು ಬಿಟ್ಟರೆ ಉಳಿದಿದ್ದೆಲ್ಲ ಇಂಗ್ಲಿಷ್ ಪದಗಳೇ! ಬದುಕು ನಡೆಸುವ ರೀತಿ ನೀತಿಗಳು ಮತ್ತು ಉದ್ದೇಶಗಳು ಬದಲಾಗುತ್ತಿದ್ದಂತೆ ನಮ್ಮೆಲ್ಲ ಭಾಷೆಗಳಂತೆ ಕನ್ನಡ ಭಾಷೆ ತನ್ನ ಹೇರಳ ಪದಸಂಪತ್ತನ್ನೂ, ನುಡಿಗಟ್ಟು-ಗಾದೆ-ನಾಣ್ನುಡಿಗಳನ್ನೂ ಕಳೆದುಕೊಂಡು ಅದರ ಅಭಿವ್ಯಕ್ತಿ ಸಾಮರ್ಥ್ಯ ಕುಂದುತ್ತಿರುವ ಬಗ್ಗೆ ವಿಷಾದದಿಂದ ಲೇಖನ ಬರೆಯುವ ಹೊಸಪಾಳ್ಯರೇ ಹೀಗೆ ಅನಗತ್ಯವಾಗಿ ಇಂಗ್ಲಿಷ್ ಬಳಸುವುದನ್ನು ಕಂಡು ಆಶ್ಚರ್ಯವಾಗುತ್ತದೆ.

ಹೊಸಪಾಳ್ಯ ಅವರು ತಮ್ಮ ಓದುಗರೆಂದು ನಿರ್ದಿಷ್ಟವಾಗಿ ಯಾರನ್ನು ಭಾವಿಸಿದ್ದಾರೋ ತಿಳಿಯದು! ಅವರು ಆದರ್ಶವಾಗಿರಿಸಿಕೊಂಡಿರುವ ಪೂರ್ಣಚಂದ್ರ ತೇಜಸ್ವಿಯವರ ಬರಹಗಳನ್ನೊಮ್ಮೆ ಈ ದೃಷ್ಟಿಯಿಂದ ನೋಡಲಿ. ಆಗ ಗೊತ್ತಾಗುತ್ತದೆ. ನಿರೂಪಣೆ ಆಪ್ತವಾಗಲು, ಪರಿಣಾಮ ಬೀರಲು ಬೇಕಾದ ಪದಸಂಪತ್ತು ಮತ್ತು ವಾಕ್ಯರಚನಾ ವೈಖರಿಗಳು ಕನ್ನಡದಲ್ಲೇ ಹೇರಳವಾಗಿವೆ ಎಂದು. ಕನ್ನಡ ಭಾಷೆ ಇಂದು ಎದುರಿಸುತ್ತಿರುವ ಅಸ್ತಿತ್ವದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಹೊಸಪಾಳ್ಯರು ಯೋಚಿಸಬೇಕು. ಲೇಖಕನೊಬ್ಬನಿಗೆ ತನ್ನ ಓದುಗರನ್ನು ಸಲೀಸಾಗಿ ತಲುಪಬೇಕೆಂಬ ಸುಲಭ ದಾರಿಗಿಂತ ಮುಖ್ಯವಾಗಿ ಸಾಂಸ್ಕೃತಿಕವಾಗಿ ದುರ್ಬಲರಾಗುತ್ತಿರುವ ದಾರಿಯಿಂದ ಅವರನ್ನು ಪಾರುಮಾಡುವ ಸಾಂಸ್ಕೃತಿಕ ಜವಾಬ್ದಾರಿಯನ್ನೂ ಹೊಂದಿರಬೇಕಾಗುತ್ತದೆ. ಆದರೆ ಹೊಸಪಾಳ್ಯರು 'ನನ್ನ ಸ್ಟೈಲೇ ಬೇರೆ!' ಎಂದರೆ ನಾವೇನೂ ಮಾಡಲಾಗುವುದಿಲ್ಲ!

ಮಿಕ್ಕಂತೆ ವಿವಿಧ ಉದ್ದೇಶಗಳಿಗಾಗಿ ಬರೆದ ಒಕ್ಕಲುತನ ಮತ್ತು ಕನ್ನಡ ಭಾಷೆಯ ಶಕ್ತಿ ಸೌಂದರ್ಯಗಳ ನಡುವಣ ಸಂಬಂಧ, ಈಶಾನ್ಯ ರಾಜ್ಯಗಳ ಪುಟ್ಟ ಪ್ರವಾಸ ಕಥನ, ಗಗನ ಚುಕ್ಕಿ ಭರಚುಕ್ಕಿ ಲೇಖನ ಹಾಗೂ ಈಚಲು ಮರದ ಕಥೆ ಇತ್ಯಾದಿ ಬರಹಗಳು ಕೆಲವೆಡೆ ಮಾಹಿತಿ ಪೂರ್ಣವಾಗಿ ಕುತೂಹಲ ಹುಟ್ಟಿಸುವಂತಿದ್ದರೂ ಹೊಸ ಅನುಭವವನ್ನೇನೂ ನಮ್ಮಲ್ಲಿ ಉಂಟು ಮಾಡುವುದಿಲ್ಲ. ಇವುಗಳಲ್ಲಿ ಕೆಲವು ಬರೆಯುವ ಚಟಕ್ಕಾಗಿ, ಮಾತುಗಾರಿಕೆಯ ಹುಸಿ ರೋಮಾಂಚನಕ್ಕಾಗಿ ಮಾತ್ರ ಬರೆದಂತಿದ್ದು ನಿರಾಶೆ ಹುಟ್ಟಿಸುತ್ತವೆ. ಈಚಲುಮರದ ಕಥೆಯಂತೂ ಹುಸಿ ರೋಚಕತೆಯನ್ನು ಹುಟ್ಟಿಸಿ ಕೇವಲ ಪೋಲಿಕತೆಯಾಗಿ ಕೊನೆಗೊಳ್ಳುತ್ತದೆ.

ಒಟ್ಟಿನಲ್ಲಿ ಈ ಸಂಗ್ರಹವು ಯುವ ಲೇಖಕನೊಬ್ಬನ ಬರೆಯುವ ಕಸರತ್ತುಗಳು, ಅವನ್ನು ಆಕರ್ಷಕಗೊಳಿಸಲು ನಡೆಸುವ ಪ್ರಯೋಗಗಳ ಜೊತೆಗೇ ನಿಜವಾಗಿ ಉಲ್ಲಾಸಗೊಳಿಸುವ ಲಘು ಹರಟೆಗಳು, ತಮ್ಮ ಸಾಂಸ್ಕೃತಿಕ ಸಿರಿ ಮತ್ತು ಒಳನೋಟಗಳಿಂದಾಗಿ ಪ್ರಬುದ್ಧವಾಗಿರುವ ಲಲಿತ ಪ್ರಬಂಧಗಳು ಮತ್ತು ಕೆಲವು ಅನ್ವೇಷಣಾತ್ಮಕ ಸಾಹಸ ಕಥನಗಳ ವಿಶಿಷ್ಟ ಸಮ್ಮಿಳನವಾಗಿದೆ. ಇದರಲ್ಲಿ ಇಂದು ಕನ್ನಡದಲ್ಲಿ ಅಪರೂಪವಾಗುತ್ತಿರುವ ಓರ್ವ ಸಂಸ್ಕೃತಿ ಸಮೃದ್ಧಿ ಇರುವ ಶಕ್ತಿಶಾಲಿ ಪ್ರಬಂಧಕಾರ ಅಡಗಿರುವುದರ ಸ್ಪಷ್ಟ ಸೂಚನೆಗಳಿವೆ. ಮಲ್ಲಿಕಾರ್ಜುನ ಹೊಸಪಾಳ್ಯರು ಬರಹ ಜೀವನದ ಆರಂಭದ ಸಹಜ ಹುಡುಗಾಟಿಕೆಗಳನ್ನು ತೊರೆದು ಓರ್ವ ಪ್ರಬುದ್ಧ ಲೇಖಕರಾಗಿ ಹೊರಹೊಮ್ಮಲಿ ಎಂದು ಹಾರೈಸುತ್ತೇನೆ ಮತ್ತು ಆ ಸಾಮರ್ಥ್ಯ ಅವರಲ್ಲಿದೆ ಎಂದೂ ನಾನು ನಂಬಿದ್ದೇನೆ.

ವಿಜಯದಶಮಿ — **ಡಿ.ಎಸ್. ನಾಗಭೂಷಣ**

೧೯ ಅಕ್ಟೋಬರ್, ೨೦೧೮ — **ಶಿವಮೊಗ್ಗ**

ಚಂದಗೋಪನ ಹುಡುಕಾಟದ ಕಥೆ-ವ್ಯಥೆಗಳು :

ವೈದೇಹಿಯವರ ನನ್ನ ಮೆಚ್ಚಿನ ಐದಾರು ಕಥೆಗಳ ಒಂದು ಪರಿಶೀಲನೆ

ವೈದೇಹಿ ಅಭಿನಂದನಾ ಗ್ರಂಥಕ್ಕಾಗಿ ಅದರ ಸಂಪಾದಕಿ ಸವಿತಾ, ಅವರ ಕಥೆಗಳ ಬಗ್ಗೆ ಲೇಖನವೊಂದನ್ನು ಬರೆದುಕೊಡಲು ಕೇಳಿದಾಗ ಅದಕ್ಕೆ ಸಿದ್ಧನಾಗಲು ನಾನು ಸ್ವಲ್ಪ ಕಷ್ಟಪಡಬೇಕಾಯಿತು. ನಾನು ವೈದೇಹಿಯವರ ಕಥೆಗಳನ್ನು ಎಂಬತ್ತರ ದಶಕದ ಆರಂಭದಲ್ಲೇ ನಿಯತಕಾಲಿಕಗಳಲ್ಲಿ ಓದುತ್ತಿದ್ದೆ. ಆದರೆ ಹತ್ತು ಕಥೆಗಾರರಲ್ಲಿ ಅವರೂ ಒಬ್ಬರು ಎಂಬಂತೆ; ನಿರ್ದಿಷ್ಟ ಗಮನವಿಲ್ಲದಂತೆ. ಒಮ್ಮೆ -ಹತ್ತು ಹದಿನೈದು ವರ್ಷಗಳ ಹಿಂದೆ-ಲಂಕೇಶರು ಇವರ ಬಗ್ಗೆ ವಿಶೇಷ ಗಮನ ಸೆಳೆಯುವ ಟಿಪ್ಪಣಿ ಬರೆದಾಗ ಇವರ ಒಂದೆರಡು ಕಥಾ ಸಂಗ್ರಹಗಳನ್ನು ಕೊಂಡು ಅವುಗಳಲ್ಲಿನ ಕಥೆಗಳನ್ನು ಒಂದಿಷ್ಟು ಗಮನವಿಟ್ಟು ಓದಲಾರಂಭಿಸಿದೆ. ಲಂಕೇಶರು ಮೆಚ್ಚಿ ಪ್ರಕಟಿಸಿದ್ದ 'ಪುಟ್ಟಮತ್ತೆ ಮತ್ತು ಮೊಮ್ಮಗಳು' ಕುತೂಹಲ ಹುಟ್ಟಿಸಿತಾದರೂ ಅವರು ಉಲ್ಲೇಖಿಸಿದ್ದ 'ಚಂದಲೆ', 'ಶಕುಂತಲೆಯೊಂದಿಗೆ ಒಂದು ಅಪರಾಹ್ನ', 'ಭೂತ' ಮತ್ತು 'ಅವಲಂಬಿತರು' ಕಥೆಗಳು ಒಂದೊಂದು ರೀತಿಯಲ್ಲಿ ಒಂದೊಂದೂ ಚೆನ್ನಾಗಿವೆ ಎನಿಸಿದರೂ ಅಸಾಮಾನ್ಯ ಅಥವಾ ನಾವೀನ್ಯತೆಯವೆಂದೇನೂ ನನಗನ್ನಿಸಲಿಲ್ಲ. ಇದೆಲ್ಲ ಲಂಕೇಶರು ತಾವು ಗುರುತಿಸಿ ಪೋಷಿಸಿದ ಪ್ರತಿಭೆ ಎಂದು ಸಾರಿಕೊಂಡು ಬೀಗಲು ನಡೆಸಿರುವ ಪ್ರಯತ್ನವಷ್ಟೇ ಎಂದು ನಕ್ಕು ಸುಮ್ಮನಾದೆ. ಹಾಗಾಗಿ ಮತ್ತೆ ವೈದೇಹಿಯವರ ಕಥೆಗಳನ್ನು ವಿಶೇಷ ಆಸಕ್ತಿಯಿಂದ ಓದುವ ಉಮೇದು ನನಗೇನೂ ಉಂಟಾಗಲಿಲ್ಲ. ಆದರೆ ಅವರೊಬ್ಬರು ಮುಂದೆ ಎಂದಾದರೊಮ್ಮೆ ವಿಚಿತ್ರಶಕ್ತಿಯೊಂದಿಗೆ ಸ್ಫೋಟಿಸಬಹುದಾದ ಕಥೆಗಾರ್ತಿ ಎಂಬ ಸೂಚನೆ ಎಲ್ಲೋ ನನ್ನ ಮನದಾಳದಲ್ಲಿ ನೆಲೆ ನಿಂತಿತ್ತು. ಏಕೆಂದರೆ ಆ ಹೊತ್ತಿಗೆ ಅವರ 'ಅಕ್ಕು' ಓದಿ ಅದರ ರಭಸಕ್ಕೆ ಬೆಚ್ಚಿದ್ದೆ. ಈ ಮಧ್ಯೆ ಅವರನ್ನು ನಾನು ಮತ್ತು ಸವಿತಾ ಎಲ್ಲಿಯೋ-ಬಹುಶಃ ಹೆಗ್ಗೋಡಿನಲ್ಲಿ-ಕಂಡು ಮಾತಾಡಿಸಿದ್ದ ನೆನಪು, ಅಷ್ಟೆ.

ಅದು ೧೯೯೩-೯೪ ಇರಬಹುದು. ನಾವಾಗ ಮಡಿಕೇರಿಯಲ್ಲಿದ್ದೆವು. ಒಂದು ಭಾನುವಾರ ಮಧ್ಯಾಹ್ನ ನಮ್ಮ ಮನೆಯ ಗುಡ್ಡದ ಕೆಳ ರಸ್ತೆಯಲ್ಲಿ ನಾನು ಮತ್ತು

ಸವಿತಾ ವೈದೇಹಿ ಅವರನ್ನು ನೋಡಿದೆವು. ಇಲ್ಲೇಕೆ ಅವರು ಎಂದು ಒಂದು ಕ್ಷಣ ಆಶ್ಚರ್ಯ, ಗಲಿಬಿಲಿಯೂ ಆಯಿತು. ಮಾತಾಡಿಸಿದಾಗ ಗೊತ್ತಾದದ್ದು, ಅವರ ಹಿರಿಯ ಮಗಳು ನಯನಾರನ್ನು ಮಡಿಕೇರಿಯ ಬಾಲಾಜಿ ಅನ್ನುವವರಿಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದು. ನಮ್ಮ ಆಹ್ವಾನದ ಮೇರೆಗೆ ಅವರು ಆ ಸಣ್ಣ ಗುಡ್ಡ ಹತ್ತಿ ನಮ್ಮ ಮನೆಗೆ ಬಂದು ನಮ್ಮ ಉಪಚಾರ ಸ್ವೀಕರಿಸಿ, ಮಾತಾಡಿ ಹೋದರು. ಹಾಗೇ ಹತ್ತಿರದಲ್ಲೇ ಇರುವ ತಮ್ಮ ಮಗಳ ಮನೆಗೆ ಬರಲು ಆಹ್ವಾನಿಸಿದರು. ಮಾರನೆಯ ದಿನ ಸಂಜೆ ನಾವು ನಯನಾ ಅವರ ಮನೆಗೆ ಹೋದೆವು. ಆತಿಥ್ಯದ ಜೊತೆಗೆ ಅಲ್ಲಿ ವೈದೇಹಿಯವರು ಆಗ ಪ್ರಕಟವಾಗಿದ್ದ ತಮ್ಮದೊಂದು ಕಥಾ ಸಂಕಲನವನ್ನು ನಮಗೆ ನೀಡಿದರು. ಅದರ ಹೆಸರು 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗಳು'

ಆಗ ನನಗೆ ಕಛೇರಿಯಲ್ಲಿ ಹೆಚ್ಚು ಕೆಲಸವೇನೂ ಇರಲಿಲ್ಲ. ಬೇಸರವಾಗಿ, ಶಿಸ್ತಾಗಿ ಒಂದಿಷ್ಟು ಓದೋಣವೆಂದು ಹದಿನೈದು ದಿನವೋ ಒಂದು ತಿಂಗಳೋ ರಜೆ ಹಾಕಿದ್ದೆ. ಹಾಗಾಗಿ ವೈದೇಹಿಯವರು ಕೊಟ್ಟ ಪುಸ್ತಕ ನಿರಂತರ ಓದಿಗೆ ಒದಗಿಬಂತು. ಒಮ್ಮೆ 'ಲಂಕೇಶ್ ಪತ್ರಿಕೆ'ಯಲ್ಲಿ ಓದಿದ್ದ 'ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು' ಸೇರಿದಂತೆ ಅದರ ಮೊದಲ ನಾಲ್ಕು ಕಥೆಗಳನ್ನು ಓದಿ ನಾನು ಸುಸ್ತಾದೆ. ಎಂತಹ ಸುಸ್ತದು! ಕನ್ನಡ ಕಥೆಗಾರಿಕೆಯಲ್ಲಿ ಈವರೆಗೆ ಕಂಡರಿಯದ ಮಹಿಳಾ ಸಂವೇದನೆಯ ಸೂಕ್ಷ್ಮಗಳು ನನ್ನನ್ನು ಬೆರಗುಗೊಳಿಸಿ, ಈ ಕಥೆಗಳು ಹೀಗೆ ಸಂಗ್ರಹವಾಗಿ ಬರುವವರೆಗೆ ನನ್ನ ಓದಿನಿಂದ ತಪ್ಪಿಸಿಕೊಂಡಿದ್ದವೆಂದರೆ ಅದು ನನ್ನ ಓದಿನ ಹಿಂದಿನ ಉಡಾಫೆಯೇ ಕಾರಣವೆಂಬ ಅರಿವಿನಿಂದಾದ ಸುಸ್ತು. ಹಾಗೆ ನೋಡಿದರೆ ಈ ಕಥೆಗಳಲ್ಲಿನ ಸಂವೇದನೆಯ ಸೂಕ್ಷ್ಮಗಳನ್ನು ಮಹಿಳೆಯದ್ದೆಂದು ಗುರುತಿಸುವುದೂ ನಾವು ಗಂಡಸರಾಗಿ ಮಾತ್ರ ಓದುತ್ತಿದ್ದೇವೆಂಬ ಸಂಕುಚಿತ ಗ್ರಹಿಕೆಯ ಓದಾಗುವುದೋ ಏನೋ! ಒಟ್ಟಿನಲ್ಲಿ ಅದೊಂದು ಹೊಸ ಅನುಭವ.

ಇಲ್ಲಿಂದಾಚೆ ನಾನು ವೈದೇಹಿಯವರ ಕಥೆಗಳನ್ನು ವಿಶೇಷ ಕುತೂಹಲದಿಂದ ಓದತೊಡಗಿದೆ. ಕೆಲವು ಸಾಮಾನ್ಯ, ಕೆಲವು ಅಸಾಮಾನ್ಯ. ಒಂದಷ್ಟು ವರ್ಷಗಳ ನಂತರ ಇವರ ಇನ್ನೊಂದು ಸಂಗ್ರಹ 'ಕ್ರೌಂಚ ಪಕ್ಷಿಗಳು' ವಿಶೇಷ ಕಾರಣಕ್ಕಾಗಿ ನನ್ನ ಓದಿಗೆ ಸಿಕ್ಕಿತು. ಅದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಪರಿಗಣನೆಗಾಗಿ ನಮ್ಮ ಮನೆಗೆ ಬಂದಿತ್ತು. ಆ ವರ್ಷ ಸವಿತಾ ಆ ಪ್ರಶಸ್ತಿಯ ತೀರ್ಪುಗಾರರಲ್ಲೊಬ್ಬಳು. ಸವಿತಾ ಈ ಪುಸ್ತಕವನ್ನು ಪ್ರಶಸ್ತಿಗಾಗಿ ಶಿಫಾರ್ಸು ಮಾಡಿದಾಗ ನಾನು ಕೊಂಚ ಆಶ್ಚರ್ಯಪಟ್ಟಿದ್ದುಂಟು. ಆದರೆ ಈ ಅಕಾಡೆಮಿ ಪ್ರಶಸ್ತಿ ನಿಯಮಾವಳಿ ಎಷ್ಟು ವಿಚಿತ್ರವೆಂದರೆ, ಒಮ್ಮೆ ಈ ನಿಯಮಾವಳಿಯ ವ್ಯಾಪ್ತಿಯಿಂದ ಓರ್ವ ಲೇಖಕರು ತಪ್ಪಿಸಿಕೊಂಡರೆಂದರೆ ಅವರು ಮುಂದೆ ಈ ಪ್ರಶಸ್ತಿಗೆ 'ಅರ್ಹತೆ' ಪಡೆಯುವುದು ಕಷ್ಟವೇ ಸರಿ. ಜೊತೆಗೆ ಒಂದು ಪುಸ್ತಕದ ಯೋಗ್ಯತೆಯನ್ನು ಆ ವರ್ಷದ ಪ್ರಶಸ್ತಿಗಾಗಿ ಅಳೆಯಬೇಕಾದದ್ದು ಅವುಗಳ ಜೊತೆ ಹಲವು ದೋಷಪೂರ್ಣ ವಿಧಾನಗಳ ಮೂಲಕ ಪರಿಗಣನೆಗೆ ಬಂದ ಇತರ

ಪುಸ್ತಕಗಳ ಹೋಲಿಕೆಯೊಂದಿಗೇ. ಆದ್ದರಿಂದ ಸವಿತಾ ಶಿಫಾರ್ಸು ಅಂತಿಮವಾಗಿ ಸರಿಯಾಗಿಯೇ ಇದೆ ಅನ್ನಿಸಿತು. ಏಕೆಂದರೆ 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗಳು' ಸಂಗ್ರಹದ, ಮೇಲೆ ಉಲ್ಲೇಖಿಸಿದ ಕಥೆಗಳನ್ನು ಬರೆದವರಿಗೆ ಸಲ್ಲದೆ ಇನ್ನಾರಿಗೆ ಈ ಪ್ರಶಸ್ತಿ ಸಲ್ಲಬೇಕು?

ಅಂದ ಮಾತ್ರಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದ 'ಕ್ರೌಂಚ ಪಕ್ಷಿಗಳು' ಸಂಗ್ರಹದಲ್ಲಿ ಒಳ್ಳೆಯ ಕಥೆಗಳಿಲ್ಲ ಎಂದಲ್ಲ. ಅದರಲ್ಲಿನ 'ದಾಳಿ' ಎಂಬ ಕಥೆ ಮೊನ್ನೆ ಈ ಸಂಗ್ರಹದ ಕಥೆಗಳನ್ನು ಮತ್ತೆ ಓದುವಂತೆ ನನ್ನನ್ನು ಒತ್ತಾಯಿಸುತ್ತಲೇ ಇರುವಷ್ಟು ನನ್ನ ಮನಸ್ಸಿನಲ್ಲಿ ಉಳಿದುಬಿಟ್ಟಿತ್ತು. ಈಗ ಓದಿದಾಗ ಅದರೊಂದಿಗೇ 'ನಟಿ' ಎಂಬ ಕಥೆ ನನ್ನನ್ನು ಬಲವಾಗಿ ಅಂಟಿಕೊಂಡಿತು. ಅಷ್ಟೇ ಅಲ್ಲ, ವೈದೇಹಿಯವರ ಕಥೆಗಾರಿಕೆಯ ಸಾರ್ಥಕತೆಯ ಗುಟ್ಟೂ ನನಗೆ ಅದರಿಂದ ಹೊಳೆದಂತಾಯಿತು!

ನಾನು ವೈದೇಹಿಯವರ ಎಲ್ಲ ಕಥೆಗಳನ್ನೂ ಓದಿಲ್ಲ. ಈಗ ಒಮ್ಮೆಗೇ ಓದೋಣವೆಂದರೆ ಅವೇನು ಹತ್ತಿಪ್ಪತ್ತೇ? ಅವೀಗ ನೂರಕ್ಕೆ ಹತ್ತಿರವಾಗುತ್ತಿವೆಯಂತೆ! ಆದರೆ ನಾನು ಅವರ ಎಲ್ಲ ಮಾದರಿಗಳ ಕಥೆಗಳನ್ನೂ ಪ್ರಾತಿನಿಧಿಕವಾಗಿ ಓದಿರುವ ವಿಶ್ವಾಸವಿದೆ. ಈ ವಿಶ್ವಾಸದಿಂದ ಹೇಳಬಹುದಾದರೆ, ಅವರು ಎಲ್ಲಿ ತಮ್ಮದೇ ಕಿರು ಸಮಾಜದ ಕಥೆ ಹೇಳುತ್ತಾರೋ ಅಲ್ಲಿ ಅವರ ಕಥೆಗಾರಿಕೆಯ ಪ್ರತಿಭೆಯ ಎಲ್ಲ ಗರಿಗಳೂ ಪೂರ್ಣವಾಗಿ ಬಿಚ್ಚಿಕೊಂಡು ಅವರನ್ನು ನಮ್ಮ ಅತ್ಯುತ್ತಮ ಮತ್ತು ವಿಶಿಷ್ಟ ಕಥೆಗಾರರಲ್ಲೊಬ್ಬರನ್ನಾಗಿ ಮಾಡಿವೆ. ಮಿಕ್ಕಂತೆ ಅವರು ಅಲ್ಲಿ ಕಥೆ ಕಟ್ಟುತ್ತಿರುವಂತೆ ಕಾಣುತ್ತದೆ. ಹಾಗೆಂದರೆ ಅವಗಳ ಕಟ್ಟೋಣ ಕೃತಕವಾಗಿವೆ ಎಂದೂ ಅಲ್ಲ ಮತ್ತು ಕಥೆಗಾರರೊಬ್ಬರು ತನ್ನ ಆಪ್ತ ಸಮಾಜದ ಕತೆಯನ್ನು ಮಾತ್ರ ಪರಿಪೂರ್ಣತೆಯೊಂದಿಗೆ ಹೇಳಬಲ್ಲರು ಎಂದೂ ಅಲ್ಲ. ಹಾಗಾದಲ್ಲಿ ಒಬ್ಬರನ್ನು ಕಥೆಗಾರನ್ನಾಗಿ ಮಾಡುವ ಮೂಲಶಕ್ತಿಯಾದ ಅನ್ಯವನ್ನು ಆವಾಹನೆ ಮಾಡಿಕೊಳ್ಳುವ ಶಕ್ತಿಯನ್ನೇ ಕಥೆಗಾರಿಕೆಯ ಪ್ರತಿಭಾ ವ್ಯಾಪ್ತಿಯಿಂದ ಹೊರಗಿಟ್ಟ ವಿಪರ್ಯಾಸ ಉಂಟಾಗುತ್ತದೆ. ತಮ್ಮ ಕಿರು ಸಮಾಜವನ್ನು ದಾಟಿ ಬೀರಿದ ನೋಟಗಳ ಮೂಲಕ ಅವರು ಕಟ್ಟಿದ ಕಥೆಗಳು ಹೆಚ್ಚು ಚಿಂತನಾಪರವೆನಿಸುತ್ತವೆ ಮತ್ತು ಕೊಂಚ ಹೆಚ್ಚು ನೇರ, ದಿಟ್ಟವೆನಿಸುತ್ತವೆ ಎಂದಷ್ಟೇ ನಾನು ಹೇಳುತ್ತಿರುವುದು. ಅಲ್ಲದೆ ಅವು ಎಲ್ಲೂ ಸುಳ್ಳೆನಿಸುವುದಿಲ್ಲ ಎಂಬುದನ್ನೂ ಇಲ್ಲಿ ಸೇರಿಸಬೇಕು. ಉದಾಹರಣೆಗೆ 'ಸೌಗಂಧಿಯ ಸ್ವಗತಗಳು' ಕಥೆ ನೋಡಬಹುದು. ಆಧುನಿಕ ಸ್ತ್ರೀಲೋಕದ ಒಳಬಂಡಾಯದ ದನಿಗಳು ಇಲ್ಲಿ ಎಷ್ಟು ಸೂಕ್ಷ್ಮವಾಗಿ, ಆರ್ದ್ರವಾಗಿ–ಎಲ್ಲೂ ಪೋಲಿಯಾಗಿ ಕಾಣದೆ–ಕೇಳಿಸುತ್ತವೆಂದರೆ, ಇದು ಕೂಡ ವೈದೇಹಿಯವರ ಅತ್ಯುತ್ತಮ ಕಥೆಗಳಲ್ಲಿ ಒಂದು–ಮುಂದೆ ವಿವರಿಸುವ ಒಂದು ದೌರ್ಬಲ್ಯದೊಂದಿಗೇ ಆದರೂ– ಎನಿಸದಿರದು. ಹಾಗೇ 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಮತ್ತು 'ದಾಳಿ'ಯಂತಹ ಕಥೆಗಳು ಕೂಡ.

ಹಾಗೆ ನೋಡಿದರೆ ಯಾರದ್ದಾದರೂ ಇಂದು ತನ್ನದೇ ಮತ್ತು ತನ್ನದು ಮಾತ್ರ ಎಂದು ಹೇಳಿಕೊಳ್ಳಬಹುದಾದ ಅಪ್ಪಟ ಆಪ್ತ ಸಮಾಜವೆಂಬುದು ಎಲ್ಲಿದೆ? 'ಇತರೆ'ಯ

ಸಂವಾದಿತ್ವವಿಲ್ಲದೆ ತನ್ನದೆಂಬುದು ಸ್ಥಾಪಿತವಾಗುವುದಾದರೂ ಹೇಗೆ? ಹಾಗಾಗಿ ನಾನು ಇಲ್ಲಿ ಆಪ್ತ ಸಮಾಜ ಎಂದು ಹೇಳುತ್ತಿರುವುದು ಒಂದು ಭಾಷೆ, ಅದರ ಶೈಲಿ, ನುಡಿಗಟ್ಟು, ಅದರ ಹಬ್ಬ-ಹರಿದಿನ ಇತ್ಯಾದಿ ವಿಧಿ ಆಚರಣೆಗಳ ವಿವರ, ಅವುಗಳಲ್ಲಿ ವ್ಯಕ್ತವಾಗುವ ಸಾಮಾಜಿಕ ವಿನ್ಯಾಸಗಳ ಒಂದು ಸಾಂಸ್ಕೃತಿಕ ಸಂರಚನೆ ಮತ್ತು ಅದರ ಒಟ್ಟು ಶಬ್ದವಾಸನೆಯ ಸಾಂದ್ರತೆಯ ಸಂದರ್ಭವನ್ನಷ್ಟೇ. ಇಲ್ಲಿ ಶಬ್ದವಾಸನೆ ಎಂಬ ಪ್ರಯೋಗ ನನ್ನ ಮನಸ್ಸಿಗೆ ಬಂದದ್ದೇ ವೈದೇಹಿಯವರ ಕಥೆಗಾರಿಕೆಯಲ್ಲಿ ಕಾಣುವ ಮಾತುಗಾರಿಕೆಯ ವೈಭವದ ಮೆರವಣಿಗೆಯಿಂದಾಗಿ! ಹೆಣ್ಮಕ್ಕಳ ಈ ಮಾತುಗಾರಿಕೆಯ ಚಂದ-ಚಾತುರ್ಯ-ಚೇಷ್ಟೆಗಳೇ ಕಥೆಯ ಹಲವು ಸುತ್ತುಗಳನ್ನು ಕಟ್ಟಿಬಿಟ್ಟಿರುತ್ತದೆ. ವೈದೇಹಿಯವರು ಯಾವ ಕೇಂದ್ರದಲ್ಲಿ ನಿಂತು ಕಥೆ ಹೇಳುವರೋ ಆ ಸಾಂಪ್ರದಾಯಿಕ ಸಮಾಜದ ಅದುಮಿಟ್ಟ ಸ್ತ್ರೀಶಕ್ತಿಯೆಲ್ಲವೂ ಈ ಮಾತುಗಾರಿಕೆಯ ವಿವಿಧ ವೈಖರಿಗಳಲ್ಲೇ ಹೊರನುಗ್ಗಿ ಕಥೆಯ ಕೇಂದ್ರವನ್ನೂ ಮರುರೂಪಿಸುವಷ್ಟು ಶಕ್ತಿಯುತವಾಗಿರುತ್ತದೆ. ಹಾಗಾಗಿಯೇ ವೈದೇಹಿಯವರ ಕೆಲವು ಕಥೆಗಳು ತಾವೇ ತಾವಾಗಿ-ಸುಮ್ಮಸುಮ್ಮನೆ-ಕಥೆಯಾಗಿಬಿಡುತ್ತವೆ ಎನಿಸಿದರೆ, ಇನ್ನು ಕೆಲವನ್ನು ಅವರು ಕಲಿತು ದುಡಿದು ಕಟ್ಟಿದ್ದಾರೆ ಎನಿಸುವುದು. ಆದರೆ ಈ ದುಡಿಮೆ ಭಾಷೆಯ ಇನ್ನೊಂದೇ ತೆರನ ದುಡಿಮೆಯಾಗಿದ್ದು ಅದರ ಚೆಲುವೂ ಕಡಿಮೆ ಮೌಲ್ಯದ್ದೇನಲ್ಲ ಹಾಗೂ ಈ ಎರಡರಲ್ಲೂ ಎದ್ದು ಕಾಣುವುದು ಲೇಖಕಿಯ ಸೃಜನಶೀಲತೆಯಲ್ಲದೆ ಮತ್ತೇನಲ್ಲ ಎಂಬುದನ್ನು ಗಮನಿಸುವುದೂ ಇಲ್ಲಿ ಮುಖ್ಯ.

ನನ್ನ ಈ ಮಾತುಗಳನ್ನು ವೈದೇಹಿಯವರ ಅತ್ಯುತ್ತಮ ಕಥೆಗಳೆಂದು ನಾನು ಭಾವಿಸಿರುವ ಕಥೆಗಳ ಉದಾಹರಣೆಗಳನ್ನಿಟ್ಟುಕೊಂಡೇ ಇಲ್ಲಿ ವಿವರಿಸಬಯಸುವೆ. 'ಅಕ್ಕು', 'ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು' ಮತ್ತು 'ಅಮ್ಮಚ್ಚಿಯ ನೆನಪು' ಈ ಮೂರು ಕಥೆಗಳನ್ನು ಅವರ ಕಥೆಗಾರಿಕೆಯ ಛಾಪನ್ನು-ಅದರ ಅತ್ಯುತ್ತಮ ಗುಣಗಳನ್ನು-ಪ್ರತಿನಿಧಿಸುವ ಕಥೆಗಳೆಂದು ಹೇಳಲಾಗುತ್ತದೆಯಾದರೂ, ಅವುಗಳ ಎಲ್ಲ ಶಕ್ತಿ-ಸೌಂದರ್ಯಗಳನ್ನು ಒಪ್ಪಿಕೊಂಡೂ ನನಗೆ ಅನ್ನಿಸಿದ್ದು, ಅವು ಅತಿ ನಾಟಕೀಯತೆಯಿಂದ ಬಳಲಿವೆ ಎಂದು. ಹಾಗಾಗಿಯೇ ಅವುಗಳನ್ನು ಓದುವಾಗ ಇದ್ದಷ್ಟು ಮನಸ್ಸಿನ ಸಾಂದ್ರತೆ ಅವನ್ನು ಓದಿ ಮುಗಿಸಿದ ಮೇಲೆ ಉಳಿಯುವುದಿಲ್ಲ. ಅವುಗಳ ಗೌಜು ಗದ್ದಲ ಮನಸ್ಸಿನ ದಿಗಂತಗಳನ್ನು ಕಿಂಚಿತ್ತೂ ವಿಸ್ತರಿಸದೆ ಸುಮ್ಮನೆ ಮನಸ್ಸನ್ನು ಪೀಡಿಸುತ್ತಿರುತ್ತವೆ. ಇವು ಒಂದು ನಿರ್ದಿಷ್ಟ ಮಾದರಿಯ ಸಮಾಜದ ಒಳಗಿನ ಕೋಲಾಹಲಗಳನ್ನು ದಟ್ಟ ಕೌಟುಂಬಿಕ ವಾತಾವರಣದ ಚಿತ್ರಣದ ಮಧ್ಯೆ ದಿಟ್ಟವಾಗಿ, ಲವಲವಿಕೆಯಿಂದ, ಸ್ಥಳೀಯ ಭಾಷೆಯ ವಿಶಿಷ್ಟ ಬಾಗು ಬಳುಕುಗಳೊಂದಿಗೆ ಸ್ವಾರಸ್ಯಕರವಾಗಿ ಹೇಳುತ್ತವೆಯೇ ಹೊರತು ಅವಕ್ಕೆ ಕಾರಣವಾದ ಅದರ ಪ್ರಸ್ಥಭೂಮಿಯೊಳಗಿನ ಭೂಕಂಪನಗಳ ಕೇಂದ್ರಗಳ ಕಡೆ ಬೊಟ್ಟು ಮಾಡುವುದಿಲ್ಲ, ಪುರುಷ ಪ್ರಧಾನ ಸಮಾಜ ಎಂಬ ಸ್ಥೂಲ-ಕ್ಲೀಷೆಯ-ನೆಪದ ಹೊರತಾಗಿ. ಹೌದು, ಮೇಲೆ ಹೇಳಿದ ಅವುಗಳ ಶಕ್ತಿ-ಸೌಂದರ್ಯಗಳ ದೃಷ್ಟಿಯಿಂದ ಅವು ಬಹು ಒಳ್ಳೆಯ ಕಥೆಗಳೇ. ಆದರೆ ಪೂರ್ಣ ಕಥೆಗಳಲ್ಲ.

ಆದರೂ ಈ ತ್ರಿವಳಿ ಕಥೆಗಳಲ್ಲಿ 'ಪುಟ್ಟಮತ್ತೆ ಮತ್ತು ಮೊಮ್ಮಗಳು' ನಮ್ಮನ್ನು ಮನುಷ್ಯ ಸಂವೇದನೆಯ ಹೆಚ್ಚು ಆಳಗಳಿಗೆ ಕರೆದುಕೊಂಡು ಹೋಗುವ ಕಥೆ ಎಂದು ಗುರ್ತಿಸಬಹುದು. ಮಿಕ್ಕೆರೆಡು ಕಥೆಗಳನ್ನು ಅವುಗಳ ಒಟ್ಟು ಪರಿಣಾಮ ಕೆಡದಂತೆ ಯಾರಿಗಾದರೂ ಸಾರಾಂಶ ರೂಪದಲ್ಲಿ ಸುಲಭವಾಗಿ ಹೇಳಿಬಿಡಲು ಒದಗಬಲ್ಲ, ಹೆಚ್ಚು ಸಂಕೀರ್ಣತೆಯನ್ನು ಒಳಗೊಳ್ಳದ ಕಥೆಗಳು. ಬೇಕಾದರೆ ಪುಟ್ಟಣ್ಣ ಕಣಗಾಲ್ ಮತ್ತು ಕಲ್ಪನಾ ಮತ್ತೆ ಹುಟ್ಟಿಬಂದರೆ ಜನ ಮೆಚ್ಚುವ/ಬೆಚ್ಚುವ, ಮುಗಿಬಿದ್ದು ನೋಡುವ ರೀತಿಯ ಸಿನಿಮಾಗಳನ್ನೂ ಇವುಗಳಿಂದ ಮಾಡಬಹುದು (ಈಗ ಅಂತಹುದಲ್ಲದಿದ್ದರೂ ಒಂದು ಸಿನಿಮಾ ಪ್ರಯತ್ನ ನಡೆದಿದೆ ಎಂದು ಕೇಳಿದ್ದೇನೆ!) ಆದರೆ ಈ ನಿರ್ದಿಷ್ಟ ಕಥೆಯ ಬಹುಭಾಗ ಉಳಿದೆರಡು ಕಥೆಗಳಂತೆಯೇ ಸಾಗಿದರೂ ಒಂದು ಹಂತದ ನಂತರ ಬರುವ ಮೊಮ್ಮಗಳ ಪಾತ್ರ ನಿರೂಪಣೆ ಇಡೀ ಕಥೆಗೊಂದು ಹೊಸ ಆಳ ನೀಡಿ ಕಥೆಗಾರಿಕೆಗೊಂದು ಹೊಸ ಎತ್ತರವನ್ನು ನಿರ್ಮಿಸಿಕೊಡುತ್ತದೆ. ಇಲ್ಲಿ ಮೊಮ್ಮಗಳ ಕಥೆ ನಮ್ಮನ್ನು ಬೆಚ್ಚಿಬೀಳಿಸುವ ರೀತಿಯಲ್ಲೇ ಆ ಕಥೆಯ ಮೊದಲ ದೊಡ್ಡಭಾಗದ–ಪುಟ್ಟಮ್ಮತ್ತೆಯ ಕಥೆಯ–ಹೇಳದೆ ಉಳಿದ ಎಲ್ಲ ಸಂಕೀರ್ಣ ಗಂಟುಗಳೂ ನಮ್ಮ ಮನದಲ್ಲಿ ಬಿಚ್ಚಿಕೊಳ್ಳುತ್ತವೆ. ನೂರಾರು, ಸಾವಿರಾರು ಪುಟ್ಟಮ್ಮತ್ತೆಯರ ಆಳಾತಿಆಳದ ನಿಟ್ಟುಸಿರು, ಬಿಕ್ಕುಗಳೂ ಕೇಳತೊಡಗುತ್ತವೆ. ಇದೊಂದು ಒಳಗೇ ಮೌನವಾಗಿ ಕುದಿಯುತ್ತಾ, ತನ್ನದೇ ಲಯದಲ್ಲಿ ಹೊರಬಂದು ಆರೋಹಣ ಗತಿಯಲ್ಲಿ ಚಲಿಸುತ್ತಾ ಧುತ್ತನೆಯ ತೀವ್ರ ಭಾವ ವಿರಚನೆಯ, ಒಂದು ರೀತಿಯ ಚರಿತ್ರೆಯ ಸೇಡಿನ ಕಥೆಯಾಗಿ–ಸ್ಫೋಟಿಸುತ್ತದೆ. ಹಾಗಾಗಿಯೇ ಈ ಮೊಮ್ಮಗಳ ದುರಂತ ಅಕ್ಕು ಮತ್ತು ಅಮ್ಮಚ್ಚಿಯ ದುರಂತಗಳಿಗಿಂತ ಹೆಚ್ಚು ಸಂಕೀರ್ಣವೆನಿಸಿ, ಈ ಮೂರೂ ಕಥೆಗಳು ಹೇಳುವ ಸಮಾಜದ ಹೆಣ್ಣುಮಕ್ಕಳ ದುರಂತ ಚರಿತ್ರೆಯನ್ನು ಈ ಕಥೆ ಹೆಚ್ಚು ಬೇರಿಳಿಸಿ ಹೇಳುತ್ತದೆನಿಸುತ್ತದೆ. ಪುಟ್ಟಮ್ಮತ್ತೆಯ ತಾಯಿಯ ಮತ್ತು ಪುಟ್ಟಮ್ಮತ್ತೆಯ ಗಂಡನ ಸಾವಿನ ಎದೆ ನಡುಗಿಸುವಂತಹ ಉಪಕಥೆಗಳ ಮೂಲಕ. ಇಲ್ಲಿ ಪುಟ್ಟಮ್ಮತ್ತೆಯ ಅಥವಾ ಅವಳ ಮೊಮ್ಮಗಳ ಕಥೆ ಒಂದು ಸಮಾಜದ ಚರಿತ್ರೆಯ ಕಥೆಯಾಗಿಯೂ ಮೂಡಿ ನಮ್ಮನ್ನು ಒಂದು ದೀರ್ಘ ನಿಟ್ಟುಸಿರಿನಲ್ಲಿ ಸಿಲುಕಿಸಿ ಕಲಕುತ್ತದೆ. ಹಾಗೇ ಈ ಕಥೆ ಬೀಜ–ಬೇರಿನಿಂದ ಶುರುವಾಗಿ ಶಾಖೋಪಶಾಖೆಗಳಾಗಿ ವಿಶಾಲವಾಗಿ ಹರಡಿಕೊಳ್ಳುವ ಮರದಂತೆ ಬೆಳೆದಿರುವುದರಿಂದ ಕಥೆಯೊಂದಿಗೆ ಕಥೆ ಹೇಳುವ ಹದವೂ ಸಾವಯವವಾಗಿ ಸಾಧಿತವಾಗಿರುವುದನ್ನು ನಾವು ಕಾಣಬಹುದು :

'ಜಯಲಕ್ಷ್ಮೀ, ಹಸಿವು, ಬಾಯಾರಿಕೆ ಆಗದವರು ಯಾರಿಲ್ಲ? ಆದರೆ ಅದೆಲ್ಲ ಇರುವುದು ಇಗಾ ಇಲ್ಲಿ. ಈ ಎದೆಯಲ್ಲಿ. ಇದನ್ನೊಂದು ಕಲ್ಲು ಮಾಡಿಕೊಂಡರೆ ಎಲ್ಲ ಪಸೆ ಒಣಗಿ ಬೇಗ ಚುರುಟಿ ಹೋದೀತು.' –ಆಕೆ ಹಾಗೆಂದ ರೀತಿಗೆ ಜಯಲಕ್ಷ್ಮಿ ನಕ್ಕಾಗ ಪುಟ್ಟಮ್ಮನಿಗೂ ನಗೆಯೇ. ನಗೆಯೂ ಹಲವೊಮ್ಮೆ ಖಾಲಿಯಾಗಿರುತ್ತಲ್ಲ?'

ಆದರೆ 'ಆರತಿ ತಟ್ಟೆ' ಇದನ್ನು ಎಲ್ಲ ರೀತಿಯಲ್ಲಿಯೂ ಮೀರಿಸಿದ ಕಥೆ. ನನ್ನ ಪ್ರಕಾರ ವೈದೇಹಿಯವರ ಅತ್ಯುತ್ತಮ ಕಥೆ. ಹಾಗೆ ನೋಡಿದರೆ ಈ ಕಥೆಯಲ್ಲಿ ಕಥೆಯೇ ಇಲ್ಲ! ಬದಲಿಗೆ ಕಥೆಯ ನೆಪದಲ್ಲಿ ಬಿಚ್ಚಿಕೊಳ್ಳುವ ಒಂದರೊಳಗೊಂದು ಕರುಳುಬಳ್ಳಿಯಂತೆ ಹೆಣೆದುಕೊಂಡ ನಿಗೂಢ ಬಲೆಯಾಗಿ ಕಾಣುವ ಮಾನವ ಸ್ವಭಾವ-ಸಂಬಂಧಗಳ ಸುಂದರ ಸೂಕ್ಷ್ಮ ಹಾಸು ಇದು. ವೈದೇಹಿಯವರು ತಮ್ಮ ಬಹುಪಾಲು ಕಥೆಗಳಲ್ಲಿ ನಡೆಸಿರುವುದು ತಾವು ಹುಟ್ಟಿ ಬೆಳೆದ ಮತ್ತು ಬೆಳೆಯುತ್ತಿರುವ ಸಮಾಜದ ಧಾರಣಾ ಶಕ್ತಿಯ ಅನ್ವೇಷಣೆಯನ್ನೇ-ಅದರ ಸ್ತ್ರೀಲೋಕದ ಕಣ್ಣಿನಿಂದ-ಎಂದು ಹೇಳಬಹುದೇನೋ. ಅವರ ಈ ಸಮಾಜವನ್ನು ಒಂದು ಮಾನವ ದೇಹವೆಂದು ಕಲ್ಪಿಸಿಕೊಂಡರೆ ಅವರು ಈ ದೇಹದ ಮೂಲೆ ಮುಡುಕುಗಳನ್ನೂ-ಅದರ ಎಲ್ಲ ಮರ್ಮಸ್ಥಾನಗಳೂ ಸೇರಿದಂತೆ-ಮುಟ್ಟಿ ಮಿಸುಕಾಡಿಸಿ ನೋಡಿ ಕಥೆಯಾಗಿಸಿದ್ದಾರೆ ಎನ್ನಬಹುದು. ಅದರ ಒಂದು ಕಿರು ಮಹಾದರ್ಶನ ಈ ಕಥೆಯಲ್ಲಾಗುತ್ತದೆ. ಬರಿ ವಿವರಗಳಲ್ಲಿ ಅಲ್ಲ; ಕಥೆಯಾಗುವ ಅದರ ಆ ಅನನ್ಯ ಹದದಲ್ಲೂ.

ಈ ಕಥೆ ತಾನು ಹೊಗುವ ಈ ಸಮಾಜದ 'ಹಿರಿಯ'ರೊಬ್ಬರ ಧೂಳು ತಿನ್ನುತ್ತಿರುವ ಪುರಾತನ ಮನೆಯಲ್ಲೆಲ್ಲ ತಟಕಾಯಿಸುತ್ತಾ, ಗಂಡು ಹೆಣ್ಣೆನ್ನದೆ ಅದರ ಸದ್ಯದ ಎಲ್ಲ ವಯೋಮಾನಗಳ ಸದಸ್ಯರ ಚಾಲೂ ಚಹರೆಗಳನ್ನು ಜೀವಂತವಾಗಿ ಓಡಿದಿಡುತ್ತಲೇ ಅವುಗಳ ಮೂಲಕ ಆ ಮನೆಯ-ಮನೆತನದ ಚರಿತ್ರೆಯನ್ನು ಕಟ್ಟಿಕೊಡುವ, ಅದರೊಳಗಿಂದಲೇ ದಟ್ಟ ವಿಷಾದವನ್ನು ಹುಟ್ಟಿಸುವ ಪರಿ ಯಾರನ್ನಾದರೂ ಬೆರಗುಗೊಳಿಸುವಷ್ಟು ಪ್ರಬುದ್ಧ ಕಲೆಗಾರಿಕೆಯಿಂದ ಕೂಡಿದೆ. ಅಲ್ಲಿನ ತಣ್ಣನೆಯ ಆವರಣದಲ್ಲಿ ಒಂದು ತಣ್ಣನೆಯ ಭೇಟಿಯ ಮೂಲಕ ಸುಮ್ಮನೆಂಬಂತೆ, ಆ ಮಹಾಮನೆಯ ಕಂಬಗಳೂ ಸೇರಿದಂತೆ ಅಲ್ಲಿನ ಗಾಳಿ-ಬೆಳಕುಗಳಿಂದಲೂ ಒಂದರೊಳಗಿಂದ ಒಂದು ಬಿಚ್ಚಿಕೊಳ್ಳುವ ವಿವರಗಳೇ ತಮಗೆ ಗೊತ್ತಿಲ್ಲದಂತೆಯೇ ಕೊನೆಯಲ್ಲಿ ಒಂದು ದಟ್ಟ ಕತೆಯಾಗಿ ಪರಿಣಮಿಸುವಲ್ಲಿನ ಕಥೆಗಾರಿಕೆಯ ಬೆಡಗಿನ ಬಗ್ಗೆ ನಾನು ಇಲ್ಲಿ ಹೇಳುತ್ತಿರುವುದು. ಮೇಲೆ ಚರ್ಚಿಸಿದ ಮೂರು ಕಥೆಗಳಲ್ಲಿದ್ದಂತೆ ಇಲ್ಲಿ ಯಾವುದೇ ನಾಟಕವಿಲ್ಲ; ಕುತೂಹಲ ಕೆರಳಿಸುವ ಘಟನಾವಳಿಗಳಿಲ್ಲ. ಎಲ್ಲ ತಣ್ಣಗೆ-ಆಳು ಹೆಂಗಸೊಬ್ಬಳನ್ನು ಕಂಬಕ್ಕೆ ಕಟ್ಟಿ ಜಪ್ಪುವ ಘಟನೆಯೂ ಸೇರಿದಂತೆ-ನಡೆದುಹೋಗುತ್ತದೆ, ಕೊನೆಗೂ 'ಕಾಪಿಗೆ ಬಪ್ಪಿರಲೆ' ಎಂದು ಕರೆವ ಮನೆಯ ಸೊಸೆ ತಾರಾಮತಿಯ ಆಹ್ವಾನದಂತೆ, ಎಷ್ಟು ಓಡಿಸಿದರೂ ಮತ್ತೆ ಮತ್ತೆ ಜಗುಲಿಗೆ ಬಂದು ಕರಾ ಕರಾ ಎಂದು ಮನೆಯ ಹಿರಿಯಜ್ಜಿ ಮೀನಾಕ್ಷತ್ತೆಯನ್ನು ಕಾಡುವ ಕಾಕಿಗಳನ್ನು ಮನೆಯ ಸದ್ಯದ ಪಡಪೋಶಿ ಯಜಮಾನ ನರಸಿಂಹ ಒಮ್ಮೆ ಜೋರಾಗಿ ಕೈಬೀಸಿ ಓಡಿಸಿದಂತೆ, ಅದನ್ನು ಕಂಡು ಆಕೆ 'ಒಂದು ಬೀಸಿದ್ದೇ ಎಲ್ಲ ಎಲ್ಲಿದ್ದೋ? ಪುಡ್ಜೋ! ಎನ್ನುತ್ತಾ ಬೀರುವ ಚಿಟಿಚಿಟಿ ನಗೆಯಂತೆ, ಮಗು ಪ್ರಕಾಶ ಮಾಣಿ ಪಡು ಹೆಬ್ಬಾಗಿಲಿನಲ್ಲಿ ಓಡಿಕಡ್ಡಿಯ ಬಿಲ್ಲಿನಲ್ಲಿ ಓಡಿಕಡ್ಡಿ ಬಾಣ ಬಿಡುತ್ತಿದ್ದಷ್ಟೇ ತಣ್ಣಗೆ.

ಈ ತಣ್ಣನೆಯ ಪರಿಣಾಮವನ್ನುಂಟು ಮಾಡಲು ಅಲ್ಲಿ ಎಂತೆಂತಹ ಚಿಕ್ಕಚಿಕ್ಕ ಕಥೆಗಳು ಅನಾವರಣಗೊಳ್ಳುತ್ತವೆ! ಎಷ್ಟೊಂದು ಪರಿಯ ದಾಂಪತ್ಯಗಳು, ಅವುಗಳ ದುರಂತ ಚಿತ್ರಗಳು! ಈ ಕಥೆಗಳಲ್ಲಿ ಗಿರಿಜಾಮಣಿ, ಕಾಶಿಯ ಗಂಡಂದಿರಿಬ್ಬರನ್ನೇ 'ಪೋಂಕು' (ಪೇತಲಾಂಡಿಗಳು?)ಗಳೆಂದು ವರ್ಣಿಸಲಾಗಿದ್ದರೂ ಇಲ್ಲಿ ಬರುವ ಗಂಡಸರೆಲ್ಲರೂ-ದರ್ಪದ ಜಮೀನ್ದಾರ ಅಪ್ಪಣ್ಣಯ್ಯನೂ ಸೇರಿದಂತೆ-ಒಂದಲ್ಲ ಒಂದು ರೀತಿಯಲ್ಲಿ ಪೋಂಕುಗಳಂತೆಯೇ ಕಾಣಿಸುವುದು ಈ ಕಥೆಯ ಯಶಸ್ಸಿನ ಗುಟ್ಟಾಗಿದೆ. ಇದಕ್ಕೆ ಕಾರಣ, ಇಲ್ಲಿ ಸ್ತ್ರೀಲೋಕ ತನ್ನೆಲ್ಲ ದಮನಿತ ಶಕ್ತಿ-ಸಾಮರ್ಥ್ಯಗಳನ್ನೂ, ತನ್ನೆಲ್ಲ ವೈವಿಧ್ಯದೊಂದಿಗೆ ಹೊರಚೆಲ್ಲಿ ಗರಿಗೆದರಿ ನಿಂತಿದೆ. ಇಲ್ಲಿ ಈ ದಮನಕ್ಕೆ ಕಾರಣವಾಗಿರುವುದು ಈ ಹೆಂಗಸರ ಮೇಲೆ ಹೇರಲಾಗಿರುವ ಅವರೊಲ್ಲದ ಗಂಡಂದಿರ ಸಾಮಾಜಿಕ ಭಾರ: ದಾಂಪತ್ಯವೆಂಬ ಸಾರ್ವಜನಿಕ ಪ್ರದರ್ಶನದಲ್ಲಿನ ಹಿಂಸೆ. ಇದಕ್ಕಾಗಿ ಎಲ್ಲರೂ ಒಳಕ್ಕೋ ಹೊರಕ್ಕೋ ಕಣ್ಣೀರಿಡುವವರೇ; ಅದನ್ನು ಒರೆಸಿಕೊಳ್ಳುವುದರ ಭಾಗವಾಗಿ ವಿವಿಧ ಅವತಾರಗಳನ್ನು ತಾಳುವವರೇ! ಗಂಡನ ಪ್ರೇಯಸಿಗೆಂದು ಹಾಲು ಕಾಯಿಸಿ ಕೊಟ್ಟು ಕಳಿಸಿ ಅವರು ಮಲಗುವ ಕೋಣೆಗೆ ಇರುವೆ ಬಿಡುವ ಮೀನಾಕ್ಷತ್ತೆಯಿಂದ ಹಿಡಿದು ಪರಸ್ಪರ ಹಾದರದ ಅನುಮಾನಗಳ ನೆರಳಲ್ಲೇ ಸಂಬಂಧಗಳ ಆಟವಾಡುತ್ತಾ, ಸಾರ್ವಜನಿಕ ಮರ್ಯಾದೆಯ ಪ್ರಶ್ನೆ ಬಂದಾಗ ಎಲ್ಲ ಬಿಟ್ಟು ವಿಕಾರವಾಗಿ ಸ್ಫೋಟಿಸುವ ಹಲವು ಹೆಂಗಸರವರೆಗೆ. ಇದೇ ಕಥೆಯ ವಿಕಟ ಸತ್ಯ-ಸೌಂದರ್ಯಗಳನ್ನು ಸೃಷ್ಟಿಸಿರುವುದು ಕೂಡ. ಹಾಗಾಗಿಯೇ ಇವರಲ್ಲಿ ಒಂದು ಹೆಂಗಸು-ತನ್ನ ದಾಂಪತ್ಯದ ವಿಷಮತೆಯ ಬಗ್ಗೆ ಹೇಳಿಕೊಳ್ಳಲಾಗದ ಸಭ್ಯತೆಗೆ ಸಿಕ್ಕಿ ಕಸ ಬಿದ್ದಂತೆ ಕಣ್ಣೊರೆಸಿಕೊಳ್ಳುತ್ತಲೇ 'ತಾನೂ ಒಬ್ಬ ಗಂಡಸೇ ಎಂಬಷ್ಟು ವ್ಯಥವಾಗಿ' ಹೇಳುವುದು ಹೀಗೆ : 'ಹೆಂಗಸರ ಪಂಚಾತಿಕೆ ಎಷ್ಟು ಬುಡ ಹರಡಿದರೂ ಅರ್ಥ ಆವಂಥದಲ್ಲ. ಅವು ಗಂಡಸರ ಹಾಂಗಲ್ಲ. ಗಂಡಸರು ಹೀದ'. ಈ ಸ್ತ್ರೀಲೋಕದ ಸಮಸ್ಯೆಯ ಸೂಚನೆ ಇಲ್ಲೇ ಇದ್ದಂತಿದೆ: ಈ ಹೆಣ್ಣು ಸಮಾಜದ ನೋಟವೂ ಗಂಡು ನೆಲೆಯದ್ದೇ ಆಗಿಬಿಟ್ಟು ಅದರ ಬಾಗಿಲುಗಳು ಮುಚ್ಚಿಬಿಟ್ಟಿವೆ.

ವೈದೇಹಿಯವರು ಈ ವಿಕಟ ಸತ್ಯ-ಸೌಂದರ್ಯಗಳ ಕಥೆಯನ್ನು ಹೇಳುವುದು ಮೀನಾಕ್ಷತ್ತೆ ಮನೆಯ-ಆದರೆ ಆ 'ಊರ ಸಮಾಜ'ದ ಎಲ್ಲರ ಕುಟುಂಗಳ ಶುಭ ಸಮಾರಂಭಗಳಿಗೆ ಒದಗುವ-ಭವ್ಯ ಆರತಿ ತಟ್ಟೆ ಮೇಲಿನ ಸುಳಿಯುಂಡೆಗಳು ಕಳುವಾದ ಪ್ರಸಂಗದ ಹಿನ್ನೆಲೆಯನ್ನು ಒಂದು ನೆಪವಾಗಿಟ್ಟುಕೊಂಡು. ಅದೂ ಆ ತಟ್ಟೆಯು ಅದರ ಒಡೆಯರ ಮನೆಯು ಭೂ ಸುಧಾರಣೆ ಶಾಸನಗಳ ಪರಿಣಾಮವಾಗಿ ಸೂಳೆಮನೆಯನ್ನು ಸೇರಿ ಈಗ ಆ ಮನೆಯ ಸದ್ಯದ ವಾರಸುದಾರ 'ಬಾಗಿ ಸುರುಟಿಹೋಗಿ' ಅಬ್ಬೇಪಾರಿಯಂತಾಗಿರುವ ಅದರ ಚರಿತ್ರೆಯ ತಣ್ಣನೆಯ ವಿಷಾದದ ವ್ಯಾಖ್ಯಾನ ಬರೆಯುತ್ತಾ. ಸಾಂಪ್ರದಾಯಿಕ ಹೆಣ್ಣು ಸಮಾಜದಲ್ಲಿ ಆರತಿ ಮತ್ತು ಆರತಿ ತಟ್ಟೆಯ ಮಹತ್ವವನ್ನರಿತವರಿಗೆ ಈ ಕಥೆ ಅದರ ಸುತ್ತ ಹುತ್ತಗಟ್ಟಿಕೊಳ್ಳುವ ವಿಚಿತ್ರ ವಿನ್ಯಾಸ ವೈದೇಹಿಯವರ ಕಥೆಗಾರಿಕೆಯ ವಿನ್ಯಾಸದ ಅನನ್ಯತೆಯನ್ನೂ ಸೂಚಿಸುವಂತಿದೆ

ಎಂಬುದು ಗೊತ್ತಾಗುತ್ತದೆ. ಹಾಗಾಗಿ ಈ ಕಥೆಯ ವ್ಯಂಗ್ಯದ ಚೂಪು ಓದುಗರಿಗೆ ತಾಗುವುದು ಈ ಕಥೆಯ ಕೇಂದ್ರ ವ್ಯಕ್ತಿ ಮೀನಾಕ್ಷತ್ತೆಯ ಪ್ರಕಾರ ಆರತಿ ಹಾಡೊಂದರಲ್ಲಿ ಬರುವ 'ಚಂದಗೋಪ'ನೆಂದರೆ ಯಾರು ಎಂಬುದನ್ನು ಹೇಳುವ ಈ ಮಾತುಗಳಲ್ಲಿ:

"ಮೀನಾಕ್ಷತ್ತೆ ಮಟ್ಟಿಗೆ ಚಂದವಾಗಿ ಕಾಂಬದೆಂದರೆ ಯಂತ ಮಾಡಿಯೆ? ಉಂಡಿಯ? ತಿಂದಿಯ? ಅಂತ ಗಂಡ ಕೇಂತಿದ್ರೆ ಸೈ. ಅವ ಚಂದಗೋಪ. ರಾತ್ರಿ ಗುಲಾಬಿ ಬಂದ್ ಹೆಬ್ಬಾಗಿಲ ಕೋಣೆಯಾಗೆ ಪ್ರತಿಷ್ಠಾಪನೆ ಆಪ್ಸಮಿಗೆ ಮೀನಾಕ್ಷತ್ತೆ ಕೆಲ್ಸ ಮುಗ್ಸಿ ಒಲೆಗೆ ಸೆಗಣಿ ಬಳಿಯೂ ಹೊತ್ತು. ಅಪ್ಪಣ್ಣಯ್ಯ ಒಳಗೆ ಬಂದ್ 'ಇದಕ್ಕೆಲ್ಲ ಜನ ಇಟ್ಕಂಬುಕಾಗ್ದಾ? ಇನ್ನೂ ನೀನೇ ಯಾಕೆ ಮಾಡುದು?' ಅಂಬರು. 'ಈಗ ಬೆನ್ನ ನೋವ್ ಹ್ಯಾಂಗಿತ್? ಅಡ್ಡಿಲ್ಯ? ಬೇಕಾರೆ ನಾಳೆ ಡಾಕ್ಟ್ರನ್ ಕರ್ಸುವ.' ಅಂಬರು. ಆಗ ಮೀನಾಕ್ಷತ್ತೆಯ ಮುಖ ಕಾಣ್ಕ್, ಅಗಲ ಆರತಿ ತಟ್ಟೆಯೇ... ಅದು ಯಂಥ ಖುಷಿಯೋ. ಮುಚ್ಚಿಟ್ಟದ್ ಒಂದು ಗಿಂಡಿ ಹಾಲು ಕೊಟ್ 'ಕುಡ್ಕಂಡೇ ಹೋಪಿರಲೇ. ಅವ್ರು ಬಂದ್ ಎಷ್ಟ್ ಹೊತ್ತಾಯ್ತ್' ಅಂಬಳು. 'ಅವ್ಳಿಗೂ ಕಳ್ಸಿಕೊಟ್ಟೆ...' ಅಂತೇಳಿ ನಾಚಿ ನಿಂತಬ್ಳೆ. ಅಪ್ಪಣ್ಣಯ್ಯ ಚೊರ್ರ ಹಾಲು ಕುಡ್ದ್ ಅಲ್ಲಿಂದ ಹೊರಡ್ತಿದ್ರ್, (ಅಲ್ಲಿದ್ ಇರುವೆ ಕತೆ ಅಲ್ಯಾದ) ಒಟ್ಟಾರೆ ಮೀನಾಕ್ಷತ್ತೆ ಮಟ್ಟಿಗ್ ಅವ್ನೇ ಚಂದಗೋಪ... ಸುಳ್ಳೆ?"

ಈ ಮಾತಿನೊಂದಿಗೇನೂ ಕಥೆ ಮುಗಿಯುವುದಿಲ್ಲ. ಓದುವವರ ಎದೆ ಹಿಂಡುತ್ತಾ ಸಾಕಷ್ಟು ಮುಂದುವರೆಯುವುದು. ಮೀನಾಕ್ಷತ್ತೆಯ ಒಡಲತಾಪ ಕಥೆಯ ಒಡಲತಾಪವೇ ಆಗಿ ಏಕೀಭವಿಸಿ ಕಥೆ ಬೆಳೆದು ಬಾಳುವ ಪರಿ ಅನುಪಮವಾದದ್ದು. ಅದೇ ಈ ಕಥೆಯ ಅನನ್ಯತೆ; ವಿಶೇಷ ಶಕ್ತಿ.

* * *

ವೈದೇಹಿಯವರ ನಾನು ಬಹು ಇಷ್ಟಪಟ್ಟ ಇನ್ನೆರಡು ಕಥೆಗಳೆಂದರೆ 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಹಾಗೂ 'ಸೌಗಂಧಿಯ ಸ್ವಗತಗಳು'. ಇವು ಈ ಮೇಲೆ ಚರ್ಚಿಸಿದ ಮೂರು ಕಥೆಗಳಂತೆ ಅವರ ಆಪ್ತ ಸಮಾಜಕ್ಕಂಟಿಕೊಂಡ ಕಥೆಗಳಲ್ಲ. ಅವರ ಊರ/ಊರವರ ಕಥೆಗಳು. ಹಾಗಾಗಿ ಸಹಜವಾಗಿಯೇ ಈ ಎರಡೂ ಕಥೆಗಳಲ್ಲಿ ಕಥೆಗೂ ಕಥೆಗಾರ್ತಿಗೂ ನಡುವೆ ಒಂದು ಭಾವನಾತ್ಮಕ ಅಂತರವಿದೆ. ಇದು ಕಥೆಗಳು ಸಾಮಾಜಿಕವಾಗಿ ಹೆಚ್ಚು ಹರಡಿಕೊಳ್ಳಲು ನೆರವಾಗಿದೆ. ವಿಶೇಷವಾಗಿ 'ಗುಲಾಬಿ ಟಾಕೀಸ್...' ಕಥೆಯಲ್ಲಿ. ಆದರೂ 'ಸೌಗಂಧಿಯ ಸ್ವಗತಗಳು' ಹೆಚ್ಚು ಖಾಸಗಿ ಭಾವನೆಗಳ ಮೂಲಕವೇ ತನ್ನ ಪರಿಣಾಮವನ್ನು ಸ್ಥಾಪಿಸಿಕೊಳ್ಳುವುದಾದರೂ, ಅದರ ಬೇರುಗಳು ಇರುವುದು ಒಂದು ದೊಡ್ಡ ಸಮಾಜದ ಉದ್ದಗಲಗಳಲ್ಲೇ; ಅದರ ರಾಜಕೀಯತೆಯಲ್ಲೇ ಎಂಬುದನ್ನು ನಾವು ಗಮನಿಸದಿರಲಾಗದು. ಅಂದರೆ ನಾನು ಇಲ್ಲಿ ಹೇಳುತ್ತಿರುವುದೇನೆಂದರೆ, ಈ ಮೊದಲು ಚರ್ಚಿಸಿದ ಕಥೆಗಳು ಹೆಚ್ಚು ಕೌಟುಂಬಿಕ ನೆಲೆಯವಾದರೆ ಇವು ಹೆಚ್ಚು ಸಾಮಾಜಿಕವಾದವು. ಎಂದು.

ನಾನು ಬಹು ಇಷ್ಟಪಟ್ಟ 'ನಟಿ' ಕಥೆಯೂ ಒಂದು ಕೌಟುಂಬಿಕ ಕಥೆಯೇ ಆದರೂ, ಅದು ಅದರ ನಡುಗೆಯಲ್ಲಿ ಅವರಾಚೆಗೂ ಹೆಜ್ಜೆಗಳನ್ನು ಇಡುತ್ತದೆ. ತನ್ನ ದುರಂತಾಂತ್ಯದ ಪರಿಣಾಮಶೀಲತೆಯ ಮೂಲಕ. ಹೆಣ್ಣು ಲೋಕದ ಸರಳ ಆನಂದಗಳ ಹೊರ ಚಿತ್ರ ಕೊಡುತ್ತಲೇ ಈ ಕಥೆ ಒಳಕ್ಕೆ ತಿರುಗಿ ಓದುಗರಿಗೆ ಉಂಟು ಮಾಡುವ ಆಘಾತ ಒಂದು ರೀತಿಯಲ್ಲಿ ನಾಟಕೀಯವೆನಿಸಿದರೂ ಇಲ್ಲಿ ಅದು ಅಂತಿಮವಾಗಿ ಆಂಟಿ-ಕ್ಲೈಮ್ಯಾಕ್ಸ್ ಎನ್ನುವುದೇ ನಿಜ. ಕ್ಲೈಮ್ಯಾಕ್ಸ್ ಆಗುವಂತೆ ಕಥೆಯನ್ನು ಕಟ್ಟಿರುವ ಪರಿ ಕಥೆಗಾರ್ತಿಯ ಕಥನ ಪ್ರತಿಭೆಗೆ ದ್ಯೋತಕವಾಗಿದೆ. ಕಥೆಯ ಅಂತ್ಯದಲ್ಲಿ ಕಥೆಯೇ ಮುಗುಚಿಕೊಳ್ಳುವ ಬೆರಗುಗೊಳಿಸುವ ತಂತ್ರದ ದೃಷ್ಟಿಯಿಂದ ಇದು ಲಂಕೇಶರ 'ನಿವೃತ್ತರು' ಕಥೆಯನ್ನು ನೆನಪಿಸುವುದಾದರೂ, ಈ ಕಥೆ ತನ್ನದೇ ಒಂದು ಸಾಂಸ್ಕೃತಿಕ ವಾತಾವರಣವನ್ನು ನಿರ್ಮಿಸಿಕೊಳ್ಳುವ ಮೂಲಕ ತನ್ನದೇ ಕಾಲುಗಳ ಮೇಲೆ ನಿಂತ ಸ್ವಂತಿಕೆಯನ್ನೂ ತೋರುತ್ತದೆ. ನಟನೆ ಇತರರ ಪಾತ್ರಗಳದ್ದಾದರೂ ಅದು ತನಗೇ ಗೊತ್ತಿಲ್ಲದಂತೆ ತನ್ನ ಪಾತ್ರವನ್ನೂ ಪ್ರವೇಶಿಸಿ ಆಡುವ ಆಟದ ಹಿಂದಿನ ನಿಗೂಢತೆಯನ್ನು ಈ ಕಥೆ ಅತ್ಯಂತಿಕವಾಗಿ ಹೇಳುವುದು ಮತ್ತೆ ದಾಂಪತ್ಯದ ಕರ್ಮ ಕಥೆ(ಗಳ)ಯನ್ನೇ.

ಹಾಗೆ ನೋಡಿದರೆ ವೈದೇಹಿಯವರ ಬಹುಪಾಲು ಎಲ್ಲ ಕಥೆಗಳೂ (ಹೀಗೆ ನಾನು ಹೇಳಲು ಕಾರಣ, ಅವರ ಎಲ್ಲ ಕಥೆಗಳನ್ನೂ ನಾನು ಓದಲಾಗಿಲ್ಲ ಎಂಬುದೇ ಆಗಿದೆ) ಹೇಳುವುದು ದಾಂಪತ್ಯದ ತೊಡಕುಗಳ ಕಥೆಗಳನ್ನೇ. ಈಗ ಸಾಮಾಜಿಕವೆಂದು ನಾನು ವಿಂಗಡಿಸಿದ 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಕಥೆಗೂ ಒಂದು ರೀತಿಯಲ್ಲಿ ಕಾರಣವಾಗುವುದು ದಾಂಪತ್ಯದ ಒಂದು ತೊಡಕೇ. ಲಿಲ್ಲಿಬಾಯಿಯ ಗಂಡ ಕಲಾಯಿ ನಾಯಕ 'ಯಾರ ಮೇಲೋ(ಇನ್ಯಾರ ಮೇಲೆ?) ಸಿಟ್ಟು ತೀರಿಸಿಕೊಳ್ಳುವಂತೆ ತವರವನ್ನು ಪಾತ್ರೆಗಳೊಳಗೆ ತಿಕ್ಕಿ ತೀಡುತ್ತಾ, ಸಿಟ್ಟಿಗೇಳುವ ಗುಣವನ್ನೇ ಕಳೆದುಕೊಂಡು' ಅವಳ ಕಲ್ಪನೆಯ ಬದುಕಿಗೆ ನಾಲಾಯಕ್ ಆಗಿ ಹೋಗಿ, ಅವಳು ಅವನನ್ನು 'ಉದ್ಧಾರ'ವಾಗಿ ಬರಲು ಬೊಂಬಾಯಿಗೆ ಹೊತ್ತುಹಾಕಿ ಎಷ್ಟೋ ವರ್ಷವಾಗಿ ಅವನು ನಾಪತ್ತೆಯಾಗಿದ್ದ. ಹಾಗಾಗಿ ಅವಳ ಬದುಕು ಅವಳ ಕಲ್ಪನೆಗೆ ತಕ್ಕಂತೆ ಗರಿಗೆದರುವುದು ಆನಂತರದಲ್ಲಿಯೇ. ಅವಳು ಮುಂದೆ ತನ್ನ ಪಾಡಿಗೆ ಸುಮ್ಮನೆ ತನ್ನ ಸುಖದಲ್ಲಿ ಮಲಗಿದ್ದ ಊರನ್ನು ಕಣ್ತೆರೆಸಿಕೊಂಡು ಮೈಮುರಿದು ಎದ್ದೇಳುವಂತೆ ಮಾಡಿದ-ಅದೇ ಬೊಂಬಾಯಿ ಜಾದೂ ಫಲವಾಗಿ ಊರಿನಲ್ಲಿ ಸ್ಥಾಪಿತವಾದ-ಗುಲಾಬಿ ಟಾಕೀಸಿನ ಲೇಡೀಸ್ ಗೇಟ್ ಕೀಪರ್ ಆಗಿ ಆ ಊರಿನ ಮಧ್ಯಮ ವರ್ಗಗಳ ದಾಂಪತ್ಯದ ಬಿಗು ಸೂತ್ರಗಳನ್ನೇ ಸಡಿಲಿಸಿದ ರೀತಿಯನ್ನು ವೈದೇಹಿಯವರು ಹೇಳುವ ರೀತಿ ಅವರ ಕಥೆಗಾರಿಕೆ ಇನ್ನೊಂದು ವಿಶಿಷ್ಟ ಮುಖವನ್ನು ಪರಿಚಯಿಸುವಂತಿದೆ.

ಟಾಕೀಸು ಬಂದ ಮೇಲೆ ಆ ಊರಿನ ಚಾಲೂ ಚಹರೆಗಳು ಮತ್ತು ಊರ ಜನರ-ವಿಶೇಷವಾಗಿ ಹೆಂಗಸರ-ಭಾವ ಭಂಗಿಗಳು ಸಂಪೂರ್ಣ ಬದಲಾಗಿ ಆ ಊರ ಗಂಡು ಸಮಾಜ ನಿಧಾನವಾಗಿ ತನ್ನ ನೈತಿಕ ಸ್ಥೈರ್ಯವನ್ನು ಕಳೆದುಕೊಳ್ಳುತ್ತಾ ಹೋಗುವ

ಸೂಕ್ಷ್ಮಗಳನ್ನು ಕಥೆ ಹೇಳುವ ರೀತಿ ವೈದೇಹಿಯವರ ಕಥೆಗಾರಿಕೆಯ ಇನ್ನೊಂದು ಮುಖ ಎಂದೆನಲ್ಲ, ಅದಕ್ಕೆ ಸಾಕ್ಷಿಯಂತಿದೆ. ಲಿಲ್ಲಿಬಾಯಿ ಮೇಲು ಸಂಪಾದನೆಗಾಗಿ ಹಿಡಿವ ಅಡ್ಡದಾರಿಯ ಅನೈತಿಕತೆಯಲ್ಲಿ ಪಾಲುದಾರರಾಗುವ ಜವಾಬ್ದಾರಿಯನ್ನು ಈ ಹೆಂಗಸರು ಗಂಡಸರ ಹೆಗಲಿಗೆ ವರ್ಗಾಯಿಸುವ ಜಾಣ್ತನದ ಚಿತ್ರಣವಂತೂ ವೈದೇಹಿಯವರ ಕಥೆಗಾರಿಕೆಯ ಅಮೃತ ಗುಣಕ್ಕಷ್ಟೇ ಸಾಧ್ಯವಾಗುವಂತಹದ್ದು :

"ಏನು ಇಷ್ಟು ಜನ ಸಿನಿಮಾಕ್ಕೆ ಹೋಗುವುದೇ? ದುಡ್ಡೆಂದರೆ ಹುಣಸೆಬೀಜವೆಂತ ಮಾಡಿದ್ದೀರಾ ಹೇಗೆ?"–

ಆಗ ಈ ದೊಡ್ಡ ಸ್ವರದ ಎದುರಿದ್ದವರು ಕಂಬ ಚಿವುಟುತ್ತಾ ಅಷ್ಟರೊಳಗೆ ಹೆದರಿ ತುಂಬಿನಿಂತ ಕಣ್ಣುಗಳಿಂದಾಗಿ ನೇರ ನೋಡದೆ, "ಇಲ್ಲ ಅಷ್ಟು ಕೊಡಬೇಕಾದ್ದಿಲ್ಲ. ಲಿಲ್ಲೀಬಾಯಿ..."

ಈ ವ್ಯವಸ್ಥೆ ಗಂಡಸರಿಗೆ ಅಡ್ಡಿಲ್ಲ ಎಂದು ಕಾಣುತ್ತದೆ. ಅವರು ಎಷ್ಟು ಜನಕ್ಕೆ ಸಾಕೆಂದರೋ ಅಷ್ಟು ಜನಕ್ಕೆ ದುಡ್ಡನ್ನು 'ಜಾಗ್ರತೆ ಆಚೆ ಈಚೆ ಕಾಣದೆ ಸೀದ ಹೋಗಿ ಬನ್ನಿ'– ಎಂಬ ಹುಶಾರಿನ ಮಾತಿನೊಂದಿಗೆ ನೀಡತೊಡಗಿದರು.

ಇದು ಸಾಂಕ್ರಾಮಿಕವಾಗಿ ಹರಡತೊಡಗಿ, ಅಂತಿಂಥವರ ಮನೆಗೆ ಹೆಣ್ಣು ಕೊಡುವುದಿಲ್ಲ ಅಥವಾ ತರುವವರಲ್ಲ ಎಂದು ಎಲ್ಲಿಲ್ಲದ ಜರ್ಬು ತೋರುವಂಥ ಹೆಂಗಸರೂ ಇದಕ್ಕೆ ಮಾತ್ರ ಬಹಳ ಬೇಗ ಒಗ್ಗಿಹೋದರು. ಮನೆಯಿಂದ ಹೊರಡುವಾಗ ಮೂರು ಜನರಿದ್ದ ಅವರು ಟಾಕೀಸು ಹತ್ತಿರವಾಗುತ್ತಲೇ ಆರು ಜನರಾದರೆ ಅವರಾದರೂ ಏನು ಮಾಡಿಯಾರು? ಮಕ್ಕಳ ಕಣ್ಣು ತಪ್ಪಿಸಿ ಹೊರಡುವುದೆಂದರೆ ತಪ್ಪುವುದು ಅವರ ಕಣ್ಣೇ. ಅವರಿಗೆ ಗೊತ್ತೇ ಆಗದಂತೆ ಮಕ್ಕಳು ಹಿಂಬಾಲಿಸುತ್ತಿದ್ದವು.

'ಲಿಲ್ಲಿ ಮೂರು ಟಿಕೆಟ್ ಮಾಡಿಸಿದರೆ ಸಾಲದೆ?'–ಎಂದು ಕೇಳುವಲ್ಲಿವರೆಗೂ ತಯಾರಾದರು. ಅದಕ್ಕೆ ಎಂದೂ ಮುಖ ನೋಡಿ ಅಭ್ಯಾಸವಿಲ್ಲದ ಲಿಲ್ಲಿ ಗೋಡೆ ನೋಡುತ್ತಾ 'ಸಾಕಲ್ಲ. ಸರಸರ ನಡೆಯಿರಿ. ಟಾಕೀಸು ಕವುಂಚಿ ಹೋಗುವುದಿಲ್ಲ. ಗುಲಾಬಿ ದಿವಾಳಿ ಆಗುವುದೂ ಇಲ್ಲ' ಎನ್ನುವಳು. ಮುಂದಿನದು ಅವರವರ ಅಂತರಂಗಕ್ಕೆ ಗೊತ್ತಿರುವಂಥದ್ದು.

ಈ ಅಂತರಂಗದ ಆಟಗಳ ಭಾಗವಾಗಿಯೇ ಊರ ಹೆಂಗಸರು ಗಂಡಸರ ಮುಂದೆ ಹೆರುವುದೇ ಎಂದು ನಾಚಿ ನಿರ್ಲಕ್ಷಿಸಿದ್ದ ಅಸ್ತ್ರವನ್ನು, ಲಿಲ್ಲಿಬಾಯಿ ಸೂಲಗಿತ್ತಿ ಕೆಲಸವನ್ನು ನಿರ್ಲಕ್ಷಿಸಿ ಟಾಕೀಸಿನ ಕಥೆಗಳನ್ನು ಹರಡುತ್ತಾ ತಮ್ಮನ್ನು 'ಜಾಗೃತ'ಗೊಳಿಸುತ್ತಾ ಹೋದಂತೆ ಅದೇ ಹೆಂಗಸರೇ ಗಂಡಸರ ಮುಂದೆ ಹೆರುವ ಸಂಕೋಚವನ್ನು ಬಿಟ್ಟು ಸುಣ್ಣ ಬಣ್ಣಗಳಿಂದ ಕಂಗೊಳಿಸುವಂತೆ ಮಾಡುತ್ತಾರೆ. ಇದರ ಮುಂದಿನ ಹೆಜ್ಜೆಯಾಗಿ 'ಮಕ್ಕಳಾಗದಂತೆ ಮಾಡಿಸಿಕೊಳ್ಳುವ' ಜಾಗೃತಿಯನ್ನೂ ಹೊಂದುತ್ತಾರೆ! ಒಂದು ಸಣ್ಣ ಊರಿನಲ್ಲಿ ಆಗಬಹುದಾದ ಇದಕ್ಕಿಂತ ದೊಡ್ಡ ಕ್ರಾಂತಿ ಅಥವಾ ಜಾಗೃತಿ ಇನ್ನೊಂದಿದೆಯೆ? ಆದರೆ ಇದು ಅವನತಿಯೋ, ಜಾಗೃತಿಯೋ?

ಎಂಬ ಬೆರಗಿನ ಸೂಕ್ಷ್ಮ ದ್ವಂದ್ವದೊಂದಿಗೆ ಬೆಳೆಯುವ ಈ ಕಥೆಯ ಈ ದ್ವಂದ್ವದ ಒಡಲ ಉರಿ ಹರಡುತ್ತಾ ಒಮ್ಮೆ ಭಗ್ಗನೆ ಹತ್ತಿಕೊಂಡು ಉರಿಯಲಾರಂಭಿಸಿದ್ದು ಹೀಗೆ :

ಒಂದು ರೀತಿಯಲ್ಲಿ ಊರು ಹುರುಪಿನಿಂದ ಸಾಗುತ್ತಿರುವಾಗ, ಹೆಂಗಸರು ಸಂಜೆಯ ಹೊತ್ತು ಸಿನಿಮಾಕ್ಕೆ ಹೋಗುವುದಿದ್ದರೆ ಬೇಗ ಹಾಲು ಕರೆಯುತ್ತಾ, ಅವತ್ತು ಮಾತ್ರ ತಡವಾಗಿ ಮನೆ ಸೇರುವಂತೆ ಕಾಣುವ ದನಗಳಿಗೆ ಬೈಯುತ್ತಾ, ಕನ್ನಡಿ ಮುಂದೆ ಪೌಡರು, ಕ್ಲಿಪ್ಪು, ಮುಳ್ಳು, ಬಾಚಣಿಗೆಗಳಲ್ಲಿ ಕಳೆದುಹೋಗುತ್ತಿರುವಾಗ,

ಲಿಲ್ಲಿಬಾಯಿಯ ದಾರಿ ಸುಗಮವಾಗಿ ಸಾಗುತ್ತಾ ಮನೆಯೆದುರಿನ ತೆಂಗು ಮೇಲೆ ಬರುತ್ತಿರುವಾಗ, ಒಗೆಯುವ ಕಲ್ಲಿನ ಬುಡದ ಬಾಳೆ ಗೊನೆಹಾಕಿ, ಮರಿಹಾಕಿ, ಹಿಂಡಲಾಗಿರುವಾಗ; ಅವಳ ಕುಡುಕುಗಳಲ್ಲಿ ಎಣ್ಣೆ ಕೂತು 'ಚೊಕ್ಕ ಮಾಡಬೇಕು' ಎಂಬ ನೆಲೆನಿಂತ ಜೀವನದ ಅವರ ಚಿಂತನೆಗಳು ಅವಳ ಮನದಲ್ಲಿರುವಾಗ ಬೊಂಬಾಯಿಗೆ ಹೋದ ನಾಯಕನ ನೆನಪೇ ಅಳಿಸಿಹೋಗುವಂತಹ ಬದುಕನ್ನು ಅವಳು ಸಿನಿಮಾದಲ್ಲಿ ಅದ್ದಿಕೊಂಡು ಬಾಳುತ್ತಿರುವಾಗ–

ಟಾಕೀಸಿನ ಮ್ಯಾನೇಜರ ಕೊರತಿಯನ್ನು ರೂಮಿನೊಳಗೆ ಕರೆದದ್ದನ್ನು ಲಿಲ್ಲಿ ಸ್ವತಃ ಕಂಡುಬಿಟ್ಟಳು.

ಹೀಗೆ ಮತ್ತೆ ಈ ಸಾಮಾಜಿಕ ಕಥೆಯ ನಿರ್ಣಾಯಕ ಚಲನೆಗೆ ಸನ್ನೆಯಾಗುವುದು ಒಂದು ಹಾದರದ ಪ್ರಸಂಗವೇ! ಇಲ್ಲಿಗೆ ಕಥೆಯನ್ನು ಮುಟ್ಟಿಸಲು ಕಥೆಗಾರ್ತಿಯು ಹಿಡಿದಿರುವ ಮೇಲಿನ ನಿರೂಪಣೆಯ ದಾರಿಯ ವಿವರಗಳನ್ನು ಗಮನಿಸಿ. ಮನುಷ್ಯ ಪ್ರಜ್ಞೆಯ ಹರಿವಿನ–'ಜಾಗೃತಿ'ಯ–ದಿಕ್ಕಿಗೆ ನೈತಿಕತೆಯ ತರ್ಕದ ಹಂಗಿಲ್ಲವೇನೋ! ಹಾಗಾಗಿಯೇ ಮುಂದೆ ಲಿಲ್ಲಿ ತಾನು ಎಂದೂ ನೈತಿಕತೆಯ ಎಲ್ಲೆಯನ್ನು ದಾಟಿಲ್ಲವೆಂದು ಹೇಳುವುದನ್ನು ಅದೇ ಸಮಾಜ ಬಾಯಿ ಮುಚ್ಚಿಕೊಂಡು ಕೇಳುವಂತೆ ಮಾಡಬಲ್ಲವಳಾಗಿದ್ದಾಳೆ. ಆದರೆ ಇದರ–ಅವಳ ವಿಕ್ಷಿಪ್ತಗೊಂಡ ನೈತಿಕತೆಯ–ಪರಿಣಾಮವಾಗಿ ಸಿರಿವಂತ ಮಂಜುನಾಥಯ್ಯನ ಹೆಂಡತಿ ಮತ್ತು ಆಕೆಯ ವಾರೆಗಿತ್ತಿಯವರು ಪಡುವ ಪಾಡು ಯಾರಿಗೂ ಬೇಡ! ಅದೇ–ಲಿಲ್ಲಿಯ ಆ ಭಂಡತನವೇ–ಅವರನ್ನು ಸಾಮಾಜಿಕವಾಗಿ ಚಿಂತಿಸುವಂತೆ–'ಜಾಗೃತಿ'ಗೆ ಮುಖಾಮುಖಿಯನ್ನಾಗಿ–ಮಾಡಿದೆ:

... ಎಷ್ಟು ನೂರು ಮುಡಿ ಅಕ್ಕಿ ಹುಟ್ಟುವಳಿ ಇದ್ದರೇನಾಯಿತು? ಮನೆಯಲ್ಲಿ ತಾವು ಬಗ್ಗಿದ ಬೆನ್ನು ಎತ್ತದೆ ಗೇಯ್ದರೇನಾಯಿತು? ಹಾಗಾದರೆ ಹೆಚ್ಚಿಗೆ ಒಂದು ದಮ್ಮಡಿಯಾದರೂ ತನ್ನ ಬಳಿ? ಇರುವಷ್ಟನ್ನಾದರೂ ತಾನು ಬೇಡಿ ಪರದೇಶಿಯಂತೆ ಕೇಳಿ ತೆಗೆದುಕೊಳ್ಳಬೇಕಾಯಿತಲ್ಲವೇ? ...

ಯಾವತ್ತೂ ಅನಿಸದಿದ್ದುದೆಲ್ಲ ಅವರಿಗೆ ಅನಿಸತೊಡಗಿತು... 'ಒಟ್ಟಾರೆ ಅತಂತ್ರವಾದೆವಲ್ಲ; ಕೈತುಂಬಾ ದುಡ್ಡನ್ನು ಗಂಡಸರು ಕೊಟ್ಟಿದ್ದರೆ ಅವರ ಮರ್ಯಾದೆ ಉಳಿಯುತ್ತಿತ್ತು' ಎಂದಾಗ ವಾರಗಿತ್ತಿಯಲ್ಲೊಬ್ಬಳು 'ಸುಮ್ಮನಿರಿ ಅಕ್ಕ, ಊರವರು ಏನು ಹೇಳುತ್ತಾರೆ?'

'ಮಂಜುನಾಥಯ್ಯನವರ ಮನೆಯವರು ಅನ್ನುತ್ತಾರೆ. ನಮ್ಮ ಹೆಸರು ಹೇಳುತ್ತಾರೆಯೇ? ಅಂದ ಮೇಲೆ ನಮ್ಮ ಮರ್ಯಾದೆ ಎಲ್ಲಿ ಹೋಯಿತು?' ಎಂದು ಹೇಳಿದಳು–ಒಂದು ನಮೂನೆ ನಾವು ಹೇಗೂ ಯಾವ ಲೆಕ್ಕಕ್ಕೂ ಇಲ್ಲದವರಲ್ಲವೆ ಎಂಬಂಥ ಕಹಿ ಬೆರೆಸಿ. ಈ ಕಹಿ ಎಷ್ಟು ದಿನ ಎಲ್ಲಿತ್ತೋ. ಆದರೂ ಇದು ಸಮನಲ್ಲ–ಎಂದು ಹಲುಬಿದರು ಮಂಜುನಾಥಯ್ಯನ ಹೆಂಡತಿ.

ಹೀಗೆ ಸ್ತ್ರೀ ಅಸ್ಮಿತೆಯ ಪ್ರಶ್ನೆಯನ್ನೂ ಅದರೆಲ್ಲ ಸಂಕೀರ್ಣತೆಗಳೊಂದಿಗೆ ಸೂಕ್ಷ್ಮವಾಗಿ ತಾಕುತ್ತಾ ಕಟ್ಟಿಕೊಳ್ಳುತ್ತಾ ಹೋಗುವ ಈ ಕಥೆ ಚರಿತ್ರೆಯ ಒಂದು ಸಣ್ಣ ಮಿಸುಕಾಟವನ್ನು ಹೇಳುವ ಸಣ್ಣ ಪ್ರಯತ್ನದಂತೆ ಕಂಡರೂ ಚರಿತ್ರೆಯ ನಿಷ್ಕಾರುಣ್ಯವನ್ನು ಹೇಳುತ್ತಾ ಒಂದು ದೊಡ್ಡ ಕಥೆಯಾಗಿಯೇ ಪರಿಣಮಿಸುತ್ತದೆ: ಚರಿತ್ರೆಯ ಚಲನೆಗೆ ಕಾರಣರಾದವರನ್ನೂ ಚರಿತ್ರೆ ಹೇಗೆ ತನ್ನೊಳಕ್ಕೆ ನುಂಗಿನೊಣೆದು ಮುಂದೆ ಸಾಗುತ್ತದೆ ಎಂಬುದನ್ನು ಲಿಲ್ಲಿಬಾಯಿಯ ದರ್ಬಾರು ಮುಗಿದು ಅವಳು ತಾನು ಹುಟ್ಟು ಹಾಕಿದ ಚರಿತ್ರೆಯ ಮಿಸುಕಾಟದ ಒಡಲಿನಲ್ಲಿಯೇ ಕರಗಿಹೋಗುವ ಚಿತ್ರಣವನ್ನು–ಲಿಲ್ಲಿಬಾಯಿ ಕುರಿತು ಆ ಹೊತ್ತಿಗೆ ಕಥೆಗಾರ್ತಿ ಬೆಳೆಸಿಕೊಂಡಿದ್ದ ಕಕ್ಕುಲಾತಿಯೊಂದಿಗೇ– ನೀಡುತ್ತಾ:

ಆದರೆ ಲಿಲ್ಲಿಯನ್ನು ಊರು ಬಿಟ್ಟು ಹಾಕುತ್ತದೆಯೇ? ಆಸ್ಪತ್ರೆಯಲ್ಲಿ ಹೆರಿಗೆ ಮುಗಿಸಿ ಮನೆಗೆ ಬಂದ ಬಾಣಂತಿ–ಮಗುವಿನ ಮೂರು ತಿಂಗಳ ಚಾಕರಿಗೆ ಲಿಲ್ಲಿಯೇ ಬರಬೇಕಾಯಿತು. ಆದರೆ ಎಷ್ಟು ಸಲ? ಎರಡು ಮೂರು ಮಕ್ಕಳಾದದ್ದೇ ಹೆಚ್ಚಿನವರು ಗುಟ್ಟಿನಲ್ಲಿ ಮಕ್ಕಳಾಗದಂತೆ' ಮಾಡಿಸಿಕೊಂಡೇ ಆಸ್ಪತ್ರೆಯಿಂದ ಹೊರಬೀಳುತ್ತಿದ್ದರು. ಕಾಲ ಎಷ್ಟು ಬೇಗ ದಾಟಿತು!

ಆದರೆ ಲಿಲ್ಲಿಬಾಯಿ ತನ್ನ ದಾಂಪತ್ಯದ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ನಡೆಸಿದ ಕಾರುಬಾರು ಊರಿನ ಕುಟುಂಬ ವ್ಯವಸ್ಥೆಯ ಸೂತ್ರಗಳನ್ನೇ ಬದಲಿಸಿದ ಕಥೆಯಾಗಿ ಮೂಡುವ ಪರಿ ಈ ಕಥೆಯ ಹೆಗ್ಗಳಿಕೆ:

ಈಗ ಟಾಕೀಸಿನಲ್ಲಿ ಲಿಲ್ಲಿ ಇಲ್ಲದಿದ್ದರೇನಾಯಿತು? ಊರಿನ ಹೆಂಗಸರಿಗೆ ಮುಂಚಿನಷ್ಟು ಭೀತಿಯೂ ಇಲ್ಲ. ಮುಂಚಿನಷ್ಟು ಖಾಲಿ ಕೈಯೂ ಇಲ್ಲ. ಸಂಜೆ ಸಿನಿಮಾಕ್ಕೆ ಹೋಗುತ್ತೇವೆ ಎಂದು ದೃಢವಾಗಿ ಹೇಳುವಷ್ಟು ಧೈರ್ಯ ಕಲಿತಿದ್ದಾರೆ. ಗಂಡಸರು ಗದರಿದರೆ, 'ಅದೇನು ಒಂದು ಸಿನಿಮಾ ನೋಡಲು ನಾಲಾಯಕಾದವೇ? ಒಳ್ಳೇ ಕತೆ! ನೀವು ಹೇಳಿದಂತೆ ಕೇಳುತ್ತಾ ಕೂತರೆ ಹೇಗೂ ಕುಣೆಸೀರಿ!'– ಎಂದು ತುರುಬಿಗೆ ಮುಳ್ಳು ಕುತ್ತುತ್ತಾ ಉತ್ತರ ಕೊಡಲು ತಯಾರಾಗಿದ್ದಾರೆ. ದುಡ್ಡು? ಪೂರಾ ಸತ್ಯಂಭಟ್ಟರಾದರೆ ಸತ್ತು ನಿಗುರಿ ಹೋದೇವು ಎನ್ನುತ್ತಾ ಮೂರು ಜನ ಹೊರಟರೆ ನಾಲ್ಕು ಜನ ಹೋಗುತ್ತೇವೆಂದು ಜಾಸ್ತಿ ವಸೂಲಿ ಮಾಡುವುದನ್ನು ಮತ್ತು ಹೆಚ್ಚಿಗಿರುವುದನ್ನು ಕೂಡಿಟ್ಟು ಮತ್ತೆ ಯಾವತ್ತಾದರೂ ಉಪಯೋಗಿಸುವುದನ್ನು ಕಲಿತಿದ್ದಾರೆ.

ಬದಲಾವಣೆ ಚರಿತ್ರೆಯ ಬರೀ ಭೌತಿಕ ಮುಂಚಲನೆಯಲ್ಲ. ಅದು ಒಂದು ಬೆಲೆ–ಮೌಲ್ಯಗಳ ಅಪಮೌಲ್ಯೀಕರಣ–ತೆತ್ತೇ ಸಾಕಾರಗೊಳ್ಳುವುದೆಂಬ ನಿಷ್ಠುರ ಸತ್ಯವನ್ನು

ಬೇಸಾಯ ಬೋಣಾಭಯದ ಇತ್ಯಾದಿ ಈ ಕಡೆಯ ಕೃಷಿ-ನೀರಾವರಿಯೋಗಗಳಿಂದಾಗಿ ಹೆಚ್ಚಿವೆ. ಅದಕ್ಕಿಂತ ಮುಖ್ಯವಾಗಿ ಈ ಕಡೆಗಳಿಂದ ಮುಂದೆ ಬರುವವರ ಕಡೆಗಾಂತಿಯ ಕರುಣಾಕರ ಹೆಚ್ಚು ಅನುಕೂಲವಾಗಿದೆ. ಗಾಡಿಗೆ ಈ ಹಳ್ಳಿ ಬಂದಿದೆ. ಅಲ್ಲಿನ ಧೂಪದ ಮರ. ಅಲ್ಲಿ ಸಂತೆಗೆ ಗಾಡಿಯವರು ಮತ್ತು ಬೇರೆ ದರ್ಶನಕ್ಕೆ ಬಂದ ಜನರೆಲ್ಲ ತಂಗುತ್ತಿದ್ದು, ಮುಖ್ಯವಾಗಿ ಶಾಲೆಯ ಮಕ್ಕಳೆಲ್ಲ ಬಿಸಿ ಹಾರಾಗಿಯದ್ದು, ಹಾಳು ಮಾಡಲು ಯತ್ನಿಸಿದ ಕಡೆಯದು, ಎಷ್ಟೋ ಸಲ ಹಾನಿಯಾಗಿದ್ದು, ತೆಂಗಿನಮರ ಬಾಗಿಲಿನ ಹೊರಗಿನ ಬಳಿ. ಬಾಳೆಗಿಡ. ಮುಖ್ಯ ಬೆಳೆ. ಗಿಡ ತೆಂಗಿನ ಬೆಳೆಗಳಲ್ಲಿ ಬೆಳೆಸಿದರೆ ಬರಗಾಲ ಮುಂದೆಯೂ ಬರದಲ್ಲಿ ಕಷ್ಟದ ಜಾನುವಾರಿಗೆ ಅಥವಾ ನೀರಾವರಿಗೆ ಬರುವ ಮಾನವರಿಗೆ ಸಾಲ ಕಡಿಮೆ ಬಂದು ರೀತಿಯಲ್ಲಿ ಬಾಯಿಪಾಠ ಹೇಳಿಕೊಟ್ಟಂತೆ ಶಾಂತವಾಗಿದ್ದ, ನಿಂತಿದ್ದಂತೆ ಇದ್ದ ಗಿಡ ತರುವಾದರೂ ಅದರಿಂದ ಮತ್ತು ತೆಂಗಿನಿಂದ ಸ್ವಂತ ಶಾಲೆಗಳಿಂದ ಹಕ್ಕಿ ಹಾಡಲಾರಂಭಿಸಿದ್ದು—

ಅಪ್ಪಯವರೆಗೆ ಮುತ್ತಪ್ಪನಂತೆ ಮೊಣಕ್ಕೆ ಹಾರಿಸಿಕೊಂಡು ನಿಂತಿದ್ದ ಧೂಪದ ಮರಕ್ಕೆ ಬಡವನ ಹೆಚ್ಚು ಬಿದ್ದಾಗ ಜನ ಇಲ್ಲೇನೋ ನಡೆಯುತ್ತಿದೆ ಎಂದು ಎದ್ದುಬಂದು. ಏನು ಎಂದು ಕೇಳಿದಾಗ ಅಲ್ಲಿ ಹಾಕಿರು ಆಗುತ್ತದೆ ಅಂತಾಯಿತು: ಕಷ್ಟವಾದ್ದು ಯಾರೆಂದರೆ ಬಂದವ್ರು ಬಹಳ ವರ್ಷಗಳ ಹಿಂದೆ ಬೊಂಬಾಯಿಗೆ ಓಡಿಹೋದ ಗಂಗಾಧರ ಎಂಬುವವನ ಮತ್ತಾಗ ಈ ಗಂಗಾಧರನು, ಊರಿನ ಮೇಲೆ ಪ್ರತಿವರ್ಷವೂ ಎಳೆದು ತರುತ್ತಿದ್ದ ಮೇರೆ ಬೇರೆ, ಮತ್ತೆ ಬೇರೆ ಕಾಣುವಂತೆ ಸೌರದ ಬಳಸಿಕೊಂಡು, ಗಂಗಾಧರನಲ್ಲಿ ಹಾಡು ಮೇಲೆ ಹಾರಿಸಿಕೊಂಡು ಬಿಟ್ಟ ಕೈಬೀಸಿ ಊರೆಲ್ಲ ತಿರುಗುತ್ತಾ ಮತ್ತೆ ಬೊಂಬಾಯಿಗೆ ಮರಳುತ್ತಿದ್ದ ಆಕೆ ಊರು ಮನೆಯಲ್ಲಿ ತನ್ನೊಂದು ಕೇಳೆ ನಡೆಯಬೇಕೆಂದು ಅಪೇಕ್ಷಿಸುತ್ತಿದ್ದು ಅದರ ಫಲ ಈ ಹಾಕಿರು.

ಈ ಪ್ರಾಣ ನಾವು ಇವತ್ತು ಯಾವುದನ್ನು ಆಧುನಿಕತೆ ಎಂದು ಕರೆಯುತ್ತೇವೆಯೋ ಅದರ ಮೂಲವನ್ನೂ, ಆಗಮನವನ್ನೂ, ಪ್ರತಿ ಹಳ್ಳಿಯಲ್ಲೂ, ಪ್ರತಿ ಜಾತಿಯಲ್ಲೂ, ಪ್ರತಿ ವರ್ಗದಲ್ಲೂ ಗುರುತಿಸಬಹುದು. ಪಿಡುಗಿನ ರೀತಿ ಮುಂದೆ ಕಡೆಗೆ ಬಂದು ಅದರ ಶಾಂತತೆಯನ್ನು ಬದಲಿಸುತ್ತ ಹೋಗುತ್ತದೆ. 'ಆಧುನಿಕ' ಎಂಬ ಶಬ್ದವನ್ನು ಎಲ್ಲ ಬಳಸಿದೆ. ಅದರ ಅರ್ಥ ಮೇಲಿನ ದೃಷ್ಟಿ ನೆಲೆಸಿಕೊಳ್ಳುತ್ತಾ ಕಣ್ಣಿನಲ್ಲಿ ಪರಿವರ್ತನೆಯು. ಆಧುನಿಕತೆಯು ಆಗಮನ ಕುರಿತ ಅನೇಕ ಕಥೆಗಳು ಬಂದಿವೆ. ಅದರಲ್ಲಿ ಹೆಚ್ಚಿನವು ಗಂಡಸರು ಬರೆದದ್ದಕ್ಕೂ ಇರಬೇಕು. ಅವುಗಳಲ್ಲಿ ಬಹುಪಾಲು-ವಿಶೇಷವಾಗಿ ಹೆಣ್ಣಿನ ಪಾಲಿಗೆ-ಮಾರಕವಾಗಿ ಕಂಡಿರಬೇಕು? ಆದರೆ ಈ ಕತೆ ಅದಕ್ಕೆ ಅಪವಾದವೆಂಬಂತೆ ಆಧುನಿಕತೆಯನ್ನು, ತನ್ನ ಮಿತಿಯಲ್ಲೇ ಒಪ್ಪಿ ಅಪ್ಪಿಕೊಂಡಿದೆ ಅದಕ್ಕೆ ತಕ್ಕ ಹೊಡೆಯುತ್ತದೆ? ಆದರೂ ಕೊನೆಯಲ್ಲಿ ಬಂದು ಮಾತು ಹೇಳಬೇಕು. ಈ ಕತೆ ಅಲ್ಲಲ್ಲಿ ಬಂದಿರುವ ಮಂಗಳೂರಿನ ಹೆಣ್ಣುಮಕ್ಕಳು ಇದೇ ಹಾದಿಯ

ಕಥೆ 'ಹುಟ್ಟೂರ'ಯಂತೆ ಆಧುನಿಕತೆಯನ್ನು, ಅದರ ಒಳಗಿನ ಅನ್ಯಾಯವನ್ನು ಅದರ ದಾರ್ಶನಿಕ ನೆಲೆಯಲ್ಲಿ ಎದುರಾಗುವುದಿಲ್ಲ. ಇದಕ್ಕೆ ಬಹುಶಃ ಕಾರಣ ಇದು ಸ್ತ್ರೀದೃಷ್ಟಿ ಸಹಜವಾದ ನೋಟದ ಕಥೆಯಾಗಿರುವುದೇ ಇರಬಹುದು. ಆದರೆ ಇದೇನೂ ಈ ಕಥೆಯ ಸತ್ವವನ್ನಾಗಲೀ, ಮಹತ್ವವನ್ನಾಗಲೀ ಕಿಂಚಿತ್ತೂ ಕುಗ್ಗಿಸಿಲ್ಲ. ಲೋಹಿಯಾ ಹೇಳಿದ ತನ್ನ ಮಿತಿಗಳಲ್ಲೇ ಪರಿಪೂರ್ಣವಾದ ಸೌಂದರ್ಯ ಎಂದರೆ-ಶ್ರೀರಾಮನಂತೆ, ಗಾಂಧಿಯಂತೆ-ಇದೇ ಇರಬೇಕು!

'ಸೌಗಂಧಿಯ ಸ್ವಗತಗಳು' 'ಗುಲಾಬಿ ಟಾಕೀಸು...' ಕಥೆಯ ಮುಂದುವರಿಕೆಯೇ ಎಂದು ಹೇಳಬೇಕು. ಆದರೆ ಗುಲಾಬಿ ಟಾಕೀಸಿನ ಲೀಲಾಳ ಸ್ತ್ರೀ ಒಂದು ಸಮೂಹದ ಸದಸ್ಯೆಯಾಗಿ ಹೊರನೋಟಕ್ಕೆ ಬಿಡುಗಡೆ ಹೊಂದಿರುವಳಾದರೂ ಇದು ವೈಯಕ್ತಿಕವಾಗಿ ಅವಳ ಅಂತರಂಗದ ಭಾವನೆಗಳ ನೆಲೆಯಲ್ಲಿ ಸಾಮಾಜಿಕ ತಡೆಗೋಡೆಗಳ ಮಧ್ಯೆ ಇನ್ನೂ ಬಂಧಿತಳಾಗಿರುವ ಚಿತ್ರ ನೀಡುವ ಬಹು ಸೂಕ್ಷ್ಮ ಹೆಣಿಗೆಯ-ಆದರೆ ಕೊನೆಯಲ್ಲಿ ಆ ಹೆಣಿಗೆಯ ಸೂಕ್ಷ್ಮತೆಗೆ ಕಥೆಗಾರ್ತಿಯೇ ಬಲಿಯಾಗಿರುವಂತೆ ತೋರುವ-ಕಥೆ. ಒಂದು ದೃಷ್ಟಿಯಿಂದ ಇದು ವೈದೇಹಿಯವರ ಮಟ್ಟಿಗೆ ತುಂಬ ಮಹತ್ವಾಕಾಂಕ್ಷೆಯನ್ನು ಅಭಿವ್ಯಕ್ತಿಸುವಂಥ ಕಥೆ. ಇಲ್ಲಿನ ಸೌಗಂಧಿ ಆಧುನಿಕ ಸಂವೇದನೆಯಿಂದ ದಿಟ್ಟಳಾಗಿದ್ದಾಳಾದರೂ ಆ ದಿಟ್ಟತನದ ಸಾಮಾಜಿಕ ಪ್ರಕಟಣೆಯ ದಾರಿಗಳು ಕಾಣದೇ ಅಸಹಾಯಕಳಾಗಿ ಪ್ರೀತಿಯ ನೆಪದಲ್ಲಿ, ರಕ್ಷಣೆಯ ಹೆಸರಿನಲ್ಲಿ ಸಾಮಾಜಿಕವಾಗಿ ಬಂಧಿತಳಾಗಿ ಒಳಒಳಗೇ ಒದ್ದಾಡುತ್ತಿರುವವಳು. ದ್ವಂದ್ವ ಭಾವಗಳಿಗೂ ಒಳಗಾಗಿ ತಲ್ಲಣಿಸುವವಳು. ಹಾಗಾಗಿಯೇ ಈ ಕಥೆಯ ಘಟನೆಗಳು ಸಮಾಜದ ಅಂಚುಗಳನ್ನು, ಹರವನ್ನು ಹರಡಿಕೊಂಡಿದ್ದರೂ ಬೇರು ಮಾತ್ರ ಅಂತರಂಗದ ಗುಹೆಯಲ್ಲೇ ಮೊಳೆಯುತ್ತ ತನ್ನದೇ ಕಲ್ಪನಾ ಲೋಕವನ್ನು ಸೃಷ್ಟಿಸಿಕೊಂಡು ಘಟನೆಗಳಿಗೆ ಚೈತನ್ಯ ರವಾನಿಸಲಾಗಿದೆ.

ಮಧ್ಯಮ ವರ್ಗದ ಹೆಣ್ಣು ಮಗಳೊಬ್ಬಳ ಅಂತರಂಗದಲ್ಲಿ ನಡೆಯುವ ಅರ್ಧ ಬಿಡುಗಡೆಯ ಸಂಕಟದ ನಾಟ್ಯಕಲಾಪವಿದು. ಅರ್ಧ ಬಿಡುಗಡೆಯ ಈ ಸಂಕಟ ಅವಳನ್ನು ಮಾತ್ರವಲ್ಲ, ಅವಳನ್ನು ಹುಟ್ಟಿಸಿ ಸಲಹುತ್ತಿರುವ ಆಕೆಯ ಕುಟುಂಬವನ್ನು, ಅದರ ಸಹವರ್ತಿಯಾದ ಸಮಾಜವನ್ನೂ ಆಗಿ ಇಲ್ಲಿ ನಿರೂಪಿತವಾಗಿರುವ ರೀತಿ ಕಥೆಯನ್ನು, ಮರೆಯಲಾಗದ ಒಳದನಿಯ ಹುಡುಗಿಯೊಬ್ಬಳ ಹೋರಾಟ ಆಲೋಚನೆಗಳ ಕಥೆಯಾಗಬಹುದಾದ ಸಾಧ್ಯತೆಯೊಂದರಿಂದ ಮೇಲೆತ್ತಿದೆ. ಆ ಮೂಲಕ ಈ ಸೌಗಂಧಿಯ ಸ್ವಗತಗಳಿಗೆ ಹೋಲಿಕೆಗಳೂ ಸೇರಿದಂತೆ ಬೇರೆ ಅರ್ಥ ಸಹಾನುಭೂತಿಯ ಸ್ಪಂದನಕ್ಕೆ ಪಾತ್ರ ಮಾಡುತ್ತದೆ. ಏಕೆಂದರೆ, ಸೌಗಂಧಿಯರು ನಮ್ಮ ಮನೆಗಳಲ್ಲಿ, ನಮ್ಮ ಸುತ್ತಮುತ್ತಲೇ ಎಷ್ಟು ಜನ ಇಲ್ಲ? ಹಾಗಾಗಿಯೇ ಅವಳ ಖಾಸಗಿ ಭಾವನೆಗಳು ಇಲ್ಲಿನ ಆವರಣದಲ್ಲಿ ಅನ್ಯೀಕರಣಗೊಳ್ಳುವುದಿಲ್ಲ. ಹಾಗೇನಾದರೆ ಸಮಾಜವೇ ಅನ್ಯೀಕರಣಗೊಳ್ಳಬೇಕಾಗುತ್ತದೆ.

ಸೌಗಂಧಿ ಸುಂದರಿಯೇ ಹೌದು. ಆದರೆ ಅವರಮ್ಮನ ಪ್ರಕಾರವೇ ಅವಳಿಗೆ ಹುಡುಗರನ್ನು ಕಣ್ಣಲ್ಲೇ ಕೆಡುವುವ ಛಾತಿಯಿಲ್ಲದ ಕಾರಣದಿಂದ ಮದುವೆಯಾಗದೆ ಉಳಿದಿದ್ದಾಳೆ! ಹಾಗಾದರೆ ತಾನು ಏನು ತಾನೆ ಮಾಡಬೇಕಿತ್ತು ಎಂದು ಸೌಗಂಧಿ ಯೋಚಿಸಿ ತಳಮಳಗೊಳ್ಳುತ್ತಾಳೆ. ಇದಕ್ಕೆ ಅವರ ಅಪ್ಪನ ಪ್ರತಿಕ್ರಿಯೆ: 'ಯಾರನ್ನಾದರೂ ಪ್ರೀತಿ–ಗೀತಿ ಮಾಡು... ಜಾತಿ–ಗೀತಿ ಕೆಲಸ ನೋಡಿಕೊಂಡು, ಕೇಳಿದವರು ಹೌದೇ ಎಂದು ಸೈಗುಟ್ಟಬೇಕು. ಅಂತವನನ್ನು ರಾಜಾರೋಷವಾಗಿ ಮನೆ ಮುಂದೆ ಚಪ್ಪರ ಹಾಕಿ...' ಇದೆಲ್ಲ ನೈತಿಕವಾದರೆ ಸೌಗಂಧಿಯ ಖಾಸಗಿ ಭಾವನೆಗಳೂ ನೈತಿಕವೇ ಅಲ್ಲವೇ? ಹಾಗಾಗಿಯೇ ಅವಳಿಗೆ ಅಪ್ಪನನ್ನು ಚೀರಿ ಕೇಳಬೇಕೆನಿಸುತ್ತದೆ: 'ಅಪ್ಪಾ, ಪ್ರೀತಿ ಎಂದರೆ ಮೊದಲು ಏನು ಹೇಳಿ.'

ಸೌಗಂಧಿಯಾದರೂ ಏನು ಮಾಡಿಯಾಳು? ಅವಳೆಲ್ಲಿಗೆ ಹೋದರೂ, ಎತ್ತ ಹೆಜ್ಜೆ ಇಟ್ಟರೂ ಎದುರಿಗೆ 'ರಕ್ಷಣೆ'ಯ ಅಡ್ಡಗೋಡೆಗಳೇ. ರಕ್ಷಣೆ ಬೇಕೆಂದು ಕೇಳಿದವರಾದರೂ ಯಾರು? ಅವಳು ಕೆಲಸಕ್ಕಾಗಿ ಹೊರ ಊರಿಗೆ ಬಂದು ಅಪ್ಪ ಎಲ್ಲ ಎಚ್ಚರಿಕೆಗಳೊಂದಿಗೆ ಹುಡುಕಿಕೊಟ್ಟ ವಿಧವೆಯೊಬ್ಬರ ಮನೆಯ ಆವರಣದಲ್ಲಿ ವಾಸವಾಗತೊಡಗಿದ್ದಾಳೆ. ಅವರಮ್ಮ ಕಿರಿ ಮಗಳ ಬಾಣಂತನಕ್ಕಾಗಿ ಊರಲ್ಲೇ ಉಳಿದು ಸ್ವಲ್ಪ ಕಾಲದ ನಂತರ ಬರಲಿದ್ದಾಳೆ:

...ಸೌಗಂಧಿ ಮಿಂದು ಬಂದು ಮಂಚದ ಮೇಲೆ ಕಾಲು ಚಾಚಿದಳು. ತಾನೀಗ ಏಳು ಕೋಟೆಯ ಆಚಿನ ಅರಮನೆಯಿಂದ ತಪ್ಪಿ ಹಾರಿಬಂದ ಹಕ್ಕಿ.... ಚಿಲಕ ಸದ್ದಾಯಿತು.

ಪ್ರಥಮ ಬಾರಿಗೆ ತಾನು ಒಬ್ಬಳೇ ಇದ್ದಾಗ ಕೇಳಿದ ಚಿಲಕದ ಸದ್ದು. ಎದೆಯೊಳಗೇ ಇಳಿದು ಡವಡವಗುಟ್ಟಿಸುತ್ತಿದೆಯೇಕೆ? ಮಧುರವಾಗಿ ಕಂಪಿಸುವ ಕೈಯಿಂದ ಚಿಲಕ ತೆಗೆದರೆ–

ಮನೆಯೊಡತಿ!

ಉರಿಯುವ ಬೆಂಕಿಗೆ ನೀರಿನಂತೆ ಎದುರು ನಿಂತಿದ್ದಳು.

'ಮಗೂ, ಎಷ್ಟೊತ್ತಿಗೆ ಬಂದೆ? ಏನಾದರೂ ಬೇಕೆ? ಕೇಳು. ದಾಕ್ಷಿಣ್ಯ ಬೇಡ. ರಾತ್ರಿ ಮಲಗಲು ಬೇಕಾದರೆ ನಮ್ಮ ಅಡಿಗೆ ಹೆಂಗಸನ್ನು ಕಳಿಸುತ್ತೇನೆ'.

'ಬೇಡ, ಬೇಡ'– ಮೊತ್ತ ಮೊದಲಿಗೆಂಬಂತೆ ಒಂದು ಪ್ರತಿರೋಧದ ನುಡಿಯನ್ನಾಡಿದಳು ಸೌಗಂಧಿ. 'ನನಗೆ ಹೆದರಿಕೆ ಇಲ್ಲ. ಒಬ್ಬಳೇ ಇರುತ್ತೇನೆ'.

'ಅಯ್ಯೋ ಅದು ಹೇಗಾಗುತ್ತದೆ? ರಾತ್ರಿ ಒಬ್ಬಳೇ ಇರುವುದೆಂದರೆ! ಏನು ಕುಶಾಲೆ? ನಿನ್ನ ಅಪ್ಪ ಜವಾಬ್ದಾರಿಯನ್ನು ನನ್ನ ತಲೆಗೆ ಹೊರಿಸಿ ಹೋಗಿದ್ದಾರೆ. ತಾಯಿ ಬರುವವರೆಗೆ ನಾನೇ ತಾಯಿ ಅಂತಿಟ್ಟುಕೋ. ಬೇಕಾದರೆ ನಾನೇ ಬಂದು ಮಲಗುತ್ತೇನೆ..... ಆಯಿತೇ?'.–

ಇದೆಲ್ಲ ಬೇಡವೇ ಬೇಡವೆನ್ನಲು ಪರದಾಡಿದಳು ಸೌಗಂಧಿ. ಕಡೆಗೂ–

‘ಇಲ್ಲ. ನನಗೆ ಹೆದರಿಕೆ ಇಲ್ಲ. ನೀವು ತೊಂದರೆ ತೆಗೆದುಕೊಳ್ಳುವುದೇ ಬೇಡ’ ಎಂದು ಒತ್ತಿಯೊತ್ತಿ ಹೇಳಿದಳು. ನನ್ನನ್ನು ನನ್ನಷ್ಟಕ್ಕೇ ಬಿಡಿ ಎಂದು ಸೀದ ಹೇಳುವುದು ಎಷ್ಟು ಕಷ್ಟ ಈ ಪ್ರಪಂಚದಲ್ಲಿ!

ಆದರೆ ಅವಳಷ್ಟಕ್ಕೇ ಅವಳನ್ನು ಬಿಟ್ಟರೂ ಅವಳೇನು ಮಾಡಬಲ್ಲಳು? ತನ್ನ ಮಧ್ಯಮ ವರ್ಗದ ಪೊರೆಯಿಂದ ಹೊರಬರಬಲ್ಲಳೆ?

ಬೆಳಿಗ್ಗೆ ಹೊರಡುವಾಗ ದಪ್ಪ, ಕೈಮಗ್ಗದ ಸೀರೆಯನ್ನು ಬೇಕೆಂದೇ ಕೋಣೆಯೊಳಗಿನ ನೇಲೆಯ ಮೇಲೆ ಹರಹುವಳು. ಅಡಗಿಕೊಳ್ಳುವವರಿಗೆ ಒಂದು ಜಾಗ ಕಲ್ಪಿಸುವಂತೆ ಮತ್ತು ತಾನು ಹಾಗೆ ಮಾಡತ್ತಿರುವುದು ತನಗೂ ಗೋಪ್ಯದ ವಿಷಯವೆಂಬ ಗಪ್‌ಚಿಪ್ಪಿನಲ್ಲಿ.

ಮರ್ಯಾದಸ್ತ ಮನೆಯವಳು ತಾನು. ಮರ್ಯಾದೆ ಬಿಡುವ ತಾಕತ್ತಿಲ್ಲದವಳು. ಯಾರಾದರೂ ತೆಗೆಯಬೇಕಷ್ಟೆ. ತನಗೀಗ ಅನುಭವಬೇಕು. ಆವರಣದ ಕಾಪಟ್ಯ ಕಳೆಯಬೇಕು–ಹೇಗೆಂದರೆ ಯಾರೂ ತನ್ನ ಬಗ್ಗೆ ಕೆಟ್ಟದೆಣಿಸದಂತೆ...

ವೈದೇಹಿಯವರ ಈ ಕಥೆ ಮಧ್ಯಮ ವರ್ಗದ ಹೆಣ್ಣೊಬ್ಬಳ ಅಂತರಂಗದ ಹೊಯ್ದಾಟದ ದಿಟ್ಟ ಮತ್ತು ಪ್ರಾಮಾಣಿಕ ಅಭಿವ್ಯಕ್ತಿ ಎನಿಸಿ ಅದರ ಕಟ್ಟೋಣ ಕೂಡ ಆ ಹೊಯ್ದಾಟದ ಪರಿಣಾಮಕಾರಿ ವಿನ್ಯಾಸದಲ್ಲೇ ಮೂಡಿಬಂದು ಬಹು ಒಳ್ಳೆಯ ಕಥೆಯ ಎಲ್ಲ ಲಕ್ಷಣಗಳನ್ನು ಹೊಂದಿದೆಯಾದರೂ, ಈ ‘ಮರ್ಯಾದೆ’ಯ ಪ್ರಶ್ನೆ ಈ ಹೊಯ್ದಾಟದ ಆವರಣದಲ್ಲೇ ಒಂದು ಇತ್ಯರ್ಥಕ್ಕೆ ಬರಲೊಲ್ಲದೇಕೆ ಎಂಬ ಪ್ರಶ್ನೆಯೂ ಇಲ್ಲಿ ಏಳುತ್ತದೆ. ಯೋಚನೆ ಮಾಡಿದಾಗ ಕಥೆಗಾರಿಕೆಗೆ ಸಂಬಂಧಪಟ್ಟಂತೆಯೇ ಒಂದು ದೊಡ್ಡ ಪ್ರಶ್ನೆ ಏಳುತ್ತದೆ: ಕಥೆಯ ರಚನಾತ್ಮಕತೆಗೆ ಅದರ ಓಟದ ಲಯ–ರಭಸಗಳು ರೂಪಿಸುವ ಅದರದ್ದೇ ಆದ ಒಂದು ಸ್ವಾಯತ್ತತೆ ಇದೆಯೇ? ಆ ಸ್ವಾಯತ್ತತೆ ಕೂಡ ಕಥೆಗಾರ/ಗಾರ್ತಿಯ ಕಾಣ್ಕೆಯ ಆತ್ಯಂತಿಕ ಬಲದ ಮಿತಿಯೊಳಗೆ ಮಾತ್ರ ಕ್ರಿಯಾಶೀಲವಾಗಿರಬಲ್ಲದಂಥಹುದೇ? ಕಥೆ ಮತ್ತು ಕಥೆಗಾರ್ತಿಯ ತರ್ಕ ಬೇರೆ ಬೇರೆಯಾಗಿ ಇರಲು ಸಾಧ್ಯವೇ? ಈ ಕಥೆಯ ಈ ಮುಕ್ತಾಯ ಈ ಪ್ರಶ್ನೆಗಳ ಮೇಲೆ ಹೆಚ್ಚು ಬೆಳಕು ಚೆಲ್ಲುವಂತಿದೆ:

ಯಾರೋ ಬಾಗಿಲು ತಟ್ಟಿದ ಸದ್ದು,

ಸೌಗಂಧಿಗೆ ಎಚ್ಚರವಾಗಿ ಎದ್ದು ಕುಳಿತಳು.

ಆ ಸದ್ದಿಗಾಗಿ ದಿನವಿಡೀ ಕಾದಿದ್ದಳಲ್ಲವೆ?

ಅಂತೂ ತನ್ನ ಮನೆಯ ಬಾಗಿಲೂ ಮುಂಜಾವದ ಮಂಜಿನಲ್ಲಿ ಯಾರದೋ ಬರವನ್ನು ತಿಳಿಸುವಂತಾಯಿತು.

ಸೌಗಂಧಿ, ಯುಗಯುಗದಿಂದ ಹಸಿದಂತೆ ಆ ಸದ್ದನ್ನು ಆಲಿಸುವ ಆಸೆಯಿಂದ ಮತ್ತೆ ಮಲಗಿದಳು. ಸದ್ದು ಜೋರಾಗುತ್ತಾ ಬಂತು. ಮೆಲ್ಲನೆ ಅವಳ ಹೆಸರನ್ನು ಕರೆದಂತೆ...

ಮತ್ತೆ ಎದ್ದು ಕುಳಿತಳು ಸೌಗಂಧಿ. ಯಾರಿರಬಹುದು? ಕಂಪನವನ್ನೇ ಮರೆತು

ಯಂತ್ರದಂತಾಗಿದ್ದ ಎದೆಯಲ್ಲಿ ಈಗ ರಕ್ತ ಸಂಚಾರ ದ್ವಿಗುಣವಾದಂತೆ... ಸೌಗಂಧಿ ತೊದಲಿದಳು. 'ಯಾರು?'

–ಅಮಲಿನಲ್ಲಿದ್ದಂತೆ ಮುಂದೆ ಬಂದಳು.

ಎಲ್ಲ ಆಕಾಂಕ್ಷೆಗಳನ್ನೂ ಒಟ್ಟುಗೂಡಿಸಿ ಮೃದುವಾಗಿ ಬಾಗಿಲು ತೆರೆದಳು.

ಅಲ್ಲಿ–

ತಂದೆ ನಿಂತಿದ್ದರು. ಹಿಂದೆ ತಾಯಿ ನಿಂತಿದ್ದಳು!

ಸೌಗಂಧಿ ಅಳಲಿಲ್ಲ.

ಸೌಗಂಧಿ ನಗಲೂ ಇಲ್ಲ,

ಮನೆಯೆದುರಿನ ರಸ್ತೆ ಕರ್‍ರಗೆ ಕತ್ತಲ ವಿಷವೇರಿ ಸತ್ತಂತೆ ನಿಶ್ಚೇಷ್ಟಿತವಾಗಿತ್ತು.

ಈ ಮುಕ್ತಾಯ ಆನೆಯ ಗರ್ಭಕ್ಕಾಗಿ ಕಾದವರಿಗೆ ಆಡಿನ ಮರಿ ಬಿದ್ದ ಅನುಭವದಂತೆ ತಬ್ಬಿಬ್ಬುಗೊಳಿಸಿದರೆ ಆಶ್ಚರ್ಯವಿಲ್ಲ. ಇದು ನಮ್ಮ ನವೋದಯದ ತೀರಾ ಸಾಧಾರಣ ಕಥೆಯೊಂದರ ಸುಲಭ ಭಾವನಾತ್ಮಕ ತಿರುವಿನ ಜಾಣ ಅಂತ್ಯದಂತೆ ಕಂಡು ಇಡೀ ಕಥೆ ಒಂದು ಹಗಲುಗನಸಿನ ಹುಸಿತನದಲ್ಲಿ ಕಂತಿಹೋದಂತೆನಿಸುತ್ತದೆ. ಕೊನೆಯ ಸಾಲಿನಲ್ಲಿ ಬರುವ ರಸ್ತೆಯ ವರ್ಣನೆ ಕಥೆಯ ವರ್ಣನೆಯೇ ಆಗಿದ್ದಂತೆ ತೋರುತ್ತದೆ. ನಾನು ಇಲ್ಲಿ ಒತ್ತಿ ಹೇಳಬಯಸುತ್ತೇನೆ: ನನ್ನ ಈ ಮಾತುಗಳು ಕಥೆಯ ಅಂತ್ಯಕ್ಕೆ ಮಾತ್ರ ಸಂಬಂಧಪಟ್ಟದ್ದು. ಕಥೆಯ ಸತ್ಯ ಕೊನೆಗೆ ಸುಳ್ಳಾಗಿ ಬಿಡುವ ದುರಂತಕ್ಕೆ ಸಂಬಂಧಪಟ್ಟದ್ದು. ಇದು ವೈದೇಹಿಯವರಂತಹ ಶ್ರೇಷ್ಠ ಕಥಾ ಪ್ರತಿಭೆಯು ಅನಗತ್ಯವಾಗಿ ಆಹ್ವಾನಿಸಿಕೊಂಡ, ಅನಪೇಕ್ಷಣೀಯ ಸೋಲು. ಕಥೆಗಾರ್ತಿಯೇ ಕಥೆಗೆ ಮೋಸ ಮಾಡುವುದೆಂದರೆ? ಅದೆಷ್ಟೇ ಜಾಣತನದಿಂದ ಕೂಡಿದ್ದರೂ! ಕಥೆಯನ್ನು 'ಸ್ವಗತಗಳು' ಎಂದು ಕರೆದಿದ್ದೇನೆ ಎಂದು ಕಥೆಗಾರ್ತಿ ಹೇಳಿದರೂ!! ಏಕೆಂದರೆ ಕಥೆಯ ಒಟ್ಟು ಓಘ ಹಾಗಿಲ್ಲ. ಅಥವಾ ಇದನ್ನು ಹೀಗೂ ಹೇಳಬಹುದು: ಕಥೆಗಾರ್ತಿಯ ಆಶಯ ಮತ್ತು ಆಕೃತಿಗಳ ನಡುವೆ ಬಿರುಕುಂಟಾಗಿದೆ. ಕಥೆಯನ್ನು ಸ್ವಗತದಂತೆಯೇ ಓದುಗರು ಅರ್ಥ ಮಾಡಿಕೊಳ್ಳಬೇಕಿದ್ದರೆ ಸ್ವಗತದ ಹೊರಗೆ ನಡೆಯುವ ಇತರೆಲ್ಲ ಘಟನೆಗಳೂ ಸ್ವಗತದ ನಿರೂಪಣೆಯ ಭಾಗವಾಗಿಯೇ ಬರಬೇಕಿತ್ತು.

ಇಲ್ಲಿ ನಾನು ಸೌಗಂಧಿಯ ಕನಸನ್ನು ನನಸು ಮಾಡುವ ರೀತಿ ಕಥೆಯನ್ನು ಮುಕ್ತಾಯಗೊಳಿಸಬೇಕೆಂದು ಖಂಡಿತ ಹೇಳುತ್ತಿಲ್ಲ. ಅದು ಕಥೆಯ ಹೊರಗೆ ನಿಂತು ಪಡುವ ರೂಕ್ಷ ಅಪೇಕ್ಷೆಯಾದೀತು. ಕಥೆಯ ಅಂತ್ಯ ಹೀಗಾಗಲು ಕಥೆಯಲ್ಲಿ ಕಾರಣವಿಲ್ಲ ಎಂಬ ಕಥಾ ಮೀಮಾಂಸೆಯ ಮಾತನ್ನಷ್ಟೇ ನಾನು ಇಲ್ಲಿ ಹೇಳುತ್ತಿರುವುದು. ಇದು ವೈದೇಹಿಯವರಂತಹ ಪ್ರತಿಭಾನ್ವಿತ ಕಥೆಗಾರ್ತಿ ಇಂತಹ ದಿಟ್ಟ ಕಥನಕ್ಕೆ ಕೈಹಾಕಿ ಕಥೆಯ ಹೊರಗಿನ ಕಾರಣದಿಂದಾಗಿ ಹಿಂದೆಗೆದಂತೆ–ಆಹಾರದ ತುಂಡೊಂದನ್ನು ಸವಾಲಿನ ರೀತಿ ಬಾಯಿಗೆ ಹಾಕಿಕೊಂಡು ಅಗಿದು ಚಪ್ಪರಿಸಿಯಾದ ಮೇಲೆ ನುಂಗಲಾಗದೆ

ನೋಡುವವರ ಕಣ್ತಪ್ಪಿಸಿ ಯಾವುದೋ ಮಾಯಕದಲ್ಲಿ ಉಗುಳಲೆತ್ತಿಸುವಂತೆ-ಕಾಣುವ ಈ ದೃಶ್ಯ ಅವರ ಕಥೆಗಾರಿಕೆಯ ಸಮಗ್ರತೆಯ ಬಗ್ಗೆ ನಂಬಿಕೆ ಇಟ್ಟು ಓದುವವರಿಗೆ ಆಘಾತವುಂಟು ಮಾಡುವಂಥದ್ದು. ಇದು ಈ ಹಿಂದೆ ಉಲ್ಲೇಖಿಸಿದ ತನ್ನ ಮಿತಿಗಳಲ್ಲೇ ಪರಿಪೂರ್ಣವಾಗುವ ಸೌಂದರ್ಯಕ್ಕೆ ಸಂವಾದಿಯಾಗಿ ಲೋಹಿಯಾ ಅವರೇ ಪ್ರಸ್ತಾಪಿಸುವ ಶ್ರೀಕೃಷ್ಣನಂತಹ (ಮಿತಿಗಳಿಲ್ಲದ) ಸಮೃದ್ಧ ಸೌಂದರ್ಯ ಸೃಷ್ಟಿಯ ಅಸಮಗ್ರ ಪ್ರಯತ್ನವಾಗಿ ಕಾಣುತ್ತದೆ; ಕಾಡುತ್ತದೆ. ಈ ದೃಷ್ಟಿಯಿಂದ ವೀಣಾ ಯಲಬುರ್ಗಿ (ಶಾಂತೇಶ್ವರ) ಅವರ ಇದೇ ತರಂಗಾಂತರದ ಕಥೆಗಳ ಸ್ವಯಂಪೂರ್ಣತೆಯ ಸಾರ್ಥಕತೆಯ ನೆನಪೂ ಇಲ್ಲಿ ಆಗದಿರದು.

'ಕೊನೆಯದಾಗಿ ದಾಳಿ' ಎಂಬ ನನಗಿಷ್ಟವಾದ ಇನ್ನೊಂದು ಕಥೆಯ ಬಗ್ಗೆ ಒಂದೆರಡು ಮಾತುಗಳು. ಯು.ಆರ್. ಅನಂತಮೂರ್ತಿಯವರ 'ಮೌನಿ' ಕಥೆಯಿಂದ ಸ್ಫೂರ್ತಿ ಪಡೆದಂತೆ ತೋರುವ, ತನ್ನ ತಣ್ಣನೆಯ ನಗೆಯಿಂದಲೇ ಕಂಡಕ್ಟರನ ಆರ್ಭಟವನ್ನು ತಣ್ಣಗಾಗಿಸಿ ಅವನು ಸೋತು ಓಡಿಹೋಗುವಂತೆ ಮಾಡುವ ಈ ಕಥೆಯ ನಾಯಕಿ ವೈದೇಹಿಯವರ ತಣ್ಣತಣ್ಣಗೆ ಕೂಡ ಕಥೆ ಹೇಳಬಲ್ಲ ಕಥನಪ್ರತಿಭೆಗೆ ಸಾಕ್ಷಿಯಂತಿದೆ- ಓದುಗರಲ್ಲಿ ಈ ಕಥೆಯ ನಾಯಕಿ ಆ 'ನಗೆ ಲೌಡಿ'ಯನ್ನೊಮ್ಮೆ ಕಣ್ಣಾರೆ ನೋಡಿ ಕಣ್ತುಂಬಿಕೊಳ್ಳುವ ಕಾತುರವನ್ನುಂಟು ಮಾಡುವಷ್ಟು ಪರಿಣಾಮಕಾರಿಯಾಗಿ! ಹಾಗಾಗಿ ಈ ಕಥೆ 'ಮೌನಿ'ಯಿಂದ ಸ್ಫೂರ್ತಿ ಪಡೆದಂತೆ ಕಂಡರೂ ಇದರ ನಡೆ-ನುಡಿಗಳು ಬೇರೆಯೇ ಆಗಿ ಕಥೆಯ ಚೆಲುವು ತನ್ನದೇ ವಿಶಿಷ್ಟತೆಯನ್ನು ಪಡೆದಿದೆ.

ಇಷ್ಟೂ ನನ್ನ ಮಿತಿಯ ಓದಿನಲ್ಲಿ ವೈದೇಹಿಯವರ ನನ್ನ ಮೆಚ್ಚಿನ ನಾಲ್ಕಾರು ಕಥೆಗಳ ಬಗೆಗಿನ ನನ್ನ ಜಿಜ್ಞಾಸೆ. ಈ ಜಿಜ್ಞಾಸೆ ಸಣ್ಣ ಕಥೆಗಳನ್ನು ಕುರಿತ ಮೀಮಾಂಸೆಯನ್ನೂ ನಾನೊಮ್ಮೆ ಒಳಹೊಕ್ಕು ನೋಡಲು ಕಾರಣವಾಗಿದೆ. ಇದಕ್ಕಾಗಿ ವೈದೇಹಿಯವರಿಗೂ, ಸವಿತಾಗೂ ನಾನು ಕೃತಜ್ಞನಾಗಿದ್ದೇನೆ.

ಇನ್ನು ಈ ಮೀಮಾಂಸಾತ್ಮಕ ಜಿಜ್ಞಾಸೆಯ ಹೊರತಾಗಿಯೂ ಹೇಳಬಹುದಾದ ಕೆಲವು ಮಾತುಗಳೆಂದರೆ, ಕಥೆ ಹೇಳಲು ವೈದೇಹಿಯವರು ತಮ್ಮ ಅನುಭವವನ್ನು ಭಾಷೆಯಲ್ಲಿ ಸಾಕಾರಗೊಳಿಸಲೋಸ್ಕರ ತಮ್ಮದೇ ಎನ್ನಬಹುದಾದ, ತಮ್ಮದೇ ಸ್ತ್ರೀಲೋಕ ದೃಷ್ಟಿಯನ್ನು ತಾನಾಗಿ ತೆರೆಯಬಲ್ಲ ವಿವಿಧ ವಿನ್ಯಾಸಗಳಲ್ಲಿ ಬಾಗಿ ಬಳುಕುವಂತಹ; ಚುರುಕಾದ ಭಾಷಾ ಶೈಲಿಯನ್ನು ರೂಢಿಸಿಕೊಂಡಿರುವಲ್ಲಿನ ಕಥೆಗಾರಿಕೆಯ ಗಮ್ಮತ್ತು ಗಮನಾರ್ಹವಾದದ್ದು. ಕೆಲವು ನಿರ್ದಿಷ್ಟ ರೀತಿಯ ಕಥೆಗಳ ಪರಿಣಾಮದ ಸಾಂದ್ರತೆಗೆ ಅಗತ್ಯವಾದ ಕುಂದಾಪುರದ ಕನ್ನಡದ ಶಬ್ದ ಸಂಪತ್ತು ಮತ್ತು ನುಡಿಗಟ್ಟುಗಳನ್ನು ಬಳಸುವ ಚಾಕಚಕ್ಯತೆಯೂ ಈ ಗಮ್ಮತ್ತಿನ ಭಾಗವೇ! ಜೊತೆಗೆ ಕಥೆ ಹದವಾಗಿ ಬಿಚ್ಚಿಕೊಂಡು ತನ್ನ ಆಳದ ಎಲ್ಲ ಅರ್ಥಗಳನ್ನೂ ಹೇಳಲು ಬೇಕಾದ ಘಟನಾ ವಿನ್ಯಾಸದ ಹಿಂದಿನ ಕಲ್ಪನಾಶೀಲತೆ ಓರ್ವ ಹುಟ್ಟು ಕಥೆಗಾರ್ತಿಯ ಲಕ್ಷಣವಾಗಿ ವೈದೇಹಿಯವರ ಕಥೆಗಳಲ್ಲಿ ತಾನೇ ತಾನಾಗಿ ಕಂಗೊಳಿಸುತ್ತದೆ. ಹಾಗಾಗಿಯೇ ಇಲ್ಲಿನ

ಹೆಚ್ಚಿನ ಕಥೆಗಳಲ್ಲಿ ಪುರುಷರ ಉಸಾಬರಿ ಹೆಚ್ಚಿಗಿಲ್ಲದ ದೋಷವು ದೋಷವಾಗಿ ಕಾಣುವುದಿಲ್ಲ. ಹಾಗಾಗಿಯೇ ವೈದೇಹಿಯವರ ಸ್ತ್ರೀವಾದವು (ಅದನ್ನು ಹಾಗೆಂದು ಕರೆಯಲೇಬೇಕಾದರೆ!) ಸ್ವಯಂ ಮರುಕ ಅಥವಾ ಮೋಸಹೋದ ಹಾಹಾಕಾರಗಳಿಂದ ಪ್ರೇರಿತವಾದ ಯಾವುದೇ ರಿಯಾಯಿತಿಗಳನ್ನು ಬೇಡದೆ, ಆವೃತ ದೃಷ್ಟಿಯಿಂದ ಪ್ರಫುಲ್ಲಿತವಾದ ಆತ್ಮಾವಲೋಕನದೊಂದಿಗೆ ಹದವಾಗಿ ಬೆರೆತಿದೆ. ಆ ಮೂಲಕ ಅದು ತನ್ನದೇ ಆತ್ಮವಿಶ್ವಾಸದೊಂದಿಗೆ ತನ್ನದೇ ಹಾದಿ ಹಿಡಿದು ಪುರುಷರನ್ನು ಹದವಾಗಿ ಪಳಗಿಸಬಲ್ಲ ಸಹಜ ಸಿದ್ಧಿಯಾಗಿ ರೂಪುಗೊಂಡಿದೆ. ಹೇಗೂ 'ಹದ'ವೆಂಬುದು ವೈದೇಹಿಯವರ ಹದವನ್ನು ನಿರ್ಧರಿಸಿರುವ ಹದವಾದ ಶಬ್ದವಲ್ಲವೇ?

(ಸವಿತಾ ನಾಗಭೂಷಣ ಮತ್ತು ಆರ್. ತಾರಿಣಿ ಶುಭದಾಯಿನಿ ಅವರು ಸಂಪಾದಿಸಿರುವ ವೈದೇಹಿ ಅವರನ್ನು ಕುರಿತ ಗೌರವ ಗ್ರಂಥ 'ಇರುವಂತಿಗೆ'ಗಾಗಿ ಬರೆದ ಲೇಖನ)

ನನ್ನ ಬೇಂದ್ರೆ ಪುರಾಣ

ನನಗೆ ಬಹು ಆತ್ಮೀಯರಾದ ಗೀತಾ ವಸಂತ ಅವರು ಇದ್ದಕ್ಕಿದ್ದಂತೆ ಮೊನ್ನೆ ಒಂದು ದಿನ, ಇನ್ನು ಹತ್ತು ದಿನಗಳಲ್ಲಿ ಬೇಂದ್ರೆಯವರ ಬಗ್ಗೆ ಏನಾದರೂ ಬರೆದು ಕಳಿಸಲು ಕೋರಿದರು. ನನಗೆ ಕಷ್ಟವಾಯಿತು. ಈವರೆಗೆ ನಾನು, ಅಲ್ಲಿಲ್ಲಿ ಪರೋಕ್ಷವಾಗಿ ಬೇಂದ್ರೆಯವರ ಬಗ್ಗೆ ಒಂದೋ ಎರಡೋ ಸಾಲು ಬರೆದುದನ್ನು ಬಿಟ್ಟರೆ ಏನೂ ಬರೆದಿಲ್ಲ. ನನಗೇ ಆಶ್ಚರ್ಯವಾಗುತ್ತದೆ; ನಾನು ಈವರೆಗೆ ಕನ್ನಡ ಸಾಹಿತ್ಯದ ಬಗ್ಗೆ–ಹೆಚ್ಚಾಗಿ ಆಧುನಿಕ ಸಾಹಿತ್ಯದ ಬಗೆಗೇ–ಸುಮಾರು ಐವತ್ತು ಅರವತ್ತು ವಿಮರ್ಶಾ ಲೇಖನಗಳನ್ನು ಬರೆದಿದ್ದೇನೆ. ಬಹುಶಃ ಆಧುನಿಕ ಕನ್ನಡದ ಎಲ್ಲ ಮುಖ್ಯ ಲೇಖಕರ ಬಗ್ಗೆಯೂ ಬರೆದಿದ್ದೇನೆ. ಆದರೆ ಬೇಂದ್ರೆಯವರ ಬಗ್ಗೆ ಒಂದು ಲೇಖನವೂ ಇಲ್ಲ. ನಾನು ಯಾವ ಲೇಖನವನ್ನೂ ಅನ್ಯರ ಕೋರಿಕೆಗೆ ಹೊರತಾಗಿ ಬರೆದಿಲ್ಲ ಎಂಬುದು ನಿಜವಾದರೂ, ಯಾರಾದರೂ ಬೇಂದ್ರೆಯವರ ಬಗ್ಗೆ ಬರೆಯಿರಿ ಎಂದು ಕೋರಿದ್ದರೆ ನಾನು ಬರೆಯುತ್ತಿದ್ದೆನೆ? ಎಂಬ ಬಗ್ಗೆ ನನಗೇ ಅನುಮಾನವಿದೆ. ಏಕೆ ಈ ಅನುಮಾನ, ಈ ಸಂಬಂಧದ ನನ್ನ ಹಿಂಜರಿಕೆಯ ಮೂಲ ಯಾವುದಿರಬಹುದು? ಎಂಬ ಪ್ರಶ್ನೆಗಳ ಬಗ್ಗೆ ನಾನು ಹಲವು ಬಾರಿ ಯೋಚಿಸಿದ್ದೇನೆ. ಯೋಚಿಸಿ, ಯೋಚಿಸಿ ಏನೂ ತೋಚದೆ ಸುಸ್ತಾಗಿ ಬೇಂದ್ರೆಯವರ ಭಾವಗೀತೆಗಳ ಅಥವಾ ಅವರ ಕಾವ್ಯವಾಚನದ ಧ್ವನಿಮುದ್ರಿಕೆಗಳ ಮೊರೆ ಹೋಗುತ್ತೇನೆ. ಮತ್ತೆ ಕೆಲವೊಮ್ಮೆ ಅವರ ಕವನಗಳ ಸಾಲುಗಳನ್ನು ನೆನಪಿಸಿಕೊಳ್ಳುತ್ತಾ ಮೈಮರೆತಿದ್ದೇನೆ. ಒಮ್ಮೊಮ್ಮೆ ಅವರ ಏಕಾಂಕಗಳಲ್ಲಿನ ಸಂಭಾಷಣೆಗಳ ತುಣುಕುಗಳನ್ನು (ಅವರ 'ಸಾಯೋ ಆಟ' ನಾಟಕವನ್ನು ನಾನು ಈ ಒಂದೆ ಆಕಾಶವಾಣಿಗಾಗಿ ನಿರ್ದೇಶಿಸಿದ್ದೂ ಉಂಟು.) ನೆನಪಿಸಿಕೊಂಡು ಬದುಕಿನ ಬಗ್ಗೆ ಹೊಸ ಹೊಸ ಹೊಳಹುಗಳನ್ನೂ ಪಡೆದಿದ್ದೇನೆ. ಬಿಡುವಾದಾಗ ಅವರ 'ಸಾಹಿತ್ಯದ ವಿರಾಡ್‌ದರ್ಶನ' ತೆರೆದ ಲೋಕೋತ್ತರವೆನಿಸುವ ದಾರಿಗಳ ಗುಂಟ ಮಾನಸಿಕವಾಗಿಯೇ ವಾಯುವಿಹಾರ ಮಾಡಿದ್ದೇನೆ!

ಮೊನ್ನೆ ಗೀತಾ ಅವರು ಕೋರಿಕೆಯನ್ನು ಕಳಿಸಿದಾಗಲೂ ನಾನು ಇದನ್ನೇ–ಬೇಂದ್ರೆಯವರ ಬಗ್ಗೆ ಬರೆಯಲೊಲ್ಲದ ನನ್ನ ಮನಸ್ಸಿನ ಬಗ್ಗೆ–ಮತ್ತೆ ಯೋಚಿಸಿದೆ. ಈಗ ಅದರ ಸುಳಿಗೆ ಸಿಕ್ಕಿದೆನೆಂದೇ ಹೇಳಬೇಕು. ಏಕೆಂದರೆ ಗೀತಾ ಅವರಿಗೆ 'ಆಗೊಲ್ಲ' ಎನ್ನುವುದು ನನಗೆ ಕಷ್ಟ. ಆದರೆ ಬೇಂದ್ರೆಯವರ ವಿಷಯದಲ್ಲಿ 'ಆಗೊಲ್ಲ' ಎನ್ನುವುದು

ನಿಜವಾದ, ಪ್ರಾಮಾಣಿಕವಾದ ಮಾತು. ಈ ಸುಳಿಯಿಂದ ಹೊರಬರಲು ನನಗೆ ತಕ್ಷಣ ನೆರವಾದದ್ದು, ನನ್ನ ಪೀಕಲಾಟವನ್ನು, ಸಂದಿಗ್ಧತೆ–ಅಸಹಾಯಕತೆಗಳನ್ನು ಸಹಾನುಭೂತಿಯಿಂದ ಅರಿತು ಸ್ವತಃ ಬೇಂದ್ರೆಯವರೇ ಆ ದಿನವೇ ನನ್ನ ಆಪ್ತರೊಬ್ಬರ ಮೂಲಕ ವಾಟ್ಸಪ್‌ನಲ್ಲಿ ಕಳಿಸಿಕೊಟ್ಟಿದ್ದ ಪಿ. ಕಾಳಿಂಗರಾಯರು ಬಹು ಮಧುರವಾಗಿ ಹಾಡಿರುವ ಅವರ ಈ ಹಾಡು –

ಬದುಕು ಮಾಯೆಯ ಮಾಟ

ಮಾತು ನೆರೆ–ತೊರೆಯಾಟ

ಜೀವ ಮೌನದ ತುಂಬ ಗುಂಭ ಮುನ್ನೀರು

ಕರುಣೋದಯದ ಕೂಡ

ಅರುಣೋದಯವು ಇರಲು

ಎದೆಯ ತುಂಬುತ್ತಲಿದೆ

ಹೊಚ್ಚ ಹೊನ್ನೀರು...

ಈ ಹಾಡಿನ ಧ್ವನಿಸುರಳಿಯನ್ನಲ್ಲದೆ, ಅದರ ಪೂರ್ಣ ಸಾಹಿತ್ಯವನ್ನೂ ನಾನು ಕೂಡಲೇ ಈ ಮುಂದಿನ 'ಷರಾ'ದೊಂದಿಗೆ ಗೀತಾ ಅವರಿಗೆ (ವಾಟ್ಸಪ್‌ನಲ್ಲಿ) ಕಳಿಸಿ ನೆಮ್ಮದಿಯ ನಿದ್ದೆಗೆ ಸಲ್ಲುವ ಪ್ರಯತ್ನ ಮಾಡಿದೆ–

'ಇದನ್ನು ಓದಿ, ಕೇಳಿ ಮೌನಕ್ಕೆ ಸಲ್ಲುವುದೇ ಇದಕ್ಕೆ ಕೊಡಬಹುದಾದ ಅತ್ಯುನ್ನತ ಗೌರವ. ಬದಲಿಗೆ ಇದನ್ನು (ಒಡೆದು) ತುರಿಸಿಕೊಂಡು ರಣಗಾಯ ಮಾಡಿಕೊಳ್ಳುವುದು ಬೇಡ.'

ಹೀಗೆ ವಾಟ್ಸಪ್ ಕಳಿಸಿ ನಿದ್ರೆಗೆ ಸಲ್ಲುವ ಸನ್ನಾಹವೇನೋ ನಡೆಯಿತು. ಆದರೆ ಆ ಹಾಡು ನನ್ನನ್ನು ಎಡಬಿಡದೆ ಕಾಡತೊಡಗಿತು. ಇನ್ನೊಬ್ಬರನ್ನು ಸುಮ್ಮನಿರಿಸಲು ಹಾಕಿದ್ದ ಭೂಮಂತ್ರ ತಿರುಗಿ ನನ್ನನ್ನೇ ಕಾಡತೊಡಗಿತ್ತು! ಮೂಲತಃ ಸಾಹಿತ್ಯದ ನೆಲೆಯಲ್ಲಲ್ಲ. ಏಕೆಂದರೆ ಅದು ನನಗೆ ಹೊಸ ಪದ್ಯ; ಮೊದಲ ಬಾರಿಗೆ ಕೇಳಿದ್ದು. ಅದು ಕಾಳಿಂಗರಾಯರ ಸಿರಿಕಂಠದ ಮೋಡಿಯೋ ಏನೋ, ಅದರ ಸಹಜ ಲಯ ಗತಿಗಳಿಂದ ಅದರ ಸಾಹಿತ್ಯ ಒಂದೊಂದೇ ಚರಣವಾಗಿ ನನ್ನಲ್ಲಿ ನಿನದಿಸತೊಡಗಿ ನಿದ್ದೆ ಕೆಡಿಸುವ ಒಂದು ಜಿಜ್ಞಾಸೆಯೇ ಆರಂಭವಾಗಿತ್ತು–

ನಿಜದಲ್ಲಿ ಒಲವಿರಲಿ

ಚೆಲುವಿನಲೆ ನಲಿವಿರಲಿ

ಒಳಿತಿನಲೆ ಬಲವಿರಲಿ ಜೀವ ಕೆಳೆಯಾ!

ದೇವ ಜೀವನ ಕೇಂದ್ರ

ಒಬ್ಬೊಬ್ಬನೂ ಇಂದ್ರ

ಏನಿದ್ದರು ಎಲ್ಲ ಎಲ್ಲೆ ತಿಳಿಯಾ!

ಇದು ನಾನು ಒಂದು ಮೌಲ್ಯವಾಗಿ ನಂಬಿರುವ ಸಮಾಜವಾದದ ವ್ಯಾಖ್ಯಾನವೇ ಸರಿ: ಎಲ್ಲ ಎಲ್ಲೆಯಲ್ಲಿರಲಿ!

ಇದನ್ನು ಸಾಧಿಸುವುದಾದರೂ ಹೇಗೇ? ಪದ್ಯ ತಾನಾಗಿ ಮತ್ತೆ ಸಹಜ ಲಯ ಗತಿಗಳಲ್ಲಿ ಹರಿಯುತ್ತದೆ. ಅಲ್ಲ. ಹರಿದು 'ಮಾಯ'ವಾಗುತ್ತದೆ_

ಆತನಾಕೆಯೆ ನಮ್ಮ

ಜೀವನೌಕೆಯ ತಮ್ಮ

ಧೃವ ಮರೆಯದಂತೆ ನಡೆಸುತ್ತಿರಲಿ

ಈ ನಾನು ಆ ನೀನು

ಒಂದೇ ತಾನಿನ ತಾನು

ತಾಳಲಯ ರಾಗಗಳು ಸಹಜ ಬರಲಿ.

ಇದು ಸಂ–ಗೀತವೋ, ಸಾಹಿತ್ಯವೋ, ಅಧ್ಯಾತ್ಮವೋ ಎಂದು ಬೆಕ್ಕಸ ಬೆರಗಾಗಿ ಕೂಡುವ ಕ್ಷಣವದಾಗಿತ್ತು. ದೇಹವಿದ್ದೂ ಇಲ್ಲದಂತಹ, ಪಂಚೇಂದ್ರಿಯಗಳು ಇದ್ದೂ–ಅವೇ ತಾನೇ ಈ ಎಲ್ಲ ಮೌನ ಪ್ರಳಯವನ್ನು ಉಂಟು ಮಾಡುತ್ತಿರುವುದು–ಇಲ್ಲದ ಅನುಭವ! ಹಾಳು ಸಮಾಜವಾದ 'ಆ ನಾನು ಈ ನೀನು ಒಂದೇ ತಾನಿನ ತಾನುವಿನಲ್ಲಿ ತಾಳಲಯ ರಾಗಗಳು ಸಹಜ ಬಂದು' ಸಾಕ್ಷಾತ್ಕಾರವಾಗುವ ಕ್ಷಣವದು!

ಅರೆ ನಿದ್ದೆಯೋ, ಧ್ಯಾನಸ್ಥ ಸ್ಥಿತಿಗೆ ಏರಿದ್ದೆನೋ ಗೊತ್ತಿಲ್ಲ, ನನ್ನ ಮತ್ತು ಬೇಂದ್ರೆ 'ಸಂಬಂಧ' ಶುರುವಾದ ದಿನ ಥಟ್ಟನೆ ನೆನಪಾಯಿತು. ನಾನಾಗ ಎಸ್ಸೆಸ್ಸೆಲ್ಸಿಯಲ್ಲಿದ್ದೆ. ನಮ್ಮ ಕನ್ನಡ ಪಠ್ಯದಲ್ಲಿ ಎರಡು ಆಧುನಿಕ ಪದ್ಯಗಳಿದ್ದವು. ನಮ್ಮ ಮೇಷ್ಟು–ಕನ್ನಡ ಪಂಡಿತರು–ಕುವೆಂಪು ಅವರ 'ಶಿಲಾಭೇರಿ' ಎಂಬ ಪದ್ಯದ ಪ್ರತಿಪದಾರ್ಥ ಹೇಳಿ, ಬರೆಸಿ ರುಚಿಕಟ್ಟಾಗಿ ಪಾಠ ಮಾಡುತ್ತಾ ಪದ್ಯದ ಕೊನೆಯ

ಶಿಲಾಭೇರಿ

ಪ್ರಾಣಸಂಚಾರಿ!

ಎಂಬೆರಡು ಪದ(ಶಬ್ದ?)ಗಳ ಎರಡು ಸಾಲುಗಳನ್ನು ಮೈಮೇಲೆ ಬಂದವರಂತೆ ಉಗ್ಗಡಿಸುತ್ತಾ, 'ಪದ್ಯ ಅಂದರೆ ಇದಯ್ಯಾ, ಇದು!' ಎಂದು, ಪದ್ಯವೆಂದರೆ ಏನು ಎಂಬುದರ ಮೊದಲ ಪರಿಚಯ ಮಾಡಿಕೊಟ್ಟರು. ನಮಗೂ ಆಗ ಕಾವ್ಯ ರೋಮಾಂಚನವಾಗಿ ನಾವು ಕೆಲವು ಗೆಳೆಯರು ಇಂಥದೇ ಪ್ರಾಸ–ತ್ರಾಸಗಳ ಹಲವು ದ್ವಿಪದಗಳನ್ನು ಬರೆದು ಪರಸ್ಪರ ಹಂಚಿಕೊಂಡು, ಎತ್ತಲೋ ನೋಡುತ್ತಾ ಹುಡುಗಿಯರ ಕಿವಿಗೆ ತಪ್ಪದೆ ಬೀಳುವಷ್ಟು ಸರಾಸರಿ ದನಿಯಲ್ಲಿ ಉಗ್ಗಡಿಸುತ್ತಾ ಬಾಲ(ರಹಿತ) ಕವಿಗಳಾಗಿ

ಸುಖಿಸಿದೆವು. ಮೇಷ್ಟ್ರಿಗೆ ತೋರಿಸಿದಾಗ, ಅವರು 'ಬರೀ ಕೊನೆಯ ಎರಡು ಸಾಲು ಬರೆದರಾಗುವುದಿಲ್ಲ. ಅವು ಕೊನೆಯಾಗುವಂತೆ ಒಂದು ದೊಡ್ಡ ಪದ್ಯ ಬರೆಯಬೇಕು' ಎಂದಾಗ ಏನೇನೋ ಅಸಂಬದ್ಧವನ್ನು ಗೀಚಿ ಮೇಷ್ಟ್ರಿಂದ ಬೈಸಿಕೊಂಡು ಸುಮ್ಮನಾದೆವು.

ನಂತರದ ಪಾಠ ಬೇಂದ್ರೆಯವರ 'ಬೆಳಗು' ಪದ್ಯ:

ಮೂಡಲ ಮನೆಯಾ

ಮುತ್ತಿನ ನೀರಿನ ಎರಕವಾ ಹೊಯ್ದ

ನುಣ್ಣನೆ ಎರಕಾವ ಹೊಯ್ದಾ

ಬಾಗಿಲು ತೆರೆದಾ

ಬೆಳಕೂ ಹರಿದಾ

ಜಗವೆಲ್ಲ ತೊಯ್ದಾ

ದೇವನು ಜಗವೆಲ್ಲ ತೊಯ್ದಾ

ಆಗ ಹಳ್ಳಿಗಾಡಿನ ಬೆಳಗಿನ ಬೆರಗನ್ನು ಕಂಡಿದ್ದ ನಮಗೆ ಈ ಸಾಲುಗಳು ಮಂಜುಮಂಜಾಗಿ ಅರ್ಥವಾದಂತಾಗಿ, ಭಾಷೆಯನ್ನು ಪದ್ಯದಲ್ಲಿ ಹೀಗೂ- ಆಡು ಮಾತಿನ ಶೈಲಿಯಲ್ಲಿ ಎಳೆದೂ ಪಳೆದೂ-ಬಳಸಬಹುದೇ ಎಂದು (ಧಾರವಾಡದ ಭಾಷೆ ಆಗ ನಮಗೆ ಹೊಸತು) ಬೆರಗುಗೊಳ್ಳುತ್ತಿರುವಾಗಲೇ

ಗಿಡಗಂಟೆಯಾ ಕೊರಳೊಳಗಿಂದ

ಹಕ್ಕಿಗಳಾ ಹಾಡು

ಹೊರಟಿತು ಹಕ್ಕಿಗಳಾ ಹಾಡು

ಗಂಧರ್ವರ ಸೀಮೆಯಾಯಿತು ಕಾಡಿನಾ ನಾಡೂ...

ಎಂಬ ಸಾಲನ್ನು ನಮ್ಮ ಕನ್ನಡ ಪಂಡಿತರು ಓದುತ್ತಿದ್ದಂತೆ ನನ್ನ ಮನದೊಳಗೆ ನನಗೆ ಪ್ರಿಯರಾದವರಾರೋ ಹೃದಯಕ್ಕೇ ಚಕ್ಕುಲಗಿಲಿ ಇಟ್ಟಂತಹ, ಮನಕುಣಿದಾಡುವಂತಹ ಅನುಭವವಾಗಿ, ಮುಂದಿನ ಸಾಲುಗಳು ನನಗೆ ಕೇಳದಾದವು, ಕೊನೆಯ ಈ ಎರಡು ಸಾಲುಗಳ ಹೊರತಾಗಿ–

ಇದು ಬರಿ ಬೆಳಗಲ್ಲೋ ಅಣ್ಣಾ!

ಮೇಷ್ಟ್ರು ಪದ್ಯ ಓದಿ ಮುಗಿಸಿ, 'ಇದರಲ್ಲಿ ಅರ್ಥವಾಗದ್ದು, ಪ್ರತಿಪದಾರ್ಥ ಬರೆಸುವುದು ಏನಿದೆಯಯ್ಯಾ?' ಎಂದು ಪ್ರಶ್ನಿಸಿ ಇವೆಲ್ಲ ಸರಳ ಪದ್ಯಗಳು. ಹಾಡಲು ಪ್ರಾಸ, ತ್ರಾಸಗಳಿಲ್ಲ! ತಾತ್ಪರ್ಯ ಬರೆಯಿರಿ ಎಂದರೆ ಏನು ಬರೆಯುವುದು ಮಣ್ಣು!' ಎಂದು ತಮ್ಮ ವಿಮರ್ಶಾ ಪ್ರಜ್ಞೆಯನ್ನು ಮೆರೆದು ಪಾಠ ಮುಗಿಸಿದರು. ಅವರು

'ದಾನಶೂರ ಕರ್ಣ', 'ಕುರುಕ್ಷೇತ್ರ', 'ರಾಜಸೂಯಾಗ' ಮುಂತಾದ ನಾಟಕಗಳ ವೃತ್ತ ಕಂದಾದಿಗಳ ಅಭಿಮಾನಿಯಾಗಿದ್ದವರು.

ಆದರೆ ನನಗೆ 'ಗಿಡಗಂಟೆಗಳಾ ಕೊರಳೊಳಗಿಂದ ಹಕ್ಕಿಗಳಾ ಹಾಡು' ಎಂಬ ಸಾಲು ಮತ್ತು 'ಇದು ಬರೀ ಬೆಳಗಲ್ಲೋ ಅಣ್ಣ!' ಎಂಬ ಉದ್ಗಾರ ಮನಸ್ಸಿನಲ್ಲಿ ಕೂತುಬಿಟ್ಟಿದ್ದವು. ಏಕೆಂದು ಮಾತ್ರ ಬಹಳ ಕಾಲ ಗೊತ್ತಾಗಲಿಲ್ಲ! ನಾನು ಮುಂದೆ ವಿಜ್ಞಾನದ ವಿದ್ಯಾರ್ಥಿಯಾಗಿ ನನ್ನ ಯಾವುದೇ ತರಗತಿಯ ಭಾಷಾ ಪಠ್ಯಗಳಲ್ಲಿ ಬೇಂದ್ರೆ ಪದ್ಯ ಎದುರಾಗಲಿಲ್ಲ. (ಪಾಪ, ಆಗ ವಾಮನ ಬೇಂದ್ರೆಯವರ ರಾಜ್ಯಭಾರವೇನೂ ಶುರುವಾಗಿರಲಿಲ್ಲವಾದರೂ!) ಆದರೆ ಸಿನಿಮಾ ಹಾಡಾಗಿ 'ಬೆಳಗು' ಪದ್ಯ 'ಬೆಳ್ಳಿ ಮೋಡ' ಚಿತ್ರದಲ್ಲಿ ಎಸ್. ಜಾನಕಿಯವರ ಮಧುರ ಕಂಠದಲ್ಲಿ ದಾಖಲಾಗಿ ಬಹು ಸೊಬಗಿನೊಂದಿಗೆ ಚಿತ್ರಿತವಾಗಿದ್ದರೂ ಏಕೋ ಇದೆಲ್ಲ ನನ್ನೊಳಗಿನ ಆ ಹಾಡನ್ನು ಬೆಳೆಯಲು ಬಿಡದೆ ಕಟ್ಟಿಹಾಕುವ ಪ್ರಯತ್ನಗಳಾಗಿಯೇ ಕಂಡಿತು. ಇಂತಹ ಕಸಿವಿಸಿಯ ಮನಃಸ್ಥಿತಿಯಲ್ಲಿದ್ದಾಗಲೇ ರೇಡಿಯೋದಲ್ಲಿ ಬಂದದ್ದು 'ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ಸ್' ನಿರ್ಮಿಸಿ ಪ್ರಾಯೋಜಿಸಿದ ಬೇಂದ್ರೆ ಹಾಡುಗಳ ಧ್ವನಿ ಸುರಳಿ. ಅದರ ಎರಡು ಹಾಡುಗಳು ನನ್ನ ಎದೆಯಲ್ಲಿ ಈಗಲೂ ಅನುರಣಿಸುತ್ತಿದ್ದು, ಅವು 'ಗಿಡಗಂಟೆಗಳ ಕೊರಳೊಳಗಿಂದ ಹಕ್ಕಿಗಳಾ ಹಾಡು' ಮತ್ತು 'ಇದು ಬರಿ ಬೆಳಗಲ್ಲೋ ಅಣ್ಣಾ!' ಎಂಬೆರಡು ಸಾಲುಗಳು ನನ್ನ ಮನಸ್ಸಿನಲ್ಲಿ ಮೂಡಿಸಿದ್ದ ಕಲ್ಪನೆಯ ಹಿಂದಿನ ಅರ್ಥವಾಗದ ಒಗಟನ್ನು–ಅನಿರ್ವಚನೀಯ ಆನಂದದ ಕಾರಣವನ್ನು– ಬಿಡಿಸಿಟ್ಟುಬಿಟ್ಟು ನಾನು ಕನ್ನಡದ ಆ ಕಾಲದ (ನವ್ಯವೂ ಸೇರಿದಂತೆ) ಹೊಸ ಕಾವ್ಯ ನದಿ ತೊರೆಗಳಲ್ಲಿ ಬಿದ್ದು ಮನಸೋ ಇಚ್ಛೆ ಹೊರಳಾಡಲೂ (ನಾನು ಸಾಹಿತ್ಯದ ವಿದ್ಯಾರ್ಥಿಯೂ ಅಲ್ಲ ಮತ್ತು ನನಗೆ ಈಜೂ ಬರುವುದಿಲ್ಲವಾದ್ದರಿಂದ) ಸಾಧ್ಯವಾಯಿತು. ಆ ಎರಡು ಹಾಡುಗಳೆಂದರೆ, 'ಹಕ್ಕಿ ಹಾರುತಿದೆ ನೋಡಿದಿರಾ?' ಮತ್ತು 'ಏಲಾವನ ಲೀಲಾವನ ಲವಲೀಬನ ಲವಂಗಬನಗಳಲೀ.'

ಆಗ ನಾನು ಉನ್ನತ ಗಣಿತಶಾಸ್ತ್ರದ ವಿದ್ಯಾರ್ಥಿ. 'ಹಕ್ಕಿ ಹಾರುತಿದೆ ನೋಡಿದಿರಾ?' ಎಂಬ ಪದ್ಯದ/ಹಾಡಿನ ಸಾಲುಗಳು ಆಕಾಶದುದ್ದಗಲಕ್ಕೂ, ಖಂಡಾಂತರ–ಯುಗಾಂತರದ ದಿಗಂತಗಳವರೆಗೂ ಬೆಳೆಯುತ್ತಿದ್ದಂತೆ, ಗತಿ ಏರುತ್ತಿದ್ದಂತೆ ನಮ್ಮ Abstract Algebra ದೊಳಗಿನ Space ಕುರಿತ ಮೀಮಾಂಸೆಯ ಎಲ್ಲ ರೂಪ ವಿನ್ಯಾಸಗಳು (Groups, Rings, Fields ಇತ್ಯಾದಿ) ನನ್ನ ಕಣ್ಣಿಗೆ ಕಟ್ಟಿದಂತಾಗಿ ಗಣಿತ ಮತ್ತು ಕಾವ್ಯ ಲೀನವಾದ ರಸಾನುಭವದ ಕ್ಷಣ ನನಗೆ. ಇನ್ನು 'ಏಲಾವನ ಲವಲೀಬನ ಲವಂಗಬನಗಳಲೀ' ಪದ್ಯ ನಿಗೂಢ ಮಂತ್ರೋಚ್ಚಾರಣೆಯಂತೆ ಬೆಳೆಯುತ್ತಾ, ನಾಗಬನ, ನರನಾಳಗಳಲ್ಲಿ ಹರಡುತ್ತಾ ನಮ್ಮ ಮನಸ್ಸಿನ Spaceನ ಗೂಡುಗಳನ್ನು ತುಂಬಿ ನಮ್ಮ ಚೈತನ್ಯವನ್ನು ಶೂನ್ಯದತ್ತ ಒಯ್ಯುತ್ತದೆ. ಇದು ಬಯಲೋ ಆಲಯವೋ ಗೊತ್ತಾಗದ ಅನುಭಾವಿಕ ಸ್ಥಿತಿಗೆ ನಮ್ಮನ್ನು ಒಯ್ಯುತ್ತದೆ–

ಏಳೆಯ ಬಸಿರೊಳು ಮಲಗಿದ ಯಾವುದೋ ಗತಿಚಿತ್ರ

ದನಿ ಪಡೆದಿತು, ತಿಳಿದೆದ್ದಿತು ಕಣ್ಬಡೆದು ವಿಚಿತ್ರ

ಆ ಕ್ಷಣವನು ಈಕ್ಷಣವನು ಮಾಡಿತು ಸುಪವಿತ್ರ

ಕೆಲವರು ಹೇಳಬಹುದು, ಮೇಲೆ ಪ್ರಸ್ತಾಪಿಸಿದ ಯಾವ ಪದ್ಯವೂ ಬೇಂದ್ರೆಯವರ ಅತ್ಯುತ್ತಮ ಪದ್ಯಗಳ ಸಾಲಿನಲ್ಲಿ ಬರುವುದಿಲ್ಲ ಎಂದು. ಆದರೆ ಆಡಿದ ಮಾತೆಲ್ಲವನ್ನೂ ಪದ್ಯ ಮಾಡಬಲ್ಲವರಾಗಿದ್ದ ಈ ಶಬ್ದ ಮಾಂತ್ರಿಕನ ಪದ್ಯಗಳನ್ನು ಸಾಮಾನ್ಯ, ಉತ್ತಮ, ಅತ್ಯುತ್ತಮ ಎಂದು ವಿಂಗಡಿಸಬಲ್ಲ ವಿದ್ಯೆಯಲ್ಲಿ ನನಗೆ ನಂಬಿಕೆ ಇಲ್ಲ. ಆ ವಿದ್ಯೆಯಲ್ಲಿ ಪರಿಣತರಾದವರು ಬೇಕಾದಷ್ಟು ಜನ ಇದ್ದಾರೆ. ಅವರು ಬೇಂದ್ರೆಯವರ ಪದ್ಯಗಳ ಮಾಂತ್ರಿಕತೆಯನ್ನು ತಮ್ಮ ಪರಿಣಿತಿಯ ಮೂಲಕ ಹೇಗೆ ಹಾಳು ಮಾಡಿದ್ದಾರೆಂದೂ ನನಗೆ ಗೊತ್ತಿದೆ. ನನ್ನ ಪ್ರಕಾರ ಬೇಂದ್ರೆಯವರ ಪದ್ಯಗಳನ್ನು ಸುಮ್ಮನೇ ಓದುತ್ತಾ ಅಥವಾ ಕೇಳುತ್ತಾ ಹೋಗಬೇಕು. ವಿಭಿನ್ನ ಆಳ ಎತ್ತರಗಳ ಅವು ಕಣ್ಣೆದರೂ, ಮನಸ್ಸಿನಲ್ಲಿಯೂ ಸೃಷ್ಟಿಸುವ ಲೋಕದ ಏರಿಳಿತಗಳನ್ನು, ಅವುಗಳ ದನಿ ಮತ್ತು ತತ್ವಗಳ ಉಯ್ಯಾಲೆಯಾಟವನ್ನೂ ಆನಂದಿಸುತ್ತಾ ಲೋಕೋತ್ತರತೆಯನ್ನು ಸ್ಪರ್ಶಿಸಿ ಬರಬೇಕು. ನನಗೆ ಅವರ ಅತ್ಯುತ್ತಮ ಪದ್ಯಗಳೆಂದು ವಿಮರ್ಶಕರು ಗುರುತಿಸುವ 'ಸಖೀಗೀತ' 'ಕಲ್ಪವೃಕ್ಷ ವೃಂದಾವನಂಗಳಲಿ' 'ಸಣ್ಣ ಸೋಮವಾರ' 'ಬಾರೋ ಸಾಧನಕೇರಿಗೆ' 'ರಾಗರತಿ' 'ಮಾಯಾಕಿನ್ನರಿ' 'ಗಂಗಾವತರಣ' ಮುಂತಾದ ಪದ್ಯಗಳು ಅವರ ಇತರ ನೂರೂ ಪದ್ಯಗಳ ಒತ್ತಾಸೆಯಿಂದಷ್ಟೇ ಎತ್ತರಗಳನ್ನು ಮುಟ್ಟಿರುವಂತೆ ನಮಗೆ ಕಾಣುವುದು; ಸ್ವರ ಪ್ರಸ್ತಾರವಿಲ್ಲದೆ ರಾಗಾಲಾಪನೆ ಎತ್ತರಗಳನ್ನು ಮುಟ್ಟಲಾರವು ಎಂಬುದು ನನ್ನ ಅಭಿಪ್ರಾಯ. ಎಷ್ಟಾದರೂ ನಾನು ಇಲ್ಲಿ ಬೇಂದ್ರೆ ಪದ್ಯ ವಿಮರ್ಶೆಗೆ ತೊಡಗಿಲ್ಲವಲ್ಲ? ಬೇಂದ್ರೆ ನನ್ನನ್ನು ಮುಟ್ಟಿದ ಬಗೆಯನ್ನು ಮಾತ್ರ ಹೇಳುತ್ತಿರುವೆನು.

–೨–

ಬೇಂದ್ರೆಯವರನ್ನು ನಾನು ನೋಡಿದ್ದು ಎರಡು ಬಾರಿ ಮಾತ್ರ. ಮಾತಾಡಿದ್ದು, ಅವರ ಸ್ಪರ್ಶ ಪಡೆದದ್ದು ಕ್ಷಣಕಾಲವಾದರೂ, ಒಮ್ಮೆ ಮಾತ್ರ. ಅವರ ಚಿತ್ರಗಳನ್ನು ಹಲವು ಬಾರಿ ನೋಡಿದ್ದೇನೆ. ಆದರೂ ಅವರ ಆಕಾರ ಬಯಲೋ ಆಲಯವೋ ಹೇಳಲಾಗದದ ಸ್ಥಿತಿ ನನ್ನದು. ಅವರನ್ನು ಮೊದಲ ಬಾರಿ ನೋಡಿದ್ದು ೧೯೭೦ರಲ್ಲಿ ದೇಜಗೌ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಮಕ್ಕಳಕೂಟ ಮೈದಾನದಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ. ಯುವ ಉತ್ಸಾಹಿ ಸಾಹಿತ್ಯೋಪಸಕನಾಗಿದ್ದ ನಾನು ಒಂದು ಬೆಳಿಗ್ಗೆ ಎಲ್ಲರಿಗಿಂತ ಮುಂಚೆ ಸಮ್ಮೇಳನದ ಚಪ್ಪರದಡಿಗೆ ಹೋದಾಗ, ಇಡೀ ಚಪ್ಪರ ಖಾಲಿ ಇದ್ದು ಮುಂದಿನ ಸಾಲಿನ ಕುರ್ಚಿಗಳಲ್ಲಿ ಮಾತ್ರ ಮೂರು ಜನ ಕೂತಿದ್ದು ಕಂಡು ಅಲ್ಲಿಗೆ ಹೋದರೆ ಅಲ್ಲಿದ್ದವರು ಹಾಸನ ಟೊಪ್ಪಿಯ ಮಾಸ್ತಿ, ಮಂಕಿ ಕ್ಯಾಪ್‌ನ ಬೇಂದ್ರೆ ಮತ್ತು ಮೈಸೂರು ಪೇಟಾದ ವೀಸಿ. ಒಂದು ಕ್ಷಣ ದಂಗಾದೆ. ಆದರೆ ಹೆಚ್ಚು ಕಾಲ ಅಲ್ಲಿ ನಿಲ್ಲದಾಗಿದ್ದೆ. ಮಧ್ಯೆ ಕೂತಿದ್ದ ಬೇಂದ್ರೆ ಒಂದೇ ಸಮನೆ ಮಾತಾಡುತ್ತಾ

ಮಾಸ್ತಿಯವರು ತಮ್ಮ ಟಿಫನ್ ಕ್ಯಾರಿಯರ್‌ನಲ್ಲಿ ತಂದಿದ್ದ ಇಡ್ಲಿ ಸಾಂಬಾರ್ ಸೇವಿಸುತ್ತಾ ಇವನು ಇಲ್ಲೇಕೆ ನಿಂತಿದ್ದಾನೆ ಎಂಬಂತೆ ನನ್ನನ್ನು ನೋಡುತ್ತಿದ್ದಾರೆ. .....ನಾನು ತಕ್ಷಣ ದೂರ ನಡೆದೆ. ಆದರೆ ಅಂದು ಅವರ ಸೇವೆಯ ಸೌಭಾಗ್ಯ ನನಗೊದಗಿತ್ತು. ಅವರು ನಾಸ್ತಾ ಮುಗಿಸಿ ಕೈತೊಳೆಯಲು ಚಪ್ಪರದ ಬದಿಗೆ ಬಂದಾಗ ನಾನು ಅವರಿಗೆ ಕೈನೀರು ನೀಡಿ ಕೃತಾರ್ಥನಾದೆ. ಅವರು ಏನೂ ಮಾತಾಡಲಿಲ್ಲ. ನನ್ನನ್ನು ಅವರು ಸಮ್ಮೇಳನದ ಸ್ವಯಂಸೇವಕನೆಂದು ಬಗೆದಿರಬೇಕು!

ಆದರೆ ಈ ಸೇವೆಯನ್ನು ಅವರದೇ ಅನನ್ಯ ರೀತಿಯಲ್ಲಿ ನನಗೆ ಹಿಂದಿರುಗಿಸಿದ್ದೂ ಉಂಟು. ೧೯೭೭ರಲ್ಲಿ ಎಂದು ಕಾಣುತ್ತದೆ. ದೆಹಲಿ ಆಕಾಶವಾಣಿಯಲ್ಲಿ ಉದ್ಯೋಗದಲ್ಲಿದ್ದ ನಾನು ರಜಾಸಹಿತ ಪ್ರವಾಸ ಭತ್ಯೆಯ (ಎಲ್‌ಟಿಸಿ) ಸೌಲಭ್ಯ ಪಡೆದು ನನ್ನ ಸಹೋದ್ಯೋಗಿಯೊಬ್ಬರ ಜೊತೆಗೆ ಬಾಂಬೆ ನಗರವನ್ನು ನೋಡಲು ಹೋಗಿ, ಎರಡು ದಿನಗಳ ನಂತರ ಕರ್ನಾಟಕ ಸರ್ಕಾರದ ಕೆಂಪು ಬಸ್ಸಿನಲ್ಲಿ ಬೆಂಗಳೂರಿಗೆ ಹೊರಟು ಧಾರವಾಡ ಬರುವ ಹೊತ್ತಿಗೆ ಸುಸ್ತಾಗಿ ಅಲ್ಲಿಯೇ ಇಳಿದು ಸುಧಾರಿಸಿಕೊಳ್ಳಲು ನಿರ್ಧರಿಸಿದೆ. ಅಂದು ಸಂಜೆ ಸಾಧನಕೇರಿಯ ಬೇಂದ್ರೆ ಅವರ ಮನೆಗೆ ಅವರ ದರ್ಶನಕ್ಕೆ ಹೋದಾಗ ಆ ಸೇವೆಯನ್ನು ಅವರು ನನಗೆ ಹಿಂತಿರುಗಿಸಿದರು.

ಮನೆಯ ಬಾಗಿಲಲ್ಲಿ ಧನ್ಯತೆಯ ಭಾವದಿಂದ ನಿಂತಿದ್ದ ನನ್ನನ್ನು ಮನೆಯ ಒಳಗಿಂದ ಬಂದ ಬೇಂದ್ರೆಯವರು 'ಯಾರು ನೀವು? ಒಳಗೆ ಬನ್ನಿ' ಎಂದರು. ನಾನು ಮನೆಯೊಳಗೆ ಹೋದೆ. 'ಇಲ್ಲಿ ನೋಡಲು ವಿಶೇಷ ಏನೂ ಇಲ್ಲ, ಪುಸ್ತಕಗಳ ಕಪಾಟುಗಳ ಹೊರತಾಗಿ!' ಎನ್ನುತ್ತಾ ಮನೆಯೊಳಗೆ ಸಂಚರಿಸಲು ನನಗೆ ಅನುವು ಮಾಡಿಕೊಟ್ಟರು. ಮನೆಯಲ್ಲಿ ಇನ್ನೂ ಹತ್ತಾರು ಜನ ಮನೆ ಮಂದಿ ಹಾಗೂ ಸಂದರ್ಶಕರು ಇದ್ದರು. ನನಗೆ ಪುಸ್ತಕಗಳೇನೂ ಹೊಸವಲ್ಲವಾದ್ದರಿಂದ ಬೇಗ ನೋಡಿ ಬೇಂದ್ರೆಯವರು ಮತ್ತೆ ಮಾತಾಡಿಸಿಯಾರೇನೋ ಎಂಬ ಆಶೆಯಿಂದ ಹೊರಬಾಗಿಲ ಬಳಿ ಬಂದೆ. ಕವಿವರ್ಯರು ಸಕ್ಕರೆ ಕೊಡುತ್ತಾ 'ಹೋಗಿ ಬನ್ನಿ' ಎಂದರಲ್ಲದೆ, ನನ್ನ ಮುಖದ ಮೇಲೆ ಇನ್ನೂ ಅಚ್ಚೊತ್ತಂತಿದ್ದ ದಣಿವನ್ನು ಗಮನಿಸಿದವರಂತೆ 'ಎಲ್ಲಿಂದ ಬಂದಿರಿ?' ಎಂದು ಕೇಳಿದರು. ನಾನು ಅದಕ್ಕೇ ಕಾಯುತ್ತಿದ್ದಂತೆ 'ದೆಹಲಿಯಿಂದ' ಎಂದೆ. ಆಶ್ಚರ್ಯಚಕಿತರಾಗಿ ಹುಬ್ಬೇರಿಸಿದ ಅವರು 'ಹಾಂಞ' ಎಂದು ಅಲ್ಲಿದ್ದ ಒಂದು ಕುರ್ಚಿಯ ಮೇರೆ ಕೂರಲು ಹೇಳಿ, 'ಅಲ್ಲಿ ಏನು ಮಾಡುತ್ತೀರಿ? ಇಲ್ಲಿಗೆ ಎಂದು ಬಂದಿರಿ?' ಎಂದೆಲ್ಲ ವಿಚಾರಿಸಿದರು. ನಾನು ಆಕಾಶವಾಣಿಯ ಉದ್ಯೋಗಿ, ಕನ್ನಡ ವಾರ್ತೆ ಓದುವವನು ಎಂದು ಗೊತ್ತಾದ ಕೂಡಲೇ ನನ್ನ ದನಿ ಗುರುತಿಸಿದವರಂತೆ ಆತ್ಮೀಯತೆಯಿಂದ ನನ್ನ ಭುಜ ಮುಟ್ಟಿ 'ನಾನೂ ನಿಮ್ಮ ಇಲಾಖೆಯ ಅನ್ನ ತಿಂದೀನಿ!' ಎಂದು (ಅವರು ಧಾರವಾಡ ಆಕಾಶವಾಣಿಯಲ್ಲಿ ಕನ್ನಡ ಭಾಷಾ ಕಾರ್ಯಕ್ರಮಗಳ 'ಪ್ರೊಡ್ಯೂಸರ್; ಆಗಿದ್ದರು.) ಜೋರಾಗಿ ನಕ್ಕು, ಇನ್ನಷ್ಟು ಜನ ಸೇರಿದ್ದರಿಂದ ನನಗೆ ಮತ್ತೆ ಸಕ್ಕರೆ ಕೊಟ್ಟು ಮನೆಯ ಹೊರಗೆ ಬಂದು ಬೀಳ್ಕೊಟ್ಟರು.

ಬೇಂದ್ರೆಯವರಿಂದ ಬೀಳ್ಕೊಟ್ಟ ನಾನು ಸಾಧನಕೇರಿಯ ಪೂರ್ತ ದರ್ಶನ ಮಾಡಿ ಬೆಂಗಳೂರಿಗೆ ಬಸ್ ಹಿಡಿಯಲು ಬಸ್ ನಿಲ್ದಾಣಕ್ಕೆ ನಡೆದೆ. ನಡೆದೆ ಎಂದರೆ ಅಕ್ಷರಶಃ ನಡೆದೆ. ಕಾರಣ, ಆಂದಿನ ಧಾರವಾಡ ನನ್ನನ್ನು ಊರ ತುಂಬಾ ನಡೆಯಲು ಆಹ್ವಾನಿಸಿತ್ತು. ಗಿರೀಶ್ ಕಾರ್ನಾಡರು ಬೇಂದ್ರೆ ಕುರಿತು ಮಾಡಿರುವ ಸಾಕ್ಷ್ಯಚಿತ್ರದಲ್ಲಿನ ಧಾರವಾಡದ ತಮ್ಮ ಮನೆಗೆ ಹಣ್ಣು ಮಾರಲು ಬಂದ ಹೆಣ್ಣಿನಿಂದ ಹಣ್ಣು ಕೊಂಡು ಒಂದು ಹಣ್ಣನ್ನು ಸವರುತ್ತಾ ಸವರುತ್ತಾ ಆಕೆ ಹೋದ ದಾರಿಯನ್ನೇ ನೋಡುತ್ತಾ ನಿಲ್ಲುವ ಬೇಂದ್ರೆಯವರ (ಅದೂ ಆ ಇಳಿ ವಯಸ್ಸಿನಲ್ಲಿ ಚಿತ್ರೀಕರಿಸಲ್ಪಟ್ಟ!) ಆ ದೃಶ್ಯ ಮರೆಯಲಾದೀತೇ? ಆ ಸಾಕ್ಷ್ಯಚಿತ್ರದಲ್ಲಿ ಕಂಡ ಧಾರವಾಡ ಇನ್ನೂ ಅಲ್ಲಿ ಇತ್ತು. ಆ ಸಂಜೆ ಹನಿ ಮಳೆ ಬೇರೆ. ಹಸಿರು ರಾಶಿಯಿಂದ ತುಂಬಿದ್ದ ಆ ಗ್ರಾಮೀಣ ಸೊಗಡಿನ ಘಮಾಡಿಸುವ ಆ ಮಲ್ಲಿಗಿ ಧಾರವಾಡ ಬೇಂದ್ರೆಯವರಂತೆಯೇ ಇತ್ತು. ನಾನು ಅಂದು ಇಳಿಸಂಜೆಯವರೆಗೆ ಊರ ತುಂಬಾ ಒಂಟಿಯಾಗಿ ಮನದಣಿಯೆ ಸುತ್ತಾಡಿದೆ. ಧಾರವಾಡವನ್ನು ಬೇಂದ್ರೆಯವರ ಜೊತೆಯಲ್ಲೇ ಮನದುಂಬಿಕೊಂಡೆ.

–೩–

ಈ ಹಿನ್ನೆಲೆಯೊಂದಿಗೆ ಧಾರವಾಡದತ್ತ ಹಿಂದಿರುಗಿ ನೋಡಿದಾಗ ಬೇಂದ್ರೆ ಓರ್ವ ಅಪೂರ್ವ ವಿಫಲ ಕವಿಯೇನೋ ಅನಿಸಿ ದುಃಖ ಆವರಿಸಿಬಿಡುತ್ತದೆ. ೧೯೭೭ರ ನಂತರ ನಾನು ಧಾರವಾಡಕ್ಕೆ ಹಲವು ಬಾರಿ ಹೋಗಿ ಬಂದಿದ್ದೇನೆ, ಬೇಂದ್ರೆಯವರ ಧಾರವಾಡ ನಿಧಾನವಾಗಿ ಸಾಯುತ್ತಿದೆ ಎನಿಸಿ ಮನಸ್ಸು ಸುಮ್ಮನೆ ಒದ್ದಾಡುತ್ತದೆ. ವಿಶೇಷವಾಗಿ ಕಳದ ಹತ್ತು–ಹದಿನೈದು ವರ್ಷಗಳಲ್ಲಿ ಅದರ ಹೃದಯ ಭಾಗ ಕಾಂಕ್ರೀಟ್ ಕಟ್ಟಡಗಳ ಕಗ್ಗಾಡಂತಾಗಿ ಬೀದಿಗಳಲ್ಲಿ ಓಡಾಡುವುದು ಕಷ್ಟವಾಗುತ್ತಿದೆ. (ಇದಕ್ಕೆ ಸಂವಾದಿಯಾಗಿ ಕಲ್ಯಾಣ ನಗರದ ಬೀದಿಗಳು ಭಯಾನಕವಾಗಿ ಬಿಕೋ ಎನ್ನಿಸುವಂತಿವೆ!) ಇಲ್ಲಿ ಬೇಂದ್ರೆ ಓಡಾಡಿರಲು ಸಾಧ್ಯವೇ ಇಲ್ಲ ಎನಿಸಿಬಿಡುತ್ತದೆ. ಒಂದು ವರ್ಷದ ಹಿಂದೆ, ಬೇಂದ್ರೆಯವರಿಗೆ 'ಜೋಗಿ' ಪದ್ಯ ಬರೆಯಲು ಪ್ರೇರಣೆ ನೀಡಿದ್ದೆಂದು ಹೇಳಲಾದ ಅತ್ತಿಕೊಳ್ಳಕ್ಕೆ ಹೋಗಿದ್ದೆ, ಊಹೂಂ, ಅಲ್ಲಿ ಬೇಂದ್ರೆ ಇರಲಿಲ್ಲ. ತುಂಬಿಕೊಂಡ ಅಲ್ಲ, ಖಾಲಿ ಖಾಲಿ ಬೋಳು ಮೌನ ಅಲ್ಲಿ. ಸುಸ್ತಾಗಿ ಹಿಂದೆ ಬಂದೆ.

ಈ ಧಾರವಾಡದಲ್ಲಿ ನಿಜವಾಗಿಯೂ ಬೇಂದ್ರೆ ಇದ್ದರೆ? ಇಲ್ಲಿ ಉಸಿರಾಡಿದ್ದರೇ? ಉಂಗುಷ್ಠ ಹರಿದ ತಮ್ಮ ಚಪ್ಪಲಿ ಸರಿಮಾಡುತ್ತಿದ್ದ ಚಮ್ಮಾರನಿಗೆ ಉರಿ ಬಿಸಿಲು ಬೀಳದಿರಲೆಂದು ಛತ್ರಿ ಬಿಡಿಸಿ ಹಿಡಿದದ್ದು ಈ ಊರಿನ ಬೀದಿಯಲ್ಲೇ? 'ಇನ್ನೂ ಸಾಧನಕೇರಿಯ ಜಗಳ ಮುಗಿದಿಲ್ಲ. ವಿದೇಶಕ್ಕೆ ಹೋಗಿ ಏನು ಮಾಡಲಿ?' ಎಂದ ಹಾಲು ಹಸುಳೆಯ ಮನದ ಬೇಂದ್ರೆ ಅಡ್ಡಾಡಿದ ಊರೇ ಇದು? 'ಅಜ್ಜಾ ನಿಮ್ಮ ಪಾದದ ಧೂಳು ನನ್ನ ಹಣೆಯ ಮೇಲಿರಲಿ, ಅದು ಜಾರಿ ನನ್ನ ಕಣ್ಣೊಳಗೆ ಮಾತ್ರ ಬೀಳದಿರಲಿ!' ಎಂಬ ಚೇಷ್ಟೆಗೆ ಕಾರಣವಾದ ರೈಲ್ವೇ ಕ್ರಾಸಿಂಗ್ ಬಳಿಯ ಚಂಪಾರೊಡನೆ 'ಲೇ ಗೌಡಾ!' ಎಂದು ಪಟ್ಟಾಗಿ ಮುಂಗೈ ಹಿಡಿದು ಆರಂಭಿಸಿದ ಜವಾರಿ ಜಗಳಗಂಟತನದ ಬೇಂದ್ರೆ

ಬಾಳಿ ಬದುಕಿದ್ದು ಇಲ್ಲಿಯೇ? ಧಾರವಾಡ ಬೇಂದ್ರೆಯನ್ನು ಇಷ್ಟು ಬೇಗ ಮರೆಯಿತೇ? ಇಷ್ಟು ಬೇಗ ಮರೆಗೆ ಸರಿಯುವಂತಹ ಕವಿಯೇ ಬೇಂದ್ರೆ? ಬೇಂದ್ರೆ ಸನ್ನಿಧಾನ ಎಲ್ಲಿ ಕರಗಿಹೋಯಿತು?

ಇಲ್ಲ, ಕವಿ ತಾನಾಗಿ ಮರೆಯಾಗುತ್ತಿಲ್ಲ. ಕವಿಗಳನ್ನು ಉದ್ದೇಶಪೂರ್ವಕವಾಗಿ ಕೊಲ್ಲುವ ಕಾಲವಿದು. ಇದು ಜಾಗತೀಕರಣದ ಕಾಲ. ಕವಿಗಳನ್ನು ಮಾತ್ರವಲ್ಲ, ಮನುಷ್ಯರನ್ನೇ ಕೊಲ್ಲುವ ಕಾಲವಿದು. Smartnessಗೆ ತದ್ವಿರುದ್ಧವಾಗಿ, ಅಂಥದ್ದನ್ನೆಲ್ಲ ಅಪ್ರಬುದ್ಧವೆಂದು ಹೇಳುವಂತಿದ್ದ ಬೇಂದ್ರೆಯವರ ಈ ಊರನ್ನು ಸರ್ಕಾರವೀಗ ಸ್ಮಾರ್ಟ್ ಸಿಟಿ ಮಾಡಹೊರಟಿದೆ! ಜನ ಸಂಭ್ರಮಿಸುತ್ತಿರುವಂತಿದೆ. ಆದರೆ ಬೇಂದ್ರೆ ಇಂತಹ ಸಾವಿರ ಸಾವುಗಳನ್ನು ಮೀರಿ ಬದುಕುಳಿಯಬಲ್ಲ ಕವಿ. ಧಾರವಾಡವನ್ನು ಮಾತ್ರವಲ್ಲ, ಇಡೀ ಕರ್ನಾಟಕವನ್ನು ಪುನರುಜ್ಜೀವನಗೊಳಿಸಬಲ್ಲ ಕವಿ. ಇದನ್ನೆಲ್ಲ ಬರೆಯುವ ಕಷ್ಟ-ಸಂಕಟ ಬೇಡವೆಂದೇ ಗೀತಾ ಅವರಿಗೆ ಕೊನೆಯಲ್ಲಿ ಹೀಗೆ ಬರೆದಿದ್ದೆ-

'ಕನ್ನಡಕ್ಕೆ ಕುವೆಂಪು ಭೂಮಿ ಇದ್ದಂತೆ. ಬೇಂದ್ರೆ ಗಾಳಿ (ಆಕಾಶ) ಇದ್ದಂತೆ. (ನಮ್ಮ ಕಡೆ ಗಾಳಿ ಎಂದರೆ ಬೇರೆ ಅರ್ಥವೂ ಇದೆ!) ಮಾಸ್ತಿ ನೀರು ಇದ್ದಂತೆ. ನಾನು ಗಾಳಿಯೊಂದಿಗೆ ಗುದ್ದಾಡಬಯಸೆ. ಬದಲಿಗೆ ಅದನ್ನು ಧನ್ಯತೆ-ಕೃತಜ್ಞತೆಗಳಿಂದ ಸೇವಿಸುತ್ತಾ ಅದು ವಿಮರ್ಶೆ-ವಿಶ್ಲೇಷಣೆಗಳಗೆ ಸಿಕ್ಕಿ ಮಲಿನವಾಗದಂತೆ ಎಚ್ಚರದಿಂದಿರಬಯಸುವೆ. ಕನ್ನಡಕ್ಕೊಬ್ಬನೇ ಬೇಂದ್ರೆ. ಬೇಂದ್ರೆಯವರ ಬಗ್ಗೆ ಇಷ್ಟು ಹೇಳಲು ಮಾತ್ರ ಸಾಧ್ಯ, ಇದನ್ನು ಮೀರಿ ಏನು ಹೇಳಿದರೂ ಅದು ನನ್ನ ಪಾಲಿಗೆ ಅಪ್ರಾಮಾಣಿಕತೆಯಾದೀತು.'

ಆದರೂ ಗೀತಾ ಬಿಡಲಿಲ್ಲ. ಒತ್ತಾಯ ಮಾಡದೆ ಬರೆಸಿಯೇ ಬಿಟ್ಟಿದ್ದಾರೆ. ಆದರೂ ಅಪ್ರಮಾಣಿಕನಾಗಿಲ್ಲ ಎಂಬ ಆತ್ಮವಿಶ್ವಾಸ ನನಗಿದೆ.

(ಗೀತಾ ವಸಂತ ಮತ್ತು ರಾಜಕುಮಾರ್ ಮಡಿವಾಳರ ಸಂಪಾದಿಸಿರುವ 'ಕಂಡವರಿಗಷ್ಟೇ(ಬೇಂದ್ರೆ-೧೨೫)' ಗ್ರಂಥಕ್ಕಾಗಿ ಬರೆದ ಲೇಖನ)

‘ಜಿ.ರಾಜಶೇಖರ್’ ದ್ವಂದ್ವಮಾನ ಭೌತವಾದದಿಂದ ವ್ಯಕ್ತಿ ವಿಶಿಷ್ಟತೆಯೆಡೆಗಿನ ಅಸ್ಪಷ್ಟ ಹೆಜ್ಜೆಗಳು

ಜಿ. ರಾಜಶೇಖರ್ ನಾನು ತುಂಬಾ ಗೌರವಿಸುವ ಗೆಳೆಯರಲ್ಲೊಬ್ಬರು. ಹೆಚ್ಚೂ ಕಡಿಮೆ ಐವತ್ತು ವರ್ಷಗಳಿಂದ ಅವರು ಕನ್ನಡದಲ್ಲಿನ ಸಾರ್ವಜನಿಕ ಸಂವಾದಗಳಲ್ಲಿ ಭಾಗವಹಿಸುತ್ತಾ ಕನ್ನಡ ಬೌದ್ಧಿಕ ಸಮಾಜವನ್ನು ಜೀವಂತವಾಗಿಟ್ಟಿದ್ದಾರೆ. ರಾಜಶೇಖರ್ ಭಾರತೀಯ ಜೀವ ವಿಮಾ ನಿಗಮದ ನೌಕರರಾಗಿದ್ದುಕೊಂಡು ದುಡಿಯುವ ವರ್ಗದ ಪರವಾಗಿ ತುಡಿದವರು. ಅದಕ್ಕೆ ಅವರಿಗೆ ಮಾಧ್ಯಮವಾದದ್ದು, ಕಮ್ಯೂನಿಸಂ; ಅರ್ಥಾತ್ ಮಾರ್ಕ್ಸ್‌ವಾದ. ನಂತರ ಇತ್ತೀಚಿನ ವರ್ಷಗಳಲ್ಲಿ ಅವರು ಕಮ್ಯೂನಿಸಂನಿಂದಲೋ, ಕಮ್ಯೂನಿಸ್ಟ್ ಪ್ರಭುತ್ವಗಳಿಂದಲೋ ಭ್ರಮನಿರಸನ ಹೊಂದಿ ತಾವು ಪಡೆದಿದ್ದ ಕಮ್ಯೂನಿಸ್ಟ್(ಮಾರ್ಕ್ಸ್‌ವಾದಿ) ಪಕ್ಷದ ಸದಸ್ಯತ್ವದಿಂದ ಹಿಂದೆಗೆದಿದ್ದಾರೆ ಎಂದು ಕೇಳಿರುವೆ. ಆದರೆ ಈ ಬೆಳವಣಿಗೆಯ ಮುನ್ನ ಮತ್ತು ಆನಂತರ– ಈ ಎರಡೂ ಕಾಲಾವಧಿಗಳಲ್ಲಿಯೂ ಅವರು ಬರೆದ ಲೇಖನಗಳನ್ನು ನಾನು ಗಮನಿಸಿದ್ದೇನೆ. ನನಗೆ ತಿಳಿದಂತೆ ಅವರ ವಾದದ ಒರೆಗಲ್ಲುಗಳಾಗಲೀ, ನೆಲೆಗಟ್ಟುಗಳಾಗಲೀ, ಕಾಳಜಿಗಳಾಗಲೀ ಬಹಳ ಬದಲಾಗಿಲ್ಲ. ಇದಕ್ಕೆ ಮುಖ್ಯ ಕಾರಣ ಅವರು ಯಾವತ್ತೂ ಹೆಚ್ಚು ಸೈದ್ಧಾಂತಿಕ ಪಾರಿಭಾಷಿಕಗಳನ್ನು ಬಳಸದೆ, ತುಂಬ ಅನೌಪಚಾರಿಕ ಶೈಲಿಯಲ್ಲಿ ಬರೆಯುತ್ತಿದ್ದುದು.

ಅಂದ ಮಾತ್ರಕ್ಕೆ ರಾಜಶೇಖರರ ಬರಹಗಳ ಸ್ವರೂಪ ಅದರ ದಿಗಂತ ದೃಷ್ಟಿಗಳು ಬದಲಾಗಿಲ್ಲ ಎಂದಲ್ಲ. ಅವರ ಬರಹಗಳ ಕೇಂದ್ರದಲ್ಲಿರುತ್ತಿದ್ದ ದುಡಿಯುವ ವರ್ಗಗಳನ್ನು ಕುರಿತ ಅವರ ಕಾಳಜಿಯ ಅರ್ಥವ್ಯಾಪ್ತಿ ಹೆಚ್ಚಿದ್ದು, ಅದು ಹೆಚ್ಚು ಅರ್ಥಪೂರ್ಣವಾಗುವಂತೆ ತಮ್ಮ ವಾದಸರಣಿಗೆ ಕಮ್ಯೂನಿಸ್ಟ್ ಪಕ್ಷದ ನಿಷ್ಠೆ ಸೃಷ್ಟಿಸಿದ್ದ ಹಲವು ವೈಚಾರಿಕ ಪೂರ್ವಾಗ್ರಹಗಳಿಂದ ಹೊರಬಂದಾಗ ದೊರೆಯುವ ಮುಕ್ತತೆಯ ಆವೇಗ ಸೇರಿಕೊಂಡಿದೆ. ಈಗ ಇವರು ತಮ್ಮನ್ನು ಕಮ್ಯೂನಿಸ್ಟ್ ಎಂದು ಕರೆದುಕೊಳ್ಳಲು ಇಚ್ಛಿಸದೆ ಸಮಾಜವಾದಿ ಎಂದು ಕರೆದುಕೊಂಡು ಎಡಪಂಥೀಯರೆಂದು

ಪರಿಗಣಿಸಲ್ಪಡಲು ಇಚ್ಛಿಸುವರಾದರೂ, ಅವರು ಈಗ ನಂಬಿರುವ ಸಮಾಜವಾದದ ರೂಪುರೇಷೆಗಳೇನು ಎಂಬುದು ಸ್ವಲ್ಪ ಅಸ್ಪಷ್ಟವಾಗಿಯೇ ಇದೆ. ಇತ್ತೀಚಿನ ಅವರ ಬರಹಗಳನ್ನೋದಿದವರಿಗೆ ಅವರೋರ್ವ ಅರಾಜಕತಾವಾದಿಯಾಗಿರುವ ಸಂದೇಹ ಉಂಟಾಗುತ್ತದೆ.

ರಾಜಶೇಖರ್ ಈಗ ತಮ್ಮನ್ನು ಸಮಾಜವಾದಿ ಎಂದು ಗುರುತಿಸಿಕೊಳ್ಳಬಯಸಿದ್ದರೂ ಎಲ್ಲ ಸಿದ್ಧಾಂತಗಳನ್ನೂ 'ಕೊಲೆಗಡುಕ'ವೆಂದು ಸಾರಾ ಸಗಟಾಗಿ ಕರೆಯುವಷ್ಟು ಸಿದ್ಧಾಂತಗಳ ಸಹವಾಸದಿಂದ ಮನಸ್ಸನ್ನು ಕಹಿ ಮಾಡಿಕೊಂಡಂತಿರುವ ಈ ಮಾಜಿ ಕಮ್ಯೂನಿಸ್ಟ್ ಬುದ್ಧಿಜೀವಿಯ ಸದ್ಯದ ಬಹುಪ್ರಿಯ ಶಬ್ದ 'ಸ್ವಾಯತ್ತತೆ'. (ನೋಡಿ: 'ಸ್ವಾಯತ್ತತೆಯನ್ನು ಕಾಪಾಡಿಕೊಳ್ಳಬೇಕು': 'ಬಹುವಚನ') ಈ ದೃಷ್ಟಿಯಿಂದ ಪ್ರಭುತ್ವದ ಕಲ್ಪನೆ ಕುರಿತಂತೆ ಆ ತುದಿಯಿಂದ ಈ ತುದಿವರೆಗೆ ನಡೆದಿರುವ ರಾಜಶೇಖರರ ಆಲೋಚನಾ ಕ್ರಮದ ದಾರಿಯಲ್ಲಿ ವಿವರಣೆಗಳೇ ಇಲ್ಲದ ಹಲವಾರು ಬಿಕ್ಕಳಿಕೆಗಳು ಕಂಡು ಬರುತ್ತವೆ ಎಂಬುದನ್ನೂ ಇಲ್ಲಿ ಹೇಳಬೇಕು. ಈ ತೊಡಕುಗಳೇ ರಾಜಶೇಖರರ ಹಲವು ಸಮಕಾಲೀನ ಲೇಖನಗಳಲ್ಲಿನ ತೊಡಕುಗಳಿಗೂ ಕಾರಣವಾಗಿವೆ. ವಿಶೇಷವಾಗಿ, ಈಗ ಎಲ್ಲ ಚರ್ಚೆಗಳ ಮುನ್ನೆಲೆಗೆ ಬಂದಿರುವ 'ಸೆಕ್ಯುಲರಿಸಂ' ಸುತ್ತಮುತ್ತಲಿನ ಅವರ ಲೇಖನಗಳಿಗೆ ಸಂಬಂಧಿಸಿದಂತೆ. ಈ ಸಂಗತಿ ಅವರು ಸಾಹಿತ್ಯವನ್ನು ಗ್ರಹಿಸುವ–ನಿರ್ದಿಷ್ಟವಾಗಿ ಅಡಿಗರ ಕಾವ್ಯ ಮತ್ತು ಲಂಕೇಶರ ಕಥನ–ನೆಲೆಗಳ ವಿಷಯದಲ್ಲಿ ಕೆಲ ಕುರುಡುತನಗಳನ್ನು ಉಂಟು ಮಾಡಿದೆ ಎಂದು ನನಗನ್ನಿಸಿದೆ. ಈ ಭಿನ್ನಾಭಿಪ್ರಾಯಗಳಿಗೆ ಮುನ್ನ ಸಹಮತದ ಕೆಲವು ಸಂಗತಿಗಳನ್ನು ನೋಡೋಣ.

–೨–

ಜಿ. ರಾಜಶೇಖರ ಅವರು ನನಗೆ ಮುಖತಃ ಪರಿಚಯವಾದದ್ದು ಇತ್ತೀಚಿನ ವರ್ಷಗಳಲ್ಲೇ ಆದರೂ–ಬಹುಶಃ ಅವರನ್ನು ಮೊದಲ ಬಾರಿಗೆ ಕಂಡು ಮಾತನಾಡಿಸಿದ್ದು ೨೦೦೬ರಲ್ಲಿ, ಹೆಗ್ಗೋಡಿನ ಸಂಸ್ಕೃತಿ ಶಿಬಿರದಲ್ಲಿ–ಅವರನ್ನು ಅವರ ಬರಹಗಳ ಮೂಲಕ ನಲವತ್ತಕ್ಕೂ ಹೆಚ್ಚು ವರ್ಷಗಳಿಂದ ಬಲ್ಲೆ. ನಾನು ಓದಿದ ಅವರ ಮೊದಲ ಬರಹವೆಂದರೆ, ಮಲೆನಾಡಿನ ಕಾಫಿ ತೋಟಗಳ ಕಾರ್ಮಿಕರನ್ನು ಕುರಿತದ್ದು. ಅದು ಕಳೆದ ಎಪ್ಪತ್ತರ ದಶಕದ ಕೊನೆಯ ವರ್ಷಗಳಲ್ಲಿ 'ಸಾಕ್ಷಿ'ಯಲ್ಲಿ ಪ್ರಕಟವಾದ ಒಂದು ಕ್ಷೇತ್ರಾಧ್ಯಯನ ಬರಹ. ನನಗೆ ನೆನಪಿದ್ದಂತೆ ಅದನ್ನು ಅವರು ಯಾವುದೋ ಒಂದು ಪುಟ್ಟ ಶಿಷ್ಯವೇತನದ ಅಡಿಯಲ್ಲಿ ಮಾಡಿದ ಅಧ್ಯಯನದ ದಾಖಲೆಯಾಗಿತ್ತು. ಅಂತಹ ಲೇಖನ ನನಗೆ ಮತ್ತು ಬಹುಶಃ ಕನ್ನಡಕ್ಕೆ ಹೊಸದು, ನಿರ್ದಿಷ್ಟವಾಗಿ ಆ ಅಧ್ಯಯನ ಗುರಿಯಾಗಿಟ್ಟುಕೊಂಡಿದ್ದ ಸಮುದಾಯಕ್ಕೆ ಸಂಬಂಧಿಸಿದ ದೃಷ್ಟಿಯಿಂದಲಾದರೂ. ಅದರ ಅಧ್ಯಯನದ ಶಿಸ್ತು ಮತ್ತು ತೀರಾ ಶೈಕ್ಷಣಿಕವಲ್ಲದ ಅದರ ಭಾಷೆ ನನ್ನನ್ನು ಸೆಳೆಯಿತು. ಇದು ಹುಟ್ಟಿಸಿದ ಕುತೂಹಲವೇ ಅವರ ಪೂರ್ವಾಪರಗಳನ್ನು ವಿಚಾರಿಸಿ ಅವರೊಬ್ಬ ಕಮ್ಯೂನಿಸ್ಟ್ ಎಂದು ತಿಳಿಯಲು ನನ್ನನ್ನು ಪ್ರೇರೇಪಿಸಿದ್ದು. ಮುಖ್ಯ ಸಂಗತಿ

ಎಂದರೆ ಅಂದಿನ ನನ್ನ ಮಟ್ಟಿಗೆ ಇದೊಂದು ತಿಳುವಳಿಕೆಯೇ ಆಗಿತ್ತು. ಏಕೆಂದರೆ ಆಗ ದೆಹಲಿಯಲ್ಲಿದ್ದ ನಾನು ಹಲವು ಉಜ್ವಲ ಕಮ್ಯೂನಿಸ್ಟ್ ನಾಯಕರ, ಮಾರ್ಕ್ಸ್‌ವಾದಿ ಚಿಂತಕರ ಭಾಷಣಗಳನ್ನು ಕೇಳಿ ಕಂಗೆಟ್ಟು, ಅದರ ಪರಿಣಾಮವಾಗಿ ಒಂದಿಷ್ಟು ಕಮ್ಯೂನಿಸ್ಟ್ ಸಾಹಿತ್ಯವನ್ನೂ ಓದಿಕೊಂಡು ಅದರ ಅಮೂರ್ತ ಪರಿಕಲ್ಪನೆಗಳು ಮತ್ತು ಸಂಕೀರ್ಣ ತರ್ಕಸರಣಿಗಳಿಂದ ಕಕ್ಕಾವಿಕ್ಕಿಯಾಗಿದ್ದಾಗ ಈ ಲೇಖನ ಕಮ್ಯೂನಿಸ್ಟರೂ ಸಾಮಾನ್ಯ ಮನುಷ್ಯ ಭಾಷೆ ಮಾತಾಡಬಲ್ಲರೆಂಬ ನಂಬಿಕೆ ಉಂಟಾಯಿತು. ರಾಜಶೇಖರರ ಲೇಖನ ನನಗೆ ಹೊಸ ನಮೂನೆಯ ಕಮ್ಯೂನಿಸ್ಟರೊಬ್ಬರನ್ನು ಪರಿಚಯಿಸಿತ್ತು. ಅವರ ಬರಹದ ಮುನ್ನೆಲೆಯಲ್ಲಿ ನೆಲಮೂಲ ಮಾಹಿತಿ ಇತ್ತು. ಅದು ಸೈದ್ಧಾಂತಿಕವಾಗಿ ಎಷ್ಟು ನಿರಾಭರಣವಾಗಿತ್ತೆಂದರೆ, ಅದು ಶೋಷಿತರ ಪರ ಎರಕದಲ್ಲಿ ಸಿದ್ಧವಾದ ಯಾವುದೇ ಸಿದ್ಧಾಂತಕ್ಕೂ ಒದಗುವಂತಿತ್ತು. ಆ ಕಾಲದಲ್ಲಿ ಕಟ್ಟಾ ಮತ್ತು ಹಸಿ ಲೋಹಿಯಾವಾದಿಯಾಗಿ ಕಟ್ಟಾ ಕಮ್ಯೂನಿಸ್ಟ್ ವಿರೋಧಿಯೂ ಆಗಿದ್ದ ನನ್ನನ್ನು ಈ ಲೇಖನ ನನ್ನ ಕಮ್ಯೂನಿಸ್ಟ್ ಗೆಳೆಯರ ಬಗ್ಗೆ ಒಂದಿಷ್ಟು ಉದಾರವಾಗಲೂ ಕಾರಣವಾಯಿತು. ಹೀಗೆ ರಾಜಶೇಖರ ನಾನು ಇಷ್ಟಪಡಲಾರಂಭಿಸಿದ ಮೊದಲ ಕಮ್ಯೂನಿಸ್ಟರಾದರು!

ನಂತರ ನಾನು ಓದಿದ ಅವರ ಬರಹವೆಂದರೆ ಅಕ್ಷರ ಪ್ರಕಾಶನ ಪ್ರಕಟಿಸಿದ 'ಕಾಗೋಡು ಸತ್ಯಾಗ್ರಹ' ಕುರಿತ ಪುಸ್ತಕ. ಇದನ್ನೂ ಒಂದು ಶಿಷ್ಯ ವೇತನದಡಿಯಲ್ಲಿ ಬರೆದದ್ದು ಎಂದು ಕೇಳಿದ್ದೇನೆ. ಈ ಪುಸ್ತಕ ಬಂದಾಗ ನನ್ನ ಹಲವು ಸಮಾಜವಾದಿ ಗೆಳೆಯರು ಪುಸ್ತಕದ ಬಗ್ಗೆ ಕೆಂಡಕಾರಿ ದೆಹಲಿಯಲ್ಲಿದ್ದ ನನಗೆ ಪತ್ರ ಬರೆದು, ಈ ಪುಸ್ತಕದಲ್ಲಿ ಕಾಗೋಡು ಸತ್ಯಾಗ್ರಹ ವಿಫಲವಾಯಿತೆಂದು ರಾಜಶೇಖರ್ ಬರೆದಿರುವುದನ್ನು ನಿರಾಕರಿಸಿ ಲೇಖನವೊಂದನ್ನು ಬರೆಯಬೇಕೆಂದು ಒತ್ತಾಯಿಸಿದರು. ಆದರೆ ಆಗ ಈ ಪುಸ್ತಕವನ್ನು ಇನ್ನೂ ಓದಿರದಿದ್ದ ನಾನಾದರೂ ಹೇಗೆ ಮತ್ತು ಏನು ಬರೆಯಲಿ? ಜೊತೆಗೆ ಹೀಗೆ ಬರೆಯಲು ಹೇಳಿದವರು ಸ್ವತಃ ತಾವೇ–ಅವರೆಲ್ಲ ಸ್ವತಃ ಸಮಾಜವಾದಿ ಚಳುವಳಿಯಲ್ಲಿ ಭಾಗವಹಿಸಿದ್ದ ಹಿರಿಯರೇ–ಏಕೆ ಬರೆಯಬಾರದೆಂಬ ಪ್ರಶ್ನೆ ಕೂಡ ನನ್ನಲ್ಲಿ ಮೂಡಿತು. ಈ ಬಗ್ಗೆ ಹೇಳಿದಾಗ ಅವರಿಂದ ತಿಳಿದುಬಂದ ವಿಷಯವೆಂದರೆ, ಅವರಿಗೆ ಖಂಡಿಸಿ ಬರೆಯಲು ಆಧಾರವಾಗಿ ಅವರ ಬಳಿ ಯಾವ ಮಾಹಿತಿಯೂ ಇರಲಿಲ್ಲ. ಇದ್ದದ್ದು ಆ ಸತ್ಯಾಗ್ರಹದ ಬಗ್ಗೆ ಒಂದು ಪರಂಪರಾಗತ ಭವ್ಯ ಕಲ್ಪನೆ ಮಾತ್ರ! ನಾನು ಆ ಹೊತ್ತಿಗೆ ಲೋಹಿಯಾ ಮತ್ತು ಅವರ ಸಮಾಜವಾದಿ ಪರಿಕಲ್ಪನೆಗಳ ಬಗ್ಗೆ ಕೆಲವು ಲೇಖನಗಳನ್ನು ಬರೆದು, ಚಂಪಾ ಸಂಪಾದಿಸುತ್ತಿದ್ದ 'ಸಂಕ್ರಮಣ'ಕ್ಕಾಗಿ ಲೋಹಿಯಾ ವಿಶೇಷಾಂಕವೊಂದನ್ನು ಸಂಪಾದಿಸಿದ್ದರಿಂದ ನನ್ನ ಬಳಿ ಸಮಾಜವಾದಿ ಚಳುವಳಿಯ ಬಗ್ಗೆ ಈ ಖಂಡನೆಗೆ ಅಗತ್ಯವಾದ ಮಾಹಿತಿ ಇರಬಹುದೆಂಬ ನಂಬಿಕೆಯಿಂದ ಅವರು ನನಗೆ ದುಂಬಾಲು ಬಿದ್ದಿದ್ದರೆಂದು ಕಾಣುತ್ತದೆ. ಅದೇನೇ ಇರಲಿ, ನಾನು ಆ ಪುಸ್ತಕ ತರಿಸಿಕೊಳ್ಳಲು ವಿವರ ವಿಚಾರಿಸಿದಾಗ ಅದನ್ನು ಅಕ್ಷರ ಪ್ರಕಾಶನ ಪ್ರಕಟಿಸಿದ್ದೆಂದು ಗೊತ್ತಾಗಿ ಸ್ವತಃ ಸಮಾಜವಾದಿಯಾಗಿದ್ದ ಕೆ.ವಿ.ಸುಬ್ಬಣ್ಣ ಇವರು ಹೇಳುತ್ತಿರುವಂತಹ

ಪುಸ್ತಕವನ್ನು ಪ್ರಕಟಿಸಲಾರರು ಎಂಬ ವಿಶ್ವಾಸ ಹುಟ್ಟಿತು. ಪುಸ್ತಕವನ್ನು ತರಿಸಿದೆ. ಅದು ಪ್ರಕಟವಾಗಿದ್ದು ಕಾಗೋಡು ಸತ್ಯಾಗ್ರಹದ ನಾಯಕರೆನ್ನಿಸಿದ್ದ ಶಾಂತವೇರಿ ಗೋಪಾಲಗೌಡ ಸ್ಮಾರಕ ಪುಸ್ತಕ ಮಾಲೆಯ ಭಾಗವಾಗಿ!

ಪುಸ್ತಕವನ್ನು ಗಮನವಿಟ್ಟು ಪೂರ್ತಿ ಓದಿದ ಮೇಲೆ ನಾನು ನನ್ನ ಸ್ನೇಹಿತರಿಗೆ ಹೇಳಿದೆ. ರಾಜಶೇಖರ್ ಕರ್ನಾಟಕದ ಸಮಾಜವಾದಿ ಚಳುವಳಿಯ ಚರಿತ್ರೆಯ ಒಂದು ಉಜ್ವಲ ಅಧ್ಯಾಯವನ್ನು ನಮ್ಮ ಮುಂದಿನ ತಲೆಮಾರಿಗೆ ಕಾಪಿಡುವ ಅಮೂಲ್ಯ ಕೆಲಸವನ್ನು ಮಾಡಿದ್ದಾರೆ. ನಾವೆಲ್ಲ ಅವರಿಗೆ ಕೃತಜ್ಞರಾಗಿರಬೇಕು. ಈ ಪುಸ್ತಕದಲ್ಲಿರುವ ಸಂಗತಿಗಳನ್ನು ನಿರಾಕರಿಸುವ ಯಾವುದೇ ಸಾಕ್ಷ್ಯ ನಿಮ್ಮಲ್ಲಿ ಇದ್ದರೆ ಕೊಡಿ, ಅವರನ್ನು ಪ್ರಶ್ನಿಸೋಣ.

ಒಬ್ಬರಿಂದಲೂ ಸೊಲ್ಲಿಲ್ಲ. ಕಾರಣ, ಕರ್ನಾಟಕದಲ್ಲಿ ಸಮಾಜವಾದಿಗಳಿಗೆ ಏನನ್ನಾದರೂ ದಾಖಲಿಸಿ ಸಂರಕ್ಷಿಸುವ ಗುಣವೇ ಇರಲಿಲ್ಲ. ಇತ್ತೀಚೆಗೆ ಈ ಬಗ್ಗೆ ಓರ್ವ ಹಿರಿಯ ಸಮಾಜವಾದಿಯ ಬಳಿ ಪ್ರಸ್ತಾಪ ಮಾಡಿದಾಗ ಅವರು ಆಡಿದ ಮಾತು ಈ ಚಳುವಳಿ, ಈ ಪಕ್ಷದ ಚರಿತ್ರೆಯ ಬಗ್ಗೆ ಎಲ್ಲವನ್ನೂ ಹೇಳುವಂತಿತ್ತು. ಆ ಮಾತೆಂದರೆ, 'ಹೇ! ಅದೆಲ್ಲ ಶ್ಯಾನುಭೋಗಿಕೆ ಕೆಲಸ ನಮಗಾಗದ್ದು.' ರಾಜಶೇಖರ ಆ ಪುಸ್ತಕದಲ್ಲಿ ಹೇಳಿದ್ದೂ ಇದನ್ನೇ. ಈ ಸತ್ಯಾಗ್ರಹ ಒಂದು ಹವ್ಯಾಸಿ ಹೋರಾಟಗಾರರ ಚಳುವಳಿಯಂತಿತ್ತು. ಏಕೆಂದರೆ ಈ ಚಳುವಳಿಯ ಮೂಲ ಆಶಯವನ್ನೇ ಅರಿಯದವರಂತೆ ಅದನ್ನು ಒಂದು ದಡಕ್ಕೆ ಮುಟ್ಟಿಸದೆ ಸಮಾಜವಾದಿಗಳು ಅಲ್ಲಿಂದ ಕಾಲ್ಕಿತ್ತರು. ಅವರು ಮಾಡಿದ್ದೇನೆಂದರೆ, ದೀವ ಗೇಣಿದಾರರ ನಾಯಕ ಗಣಪತಿಯಪ್ಪ ತಾವು ನುಂಗಲಾರದ ತುತ್ತನ್ನು ನುಂಗಲು ಹೋಗಿ ಅದು ಅವರ ಗಂಟಲಿಗೆ ಸಿಕ್ಕಿಹಾಕಿಕೊಂಡಿದ್ದಾಗ ಅದನ್ನು ಅವರು ನುಂಗುವಂತೆ ಮಾಡಲು ಸಹಾಯ ಮಾಡುವಂತಹ ಒಂದು ಹೋರಾಟವನ್ನು ಮಾಡಿದ್ದರಷ್ಟೆ. ಗೇಣಿ ಅಳೆಯುವ ಕೊಳಗದ ವಿವಾದ ಪರಿಹಾರವಾಗಿತ್ತಷ್ಟೆ. ಅದಾದ ಮೇಲೆ ಗೇಣಿದಾರರು ಮತ್ತೆ ಅದೇ ಭೂಮಾಲಿಕರ ಆಶ್ರಯಕ್ಕೇ ಹೋಗಬೇಕಾಯಿತು.

ಇದನ್ನೇ ರಾಜಶೇಖರ್ ತಮ್ಮ ಪುಸ್ತಕದಲ್ಲಿ ಪ್ರಶ್ನಿಸಿರುವುದು. ಏಕೆ ಈ ಹೋರಾಟವನ್ನು ಆ ಸಂದರ್ಭದಲ್ಲಿ ಕೇಳಿ ಬಂದ 'ಉಳುವವನೇ ನೆಲದೊಡೆಯ' ಎಂಬ ಘೋಷಣೆ ಸೂಚಿಸುವ ತಾರ್ಕಿಕ ಅಂತ್ಯಕ್ಕೆ ಒಯ್ಯುವ ಒಂದು ಪ್ರಯತ್ನವನ್ನೂ ಮಾಡಲಿಲ್ಲವೇಕೆ? ಈ ಹೋರಾಟದಲ್ಲಿ ಧೀರೋದಾತ್ತ ಸಾಹಸಗಳನ್ನು ಮೆರೆದ ಗೋಪಾಲಗೌಡರಾದರೂ ಈ ಚಳುವಳಿಯ ಕಾವನ್ನು ಬಳಸಿಕೊಂಡು ರಾಜ್ಯದಲ್ಲಿ ಪಕ್ಷವನ್ನು ಕಟ್ಟುವ ಗಂಭೀರ ಪ್ರಯತ್ನವನ್ನೇಕೆ ಮಾಡಲಿಲ್ಲ? ಇದು ಆ ಹೋರಾಟದ ಬಗೆಗೆ ಸಹಾನುಭೂತಿಯಿಂದ ಹೊಮ್ಮಿದ ಪ್ರಶ್ನೆಯೇ ಆಗಿತ್ತಾದರೂ, ಗೌಡರ ಅಭಿಮಾನಿಗಳಿಗೆ ಮುಜುಗರದ ಪ್ರಶ್ನೆಯಾಗಿತ್ತು. ಆದರೆ ಈ ಪ್ರಶ್ನೆಯನ್ನು ಕೇಳುವ ಮುನ್ನ ರಾಜಶೇಖರ್ ಅಂದು ರಾಜ್ಯದ ಒಟ್ಟಾರೆ ಪರಿಸ್ಥಿತಿ ಹೇಗಿತ್ತು, ಪಕ್ಷದ ಪರಿಸ್ಥಿತಿ ಹೇಗಿತ್ತು ಮತ್ತು ಸ್ವತಃ ಗೋಪಾಲಗೌಡರ

ವೈಯಕ್ತಿಕ ಬದುಕು ಹೇಗೆ ನಡೆದಿತ್ತು ಎಂಬುದರ ವಿವರಗಳನ್ನು ಅರಿಯುವ ಪ್ರಯತ್ನ ಮಾಡಬೇಕಿತ್ತು ಎಂಬುದೂ ನಿಜ.

ಒಟ್ಟಾರೆ ಹೇಳಬೇಕೆಂದರೆ ಒಂದು ರಾಜಕೀಯ ಹೋರಾಟವನ್ನು ಹೇಗೆ ಒಂದು ಐತಿಹಾಸಿಕ ದಾಖಲೆಯಾಗಿ ರಚಿಸಬೇಕೆಂಬುದಕ್ಕೆ ಈ ಪುಸ್ತಕ ಒಂದು ಮಾದರಿಯಾಗಿದೆ. ಪುಸ್ತಕ ಹೋರಾಟವನ್ನು ಮಾತ್ರವಲ್ಲ, ಅದು ನಡೆದ ಊರು ಮತ್ತು ಅದರ ಆಜುಬಾಜಿನ ಜನಜೀವನದ, ಅದರ ವಿಶಿಷ್ಟ ಮುಖಗಳ ಜೀವಂತ ಚಿತ್ರ ಒದಗಿಸುತ್ತದೆ. ಒಂದು ಹಂತದಲ್ಲಿ ಪುಸ್ತಕದಲ್ಲಿ ರಾಜಶೇಖರ್ ಕರ್ನಾಟಕದ ಸಮಾಜವಾದಿಗಳು ತಮ್ಮ ಸುತ್ತ ಕಟ್ಟಿಕೊಂಡು ಸ್ವಮೋಹ ಪಾಶಕ್ಕೆ ಒಳಗಾಗಲು ಕಾರಣವಾಗಿದ್ದ ಒಂದು ಭೋಳೆಯನ್ನು ಕರಗಿಸಿದರು ಎಂದು ಹೇಳಬೇಕು. ಇದರಲ್ಲಿ ನನ್ನ ಹಲವು ಗೆಳೆಯರು ಸಂದೇಹಿಸಿದಂತೆ ಕಮ್ಯೂನಿಸ್ಟನೊಬ್ಬನ ಸಂಚಿತ್ತೆ? ಇರಲಾರದು, ಏಕೆಂದರೆ ಇಲ್ಲಿನ ಚರ್ಚೆಯಲ್ಲಿ ಕಮ್ಯೂನಿಸ್ಟ್ ಚಳುವಳಿಯ ಬಗ್ಗೆ ಯಾವ ರಿಯಾಯಿತಿಯನ್ನೂ ತೋರದ ಟೀಕೆಯೂ ಇದೆ.

-೩-

ಕೊನೆಯದಾಗಿ ರಾಜಶೇಖರ ಅವರೇ ಹೇಳಿಕೊಂಡಂತಹ ಸಿದ್ಧಾಂತ ರಹಿತ ಆಲೋಚನಾ ಘಟ್ಟದ ಬರಹಗಳ ಬಗ್ಗೆ ನನ್ನ ತಕರಾರುಗಳನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸಿ ಈ ಬರಹವನ್ನು ಮುಗಿಸಬಯಸುವೆ. 'ಸೆಕ್ಯುಲರಿಸಂ ಎಂಬ ಪರಿಕಲ್ಪನೆ' ಎಂಬ ಸುದೀರ್ಘ ಲೇಖನದಲ್ಲಿ('ಬಹುವಚನ ಭಾರತ') ನಾವೆಲ್ಲ ಒಪ್ಪಬಹುದಾದ ಏನೆಲ್ಲವನ್ನು ಅವರು ಹೇಳುವರಾದರೂ, ವರ್ತಮಾನದ ಭಾರತೀಯ ಕೋಮು ಪ್ರಕ್ಷುಬ್ಧತೆಗಳ ಬಗ್ಗೆ ಬರೆಯುವಾಗಲೆಲ್ಲ ಅವರು ಹಿಂದೂ ಕೋಮುವಾದವನ್ನು ಅದರ ಜೋಡಿ ವಿದ್ಯಮಾನವಾದ ಮುಸ್ಲಿಂ ಮೂಲಭೂತವಾದದಿಂದ ಪ್ರತ್ಯೇಕಿಸಿಯೇ ವಿಶ್ಲೇಷಿಸುವ ಮತ್ತು ಖಂಡಿಸುವ ಪ್ರವೃತ್ತಿ ಹಿಂದೂ ಕೋಮುವಾದಿಗಳಿಗೆ ಬಲ ಒದಗಿಸಿದೆಯೆಂದೇ ನಾನು ತಿಳಿದಿದ್ದೇನೆ. ಈ ಬಗ್ಗೆ ನನ್ನ ಹಲವು ಪ್ರತಿಕ್ರಿಯೆ/ ಬರಹಗಳಲ್ಲಿ ನಾನು ಆವರೊಂದಿಗೆ ತೀಕ್ಷ್ಣವಾಗಿ ವಾದಿಸಿಯೂ ಇದ್ದೇನೆ. ವರ್ತಮಾನದ ಯಾವುದೇ ಹಿಂದೂ ಕೋಮುವಾದಿ ವಿದ್ಯಮಾನವನ್ನು-ಅದು ಗೋರಕ್ಷಣೆಯದೇ ಆಗಿರಲಿ, ಲವ್ ಜಿಹಾದ್‌ದೇ ಆಗಿರಲಿ, ತ್ರಿವಳಿ ತಲಾಖ್‌ದೇ ಆಗಿರಲಿ- ರಾಷ್ಟ್ರವಿಭಜನೆಯ ಚರಿತ್ರೆಯಲ್ಲಿ ಇರುವ ಅದರ ಬೇರುಗಳನ್ನು ಗುರುತಿಸದೆ, ಅಂದರೆ ಇಸ್ಲಾಮೀ ಪಾಕಿಸ್ತಾನದ ಮತ್ತು ಅದು ಪ್ರತೀಕವಾಗಿರುವ ಹಲವು ನಮೂನೆಗಳ ಇಸ್ಲಾಮೀ ಮೂಲಭೂತವಾದಗಳ ಅಸ್ತಿತ್ವವನ್ನು ಪರಿಗಣಿಸದೆ, ದ್ವೇಷ ಹಾಗೂ ಹಿಂಸೆಯನ್ನು ಖಂಡಿಸುವುದರ ಹೊರತಾಗಿ ಮತ್ತಾವ ನೀತಿಪಾಠವನ್ನೂ ಹೇಳಲಾಗದು ಎಂಬುದು ನನ್ನ ವಾದ. ಆದರೆ ರಾಜಶೇಖರ್ ಇಸ್ಲಾಮಿ ಮೂಲಭೂತವಾದ ಎಂಬುದಿದೆ ಎಂದು ಮಾಹಿತಿಯ ಮಟ್ಟದಲ್ಲಿ ಒಪ್ಪುವರಾದರೂ (ನೋಡಿ: 'ಅಮೆರಿಕಾದ ಸಾಮ್ರಾಜ್ಯಶಾಹಿಯೂ, ಇಸ್ಲಾಮಿಕ್ ಭಯೋತ್ಪಾದನೆಯೂ': 'ಬಹುವಚನ ಭಾರತ') ಸಾಂದರ್ಭಿಕವಾಗಿಯಾದರೂ

ಮುಟ್ಟಿ ನೋಡಲು ಮಾತ್ರ ಹೋಗುವುದಿಲ್ಲ. ಈ ದೃಷ್ಟಿಯಿಂದ ರಾಜಶೇಖರ್ ಇನ್ನೂ ಹಳೇ ನಮೂನೆಯ ಎಡಪಂಥೀಯರಾಗಿಯೇ ಉಳಿದುಹೋಗಿದ್ದಾರೇನೋ ಎಂಬ ಅನುಮಾನ ನನ್ನದು. ಈ ಬಗ್ಗೆ ಅವರೊಂದಿಗೆ ನಾನು ಹಲವು ಬಾರಿ ಸಾಕಷ್ಟು ನಿಷ್ಠುರವಾಗಿಯೇ ವಾದಿಸಿದ್ದೇನೆ. (ಪ್ರಾತಿನಿಧಿಕವಾಗಿ ನನ್ನ 'ಇಲ್ಲಿ ಯಾವುದೂ ಅಮುಖ್ಯವಲ್ಲ' (ಸಮಾಜವಾದಿ ಸಂಕಥನಗಳು-೪) ಇದರಲ್ಲಿನ 'ಮುಸ್ಲಿಂ ಮೂಲಭೂತವಾದವೂ ಸೆಕ್ಯುಲರ್ ಬುದ್ಧಿಜೀವಿಗಳು' ಲೇಖನವನ್ನು ನೋಡಬಹುದು.)

ರಾಜಶೇಖರ್ ನಮ್ಮ ಓರ್ವ ಪ್ರತಿಭಾವಂತ ಸಾಹಿತ್ಯ ವಿಮರ್ಶಕರೆಂದು ಹೆಸರಾದವರು. ಮೂಲತಃ ಅವರು ಸಾಹಿತ್ಯದ ಶಾಸ್ತ್ರೀಯ ಅಧ್ಯಯನ ನಡೆಸದವರಾಗಿ ಈ ಕ್ಷೇತ್ರದಲ್ಲಿ ಅವರು ತಮ್ಮ ಬರವಣಿಗೆಯಲ್ಲಿ ಹೊಸ ಒಳನೋಟಗಳೊಂದಿಗೆ ತೋರುತ್ತಿರುವ ಆತ್ಮವಿಶ್ವಾಸ ಅವರ ಸಾಹಿತ್ಯ ವಿಮರ್ಶೆಯನ್ನು ಅನನ್ಯಗೊಳಿಸಿದೆ ಎನ್ನಬೇಕು. ನನ್ನ ಓದಿನ ಪರಿಮಿತಿಯಲ್ಲಿ ಹೇಳುವುದಾದರೆ, ಕಾರಂತರ ಕಾದಂಬರಿಗಳು ಮತ್ತು ಶಿವಪ್ರಕಾಶರ ಮೊದಲ ಹಂತದ ಕಾವ್ಯದ ಬಗ್ಗೆ ಬರೆದ ಲೇಖನಗಳು ವಿಶಿಷ್ಟವೆನಿಸಿದವು. ಆದರೆ ಅಡಿಗರ ಕಾವ್ಯಶ್ರೇಷ್ಠತೆಯನ್ನು ಕುರಿತ ಅವರ ಹಠ ಸಮಸ್ಯಾತ್ಮಕವಾದದ್ದು. ಈ ಬರಹದ ಆರಂಭದಲ್ಲಿ ಪ್ರಸ್ತಾಪಿಸಿದ ಇವರ ಈ ತುದಿಯಿಂದ ಆ ತುದಿಯವರೆಗಿನ ಆಲೋಚನಾ ಕ್ರಮದ ಪಯಣದ ತೊಡಕಿಗೆ ಸಂಬಂಧಿಸಿದ್ದು ಇದು ಎಂದು ನಾನು ಭಾವಿಸಿದ್ದೇನೆ, 'ನೀನಾಸಂ' ಅನ್ನು ಉದ್ದೇಶಿಸಿ ಅವರು ಆಡುವ 'ನೀವು ಯಾರ ಮಾತನ್ನೂ ಕೇಳದೆ ನಿಮ್ಮ ಸ್ವಾಯತ್ತತೆಯನ್ನು ಉಳಿಸಿಕೊಳ್ಳಿ' ಎಂಬ ಮಾತಿನ ಹಿನ್ನೆಲೆಯಲ್ಲಿ ಕೇಳಿ ಬರುವ 'ನನ್ನ ಈ ಮಾತನ್ನು ಮಾತ್ರ ಕೇಳಿ' ಎಂಬ (ಸ್ವಾಯತ್ತತೆಗೆ ತಮ್ಮದೇ ಹೊಸ ಅರ್ಥವನ್ನು ಕೊಡುವ!) ದನಿಯಲ್ಲಿನ ಅಮಾಯಕತೆಯೇ ಅವರು ಅಡಿಗರ ಶತಮಾನೋತ್ಸವದ ಸಂದರ್ಭದಲ್ಲಿ ಬರೆದ 'ಅಡಿಗರ ಕಾವ್ಯ ಮತ್ತು ಹಿಂದುತ್ವದ ಸಂಬಂಧ: ಕುದುರದ ಸಂಬಂಧ' ಎಂಬ ಲೇಖನದಲ್ಲಿ (ನೋಡಿ: 'ಹೊಸ ಮನುಷ್ಯ', ಏಪ್ರಿಲ್-ಮೇ, ೨೦೧೮) ಭಾರತೀಯ ಜನಸಂಘಕ್ಕೆ (ಇಂದಿನ ಬಿಜೆಪಿಯ ಪಿತೃ ರೂಪ), ಅದರ 'ಹಿಂದುತ್ವ' ಪ್ರತಿಪಾದನೆಗೂ ಅಡಿಗರ ಕಾವ್ಯಕ್ಕೂ ಸಂಬಂಧವಿಲ್ಲವೆಂದು ಅವರ ಶ್ರೇಷ್ಠ ಕವನಗಳೆಂದು ಭಾವಿಸುವ ಒಂದೆರಡು ಕವನಗಳ ತಮ್ಮದೇ ಧಾಟಿಯ ವಿಶ್ಲೇಷಣೆಯ ಮೂಲಕ ಸಾಧಿಸುವ ಪ್ರಯತ್ನ ಮಾಡಿ ಅಡಿಗರ ಕಾವ್ಯ ಕುರಿತ ತಮ್ಮ ಅಭಿಮಾನವನ್ನು ರಕ್ಷಿಸಿಕೊಳ್ಳುವ ಪ್ರಯತ್ನದಲ್ಲೂ ಕಾಣುವುದು. ಏಕೆಂದರೆ ಕೊನೆಗೆ ಅವರು ಅಡಿಗರು ಹಿಂದುತ್ವವನ್ನು ಸಾಕಷ್ಟು ವಾಚ್ಯವಾಗಿಯೇ ಎತ್ತಿಹಿಡಿಯುವ 'ಅಂಬೇಡ್ಕರ್ ಭೀಮರಾಯರಿಗೆ', 'ಮತ್ತೆ ಮತ್ತೆ ಮೊಳಗಲಿ ಪಾಂಚಜನ್ಯ' ಮುಂತಾದ ಪದ್ಯಗಳನ್ನು ಹೇಗೆ ನೋಡಿದರೂ ಅಡಿಗರ ಕಾವ್ಯವನ್ನು ಪ್ರತಿನಿಧಿಸುವಂತಹ ರಚನೆಗಳಲ್ಲ ಎಂಬ ಷರಾ ಬರೆದು ಕೈತೊಳೆದುಕೊಂಡು ಬಿಡುತ್ತಾರೆ. ಹಾಗೆ ತೊಳೆದುಕೊಂಡ ಮೇಲೂ ಸಾಹಿತ್ಯ ವಿಮರ್ಶೆಯ ಮೂಲ ಪಾಠಗಳಿಗೆ ಅಪಚಾರಗೈದ ಮಸಿ ಅವರ ಅಂಗೈಗಳಲ್ಲಿ ಉಳಿದಿದ್ದರೂ. ಅಡಿಗರ ಕಾವ್ಯದ ಶಿಲ್ಪ ಸೌಂದರ್ಯದ ಬಗ್ಗೆ ಇರುವ ನನ್ನ

ಮೆಚ್ಚುಗೆಯನ್ನು ವಿಸ್ತರಿಸಿ ಹೇಳುವ ಸಂದರ್ಭ ಇದಲ್ಲವಾದ್ದರಿಂದ ರಾಜಶೇಖರರ ಈ ವಿಮರ್ಶೆಯ ಬಗ್ಗೆ ಒಂದು ಮಾತನ್ನಂತೂ ಹೇಳಬೇಕು. ಒಬ್ಬ ಕವಿಯ, ವಿಶೇಷವಾಗಿ 'ನೆಹರೂ ನಿವೃತ್ತರಾಗುವುದಿಲ್ಲ' ಎಂಬ ಕವನದಿಂದ ಆರಂಭವಾದಂತೆ ತನ್ನ ಕಾವ್ಯವನ್ನು ಶುದ್ಧ ರಾಜಕೀಯ ಶೃತಿಯೊಂದಿಗೇ ರಚಿಸಿದ ಅಡಿಗರಂತಹ ಕವಿಯ ಕಾವ್ಯವನ್ನು ಅವರ ರಾಜಕೀಯ ಸತ್ವಕ್ಕಾಗಿ ಶ್ರೇಷ್ಠ ಮತ್ತು ಕಳಪೆ ಎಂದು ವಿಂಗಡಿಸಿ ತೀರ್ಮಾನ ಕೈಗೊಳ್ಳುವುದು ರಾಜತ್ವಕ್ಕೆ ರಾಜನಿಗಿಂತ ಹೆಚ್ಚು ವಿಧೇಯತೆಯನ್ನು ತೋರಿಸುವುದರ ಸೂಚನೆಯಷ್ಟೆ. (ಹಾಗೆ ನೋಡಿದರೆ, ರಾಜಶೇಖರರ ವಾದವನ್ನೇ ಬಳಸಿಕೊಂಡು ನಾಲಗೆಯನ್ನು ಸ್ವಲ್ಪ ಬೇರೆ ದಿಕ್ಕಿಗೆ ಹೊರಳಿಸಬಲ್ಲವರು ಅಡಿಗರ ಕಾವ್ಯ ಮೂಲತಃ ಮೃದು ಹಿಂದುತ್ವದ ಕಾವ್ಯವೇ ಆಗಿದೆ ಎಂದು ಪ್ರತಿಪಾದಿಸಲು ಸಾಧ್ಯವಿದೆ.)

ಈ ಎಲ್ಲ ದೃಷ್ಟಿಯಿಂದ ನೋಡಿದಾಗ ಎಲ್ಲ ಸಿದ್ಧಾಂತಗಳೂ ಕೊಲೆಗಡುಕವೇ ಎನ್ನುವ ರಾಜಶೇಖರರು ಸಿದ್ಧಾಂತವಿಲ್ಲದಿರುವುದೂ ಕೊಲೆಗಡುಕತನಕ್ಕೆ ಕಾರಣವಾಗಬಲ್ಲುದು ಎಂಬ ಅರಿವಿಗೆ ಎರವಾಗಿರುವ ದುರಂತವೂ ಕಂಡೀತು. ಇದ್ದೂ ಇಲ್ಲದಂತಿರುವ ಸ್ಥಿತಿಯೆಡೆಗೆ ಇವರ ಪಯಣ ಸಾಗುವವರೆಗೆ ಇದು ನಡೆದೇ ಇದ್ದೀತು.

ಇದೇ ಸಂದರ್ಭದಲ್ಲಿ ರಾಜಶೇಖರರ ಲಂಕೇಶರ ಎರಡು ಕಥೆಗಳ ಓದಿನ ಪರಿಯ ಬಗ್ಗೆಯೂ ಎರಡು ಮಾತು ಹೇಳಬಹುದು. ಕಮ್ಯೂನಿಸಂನಿಂದ ದೂರ ಸರಿದ ಇವರು ಅದನ್ನು ತಮಗೆ ತಾವೇ ಸಾಬೀತುಪಡಿಸಿಕೊಳ್ಳಲು ವ್ಯಕ್ತಿ ವಿಶಿಷ್ಟವಾದದೆಡೆಗೆ ಚಲಿಸಿರುವುದು 'ರೊಟ್ಟಿ' ಮತ್ತು 'ದಾಳಿ' ಎಂಬ ಈ ಎರಡು ಕಥೆಗಳನ್ನು ಓದಿಕೊಂಡಿರುವ ರೀತಿಗಳನ್ನು ಸೂಚಿಸುತ್ತಿರುವಂತಿದೆ. 'ರೊಟ್ಟಿ' ಮೊದಲಾಗಿ ನಮ್ಮ ದೇಶದ ಸಂದರ್ಭದಲ್ಲಿ ಒಂದು ಕಾಲ್ಪನಿಕ ಕಥೆಯಾಗಿ ಮಾತ್ರ ಕಾಣುವುದನ್ನು ಗುರುತಿಸದೇ ಹೋಗಿರುವ ಅವರು ಬಹುಶಃ ಅಡಿಗರು ಈ ಕಥೆಯನ್ನು ವಿಪರೀತವಾಗಿ ಹೊಗಳಿರುವುದರಿಂದ (ಈ ಕಥೆಯಿರುವ 'ನಾನಲ್ಲ' ಸಂಕಲನದ ಮುನ್ನುಡಿ ನೋಡಿ) ಲಂಕೇಶರ ನವ್ಯ ಕಥನದ ವಿಶಿಷ್ಟ ಗುಣವಾದ ದ್ವಂದ್ವಾತ್ಮಕತೆಯ ರೋಚಕತೆಗೆ ಮಾರುಹೋದಂತಿದೆ. ಇನ್ನು 'ದಾಳಿ' ಒಟ್ಟು ಕಥೆಯ ಆವರಣ ಮತ್ತು ಕಾವಿನ ಹೊರಗೇ ಉಳಿದು, ಫ್ರಾಯ್ಡಿಯನ್ ಲಂಕೇಶರ ಕೈಗೊಂಬೆ ಪಾತ್ರವಾಗಿ ಮೂಡಿರುವ ಮಲ್ಲಿಯ 'ದುಗುಡ'ಕ್ಕೆ ಪ್ರತಿಸ್ಪಂದಿಸಿದಂತಿದೆ. ಎರಡೂ ಕಥೆಗಳಲ್ಲಿ ಕಥೆಗಾರ ಕಥೆಗಾರಿಕೆಗೆ ಮಣಿದು ಸೋತಿರುವುದನ್ನು ರಾಜಶೇಖರ್ ಗುರುತಿಸದೇ ಹೋಗಿದ್ದಾರೆನಿಸುತ್ತದೆ.

ಒಟ್ಟಿನಲ್ಲಿ ರಾಜಶೇಖರ್ ತಾವು ಮೊದಲು ಬಲವಾಗಿ ನಂಬಿದ್ದ ದ್ವಂದ್ವಮಾನ ಭೌತವಾದದ ಹ್ಯಾಂಗ್-ಓವರ್‌ನಿಂದಲೂ ತಪ್ಪಿಸಿಕೊಳ್ಳಲಾಗದೆ ಅತ್ತ ಅದರಿಂದ ದೂರವಾಗಿದ್ದೇನೆ ಎಂದು ತಮಗೆ ತಾವೇ ಸಾಬೀತುಪಡಿಸಿಕೊಳ್ಳಲು ನಡೆಸಬೇಕಾದ ಹೆಣಗಾಟದಿಂದಲು ತಪ್ಪಿಸಿಕೊಳ್ಳಲಾಗದೆ ಬೌದ್ಧಿಕ ಬಳಲಿಕೆಗೆ ಸಿಕ್ಕಂತೆ ಕಾಣುತ್ತದೆ. ಈ ಬಳಲಿಕೆ ಕೇವಲ ರಾಜಶೇಖರರದ್ದು ಆಗಿರದೆ ಈಗ ಭಾರತಕ್ಕೇ ವಿಶಿಷ್ಟವಾದ

ಅಧಿಕಾರಸ್ಥ ಮತೀಯವಾದಿ ಬಲಪಂಥೀಯತೆಯ ಎದುರು ದಿಕ್ಕಟ್ಟಂತಿರುವ ಎಲ್ಲ ಎಡಪಂಥಿಯರದ್ದೂ ಆಗಿದೆ

–ಇಷ್ಟೆಲ್ಲ ಯೋಚಿಸಲು (ತಪ್ಪೋ ಸರಿಯೋ ಅದು ಬೇರೆ ವಿಷಯ), ಬರೆಯಲು ಪ್ರಚೋದಿಸಬಲ್ಲ ಚಿಂತಕರೇ ಸಮಾಜದ ಆರೋಗ್ಯವನ್ನು ಕಾಪಾಡಿಕೊಳ್ಳಲು ಕಾರಣರಾಗುವವರು. ರಾಜಶೇಖರ ಅವರಿಗೆ ಈ ಸಂದರ್ಭದಲ್ಲಿ ನನ್ನ ಶುಭಾಶಯಗಳು.

(ಎಚ್. ಪಟ್ಟಭಿರಾಮ ಸೋಮಯಾಜಿಯವರ ಆಹ್ವಾನದ ಮೇರೆಗೆ ಪ್ರಸ್ತಾವಿತ ಜಿ.ರಾಜಶೇಖರ್ ಅಭಿನಂದನ ಗ್ರಂಥಕ್ಕಾಗಿ ಬರೆದ ಲೇಖನ)

ನಾಗೇಶ ಹೆಗಡೆಯವರ 'ವಿಜ್ಞಾನ–ವಿಶೇಷ'

ವಿಜ್ಞಾನವೆಂಬುದು ರಾಜಕೀಯ ಎಚ್ಚರವೂ ಆಗುವ ಬೆರಗು!

ವಿಜ್ಞಾನವನ್ನು ಕನ್ನಡದಲ್ಲಿ ಬರೆಯುವುದೆಂದರೆ ಅದೊಂದು ವಿಶೇಷ ಕುತೂಹಲ ಹುಟ್ಟಿಸುವ, ವಿಶೇಷ ಪರಿಶ್ರಮದ ಕೆಲಸವೆನ್ನಿಸಿದೆ. ಆದರೆ ಜ್ಞಾನ ಪ್ರಸಾರದ ಸಹಜ ಮಾಧ್ಯಮ ಮಾತೃಭಾಷೆಯೇ ಅಲ್ಲವೆ? ಹಾಗಿದ್ದರೆ ಈ ವಿಶೇಷ ಕುತೂಹಲ ಮತ್ತು ಪರಿಶ್ರಮದ ಮಾತೇಕೆ? ಏಕೆಂದರೆ ಆಧುನಿಕ ವಿಜ್ಞಾನವೆಂದು ಕರೆಯಬಹುದಾದ ಈ ವಿಜ್ಞಾನ ('ಸೈನ್ಸ್') ಜ್ಞಾನವಾಗಿ ಹುಟ್ಟಿದ್ದು ನಮ್ಮ ಮಾತೃಭಾಷೆಯಲ್ಲಿ ಅಲ್ಲ. ಹಲವು ವಿದೇಶಿ ಭಾಷೆಗಳಲ್ಲಿ. ಅದು ಸಂಘಟಿತವಾಗಿ, ಕ್ರೋಡೀಕೃತವಾಗಿ ನಮಗೆ ತಲುಪತೊಡಗಿದ್ದು ಆಧುನಿಕ ಜ್ಞಾನದ ಭಾಷೆಯಾಗಿ ನಮಗೆ ಒದಗಿದ್ದ ಇಂಗ್ಲಿಷ್‌ನಲ್ಲಿ. ಆದುದರಿಂದ ಆ ಭಾಷೆಯಲ್ಲಿರುವ ಈ ಜ್ಞಾನವನ್ನು ಜೀರ್ಣಿಸಿಕೊಂಡು ಆ ಭಾಷೆಯಲ್ಲಿನ ನುಡಿಗಟ್ಟು ಮತ್ತು ಪರಿಭಾಷೆಯ ಸಮಾನಾಂತರ ನುಡಿಗಟ್ಟು ಮತ್ತು ಪರಿಭಾಷೆಗಳ ಪರಿಚಯವಿಲ್ಲದ ನಮ್ಮ ಭಾಷೆಯಲ್ಲಿ ಅದನ್ನು ನಿರೂಪಿಸಲು ಮೊದಲು ವಿಶೇಷ ಕುತೂಹಲ, ಆನಂತರ ವಿಶೇಷ ಶ್ರಮ ಬೇಕು.

ಈ ಕಾಯಕ ಒಂದು ವ್ಯವಸ್ಥಿತ ಪ್ರಯತ್ನವಾಗಿ ಆರಂಭವಾದದ್ದು ಬೆಳ್ಳಾವೆ ವೆಂಕಟನಾರಾಯಣಪ್ಪ ಅವರಿಂದ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರ ಅಧ್ಯಾಪಕರಾಗಿದ್ದ ಅವರು ಕಳೆದ ಶತಮಾನದ ಮುವ್ವತ್ತರ ದಶಕದಷ್ಟು ಹಿಂದೆಯೇ 'ಕರ್ನಾಟಕ ವಿಜ್ಞಾನ ಸಮಿತಿ' ಎಂಬುದೊಂದು ಸಂಸ್ಥೆಯನ್ನು ರಚಿಸಿಕೊಂಡು ಉನ್ನತ ವಿಜ್ಞಾನ ವಿಷಯಗಳನ್ನು ಕನ್ನಡದಲ್ಲಿ ಪರಿಚಯಿಸುವ ಉದ್ದೇಶದಿಂದ 'ವಿಜ್ಞಾನ' ಎಂಬ ಮಾಸ ಪತ್ರಿಕೆಯನ್ನೂ ನಡೆಸಿದರು. ಇದರಲ್ಲಿ ಆಧುನಿಕ ವಿಜ್ಞಾನದ ಸಂಗತಿಗಳನ್ನು ಕನ್ನಡ ಮಾತ್ರ ಬಲ್ಲವರಿಗೆ ತಲುಪಿಸಬೇಕೆಂಬ ಉದಾರ ಬುದ್ಧಿಯ ಜೊತೆಗೆ ಕನ್ನಡವನ್ನು ಆಧುನಿಕ (ವಿ)ಜ್ಞಾನದ ಭಾಷೆಯಾಗಿ ಸಜ್ಜುಗೊಳಿಸಬೇಕೆಂಬ ಉಮೇದೂ ಇತ್ತು, ಈ

ಉದಾರ ಬುದ್ಧಿ ಮತ್ತು ಉಮೇದು ಹಲವು ಏರಿಳಿತಗಳನ್ನು ಕಾಣುತ್ತಾ ಪ್ರಾದೇಶಿಕ ಭಾಷೆಗಳು ಶೈಕ್ಷಣಿಕ ರಂಗಗಳಲ್ಲಿ ಹಿನ್ನೆಲೆಗೆ ದೂಡಲ್ಪಡುತ್ತಿರುವ ಇವತ್ತಿನ ಜಾಗತೀಕರಣದ ದಿನಗಳವರೆಗೆ ಹರಿದು ಬಂದಿದೆ. ಇದನ್ನು ಸಾಧ್ಯ ಮಾಡಿದ ಪ್ರಯತ್ನದಲ್ಲಿ ಹಲವಾರು ಜನರ ಪಾಲಿದೆ.

ನನ್ನ ವಿದ್ಯಾರ್ಥಿ ಜೀವನ ಕಾಲದಿಂದಲೂ ಗಮನಿಸುತ್ತಾ ಬಂದ ಪ್ರಮುಖ ಹೆಸರುಗಳೆಂದರೆ ದೇವರಾಜ ಸರ್ಕಾರ್ (ಜೀವ ವಿಜ್ಞಾನ), ಜೆ.ಆರ್. ಲಕ್ಷ್ಮಣ ರಾವ್ (ಜೀವ ರಸಾಯನ ವಿಜ್ಞಾನ), ಕೆ.ಎಸ್. ಲಕ್ಷ್ಮಣ ರಾವ್ (ಅಸಾವಯವ ರಸಾಯನ ವಿಜ್ಞಾನ), ಜಿ.ಟಿ. ನಾರಾಯಣ ರಾವ್ (ಖಗೋಳ ವಿಜ್ಞಾನ), 'ವಿಜ್ಞಾನಲೋಕ' ಪತ್ರಿಕೆ ಖ್ಯಾತಿಯ ಅಡ್ಯನಡ್ಕ ಕೃಷ್ಣಭಟ್, ಕೆ.ಬಿ. ರಾಮಕೃಷ್ಣ ರಾವ್ (ಇಬ್ಬರೂ ಭೌತ ವಿಜ್ಞಾನ), ಬಿ.ಪಿ. ರಾಧಾಕೃಷ್ಣ ಮತ್ತು ಟಿ.ಆರ್. ಅನಂತರಾಮು (ಇಬ್ಬರೂ ಭೂಗರ್ಭಶಾಸ್ತ್ರ), ರಾಜಶೇಖರ ಭೂಸನೂರಮಠ ಹ.ಶಿ. ಭೈರನಟ್ಟಿ (ವೈಜ್ಞಾನಿಕ ಕಥಾ ಸಾಹಿತ್ಯ) ಮುಂತಾದವರು. ಡಿ.ಎಸ್. ಶಿವಪ್ಪ, ಪಿ.ಎಸ್. ಶಂಕರ್, ಬಸವಣ್ಣ ಮುಂತಾದವರು ವೈದ್ಯವಿಜ್ಞಾನವನ್ನು ಕನ್ನಡದಲ್ಲಿ ಬರೆಯಲಾರಂಭಿಸಿದ ಪ್ರಮುಖರು. ಇನ್ನು ಇವರಿಗೆಲ್ಲ 'ವಿಜ್ಞಾನ ಕೋಶ' ಸಂಪುಟಗಳ ಮೂಲಕ ಸ್ಫೂರ್ತಿದಾಯಕರಾಗಿದ್ದ ಶಿವರಾಮ ಕಾರಂತರನ್ನು ಇಲ್ಲಿ ನೆನೆಯದಿರಲು ಸಾಧ್ಯವೆ? ನಾನು ಎಂ.ಎಸ್.ಸಿ, ಓದುತ್ತಿದ್ದಾಗ ಇವರ ವಿಜ್ಞಾನ ಕೋಶ ಸಂಪುಟಗಳಲ್ಲೊಂದರಲ್ಲಿ 'ಕ್ವಾಂಟಂ ಸಿದ್ಧಾಂತ' ಕುರಿತ ಬರಹ ಓದಿ ನಾನು ಅಕ್ಷರಶಃ ಬೆಚ್ಚಿಬಿದ್ದೆ. ಅವು ಅಷ್ಟು ಅತ್ಯಾಧುನಿಕ ಜ್ಞಾನ ಸಂಗ್ರಹ ಕೋಶಗಳಾಗಿದ್ದವು. ಅವುಗಳ ಕನ್ನಡ ಕ್ವಾಂಟಂ ತತ್ವದಂತಹ ಸಂಕೀರ್ಣ ವಿಷಯವನ್ನೂ ಸಾಮಾನ್ಯ ಕನ್ನಡಿಗನಿಗೆ ಅರ್ಥ ಮಾಡಿಸುವ ಪ್ರಾಮಾಣಿಕ ಪ್ರಯತ್ನದಿಂದ ಮಿಡಿಯುತ್ತಿದ್ದವು. ನಂತರ ನಿರಂಜನರ ಸಂಪಾದಕತ್ವದ 'ಜ್ಞಾನ ಗಂಗೋತ್ರಿ' ಸಂಪುಟಗಳಲ್ಲಿ ವಿಜ್ಞಾನ ವಿಷಯಗಳೂ ಸೇರಿದ್ದವು.

ಅನಂತರದ ಮಹತ್ವಾಕಾಂಕ್ಷೆಯ ಪ್ರಯತ್ನವೆಂದರೆ ಮೈಸೂರು ವಿಶ್ವವಿದ್ಯಾಲಯದ ವಿಶ್ವ ಕೋಶ ಯೋಜನೆಯ ವಿಜ್ಞಾನ ಸಂಪುಟಗಳು. ಇವೆಲ್ಲ ವಿಜ್ಞಾನವನ್ನು ಪದವಿ ತರಗತಿಗಳ ಮಟ್ಟದಲ್ಲಿ ಕಲಿಸುವ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ನಡೆದಿದ್ದ ಪ್ರಯೋಗ–ಪ್ರಯತ್ನಗಳ ಜೊತೆ ಜೊತೆಯಲ್ಲೇ ನಡೆದಿದ್ದವು. ಈ ವಿಷಯದಲ್ಲಿ ಕುವೆಂಪು ಅವರಿಂದ ಪ್ರೇರಣೆ ಪಡೆದಿದ್ದ ಮೈಸೂರು ವಿಶ್ವವಿದ್ಯಾನಿಲಯ ಡಿ.ವಿ. ಅರಸ್ ಮತ್ತು ದೇ. ಜವರೇಗೌಡರು ಕುಲಪತಿಗಳಾಗಿದ್ದಾಗ ಪದವಿ ತರಗತಿಗಳಿಗಾಗಿ ಹೆಚ್ಚೂ ಕಡಿಮೆ ಎಲ್ಲ ವಿಜ್ಞಾನ ವಿಷಯಗಳಿಗಾಗಿ ಪಠ್ಯಪುಸ್ತಕಗಳನ್ನು ಬರೆಸಿ ಸಿದ್ಧಪಡಿಸಿತ್ತು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಗಣಿತಶಾಸ್ತ್ರದ ಅಧ್ಯಾಪಕರಾಗಿದ್ದ ನನ್ನ ಅಣ್ಣ ಡಿ.ಎಸ್. ಚಂದ್ರಶೇಖರಯ್ಯ ಪಿಯುಸಿಗಾಗಿ ಜಿ.ಟಿ. ನಾರಾಯಣರಾಯರೊಂದಿಗೆ ಗಣಿತಶಾಸ್ತ್ರದ ಪಠ್ಯಪುಸ್ತಕವೊಂದರ ರಚನೆಯ ವಿನೂತನ ಪ್ರಯೋಗ ನಡೆಸಿದ್ದು ನನಗಿನ್ನೂ ನೆನಪಿದೆ. ಅದು ಪುಸ್ತಕದ ಒಂದು ಬದಿಯ ಪುಟದಲ್ಲಿ ಇಂಗ್ಲಿಷ್ ಪಠ್ಯವನ್ನೂ, ಇನ್ನೊಂದು ಬದಿಯ ಪುಟದಲ್ಲಿ ಅದರ ಕನ್ನಡ ಆವೃತ್ತಿಯನ್ನೂ ಮುದ್ರಿಸಿ

ವಿದ್ಯಾರ್ಥಿಗಳಿಗೆ ಪೂರೈಸಿದ ಪ್ರಯೋಗ. ಆದರೆ ಇಂತಹ ಎಲ್ಲ ಪ್ರಯೋಗಗಳೂ ಪೋಷಕರ ಬೆಂಬಲವಿಲ್ಲದೆ, ವಿದ್ಯಾರ್ಥಿಗಳ ಆಸಕ್ತಿ ಇಲ್ಲದೆ ವಿಫಲವಾದ ನಂತರ ವಿಶ್ವವಿದ್ಯಾಲಯ ಮಟ್ಟದಲ್ಲಿ ವಿಜ್ಞಾನ ವಿಷಯಗಳಲ್ಲಿ ಕನ್ನಡ ಮಾಧ್ಯಮ ಜಾರಿಯ ಪ್ರಯತ್ನ ಆಯಾ ವಿಶ್ವವಿದ್ಯಾಲಯಗಳ ಅಧಿಕೃತ ವಿದ್ವದ್‌ಪತ್ರಿಕೆಗಳಲ್ಲಿ–ಉದಾ: ಮೈಸೂರು ವಿಶ್ವವಿದ್ಯಾಲಯದ 'ಪ್ರಬುದ್ಧ ಕರ್ನಾಟಕ', ಬೆಂಗಳೂರು ವಿಶ್ವವಿದ್ಯಾಲಯದ 'ಸಾಧನೆ' ಮತ್ತು ಕರ್ನಾಟಕ ವಿಶ್ವವಿದ್ಯಾಲಯದ 'ಕರ್ನಾಟಕ ಭಾರತಿ'– ಆಗಾಗ ಪ್ರಕಟಮಾಡುವುದಕ್ಕೆ ಸೀಮಿತವಾಯಿತು. (ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ಕ್ರಮವಾಗಿ 'ವಿಜ್ಞಾನ ಕರ್ನಾಟಕ' ಮತ್ತು 'ವಿಜ್ಞಾನ ಭಾರತಿ;' ಎಂಬ ವಿಜ್ಞಾನ ವಿಷಯಗಳಿಗೇ ಮೀಸಲಾದ ನಿಯತಕಾಲಿಕೆಗಳನ್ನು ಆರಂಭಿಸಿದವಾದರೂ ಅವು ಬಹುಕಾಲ ಉಳಿಯಲಿಲ್ಲ.) ಇನ್ನೂ ವಿದ್ಯಾರ್ಥಿಯಾಗಿದ್ದಾಗಲೇ ನಾನು 'ಸಾಧನೆ'ಯಲ್ಲಿ ಗಣಿತಶಾಸ್ತ್ರದ 'ಗಣಸಿದ್ಧಾಂತ ಮತ್ತು ಬೂಲಿಯನ್ ಬೀಜಗಣಿತ'ದ ಮೂಲ ತತ್ವಗಳ ಬಗ್ಗೆ ಲೇಖನವೊಂದನ್ನು ಪ್ರಕಟಿಸಲು ಸಾಧ್ಯವಾಗಿತ್ತು ಎಂದರೆ ಪರಿಸ್ಥಿತಿ ಎಷ್ಟು ದುರ್ಭಿಕ್ಷಮಯವಾಗಿತ್ತು ಎಂದು ಊಹಿಸಬಹುದು! ಅವೆಲ್ಲ ಹಠ ಮಾಡಿ ಕನ್ನಡದಲ್ಲಿ ಬರೆದ ಪ್ರಯತ್ನಗಳಾಗಿರುತ್ತಿದ್ದರಿಂದಾಗಿ ಅವಕ್ಕೆ ಬೆರಳೆಣಿಕೆಯಷ್ಟಾದರೂ ಓದುಗರಿದ್ದರೆಂದು ಹೇಳುವುದು ಕಷ್ಟ! ಕನ್ನಡದಲ್ಲಿ ಜ್ಞಾನ ಸೃಷ್ಟಿಸಲೆಂದೇ ಸ್ಥಾಪಿತವಾದ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಕನ್ನಡದಲ್ಲಿ ವಿಜ್ಞಾನ ಪರಿಚಯಿಸುವ ಪ್ರಯತ್ನವೂ ಇವಕ್ಕಿಂತ ಹೆಚ್ಚು ಫಲ ನೀಡಿವೆ ಎಂದು ಹೇಳಲು ಯಾವ ಸಾಕ್ಷ್ಯಗಳೂ ಇಲ್ಲ. ಕನ್ನಡದಲ್ಲಿ ವಿಜ್ಞಾನ ಪರಿಚಯಿಸುವ ಸರ್ಕಾರಿ/ಅರೆ ಸರ್ಕಾರಿ ಪ್ರಯತ್ನಗಳಿಗೆ ಈಗ ಸಾಕ್ಷ್ಯಗಳಾಗಿ ಉಳಿದಿರುವವೆಂದರೆ, ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸರ್ಕಾರದ ಹಣದ ಸುತ್ತ ಬೆಳೆದು ಸರ್ಕಾರಿ ಶಾಲೆಗಳಿಗೆ ವಿತರಿಸಲ್ಪಡುವ ಮೂಲಕ ಉಳಿದಿರುವ ಕೆಲ ನಿಯತಕಾಲಿಕೆಗಳು. ಅವುಗಳ ಬಗ್ಗೆ ಇಲ್ಲಿ ಚರ್ಚೆ ಬೇಡ.

ಇಂತಹ ದುರ್ಭಿಕ್ಷದ ಸಮಯದಲ್ಲಿ ಕನ್ನಡದಲ್ಲಿ ವಿಜ್ಞಾನ ಬರವಣಿಗೆಯ ಆಕಾಶದಲ್ಲಿ ಧೃವತಾರೆಯಂತೆ ಮೂಡಿದವರು ನಾಗೇಶ ಹೆಗಡೆಯವರು. ದೆಹಲಿಯ ಜವಾಹರಲಾಲ್ ವಿಶ್ವವಿದ್ಯಾನಿಲಯದಂತಹ ಪ್ರತಿಷ್ಠಿತ ವಿಶ್ವವಿದ್ಯಾನಿಲಯದಲ್ಲಿ ಪರಿಸರಶಾಸ್ತ್ರದ ಪದವಿ ಪಡೆದ ನಂತರ ಸಿಕ್ಕಿಬಿದ್ದ ಪ್ರೇಮಪಾಶದ ಕಾರಣದಿಂದಾಗಿ ಪಿಹೆಚ್‌ಡಿ ಅಧ್ಯಯನದಿಂದ ಹೊರದೂಡಲ್ಪಟ್ಟು ಅದೇಕೆ ಮತ್ತು ಹೇಗೆ ಕನ್ನಡ ಪತ್ರಿಕೋದ್ಯಮಕ್ಕೆ ಪ್ರವೇಶಿಸಿದರೋ ನನಗೆ ತಿಳಿಯದು! ಆದರೆ ಅದು ಕನ್ನಡದ ಸೌಭಾಗ್ಯವೇ ಆಗಿತ್ತು ಎಂದು ಈ ಮೂರು ದಶಕಗಳ ನಂತರ ನಿಸ್ಸಂಶಯವಾಗಿ ಹೇಳಬಹುದು. ವಿಜ್ಞಾನ ಸಂವಹನದ ವಿಷಯದಲ್ಲಿ ಕನ್ನಡದ ಭಾಗ್ಯದ ಬಾಗಿಲು ಹೀಗೆ ಈ ದಿಕ್ಕಿನಲ್ಲಿ ತೆರೆಯುವ ಹೊತ್ತಿಗೆ ವೈದ್ಯ ವಿಜ್ಞಾನದ ಹೊರತಾಗಿ ಮಿಕ್ಕೆಲ್ಲ ವಿಜ್ಞಾನ ಶಾಖೆಗಳ ಸಂಗತಿಗಳ ಬಗೆಗಿನ ಬರವಣಿಗೆ ಹೆಚ್ಚೂ ಕಡಿಮೆ ಸ್ತಬ್ಧವಾಗಿತ್ತು. ಬಹುಶಃ ಖಗೋಳ ವಿದ್ಯಮಾನಗಳ ಬಗ್ಗೆ ಬರೆಯುವ ಜಿ.ಎಸ್. ಶೈಲಜಾ ಮತ್ತು 'ಪ್ರಜಾವಾಣಿ'ಯ ಅಂದಿನ 'ಸಾಪ್ತಾಹಿಕ ಪುರವಣಿ' ಸಂಚಿಕೆಗಳಲ್ಲಿನ

ಬಾಲ ಪುಟಗಳಿಗಾಗಿ ಬರೆಯುತ್ತಿದ್ದ ವಾಸುದೇವ ಇದಕ್ಕೊಂದು ಅಪವಾದವಾಗಿದ್ದರು. ಶೈಲಜಾ ಅವರ ಅಪವಾದಕ್ಕೆ ಕಾರಣ ಖಗೋಳ ವಿದ್ಯಮಾನಗಳು ಸಾಮಾನ್ಯ ಜನರ ಕುತೂಹಲದ ಸಂಗತಿಗಳಾಗಿದ್ದುದು.

ಈ ಹೊತ್ತಿಗೆ ಜನಸಾಮಾನ್ಯರ ಕುತೂಹಲ ಕೆರಳಿಸತೊಡಗಿದ್ದ ಹೊಸ ವಿಜ್ಞಾನ ಶಾಖೆಯೆಂದರೆ ಪರಿಸರ ವಿಜ್ಞಾನ. ಇನ್ನೂ ನಿಖರವಾಗಿ ಹೇಳಬೇಕೆಂದರೆ ಜೀವಪರಿಸರಶಾಸ್ತ್ರ. ಇದನ್ನು ವಿಜ್ಞಾನದ ಇನ್ನೊಂದು ಶಾಖೆಯೆಂದು ಕರೆಯುವುದಕ್ಕಿಂತ ಎಲ್ಲ ವಿಜ್ಞಾನ ಶಾಖೆಗಳ ಸಂಗಮ ಬಿಂದು ಅಥವಾ ಎಲ್ಲ ವಿಜ್ಞಾನಗಳ ಸಾರ್ಥಕತೆಯ ಒರೆಗಲ್ಲು ಎನ್ನುವ ಅರ್ಥದಲ್ಲಿ ಆತ್ಯಂತಿಕ ಅಥವಾ ಪರಮ ವಿಜ್ಞಾನ ಎನ್ನುವುದು ಹೆಚ್ಚು ಉಚಿತವಾದೀತು. ವಿಜ್ಞಾನ ಮನುಷ್ಯನ ಒಳಿತಿಗೇ ಇರುವುದಾದರೆ ಅವುಗಳ ಮೇರೆವರಿಯದ ಬೆಳವಣಿಗೆ ಮನುಷ್ಯನ ಬಾಳ ತಾಣವನ್ನು ಏನು ಮಾಡಿದೆ ಎಂಬ ಪ್ರಶ್ನೆ ಅನಿವಾರ್ಯವಾಗಿ ಹುಟ್ಟಿದ ಸಂದರ್ಭದಲ್ಲಿ ಮೂಡಿದ ವಿಜ್ಞಾನವಿದು. ಜನಸಾಮಾನ್ಯರನ್ನೂ ಚರ್ಚೆಗೆ ಆಹ್ವಾನಿಸಬಲ್ಲ ವಿಜ್ಞಾನ ಇದಾಗಿತ್ತು. ನಾಗೇಶ ಹೆಗಡೆಯವರು ಇಂತಹ ಸಂದರ್ಭಕ್ಕೆಂದೇ ಸಿದ್ಧವಾಗಿ ಬಂದ ಲೇಖಕರಾಗಿದ್ದರು. ಸರಿಯಾದ ಸಮಯಕ್ಕೆ ಸರಿಯಾದ ಜಾಗಕ್ಕೆ ಅವರ ಆಗಮನವಾಗಿತ್ತು. ಆ ಹೊತ್ತಿಗೆ ಆಕಾಶವಾಣಿಯಲ್ಲಿ ವಿಜ್ಞಾನ ಆಧಿಕಾರಿಯಾಗಿದ್ದ ಎಚ್. ಆರ್. ಕೃಷ್ಣಮೂರ್ತಿಯವರೂ, ಅರಣ್ಯ ಇಲಾಖೆಯ ಉನ್ನತ ಅಧಿಕಾರಿಗಳಾಗಿದ್ದ ಯಲ್ಲಪ್ಪರೆಡ್ಡಿಯವರೂ ಈ ವಿಷಯದ ಬಗ್ಗೆ ಬರೆಯುತ್ತಿದ್ದರಾದರೂ, ಲೇಖಕರಾಗಿ ಹವ್ಯಾಸಿಗಳಾಗಿದ್ದರು ಮತ್ತು ಪರಿಸರದ ಸೀಮಿತ ವ್ಯಾಖ್ಯೆಯ ಒಳಗಿನ ಬರಹಗಾರಾಗಿದ್ದರು. ಇದರಿಂದಾಗಿ ಪರಿಸರ ವಿಷಯಗಳನ್ನು ವಿಜ್ಞಾನದ ಇತರ ಶಾಖೆಗಳಿಗಲ್ಲದೆ ಸಾರ್ವಜನಿಕ ಜೀವನದ ಹಲವು ನಿರ್ಣಾಯಕ ಸಂಗತಿಗಳಿಗೂ ಇರುವ ಸಂಬಂಧಗಳನ್ನು ಜನಸಾಮಾನ್ಯರ ಭಾಷೆಯಲ್ಲಿ ವಿವರಿಸಬಲ್ಲವರಾಗಿದ್ದ ಹೆಗಡೆಯವರ ಆಗಮನಕ್ಕೆ ಸೀಮಿತ ಅರ್ಥದಲ್ಲಾದರೂ ಒಂದು ಐತಿಹಾಸಿಕತೆ ಒದಗಿತ್ತು.

ಈ ಸಂದರ್ಭವನ್ನು ಇನ್ನಷ್ಟು ಸ್ಪಷ್ಟವಾಗಿ ವಿವರಿಸುವುದಾದರೆ, ಈ ಹೊತ್ತಿಗೆ ಕನ್ನಡದಲ್ಲಿ ವಿಜ್ಞಾನ ಬರವಣಿಗೆ ಎನ್ನುವುದು ಶೈಕ್ಷಣಿಕ ಪಾಠಗಳಾಗಿ ಪ್ರಯೋಗದಲ್ಲಿ ವಿಫಲವಾಗಿ ಶಿಕ್ಷಾರ್ಥಿಗಳ ಬದಲಾಗಿ ಜನಸಾಮಾನ್ಯರನ್ನು ಉದ್ದೇಶಿಸಿ ವಿನ್ಯಾಸಗೊಳ್ಳುವ ಅಗತ್ಯ ಮೂಡಿತ್ತು. ಜೊತೆಗೇ ಇನ್ನೊಂದು ಬೆಳವಣಿಗೆಯೂ ವಿಜ್ಞಾನ ಬರವಣಿಗೆಯ ಸ್ವರೂಪವನ್ನು ಬದಲಿಸಿತ್ತು. ಕಳೆದ ಶತಮಾನದ ಕೊನೆಯ ವರ್ಷಗಳ ಹೊತ್ತಿಗೇ ವಿಜ್ಞಾನದ ಬಗೆಗಿನ ಉತ್ಸಾಹ, ಅದು ತಂತ್ರಜ್ಞಾನದ ರೂಪದಲ್ಲಿ ಮಾಡತೊಡಗಿದ್ದ ಅನಾಹುತಗಳ ಪರಿಣಾಮವಾಗಿ ಕುಗ್ಗತೊಡಗಿತ್ತು. ಬದಲಿಗೆ ಅದರ ವಿಮರ್ಶೆಯ ಅಗತ್ಯ ಕಂಡುಬರತೊಡಗಿತ್ತು. ಇದರಿಂದಾಗಿ ಕನ್ನಡದಲ್ಲಿ ವಿಜ್ಞಾನ ಬರವಣಿಗೆ ಎಂಬುದು ವೈಜ್ಞಾನಿಕ ಮನೋಭಾವದ ಶಿಸ್ತಿಗೆ ಅಗತ್ಯವಾದ ನಿಷ್ಕೃಷ್ಟ, ನಿಖರ ಪರಿಭಾಷೆ ಮತ್ತು ಅದನ್ನು ಕನ್ನಡ ವಾಕ್ಯರಚನೆಯ ಜಾಯಮಾನಕ್ಕೆ ಒಗ್ಗಿಸಿ ಸಂವಹನಗೊಳಿಸುವ

ಯಮಯಾತನೆಯಿಂದ ಪಾರಾಗಿ ಸಾರ್ವಜನಿಕ ಆಸಕ್ತಿ ಮತ್ತು ಕುತೂಹಲಗಳನ್ನು ತಣಿಸುವ ಸಾಮಾನ್ಯ ಜ್ಞಾನದ ನೆಲೆಯ ಸಂವಹನ ವ್ಯಾಪಾರ ವಿಷಯವಾಗಿತ್ತು. ಕೆಲಸ ಸುಲಭವಾಗಿತ್ತು ಎಂದು ನಾನು ಹೇಳುತ್ತಿಲ್ಲ ಬದಲಿಗೆ ಕನ್ನಡದಲ್ಲಿ ವಿಜ್ಞಾನ ಸಂವಹನದ ಹೊಸ ಶಿಸ್ತನ್ನು ರೂಢಿಸಿಕೊಳ್ಳಬೇಕಿತ್ತು. ಇದಕ್ಕೆ ನಾಗೇಶ ಹೆಗಡೆಯವರು, ಅವರ ನಂತರದ ಬರಹಗಳಲ್ಲಿನ ಕನ್ನಡ ಕುಶಲತೆಯುನ್ನು ಗಮನಿಸಿ ಹೇಳಬಹುದಾದರೆ, ಹೇಳಿ ಮಾಡಿಸಿದಂತಹ ವ್ಯಕ್ತಿಯಾಗಿದ್ದರು. ಈ ಹೊತ್ತಿಗೆ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಇಂತಹ ಸಂವಹನವನ್ನು ತಮ್ಮ ಹಲವು ಅನುವಾದ ಮತ್ತು ಮೂಲ ಕೃತಿಗಳ ಮೂಲಕ ಬಹು ಯಶಸ್ವಿಯಾಗಿ ನಿರ್ವಹಿಸಿದ್ದರಾದರೂ, ಅವರು ಹೆಚ್ಚಾಗಿ ವಿಸ್ಮಯಕಾರಕ ವಿಷಯಗಳ ಬಗ್ಗೆಯೇ ಜನಪ್ರಿಯ ಪತ್ತೇದಾರಿ ಶೈಲಿಯಲ್ಲಿ ಬರೆಯುತ್ತಿದ್ದುದರಿಂದ ಅವರ ಬರಹಗಳು ಅಕ್ಕಪಕ್ಕದ ವಿಷಯಗಳಿಗಾಗಲೀ, ಸಮಕಾಲೀನ ಬದುಕಿನ ತಾಕ್ಷಣಿಕ ಸಂದರ್ಭಗಳಿಗಾಗಲೀ ವಿಸ್ತರಿಸುವ ಗುಣ ಹೊಂದಿರಲಿಲ್ಲ. ನೇರವಾಗಿ ಹೇಳುವುದಾದರೆ ತೇಜಸ್ವಿ ಬರಹಗಳಿಗೆ ಅವುಗಳ ಉದ್ದೇಶ ಮತ್ತು ಸ್ವರೂಪಗಳ ಕಾರಣಗಳಿಂದಾಗಿಯೇ ಪತ್ರಿಕಾ ಬರವಣಿಗೆಯ ಜೀವಾಳವಾದ ಸದ್ಯತನ ಇರುತ್ತಿರಲಿಲ್ಲ. ಹಾಗಾಗಿ ಪತ್ರಕರ್ತನ ಲೇಖನಿ ಹಿಡಿದು ಬಂದ ವಿಜ್ಞಾನ ಲೇಖಕ ನಾಗೇಶ ಹೆಗಡೆಯವರು ಒಂದು ವಿಷಯಕ್ಕಿರುವ ತುರ್ತಿನ ಆಯಾಮವನ್ನು ಗಮನಿಸಿ ಅಥವಾ ಅದನ್ನು ಸುದ್ದಿಯನ್ನಾಗಿ ಪರಿವರ್ತಿಸಿ ಅದರ ಸದ್ಯತನದೊಂದಿಗೆ ಅದನ್ನು ಸಾರ್ವಜನಿಕ ಆಸಕ್ತಿಯ, ಕುತೂಹಲದ ಸಂಗತಿಯನ್ನಾಗಿ ಮಾಡುವ ಪ್ರತಿಭೆಯನ್ನೂ ಪ್ರದರ್ಶಿಸಿ ವಿಜ್ಞಾನ ಲೇಖಕರಾಗಿ ಒಂದು ಅನನ್ಯ ಸ್ಥಾನವನ್ನು ತಮ್ಮದಾಗಿಸಿಕೊಂಡರು. ಇದಕ್ಕೆ ಹೆಗಡೆಯವರು ಈವರೆಗೆ ಬರೆದಿರುವ–ನಿರ್ದಿಷ್ಟವಾಗಿ 'ಪ್ರಜಾವಾಣಿ'ಯ 'ವಿಜ್ಞಾನ ವಿಶೇಷ' ಅಂಕಣಕ್ಕಾಗಿ ಬರೆದ ನೂರಾರು ಬರಹಗಳೇ ಸಾಕ್ಷಿ.

ಈ ಬರಹಗಳಲ್ಲಿ ಯಾವೊಂದೂ ಬರೀ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ್ದಲ್ಲ. ಬದಲಿಗೆ ವಿಜ್ಞಾನ ಒಂದಲ್ಲ ಒಂದು ರೂಪದಲ್ಲಿ ನಮ್ಮ ಬದುಕಿನ ಸೂಕ್ಷ್ಮಗಳನ್ನು ಮುಟ್ಟಿ ನಮ್ಮ ಸಾರ್ವಜನಿಕ ಎಚ್ಚರವನ್ನು ಬಡಿದೆಬ್ಬಿಸುವ ಸಾರ್ವತ್ರಿಕ ವಿಚಾರವಾಗಿ ಮಾರ್ಪಾಡಾಗಿ ಪ್ರಸ್ತುತಗೊಳ್ಳುತ್ತದೆ. ಹಾಗಾಗಿಯೇ ಅವರು ಕರೋನಾ ವೈರಸ್ಸಿನ ಬಗ್ಗೆಯೇ ಬರೆಯಲಿ, ಗೋವಿನ ಬಗ್ಗೆಯೇ ಬರೆಯಲಿ, ಒಂದು ವಿಮಾನ ಅಪಘಾತದ ಬಗ್ಗೆಯೇ ಬರೆಯಲಿ, ನಮ್ಮ ಇಬ್ಬರು ವಿಜ್ಞಾನಿಗಳ ಬಗ್ಗೆಯೇ ಬರೆಯಲಿ, ವಿಜ್ಞಾನ ಕಾಂಗ್ರೆಸ್‌ನ ಬಗ್ಗೆಯೇ ಬರೆಯಲಿ, ಸಾವಯವ ಕೃಷಿ ಅಥವಾ ಕುಲಾಂತರಿಗಳ ಬಗ್ಗೆಯೇ ಬರೆಯಲಿ, ಪ್ರಾಣಿ ಸಂಕುಲದ ಬೆದೆಗಳ ಬಗ್ಗೆಯೇ ಬರೆಯಲಿ, ಅಧಿಕ ವಾಸ್ತವ ಅಥವಾ ಕೃತಕ ಬುದ್ಧಿಮತ್ತೆಯ ಬಗ್ಗೆಯೇ ಬರೆಯಲಿ, ನಗರೀಕರಣದ ಅನಾಹುತಗಳ ಬಗ್ಗೆಯೇ ಬರೆಯಲಿ–ಹೀಗೆ ನೂರಾರು ಉದಾಹರಣೆಗಳನ್ನು ಕೊಡುತ್ತಾ ಹೋಗಬಹುದು – ಅಲ್ಲಿ ಬದುಕು ಮತ್ತು ವಿಜ್ಞಾನ ಜೊತೆ ಜೊತೆಯಾಗೇ ಇದ್ದುಕೊಂಡು ಅವೆರಡಕ್ಕೂ ಹೊಸ ವ್ಯಾಖ್ಯಾನಗಳನ್ನೇ ಬರೆಯುವ ತುಡಿತ ತೋರುತ್ತವೆ.

ಹಿಂದೆ ವೈಜ್ಞಾನಿಕ ಮನೋಭಾವದ ಬಗ್ಗೆ ನಾವು ಬಹುವಾಗಿ ಮಾತಾಡುತ್ತಿದ್ದೆವು. ಆಗ ಅದು ಬರೀ ಅಮೂರ್ತ ತತ್ವವಾಗಿ ಕಾಣುತ್ತಿತ್ತು. ಈಗ ಅದು ಜೀವಂತ ಅನುಭವವಾಗಿ ನಮ್ಮ ದಿನ ನಿತ್ಯದ ವರ್ತನೆಗಳನ್ನು, ನಮ್ಮ ಆಯ್ಕೆಗಳನ್ನು, ಅಭಿರುಚಿಗಳನ್ನು ಸದಾ ಪ್ರಶ್ನಿಸುತ್ತಾ-ನಾವು ಸೂಕ್ಷ್ಮಜ್ಞರಾಗಿದ್ದರೆ – ಜೀವಂತವಾಗಿಡುತ್ತದೆ. ವಿಜ್ಞಾನ ನಮ್ಮ ರಾಜಕಾರಣಧ ಭಾಗವಾಗುವ ಈ ಪರಿ ನಾಗೇಶ ಹೆಗಡೆಯವರ 'ವೈಜ್ಞಾನಿಕ ಕೈಚಳಕ'ದ ಫಲ ಎನ್ನಲೆ? ವಿಜ್ಞಾನ ಲೇಖಕ/ಅಂಕಣಕಾರರೆಂಬುದರ ಹೊರತಾಗಿ ಕನ್ನಡ ಪತ್ರಕರ್ತರಾಗಿ (ಏಕೆಂದರೆ ಅವರು 'ಪ್ರಜಾವಾಣಿ' ಮತ್ತು 'ಸುಧಾ'ಗಳಲ್ಲಿ ಸಂಪಾದಕೀಯ ಕರ್ತವ್ಯಗಳನ್ನೂ ನಿರ್ವಹಿಸಿದ್ದಾರೆ) ನಾಗೇಶ ಹೆಗಡೆಯವರ ಸಾಧನೆಗಳೇನು ಎಂಬುದು ನನಗೆ ಗೊತ್ತಿಲ್ಲ. ಆದರೆ ಪರಿಸರಶಾಸ್ತ್ರದ ಸ್ವರೂಪದ ಕಾರಣದಿಂದಲೋ ಅಥವಾ ಜೆಎನ್‌ಯು ಶೈಕ್ಷಣಿಕ ಆವರಣದಲ್ಲಿ ಆಗ ತುಡಿಯುತ್ತಿದ್ದ ಜನಪರ ರಾಜಕೀಯ ಮಿಡಿತಗಳ ಕಾರಣದಿಂದಲೋ ಅಥವಾ ಈ ಎರಡೂ ಸೇರಿಯೋ ಇವರು ಕನ್ನಡಿಗರಲ್ಲಿ ಮತ್ತೆ ವಿಜ್ಞಾನ ವಿಷಯಗಳ ಪ್ರಸ್ತುತಿ/ಚರ್ಚೆಗಳ ಮೂಲಕವೇ ಒಂದು ಅಗತ್ಯ ರಾಜಕೀಯ ಎಚ್ಚರವನ್ನೂ ಮೂಡಿಸುತ್ತಿದ್ದಾರೆ.

ಇನ್ನೊಂದು ಮುಖ್ಯ ವಿಷಯವನ್ನು ಪ್ರಸ್ತಾಪಿಸಿ ನಾನು ಈ ಲೇಖನವನ್ನು ಮುಗಿಸಬಯಸುವೆ. 'ಪ್ರಜಾವಾಣಿ'ಯ ಇವರ 'ವಿಜ್ಞಾನ ವಿಶೇಷ' ಅಂಕಣದ ನಿಯಮಿತ ಓದುಗನಾದ ನನಗೆ ಈ ಅಂಕಣದಲ್ಲಿ ವಸ್ತು ಅಥವಾ ನಿರೂಪಣೆಯ ವಿಷಯದಲ್ಲಿ ತುಂಬ ಅಸಾಮಾನ್ಯವಾದುದದನ್ನು ಕಂಡಾಗಲೆಲ್ಲ ಅವರಿಗೆ ವೈಯಕ್ತಿಕವಾಗಿ ತಿಳಿಸಿ ಅಭಿನಂದಿಸುವುದು ಒಂದು ರೂಢಿ. ಹೆಗಡೆಯವರು ಈವರೆಗೆ ಬರೆದಿರುವ ಇಂತಹ ಲೇಖನಗಳನ್ನೊಳಗೊಂಡ ಹತ್ತಕ್ಕೂ ಹೆಚ್ಚು ಸಂಕಲನಗಳನ್ನು ನಾನು ಇತ್ತೀಚೆಗೆ ತಿರುವಿ ಹಾಕಿದಾಗ ಇವರು ಕನ್ನಡಕ್ಕೆ, ಕನ್ನಡ ಸಮಾಜಕ್ಕೆ ಸಲ್ಲಿಸಿರುವ ಸೇವೆಯ ವೈವಿಧ್ಯ ನೋಡಿ ಬೆಕ್ಕಸಬೆರಗಾದೆ. ನಾನು ಓರ್ವ ವಿಜ್ಞಾನದ ವಿದ್ಯಾರ್ಥಿ ಆಗಿದ್ದರೂ, ಓರ್ವ ಸಾಮಾಜಿಕ ವಿಶ್ಲೇಷಣಾಕಾರನೂ ಆಗಿ ವಿಜ್ಞಾನ ಮಾನವಕುಲಕ್ಕೆ ಎಷ್ಟೆಲ್ಲ ಒಳ್ಳೆಯದನ್ನು ಮಾಡಿದೆಯೋ ಅದನ್ನೆಲ್ಲ ತೊಳೆದು ಹಾಕುವಂತೆ ಅದಕ್ಕಿಂತ ಹೆಚ್ಚು ದುಷ್ಟ ಕೆಲಸಗಳನ್ನೂ ಮಾಡುತ್ತಿದೆ ಎನಿಸತೊಡಗಿ ಆ ಬಗ್ಗೆ ಮಾತಾಡತೊಡಗಿದಾಗಲೆಲ್ಲ ಹೆಗಡೆಯವರು ನನ್ನಷ್ಟೇನೂ ಉದ್ವಿಗ್ನರಾಗದೆ 'ಈಗ 'ಪ್ರತಿ ವಿಜ್ಞಾನ' ಅಥವಾ 'ಸಮಾನಾಂತರ ವಿಜ್ಞಾನ' ಎಂಬುದು ಬರುತ್ತಿದೆ' ಎಂದೆನ್ನುತ್ತಾ ನನ್ನನ್ನು ಸಮಾಧಾನ ಪಡಿಸುತ್ತಿದ್ದುದುಂಟು. ಈ 'ಪ್ರತಿ ವಿಜ್ಞಾನ' ಎಂಬುದು ಎಲ್ಲಿದೆ ಎಂದು ನಾನು ಆಶ್ಚರ್ಯಪಡುತ್ತಿದ್ದ ಹೊತ್ತಿನಲ್ಲಿ ಹೆಗಡೆಯವರ ಒಟ್ಟೂ ಬರಹಗಳನ್ನು ಈ ಸಂಕಲನಗಳ ರೂಪದಲ್ಲಿ ಒಮ್ಮೆಗೇ ಗಮನಿಸಿದಾಗ ಅದರ ಹೊಳಹುಗಳು ನನಗೆ ಕಾಣತೊಡಗಿದವು. ಹಾಗೆ ನೋಡಿದರೆ ತಮ್ಮ ಬರಹಗಳ ಮೂಲಕ ಈ ಲೇಖಕರು ಮಾಡುತ್ತಿರುವುದೇ 'ಪ್ರತಿ ವಿಜ್ಞಾನದ ಪಾಠ'ಗಳನ್ನು ಎನ್ನಿಸತೊಡಗಿತು. ಇವರ ಮುಖ್ಯ ಅಂಕಣದ ಶೀರ್ಷಿಕೆ 'ವಿಜ್ಞಾನ ವಿಶೇಷ' ಅಂತ ಇದ್ದರೂ, ಅಲ್ಲಿ ವಿಶೇಷ ಇರುವುದು ಅಲ್ಲಿನ ವಿಜ್ಞಾನದಲ್ಲಲ್ಲ; ಬದಲಿಗೆ,

ಅದರ ವಿಮರ್ಶೆಯ ಒಡಲಲ್ಲಿ. ಅವರು ಟಂಕಿಸಿ ಬಳಸುತ್ತಿರುವ 'ಭೋಗ ಪ್ರಳಯ' ಎಂಬ ಶಬ್ದ ಜೋಡಿ (ಈ ಹೆಸರಿನ ಒಂದು ಚಿತ್ರ ಪ್ರದರ್ಶನ ಮಾಲಿಕೆಯನ್ನೂ ಅವರು ವಿನ್ಯಾಸ ಮಾಡಿದ್ದಾರೆ.) ರೂಪಿಸುವ ಪರಿಕಲ್ಪನೆ ಮತ್ತು ಅದರಡಿ ಅವರು ಬರೆಯುತ್ತಿರುವ ಲೇಖನಗಳ ಒಂದು ದಂಡನ್ನೇ ನಾವು ಗುರುತಿಸಬಹುದು. ಇವೆಲ್ಲ ಬೊಟ್ಟು ಮಾಡುವುದು, ಗಾಂಧಿ ಹೇಳಿದ ಗ್ರಾಮ ಸ್ವರಾಜ್ಯದ ಕನಸಿನತ್ತಲೇ: ಆಧುನಿಕ ತಂತ್ರಜ್ಞಾನ ಹುಟ್ಟು ಹಾಕಿ ನಮ್ಮ ಬದುಕನ್ನು ಅಸಾವಯವಗೊಳಿಸಿರುವ ದುರಂತದತ್ತಲೇ. ನಮ್ಮ ಕಾಲಕ್ಕೆ ತಕ್ಕ ಗ್ರಾಮ ಸ್ವರಾಜ್ಯವೊಂದನ್ನು ನಾವೇ ರೂಪಿಸಿಕೊಳ್ಳಬೇಕಾದ ತುರ್ತಿನತ್ತಲೇ.

ಈ ಎಲ್ಲ ಮಾತುಗಳಾಚೆ ಹೆಗಡೆಯವರ ಒಟ್ಟೂ ಕೆಲಸದ ಬಗ್ಗೆ ನನ್ನ ಒಂದೆರಡು ತಕರಾರುಗಳೂ ಇವೆ ಎಂಬುದನ್ನೂ ಇಲ್ಲಿ ದಾಖಲಿಸಬೇಕು. ಒಂದು, ದೇಶದಲ್ಲಿನ ಸದ್ಯದ ಅಭಿವೃದ್ಧಿ ಗತಿಯನ್ನು ಕುಗ್ಗಿಸದೇ, ಆದರೆ ಹೆಚ್ಚಿಸದೆ ಅವರೇ ಹೇಳುವ 'ಭೋಗ ಪ್ರಳಯ'ದ ಅನಾಹುತಗಳನ್ನು ತಪ್ಪಿಸಬಹುದೆಂದು ಚರ್ಚೆಯೊಂದರ ಸಮಯದಲ್ಲಿ ಅವರು ಆಡಿದ ಮಾತು ನನ್ನಲ್ಲಿ ಗಾಬರಿ ಹುಟ್ಟಿಸಿದೆ. ಈ ಮಾತನ್ನು ಅವರು ಅದರಲ್ಲಿ ಪೂರ್ಣ ನಂಬಿಕೆ ಇಲ್ಲದೆ ಚರ್ಚೆಯ ಒತ್ತಡದಲ್ಲಿ ಆಡಿದ ಮಾತು ಎಂದೇ ಭಾವಿಸುವೆ. ಇನ್ನೊಂದು, ಅವರು ವಿದೇಶಿ ದೇಣಿಗೆ ಪಡೆಯುವ ಸರ್ಕಾರೇತರ ಸಂಸ್ಥೆಗಳ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಬಗ್ಗೆ ನನ್ನ ಗಂಭೀರ ತಕರಾರಿದೆ. ಇದನ್ನು ಅವರಿಗೆ ಸಾಕಷ್ಟು ಪರಿಣಾಮಕಾರಿಯಾಗಿಯೇ ತಿಳಿಸಿದ್ದೇನೆ. ಅವರಿಂದ ಈ ಸಂಬಂಧವಾದ ಉಚಿತ ಕ್ರಮಕ್ಕಾಗಿ ನಾನು ಕಾಯುತ್ತಿದ್ದೇನೆ.

(ಈ ಲೇಖನದಲ್ಲಿ ನನ್ನ ತಿಳುವಳಿಕೆಯ ಪರಿಮಿತಿಯಿಂದಾಗಿ ಯಾವುದೇ ಮಾಹಿತಿ ಅಥವಾ ಸಾಧಕರ ಹೆಸರು ಬಿಟ್ಟು ಹೋಗಿದ್ದರೆ ಕ್ಷಮೆ ಇರಲಿ)

(ನಾಗೇಶ ಹೆಗಡೆಯವರ ಅಭಿನಂದನ ಗ್ರಂಥಕ್ಕಾಗಿ ಬರೆದ ಲೇಖನ; ೨೦೨೦)

ಕುಟುಂಬ ವತ್ಸಲರೂ ಆದ
ನಿಸ್ವಾರ್ಥ ಸೇವೆಗೆ ಸಮರ್ಪಿತರಾದ ವೈದ್ಯ

ನಾನು ಡಾ. ಸಿ.ಆರ್. ಚಂದ್ರಶೇಖರ್ ಅವರ ಪತ್ನಿ ಡಿ.ಎಸ್. ರಾಜೇಶ್ವರಿಯ ಓರ್ವ ಅಣ್ಣ. ಹಾಗಾಗಿ ನಾನು ಅವರ ವಿವಾಹವಾದ ಸುಮಾರು ೪೫ ವರ್ಷಗಳಿಂದ ಅವರನ್ನು ಬಲ್ಲೆ. ಅವರೊಬ್ಬ ಸರಳ, ಸ್ನೇಹ ಜೀವಿ. ಸಿಆರ್‌ಸಿ ಅವರೊಡನೆಯ ಕೌಟುಂಬಿಕ ಒಡನಾಟದುದ್ದಕ್ಕೂ ನಾನು ಅವರ ಈ ಗುಣಗಳನ್ನು ನಿರಂತರವಾಗಿ ಕಾಣುತ್ತಾ ಬಂದಿದ್ದೇನೆ. ಅವರ ದಾಂಪತ್ಯ ಕೂಡಾ ಇದಕ್ಕೆ ಸಾಕ್ಷಿಯಂತಿತ್ತು. ನನ್ನ ತಂಗಿ ಎಂದೂ ತನ್ನ ದಾಂಪತ್ಯ ಜೀವನದ ಬಗ್ಗೆ ಒಂದು ಸಣ್ಣ ಅಸಮಧಾನವನ್ನು ಎಂದೂ ವ್ಯಕ್ತಪಡಿಸಿದವಳಲ್ಲ. ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದ (ಕರ್ನಾಟಕ ಸಂಗೀತದ ಗಾಯನ ಮತ್ತು ವೀಣಾವಾದನಗಳ ಕ್ಷೇತ್ರದಲ್ಲಿ ವಿದ್ವತ್ ಪದವಿ ಪಡೆದಿದ್ದವಳು ಆಕೆ) ನನ್ನ ತಂಗಿಯನ್ನು ನಾವು ತವರಿನವರು ಔಪಚಾರಿಕ ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದವಳು ಎಂದು ನಿರ್ಲಕ್ಷಿಸಿದ್ದಾಗ, ಮದುವೆಯಾದ ನಂತರ ಅವಳು ಚಂದ್ರಶೇಖರ್ ಅವರ ಪ್ರೋತ್ಸಾಹದಿಂದ ಸಂಗೀತ ಸಾಧನೆಯ ಜೊತೆಗೆ ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವೀಧರಳಾದಳು! ಸಿಆರ್‌ಸಿ–ರಾಜೇಶ್ವರಿಯದ್ದು, ನಾನು ಕಂಡಂತೆ ಬಹು ಅಪರೂಪದ ಸಮಾನ ಮನಸ್ಕ ಮಧುರ ದಾಂಪತ್ಯ.

ತಮ್ಮೊಡನಿದ್ದ ತಮ್ಮ ತಾಯಿಯವರ ಬಗ್ಗೆಯೂ ಸಿಆರ್‌ಸಿ ಅವರಿಗೆ ಬಹು ಪ್ರೀತಿ, ಗೌರವ ಮತ್ತು ಅವರ ಯೋಗಕ್ಷೇಮದ ಬಗ್ಗೆ ನಿರಂತರ ಕಳಕಳಿ. ಅವರು ತಮ್ಮ ತಾಯಿಯನ್ನು ಮಾತ್ರವಲ್ಲ, ನನ್ನ ತಂದೆ ತಾಯಿ (ಅಂದರೆ ಅವರ ಅತ್ತೆ–ಮಾವ) ಸೇರಿದಂತೆ ತಮ್ಮ ವಿಸ್ತೃತ ಕುಟುಂಬದ ಎಲ್ಲ ಹಿರಿಯರ ಯೋಗಕ್ಷೇಮವನ್ನೂ ಅಷ್ಟೇ ಕಳಕಳಿಯಿಂದ ನೋಡಿಕೊಳ್ಳುತ್ತಿದ್ದುದನ್ನು ನಾನು ಬಲ್ಲೆ. ನಾನೊಮ್ಮೆ ಪ್ರಾಣಾಂತಿಕ ಕಾಯಿಲೆಗೆ ಒಳಗಾದಾಗ ಅವರು ನನ್ನನ್ನು ಉಪಚರಿಸಿದ ರೀತಿಯನ್ನು ನಾನು ಜೀವನಪೂರ್ತಿ ಮರೆಯಲಾರೆ.

ಇನ್ನು ಅವರ ವೃತ್ತಿಜೀವನದ ಬಗ್ಗೆ ನಾನು ವಿಶೇಷವಾಗಿ ಹೇಳುವ ಅಗತ್ಯವೇ ಇಲ್ಲ. ಅವರದ್ದು ಎಲ್ಲ ಅರ್ಥದಲ್ಲೂ ನಿಸ್ವಾರ್ಥಮಯವಾದ ಪೂರ್ಣ ಸಮರ್ಪಿತ ಸೇವೆ. ಈಗ ನಿವೃತ್ತಿಯ ನಂತರ ಅವರು ತಮ್ಮ ತಂದೆ ತಾಯಿಯ ಸ್ಮರಣೆಯಲ್ಲಿ ಸ್ಥಾಪಿಸಿ ನಡೆಸುತ್ತಿರುವ ಸಮಾಧಾನ ಉಚಿತ ಸಲಹಾ ಕೇಂದ್ರ ಮತ್ತು ಅಲ್ಲಿನ ಅವರಷ್ಟೇ ವೃತ್ತಿ ಸಮರ್ಪಿತರಾದ ಸ್ವಯಂಸೇವಾ ಸಹಾಯಕ ಬಳಗ ಅವರ ಈ ಆದರ್ಶ ಗುಣದ ವಿಸ್ತರಣೆ ಮತ್ತು ಅದಕ್ಕೆ ಸಾಕ್ಷಿ.

ಕೊನೆಯದಾಗಿ, ಸಿಆರ್‌ಸಿ ಅವರಲ್ಲಿ ನಾನು ಇಷ್ಟ ಪಡದ ಎರಡು ಗುಣಗಳನ್ನೂ ಇಲ್ಲಿ ಪ್ರಸ್ತಾಪಿಸದಿದ್ದರೆ ಈ ಪುಸ್ತಕದ ಶೀರ್ಷಿಕೆಯ ದೃಷ್ಟಿಯಿಂದ ನನ್ನ ಈ ಬರಹ ಅಪೂರ್ಣವಾದೀತು. ಅವರು ಸಾಮಾಜಿಕವಾಗಿ ಸಾಂಪ್ರದಾಯಿಕ ಆಲೋಚನೆಯವರು. ಸಂಪ್ರದಾಯ ಮೀರಿದವರ ಬಗ್ಗೆ ಅವರ ಸಹಾನುಭೂತಿ ಕಡಿಮೆ. ಮನೋವೈದ್ಯರಿಗೆ ಇದು ತರವಲ್ಲವೆಂದೇ ನನ್ನ ಅನಿಸಿಕೆ. ಇನ್ನೊಂದು, ಅವರು ತುಂಬಾ, ಅಂದರೆ ವಿಪರೀತ ಬರೆಯುತ್ತಾರೆ. ಇದರಿಂದಾಗಿ ಅವರ ಬರವಣಿಗೆ ತೆಳುವಾಗುತ್ತಿದೆ ಮತ್ತು ಪುನರಾವರ್ತನೆಗೊಳ್ಳುತ್ತಿದೆ. ಇದರ ದುಷ್ಪರಿಣಾಮವೆಂದರೆ ಮನೋವೈದ್ಯ ಸಾಹಿತ್ಯ ಜನಪ್ರಿಯ ಮನೋರಂಜನಾ ಸಾಹಿತ್ಯವಾಗಿ ಮಾರ್ಪಾಡಾಗುತ್ತಿದೆ. ಇದು ತದ್ವಿರುದ್ಧ ಪರಿಣಾಮಕ್ಕೆಡೆ ಮಾಡಿಕೊಡುವುದರಿಂದ ಇದು ಸಲ್ಲದು ಎಂದೇ ನನ್ನ ಖಚಿತ ಅಭಿಪ್ರಾಯ.

ಖ್ಯಾತ ಮನೋವೈದ್ಯ ಡಾ. ಸಿಆರ್. ಚಂದ್ರಶೇಖರ್ ಅವರ 'ಮನೋವೈದ್ಯನ ಆತ್ಮಕಥನ' ಗ್ರಂಥಕ್ಕಾಗಿ ಬರೆದ ಟಿಪ್ಪಣಿ: ೨೦೨೦

ಎಚ್ಚೆಸ್ಸಾರ್ ಅವರ ಮಾಸ್ತಿ ಲೇಖನ ಕುರಿತಂತೆ...

ಪ್ರಿಯ ಎಚ್ಚೆಸ್ಸಾರ್,

ನಮ್ಮ ಪತ್ರಿಕೆಗಾಗಿ ಮಾಸ್ತಿ ಕುರಿತು ನೀವು ಬರೆದ ಲೇಖನದ ('ನಿಜವಾದ ಸತ್ಯ ಮತ್ತು ವೇಷದ ಸತ್ಯ : ಮಾಸ್ತಿ ಕಥಾಲೋಕದ ಸ್ತ್ರೀ ದರ್ಶನ' : 'ಹೊಸ ಮನುಷ್ಯ' : ಮಾರ್ಚ್, ೨೦೨೧) ಬಗ್ಗೆ ಅದನ್ನು ನಾನು ಓದಿದ ಕೂಡಲೇ ಅನ್ನಿಸಿದ್ದನ್ನು ನಿಮಗೆ ವಾಟ್ಸಪ್ ಮಾಡಿದ್ದೆ, ಈಗ ಅದನ್ನು ಇಲ್ಲಿ ಒಂದಿಷ್ಟು ವಿವರಣಾತ್ಮಕವಾಗಿ ದಾಖಲಿಸುವ ಮೂಲಕ ಇನ್ನಷ್ಟು ಸ್ಪಷ್ಟಪಡಿಸಬಯಸುವೆ. ಆದರೆ ಅದಕ್ಕೆ ಮುನ್ನ ನನ್ನ ಕೋರಿಕೆಯನ್ನು ಮನ್ನಿಸಿ, ಈ ಮುಂದಿನ ನನ್ನ ತಕರಾರುಗಳನ್ನು ಮೀರಿ ಮಾಸ್ತಿ ಕಥೆಗಾರಿಕೆ ಕುರಿತು ಕೆಲ ಒಳನೋಟಗಳನ್ನು ಒದಗಿಸಿರುವ ಲೇಖನವೊಂದನ್ನು ಬರೆದು ಕೊಟ್ಟಿದ್ದಕ್ಕಾಗಿ ನಿಮಗೆ ಕೃತಜ್ಞತೆಗಳನ್ನು ತಿಳಿಸಬಯಸುವೆ, ಈಗ ನನ್ನ ತಕರಾರುಗಳಿಗೆ ವಿವರಣೆ–

ನೀವು ಓರ್ವ ಸಿದ್ಧ ಮಾದರಿಯ 'ಪ್ರಗತಿಪರ'ತೆಯ ಪ್ರತಿಪಾದನೆಯೊಂದಿಗೇ ಸಾಹಿತ್ಯ ವಿಮರ್ಶೆಯ ಅಂಕಣವನ್ನು ಪ್ರವೇಶಿಸುತ್ತೀರಿ ಎಂಬುದು ನನ್ನ ಮೊದಲ ಮತ್ತು ಪ್ರಧಾನ ತಕರಾರು. ಇದು ನಿಮ್ಮ ವಿಮರ್ಶಾ ಮಾರ್ಗದಲ್ಲಿ ಹಲವು ದ್ವಂದ್ವಗಳನ್ನು ಸೃಷ್ಟಿಸಿರುವುದನ್ನು ಈ ಲೇಖನದಲ್ಲಿ ನೋಡಬಹುದು. ಇದು ಮಾಸ್ತಿ ಬದುಕಿದ್ದ ಕಾಲ ಮತ್ತು ಅದರ ಅನುಭವದ ಆಧಾರದ ಮೇಲೆ ಅವರು ಕಲ್ಪಿಸಿಕೊಂಡ ಆದರ್ಶ ಸಮಾಜದ ಮೌಲ್ಯಗಳು ನಮ್ಮ ಪ್ರಗತಿಪರತೆಯ ಮೌಲ್ಯಗಳಿಗೆ ವಿರುದ್ಧವಾದ ಮಾತ್ರಕ್ಕೆ ಅವರ ಸಾಮಾಜಿಕ ನಿಲುವು ಅಥವಾ ಒಂದು ಸಂದರ್ಭದ ನಿರ್ವಹಣೆಯ ರೀತಿ ಅನುಮಾನಾಸ್ಪದ ಅಥವಾ ಪ್ರಶ್ನಾರ್ಹವಾಗುವುದೆಂದು ನನಗೆ ಅನಿಸುವುದಿಲ್ಲ. ಸಾಹಿತ್ಯ ವಿಮರ್ಶೆ, ಸದಾ ಬದಲಾಗುವ ಮಾನದಂಡಗಳ ಪ್ರಗತಿಪರತೆಯನ್ನು ಊರುಗೋಲು ಮಾಡಿಕೊಳ್ಳಬಾರದೆಂದು ನನ್ನ ನಂಬಿಕೆ. ಉದಾಹರಣೆಗೆ, ಮಾಸ್ತಿಯವರು (ನೀವೇ ಹೆಸರಿಸಿರುವಂತೆ ಅವರ ಕಾಲದ ಬಹಳಷ್ಟು ಲೇಖಕರ ಹಾಗೆ) ಹೆಣ್ಣು ಓದಲಿ, ಆದರೆ ಹೊರಗೆ ಕೆಲಸಕ್ಕೆ ಹೋಗುವುದು ಉಚಿತವಲ್ಲ ಎಂದು ನಂಬಿದ್ದರೆ, ಆ ನಂಬಿಕೆಯೇ ಅವರ ಕೃತಿಗಳಲ್ಲಿ ನಿಜವೆನಿಸದ, ಅನ್‌ಅಥೆಂಟಿಕ್ ಆದ ಸಂದರ್ಭಗಳನ್ನು ಸೃಷ್ಟಿಸಿ ಕಲೆ

ಊನವಾಗುವಂತೆ ಮಾಡದ ಹೊರತು ಅದು ಆಕ್ಷೇಪಣಾರ್ಹವಾಗಬಾರದೆಂಬುದು ನನ್ನ ನಿಲುವು. ಕಲೆ ಊನವಾಗುವುದು ಎಂಬುದರಲ್ಲಿ ನೈತಿಕತೆ/ಅನೈತಿಕತೆಯ ಪ್ರಶ್ನೆಯ ತೀರ್ಮಾನವೂ ಅಡಗಿದೆ ಎಂದು ನಾನು ಭಾವಿಸುತ್ತೇನೆ: ಅನೈತಿಕವಾದುದದನ್ನು, ಕ್ರಿಮಿನಲ್ ಆದುದನ್ನು ನಿಜವಾದ ಕಲೆ ಮುಚ್ಚಿಡಲಾರದು. ಹಾಗಿರುವಾಗ ಈ ಲೇಖಕರು ತಮ್ಮ ನಂಬಿಕೆಗೆ ಆಧಾರವಾಗಿ ಮಂಡಿಸುವ ವಿಚಾರಗಳನ್ನು 'ಕಳ್ಳ ನೆಪ'ಗಳಂತೆ 'ಗೃಹಲಕ್ಷ್ಮಿ', 'ಮನೆಮನೆಯ ತಪಸ್ವಿನಿ' ಇತ್ಯಾದಿಗಳನ್ನು ಕುರಿತ ನಿಮ್ಮ ವ್ಯಂಗ್ಯ ಧ್ವನಿ ಸಾಹಿತ್ಯ ವಿಮರ್ಶೆಯ ಪರಿಭಾಷೆಯಾಗದೇನೋ ಎಂಬ ಅನುಮಾನ ನನಗೆ. ಪುರುಷ ಪ್ರಧಾನ ಸಮಾಜ ಎಂಬ ಮಾತು ಪಶ್ಚಿಮದ ಸ್ತ್ರೀವಾದದಿಂದ ನಾವು ಕಡ ಪಡೆದುಕೊಂಡ ಒಂದು ಪಾರಿಭಾಷಿಕ ಪದ ಅದು ಅಂದಿನ, ಇಂದಿನ ಅಥವಾ ಎಂದಿನ ಸಮಾಜದಲ್ಲಿನ ಲಿಂಗ ಸಮೀಕರಣದ ಪ್ರಶ್ನೆಯನ್ನು ಅದರೆಲ್ಲ ಸಂಕೀರ್ಣತೆಗಳಿಂದ ದೂರವಿರಿಸುವ ಏಕಾಯಾಮದಿಂದ ಸರಳೀಕೃತವಾದ ಪದ. ಮಾಸ್ತಿ ಮತ್ತವರ ಸಹಲೇಖಕರ ನಂಬಿಕೆಗಳನ್ನು ನಾವು ಇಂದು ಒಪ್ಪದಿರಬಹುದು. ಆದರೆ ಅವನ್ನು ಅವರು ಅರ್ಥ ಮಾಡಿಕೊಳ್ಳಲು ಸಾಧ್ಯವಾಗದ; ಆದರೆ ನಾವು ('ಪ್ರಗತಿಪರತೆಯ ಸೌಲಭ್ಯದಿಂದಾಗಿ) ಅರ್ಥಮಾಡಿಕೊಂಡ ಸಾಮಾಜಿಕ ಪಿತೂರಿಯ ಭಾಗವೆಂದು ತಿಳಿಯುವುದು ಅವರ (ಸೃಜನಶೀಲ) ವಿವೇಕಕ್ಕೆ ಮಾಡುವ ಅನ್ಯಾಯವೆಂದೇ ನಾನು ಭಾವಿಸಿದ್ದೇನೆ.

1. ಮುಂದುರೆದು ನೀವು 'ವೆಂಕಟಿಗನ ಹೆಂಡತಿ' ಕಥೆಯ ಉದಾಹರಣೆ ಕೊಡುತ್ತಾ ಆ ಹೆಂಡತಿಯು ಒಂದೇ ಒಂದು ಮಾತನ್ನು ಆಡಲು ಅವಕಾಶ ಪಡೆಯುವುದಿಲ್ಲ ಎನ್ನುತ್ತೀರಿ. ನನ್ನ ಪ್ರಕಾರ ಒಂದು ಕಥೆಯನ್ನು ಓದುವ ಅತ್ಯಂತ ಸ್ಥೂಲ ರೀತಿ ಇದು. ನಿಮ್ಮ ಮಾತಿನ ಚುಂಗನ್ನೇ ಹಿಡಿದು ಹೇಳುವುದಾದರೆ, ಈ ಕಥೆಯ ವಿಮರ್ಶೆ ಕೇಳಬಹುದಾದ ಪ್ರಶ್ನೆ ಎಂದರೆ, ಎಲ್ಲಿಯಾದರೂ ಕಥೆಯಲ್ಲಿ ಆ ಹೆಣ್ಣು ಮಾತಾಡಬಹುದಾದ ಅವಕಾಶವನ್ನು ತಡೆಯಲಾಗಿದೆಯೆ? ಎಂಬುದು. ಒಂದು ಕಥೆಗೆ ಅಥವಾ ಯಾವುದೇ ಕಲಾಕೃತಿಗೆ ಅದರದ್ದೇ ಆದ ಸ್ವಾಯತ್ತತೆ ಇರುತ್ತದೆ. ಅದರಿಂದಾಗಿಯೇ ಅದರ ಕಲೆಯ ಆಯಾಮಗಳು ಕೂಡ ಮೂಡುವುದು. ಈ ದೃಷ್ಟಿಯಿಂದ ನೀವು ಎತ್ತಿರುವ ಪ್ರಶ್ನೆ ಕಥೆಯ ಆವರಣದ, ವಿನ್ಯಾಸದ ಹೊರಗಿನಿಂದ ಬಂದುದು, ಅದರ ಸ್ವಾಯತ್ತತೆಯನ್ನು ಅಂದರೆ ಅದರ ಹುಟ್ಟನ್ನು ಪ್ರಶ್ನಿಸುವ ಪ್ರಯತ್ನ ಎಂದೆನ್ನಬೇಕಾಗುತ್ತದೆ. ಇದಕ್ಕೆ ನೀವು ಕಥೆಯನ್ನು ನಿಮ್ಮ ಪ್ರಗತಿಪರತೆಯ ಹೊರೆಯನ್ನು ತಲೆ ಮೇಲೆ ಹೊತ್ತುಕೊಂಡು ಪ್ರವೇಶಿಸಿರುವುದೇ ಕಾರಣವೆಂದು ನಾನು ಭಾವಿಸುತ್ತೇನೆ. ಇದು ಕಾರಂತರು 'ಚೋಮನ ದುಡಿ'ಯಲ್ಲಿ ಚೋಮನಿಗೆ ಏಕೆ ಭೂಮಿ ಕೊಡಿಸಲಾಗಿಲ್ಲ ಎಂದು ಕೆಲವರು ಆಕ್ಷೇಪಾರ್ಹವಾಗಿ ಕೇಳುವುದನ್ನು ನೆನಪಿಸುತ್ತದೆ,

2. ಇದೇ ಸಂದರ್ಭದ ನಿಮ್ಮ ಇನ್ನೊಂದು ಮಾತು: '... ಇಂಥ ಕಡೆ ಲೇಖಕರ ತಾತ್ವಿಕತೆಯು ಕಥೆಯ ಕಲಾತ್ಮಕವಾದ ವಿವರಗಳನ್ನೂ ರೂಪಿಸುತ್ತದೆ.' ಇದು ವಿಮರ್ಶಾ ಮೀಮಾಂಸೆಯ ತರ್ಕ ಒಪ್ಪಲಾಗದ ಮಾತು. ಹಾಗಾಗಿಯೇ 'ಇಂಥ' ಕಥೆಗಳ

ಬಗ್ಗೆ ನಿಮ್ಮ ತಕರಾರು ಸೃಷ್ಟಿಯಾಗಿರುವುದು. ಮಾಸ್ತಿಯವರಂತಹ ಕಥೆಗಾರಿಕೆಯ ಒಂದು ಸಾಧನೆಯ ಮಟ್ಟ ಮುಟ್ಟಿದವರಿಗೆ ತಾತ್ವಿಕತೆ ಎಂಬುದು ನಂಬಿಕೆಗಳನ್ನು ಮೀರಿದ ಲೋಕದರ್ಶನವಾಗಿ ಮಾಗಿ ಅದು ಕಥೆಯ ಕಲಾತ್ಮಕತೆಯನ್ನು ಎತ್ತರಕ್ಕೆ ಕೊಂಡೊಯ್ಯಬಹುದೇ ಹೊರತು, ನೀವು ಹೇಳುವಂತಹ 'ಪ್ರತಿಷ್ಠಿತ' ಮುಂತಾದ ಸಾಮಾಜಿಕ ಪಾರಿಭಾಷಿಕಗಳ ತೆಕ್ಕೆಗೆ ನೂಕಲಾರದು. ಈ ದೃಷ್ಟಿಯಿಂದ ಗಂಡಸರ ಉದಾತ್ತತೆ-ಉದಾರತೆಗಳನ್ನು ತೋರಿಸಲು ಸ್ತ್ರೀಪಾತ್ರಗಳನ್ನು ಮಾಸ್ತಿ 'ಬಳಸಿ'ಕೊಂಡಿದ್ದಾರೆ ಎಂಬ ನಿಮ್ಮ ಮಾತು ಸಮಾಜ ಎಂದರೇನು ಎಂಬ ಬಗ್ಗೆ ನಿಮಗೆ ತುಂಬಾ ಸರಳೀಕೃತ ಕಲ್ಪನೆ ಇದೆಯೆಂಬ ಅನುಮಾನ ಹುಟ್ಟಿಸುತ್ತದೆ. ಸಮಾಜ ಗಂಡು ಹೆಣ್ಣಿನ ಸಂಬಂಧದ ಪ್ರಶ್ನೆಯಾಚೆಗೂ ಹಬ್ಬಿರುವ ಹಲವು ಆಯಾಮ ಮತ್ತು ಮೌಲ್ಯಗಳ ಪ್ರಶ್ನೆಗಳನ್ನು ಒಳಗೊಂಡಿದೆ ಅಲ್ಲವೆ?

3. ಇನ್ನು ನೀವು ಪರೋಕ್ಷ ಭಾಷೆಯಲ್ಲಿ (ಏಕಿದು?) ಕೇವಲ, ಕೆಳ ಜಾತಿಗಳ ಹೆಣ್ಣಿನಲ್ಲಿ ಕಾಣುವ ನಿಯಮ ಉಲ್ಲಂಘನೆಯ ಗುಣ ಮಾಸ್ತಿಯವರ ಕಥೆಗಳ ಮೇಲ್ಜಾತಿ ಹೆಣ್ಣುಗಳಲ್ಲಿ ಏಕೆ ಕಂಡುಬರುವುದಿಲ್ಲ ಎಂಬ ನಿಮ್ಮ ಪ್ರಶ್ನೆ ಅಗತ್ಯವಿಲ್ಲ ಎಂದು ನಂತರದ ನಿಮ್ಮ ವಿವರಣೆಯೇ ಹೇಳುತ್ತಿರುವಾಗ ಈ 'ಜನಪ್ರಿಯ' ಪ್ರಶ್ನೆ ಇಲ್ಲಿ ಉಲ್ಲೇಖಿತವಾದ ಉದ್ದೇಶವಾದರೂ ಏನು ಎಂಬುದು ನನಗೆ ಅರ್ಥವಾಗುವುದಿಲ್ಲ. ನೀವೇ ಮುಂದೆ ಉದಾಹರಿಸುವ 'ವಿಚಿತ್ರ ಪ್ರೇಮ' ದಾಂಪತ್ಯ ಕುರಿತ ಮಾಸ್ತಿಯವರ ಕಲ್ಪನೆ ಕಥೆಯಲ್ಲಿ ನಿರೂಪಿತವಾಗಿರುವ ಆ ಪ್ರೇಮವನ್ನು ವಿಚಿತ್ರ ಎಂದು ಕರೆದಿರುವರಾದರೂ, ಅದರಲ್ಲಿನ ಹೆಣ್ಣಿನ ಘನತೆಗೆ ಕುಂದು ಬರದಂತೆ ಅದನ್ನು ನಿರ್ವಹಿಸಿ ಹದವಾದ ಕಲೆ ಮಾಡಿರುವ ರೀತಿ ಎಷ್ಟು ಸಂಕೀರ್ಣವಾಗಿತ್ತು ಎಂಬುದನ್ನು ಸೂಚಿಸುತ್ತದೆ. ಮತ್ತೆ ಇದು ಪಾಶ್ಚಿಮಾತ್ಯ ಸಮಾಜಕ್ಕೆ ಸಂಬಂಧಿಸಿದ ಚಿತ್ರಣ ಎಂದು ಯಾರೂ ತಕರಾರು ಎತ್ತುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಮಾಸ್ತಿಯವರಂತಹ ಸಾಧಕ ಲೇಖಕನೊಬ್ಬ ನಂಬಿದ, 'ಕಂಡ' ನಿಜಕ್ಕೆ ಇಂತಹ ಎಲ್ಲೆಗಳಿರುತ್ತವೆ ಎಂದು ಭಾವಿಸುವವರು ಸಾಹಿತ್ಯದ ವಿದ್ಯಾರ್ಥಿಗಳಾಗಲಾರರು ಅಲ್ಲವೆ?

4. ನಾನು ಮೇಲೆ ಎತ್ತಿರುವ ಪ್ರಶ್ನೆಗಳೇ ನಿಮ್ಮ ಲೇಖನದ ವಿರೋಧಾಭಾಸಗಳಂತೆ ಕಾಣುವ- ಒಮ್ಮೆ ಆ ಕಡೆಗೆ, ಒಮ್ಮೆ ಈ ಕಡೆಗೆ ತುಯ್ಯಲು ಕಾರಣವೆಂದು ನನ್ನ ತಿಳಿವಳಿಕೆ. ನಿಮ್ಮ ಲೇಖನದ ಕೊನೆಯ ಪ್ಯಾರಾದಲ್ಲಿ ನೀವು ಹೇಳಿರುವ ಮಾತುಗಳು ನಿಜವೆನ್ನಿಸಿದರೂ, ನಿಮ್ಮ ಸದರಿ ಲೇಖನದಲ್ಲಿನ ವೈರುಧ್ಯಗಳಿಗೆ ನೀವು ನೀಡಿರುವ ಒಂದು ಸಮಝಾಯಿಷಿಯಂತೆಯೇ ನನಗೆ ಕಾಣುತ್ತದೆ.

–ಡಿ.ಎಸ್. ನಾಗಭೂಷಣ

ಅಡಿಗರ ಬ್ರಾಹ್ಮಣತ್ವ: ಟಿಎಸ್‌ವಿ ಅವರಿಗೊಂದು ಪತ್ರ

ಪ್ರಿಯ ವಾಸುದೇವಮೂರ್ತಿ,

ನಿಮ್ಮ ಕೋರಿಕೆಗೆ ಪ್ರತಿಕ್ರಿಯೆ ಹಲವು ಸಂಗತಿಗಳು ಹಾಸುಹೊಕ್ಕಾಗಿರುವ ವಿವರಣೆಯ ರೂಪದಲ್ಲಿ ಮಾತ್ರ ಇರಬಲ್ಲುದು. ಹಾಗಿಲ್ಲದಿದ್ದರೆ ಅದೊಂದು ಸರಳೀಕೃತ ಪ್ರತಿಕ್ರಿಯೆಯಾದೀತು. ಕನ್ನಡ ಸಾಹಿತ್ಯಕ್ಕೆ ಬಡಿದಿರುವ ಬಂಡಾಯ ಸಾಹಿತ್ಯದ ಶಾಪ ಇನ್ನೂ ಆರಿಲ್ಲ ಹಾಗಾಗಿ ಈ ದೀರ್ಘವಾದ ಬರಹ–

ಅಡಿಗರನ್ನು ನಾನು ಓದಿಕೊಂಡ ಮತ್ತು ಅವರೊಂದಿಗೆ ಒಮ್ಮೆ–ಶ್ರೀಕೃಷ್ಣ ಆಲನಹಳ್ಳಿ ನಿಧನದ ಸಂದರ್ಭದಲ್ಲಿ ಆಕಾಶವಾಣಿಗಾಗಿ ಅವರನ್ನು ಮಾತಾಡಿಸಲು ಹೋಗಿದ್ದಾಗ (ಆಗ ಅವರು ಪಾರ್ಶ್ವವಾಯುಗೀಡಾಗಿ ತುಂಬಾ ಹಣ್ಣಾಗಿದ್ದರು)–ಮಾತನಾಡಿದ್ದ ಆಧಾರದ ಮೇಲೆ ಹೇಳುವುದಾದರೆ, ಅವರು ತಾನು ಬ್ರಾಹ್ಮಣ ಎಂಬುದನ್ನು ನಿರಾಕರಿಸುವ 'ಜಾತ್ಯತೀತ' ಬ್ರಾಹ್ಮಣರೇನೂ ಆಗಿರಲಿಲ್ಲ. ಬದಲಿಗೆ ಸಿಗರೇಟು ಸೇದುವ, ಬೀರು ಕುಡಿಯುವ 'ಉದಾರವಾದಿ' ಬ್ರಾಹ್ಮಣರಾಗಿದ್ದರು. ಆದರೆ ಕೆಲವು ಸರಿಯಾದ ಕಾರಣಗಳಿಗೆ ಸಮನಾದ ತಪ್ಪು ಕಾರಣಗಳಿಗಾಗಿಯೂ ಅವರಿಗೆ ತಾನು ಬ್ರಾಹ್ಮಣನೆಂಬ ಹೆಮ್ಮೆಯಿತ್ತು. ನನ್ನ ಈ ಮಾತಿನ ಅರ್ಥವೆಂದರೆ, ಅವರು ಬ್ರಾಹ್ಮಣತನವನ್ನು ಆರ್ಷೇಯವೆಂದು ಹೇಳಲಾಗುವ ಸಂಸ್ಕೃತಿಯ ಭಾಗವಾಗಿ ಪರಿಭಾವಿಸಿ ಅದು ಎಲ್ಲರೂ ಗೌರವಿಸಿ ಏರಬೇಕಾದ ಒಂದು ಆದರ್ಶ ಸಂಸ್ಕೃತಿಯ ಶ್ರೇಣಿ ಎಂದು ನಂಬಿದ್ದರು. ಆದರೆ ಈ ಏರುವಿಕೆಗೆ ಪ್ರಯತ್ನಪಟ್ಟರೆ ಇತರ ಜಾತಿಗಳೂ ಯಾವುದೇ ನಿರ್ಬಂಧವಿಲ್ಲದೆ ಏರಬಲ್ಲ ಶಕ್ತಿ ಇದೆ ಎಂದೂ ನಂಬಿದ್ದರು. ಕರ್ನಾಟಕದಕದಲ್ಲಿ ಬ್ರಾಹ್ಮಣರಾಗುವುದು ಕಳಂಕ ಎಂಬ ಅರೆ ಲೋಹಿಯಾ–ಅರೆ ಪೆರಿಯಾರ್‌ವಾದಿ ಬ್ರಾಹ್ಮಣ ವಿರೋಧಿ ಸಾಮಾಜಿಕ ರಾಜಕೀಯ ಆಂದೋಲನವೊಂದು ಆರಂಭವಾಗುವವರೆಗೆ ಇಂಥವರನ್ನು ಬ್ರಾಹ್ಮಣೇತರರು ಒಳ್ಳೆಯ ಬ್ರಾಹ್ಮಣ ಎಂದು ಕರೆಯುತ್ತಿದ್ದರು.

ಆದರೆ ಬ್ರಾಹ್ಮಣ ವಿರೋಧಿ ಆಂದೋಲನ ಜಾತಿ ಪದ್ಧತಿಯನ್ನು ಸಾಮಾಜಿಕವಾಗಿ ಮಾತ್ರವಲ್ಲದೆ ಸಾಂಸ್ಕೃತಿಕವಾಗಿಯೂ ವಿಶ್ಲೇಷಿಸತೊಡಗಿದ (ಇದರ ನೇತೃತ್ವ ತೇಜಸ್ವಿಯವರದ್ದು) ಫಲವಾಗಿ ಜಾತಿ ಪದ್ಧತಿ ಕುರಿತ (ಅಷ್ಟೇನೂ ಸ್ಪಷ್ಟವಿಲ್ಲದ) ಅಡಿಗರ ನಿಲುವು ಅನುಮಾನಾಸ್ಪದವಾಗಿ ಕಂಡಿತು. ಇದಕ್ಕೆ ಕಾರಣಗಳನ್ನು ಕುವೆಂಪು ಅವರ 'ಸಾಂಸ್ಕೃತಿಕ ಕ್ರಾಂತಿಗೆ ನಾಂದಿ ಕಹಳೆ' ಎಂಬ ಐತಿಹಾಸಿಕ ಭಾಷಣಕ್ಕೆ ಕಾರಣವಾದ (ಅಲ್ಪ ಜೀವಿತಾವಧಿಯ) ಅಖಿಲ ಕರ್ನಾಟಕ ಲೇಖಕರ ಮತ್ತು ಕಲಾವಿದರ ಒಕ್ಕೂಟ ಸ್ಥಾಪನೆಗೆ ಹಿನ್ನೆಲೆಯಾದ ಹಲವು ಸಂವಾದಗಳಲ್ಲಿ ಕಾಣಬಹುದು. (ಲಂಕೇಶರ 'ಕಂಡದ್ದು

ಕಂಡಹಾಗೆ' ಸಂಗ್ರಹದ ಲೇಖನಗಳಲ್ಲಿ ಇದರ ಒಂದು ಛಾಯೆ ಕಾಣಬಹುದು) ಈ ಸಂದರ್ಭದಲ್ಲೇ ಮೊದಲ ಬಾರಿಗೆ ಕನ್ನಡದಲ್ಲಿ ಸಾಹಿತಿಗಳ ಮಾತುಗಳು ಕೇವಲ ಸಾಹಿತ್ಯಿಕವಾಗಿ ಉಳಿಯದೆ ಸಾಂಸ್ಕೃತಿಕ ರಾಜಕೀಯ ದನಿ ನುಡಿಗಟ್ಟನ್ನು ಪಡೆದದ್ದು.

ಇದು, ಹೊಸ ಸಾಹಿತ್ಯ ಪಂಥ, ಆ ಮೂಲಕ ಒಂದು ಹೊಸ ಆಲೋಚನಾ ಕ್ರಮದ ಹರಿಕಾರರೆಂಬ ಹೆಮ್ಮೆಯ ಭಾವನೆಯಲ್ಲಿದ್ದ ಅಡಿಗರಿಗೆ (ಅವರ 'ಕುವೆಂಪು ಕವಿಯಾದರೆ ನಾನು ಕವಿಯಲ್ಲ' ಎಂಬ ಹೇಳಿಕೆಯನ್ನು ನೆನಪಿಸಿಕೊಳ್ಳಿ) ಅದೊಂದು ಜಾತೀಯ ದಾಳಿಯಾಗಿ ಕಂಡಿತು. ಆಗ ಅವರು ಇನ್ನಷ್ಟು ವ್ಯವಧಾನದಿಂದ, ಸಹನೆಯಿಂದ ಇದನ್ನು ನಿರ್ವಹಿಸಬಹುದಿತ್ತು. ಆದರೆ ಅವರ ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ ಈ ಮೊದಲು ಹೇಳಿದ ಕಾರಣಗಳಿಂದಾಗಿ ಅದು ಸಾಧ್ಯವಾಗಲಿಲ್ಲ. ಈ ಸ್ಥಿತಿಯೇ ಅಂತಿಮವಾಗಿ ಅವರನ್ನು ಜನಸಂಘದಿಂದ ಚುನಾವಣೆಗೆ ಸ್ಪರ್ಧಿಸುವಂತೆ ಮಾಡಿದ್ದೂ, 'ನಾನು ಹಿಂದೂ, ನಾನು ಬ್ರಾಹ್ಮಣ' ಮತ್ತು 'ಮತ್ತೆ ಮೊಳಗಲಿ ಪಾಂಚಜನ್ಯ' ಎಂಬಂತಹ ಮೂಲತಃ ಅಡಿಗ(ಕವಿ) ತ್ವಕ್ಕೆ ಎರವಾದ ಪದ್ಯಗಳನ್ನು ಅವರಿಂದ ಬರೆಸಿದ್ದು.

ಹಾಗಾಗಿ ಅಡಿಗರನ್ನು ಇಂದು ಕೆಲವರು ವಿಶ್ಲೇಷಿಸುತ್ತಿರುವ ಪರಿಗೆ ಅಡಿಗರೂ ತಮ್ಮ ಪಾಲು ಸಲ್ಲಿಸಿದ್ದಾರೆಂದು ಹೇಳಬೇಕಾಗುತ್ತದೆ.. ಆದರೆ ಯಾರೇ ಗಂಭೀರ ಸಾಹಿತ್ಯ ಚಿಂತಕರೂ ಅಡಿಗರ ವ್ಯಕ್ತಿತ್ವದಲ್ಲಿನ ಮೂಲ ಸಂದಿಗ್ಧವನ್ನು ಗಮನಿಸದೆ/ ದಾಖಲಿಸದೆ ಅವರನ್ನು ಬ್ರಾಹ್ಮಣ/ಪ್ರತಿಗಾಮಿ ಕವಿ ಅಥವಾ ಜನವಿರೋಧಿ ಕವಿ ಎಂದು ಕರೆಯಲಾರರು. ನನ್ನ ಪ್ರಕಾರ ಪ್ರತಿಕ್ರಿಯೆಯಾಗಿ 'ಹೌದು, ನಾನು ಹಿಂದೂ, ನಾನು ಬ್ರಾಹ್ಮಣ, (ಏನೀಗ?)' ಎಂದು ಹೇಳುವುದು ಘೋರ ಅಪರಾಧವೇನಲ್ಲ. ಒಬ್ಬ ಕವಿಯ ಎರಡು ಕೆಟ್ಟ ಪದ್ಯಗಳು ಆತನ ಹತ್ತಾರು ಒಳ್ಳೆಯ ಪದ್ಯಗಳನ್ನು ರದ್ದು ಮಾಡುತ್ತವೆ ಎನ್ನಲು ಸಾಹಿತ್ಯವೇನೂ ಅಂಕಗಣಿತದ ಆಟವಲ್ಲವಲ್ಲ? ಹಾಗೇ ಈ ಎರಡು ವಿವಾದಾಸ್ಪದ ಪದ್ಯಗಳನ್ನು ಬರೆದ ಹೊತ್ತಿನಲ್ಲೇ ಅಡಿಗರು ಶಾಂತವೇರಿ ಗೋಪಲಗೌಡರ ಬಗ್ಗೆ ಮತ್ತು ಬಾಬಾ ಸಾಹೇಬ ಅಂಬೇಡ್ಕರ್ ಬಗ್ಗೆ ಈ ಪದ್ಯದ ತಾತ್ವಿಕತೆಯ ಬಗ್ಗೆ ಒಂದು ಸಣ್ಣ ಅಸಮಾಧಾನ ಇದೆಯಾದರೂ ಎರಡು ಅದ್ಭುತ ಪದ್ಯಗಳನ್ನೂ ಬರೆದರೆಂಬುದನ್ನು ಗಮನಿಸದ ವಿಮರ್ಶೆ ಮೆಳ್ಳೆಗಣ್ಣಿನ ವಿಮರ್ಶೆ ಮಾತ್ರ ಎನಿಸಿಕೊಂಡೀತು. ಅಡಿಗರು ಆಧುನಿಕ ಕನ್ನಡ ಕಾವ್ಯ ಇತಿಹಾಸದ ಮೈಲಿಗಲ್ಲುಗಳಲ್ಲೊಬ್ಬರು. ಹಾಗೇ ಲಂಕೇಶರಂತೆಯೇ ಅವರು ಘನವಾದ ಲೇಖಕರಾಗಿದ್ದಂತೆ ಘನವಾದ ವ್ಯಕ್ತಿಯಾಗರಲಿಲ್ಲ. (ಅವರ ಸಾಹಿತ್ಯ ಬದುಕಿನ ಎರಡನೆಯ ಘಟ್ಟದಲ್ಲಿ ಅವರ ಆಪ್ತ ಸಲಹಾಕಾರರಾಗಿದ್ದವರು ಸುಮತೀಂದ್ರ ನಾಡಿಗರು ಎಂದರೆ ಇನ್ನೇನು ಹೇಳುವುದು? ಅವರು ಜನಸಂಘ ರಾಜಕಾರಣಕ್ಕೆ ಒಲಿದಿದ್ದು ಇದಕ್ಕೆ ಸಾಕ್ಷಿ ಎಂಬ ಮಾತನ್ನೂ ಇಲ್ಲಿ ಹೇಳಬೇಕು.

– ಡಿಎಸ್ಸೆನ್

೧೭.-೧೨-೨೦೨೦

ರಾಜ್‌ಕುಮಾರ್‌ಗೊಂದು ಪುಸ್ತಕ ಸ್ಮಾರಕ

ನಾನು ಹಿಂದೊಮ್ಮೆ ಬರೆದಿದ್ದಂತೆ, ರಾಜ್‌ಕುಮಾರ್ ಎಂದರೆ ಆಧುನಿಕ ಕರ್ನಾಟಕದಲ್ಲಿ ಸಂಭವಿಸಿದ ಒಂದು ಪವಾಡ. ಚಲನಚಿತ್ರರಂಗದಂತಹ ಅಷ್ಟೇನೂ ಪ್ರತಿಷ್ಠಿತವಲ್ಲದ, ವಾರೆ-ಗಣ್ಣಿನಲ್ಲಿ 'ಜನಪ್ರಿಯ' ಎನ್ನಲಾಗುವ ಮಾಧ್ಯಮದಲ್ಲಿ ಕೆಲಸ ಮಾಡಿದ, ಶಾಲಾ ಶಿಕ್ಷಣವನ್ನೂ ಪೂರ್ತಿ ಮುಗಿಸದ; ರಾಜ್ಯದಾಚೆಯ ಗಡಿನಾಡ ಹಳ್ಳಿಯ ಹೈದನೊಬ್ಬ ಕನ್ನಡ ಜನಮಾನಸದಲ್ಲಿ ಏರಿದ ಎತ್ತರ ಅವರ ಸಮಕಾಲೀನರಾರೂ ಏರದ ಎತ್ತರವಾಗಿತ್ತು. ಒಂದೇ ಮಾತಲ್ಲಿ ಹೇಳುವುದಾದರೆ, ನನ್ನ ಪ್ರಕಾರ ಕನ್ನಡದ ನಮ್ಮ ತಲೆಮಾರಿನ ಪ್ರಜ್ಞೆಯನ್ನು ರೂಪುಗೊಳಿಸಿದ ಮೂವರಲ್ಲಿ ರಾಜ್‌ಕುಮಾರ್ ಕೂಡ ಒಬ್ಬರು. ಇತರರಿಬ್ಬರೆಂದರೆ ಕುವೆಂಪು ಮತ್ತು ಶಿವರಾಮ ಕಾರಂತರು.

ತಮಿಳ್ನಾಡಿನ ತಾಳವಾಡಿ ಫಿರ್ಕಾದ ದನ ಕಾಯುತ್ತಿದ್ದ ಹುಡುಗನೊಬ್ಬ ತನ್ನ ಪ್ರತಿಭೆ, ಪರಿಶ್ರಮ ಮತ್ತು ಅವುಗಳ ಮೂಲಕ ರೂಪಿಸಿಕೊಂಡ ಅಸಾಧಾರಣ ವ್ಯಕಿತದ್ವ ಪ್ರಭೆಯ ಪರಿಣಾಮಕ್ಕೆ ಸಿಲುಕದ ನನ್ನ ತಲೆಮಾರಿನ ಕನ್ನಡಿಗನೇ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು.

ನಿಜ, ಇತರ ರಾಜ್ಯಗಳಲ್ಲಿ ಇತರ ಭಾಷೆಗಳಲ್ಲಿ ಅಭಿನಯದಲ್ಲಿ ಇವರನ್ನು ಮೀರಿಸಿದ ಪ್ರತಿಭೆ ಮೆರೆದ ಮತ್ತು ಇವರನ್ನು ಮೀರಿಸಿದ ಜನಪ್ರಿಯತೆ ಗಳಿಸಿ ಸಾರ್ವಜನಿಕ ಜೀವನದಲ್ಲಿ ಗಣ್ಯ ಸ್ಥಾನ ಮಾನಗಳನ್ನು ಪಡೆದ ಹಲವು ನಟ-ನಟಿಯರಿದ್ದಾರೆ. ಆದರೆ ರಾಜ್‌ಕುಮಾರ್ ಕನ್ನಡ ಜನಸಮುದಾಯದ ನಡುವೆ ಗಳಿಸಿಕೊಂಡ ಮಾನ್ಯತೆಯ ಆಯಾಮಗಳೇ ಬೇರೆ ರೀತಿಯದು. ಅದು ಅವರು ತಮ್ಮ ಚಲನಚಿತ್ರಗಳ ಮೂಲಕ ಮಾತ್ರ ಗಳಿಸಿಕೊಂಡ ಮಾನ್ಯತೆಯಾಗಿರಲಿಲ್ಲ. ರಾಜ್‌ಕುಮಾರ್‌ಗೆ ಅದರಾಚೆಯೂ ಹಬ್ಬಿದ್ದ ವ್ಯಕ್ತಿತ್ವದ ಪ್ರಭಾವಳಿ ಇತ್ತು. ಹಾಗಾಗಿಯೇ ಅವರ ಸ್ಮಾರಕದ ಉದ್ಘಾಟನೆಯ ಸಂದರ್ಭದಲ್ಲಿ ನಟ ರಜನೀಕಾಂತ್ ಈ ಸಮಾಧಿ ಮುಂದೆ ಜನಸಾಮಾನ್ಯರ ಹರಕೆಯ ಸ್ಥಳವಾಗಲಿದೆ ಎಂದು ಹೇಳಿದ್ದೆಂದು ಕಾಣುತ್ತದೆ.

ಇಂತಹ ವ್ಯಕ್ತಿತ್ವ ರೂಪುಗೊಂಡ, ಬೆಳೆದ, ಹಬ್ಬಿದ ಮತ್ತು ಉಳಿದುಕೊಂಡ ಬಗೆಗಳು ಸರಳ ವಿವರಣೆಗೆ ನಿಲುಕದ ಸಂಕೀರ್ಣ ವಿದ್ಯಮಾನ. ಈ ಸಂಕೀರ್ಣ ವಿದ್ಯಮಾನವನ್ನು ಕುರಿತ ಬೃಹತ್ ಸಂಕಥನವೀಗ ಎರಡು ಬೃಹತ್ ಸಂಪುಟಗಳಲ್ಲಿ ಬಿಡುಗಡೆಯಾಗಿದೆ. ಸಾವಿರ ಪುಟಗಳಿಗೂ ಮೀರಿದ ರಾಜ್‌ಕುಮಾರ್ ಅವರ ಜೀವನ ಚರಿತ್ರೆಯ ಸಂಪುಟದೊಂದಿಗೇ ಅವರು ಅಭಿನಯಿಸಿದ ೨೧೨ ಚಿತ್ರಗಳ ಸಕಲ ವಿವರಗಳನ್ನೊಳಗೊಂಡ ಒಂಬೈನೂರೂ ಚಿಲ್ಲರೆ ಪುಟಗಳ ಇನ್ನೊಂದು ಸಂಪುಟವೂ ಕನ್ನಡಿಗರಿಗೀಗ ಲಭ್ಯವಿದೆ.

ಬಹುಶಃ ಪುಸ್ತಕ ಪ್ರಕಟಣೆಯ ಇತಿಹಾಸದಲ್ಲಿ ಯಾವುದೇ ಕ್ಷೇತ್ರದ ಒಬ್ಬ ಸಾಧಕನ ಬಗ್ಗೆ ಒಟ್ಟಿಗೇ ಇಷ್ಟೊಂದು ಬೃಹತ್ ಗಾತ್ರದ ಸಂಪುಟಗಳು ಹೊರಬಂದಿರಲಾರವು. ಇದು ರಾಜ್‌ಕುಮಾರ್‌ರನ್ನು ಕುರಿತ ಹೆಮ್ಮೆ ಹೇಗೋ ಕನ್ನಡದ ಹೆಮ್ಮೆಯೂ ಹೌದು. ಇಂತಹ ಅಪೂರ್ವ ಸಾಹಸವನ್ನು ಕೈಗೊಂಡು ಯಶಸ್ವಿಯಾಗಿ ಮುಗಿಸಿರುವವರು, ಗೆಳೆಯ ದೊಡ್ಡಹುಲ್ಲೂರು ರುಕ್ಕೋಜಿಯವರು. ನಾನೂ ಸೇರಿದಂತೆ ಅವರ ಬಹಳಷ್ಟು ಗೆಳೆಯರ ಹಾಗೇ ಬಾಲ್ಯದಿಂದಲೇ ರಾಜ್‌ಕುಮಾರ್ ಅಭಿಮಾನಿಯಾಗಿ ಬೆಳೆದ ರುಕ್ಕೋಜಿ ರಾಜ್‌ಕುಮಾರ್‌ರಂತೆಯೇ ಕಡುಬಡತನದಲ್ಲಿ ಬೆಳೆದ ಹಳ್ಳಿಯ ಹುಡುಗ. ಜೀವನದಲ್ಲಿ ಏನಾದರೂ ಘನವಾದದ್ದನ್ನು ಸಾಧಿಸಬೇಕೆಂಬ ಹಠ ತೊಟ್ಟಂತೆ ತಮ್ಮನ್ನು ಬಾಲ್ಯದಿಂದಲೂ ಬಹುಮುಖ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಬಂದ ರುಕ್ಕೋಜಿ ಹದಿನೈದು ವರ್ಷಗಳ ಸತತ ಶ್ರಮ ಮತ್ತು ಸಾಹಸಗಳ ಮೂಲಕ ಈ ಎರಡು ಸಂಪುಟಗಳನ್ನು ಸಿದ್ಧಪಡಿಸುವ ಮೂಲಕ ನಿಜವಾಗಿ ಘನವಾದದ್ದನ್ನೇ ಸಾಧಿಸಿದ್ದಾರೆ ಎಂದು ಹೇಳಬೇಕು.

ಮೊದಲಿಗೆ ರಾಜ್‌ಕುಮಾರ್‌ರೊಂದಿಗೆ ಜನಸಾಮಾನ್ಯರ ನೇರ ಸಂಬಂಧ ಸ್ಥಾಪನೆಗೆ ಆಧಾರವಾದ ಅವರ ಎಲ್ಲ ಚಿತ್ರಗಳ ಮಾಹಿತಿ ಕುರಿತ ಸಂಪುಟದ ಬಗ್ಗೆ ಹೇಳಬೇಕು. ಇದು ರಾಜ್‌ಕುಮಾರ್ ಚಿತ್ರಗಳ ಅಭಿಮಾನಿಗಳ ಪಾಲಿಗೆ ರಸದೌತಣವನ್ನೇ ಬಡಿಸುವ ಸಂಪುಟ. ಅವರು ಬಾಲನಟರಾಗಿ ಅಭಿನಯಿಸಿದ 'ಶ್ರೀನಿವಾಸ ಕಲ್ಯಾಣ', ಅತಿ ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡ 'ಪ್ರಹ್ಲಾದ' ಮತ್ತು ಅವರು ನಟಿಸಿದ ತೆಲುಗು ಭಾಷೆಯ 'ಶ್ರೀಕಾಳಹಸ್ತಿ ಮಹಾತ್ಮೆ' ಸೇರಿದಂತೆ (ಅವರು ನಾಯಕ ನಟನಾಗಿ ಅಭಿನಯಿಸಿದ ಇನ್ನೊಂದು ತೆಲುಗು ಚಿತ್ರ 'ನಾಗಾರ್ಜುನ' ಇದೇ ಹೆಸರಿನ ಕನ್ನಡ ಚಿತ್ರದ ತೆಲುಗು ಅವತರಣಿಕೆ– ಇಲ್ಲಿ ಏಕೋ ಸೇರಿಲ್ಲ.) ಅವರು ನಟಿಸಿದ ಎಲ್ಲ ಇನ್ನೂರು ಹನ್ನೆರಡು ಚಿತ್ರಗಳ ಕಥೆ, ತಾರಾಗಣ, ತಾಂತ್ರಿಕ ಸಿಬ್ಬಂದಿ ಇತ್ಯಾದಿಗಳಿಂದೊಡಗೂಡಿದ ಸಕಲ ವಿವರಗಳ ಜೊತೆಗೆ ಸ್ವಾರಸ್ಯಕರ, ಸಾಂದರ್ಭಿಕ ಉಪಕಥೆಗಳಿಂದ ಕೂಡಿದ ನಿರೂಪಣೆಗಳು ನಮ್ಮಲ್ಲಿ ಹಲವರ ನೆನಪುಗಳ ಮೆರವಣಿಗೆಯನ್ನೇ ಉದ್ದೀಪಿಸುವಂತಿವೆ. ಅಲ್ಲದೆ ಪ್ರತಿ ಚಿತ್ರದ ಜೊತೆಗೇ ಅನುಬಂಧಗಳಂತೆ ರಾಜ್‌ಕುಮಾರ್ ಅವರ ಚಿತ್ರ ಕುಟುಂಬದ–ಆ ಸಂಬಂಧ ಎಷ್ಟೇ ಪರೋಕ್ಷವಾಗಿದ್ದರೂ– ಬಹುತೇಕ ಎಲ್ಲ ಸಹ ನಟ ನಟಿಯರ,

ನಿರ್ದೇಶಕರ–ಸಹ ನಿರ್ದೇಶಕರ, ನಿರ್ಮಾಪಕರ–ಸಹ ನಿರ್ಮಾಪಕರ, ಸ್ಟುಡಿಯೋ ಮಾಲೀಕರುಗಳ, ಸಂಗೀತ ನಿರ್ದೇಶಕರ ಮತ್ತು ಛಾಯಾಗ್ರಾಹಕರು, ಧ್ವನಿಗ್ರಾಹಕರು, ನೃತ್ಯ ಮತ್ತು ಸಾಹಸ ಸಂಯೋಜಕರೂ ಸೇರಿದಂತೆ ಎಲ್ಲ ಸ್ತರಗಳ ತಂತ್ರಜ್ಞರ ಬದುಕಿನ ಸಂಕ್ಷಿಪ್ತ ಚಿತ್ರಗಳೂ–ಅವರ ಭಾವಚಿತ್ರಗಳ ಸಹಿತ–ಇಲ್ಲಿವೆ. ಇವುಗಳ ಜೊತೆಗೇ, ಚಿತ್ರ ನಿರ್ಮಾಣ ಸಂದರ್ಭದ ಸ್ವಾರಸ್ಯಕರ ಘಟನೆಗಳ ನಿರೂಪಣೆಗಳೂ, ಅವುಗಳಿಗೆ ಸಂಬಂಧಿಸಿದಂತೆ ಅದರಲ್ಲಿ ಭಾಗವಹಿಸಿದ್ದವರ ಸಾಂದರ್ಭಿಕ ಹೇಳಿಕೆ–ಉಲ್ಲೇಖಗಳೂ, ಶತದಿನೋತ್ಸವ ಅಥವಾ ರಜತಮಹೋತ್ಸವದಂತಹ ಪ್ರದರ್ಶನ ದಾಖಲೆಗಳ ವಿವರ ಮತ್ತು ಅವುಗಳ ಆಚರಣೆಯ ವರದಿಗಳು ರಾಜ್‌ಕುಮಾರ್ ಎಂಬ ದಂತಕಥೆ ಸೃಷ್ಟಿಯಾದುದರ ಇತಿಹಾಸವನ್ನು ಹೇಳುವಂತಿರುವ ಅವರ ಸುತ್ತ ಅವರ ಅಭಿಮಾನಿ ಬಳಗ ವಿಸ್ತರಿಸುತ್ತಲೇ ಹೋದ ವಿವಿಧ ರೀತಿ ನೀತಿಗಳ ಸಂಭ್ರಮಪೂರ್ಣತೆ ಇಲ್ಲಿ ಸವಿವರವಾಗಿ ಚಿತ್ರಿತವಾಗಿದೆ. ಇವೆಲ್ಲಕ್ಕೆ ಕಿರೀಟವಿಟ್ಟಂತೆ ಅವರ ಎಲ್ಲ ಚಿತ್ರಗಳಿಂದ ಆಯ್ದ ಅವರ ಅಭಿನಯ ವೈವಿಧ್ಯವನ್ನು ಕಣ್ಣಿಗೆ ಕಟ್ಟಿಕೊಡುವ ಸಾವಿರಾರು ಸ್ಥಿರ ಚಿತ್ರಗಳು! ರಾಜ್‌ಕುಮಾರ್ ಚಿತ್ರಗಳ ಬಗ್ಗೆ ಅಧ್ಯಯನ–ಸಂಶೋಧನೆ ನಡೆಸಬಯಸುವವರಿಗೆ ಇದೊಂದು ಕಾಮಧೇನುವಿದ್ದಂತಿದ್ದು, ಲೇಖಕ ರುಕ್ಮೋಜಿಯವರ ಈ ಮಹಾ ಸಾಹಸ ಅನುಪಮವಾದದ್ದೇ ಆಗಿದೆ. ಈ ಸಾಹಸದ ಹಿಂದಿನ ಆಸಕ್ತಿ, ಶ್ರದ್ಧೆ, ಪರಿಶ್ರಮ ಮತ್ತು ಪ್ರತಿಭೆ ಅನನ್ಯವಾದುದಾಗಿದೆ. ಇದರ ಒಂದು ಚಿತ್ರ ನಮಗೆ ಈ ಸಂಪುಟಕ್ಕೆ ಬರೆದಿರುವ ಲೇಖಕನ ಮಾತುಗಳಲ್ಲಿ, ದೊರಕುತ್ತದೆ. ಆದರೆ ಅದೊಂದು ಸ್ಥೂಲ ಚಿತ್ರ. ಅವರ ಅಗಾಧತೆ ತಿಳಿಯಬೇಕಾದರೆ ಇಡೀ ಸಂಪುಟವನ್ನೇ ಸವಿವರವಾಗಿ ಓದಬೇಕು. ಅದು ಕಷ್ಟಸಾಧ್ಯ ಮಾತ್ರ. ಅದು ಅಷ್ಟು ಬೃಹತ್ತಾಗಿದೆ, ಸಂಕೀರ್ಣ ಹೆಣಿಗೆಯಿಂದ ಕೂಡಿದೆ. ಸುಸ್ತು ಮಾಡುವಷ್ಟು ರಾಶಿ ರಾಶಿ ಮಾಹಿತಿಯಿಂದ ಕಿಕ್ಕಿರಿದಿದೆ!

ಆದರೆ ಈ ಸಂಪುಟಕ್ಕೆ ಮುನ್ನುಡಿಯ ಮಾತುಗಳನ್ನು ಬರೆಸಲು ಮಾಡಿರುವ ಅವರ ಆಯ್ಕೆ ಮಾತ್ರ ಅಸಮರ್ಪಕವಾಗಿದೆ ಎಂದೇ ಹೇಳಬೇಕು. ಮುನ್ನುಡಿ ಬರೆದಿರುವ ಗಿರೀಶ್ ಕಾಸರವಳ್ಳಿ ಅತ್ಯಂತ ಪ್ರತಿಭಾವಂತ ಚಿತ್ರ ನಿರ್ದೇಶಕರಾಗಿರುವರಾದರೂ, ರಾಜ್‌ಕುಮಾರ್ ಬಗೆಗಿನ ಇಂತಹ ಸಂಪುಟದ ಬಗ್ಗೆ ಮುನ್ನುಡಿ ಬರೆಯಲು ಅವರು ಸೂಕ್ತ ವ್ಯಕ್ತಿಯಲ್ಲ ಎಂದೇ ಹೇಳಬೇಕು. ಏಕೆಂದರೆ ಕಾಸರವಳ್ಳಿಯವರು ಚಲನಚಿತ್ರ ಮಾಧ್ಯಮವನ್ನು ನೋಡುವ ಬಗೆ ರಾಜ್‌ಕುಮಾರ್ ಚಿತ್ರಗಳನ್ನು ನಾವು ನೋಡಬೇಕಾದ ಬಗೆಗಿಂತ ತುಂಬ ಭಿನ್ನವಾದುದು. ಈ ಭಿನ್ನತೆ ರಾಜ್‌ಕುಮಾರ್ ಅವರ ಕೌಟುಂಬಿಕ ಹಿನ್ನೆಲೆ ಮತ್ತು ಅವರು ಚಿತ್ರರಂಗವನ್ನು ಪ್ರವೇಶಿಸಿದ ಹಿನ್ನೆಲೆಯಿಂದ ಆರಂಭವಾಗಿ ಅವರು ಚಿತ್ರರಂಗವನ್ನು ಪ್ರವೇಶಿಸಿದಾಗ ಕನ್ನಡ ಚಿತ್ರರಂಗ ಇದ್ದ ಸ್ಥಿತಿ ಮತ್ತು ರಾಜ್‌ಕುಮಾರ್ ಅವರ ಬೆಳವಣಿಗೆಯೊಂದಿಗೇ ಅದು ಬೆಳೆದ ರೀತಿಯವರೆಗೆ ಹಬ್ಬಿದೆ. ಹಾಗಾಗಿ ಕಾಸರವಳ್ಳಿಯವರು ಚಲನಚಿತ್ರ ಮಾಧ್ಯಮ ಕುರಿತ ಶೈಕ್ಷಣಿಕ ನೆಲೆಯ ಗ್ರಹಿಕೆಯ ಹಿನ್ನೆಲೆಯೊಂದಿಗೇ ಬರೆದಿರುವ ಮುನ್ನುಡಿ ಅಕೆಡೆಮಿಕ್ ಎನ್ನುವ ಅರ್ಥದಲ್ಲಿ ತುಂಬ

ಬೌದ್ಧಿಕವಾಗಿದ್ದು, ರಾಜ್‌ಕುಮಾರ್ ಬಗ್ಗೆ ಒಂದು ರಿಯಾಯ್ತಿ ತೋರಿಸಿ -ಅವರು ಭಕ್ತಿ ಪ್ರಧಾನ ಅಥವಾ ಪೌರಾಣಿಕ ಚಿತ್ರಗಳಿಗೇ ಲಾಯಕ್ಕು ಎಂಬಂತೆ-ಬರೆದಂತಿದ್ದು ಈ ಇಡೀ ಸಂಪುಟಕ್ಕೆ ಒಂದು ಅಭಾಸಕರ ನಾಂದಿ ಹಾಡಿದಂತಿದೆ. ಹಾಗೆ ನೋಡಿದರೆ ಸ್ವತಃ ಕಾಸರವಳ್ಳಿಯವರೇ ಈ ಮುನ್ನುಡಿ ಬರೆಯಲು ತಾವು ಸೂಕ್ತ ವ್ಯಕ್ತಿಯಲ್ಲ ಎಂದು ಹೇಳಿ ಲೇಖಕ/ಪ್ರಕಾಶಕರ ಕೋರಿಕೆಯನ್ನು ನಿರಾಕರಿಸಬೇಕಿತ್ತು. ಏಕೆಂದರೆ ಅವರೇ ಈ ಮುನ್ನುಡಿಯಲ್ಲಿ ಹೇಳಿರುವಂತೆ ಮಲೆನಾಡಿನ ಒಂದು ದುರ್ಗಮ ಹಳ್ಳಿಯಲ್ಲಿ ಹುಟ್ಟಿ ಬೆಳೆದ ಅವರು ತಮ್ಮ ಯೌವ್ವನದ ಕಾಲದವರೆಗೆ-ಅಲ್ಲೊಂದು ಇಲ್ಲೊಂದು ಬಿಟ್ಟರೆ-ಚಲನಚಿತ್ರಗಳನ್ನೇ ನೋಡಿರಲಿಲ್ಲ. ನೋಡಲಾರಂಭಿಸಿದ ಮೇಲೂ ರಾಜ್‌ಕುಮಾರ್ ಪ್ರತಿನಿಧಿಸುವ ಜನಸಾಮಾನ್ಯರು ನೋಡುವ ಪ್ರಧಾನ ಲಹರಿ ಚಿತ್ರಗಳನ್ನೇನೂ ಅವರು ನೋಡಿಲ್ಲ. ನೋಡಿದ್ದೆಲ್ಲ ಹೆಚ್ಚಾಗಿ ಪುಣೆ ಚಲನಚಿತ್ರ ಶಿಕ್ಷಣ ಸಂಸ್ಥೆಯ ಭಂಡಾರದಲ್ಲಿನ ಆಯ್ದ 'ಘನ-ಗಂಭೀರ' ಚಿತ್ರಗಳನ್ನೇ. ನಿರ್ದಿಷ್ಟವಾಗಿ, ಅವರು ನೋಡಿರುವುದು ರಾಜ್‌ಕುಮಾರ್ ಅವರ ಕೆಲವೇ ಚಿತ್ರಗಳನ್ನು ಮಾತ್ರ. ಹೀಗಿರುವಾಗ ಅವರು ಈ ಸಂಪುಟದ ಹಿಂದಿನ ಉದ್ದೇಶ, ಮಹತ್ವಾಕಾಂಕ್ಷೆ ಮತ್ತು ಅವು ಸೃಷ್ಟಿಸಿರುವ ಈ ಸಂಪುಟದ ಸ್ವರೂಪವನ್ನು ಉಚಿತ ಸಹಾನುಭೂತಿಯಿಂದ ಹೇಗೆ ಅರ್ಥ ಮಾಡಿಕೊಂಡಾರು? ಹಾಗಾಗಿಯೇ ಅವರು ರಾಜ್‌ಕುಮಾರ್ ಅವರನ್ನು ಕೇವಲ ಒಂದು ನೆಪವಾಗಿಟ್ಟುಕೊಂಡು ಭಾರತೀಯ ಚಿತ್ರರಂಗದ ಇತಿಹಾಸ-ವರ್ತಮಾನಗಳ ಶೈಕ್ಷಣಿಕ ನೆಲೆಯ ಟಿಪ್ಪಣಿಯೊಂದನ್ನು ಬರೆದಿದ್ದಾರೆ, ಇದಕ್ಕೆ ಮುಖ್ಯ ಕಾರಣ, ಈ ಸಂಪುಟಗಳ ಲೇಖಕ ರುಕ್ಕೋಜಿಯವರಿಗೆ ತಮ್ಮ ಯೋಜನೆಯ ಉದ್ದೇಶ ಮತ್ತು ಸ್ವರೂಪಗಳ ಬಗ್ಗೆ ಒಂದು ಖಚಿತ ಕಲ್ಪನೆಯೇ ಇಲ್ಲದೆ, ಅದಕ್ಕೊಂದು ಬೌದ್ಧಿಕ ಬಡಿವಾರದ ವೇಷ ತೊಡಿಸಲು ಹೊರಟಿರುವುದು. ಇದು ಅನಗತ್ಯ ಮತ್ತು ತಮ್ಮ ಕೆಲಸದ ಗುಣಮಟ್ಟದ ಬಗೆಗಿನ ಕೀಳರಿಮೆಯಿಂದ ಹುಟ್ಟಿದುದು ಎಂದು ವಿಷಾದದಿಂದ ಹೇಳಬೇಕಿದೆ. ಏಕೆಂದರೆ ರುಕ್ಕೋಜಿಯವರ ಈ ಕೆಲಸಕ್ಕೆ ತನ್ನದೇ ಆದ ಒಂದು ಘನೋದ್ದೇಶವಿದೆ; ವಿಶಿಷ್ಟ ಘನತೆ ಇದೆ. ಗಿರೀಶ್ ಅವರು ಪ್ರತಿನಿಧಿಸುವ ಲಹರಿಯ ಚಿತ್ರಗಳ ಬಗ್ಗೆ ಯಾವುದೇ ದುರುದ್ದೇಶವಿಲ್ಲದೆ ಹೇಳುವುದಾದರೆ, ರಾಜ್‌ಕುಮಾರ್ ಅವರ ಚಿತ್ರಗಳ ಒಟ್ಟು ಸಾಮಾಜಿಕ ಪರಿಣಾಮದ ಮುಂದೆ ಅವರ ಚಿತ್ರಗಳ ಪರಿಣಾಮ ನಗಣ್ಯವೆಂದೇ ಹೇಳಬೇಕು. ಇಲ್ಲಿ ಪರಿಣಾಮವೆಂದರೆ ರಚನಾತ್ಮಕ-ಪರಿಣಾಮವೇ-

ಇನ್ನು ರಾಜ್‌ಕುಮಾರ್ ಅವರ ವೈಯಕ್ತಿಕ ಜೀವನ ಕುರಿತ ಸಂಪುಟವು ಈ ಮೊದಲ ಸಂಪುಟದಲ್ಲಿ ಕಾಣುವ ಆಸಕ್ತಿ, ಕುತೂಹಲ, ಶ್ರದ್ಧೆ ಪರಿಶ್ರಮದ ಮತ್ತು ಪ್ರತಿಭೆಗಳನ್ನು ಹತ್ತುಪಟ್ಟು ಮೀರಿ ತಯಾರಾದಂತಿದೆ. ಮೊದಲ ಸಂಪುಟ ರಾಜ್‌ಕುಮಾರ್ ಚಿತ್ರಗಳ ಸುತ್ತ ತನ್ನನ್ನು ತಾನು ಕಟ್ಟಿಕೊಂಡು ಅಲ್ಲಿನ ಒಂದು ದಿಕ್ಕಿನ ಅನ್ವೇಷಣೆ- ಬಹು ಪರಿಶ್ರಮದಾಯಕವೆನಿಸಿದರೂ-ಗ್ರಹಿಕೆ ಸಂಯೋಜನೆಗಳಲ್ಲಿ ಒಂದು ರೀತಿಯಲ್ಲಿ ಸುಲಭ ಮತ್ತು ಸರಳ ಮಾರ್ಗ ಅನಿಸಿದರೆ, ರಾಜ್‌ಕುಮಾರ್ ಅವರ ಒಟ್ಟು ವ್ಯಕ್ತಿತ್ವ ಮತ್ತು

ಬದುಕನ್ನು ಶೋಧಿಸಲೆತ್ನಿಸುವ ಈ ಸಂಪುಟ ಹಲವು ದಿಕ್ಕುಗಳಿಂದ ಹರಿದು ಬರುವ ಜೀವನಪ್ರವಾಹದ ಧಾರೆಗಳನ್ನು ನಿರೂಪಿಸಿ, ಒಂದೆಡೆ ಸಂಯೋಜಿಸಿ ನಿರ್ವಹಿಸುವ ಸವಾಲು ಬಹು ದುಸ್ತರವಾದದ್ದು. ರಾಜ್‌ಕುಮಾರ್‌ರ ಪೂರ್ವಜರ ಚರಿತ್ರೆಯಿಂದ ಆರಂಭವಾಗುವ ಜೀವನ ಚರಿತ್ರೆಯ ಈ ಸಂಪುಟ ಅವರ ಸಾವಿನವರೆಗೆ ಎಷ್ಟು ಸವಿವರವಾಗಿ, ಕುತೂಹಲಭರಿತವಾಗಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅಪೂರ್ವವೆನ್ನಿಸುವ ಸಾವಿರಾರು ಚಿತ್ರಗಳ ಮೆರವಣಿಗೆಯೊಂದಿಗೆ ಹರಿದಿದೆ ಎಂದರೆ, ಅದು ಸಾವಿರ ಪುಟಗಳನ್ನು ಮೀರಿದರೂ ಎಲ್ಲಿಯೂ ತನ್ನ ಸ್ವಾರಸ್ಯವನ್ನು ಕೆಡಿಸಿಕೊಂಡಿಲ್ಲ. ಅದಕ್ಕೆ ಮುಖ್ಯ ಕಾರಣ, ಲೇಖಕರು ರಾಜ್‌ಕುಮಾರ್‌ರ ವ್ಯಕ್ತಿತ್ವ ಬೆಳೆದು ನಿಂತ ಬಗೆಯನ್ನು ಎಲ್ಲ ಸಾಧ್ಯ–ಅಂದರೆ ವೈವಿಧ್ಯಮಯ–ಮೂಲಗಳಿಂದ ಸಂಗ್ರಹಿಸಿರುವುದು. ಇಲ್ಲಿ ರಾಜ್‌ಕುಮಾರ್ ಚಿತ್ರಗಳ ನೂರಾರು ಹಳೆಯ ಪ್ರಚಾರ ಭಿತ್ತಿ ಪತ್ರಗಳ ಛಾಯಾ ಚಿತ್ರಗಳಿವೆ ರಾಜ್‌ಕುಮಾರ್ ಅಭಿನಯಿಸಬೇಕಿದ್ದ, ಆದರೆ ಕೆಲ ಅನಿವಾರ್ಯ ಕಾರಣಗಳಿಂದಾಗಿ ಸಾಧ್ಯವಾಗದ ಅಥವಾ ಪೂರ್ಣವೇ ಆಗದ ಚಿತ್ರಗಳ ವಿವರ ಮತ್ತು ಹಿನ್ನೆಲೆಗಳೂ ಇವೆ! ಜೊತೆಗೆ ಜಿಎಸ್ಸೆಸ್, ರಾಜೀವ್ ತಾರಾನಾಥ್‌ರಂತಹ ಕನ್ನಡ ಸಾರ್ವಜನಿಕ ಜೀವನದ ವಿವಿಧ ಕ್ಷೇತ್ರಗಳ ಮುಖ್ಯ ವ್ಯಕ್ತಿತ್ವಗಳಿಂದ ಹಿಡಿದು ಅವರ ಜೊತೆ ಸಿನಿಮಾಗಳಲ್ಲಿ ವಿವಿಧ ಸ್ತರಗಳಲ್ಲಿ ಕೆಲಸ ಮಾಡಿದ ಮಹನೀಯರು ಮತ್ತು ಸಾಮಾನ್ಯ ಅಭಿಮಾನಿಗಳವರೆಗಿನ ವೈವಿಧ್ಯಮಯ ಜನಸಮೂಹದಿಂದ ಅವರ ವ್ಯಕ್ತಿತ್ವ ವಿಶೇಷಗಳ ಬಗ್ಗೆ ಬರೆಸಿರುವುದು. ಈ ಸಂಪುಟಕ್ಕೆ ಒಂದು ಪ್ರವೇಶಿಕೆಯ ರೂಪದ ಮಾತುಗಳನ್ನು ಬರೆದಿರುವ ಹಿರಿಯ ಕವಿ ಕೆ.ಎಸ್. ನಿಸಾರ್ ಅಹಮದ್ ಇದರಲ್ಲಿ ಹೆಚ್ಚೂಕಡಿಮೆ ಪೂರ್ಣವಾಗಿ, ಸರ್ಕಾರಿ ಸಭೆಯೊಂದರಲ್ಲಿ ಆಕಸ್ಮಿಕವಾಗಿ ಸಂಭವಿಸಿ ಬೆಳೆದ ರಾಜ್‌ಕುಮಾರ್‌ರೊಡನೆಯ ತಮ್ಮ ಸಂಬಂಧದ ಬಗ್ಗೆಯೇ ಮೇಲ್ಮೈ ವಿವರಗಳೊಂದಿಗೆ ಮಾತ್ರ ಬರೆದು ನಿರಾಶೆ ಹುಟ್ಟಿಸುತ್ತಾರೆ. ಈ ಸಂಬಂಧವು ರಾಜ್‌ಕುಮಾರ್ ಅವರ ಚಿತ್ರಜೀವನ ಮತ್ತು ವ್ಯಕ್ತಿತ್ವವನ್ನು ಆಳವಾಗಿ ಅರಿಯಲು ಏನಾದರೂ ನೆರವಾಯಿತೋ ಎಂಬುದರ ಬಗ್ಗೆ ಇಲ್ಲಿ ಸುಳಿವಿಲ್ಲ ಎಂಬುದೇ ನನ್ನ ಈ ನಿರಾಶೆಗೆ ಕಾರಣ. ಅಷ್ಟೇ ಅಲ್ಲ, ಈ ಸಂಪುಟದ ಹೂರಣ ಮತ್ತು ಸಂಯೋಜನೆಯ ವಿಶಿಷ್ಟತೆ ಅಥವಾ ಅರ್ಥಪೂರ್ಣತೆಯ ಬಗ್ಗೆಯೂ ಒಳನೋಟದ ಎರಡು ಮಾತುಗಳಿಲ್ಲ. ಇಲ್ಲಿ ಎದ್ದು ಕಾಣುವುದು ರಾಜ್‌ರೊಡನೆಯ ತಮ್ಮ ವೈಯಕ್ತಿಕ ಪರಿಚಯದ ಹೆಮ್ಮೆ ಮಾತ್ರ. ಆದರೆ ಅದು ಯಾರಿಗಾದರೂ ದಕ್ಕುವ ಅಪರೂಪದ ಹೆಮ್ಮೆಯೇ. ಆದುದರಿಂದ ಅದನ್ನು ಹೇಳಿಕೊಂಡಿರುವುದು ತಪ್ಪೇನಿಲ್ಲ. ತಪ್ಪೇನಿದ್ದರೂ ರುಕ್ಕೋಜಿಯವರದ್ದು.

ಈ ಸಂಪುಟದಲ್ಲಿ ಹದಿನೆಂಟು ಭಾಗಗಳಿದ್ದು ಇವುಗಳಲ್ಲಿ ರಾಜ್‌ಕುಮಾರ್ ಅವರ ಬದುಕಿನ ವಿವಿಧ ಪಕ್ಕಗಳನ್ನು ಮತ್ತು ಸಾಧನೆಗಳನ್ನು ವಿಂಗಡಿಸಿ ನಿರೂಪಿಸಲಾಗಿದೆ. ರಾಜ್‌ಕುಮಾರ್ ಅವರನ್ನು ಕನ್ನಡನಾಡಿನ ಸಾಂಸ್ಕೃತಿಕ ಇತಿಹಾಸದ ಒಂದು ಭಾಗವಾಗಿ ನೋಡುವ ಪ್ರಯತ್ನವಾಗಿ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದ ಒಂದು ಸಂಕ್ಷಿಪ್ತ

ಪರಿಚಯದೊಂದಿಗೆ ಆರಂಭವಾಗುವ ಈ ಸಂಪುಟ, ಅವರ ಕುಟುಂಬದ ರಂಗಭೂಮಿ ಹಿನ್ನೆಲೆಯ ಇತಿಹಾಸ, ಅವರ ಚಿತ್ರರಂಗ ಪ್ರವೇಶ, ಅವರ ವೈವಿಧ್ಯಮಯ ಪಾತ್ರ ನಿರ್ವಹಣೆ, ಆ ಮೂಲಕ ಅವರು ತಮ್ಮ ಬದುಕು ಕಟ್ಟಿಕೊಂಡ ಬಗೆ, ಅವರ ದೈವ ಭಕ್ತಿ, ಗಾಯನ ಪ್ರತಿಭೆ, ನಾಡುನುಡಿಗಳ ಸೇವೆಯ ವಿಸ್ತಾರ, ಅವರಿಗೆ ಸಿಕ್ಕ ಮಾನ್ಯತೆ, ಪುರಸ್ಕಾರಗಳ ಹಿನ್ನೆಲೆ-ಮುನ್ನೆಲೆ, ಅಭಿಮಾನಿ ದೇವರುಗಳು ಕಟ್ಟಿದ ಸಾಮ್ರಾಜ್ಯ, ಅವರ ಪತ್ನಿ, ಸೋದರ ಸೇರಿದಂತೆ ಅವರ ಬದುಕನ್ನು ಚಂದಗಾಣಿಸಿದ ಅವರ ವಿಶಾಲ ಕುಟುಂಬದ ಪ್ರತಿಯೊಬ್ಬರ ಪುಟ್ಟ ಇತಿಹಾಸ ವಲ್ಲರಿ, ವೀರಪ್ಪನ್ ದೆಸೆಯಿಂದ ಸಂಭವಿಸಿದ ಅವರ ಕಡುಕಷ್ಟದ ಅರಣ್ಯವಾಸ ಮತ್ತು ಆನಂತರ ಸಂಭವಿಸಿದ ಅವರ ಸಾವು ಹಾಗೂ ಅವರ ಸ್ಮಾರಕದ ಕಥೆ ಹೀಗೆ ರಾಜ್‌ಕುಮಾರ್ ಅವರ ಬದುಕನ್ನು ವಿವಿಧ ಘಟ್ಟಗಳಾಗಿ ವಿಂಗಡಿಸಿ ಅವರ ಜೀವನ ಚರಿತ್ರೆಯನ್ನು ಕಟ್ಟಿಕೊಡಲಾಗಿದೆ.

ಈ ನಿರೂಪಣೆಗಳಾವುವೂ ಒಣ ವರ್ಣನೆಗಳಾಗಿರದೆ ಎಲ್ಲ ಮೂಲೆಗಳಿಂದ ಸಂಗ್ರಹಿಸಿದ ಸಾಕ್ಷ್ಯ, ಉಲ್ಲೇಖಗಳು, ಕಥೆ-ಉಪಕಥೆಗಳು ಮತ್ತು ಸಂದರ್ಶನಗಳನ್ನು ಆಧರಿಸಿದ್ದು ಬಹು ಕುತೂಹಲದಿಂದ ಓದಿಸಿಕೊಂಡು ಹೋಗುತ್ತವೆ. ಈ ಸಾಕ್ಷ್ಯ-ಸಂದರ್ಶನಗಳಿಗಾಗಿ ಲೇಖಕರು ನೂರಾರು ಊರುಗಳಿಗೆ ತಿರುಗಿ ನೂರಾರು ಜನರನ್ನು ಭೇಟಿ ಮಾಡಿ ಮಾತಿಗೆಳೆದು ತಮಗೆ ಬೇಕಾದುನ್ನು ಸಂಗ್ರಹಿಸಿಕೊಂಡಿದ್ದಾರೆ. ಹಾಗೇ ಅವರು ನೂರಾರು ಪತ್ರಿಕೆ, ನಿಯತಕಾಲಿಕೆ ಮತ್ತು ಪುಸ್ತಕಗಳನ್ನು ತಿರುವಿ ಹಾಕಿ ಟಿಪ್ಪಣಿಗಳನ್ನು ಮಾಡಿಕೊಂಡಿದ್ದಾರೆ. ಇದರ ಸಕಲ ವಿವರಗಳು ದಿನಾಂಕ-ಸ್ಥಳ ವಿವರಗಳ ಸಹಿತ ಇಲ್ಲಿ ದಾಖಲಾಗಿದ್ದು ಇಲ್ಲಿನ ಮಾಹಿತಿಗೆ ಒಂದು ಅಧಿಕೃತತೆಯನ್ನು ಒದಗಿಸಿದೆ. ರಾಜ್‌ಕುಮಾರ್ 'ಬೇಡರ ಕಣ್ಣಪ್ಪ' ಚಿತ್ರಕ್ಕೆ ಆಯ್ಕೆಯಾಗುವ ಸಂದರ್ಭ, ಅವರು ವೀರಪ್ಪನ್‌ನಿಂದ ಅಪಹರಿಸಲ್ಪಟ್ಟು ಪಡುವ ಪಾಡು ಮತ್ತು ಅವರ ಬಿಡುಗಡೆಗಾಗಿ ನಡೆವ ಪ್ರಯತ್ನಗಳು ಹಾಗೂ ಅವರ ಸಾವಿನವರೆಗಿನ ಅವರ ದೈನಂದಿನ ವೇದನೆ-ನಿವೇದನೆಗಳು, ಅಷ್ಟೇ ಮುಖ್ಯವಾಗಿ ಅವರ ಅಂತ್ಯಸಂಸ್ಕಾರದ ದಿನ ಬೆಂಗಳೂರಿನಲ್ಲಿ ನಡೆದ ಘಟನಾ ವಿವರಗಳು ಇಲ್ಲಿ ಉಸಿರುಕಟ್ಟಿ ಓದುವಂತೆ ನಿರೂಪಿತವಾಗಿ; ಈ ಮಹಾ ವ್ಯಕ್ತಿತ್ವದ ಬದುಕಿನ ಈ ಶಿಖರ ಘಟ್ಟ ಒಳಗೊಂಡಿರುವ ತಳಮಳಗಳು ಈ ಬದುಕನ್ನು ಅದರೆಲ್ಲ ವೈಭವ-ಸಾಧನೆಗಳ ಭಾಗಗಳನ್ನು ಮರೆತು ಒಮ್ಮೆ ನಿಷ್ಠುರವಾಗಿ ಹಿನ್ನೋಡುವಂತೆ ಒತ್ತಾಯಿಸುತ್ತವೆ. ಇದರ ತರ್ಕ ಯಾವ ಬಗೆಯದು ಎಂದು ಯೋಚಿಸುವಂತೆ ಮಾಡುತ್ತದೆ. ಹೀಗೆ ಸರ್ವ ದಿಕ್ಕುಗಳಿಂದಲೂ ರಾಜ್‌ಕುಮಾರ್ ಅವರ ಬದುಕನ್ನು ಗ್ರಹಿಸುವ ಒಂದು ಸಮಗ್ರ ನೋಟ ಇಲ್ಲಿ ಕಾಣುತ್ತದೆ.

ಆದರೆ ರಾಜ್ ಕುಟುಂಬದ ಸಕಲ ಸದಸ್ಯರ-ಅವರ ಬೀಗರು, ಪತ್ನಿ ಕಡೆಯ ಸಂಬಂಧಿಕರು, ಸೊಸೆಯಂದಿರು, ಅಳಿಯಂದಿರು, ಭಾವಮೈದುನರು, ಷಡ್ಡಕರು ಇತ್ಯಾದಿ-ಪ್ರವರವನ್ನು ದಾಖಲಿಸಿರುವ ಪರಿ ಈ ಇಡೀ ಎರಡು ಸಂಪುಟಗಳ ಘನೋದ್ದೇಶಕ್ಕೇ ಚ್ಯುತಿ ತರುವಂತಿದೆ. ಇದು ಕುಟುಂಬದ ಅನಗತ್ಯ ವೈಭವೀಕರಣದಂತೆ

ಕಾಣುತ್ತದೆ. ನಾವು ಏನನ್ನೋ ಓದಲು ಕೂತು ಏನೋ ಓದಬೇಕಾದ ಒತ್ತಾಯಕ್ಕೆ ಒಳಗಾಗಿದ್ದೇವಲ್ಲ ಎಂಬ ಪೆಚ್ಚು ಓದುಗರನ್ನು ಆವರಿಸುತ್ತದೆ. ಲೇಖಕ ರುಕ್ಕೋಜಿಯವರ ಉತ್ಸಾಹ ಇಲ್ಲಿ ಎಲ್ಲೆ ಮೀರಿದಂತಿದೆ. ರಾಜ್‌ಕುಮಾರ್ ಕಥೆ ಇಲ್ಲಿ ರಾಜ್‌ಕುಮಾರ್ ಮಹಾತ್ಮೆ ಆಗಹೊರಟಂತಿದೆ. ಇದು ಅನಪೇಕ್ಷಣೀಯ ಬರಹ ಭಾಗಗಳು. ಕನಿಷ್ಟ ಈ ಸಂಪುಟಗಳ ಸಾಂಸ್ಕೃತಿಕ ಘನೋದ್ದೇಶಗಳ ಹಿನ್ನೆಲೆಯಿಂದಲಾದರೂ.

ಒಟ್ಟಿನಲ್ಲಿ ಈ ಸಂಪುಟಗಳ ಹೂರಣ ವೈವಿಧ್ಯವನ್ನು ಸಂಕ್ಷಿಪ್ತವಾಗಿ ಹೇಳುವುದು ಕಷ್ಟವೆನಿಸುವಷ್ಟು ಬೃಹತ್ ಆಗಿರುವ ಈ ಸಂಪುಟಗಳು, ಅವು ರೂಪಿತವಾಗಿರುವ ಉದ್ದೇಶದ ಹಿನ್ನೆಲೆಯಲ್ಲಿ ನೋಡಿದಾಗ ರಾಜ್‌ಕುಮಾರ್ ಬಗ್ಗೆ ಹೇಳದೇ ಉಳಿದದ್ದು ಏನೂ ಇಲ್ಲವೆಂಬಷ್ಟು ಸಂಪೂರ್ಣವಾಗಿವೆ. ಆದರೆ ಒಂದು ಸಮಗ್ರ ಅಧ್ಯಯನ ರೂಪದ ಚೌಕಟ್ಟಿನಲ್ಲಿ ನೋಡಿದಾಗ ಒಂದೆರಡು ಮುಖ್ಯ ಕೊರತೆಗಳು ಎದ್ದು ಕಾಣುತ್ತವೆ. ಮುಖ್ಯ ಕೊರತೆ ಎಂದರೆ, ರಾಜ್‌ಕುಮಾರ್ ಬದುಕು ಮತ್ತು ಚಿತ್ರಗಳ ಒಂದು ವಿಮರ್ಶಾತ್ಮಕ ನೋಟದ ಬರಹ ಇಲ್ಲಿ ಇರದಿರುವುದು. ಖಂಡಿತ ಅವರ ಅಭಿನಯ ಪ್ರತಿಭೆಯ ಒಂದು ಮೌಲ್ಯಮಾಪನ, ಇಂತಹ ಬೃಹತ್ ಕಥನದ ಹಿನ್ನೆಲೆಯಿಂದಾಗಿಯೇ ಇಲ್ಲಿ ನಡೆಯಬೇಕಿತ್ತು. ಜೊತೆಗೆ ರಾಜ್‌ಕುಮಾರ್ ಬದುಕಿನಲ್ಲಿ ಕೇಳಿಬಂದ ಹಲವು ವಿವಾದಾಸ್ಪದ ಸಂಗತಿಗಳ ಬಗ್ಗೆಯೂ ಮುಕ್ತ ಚರ್ಚೆ ಇರಬೇಕಿತ್ತು. ಉದಾ: ರಾಜ್‌ಕುಮಾರ್-ಲೀಲಾವತಿ ಅವರ ಸಂಬಂಧ (ರಾಜ್‌ಕುಮಾರ್ ನಿಧನಾನಂತರ ಈ ಬಗ್ಗೆ ಮಾಧ್ಯಮಗಳಲ್ಲಿ ಮುಕ್ತ ಚರ್ಚೆ ನಡೆಯುತ್ತಿದೆ), ರಾಜ್‌ಕುಮಾರ್-ಜಿ.ವಿ ಅಯ್ಯರ್-ನರಸಿಂಹರಾಜು-ಬಾಲಕೃಷ್ಣ ಅವರ ಸುಪ್ರಸಿದ್ಧ ಗೆಳೆತನದ ಸ್ವರೂಪ, ನರಸಿಂಹರಾಜು ಅವರ ಜನಪ್ರಿಯತೆಯಿಂದ ಪೆಚ್ಚಾದ ರಾಜ್‌ಕುಮಾರ್, ಚಿತ್ರವೊಂದರಲ್ಲಿ ನರಸಿಂಹರಾಜು ಅವರ ಪಾತ್ರದ ಪ್ರಭಾವ-ವ್ಯಾಪ್ತಿಯನ್ನು ಕುಗ್ಗಿಸಲು ನಡೆಸಿದರೆಂದು ಹೇಳಲಾದ ಪ್ರಯತ್ನದಿಂದಾಗಿ ಅವರ ಪರಸ್ಪರ ಮಧುರ ಸಂಬಂಧ ಹಾನಿಗೊಳಗಾಯಿತೆಂಬ ಸುದ್ದಿ (ರಾಜ್‌ಕುಮಾರರ ಸೋದರ ವರದರಾಜು ಅವರನ್ನು ನರಸಿಂಹರಾಜು ಅವರಿಗೆ ಸಮಾನಾಂತರವಾಗಿ ಹಾಸ್ಯನಟನನ್ನಾಗಿ ಚಲಾವಣೆಗೆ ತರಬೇಕೆನ್ನುವ ಪ್ರಸ್ತಾಪ ಈ ಪುಸ್ತಕದಲ್ಲಿ ಉಲ್ಲೇಖಿತವಾಗಿದೆ.), ರಾಜ್‌ಕುಮಾರ್ ಒಂದು ಉದ್ಯಮದ ಹೆಸರಾಗಿ ಬೆಳೆದ ನಂತರ ಕೇಳಿಬಂದ ಗಂಗಾಧರ ಮೊದಲಿಯಾರ್ ಮೇಲಿನ ಹಲ್ಲೆಯ ಪ್ರಸಂಗ, ರಾಜ್‌ಕುಮಾರ್-ರಾಜೇಶ್, ರಾಜ್‌ಕುಮಾರ್-ವಿಷ್ಣುವರ್ಧನ್ ಮತ್ತು ರಾಜ್‌ಕುಮಾರ್-ದ್ವಾರಕೀಶ್ ಸಂಬಂಧಗಳ ಬಿಗುವಿನ ಕಥೆಗಳು ಇಲ್ಲಿ ಯಾರಿಗೂ ನೋವಾಗದಂತೆ ವಸ್ತುನಿಷ್ಠವಾಗಿ ಚರ್ಚಿತವಾಗಿದ್ದರೆ ಈ ಸಂಪುಟಗಳು ಪೂರ್ಣವಾಗಿರುತ್ತಿದ್ದುವೇನೋ!

ಇಂತಹ ಚರ್ಚೆಗಳಿಲ್ಲದೆ ಈ ಪುಸ್ತಕ ಅಧ್ಯಯನದ ಒಂದು ಆಯಾಮ ಕಳೆದುಕೊಂಡಿದೆ ಎಂದೇ ಹೇಳಬೇಕು. ದೊಡ್ಡ ಅಧ್ಯಯನಗಳಿಗೆ ದೊಡ್ಡ ಧೈರ್ಯವೂ ಬೇಕು ಎಂಬ ದೃಷ್ಟಿಯಿಂದ ಈ ಮಾತುಗಳನ್ನು ಹೇಳುತ್ತಿರುವೆನಷ್ಟೆ. ಇನ್ನು ಈ ಪುಸ್ತಕದ ಒಂದು ತಾಂತ್ರಿಕ ಕೊರತೆ ಎಂದರೆ ಕೊನೆಯಲ್ಲಿ ಪದಸೂಚಿ ಇಲ್ಲದಿರುವುದು. ಈ

ಸಂಪುಟಗಳನ್ನು ತಮ್ಮ ಅಧ್ಯಯನ ಮತ್ತು ಸಂಶೋಧನೆಗಳಿಗಾಗಿ ಬಳಸುವವರು ತಮಗೆ ಬೇಕಾದ ಯಾವುದೋ ಒಂದು ಸಂಗತಿ ಅಥವಾ ವ್ಯಕ್ತಿಯ ಬಗ್ಗೆ ತಿಳಿಯಬೇಕಾದರೆ ಇಡಿಯಾಗಿ ಈ ಸಂಪುಟಗಳನ್ನು ತಿರುವಿಹಾಕಬೇಕಾಗುತ್ತದೆ!

ರಾಜ್‌ಕುಮಾರ್ ಅವರ ಚಲನಚಿತ್ರಗಳನ್ನು ಕುರಿತ ಮೊದಲ ಸಂಪುಟ ಮುಗಿಯುವುದು, ಬಹುಶಃ 'ಜೀವನಚೈತ್ರ'ದಿಂದ ಆಯ್ದ ಶುಭ್ರ ಹಿಮಾಚ್ಛಾದಿತ ಹಿಮಾಲಯದ ಗಿರಿ ಶಿಖರಗಳ ಹಿನ್ನೆಲೆಯಲ್ಲಿ ರಾಜ್‌ಕುಮಾರ್ ಬಿಳಿ ಪಂಚೆ ಅಂಗಿಗಳ ಅಚ್ಚ ಕನ್ನಡದ ಉಡುಪಿನಲ್ಲಿ ನಮ್ರರಾಗಿ ಕೈಮುಗಿದು ನಿಂತಿರುವ ಚಿತ್ರದೊಂದಿಗೆ. ಇದಕ್ಕೆ ಪೂರಕವಾಗಿ ಅವರ ಕಣ್ಣಿನ ವೈದ್ಯ ಡಾ. ಭುಜಂಗಶೆಟ್ಟಿಯವರು ಅವರನ್ನು ಅಲೌಕಿಕ ವ್ಯಕ್ತಿತ್ವವೆಂದು ಹೇಳುವ ಲೇಖನವೂ ಇದರ ಜೊತೆಗಿದೆ. ಹಾಗೆ ಹೇಳಲು ತಮಗಿರುವ ಕಾರಣಗಳನ್ನೂ ಡಾ. ಶೆಟ್ಟಿ ಅವರು ಹೇಳುವರು. ಅಲೌಕಿಕ ಎಂದರೆ ಈ ಇಂದ್ರಿಯ ಲೋಕದ ಸಂವೇದನೆಗಳ ಹೊರಗೆ ಇರುವವರು ಎಂದೇನೂ ಅರ್ಥವಲ್ಲ. ಬದಲಿಗೆ, ಆ ವ್ಯಕ್ತಿತ್ವದ ಕೆಲವು ಗುಣಸ್ವಭಾವಗಳನ್ನು ಸಾಮಾನ್ಯ ಲೌಕಿಕ ಜ್ಞಾನದ ಪರಿಕರಗಳಿಂದ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದಷ್ಟೇ ಅರ್ಥ. ಅಂತಹ ವ್ಯಕ್ತಿತ್ವಗಳು ನಮ್ಮ ಮಧ್ಯೆಯೇ ಹಲವಾರಿವೆ. ಆದರೆ ನಾವು ಅವರನ್ನು ರಾಜ್‌ಕುಮಾರ್‌ರಂತಹವರನ್ನು ಅವರ ಸಾರ್ವಜನಿಕ ಬೃಹತ್ ಬಿಂಬದ ಕಾರಣದಿಂದಾಗಿ ನೋಡಿದಷ್ಟು ಅಭಿಮಾನ–ಆಶ್ಚರ್ಯದ ಕಣ್ಣುಗಳಿಂದ ನೋಡದ ಕಾರಣ ಅಂಥವರು ಹಾಗೆ ಕಾಣುವುದಿಲ್ಲವಷ್ಟೆ. ಆದರೆ ಒಂದು ಮಾತು ಹೇಳಲೇಬೇಕು. ರಾಜ್‌ಕುಮಾರ್ ನಮ್ಮ ಯುಗ ಕಂಡ ಬಹು ಅಪರೂಪದ ಸಮಚಿತ್ತದ ಸಾರ್ವಜನಿಕ ವ್ಯಕ್ತಿತ್ವ. ಈ ಸಮಚಿತ್ತವೇ ಅಲ್ಲವೇ ಆಧ್ಯಾತ್ಮಿಕತೆಯ ಮೊದಲ ಮೆಟ್ಟಿಲು? ಚಲನಚಿತ್ರ ರಂಗದಂತಹ ಥಳುಕು ಬಳುಕಿನ ಲೋಕದಲ್ಲಿ ಅತ್ಯಂತ ಜನಪ್ರಿಯ ವ್ಯಕ್ತಿಯಾಗಿ ಎಲ್ಲ ಲೌಕಿಕ ಯಶಸ್ಸನ್ನೂ ಗಳಿಸಿ ಜನಸಾಮಾನ್ಯರ ಆರಾಧ್ಯದೈವವೇ ಆಗಿದ್ದ ಈ ವ್ಯಕ್ತಿ, ಕನಿಷ್ಟ ಸಾರ್ವಜನಿಕವಾಗಿ ಎಂದೂ ನಮ್ರತೆ–ವಿನಯಗಳನ್ನು ಕಳೆದುಕೊಳ್ಳದಂತಹ ಎಚ್ಚರಿಕೆಯ ಜೀವನ ನಡೆಸಿದರೆಂದರೆ ಅದೇನು ಸಾಮಾನ್ಯ ಸಂಗತಿಯೇ?

ಈ ಎಚ್ಚರಿಕೆಯ ಬದುಕನ್ನೇ ಬುದ್ಧ ಕುಶಲತೆ ಎಂದು ಕರೆದು ಸಮ್ಯಕ್‌ಜ್ಞಾನಕ್ಕೆ ಬೇಕಾದ ಮುಖ್ಯ ಪರಿಕರ ಎಂದು ಅದನ್ನು ಗುರುತಿಸಿದ್ದು. ರಾಜ್‌ಕುಮಾರ್ ಅವರ ಈ ಕುಶಲತೆಯ ಹಿಂದೆ ಇರುವುದು, ಅವರನ್ನು ಅಲೌಕಿಕ ವ್ಯಕ್ತಿತ್ವವೆಂದು ಕರೆಯುವ ಡಾ, ಭುಜಂಗ ಶೆಟ್ಟರು ಹೇಳುವಂತೆ, ಎಂದೂ ಅವರು ತಮ್ಮ ಬಾಲ್ಯದ ಬಡತನದ ದಿನಗಳನ್ನು ಮರೆಯಲಿಲ್ಲ ಎಂಬ ಸಂಗತಿ. ಸುಖದ ಕ್ಷಣಗಳೆಲ್ಲಲ್ಲ ಅವರು ಆ ಕಷ್ಟದ ದಿನಗಳನ್ನು ನೆನೆದು ಸಮಚಿತ್ತ ಸಾಧಿಸುತ್ತಿದ್ದರು. ಬುದ್ಧ ಹೇಳುವ ಆಸೆಯೇ (ಅಂದರೆ ತಣಿಯದ ದಾಹವೇ) ದುಃಖಕ್ಕೆ ಕಾರಣ ಎಂಬ ಮೊದಲ ಆರ್ಯಸತ್ಯ ರಾಜ್‌ಕುಮಾರ್ ಅವರ ಬದುಕಿನಲ್ಲಿ ಹೀಗೆ ಪರೋಕ್ಷ ಬೆಳಕಾಗಿ ಅಂತರ್ಗತವಾಗಿತ್ತು. ಅದೇ ಅವರಿಗೆ ಯೋಗಿಯ ಪ್ರಭೆಯನ್ನೂ ನೀಡಿದ್ದುದೆಂದು ಕಾಣುತ್ತದೆ. 'ಮಂತ್ರಲಾಯ ಮಹಾತ್ಮೆ'

ಚಿತ್ರಕ್ಕಾಗಿ ರಾಘವೇಂದ್ರ ಸ್ವಾಮಿಗಳ ಪಾತ್ರಕ್ಕಾಗಿ ತಮ್ಮನ್ನು ನಿರ್ದೇಶಕರು ಆರಿಸಿದಾಗ ಸಮಾಜದ ಕೆಲ ಭಾಗಗಳಿಂದ ಕೇಳಿಬಂದ ಟೀಕೆಗಳನ್ನು ರಾಜ್‌ಕುಮಾರ್ ಎಷ್ಟು ಸಮಚಿತ್ತದಿಂದ ಸ್ವೀಕರಿಸುತ್ತಾರೆಂದರೆ, 'ಹೌದು ನಾನು ಹೆಂಡ ಮಾರುವ ಜಾತಿಗೆ ಸೇರಿದವನು; ಮಾಂಸ ತಿನ್ನುವವನು. ಹಾಗಾಗಿ ಕೆಲ ಭಕ್ತ ಜನರ ಮನಸ್ಸಿಗೆ ನನ್ನ ಆಯ್ಕೆ ಘಾಸಿ ಉಂಟು ಮಾಡಿರಬಹುದು' ಎಂದು ಆಲೋಚಿಸಿ ಆ ಪಾತ್ರ ತಮಗೆ ಬೇಡವೆಂದು ನಿರ್ದೇಶಕರಿಗೆ ತಿಳಿಸಿಬಿಡುತ್ತಾರೆ. ಆದರೆ ಆ ಚಿತ್ರ ತಂಡದ ಪ್ರಮುಖರಾದ ಜಿ.ವಿ. ಅಯ್ಯರ್, ಅವರಿಗೆ ಒಂದು ಸಂಗತಿ ಹೇಳಿ ಅವರನ್ನು ಆ ಪಾತ್ರಕ್ಕೆ ಅಂತಿಮವಾಗಿ ಒಪ್ಪಿಸುತ್ತಾರೆ. ಆ ಸಂಗತಿ ಎಂದರೆ, ನಾಲ್ಕಾರು ನಟರನ್ನು ಆಯ್ಕೆ ಮಾಡಿ ಅವರ ಹೆಸರುಗಳ ಚೀಟಿಗಳನ್ನು ಬರೆದು ರಾಘವೇಂದ್ರ ಸ್ವಾಮಿಗಳ ಬೃಂದಾವನದ ಮುಂದೆ ಚೀಟಿ ಎತ್ತಿದಾಗ ಅಲ್ಲಿ ಬರುವುದು, ರಾಜ್‌ಕುಮಾರ್ ಅವರ ಹೆಸರೇ!

ಆದರೆ ಹೀಗೆ ಯೋಗಿಯ ಸ್ವಭಾವದವರಾದರೂ, ಅವರು ಲೌಕಿಕ ಯಶಸ್ಸು ಕಾಣಲು ಒಟ್ಟಾರೆ ಈ ಸಂಪುಟಗಳು ನಿರೂಪಿಸಿರುವ ಕಥನದಲ್ಲಿ ಎದ್ದು ಕಾಣುವ ಎರಡು ಕಾರಣಗಳೆಂದರೆ ಅವರ ಪತ್ನಿಯ ಅಸಾಧ್ಯ ಲೋಕಜ್ಞಾನ ಮತ್ತು ರಾಜ್‌ಕುಮಾರ್ ಅವರ ಚಿತ್ರ ಬದುಕಿನ ಎಲ್ಲ ವಿವರಗಳನ್ನೂ ನಿರ್ಧರಿಸುತ್ತಿದ್ದ ಅವರ ಕಿರಿಯ ಸೋದರ ವರದಪ್ಪನವರ ಕಂಡೂ ಕಾಣದಂತಹ ಶಿಸ್ತು ಮತ್ತು ಸತ್ಯವಂತಿಕೆಗಳನ್ನು ಕುರಿತ ಬದ್ಧತೆ. 'ಶಂಕರ್‌ಗುರು' ಚಿತ್ರದ ಸಿದ್ಧತೆಯ ಸಂದರ್ಭದಲ್ಲಿ ಹಣಕಾಸು ವ್ಯವಸ್ಥೆಯಲ್ಲಿ ಏರುಪೇರುಗಳಾದಾಗ ರಾಜ್‌ಕುಮಾರ್ ತಮಗೆ ಹೇಳಿದರೆಂದು ಸ್ವತಃ ಪಾರ್ವತಮ್ಮನವರೇ ಉಲ್ಲೇಖಿಸುವ 'ಪಾರ್ವತಿ, ಯಾರಿಂದಲೋ ಸುಖ ಬಂತೆಂದು ಕಷ್ಟದಲ್ಲಿ ಕೈಹಿಡಿಯಲು ಮುಂದೆ ಬಂದವರನ್ನು ಕೈಬಿಡಬಾರದು!' ಎಂಬ ಮಾತು ಈ ಕುಟುಂಬದ ನಿಯತ್ತಿನ ಬಗ್ಗೆ ಎಲ್ಲವನ್ನೂ ಹೇಳುತ್ತದೆ. ಪಾರ್ವತಮ್ಮನವರು ತಮ್ಮ ಪತಿಯ ಸಾವನ್ನು ನಿರೀಕ್ಷಿಸಿದ್ದವರಂತೆ ಸಾವಿನ ನಂತರ ಆಡುವ ನಿರ್ಲಿಪ್ತತೆಯಿಂದ ತುಂಬಿದ ಮಾತುಗಳು ಅವರು ಒಂದು ದೊಡ್ಡ ಸಂಸಾರದ ಯಜಮಾನತಿಯಾಗಿ ಗಳಿಸಿದ್ದ ಪ್ರಬುದ್ಧ ನಾಯಕತ್ವದ ಗುಣಗಳನ್ನು ಸೂಚಿಸುವಂತಿದೆ. ತಮ್ಮ ವರದಪ್ಪನವರ ಸಾವು ರಾಜ್‌ಕುಮಾರ್ ಅವರನ್ನು ಬುಡಸಮೇತ ಅಲುಗಾಡಿಸಿದ್ದೇ ಅವರ ಸಾವು ಅವರ ಹತ್ತಿರ ಬರಲು ಕಾರಣ ಎಂಬ ಸೂಚನೆಯೂ ಈ ಪುಸ್ತಕದಲ್ಲಿದ್ದು, ಈ ಇಡೀ ರಾಜ್‌ಕುಮಾರ್ ಕಥನ ಕೊನೆಕೊನೆಗೆ ಒಂದು ಭಾವನಾತ್ಮಕ ಸಾಂಸಾರಿಕ ಕಥೆಯಾಗಿಯೂ ಮಾರ್ಪಟ್ಟು ನಮ್ಮ ಕಣ್ಣುಗಳನ್ನು ತೇವಗೊಳಿಸುತ್ತದೆ.

ಇಂತಹ ಸಂಪುಟಗಳನ್ನು ನಿಜವಾಗಿ ಹೊರತರಬೇಕಾದವರು ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಅಥವಾ ವಾರ್ತಾ ಇಲಾಖೆಯವರು. ಆದರೆ ಸರ್ಕಾರದ ಔಪಚಾರಿಕೆಗಳು ಮತ್ತು ಅದರಲ್ಲಿ ತಲೆಹಾಕುವ ಮಧ್ಯವರ್ತಿಗಳ ಕಾಟ ಇಂತಹ ಕೆಲಸಗಳನ್ನು ಆಗು ಮಾಡಲಾರವು. ಲೇಖಕ ರುಕ್ಕೋಜಿ ಈ ಪುಸ್ತಕದ ಪ್ರಕಟಣೆಯ ಹಣಕಾಸಿಗಾಗಿ ತಾವು ಪಟ್ಟ ಕಷ್ಟಗಳ ಬಗ್ಗೆಯೂ ಒಂದು ಅಧ್ಯಾಯ ಬರೆದಿದ್ದಾರೆ. ಇವರು

ಹಣಕಾಸಿಗಾಗಿ ನಿರೀಕ್ಷೆಯಿಂದ ಇನ್ಫೋಸಿಸ್‌ನ ಸುಧಾಮೂರ್ತಿಯವರಿಗೂ ಒಂದು ಅರ್ಜಿ ಗುಜರಾಯಿಸಿದ್ದಂಟು. ಆದರೆ ಆ ಪ್ರತಿಷ್ಠಾನ ರಾಜ್‌ಕುಮಾರ್ ಅವರಿಂದ ಕನ್ನಡ ಚಿತ್ರೋದ್ಯಮಕ್ಕೆ ಆದುವೆಂದು ಹೇಳಲಾದ ನಷ್ಟಗಳ ಬಗ್ಗೆಯೂ ಪುಸ್ತಕ ಹೇಳಬೇಕಾಗುತ್ತದೆ ಎಂಬ ಷರತ್ತು ಹಾಕುತ್ತದೆ! ಕೊನೆಗೆ ಹೆಚ್. ಗೋವಿಂದಪ್ಪ ಎಂಬ ಉದ್ಯಮಿಯೊಬ್ಬರು ರಾಜ್‌ಕುಮಾರ್ ಮೇಲಿನ ಪ್ರೇಮದಿಂದಾಗಿಯೇ ಬೇಷರತ್ತಾಗಿ ಮತ್ತು ಉದಾರವಾಗಿ ಹಣಕಾಸು ಒದಗಿಸಲು ಮುಂದೆ ಬಂದಾಗ ಈ ಪುಸ್ತಕ ಯೋಜನೆ ಸಾಕಾರಗೊಳ್ಳುತ್ತದೆ. ಪುಸ್ತಕದ ಸಮೃದ್ಧತೆಗೆ ಮತ್ತು ಅಂದ ಚೆಂದಗಳಿಗೆ ಕಾರಣರಾಗಿ ಈ ಸಂಪುಟಗಳು ಈ ಆಕರ್ಷಕ ರೂಪದಲ್ಲಿ ಸಾರ್ವಜನಿಕರಿಗೆ ತಲುಪುವಂತಾಗಲು ಕಾರಣರಾದವರೆಲ್ಲರನ್ನೂ ರುಕ್ಕೋಜಿ ಇಲ್ಲಿ ಅವರ ಭಾವಚಿತ್ರಗಳೊಂದಿಗೆ ಸವಿವರವಾಗಿ ಪರಿಚಯಿಸಿದ್ದಾರೆ. ಹಾಗೇ ತಾವು ಈ ಸಂಪುಟಗಳ ಬಗ್ಗೆ ಯೋಚನೆ ಮಾಡುವ ಹಂತಕ್ಕೆ ತಮ್ಮ ಬದುಕು ತಲುಪಿದ ಕಥೆಯನ್ನೂ ಚಿತ್ರಗಳ ಸಹಿತ ಸವಿವರವಾಗಿ ನಿರೂಪಿಸಿದ್ದಾರೆ. ಇದು ನಮ್ಮ ಪ್ರಾಚೀನ ಕವಿಗಳು ತಮ್ಮ ಕಾವ್ಯದೊಂದಿಗೆ ಕವಿ ಚರಿತ್ರೆಯನ್ನೂ ಬರೆದುಕೊಂಡ ಸಂಪ್ರದಾಯವನ್ನು ನೆನಪಿಗೆ ತರುವಂತಿದೆ!

ಈ ಸಂಪುಟಗಳ ರಚನೆ–ಅದರ ಗುಣ ಅತ್ತಿರಲಿ–ಅದರ ಗಾತ್ರದಿಂದಲೇ ಒಂದು ಅಸಾಮಾನ್ಯ–ದೈತ್ಯ–ಕೆಲಸ. ಅದನ್ನು ರುಕ್ಕೋಜಿಯವರು ಕೆಲ ಸಣ್ಣ ಪುಟ್ಟ ಅರೆಕೊರೆಗಳೊಂದಿಗೆ ಸಮರ್ಥವಾಗಿ ಮಾಡಿ ಮುಗಿಸಿದ್ದಾರೆ. ಆದರೆ ಅವರ ಆತ್ಮ ಚರಿತ್ರೆಯ ಈ ಭಾಗ ಇದರಲ್ಲಿ ಈ ಪ್ರಮಾಣದಲ್ಲಿ ಅಡಕವಾಗುವ ಅಗತ್ಯ ಇರಲಿಲ್ಲ ಎಂದು ನನ್ನ ವೈಯಕ್ತಿಕ ಭಾವನೆ. ಈ ಸಂಪುಟಗಳನ್ನು ಅವರು 'ತನ್ನ ಐವತ್ತು ಪೈಸೆ ಕೂಲಿಯ ಹಣದಲ್ಲಿ ನನಗೆ 'ಸತ್ಯ ಹರಿಶ್ಚಂದ್ರ ಚಿತ್ರವನ್ನು ತೋರಿಸಿದ, ತಾನು ಅಕ್ಷರ ಕಲಿಯದಿದ್ದರೂ ತನ್ನ ಮಗ ತುಂಬಾ ಓದಬೇಕೆಂಬ ಆಸೆಯಿಂದ ಬದುಕಿನುದ್ದಕ್ಕೂ ಹೊಲಗದ್ದೆಗಳಲ್ಲಿ ದುಡಿದ ನನ್ನ ತಾಯಿ ಪದ್ಮಾಬಾಯಿಗೆ...' ಎಂದು ಹೇಳುತ್ತಾ ಮಾಡಿರುವ ಅರ್ಪಣೆ ಮಾಡಿರುವ ಸಾಲುಗಳೇ ಈ ಸಂಪುಟಗಳಲ್ಲಿ ಕಾಣುವ ಲೇಖಕರ ಬದುಕಿನ ಬಗ್ಗೆ ಎಲ್ಲವನ್ನು ಮಾರ್ಮಿಕವಾಗಿ ಸೂಚಿಸುತ್ತಿರುವುದರಿಂದ ಈ ಭಾಗವನ್ನು ಒಂದು ಪ್ರತ್ಯೇಕ ಕಿರುಪುಸ್ತಕವನ್ನಾಗಿ ಮಾಡಿ ಈ ಸಂಪುಟಗಳೊಂದಿಗೆ ಕೊಟ್ಟಿದ್ದರೆ ಅವರ ಈ ಒಟ್ಟು ಕೆಲಸದ ಘನತೆ ಹೆಚ್ಚುತ್ತಿತ್ತೇನೋ.

ಸಾಮಾನ್ಯ ಪುಸ್ತಕದ ಅಳತೆಗಳ ಎರಡರಷ್ಟಿರುವ ಆಕಾರದ ಮತ್ತು ಹೊಳೆಯುವ ಹಾಲು ಬಿಳುಪು ಕಾಗದದಲ್ಲಿ ಕಣ್ಣಿಗೆ ಹಿತವೆನ್ನಿಸುವ ಹದದಲ್ಲಿರುವ ಬಣ್ಣ ಮತ್ತು ಕಪ್ಪು–ಬಿಳುಪು ಛಾಯಾಚಿತ್ರಗಳು ಹಾಗೂ ಪುಟ ವಿನ್ಯಾಸದೊಂದಿಗೆ ಮುದ್ರಿತವಾಗಿ ಅತ್ಯುತ್ತಮ ಗುಣಮಟದ ಕಸುಬುದಾರಿಕೆಯ ರಕ್ಷಾಕವಚ ಪಡೆದಿರುವ ಈ ಸಂಪುಟಗಳ ಒಟ್ಟು ತೂಕ ಹತ್ತು ಕೇಜಿ! ಹಾಗಾಗಿಯೇ ಇದರ ಪ್ರಕಾಶಕರಾದ ಪ್ರೀತಿ ಪ್ರಕಾಶನದವರು ಇವನ್ನು ಹೊರಲು ಅನುಕೂಲವಾಗುವಂತೆ ಒಂದು ಭದ್ರವಾದ ಚೀಲವನ್ನೂ ಒದಗಿಸಿದ್ದಾರೆ. ನಿಜ, ಇವುಗಳ ಒಟ್ಟು ಬೆಲೆ ಏಳೂವರೆ ಸಾವಿರ ರೂಪಾಯಿಗಳು ಸಾಮಾನ್ಯ ಓದುಗನಿಗೆ

ದುಬಾರಿ ಎನಿಸಿದರೂ, ಇದರ ಹಿಂದಿರುವ ಅಪೂರ್ವವೆನಿಸುವ ಶ್ರದ್ಧೆ, ಅಪಾರವೆನಿಸುವ ಶ್ರಮ, ಅಪರೂಪದ್ದೆನಿಸುವ ಆ ವಿಶಿಷ್ಟ ಪ್ರತಿಭೆ ಮತ್ತು ಖರ್ಚುವೆಚ್ಚಗಳ ದೃಷ್ಟಿಯಿಂದ ಉಚಿತವೇ ಆಗಿದೆ ಎನ್ನದಿರಲಾಗದು. ಈ ಸಂಪುಟಗಳ ಖರೀದಿ ಕನ್ನಡದ ಕೆಲಸವೇ ಆಗಿದ್ದು ಈ ಸಂಪುಟಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಕೆಲಸ ಕನ್ನಡದ ಕೆಲಸವೇ ಆಗಿದ್ದು, ಸರ್ಕಾರ ಈ ಸಂಪುಟಗಳನ್ನು ಖರೀದಿಸಿ ತನ್ನ ಗ್ರಂಥಾಲಯಗಳಿಗೆ ಒದಗಿಸುವುದು ಅದರ ಕರ್ತವ್ಯವೇ ಆಗಿದೆ.

* * *

ಬಾಲದೇಟು: ಕೊನೆಯಲ್ಲಿ ಈ ಪುಸ್ತಕವನ್ನು ತಿರುವಿ ಹಾಕುತ್ತಿದ್ದಾಗ ನನಗೆದುರಾದ ಒಂದು ಆಶ್ಚರ್ಯವನ್ನು ಹೇಳಿ ಈ ಬರಹವನ್ನು ಮುಗಿಸಬೇಕು. ರಾಜ್‌ಕುಮಾರ್ ಅವರ ತಂದೆ ಸಿಂಗಾನೆಲ್ಲೂರು ಪುಟ್ಟಸ್ವಾಮಯ್ಯನವರು ಬಹು ಕಷ್ಟದಿಂದ ತಮ್ಮ ಸಂಸಾರವನ್ನು ನಿರ್ವಹಿಸುತ್ತಿದ್ದರು ಎಂದು ಹೇಳಲಾಗುತ್ತದೆ. ಆದರೆ ಅಷ್ಟು ಹಿಂದಿನ ಕಾಲದಲ್ಲಿ–ಸುಮಾರು ಎಪ್ಪತ್ತು–ಎಂಬತ್ತು ವರ್ಷಗಳ ಹಿಂದೆ– ಅವರ ಕುಟುಬಕ್ಕೆ ಸಂಬಂಧಿಸಿದಂತೆ ಈ ಸಂಪುಟಗಳಲ್ಲಿ ಛಾಯಾಚಿತ್ರಗಳು ಎಷ್ಟು ಹೇರಳವಾಗಿವೆ ಎಂದರೆ ಈ ಕುಟುಂಬಕ್ಕೆ ರಂಗಭೂಮಿಯ ವ್ಯಾಮೋಹದೊಂದಿಗೆ ಅಥವಾ ಅದರ ಭಾಗವಾಗಿ ಛಾಯಾಚಿತ್ರ ತೆಗೆಸಿಕೊಳ್ಳುವ ವ್ಯಾಮೋಹವೂ ಬಲವಾಗಿತ್ತೆಂದು ಯೋಚಿಸುವಂತಾಗುತ್ತದೆ!

(ರಾಜ್‌ಕುಮಾರ್ ಕುರಿತ ದೊಡ್ಡಹುಲ್ಲೂರು ರುಕ್ಕೋಜಿಯವರ ಎರಡು ಬೃಹತ್ ಸಂಪುಟಗಳನ್ನು ಕುರಿತ ಲೇಖನಗಳ ಸಂಗ್ರಹಕ್ಕಾಗಿ ಬರೆದ ಲೇಖನ)

ಡಿ.ಎಸ್. ನಾಗಭೂಷಣ ಅವರೊಡನೆ ಒಂದು ಮಾತುಕತೆ

(ಇದು ಈ ಹಿಂದೆ 'ಅವಧಿ' ಅಂತರ್ಜಾಲ ಪತ್ರಿಕೆಯಲ್ಲಿ ಪ್ರಕಟವಾದ ಮಾತುಕತೆಯ ಪರಿಷ್ಕೃತ ರೂಪ. ಟಿ. ಅವಿನಾಶ್ ನಡೆಸಿದ ಮೂಲ ಮಾತುಕತೆಯನ್ನು ಸಾಕಷ್ಟು ಸಿದ್ಧತೆಗೆ ಕಾಲಾವಕಾಶವಿಲ್ಲದೆ ದಾಖಲಿಸಲಾಗಿತ್ತರಿಂದ ಅಲ್ಲಿನ ನನ್ನ ಕೆಲವು ಮಾತುಗಳಿಗೆ ಇನ್ನಷ್ಟು ಪೂರಕ ಮಾತುಗಳು ಮತ್ತು ಮಾಹಿತಿ ಬೇಕೆನ್ನಿಸಿದ್ದರಿಂದ ಈ ಪರಿಷ್ಕಾರ.–ಡಿಎಸ್ಸೆನ್)

ಪ್ರಶ್ನೆ: ನಿಮ್ಮ ಬರಹಗಳನ್ನು ನೀವು ನವ್ಯದ ಉತ್ತುಂಗದಲ್ಲಿ ಅಂದರೆ ೧೯೭೦ರ ದಶಕದ ಕಾಲದಲ್ಲಿ ಪ್ರಾರಂಭ ಮಾಡಿದಿರಿ. ಇದರ ಜೊತೆಗೆ ದಲಿತ ಚಳುವಳಿಯೂ ಆ ಕಾಲಘಟ್ಟದಲ್ಲಿ ಪ್ರಾರಂಭವಾಗಿತ್ತು. ಆದರೆ ನಿಮ್ಮ ಬರಹಗಳು ಈ ಎರಡೂ ಚಳುವಳಿಗಳ ಪ್ರಭಾವದಿಂದ ಹೊರತಾಗಿವೆ. ಹೇಗೆ ನೀವು ನವ್ಯದ ಪ್ರಭಾವದಿಂದ ತಪ್ಪಿಸಿಕೊಂಡಿರಿ? ನಿಮ್ಮ ಬರಹಗಳ ಹಿನ್ನಲೆಯನ್ನು ಸ್ವಲ್ಪ ವಿವರಿಸಿ.

ಡಿ. ಎಸ್ ನಾಗಭೂಷಣ: ನನ್ನ ಸಾಹಿತ್ಯಾಸಕ್ತಿ ಶುರುವಾಗಿದ್ದು ಖಂಡಿತ ನವ್ಯದ ಉಚ್ಛ್ರಾಯದಲ್ಲಿಯೇ. ಅಂದರೆ ೧೯೬೦ರ ದಶಕದ ಆರಂಭದಲ್ಲಿ. ಆದರೆ ಬರಹ ಪ್ರಾರಂಭವಾಗಿದ್ದು– ೧೯೭೦ರ ದಶಕದ ಪ್ರಾರಂಭದಲ್ಲಿ. ಇದಕ್ಕಿಂತ ಮುಂಚೆ ನಾನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದೆ. ಅಲ್ಲಿ ಲಂಕೇಶ್ ಇದ್ದರು. ಜಿ ಎಸ್ ಶಿವರುದ್ರಪ್ಪನವರ ನೇತೃತ್ವದ ಕನ್ನಡ ವಿಭಾಗ ನಡೆಸುತ್ತಿದ್ದ ವಾರ್ಷಿಕ ವಿಚಾರ ಸಂಕಿರಣಗಳಲ್ಲಿ ಹೆಚ್ಚಾಗಿ ನವ್ಯದ ಕುರಿತಾಗಿ ಬಿರುಸಿನ ಚರ್ಚೆ ನಡೆಯುತ್ತಿತ್ತು. ನಾನು ಗಣಿತಶಾಸ್ತ್ರದ ವಿದ್ಯಾರ್ಥಿಯಾದರೂ ಸಾಹಿತ್ಯಕ್ಷೇತ್ರದಲ್ಲಿ ಒಲವನ್ನು ಹೊಂದಿದ್ದೆ. ಎಷ್ಟೆಂದರೆ ತರಗತಿಗಳನ್ನು ತಪ್ಪಿಸಿಕೊಂಡು ಈ ಸಾಹಿತ್ಯದ ಗೋಷ್ಠಿಗಳಲ್ಲಿ ಕುತೂಹಲದಿಂದ ಭಾಗವಹಿಸುತ್ತಿದ್ದೆ.

ಇದಕ್ಕೊಂದು ಹಿನ್ನೆಲೆ ಎಂದರೆ ನನ್ನ ಅಣ್ಣ ಸೆಂಟ್ರಲ್ ಕಾಲೇಜಿನಲ್ಲಿ ಗಣಿತಶಾಸ್ತ್ರದ ಅಧ್ಯಾಪಕರಾಗಿದ್ದರಿಂದ ಮನೆಯಲ್ಲಿ ಲಂಕೇಶ್ ಅವರ ವ್ಯಕ್ತಿತ್ವದ ಕುರಿತು ಚರ್ಚೆ ನಡೆಯುತ್ತಿತ್ತು. ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಕೂಡ. ಆಗ ಲಂಕೇಶ್ ದೊಡ್ಡ ಲೇಖಕರಾಗಿಲ್ಲದಿದ್ದರೂ ಸುಧಾ ಪತ್ರಿಕೆಯಲ್ಲಿ ಚುಟುಕುಗಳನ್ನು ಬರೆಯುತ್ತಿದ್ದರು. ಅದು

ನನ್ನನ್ನು ಬಹಳ ಸೆಳೆಯುತ್ತಿತ್ತು. ನಂತರದಲ್ಲೇ ಪ್ರಕಟವಾದ ಅವರ 'ಪ್ರಸ್ತುತ' ವಿಮರ್ಶಾ ಸಂಕಲನ ಮತ್ತು 'ನಾನಲ್ಲ' ಎಂಬ ಕಥಾಸಂಕಲನ ನನ್ನನ್ನು ಸಂಪೂರ್ಣ ಸಾಹಿತ್ಯದೆಡೆಗೆ ಹಾರಿಸಿಕೊಂಡು ಹೋದವು.

ಈ ಸಂಬಂಧವಾಗಿ ಹೇಳಬೇಕಾದ ಇನ್ನೊಂದು ಅಂಶವೆಂದರೆ, ನನ್ನ ಕಜಿನ್ ಡಿ. ವಿ. ರಾಜಶೇಖರ ಆಗ ಕನ್ನಡ ವಿಭಾಗದ ವಿದ್ಯಾರ್ಥಿ. ಅವನ ಮೂಲಕ ಯು. ಆರ್ ಅನಂತಮೂರ್ತಿ ಅವರ ಸಾಹಿತ್ಯ-ಚಿಂತನೆ ಪರಿಚಯವಾದವು. ಅದರಲ್ಲೂ 'ಪ್ರಜ್ಞೆ ಮತ್ತು ಪರಿಸರ' ನನ್ನನ್ನು ತೀರಾ ಪ್ರಭಾವಿಸಿ, ಹೊಸ ಲೋಕವೊಂದನ್ನು ತೆರೆಯಿತು. ಅನಂತಮೂರ್ತಿಯವರ ಪುಸ್ತಕ ವಿಶಾಲವಾದ ಆಕಾಶದಂತಿದ್ದರೆ, ಲಂಕೇಶರ ಕಥೆ ಮತ್ತು ವಿಮರ್ಶಾ ಪುಸ್ತಕಗಳು ಆ ಆಕಾಶದಲ್ಲಿ ಹಲವು ಬಗೆಯ ಆಕಾರಗಳನ್ನು ನಿರ್ಮಿಸಿದ್ದವು. ಗಣಿತ ಶಾಸ್ತ್ರವು ಸಹ ನನಗೆ ಫಿಲಾಸಫಿ ರೀತಿ ತೋರುತ್ತಿತ್ತು. ಅದು ಒಂದು ರೀತಿಯಲ್ಲಿ ಸ್ಟಡಿ ಆಫ್ ಸ್ಟ್ರಕ್ಚರ್. ಸಾಹಿತ್ಯವು ಕೂಡ ಅಂತಿಮವಾಗಿ ಇದೇ ಅಲ್ಲವೆ ಎಂದು ಸಹ ಅನಿಸತೊಡಗಿತ್ತು. ಏಕೆಂದರೆ ಸಾಹಿತ್ಯವೂ ಸಾಮಾಜಿಕ ರಚನೆಗಳ ವ್ಯವಸ್ಥೆಯನ್ನು ನಿರೂಪಿಸುತ್ತದೆ ಎನ್ನಿಸತೊಡಗಿತ್ತು.

ನವ್ಯ ಸಾಹಿತ್ಯ ನನ್ನನ್ನು ತೀವ್ರವಾಗಿ ಪ್ರಭಾವಿಸಿದ್ದು ನಿಜ. ಆದರೆ ಹಾಗೆಯೇ ಅದರಿಂದ ಒಂದು ಬಗೆಯ ಅತೃಪ್ತಿಯೂ ನನ್ನನ್ನು ಕಾಡತೊಡಗಿತ್ತು. ನವ್ಯ ಸಾಹಿತ್ಯ ಬೌದ್ಧಿಕವಾಗಿ ಎಷ್ಟೇ ರೋಚಕವಾಗಿದ್ದರೂ ಅದು ನನ್ನ ಬದುಕಿನಿಂದ ಹೊರತಾಗಿತ್ತು ಎನಿಸಹತ್ತಿತ್ತು. ಇದರ ಜೊತೆಗೆ ಆ ಕಾಲಘಟ್ಟವು ಬಹಳ ರೋಚಕವೇ. ಬಹಳ ವೈಬ್ರಂಟ್ ಆದ ಕಾಲಘಟ್ಟ ಅದು. ಒಂದು ಕಡೆ ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲಿನ ವಿಚಾರ ಸಂಕಿರಣಗಳಲ್ಲಿ ಸಾಹಿತ್ಯದ ಕುರಿತಾಗಿ ತೀವ್ರವಾದ ಚರ್ಚೆಗಳು ತುರುಸಿನಿಂದ ನಡೆಯುತ್ತಿದ್ದವು. ಮತ್ತೊಂದೆಡೆ, ಎಂ.ಡಿ. ನಂಜುಂಡಸ್ವಾಮಿ ನೇತೃತ್ವದಲ್ಲಿ ಕಾಂಗ್ರೆಸ್ ವಿರೋಧಿಯಾಗಿ ಯುವ ಸಮಾಜವಾದಿ ಚಳುವಳಿ ಪ್ರಾರಂಭವಾಗಿತ್ತು. ಡಿ ಆರ್. ಸಿದ್ದಲಿಂಗಯ್ಯ ಮೊದಲಾದವರು ಇಲ್ಲಿದ್ದರು. ಅವರು ತೀರ ಅಸಾಂಪ್ರದಾಯಿಕ ಚಳುವಳಿಗಾರರಾಗಿದ್ದರು. ಒಂದು ಉದಾಹರಣೆ ನೀಡಬಹುದಾದರೆ, ಇಂದಿರಾಗಾಂಧಿ ವಿಮಾನ ನಿಲ್ದಾಣಕ್ಕೆ ಆಗಮಿಸಿದರೆ ಭದ್ರತಾ ವ್ಯವಸ್ಥೆಯನ್ನು ಭೇಧಿಸಿ ಅವರ ವಿರುದ್ಧ ಘೋಷಣೆ ಕೂಗುವುದು, ವಿಧಾನಸೌಧದ ಬಾಲ್ಕನಿಯಿಂದ ಸರ್ಕಾರಿ ವಿರೋಧಿ ಕರಪತ್ರ ಎಸೆಯುವುದು, ಪಂಚತಾರಾ ಹೋಟೇಲಿನಲ್ಲಿ ತಿಂಡಿ ತಿಂದು ಉಡುಪಿ ಹೋಟೆಲ್ ದರದ ಬಿಲ್ ಕೊಡುವುದು ಇತ್ಯಾದಿ. ಇಡೀ ವ್ಯವಸ್ಥೆಯನ್ನು ಗಾಬರಿಗೊಳಿಸುವ ಅವರ ವಿನೂತನ ಪ್ರಯತ್ನಗಳನ್ನು ನಾನು ಬಹಳ ಕುತೂಹಲದಿಂದ ಗಮನಿಸುತ್ತಿದ್ದೆ.

ನವ್ಯವು ಸ್ಥಾಪಿತ ಸಾಹಿತ್ಯ ಹಿತಾಸಕ್ತಿಗಳ ವಿರುದ್ಧ ಇದೇ ಕೆಲಸವನ್ನು ಭಿನ್ನವಾಗಿ ಮಾಡುತ್ತಿದೆಯಲ್ಲವೇ ಎಂದೆನಿಸುತ್ತಿತ್ತು. ಆದರೆ ೧೯೭೩ರ-ಬರಹಗಾರರ ಕಲಾವಿದರ ಒಕ್ಕೂಟ ನಡೆಸಿದ ಚಾರಿತ್ರಿಕ ಸಮ್ಮೇಳನದಲ್ಲಿ ಕುವೆಂಪುರವರ ಮಾತು- 'ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ' ಭಾಷಣ ನನ್ನನ್ನು ಅಲುಗಾಡಿಸಿತ್ತು. ಇದೇ ಸಮ್ಮೇಳನದಲ್ಲಿ

ತೇಜಸ್ವಿ ಮಾಡಿದ್ದ ಕರ್ನಾಟಕ ಸಂಸ್ಕೃತಿ ಚಿಂತನೆ ಕುರಿತ ಭಾಷಣ ನನ್ನನ್ನು ಸಾಹಿತ್ಯ ಮತ್ತು ಸಮಾಜದ ನಡುವಣ ಸಂಬಂಧದ ಸಂಕೀರ್ಣತೆ ಕುರಿತಂತೆ ಆಳದ ಮರುಚಿಂತನೆಗೆ ತೊಡಗಿಸಿತು. ಮೆಚ್ಚುಗೆಯ ನಡುವೆಯೂ ಈ ನವ್ಯ ಸಾಹಿತ್ಯ ಕುರಿತ ವಿವರಣೆ ಇಲ್ಲದ ಅತೃಪ್ತಿಗೆ ಈಗ ವಿವರಣೆ ಸಿಕ್ಕಿತ್ತು. ಸಾಹಿತ್ಯವನ್ನು ಕುರಿತಾದ ನನ್ನ ನಂಬಿಕೆಗಳು ಅದರಲ್ಲೂ ನವ್ಯ ಸಾಹಿತ್ಯದ ಕುರಿತಾಗಿ ಅನುಮಾನಗಳು ಪ್ರಾರಂಭವಾದವು. ನಾನು ಬದುಕು ಮತ್ತು ಸಾಹಿತ್ಯವನ್ನು ಗ್ರಹಿಸುವ ರೀತಿಯಲ್ಲಿ ಬದಲಾವಣೆ ಆಯಿತು. ಸರಿಯಾಗಿ ಹೇಳುವುದಾದರೆ ನಾನು ತೇಜಸ್ವಿ ಅವರ ಅಭಿಮಾನಿಯಾದೆ. ಅವರು ಹೇಳಿದಂತೆ ಕನ್ನಡ ಸಾಹಿತ್ಯ ಚರಿತ್ರೆ ಎಂದರೆ ವೈದಿಕ ಸಾಹಿತ್ಯ ಮೀಮಾಂಸೆಗೆ ಪರ್ಯಾಯ ಒದಗಿಸಿದ ಮತ್ತು ಶೂದ್ರಲೋಕದ ಮೂಕ ಅನುಭವಗಳ ಅಭಿವ್ಯಕ್ತಿಯ ಚರಿತ್ರೆಯೇ ಆಗಿದೆ ಎಂಬ ಅವರ ವ್ಯಾಖ್ಯಾನ ನನ್ನನ್ನು ತೀರಾ ಪ್ರಭಾವಿಸಿತು. ಕುವೆಂಪು ಸಾಹಿತ್ಯ ಕೂಡ ನಾನು ಸಾಹಿತ್ಯವನ್ನು ನೋಡುವ ಕ್ರಮವನ್ನು ನಿರ್ಣಾಯಕವಾಗಿ ಬದಲಾಯಿಸಿತು.

ಆಗ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಓದಿ ರೋಮಾಂಚಿತನಾಗಿದ್ದೆ. ಆದರೆ ನವ್ಯ ವಿಮರ್ಶೆ ಈ ಕಾದಂಬರಿಯನ್ನು ಸರಿಯಾಗಿ ಗ್ರಹಿಸಲಾಗಿರಲಿಲ್ಲ. ಲಂಕೇಶ್ ಒಂದು ಕಡೆ ಮಾತ್ರ ಕುವೆಂಪು ಕಾದಂಬರಿಯನ್ನು ಕುರಿತಾಗಿ ಸಂಕ್ಷಿಪ್ತವಾಗಿ ಬರೆದಿದ್ದಾರೆ. ಅನಂತಮೂರ್ತಿಯವರಂತೂ 'ಅದಕ್ಕೆ ಕೇಂದ್ರವಿಲ್ಲ, ಅದು ವಿವರಗಳಲ್ಲಿ ಸೊಕ್ಕಿದೆ' ಎಂದು ಹೇಳಿದಾಗ ನನಗೆ ನವ್ಯ ಸಾಹಿತ್ಯ ಕುರಿತ ಗ್ರಹಿಕೆಯ ಬಗ್ಗೆ ತೀವ್ರ ಅತೃಪ್ತಿ ಕಾಡಲು ಪ್ರಾರಂಭಿಸಿತು. ಸಾಹಿತ್ಯ ಅಂದರೆ ಅದು ನಮ್ಮ ಅಸ್ತಿತ್ವವನ್ನು ಪೂರ್ತಿ ತೊಡಗಿಸಿಕೊಂಡು ನಮ್ಮ ನೆರೆಹೊರೆಯವರನ್ನೂ ಒಳಗೊಳ್ಳಬೇಕು ಎಂದು ಎನಿಸತೊಡಗಿದ್ದರಿಂದ ನಾನು ನವ್ಯದ ಪ್ರಭಾವದಿಂದ ನಿರ್ಣಾಯಕವಾಗಿ ದೂರ ಸರಿದೆ. ಆದರೆ ನಮ್ಮ ಇಂದಿನ ಸಾಹಿತ್ಯ ಪ್ರಜ್ಞೆಗೆ ಅದರ ಕೊಡುಗೆಯನ್ನು ನಿರಾಕರಿಸಲಾಗುವುದಿಲ್ಲ. ಬಂಡಾಯದ ಹಾವಳಿ ಶುರುವಾದ ಮೇಲಂತೂ ನೆಮ್ಮದಿಗಾಗಿ ಬಹಳ ಸರ್ತಿ ಅಲ್ಲಿಗೇ ಹೋಗಬೇಕಿದೆ. ಏಕೆಂದರೆ ತೇಜಸ್ವಿ ಸಂಪ್ರದಾಯ ಕೇವಲ ಬ್ರಾಹ್ಮಣ ವಿರೋಧವಾಗಿ ಕುಬ್ಜಗೊಂಡಿದ್ದರಿಂದಾಗಿ ಒಂದು ಸಾಹಿತ್ಯ ಮಾರ್ಗವಾಗಿ ಬೆಳೆಯಲು ಸಾಧ್ಯವಾಗಲಿಲ್ಲ. ಆದರೆ ಅದರ ಬಹುಮುಖಿ ಪ್ರಭಾವವನ್ನು ಅಲ್ಲಗಳೆಯಲಾಗುವುದಿಲ್ಲ.

ಪ್ರಶ್ನೆ: ಸರ್, ನವ್ಯ ತನ್ನ ಮಿತಿಯ ನಡುವೆಯೂ ಮತ್ತು ಸಾಕಷ್ಟು ಭಿನ್ನಾಭಿಪ್ರಾಯದ ನಡುವೆಯೂ ಸಾಹಿತ್ಯದ ಕುರಿತಾದ ಶ್ರದ್ಧೆ ಮತ್ತು ಅನುಭವದ ತೀವ್ರತೆಯನ್ನು ಸೃಷ್ಟಿಸಿತು ಎಂಬ ವಾದವಿದೆ. ಇದನ್ನು ನೀವು ಒಪ್ಪುವಿರಾ?

ನಾಗಭೂಷಣ: ಈಗಾಗಲೇ ಹೇಳಿರುವಂತೆ, ಖಂಡಿತ ಇದನ್ನು ನಾನು ಒಪ್ಪುವೆ. ಈಗಲೂ ಕೂಡ ನನ್ನ ಸಾಹಿತ್ಯದ ಕುರಿತಾದ ಆಸಕ್ತಿ ಪ್ರೀತಿ ನವ್ಯದಿಂದಲೇ ಬಂದದ್ದು ಎಂದು ಹೇಳಲು ನನಗೇನೂ ಸಂಕೋಚವಿಲ್ಲ. ನವ್ಯದ ತೀವ್ರತೆ ನನ್ನನ್ನು ಸೆಳೆದಿದೆ. ಅದು ಸಾಹಿತ್ಯವನ್ನು ಸಾವು-ಬದುಕಿನ ಪ್ರಶ್ನೆಯಂತೆ ನೋಡಿದೆ. ಸಾಹಿತ್ಯ ಎಂದರೆ

ಅದು ನಿಮ್ಮ ವಿವೇಕದ ಉತ್ತುಂಗದಲ್ಲಿ ಸಂಭವಿಸುವ ಒಂದು ವಿಶೇಷ ವಿದ್ಯಮಾನ. ಆದರೆ ಅದರ ಮಿತಿಗಳು ಇದ್ದವಲ್ಲ, ಮುಖ್ಯವಾಗಿ ಅದರ ಕೇಂದ್ರ ಪ್ರಜ್ಞೆ ಎಂಬುದರ ವ್ಯಸನ, ಐರೋಪ್ಯ ಸಾಹಿತ್ಯಾಭ್ಯಾಸಿಗಳಿಗೆ ಮಾತ್ರ ತಾಕಬಲ್ಲ ಅದರ ವಿಶಿಷ್ಟ ಸ್ವೋಪಜ್ಞತೆ ಇತ್ಯಾದಿ, ಅವು ನನ್ನನ್ನು ಬಾಧಿಸಿವೆ. ನವ್ಯ ಕಲಿತವರ ಸಾಹಿತ್ಯವಾಯಿತು. ನಿಮಗೆ ಸರಿಯಾದ ಸಿದ್ಧತೆ ಇಲ್ಲದಿದ್ದರೆ ಅದನ್ನು ಎಂಜಾಯ್ ಮಾಡಲು ಸಾಧ್ಯವೇ ಇಲ್ಲ. ಆದರೆ ಇವತ್ತಿಗೂ ನವ್ಯದವರ ಭಾಷೆಯ ಕುರಿತಾದ ಸೂಕ್ಷ್ಮತೆ ಮತ್ತು ಅದನ್ನು ಸಾವಯವವಾಗಿ ಬಳಸುವುದು ನನ್ನನ್ನು ಆಕರ್ಷಿಸಿದೆ. ಅದರ ಶುದ್ಧ ಸಾಹಿತ್ಯ ಸಿದ್ಧಿ ಗಮನಾರ್ಹವಾದದ್ದು. ಅಡಿಗರು ಆ ಕಾಲದಲ್ಲಿ ಸಾವಯವ ಸಮಗ್ರೀಕರಣದ ಬಗ್ಗೆ ಮಾತನಾಡುತ್ತಿದ್ದರು. ಅದು ಸರಿ. ಆದರೆ ಅವರ ನುಡಿಗಟ್ಟು ನಮಗೆ ಪರಕೀಯವಾಗಿತ್ತು. ಆದರೆ ಬರಹಗಾರರ ಒಕ್ಕೂಟ ಸಾಹಿತ್ಯವನ್ನು ನಾಯಕ (ನಾಯಕಿ ಇಲ್ಲವೇ ಇಲ್ಲ!) ಕೇಂದ್ರೀಯತೆಯಿಂದ ಸಾಮಾಜಿಕ ವಿಕೇಂದ್ರೀಯತೆಯೆಡೆಗೆ ತೆಗೆದುಕೊಂಡು ಹೋಯಿತು.

ಮತ್ತೊಂದು ವಿಷಯ ಎಂದರೆ ನವ್ಯ ಸಾಹಿತ್ಯದ ಹರಿಕಾರರೆಂದರೆ ಇಂಗ್ಲೀಷ್ ಮೇಷ್ಟ್ರುಗಳು. ಅವರೆಲ್ಲಾ ಹಳ್ಳಿಯಿಂದ ನಗರದ ಕಡೆಗೆ ಬಂದವರು. ಆದರೆ... ಒಂದು ಉದಾಹರಣೆ ನೋಡೋಣ. ಲಂಕೇಶರ 'ಕೆರೆಯ ನೀರನು ಕೆರೆಗೆ ಚೆಲ್ಲಿ' ಅಥವಾ 'ನಾನಲ್ಲ' ಓದಿದರೆ ಅಲ್ಲಿ ಹಳ್ಳಿಯ ಸುಳಿವೇ ಇಲ್ಲ! ಒಕ್ಕೂಟ ಸಮ್ಮೇಳನದ ನಂತರದ 'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ'ಯ ಮೂಲಕ ಅವರ ಹಳ್ಳಿಯ ಅನುಭವ ದಾಖಲಾಗತೊಡಗಿತು. ಅಂದರೆ ಅವರ ನವ್ಯ ಕೃತಿಗಳಲ್ಲಿ ಅವರ ಬೇರು ಮಟ್ಟದ ಅನುಭವಗಳ ದಾಖಲೆಯೇ ಗೈರುಹಾಜರಾಗಿತ್ತು. ಅನಂತಮೂರ್ತಿ ಅಥವಾ ಚಿತ್ತಾಲರ ಸಾಹಿತ್ಯ ಈ ದೃಷ್ಟಿಯಿಂದ ಸ್ವಲ್ಪ ಭಿನ್ನ. ಅವರ ಕಥಾಲೋಕದಲ್ಲಿ ಅವರ ಹಳ್ಳಿ ಇದೆಯಾದರೂ ಅದು ಕಚ್ಚಾ ವಸ್ತುವಾಗಿ ಮಾತ್ರ. ಆ ಲೋಕ ನಮಗೆ ಅಂತಿಮವಾಗಿ ತಲುಪುವುದು ನಗರದ ಆಧುನಿಕ ಪ್ರಜ್ಞೆಯ ತಂತ್ರಗಳ ಮೂಲಕವೇ. ಒಂದು ರೀತಿಯಲ್ಲಿ ಹಳ್ಳಿಗಳ ಸಾಹಿತ್ಯಿಕ ವಸಹಾತೀಕರಣ! ಅಡಿಗರ ಕಾವ್ಯದಲ್ಲಿ, ಕೊನೆಯ ಘಟ್ಟದ 'ಚಿಂತಾಮಣಿಯಲ್ಲಿ ಕಂಡ ಮುಖ'ದಂತಹ ಕೆಲ ಅನುಭಾವಿಕ ನೆಲೆಯ ಪದ್ಯಗಳ ಹೊರತಾಗಿ ಅವರಲ್ಲಿ ಬೆರಗುಗೊಳಿಸುವ craftsmanship ಕಾಣುತ್ತದೆಯೇ ಹೊರತು ಅವರ ದೃಷ್ಟಿಕೋನ ನನ್ನದಲ್ಲ ಎಂದೆನಿಸತೊಡಗಿತ್ತು. ಹಾಗೆ ನೋಡಿದರೆ ಅವರ ನವ್ಯವೆಂದು ಗುರುತಿಸಲಾಗುವ ಬಹುತೇಕ ಪದ್ಯಗಳು ಪೊಲಿಟಿಕಲ್ ಆದವುಗಳು. ದುರಂತವೆಂದರೆ ಆ ಪಾಲಿಟಿಕ್ಸ್ ಅವರನ್ನು 'ಮತ್ತೆ ಮೊಳಗಲಿ ಪಾಂಚಜನ್ಯ', 'ನಾನು ಹಿಂದೂ, ನಾನು ಬ್ರಾಹ್ಮಣ'ದಂತಹ ಪದ್ಯಗಳನ್ನು ಬರೆಯುವಂತಹ ಹಳ್ಳಕ್ಕೆ ತಳ್ಳಿತು. ಹಾಗೆ ನೋಡಿದರೆ ನನಗೆ ಅವರ ಆರಂಭದ 'ಅಳುವ ಕಡಲೊಳು', 'ಯಾವ ಮೋಹನ ಮುರುಳಿ ಕರೆಯಿತು' ತರಹದ ಪದ್ಯಗಳೇ ಇಷ್ಟ. ಅವೇ ಹೆಚ್ಚು ಪ್ರಾಮಾಣಿಕ ಎನ್ನಿಸುತ್ತವೆ. ಅವರಿಗೆ ನೆಹರೂ ಬಗ್ಗೆ ಅಸಮಾಧಾನ ಇತ್ತು. ರಾಜಕೀಯವಾಗಿ ಅವರು 'ನೆಹರೂ ನಂತರ ಯಾರು?' ಎಂಬ; 'ಸೆಕ್ಯೂಲರಿಸಂ'

ಸೇರಿದಂತೆ ನೆಹರೂ ಮಾದರಿಯ ಆಧುನಿಕತೆಯನ್ನು ಸಂಶಯಿಸುವ ಪ್ರಶ್ನೆಯನ್ನು ಮುಂದಿಟ್ಟಿದ್ದರು. ನೆಹರು ಸೃಷ್ಟಿಸಿದ ಆಧುನಿಕತೆಯ ಸುಖಗಳನ್ನು ಅನುಭವಿಸುತ್ತಲೇ ಈ ನವ್ಯದವರು ಅವರ ರಾಜಕೀಯವನ್ನು ಪ್ರಶ್ನಿಸತೊಡಗಿದ್ದರು!! ಇದು ಬೌದ್ಧಿಕ ಲೋಕದ ಆತ್ಮವಂಚನೆಯೇ. ನವ್ಯದ ತೀವ್ರತೆ ಮತ್ತು ಒಂದು ಮಟ್ಟದ ರೋಚಕತೆಗೂ –ಎರಡು ಲೋಕಗಳ ನಡುವಣ ತುಯ್ದಾಟ–ಇಲ್ಲಿ ಕಾರಣವಿದ್ದಂತಿದೆ!

ಪ್ರಶ್ನೆ : ಸರ್, ನೀವು ಕನ್ನಡದ ಬಹುಮುಖ್ಯ ಲೇಖಕರ ಬಗ್ಗೆ ಸಾಕಷ್ಟು ಬರೆದಿದ್ದೀರಿ. ಕುವೆಂಪು, ಕಾರಂತ, ಮಾಸ್ತಿ, ತೇಜಸ್ವಿ, ಅನಂತಮೂರ್ತಿ, ಲಂಕೇಶ... ಹೀಗೆ. ಇವರೆಲ್ಲರೂ ಇಪ್ಪತ್ತನೇ ಶತಮಾನದ ಆಧುನಿಕತೆಯ ಜೊತೆಗೆ ಗುದ್ದಾಡಿದವರು. ಆದರೆ ಸದ್ಯದ ಆಧುನಿಕೋತ್ತರ ಕಾಲಘಟ್ಟದಲ್ಲಿ ಇವರೆಲ್ಲರನ್ನು ಪುನರ್ ಅನ್ವೇಷಣೆ ಅಥವಾ ಪುನರ್ ಮಾಪನ ಮಾಡುವುದು ಹೇಗೆ?

ನಾಗಭೂಷಣ: ನೋಡಿ, ಒಂದು ದೃಷ್ಟಿಕೋನ ಎಂಬುದರಲ್ಲಿ ಎರಡು ಆಯಾಮ ಇರುತ್ತದೆ. ಅವು ಎಂದರೆ ಸದ್ಯ ಮತ್ತು ಶಾಶ್ವತ. ಒಳ್ಳೆಯ ಸಾಹಿತ್ಯ ಎರಡನ್ನೂ ಒಳಗೊಂಡಿರುವಂತದ್ದು. ಯಾವುದು ನಿತ್ಯಸ್ಥವೂ ಹಾಗೂ ಶಾಶ್ವತವೂ ಆಗಿರುತ್ತದೆಯೋ ಅದು ಬಹುಕಾಲ ಉಳಿಯುತ್ತದೆ. ಈ ದೃಷ್ಟಿಯಿಂದ ನೋಡಿದರೆ ನವ್ಯ ಸಾಹಿತ್ಯದ ಸಾಕಷ್ಟು ಭಾಗ ಕಾಲಪ್ರವಾಹದಲ್ಲಿ ಕೊಚ್ಚಿ ಹೋಗುತ್ತದೆ. ಉದಾಹರಣೆಗೆ ಚಂದ್ರಶೇಖರ ಪಾಟೀಲರ ಅಥವಾ ಲಂಕೇಶರ ಅಸಂಗತ ನಾಟಕಗಳು ಇವತ್ತು ಎಲ್ಲಿವೆ? ಅವತ್ತಿನ ಅವುಗಳ ಮೆರೆದಾಟ ರೋಚಕತೆ ಇವಾಗ ಹೊರಟುಹೋಗಿದೆ. ನೋಡಿ, ಆಧುನಿಕತೆ ಎಂಬುದು ನಾವು ಅನುಭವಿಸುವ ಒಂದು ಸಂವೇದನೆ. ಅದು ತಂದಿಟ್ಟ ಸಣ್ಣ ಸಣ್ಣ ಸುಖಗಳ ರೋಚಕತೆ, ಸೃಷ್ಟಿಸಿದ ಮುಜುಗರ ಇವೆಲ್ಲವನ್ನು ಆ ಕಾಲದ ಕೃತಿಗಳು ಅನುಸಂಧಾನ ಮಾಡಿವೆ. ಆದರೆ ಆಧುನಿಕೋತ್ತರವಾದ ಎಂಬುದು ಏನಿದೆ ಅದು ನಿಜಕ್ಕಿಂತ ಹೆಚ್ಚಾಗಿ ಒಂದು ಬೌದ್ಧಿಕ 'ರಚನೆ'.

ಪ್ರಶ್ನೆ: ಸರ್, ಆಧುನಿಕೋತ್ತರವಾದ ಅಲ್ಲ. ಆಧುನಿಕೋತ್ತರ ಸ್ಥಿತಿ ಎಂದು ತಿಳಿದುಕೊಳ್ಳಿ. ಇವತ್ತಿನ ಹೊಸಬಗೆಯ ಸ್ಥಿತಿಯ ಹಿನ್ನೆಲೆಯಲ್ಲಿಯೇ ಮಾತನಾಡಿ. ನಮ್ಮ ದೊಡ್ಡ ಲೇಖಕರನ್ನು ನಮ್ಮವರಾಗಿ ಮಾಡಿಕೊಳ್ಳುವ ಬಗೆ ಹೇಗೆ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತಿದೆ.

ನಾಗಭೂಷಣ: ತೀರಾ ಇತ್ತೀಚಿನ ಬೆಳವಣಿಗೆ ಇದು. ನೋಡಿ, ನಮ್ಮ ದೊಡ್ಡ ಲೇಖಕರು ಮಾಸ್ತಿ, ಬೇಂದ್ರೆ, ಕುವೆಂಪು, ಡಿ. ವಿ. ಗುಂಡಪ್ಪ ಇವರೆಲ್ಲಾ ಎಲ್ಲಾ ಕಾಲಕ್ಕೂ ಸಲ್ಲುವವರೆ. ಇವರ ಸಾಹಿತ್ಯದ ಕೆಲವು ಅಂಶಗಳು ಇರ್ರೆಲೆವಂಟ್ ಎನ್ನಿಸಬಹುದು. ದೇವನೂರರ 'ದ್ಯಾವನೂರು' ಕಥೆಗಳೇ ಇಂದು 'ಪ್ರಾಚೀನ' ಅನ್ನಿಸತೊಡಗಿವೆ–ಇವೊತ್ತಿಗೆ ಕನೆಕ್ಟ್ ಆಗಲು ಹೆಣಗುತ್ತಿವೆ. 'ಕುಸುಮಬಾಲೆ' ಸೇರಿದಂತೆ ಅವುಗಳ ಶಿಲ್ಪ ಮಾತ್ರ ಉಳಿಯುವಂತಾಗಿದೆ–ಹೊಯ್ಸಳರ ಕಾಲದ ಶಿಲ್ಪದಂತೆ! ಲಂಕೇಶರ 'ನಾನಲ್ಲ' ಕಥೆಗಳ ಥರದವು ಡಿವಿಜಿಯವರ 'ಜ್ಞಾಪಕ ಚಿತ್ರಶಾಲೆ'ಯಂತಾಗಿವೆ. ನಿಜ, ಅವುಗಳಿಗೆ

ಪ್ರಶ್ನೆ: ಈ ಮಾತಿನ ಮುಂದುವರಿಕೆಯಾಗಿ ಕೇಳುವುದಾದರೆ... ಸ್ವಾತಂತ್ರ್ಯೋತ್ತರ ಭಾರತದ ಕಾಲಘಟ್ಟದಲ್ಲಿ ಸಾಹಿತ್ಯ ಎಂಬ ಸಂಸ್ಥೆಗೆ ಇದ್ದ 'Privilege' ಕುಂಠಿತಗೊಂಡಿದೆ. ನಮ್ಮ ಸಂಸ್ಕೃತಿಯನ್ನು ಕೇವಲ ಸಾಹಿತ್ಯದ ಮೂಲಕ ಮಾತ್ರ ನೋಡುವ ಕ್ರಮ ಸ್ವಲ್ಪ ಹಿಂದೆ ಸರಿದಿದೆ. ಈ ಹಿನ್ನೆಲೆಯಲ್ಲಿ ಹೊಸಕಾಲದ ಲೇಖಕರುಗಳ ಕಾಳಜಿ, ಒಲವುಗಳ ಅನುಸಂಧಾನವನ್ನು ಹೇಗೆ ಅರ್ಥೈಸುತ್ತೀರಿ? ಒಬ್ಬ ವಿಮರ್ಶಕರಾಗಿ ನಿಮ್ಮ ಒಲವಿನ ಹೊಸ ಲೇಖಕರು ಯಾರು?

ನಾಗಭೂಷಣ: ಹೌದಲ್ಲವೆ. ಬದುಕನ್ನು ಸಾಹಿತ್ಯದ ಮೂಲಕ ನೋಡುವ ಕ್ರಮ ಬದಲಾಗಿ ಇರಬಹುದು. ಇದ್ದರೆ ಒಳ್ಳೆಯದು. ಕೇವಲ ಬೌದ್ಧಿಕ ಚಿಂತನೆ ಮಾತ್ರವಲ್ಲದೆ ನಾನು ಸಾಹಿತ್ಯ ಓದಲಿಕ್ಕೆ ಆರಂಭ ಮಾಡಿದ ಕಾಲದಲ್ಲಿ ನನ್ನನ್ನು ಕಾಡಿದ ಅನೇಕ ಲೇಖಕರಿದ್ದರು. ನನ್ನನ್ನು ಕಾಡಿದ ಕೆಲವರು ಲೇಖಕ ಎಂದರೆ ಹೆಚ್.ಎಸ್. ಶಿವಪ್ರಕಾಶ... ಒಂದು ಚಿಕ್ಕ ಪ್ರಮಾಣದಲ್ಲಿ ಎಸ್. ದಿವಾಕರ್... ದಿವಾಕರ್ ಕತೆಗಳಿಗೆ ಲೋಕಸ್ಥಿತಿಯ ಮತ್ತು ವ್ಯಕ್ತಿ ಪ್ರಜ್ಞೆಯಿಂದಾಚೆ ಒಳನೋಟಗಳನ್ನು ಕಾಣ್ಬಹುದು ಇರುವುದು ಬೇರೆ ವಿಚಾರ. ಆದರೆ ಸಾಹಿತ್ಯವನ್ನು ಪ್ರೀತಿಸುವ ವ್ಯಕ್ತಿಯಾಗಿ ನನ್ನನ್ನು ಕಾಡಿದ ಮತ್ತು ಬದುಕಿನ ವಿಭಾಗಗಳ ಕ್ಷಣಗಳಲ್ಲಿ ಒಬ್ಬ ಸಾಹಿತಿ ನೆನಪಾಗುತ್ತಾರೆ... ಅಂತಹ ಲೇಖಕ ಇತ್ತೀಚೆಗೆ ಸಿಕ್ಕಿಲ್ಲ... ಬಹುಶಃ ಶ್ರೀನಿವಾಸ ವೈದ್ಯರ 'ಹಳ್ಳ ಬಂತು ಹಳ್ಳ' ನನ್ನನ್ನು ಕಾಡಿದ ಕೃತಿಯಾಗಿ ಕಾಣುತ್ತದೆ. ಅನೇಕ ಕಾರಣಗಳಿಂದ 'ಬಹುಮುಖಿ' ಸಂಸ್ಕೃತಿಯನ್ನು ಹುಡುಕುತ್ತದೆ. ಕತೆ ಕತೆಗೆ ಮಾತ್ರವಲ್ಲದ ಸಾಮಾಜಿಕತೆಯ ವ್ಯಕ್ತಿತ್ವದಂತೆ ಕತೆಗಳೊಂದು. ಅದರ 'ನಮ್ಮ'ದ ಸಂಸ್ಕೃತಿ ಚಿತ್ರವು ಲೇಖಕ ಅನ್ನು ಅನುಭವಿಸಿಕೊಳ್ಳುತ್ತಿಲ್ಲ ಎಂಬುದನ್ನು ಗಮನಿಸುತ್ತ ಹೋದೆ ಹುಡುಕುತ್ತದೆ.

ಅಮರೇಶ ನುಗಡೋಣಿ, ವೈದೇಹಿ, ಕುಂವೀರಂಥವರು ಮತ್ತು ಇಂಥದೇ ಕಾಲಘಟ್ಟ ....ನಾನು ಓದುತ್ತಿದ್ದ ಬಹಳ ಒಳ್ಳೆಯ-ಕಥನ ಕಲೆಯ ಬಿಡುವಿನಲ್ಲಿ ರಾಜೆ ಮಾಡಿಕೊಳ್ಳದ- ಕಥೆಗಾರರು ಅವರು. ಅವರಲ್ಲಿ ನುಗಡೋಣಿ ಇತ್ತೀಚಿನ 'ಗ್ರಾಮಾಯಣ'ದ ಸಣ್ಣ ಸಾಧನೆಗಳ ಮಧ್ಯೆ ಸಿಕ್ಕಿಹಾಕಿಕೊಳ್ಳುವ ಅಪಾಯದಲ್ಲಿದ್ದಂತಿದೆ. ಶ್ರೀರಾಮ್ ಕಥನ ಕಲೆಯ ಸಹಜ ಎಂದರೆ ಅದರ ರಚನೆಯ ಪ್ರಜ್ಞಾಪೂರ್ವಕತೆ ಅಲ್ಲಿ ಅವರ ಓದಿನ ವಿಸ್ತಾರಕ್ಕೆ ಧಾರ ತರುವುದು. ಗುರುಪ್ರಸಾದ್ ಕಾಗಿನೆಲೆ ಅವರ ಒಂದೆರಡು ಕತೆಗಳನ್ನಷ್ಟೆ ನಾನು ಓದಿದ್ದೇನೆ. ಹೊಸ ಸತ್ವದ ಕಥೆಗಾರ ಅನ್ನಿಸುತ್ತೆ. ಆದರೆ ಒಂದೆರಡು ಕತೆಗಳ ಆಧಾರದ ಮೇಲೆ ಇಲ್ಲಿ ಹೇಳಬಹುದಾದ್ದು ಅಷ್ಟೇ? ಈಗ ಬೇಕಾದಷ್ಟು ಜನ ಹೊಸ ಕತೆಗಾರರು ಬರುತ್ತಿದ್ದಾರೆ. ಹೊಸ ಸ್ವರಗಳ ಅನುಭವಗಳನ್ನು ಬರೆಯುತ್ತಿದ್ದಾರೆ. ಆದರೆ ಅದನ್ನು ಕಥೆ ಮಾಡುವ ಹೊಸತನ ಕಾಣುವುದು ಕಡಿಮೆ. ಇದಕ್ಕೆ ಕೇವಲ ಪ್ರಯತ್ನ ಸಾಲದಿದ್ದು, ಅದು ಕಲಾತ್ಮಕ ಮಟ್ಟವನ್ನು ಮುಟ್ಟ ಬೇಕಿಲ್ಲ. ಕವಿಗಳಂತೂ ಕಡಿಮೆಯಾಗಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಒಂದೆ ಒಂದು ಒಳ್ಳೆಯ striking ಎನ್ನುವಂಥ ಕವಿತೆ ಓದಿದ

ರಸಿಕನಂತೆ ಅವರು. ಈ ಅರ್ಥದಲ್ಲಿ ಅವರದ್ದು ಒಂದು ರೀತಿಯ ಕಾಮನ್‌ಸೆನ್ಸ್ ವಿಮರ್ಶೆ. ತೇಜಸ್ವಿ ಹೇಳುತ್ತಿದ್ರಲ್ಲ, ವಿಮರ್ಶಕನ ಮೂಲ ಜವಾಬ್ದಾರಿ ಎಂದರೆ ಒಂದು ಪುಸ್ತಕ ಅದರ ಮೇಲಿನ ಬೆಲೆ ಕೊಟ್ಟು ಓದಲು ಅರ್ಹವೇ ಅಲ್ಲವೇ ಎಂದು ಹೇಳುವುದು. ಈ ವಿಮರ್ಶಾ ಪರಿಕರಗಳೆಲ್ಲಾ ಸಾಹಿತ್ಯ ಕೃತಿಯನ್ನು ವಿಮರ್ಶಿಸಲು ಸ್ವಲ್ಪ ಅಲ್ಲಲ್ಲಿ ಸಹಾಯ ಮಾಡಬಹುದೇನೋ. ಆದರೆ ಅವು ಸಮಗ್ರವಾಗಿ ಗ್ರಹಿಸಲು ಅಡ್ಡಿಯನ್ನು ಉಂಟುಮಾಡುತ್ತವೆ. ಅನಲಿಟಿಕಲ್ ವಿಮರ್ಶೆ ಎಂಬುದು ಸಾಹಿತ್ಯ ಕೃತಿಗಳಿಗೆ ಅನ್ಯಾಯವನ್ನು ಮಾಡುತ್ತವೆ. ವಿಮರ್ಶೆ ಕೇವಲ ಪಾಂಡಿತ್ಯವಾದರೆ ಉಪಯೋಗವಿಲ್ಲ....

ಪ್ರಶ್ನೆ: ಆದರೆ ಡಿ ಆರ್ ನಾಗರಾಜ ತರದವರು ಪೂರ್ವದ ಜ್ಞಾನಶಾಖೆಗಳ ಬಗ್ಗೆ ಒಲವಿದ್ದರೂ ಪಶ್ಚಿಮದ ಚಿಂತಕರುಗಳನ್ನು ಕನ್ನಡಕ್ಕೆ ತಂದರು. ಪಶ್ಚಿಮವನ್ನು ಎಷ್ಟೇ ಪ್ರಶ್ನೆ ಮಾಡಿದರೂ...ಆ ಚಿಂತಕರುಗಳನ್ನು ಮತ್ತು ಅವರ ಮೀಮಾಂಸೆಯನ್ನು ಒಳಗೊಳ್ಳುವ ವಿಮರ್ಶಾ ಕ್ರಮ ಕೊಟ್ಟರಲ್ಲವೇ?

ನಾಗಭೂಷಣ: ನಾನು ಡಿ ಆರ್ ಅವರ ಹಳೆಗಾಲದ ಸ್ನೇಹಿತನು ಹೌದು. ಆದರೆ ಡಿ.ಆರ್.ರದ್ದು ತೀರಾ ರಾಜಕೀಯ ನಿಲುವಿನದು. ಸಾಹಿತ್ಯಕ್ಕಿಂತ ರಾಜಕೀಯ ಒಲವು ಇದ್ದವನು ಆತ..... ಶೂದ್ರ ಪತ್ರಿಕೆಯ ಹಿನ್ನೆಲೆಯ ಸಂಪಾದಕನಾಗಿ ಅದನ್ನು ಕೆಂಪು ಕಾಗದದಲ್ಲಿ ಮುದ್ರಿಸಿ ಕಮ್ಯೂನಿಸ್ಟ ಕ್ರಾಂತಿಯ ಪತ್ರಿಕೆಯನ್ನಾಗಿ ಮಾಡಿದ್ದ. ಗಾಂಧಿಯನ್ನು ಕೆಟ್ಟ ವೈಷ್ಣವ ಎಂದು ಜರಿದಿದ್ದ, ಆತ ಬಂಡಾಯ ಸಾಹಿತ್ಯ ಸಂಘಟನೆಯ ರೂವಾರಿಗಳಲ್ಲೊಬ್ಬ. ಸೆಂಟ್ರಲ್ ಕಾಲೇಜ್ ಲೈಬ್ರೆರಿ ಕಟ್ಟಡದ ಕೊಠಡಿಯೊಂದರಲ್ಲಿ ನಡೆದ ಅದರ ಆರಂಭದ ಸಭೆಗಳಿಗೆ ದೆಹಲಿಯಿಂದ ರಜೆ ಮೇಲೆ (ಆಗ ನಾನು ದೆಹಲಿಯಲ್ಲಿ ಕೆಲಸದಲ್ಲಿದ್ದೆ) ಬಂದಿದ್ದ ನಾನು (ಲಂಕೇಶರ ಜೊತೆ) ಹೋಗಿದ್ದೆ. ಆದರೆ ಅಲ್ಲಿ ಸಾಹಿತ್ಯಕ್ಕಿಂತ ಹೆಚ್ಚಾಗಿ ರಾಜಕೀಯ ಪ್ರಣಾಳಿಕೆ ಇತ್ತು..... ಅದಕ್ಕೇ ಅದು ಬಂಡಾಯ ಸಾಹಿತ್ಯ 'ಸಂಘಟನೆ'ಯಾಗಿಯೇ ಹುಟ್ಟಿ ಹಾಗೆಯೇ ಉಳಿದಿದ್ದು. ನವ್ಯದಲ್ಲೂ ರಾಜಕಾರಣ ಇತ್ತು. ಅದು ಗುಂಪುಗಾರಿಕೆಯ ರಾಜಕಾರಣ. ಹೆಚ್ಚು ಸಾಂಸ್ಕೃತಿಕವಾದದ್ದು. ಆದರೆ ಅಲ್ಲಿ ಅದು ಆತನಿಗಿಂತ ನಾನು ಚೆನ್ನಾಗಿ–ಸಾಹಿತ್ಯಿಕವಾಗಿ ಶ್ರೇಷ್ಠವಾಗಿರುವುದನ್ನು–ಬರೆಯಬೇಕು ಎಂಬ ಕಾಂಪಿಟಿಷನ್ ಇತ್ತು. ಬಂಡಾಯದ ಕಾಲಘಟ್ಟದಲ್ಲಿನ ಘೋಷಣೆ, 'ಖಡ್ಗವಾಗಲಿ ಕಾವ್ಯ'ವನ್ನು ನೀಡಿದ್ದೇ ಡಿ ಆರ್. ಅಂದೇ ಡಿ ಆರ್.ಗೆ ನಾನು ಎಚ್ಚರಿಸಿದ್ದೆ, 'ಈ ಹೇಳಿಕೆಯ ಮೂಲಕ ನೀನು ಸಾಹಿತ್ಯವನ್ನು ರಾಜಕೀಯದ ಗೂಟಕ್ಕೆ ಕಟ್ಟಿದ ನಾಯಿಯನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದೀಯ' ಎಂದು. ಖಡ್ಗವಾಗಲಿ ಕಾವ್ಯ ಎಂಬ ಘೋಷಣೆ ಸಾಹಿತ್ಯಕ್ಕೆ ಅಪಚಾರ ಮಾಡುವಂಥದ್ದು. ಸಾಹಿತ್ಯ ಯುದ್ಧದ ಸಾಧನವಲ್ಲ. ಅದು ಜನರ ಸಾರ್ವತ್ರಿಕ ಪ್ರಜ್ಞೆಯನ್ನು ಹೆಚ್ಚಿಸುವ ಒಂದು ಮಾನವೀಯ ಚಟುವಟಿಕೆ. ಅದು ಬದುಕಿನ ಎಲ್ಲ ಸತ್ಯಗಳನ್ನೂ ಕಾಣಿಸಿ ಆಯ್ಕೆಯನ್ನು ಜನರಿಗೆ ಬಿಡುವ ಒಂದು ಮುಕ್ತ ಚಟುವಟಿಕೆ.

ಆದರೆ ಡಿ.ಆರ್. ಬಗೆಗಿನ ಮಾತಿಗೆ ಹೊರಳುವುದಾದರೆ ಆತ ನಿಜವಾಗಿಯೂ ಸೃಜನಶೀಲ ಪ್ರತಿಭೆಯುಳ್ಳವನಾದ್ದರಿಂದ ಬೇಗ ಬದಲಾದ. ಬಂಡಾಯಕ್ಕೆ ವಿದಾಯ ಹೇಳಿ ಸಾಹಿತ್ಯ-ಸಂಸ್ಕೃತಿಗಳ ಗಂಭೀರ ಅಧ್ಯಯನಕ್ಕೆ ತೊಡಗಿಕೊಂಡ. ಕೊನೆವರೆಗೂ ಉಡಾಫೆ ಬಿಡಲಾಗದಿದ್ದರೂ, ಭಾರತೀಯ ಸಂಸ್ಕೃತಿ ಎಂಬುದರ ಪುನರನ್ವೇಷಣೆಯಲ್ಲಿ ಆತನ ಕೊಡುಗೆ ಬಹು ದೊಡ್ಡದು. ಆದರೆ ನಾನು ಮೊದಲಿಂದಲೂ ವಾದಿಸುತ್ತಾ ಬಂದಿರುವಂತೆ ಆತನ 'ವಿಸ್ಮೃತಿ' ಮತ್ತು ಕಿರು ಸಂಪ್ರದಾಯಗಳ ಕುರಿತ ಕಥನವು ಒಕ್ಕೂಟ ಸಮ್ಮೇಳನದಲ್ಲಿ ತೇಜಸ್ವಿಯವರು ಕನ್ನಡ ಸಾಹಿತ್ಯದ ಬಗ್ಗೆ ಮಂಡಿಸಿದ್ದ ಹೊಸ ಒಳನೋಟವನ್ನು ಭಾರತೀಯ ಸಂಸ್ಕೃತಿಯ ನೆಲೆಗೆ ವಿಸ್ತರಿಸಿ ವ್ಯಾಖ್ಯಾನಿಸುವ ಪ್ರಯತ್ನವಾಗಿತ್ತು. ಜೊತೆಗೆ ಈ ಸಂಬಂಧದ ನನ್ನ ಇನ್ನೊಂದು ತಕರಾರೆಂದರೆ-ಇದನ್ನು ಹಿಂದೊಮ್ಮೆ (ಬಹುಶಃ ನಟರಾಜ ಹುಳಿಯಾರರ ಲಂಕೇಶ್ ಮತ್ತು ಡಿ.ಆರ್.ರನ್ನು ಕುರಿತ ಪುಸ್ತಕದ ವಿಮರ್ಶೆಯಲ್ಲಿ) ದಾಖಲಿಸಿದ್ದೇನೆ ಕೂಡ-ಬಹುತೇಕ ಅನಾತ್ಮವಾದಿಯಾದ- ಶ್ರಮಣಧಾರೆಯೆಂದು ಗುರುತಿಸಲಾಗುವ- ಈ ಸ್ಥಳೀಯ ಕಿರು ಸಂಪ್ರದಾಯಗಳನ್ನು ಕುರಿತ ಆತನ ಅಧ್ಯಯನ ಮತ್ತು ಪ್ರಸ್ತುತಿಯಲ್ಲಿ ಬಳಕೆಯಾಗಿರುವುದು ಅಖಿಲಭಾರತ ರಾಜಕಾರಣದ ಚೌಕಟ್ಟು ಮತ್ತು ಆತ್ಮವಾದಿ ದಾರ್ಶನಿಕ ನುಡಿಗಟ್ಟು. ನೀವು ಭಾರತೀಯ ಸಂಸ್ಕೃತಿಯಲ್ಲಿನ ಬಿರುಕು ಅಥವಾ ಅನ್ಯಾಯಗಳನ್ನು ಗಮನಿಸುವಾಗ ಆಧುನಿಕತೆಯನ್ನೂ ತಲಸ್ಪರ್ಶಿಯಾಗಿ ಮುಖಾಮುಖಿಯಾಗದಿದ್ದರೆ ಸಂಭವಿಸುವ ಲೋಪಗಳಿವು

ಪ್ರಶ್ನೆ: ದಲಿತ-ಬಂಡಾಯ-ನವ್ಯ ಎಂಬ ಕೆಟಗರಿಗಳು ಅಗತ್ಯವೇ?

ನಾಗಭೂಷಣ: ಸುಮ್ನೆ ಓದಲು ಅಥವಾ ಬರೆಯಲು ಖಂಡಿತಾ ಇಲ್ಲ. ಇದು ಬೇಕೂ ಇಲ್ಲ. ಈ ಬಗೆಯ ವಿಂಗಡಣೆಗಳು ಅವುಗಳ ಹುಟ್ಟಿನ ರಾಜಕಾರಣದ ಹಿನ್ನೆಲೆಯಿಂದ ಬಂದವು. ಬಳಕೆಗಳು ಅಕಾಡೆಮಿಕ್ ಪರಿಭಾಷೆಯವು. ಕನ್ನಡ ಸಾಹಿತ್ಯ ಲೋಕವನ್ನು ಅರಿಯಬಯಸುವವರಿಗೆ ಬಾಲಪಾಠಗಳಾಗಿ ಈ ವಿಂಗಡಣೆಗಳು ಬೇಕಾಗಬಹುದು. ದೊಡ್ಡವರಾದ ಮೇಲೂ ಬಾಯಿಗೆ ಬೆರಳಿಟ್ಟುಕೊಳ್ಳುವ ಇಂತಹ ಅಭ್ಯಾಸಗಳು ವೃತ್ತಿ ಬಡ್ತಿಗಾಗಿ ಮಾಡುವ ಪಿಎಚ್‌ಡಿ 'ಅಧ್ಯಯನ'ಗಳಿಗೆ ಬೇಕಾಗಬಹುದು.

ಪ್ರಶ್ನೆ: ನಿಮ್ಮ ಎಲ್ಲ ಲೇಖನ/ಪುಸ್ತಕ ಓದಿದ ಮೇಲೆ ಸಮಾಜವಾದಿ ಸಂಕಥನ ಕಟ್ಟಲು ಪ್ರಯತ್ನಿಸುತ್ತಿದ್ದೀರಿ. ಜಾಗತೀಕರಣೋತ್ತರ ಸಮಾಜದಲ್ಲಿ ಈ ಸಮಾಜವಾದಿ ಸಂಕಥನದ ಸ್ವರೂಪ ಏನು? ಯಾವಾಗಲಾದರೂ ನಿಮಗೆ ನೀವು ತೀರಾ ಒಬ್ಬಂಟಿ ಅನ್ನಿಸಿದೆಯಾ?

ನಾಗಭೂಷಣ: ನನ್ನಂತಹ ವಿಶ್ವವಿದ್ಯಾಲಯದ ಹೊರಗಿನವನಿಗೆ ಯಾವುದೇ ನಿರ್ದಿಷ್ಟ ರಾಜಕೀಯ ಅಥವಾ ಜಾತಿಯ ಗುಂಪಿನ ಬೆಂಬಲವಿಲ್ಲ. ಈ ಅರ್ಥದಲ್ಲಿ ನಾನು ಒಬ್ಬಂಟಿಯೇ. ನನ್ನನ್ನು ಫಾಲೋ ಮಾಡುವವರು ಕೆಲವರು ಇರಬಹುದು. ಸಾಹಿತ್ಯಕ್ಕೂ ರಾಜಕಾರಣಕ್ಕೂ ಸಂಬಂಧ ಇದೆ ಎನ್ನಿಸಿದ್ದು ನನ್ನ ಸಾಹಿತ್ಯದ ಆರಂಭದಲ್ಲೇ ಅನುಭವಕ್ಕೆ ಬಂದಿತು. ಅಡಿಗರು ಲೋಹಿಯಾರನ್ನು-'ಇತಿಹಾಸ ಚಕ್ರ'-ಅನುವಾದ

ಮಾಡಿದ್ದರು. ಸುಬ್ಬಣ್ಣ ಲೋಹಿಯಾರದ್ದೇ ಆದ 'ರಾಜಕೀಯದ ಮಧ್ಯೆ ಬಿಡುವು' ಅನುವಾದ ಮಾಡಿದ್ದರು. ಲೋಹಿಯಾ ಅವರಿಗೆ 'ಸಂಸ್ಕಾರ' ಬಹಳ ಇಷ್ಟವಾದ ಕಾದಂಬರಿ ಎಂದು ಕೇಳಿದ್ದೆ. ನನಗೆ ಲೋಹಿಯಾ ಅವರನ್ನು ಓದುತ್ತಿದ್ದಂತೆ ಅವರದ್ದು ಭಿನ್ನವಾದ ರಾಜಕಾರಣ ಎನ್ನಿಸತೊಡಗಿತ್ತು. ೧೯೭೫ರಲ್ಲಿ ನಾನು ವೃತ್ತಿ ಸಂಬಂಧವಾಗಿ ದೆಹಲಿಗೆ ಹೋದಾಗ ಕಿಶನ್ ಪಟ್ನಾಯಕ್ ಮತ್ತಿತರರ ಸಂಪರ್ಕ ಸಿಕ್ಕಿತ್ತು. ಇದೇ ಸಂದರ್ಭದಲ್ಲಿ ಶರದ್ ಯಾದವ್ ಪರಿಚಿತರಾದರು. ಲೋಹಿಯಾ ಜೊತೆಗೆ ಜೆಎನ್‌ಯು ಸಂಪರ್ಕ ಬಂದು ಮಾರ್ಕ್ಸಿಸಂ ಓದಿನಲ್ಲಿ ತೊಡಗಿದೆ. ಆದರೆ ಮಾರ್ಕ್ಸಿಸಂ ಬಗ್ಗೆ ನನಗೆ ಲೋಹಿಯಾರಿಂದ ಪಡೆದ ಒಳನೋಟಗಳ ಪರಿಣಾಮಗಳೂ ಸೇರಿ ಯಾವಾಗಲೂ ಅನುಮಾನ ಇತ್ತು. ಅದು ಒಂದು ರೀತಿಯಲ್ಲಿ ಮನುಷ್ಯನನ್ನು ಚರಿತ್ರೆಯ ಒಂದು ಉತ್ಪನ್ನ ಎಂದು ಭಾವಿಸುತ್ತದೆ. ಇದನ್ನು ನಾನು ಒಪ್ಪುವುದಿಲ್ಲ. ನನ್ನ ಪ್ರಕಾರ ಮನುಷ್ಯನಿಗೆ ಒಂದು ಸ್ವಾತಂತ್ರ್ಯ ಇದೆ. ಲಂಕೇಶ್ ಹೇಳುವಂತೆ ಮನುಷ್ಯ ಒಂದು ಪವಾಡ. ಆತನಿಗೆ ಹಲವು ಬಗೆಯ ಸಾಧ್ಯತೆಗಳಿವೆ. ಮನುಷ್ಯ ಆತನೇ ಸೃಷ್ಟಿಸಿರುವ ಹಲವು ರಚನೆಗಳನ್ನು ಮೀರಬಲ್ಲ. He is not a slave of History. He is not a product of History. He can create History and damn it also. ಚರಿತ್ರೆಗೆ ಚರಿತ್ರೆಯೇ ಇಲ್ಲದಿರಬಹುದು ಮತ್ತು ಮನುಷ್ಯ ಚರಿತ್ರೆಯನ್ನು ಮೀರಬಹುದು ಎಂಬ ಲೋಹಿಯಾ ಅವರ ಮಾತುಗಳು ನನ್ನನ್ನು ಆಳವಾದ ಯೋಚನೆಗೆ ಹಚ್ಚಿದವು.

ಪ್ರಶ್ನೆ : ಸರ್, ನೀವು ಹೀಗೆ ಹೇಳುವಾಗ ಒಂದು ವೈರುಧ್ಯ ನನಗೆ ಕಾಣಿಸುತ್ತಿದೆ. ನೀವು ಸಮಾಜವಾದಿ ಆದರ್ಶದ ಬಗ್ಗೆ ಮಾತನಾಡುತ್ತಿದ್ದೀರಿ. ಆದರೆ ಬಂಡವಾಳದ ಪ್ರಭಾವ ಎಷ್ಟಿದೆ ಅಂದರೆ, ಅದು ನಮ್ಮ ಮಾಧ್ಯಮವನ್ನು, ಆಡಳಿತವನ್ನು, ರಾಜಕೀಯವನ್ನು, ಸರ್ಕಾರಗಳನ್ನು, ಪಕ್ಷಗಳನ್ನು, ಆರ್ಥಿಕ ನೀತಿಗಳನ್ನು ನಿಯಂತ್ರಿಸುತ್ತಿದೆ. ಒಂದು ಕಡೆ ಸಮಾಜವಾದಿ ಆದರ್ಶವಿದ್ದರೆ ಮತ್ತೊಂದೆಡೆ ಬಂಡವಾಳದ ಶಕ್ತಿ ನಮ್ಮ ಕಲ್ಪನೆಗೂ ಮೀರಿದ್ದು. ಇಂತಹ ಸಂದರ್ಭದಲ್ಲಿ ಸಮಾನತೆಯ ಆದರ್ಶವನ್ನು ಕಟ್ಟುವುದು ಹೇಗೆ? ಇದರ ಅನುಸಂಧಾನದ ಆಯಾಮಗಳೇನು?

ನಾಗಭೂಷಣ : ಮೊದಲು ಬಹಳ ಜನರಲ್ಲಿರುವ ಒಂದು ತಪ್ಪು ತಿಳುವಳಿಕೆಯನ್ನು ನಿವಾರಿಸಬೇಕು: ಸಮಾಜವಾದದ ಪ್ರಾಥಮಿಕ ಗುರಿ ಸಮಾನತೆ ಅಲ್ಲ. ಸಮಾನ ಅವಕಾಶಗಳ ಸೃಷ್ಟಿ. ಚರಿತ್ರೆಯ ಆಕಸ್ಮಿಕಗಳಿಂದ ಆಧುನಿಕ ಪ್ರಪಂಚದಲ್ಲಿ ಉಂಟಾಗಿರುವ ಅವಕಾಶಗಳ ವಂಚನೆಯನ್ನು ಪರಿಹರಿಸುವುದು. ಇನ್ನು ನಿಮ್ಮ ಪ್ರಶ್ನೆಗೆ ಬರುವುದಾದರೆ, ನೋಡಿ ನೀವು ಹೇಳುವುದು ಸತ್ಯವೇ ಆಗಿದ್ದರೆ ಅದನ್ನು ನಿರಾಕರಿಸಲು ನಾವು ಹಲವು ತ್ಯಾಗಗಳನ್ನು ಮಾಡಲು ಸಿದ್ಧರಿರಬೇಕು. ನಮ್ಮ ಆಧುನಿಕತೆಗೆ ವೇದಿಕೆ ಒದಗಿಸಿರುವ ಭೌತವಾದಿ ಬದುಕಿನ ದೃಷ್ಟಿಕೋನದ ನಂಬಿಕೆಗಳಿಂದಲೇ, ದೌರ್ಬಲ್ಯಗಳಿಂದಲೇ ಬಂಡವಾಳಕ್ಕೆ ಈ ಶಕ್ತಿ ಬಂದಿರುವುದು. ಬಂಡವಾಳ ಎನ್ನುವುದೇ ಒಂದು ಆಧುನಿಕ ಪರಿಕಲ್ಪನೆಯಲ್ಲವೆ? ನಾನು ಇತ್ತೀಚೆಗೆ ಹೆಚ್ಚು ಮಾತನಾಡುತ್ತಿರುವುದು ಗಾಂಧಿ ಬಗ್ಗೆ.

ಅದರಲ್ಲೂ ಅವರು 'ಹಿಂದ್ ಸ್ವರಾಜ್' (೧೯೦೯) ಬಗ್ಗೆ. ಅದು ಆಧುನಿಕತೆಯನ್ನು, ಇನ್ನೂ ಹೆಚ್ಚು ನಿಖರವಾಗಿ ಹೇಳುವುದಾದರೆ ಆಧುನಿಕ ನಾಗರೀಕತೆಯನ್ನು ಅಂದರೆ ಜೀವನ ದೃಷ್ಟಿ ಮತ್ತು ಕ್ರಮವನ್ನು ತೀವ್ರವಾಗಿ ಮತ್ತು ಆಳವಾಗಿ ಪ್ರಶ್ನಿಸುತ್ತದೆ. ಈ ಚಿಂತನೆಯ ಭಾಗವಾಗಿ ಗಾಂಧಿ ಆಧುನಿಕತೆಯನ್ನು ವಸಾಹತುಶಾಹಿಯ ಉಪಕರಣ ಎಂದು ಕರೆದಿದ್ದಾರೆ. ಮೊದಲಾಗಿ ಇದು ಮನಸ್ಸಿನ ವಸಾಹಿತೀಕರಣ. ಇದು ಒಂದು ಸರಿಯಾದ ಡೆಫಿನಿಷನ್. ಅದಿರಲಿ, ಈ ಬಂಡವಾಳದ ರಾಜಕಾರಣವನ್ನು ಪ್ರತಿರೋಧಿಸಲು ಮಾರ್ಕ್ಸಿಸಂ ಬಂತು. ಮಾರ್ಕ್ಸಿಸಂ ಕೂಡ ನನ್ನ ಪ್ರಕಾರ ಪ್ರಭುತ್ವ ಬಂಡವಾಳವಾದವಾಗಿ ಬಂಡವಾಳವಾದದ ಇನ್ನೊಂದು ರೂಪ. ಇದು ದೇವರು ಮತ್ತು ಧರ್ಮಗಳ ಜಾಗದಲ್ಲಿ ಟೆಕ್ನಾಲಜಿ ಮತ್ತು ಪಕ್ಷ/ರಾಜ್ಯ ಪ್ರಭುತ್ವಗಳನ್ನು ತಂದು ಕೂರಿಸಿತು. ನನ್ನ ಪ್ರಕಾರ ನಾಸ್ತಿಕತೆ ಆಧುನಿಕರಿಗೆ ಬಡಿದಿರುವ ದೊಡ್ಡ ಶಾಪ. ನಾಸ್ತಿಕತೆ ಎಂದರೆ ದೇವರನ್ನು ನಿರಾಕರಿಸುವದೆಂದಲ್ಲ. ಈ ಸೃಷ್ಟಿಗೆ ಏನೂ-ಅದು ಪವಿತ್ರವೋ ಅಲ್ಲವೋ ಅದು ಬೇರೆ ಪ್ರಶ್ನೆ-ಮೂಲ ಇಲ್ಲ ಎನ್ನುವುದು. ಅಂದರೆ ಮನುಷ್ಯನ ಬದುಕಿಗೆ, ಅಸ್ತಿತ್ವಕ್ಕೆ ಒಂದು ಕೇಂದ್ರವೇ ಇಲ್ಲ ಎಂದು ಭಾವಿಸುವುದು. ಹಾಗಾದರೆ ಮನುಷ್ಯ ಸಂಬಂಧಗಳಿಗೆ, ಈ ಮಾನವ ಸಮುದಾಯದ ಬದುಕಿಗೆ ಏನು ಅರ್ಥ? ಇಂತಹ ತಂತ್ರಜ್ಞಾನ ಆಧರಿಸಿದ ಪರಿವರ್ತನೆಯನ್ನು ಮಾರ್ಕ್ಸಿಸಂ ವೈಜ್ಞಾನಿಕ ಕ್ರಾಂತಿ ಎಂದು ಕರೆಯುತ್ತದೆ.

ಮಾರ್ಕ್ಸಿಸಂನ ಸಮಸ್ಯೆ ಎಂದರೆ ಅದು ಯುರೋಪ್ ಕೇಂದ್ರಿತ ಜಗತ್ತನ್ನು ಕಟ್ಟಿಕೊಟ್ಟಿದೆ. ಅದು ಕೈಗಾರಿಕೆ ಎಂಬುದರ ಅರ್ಥವನ್ನು ಒಂದು ನಿರ್ದಿಷ್ಟ ಅರ್ಥಕ್ಕೆ freeze ಮಾಡಿದ ಕ್ರಾಂತಿಯ ಫಲ. ಹಾಗೇ ಅದರ ಕಾರ್ಮಿಕ ಎಂಬ ಏಕರೂಪಿ ಪದ ಪ್ರಯೋಗವೂ. ಇದರಿಂದಾಗಿ ವಸಾಹತುಶಾಹಿ ಕುರಿತಾದ ಅದರ ಥಿಯರಿ ತೀರಾ ವಕ್ರವೂ, ದುರ್ಬಲವೂ ಆಗಿದೆ. ಏನೇ ಆಗಲಿ ನಿಮ್ಮ ಪ್ರಶ್ನೆಯಿಂದ ಬಹುದೂರ ಹೋಗದೆ ಮಾತು ಮುಂದುವರೆಸುವುದಾದರೆ, ಜಾಗತೀಕರಣ ಎಂದರೆ ವಸಾಹತುಶಾಹಿಯೂ ಸೇರಿದಂತಿರುವ ಬಂಡವಾಳಶಾಹಿಯ ಆತ್ಯಂತಿಕ ರೂಪ. ಅದು ಟೆಕ್ನಾಲಜಿ ಮೂಲವಾಗಿ-ಅದರ ಹಲವು ರೂಪಗಳ ಪರಿಣಾಮಗಳಿಂದಾಗಿ-ಹಿಂಸೆಯನ್ನು ಸೃಷ್ಟಿಸುತ್ತಿದೆ.

ಎಲ್ಲ ಕೆಟ್ಟ ರಾಜಕಾರಣದ ಹೊರ ರೂಪ ಎಂದರೆ ಹಿಂಸೆ. ಎಲ್ಲಾ ರೀತಿಯ ಹಿಂಸೆ. ಇದಕ್ಕೆ ಉತ್ತರ ಎಂದರೆ ಅಹಿಂಸೆ. ಹೆಚ್ಚು ಹಿಂಸೆ ಸೃಷ್ಟಿಸುವುದಲ್ಲ. violenceಗೆ ಉತ್ತರ non-violence. ಇದನ್ನು ಗಾಂಧಿ ನೂರು ವರ್ಷಗಳ ಹಿಂದೆಯೇ ಮನಗಂಡಿದ್ದರು. ಮನುಷ್ಯ ಭಗವಂತನ-ಅನೂಹ್ಯ ಶಕ್ತಿರಾಶಿಯ-ಸೃಷ್ಟಿ. ಅವನು ಮೂಲದಲ್ಲಿ ಯಾವುದೇ ತೆರನ ಪ್ರಜೆ ಅಲ್ಲ. ಪ್ರಜೆ ನಂತರ ಬರುವುದು. ಆತ ಯಾವುದೇ ನಿರ್ಬಂಧ ಇಲ್ಲದೆ ನಿರಾಳವಾಗಿ ಬಾಳಬೇಕು. ಆತನಿಗೆ ತನ್ನದೇ ತನ್ನ ನೆರೆಹೊರೆ ಅಥವಾ ಸ್ಥಳೀಯತೆಯಲ್ಲಿ-ಅದರ ನೆಲ ಜಲ ಗಾಳಿ ಪ್ರಾಣಿ ಪಕ್ಷಿಗಳೊಂದಿಗೆ- ಬಾಳಿ ಬದುಕಿ

ಕಲಿತ ಕೆಲ ಮೌಲ್ಯಗಳ ಒಂದು ಒಳಲೋಕ ಇರುತ್ತದೆ. ಅದೇ ಸ್ವರಾಜ್ಯ. ಅಂದರೆ ಹೊರಗಿನ ಕನಿಷ್ಟ ಹಸ್ತಕ್ಷೇಪಗಳಿರುವ–ಅವನ್ನೂ ತಾನೇ ನಿರ್ಧರಿಸಿಕೊಳ್ಳಬಲ್ಲ– ತನ್ನನ್ನು ತಾನೇ ಆಳಿಕೊಳ್ಳಬಲ್ಲ ನಿರಾಳ ರಾಜ್ಯ. ಇದನ್ನು ಆಧುನಿಕತೆ ಅಥವಾ ಅಧುನಿಕರು ಎಂದೂ ವಾಸ್ತವಕ್ಕೆ ಬರಲಾಗದ ಭವ್ಯ ಊಹಾರಾಜ್ಯ ಎನ್ನುತ್ತಾರೆ. ಇದಕ್ಕೆ ಕಾರಣ, ಈ ಸ್ವರಾಜ್ಯವನ್ನು ಸ್ಥಾಪಿಸಿಕೊಳ್ಳಲು ಗಾಂಧಿ ಸೂಚಿಸುವ ಮನುಷ್ಯ ಮಾಡಬೇಕಾದ ಕೆಲ ತ್ಯಾಗಗಳು ಮನುಷ್ಯ ಈಗಾಗಲೇ ಬದ್ಧನಾಗಿರುವ ಆಧುನಿಕತೆಯ ರೂಢಿಗಳಿಗೆ ವಿರುದ್ಧವಾದವುಗಳು. ಆಧುನಿಕತೆ ಎಂದರೆ ಹೆಚ್ಚೆಚ್ಚು ಪಡೆದುಕೊಳ್ಳುವುದೇ ಹೊರತು ಕಳೆದುಕೊಳ್ಳುವುದಲ್ಲ!

ಇಲ್ಲಿ ಹೊರಲೋಕದ ಕನಿಷ್ಟ ಹಸ್ತಕ್ಷೇಪವಿರುವ ಒಳಲೋಕ ಎಂದೆ; ಹೊರಲೋಕ ಎಂದರೆ ದೂರದ ಲೋಕ. ಹಾಗಿದ್ದಕ್ಕೇ ಅದು ಹಸ್ತಕ್ಷೇಪ ಎನ್ನಿಸಿಕೊಂಡಿರುವುದು. ಹಾಗಾಗಿ ಇಲ್ಲಿ ದೂರವೇ ಎಲ್ಲ ಸಮಸ್ಯೆಗಳ–ಹಿಂಸೆಯ–ಕೇಂದ್ರ. Distance is the source of every problem. ಆದರೆ ಸ್ವರಾಜ್ಯ ತನ್ನ ಸ್ಥಳೀಯತೆ ಅಥವಾ ನೆರೆಹೊರೆಯ ಪರಿಕಲ್ಪನೆಯಿಂದ ದೂರದ ಸಮಸ್ಯೆಯನ್ನು ಸರಿಯಾದ ಹದದಲ್ಲಿ ಪಳಗಿಸಿ ನಿರ್ವಹಿಸುತ್ತದೆ. ಆದರೆ ಇದಕ್ಕೆ ಬೇಕಾದ ತ್ಯಾಗಗಳಿಗೆ ಮನುಷ್ಯ ಹಲವು ಹಿಂಸೆಗಳನ್ನು ಅನುಭವಿಸಿ–ಸಿದ್ಧನಾಗುವವರೆಗೆ ಮಧ್ಯಂತರ ಪರಿಹಾರವಾಗಿ ಲೋಹಿಯಾ ಚತುಸ್ತಂಭ ರಾಷ್ಟ್ರದ–ಗ್ರಾಮ, ಮಂಡಲ, ಜಿಲ್ಲೆ ಮತ್ತು ರಾಜ್ಯಗಳೆಂಬ ನಾಲ್ಕು ಅಂತರವಲಂಬಿ ಆಧಾರ ಸ್ತಂಭಗಳ–ಪ್ರಭುತ್ವದ ಕಲ್ಪನೆಯನ್ನು ಮುಂದಿಡುತ್ತಾರೆ.

ಪ್ರಶ್ನೆ: ಆದರೆ ಸಮಸ್ಯೆ ಎಂದರೆ, ಸರ್, ನೀವು ಕೂಡ 'ಹೊಸ ಮನುಷ್ಯ' ಎಂಬ ಪತ್ರಿಕೆಯ ಸಂಪಾದಕರು. ಇವತ್ತಿನ ಮಾಧ್ಯಮಗಳು ಮತ್ತು ಪತ್ರಿಕೆಗಳು ನಮ್ಮ ಸಮುದಾಯದ ನಿಜವಾದ ಪ್ರಶ್ನೆಗಳನ್ನು ಮರೆಮಾಚಿ ಸುಳ್ಳು ಮತ್ತು ಅರ್ಧ ಸತ್ಯಗಳನ್ನು ಉತ್ಪಾದಿಸುವ ಕೇಂದ್ರಗಳಾಗಿವೆ. ಇದನ್ನು ಹೇಗೆ ಪರಿಹಾರ ಮಾಡಿಕೊಳ್ಳುವುದು?

ನಾಗಭೂಷಣ: ಇವೆಲ್ಲವೂ ಬಂಡವಾಳಶಾಹಿಯ ಕಾರ್ಯಕ್ರಮಗಳು. ಆದ್ದರಿಂದ ಮಾಧ್ಯಮಗಳ ವಿಮರ್ಶೆ ಎಂಬುದು ಬಂಡವಾಳಶಾಹಿಯನ್ನು ವಿಮರ್ಶಿಸುವುದೇ ಆಗಿದೆ. ಏನಿಲ್ಲ ಈ ಚರ್ಚೆಯ ಬಗ್ಗೆ ತಲೆ ಕೆಡಿಸಿಕೊಳ್ಳದೇ ಇರಬೇಕು. ನಮ್ಮ ಮಾತುಗಳಿಗೆ ಹೆಚ್ಚು ಕೇಳುಗರನ್ನು ಸೃಷ್ಟಿಸಿಕೊಳ್ಳಬೇಕು. 'ಹೊಸ ಮನುಷ್ಯ' ಇಂತಹ ಒಂದು ಆರಂಭದ–ಸಣ್ಣ ಪ್ರಯತ್ನವಷ್ಟೆ.

ಪ್ರಶ್ನೆ: ಸರ್ ಸ್ಪೇಸ್ ಇಲ್ಲ ಎಂದು ಹೇಳುತ್ತಾರಲ್ಲ......

ನಾಗಭೂಷಣ: ಹೌದು. ತುಂಬಾ ನಿರಾಶೆಯ ಕಾಲವಿದು. 'ಹೊಸ ಮನುಷ್ಯ'ವನ್ನು ಉಳಿಸಿಕೊಳ್ಳಲು ನಾನೆಷ್ಟು ಪ್ರಯತ್ನಪಡುತ್ತಿದ್ದೇನೆಂಬುದು ನಿಮಗೆ ಗೊತ್ತಿಲ್ಲ. ಇಂಥವಕ್ಕೆಲ್ಲ ನಂಬಿಕೆ ಮತ್ತು ಹಠ ಬೇಕಷ್ಟೆ. ನಾವು ಭ್ರಮನಿರಸನಗೊಂಡು ಕೆಲಸ ನಿಲ್ಲಿಸಿದರೆ ಪೂರ್ತಿ ಮುಳುಗಿ ಹೋಗುತ್ತೇವೆ. ಮುಖ್ಯವಾಗಿ ಮನುಷ್ಯನಲ್ಲಿ ನಂಬಿಕೆ ಇರಬೇಕು. ಆತ ಎಷ್ಟೇ ಕಷ್ಟವಾದರೂ ಆತನಲ್ಲಿ ಬದುಕುಳಿಯುವ ಸತ್ವದ ಪಸೆ ಇದ್ದೇ ಇರುತ್ತದೆ.

ಇಲ್ಲಿ ಇನ್ನೊಂದು ಸಮಸ್ಯೆ ಇದೆ. ಬಂಡವಾಳಶಾಹಿಯ ವಿರುದ್ಧ ವಾದಿಸುವ ಬಹುತೇಕ ಎಲ್ಲ ತರಹದ ಎಡಪಂಥೀಯರ ಚರಿತ್ರೆ, ಅವರ ನಡವಳಿಕೆಗಳು ತೀರಾ ನಿರಾಶಾದಾಯಕವಾಗಿವೆ. ಅವರು ನುಡಿದಂತೆ ನಡೆಯದಿರುವುದರಿಂದ ಅವರ ಮೇಲಿನ ನಂಬಿಕೆ ಹೊರಟು ಹೋಗಿದೆ. ಆದ್ದರಿಂದಲೇ ಬಲಪಂಥೀಯರು ಮೇಲೆ ಬಂದಿದ್ದಾರೆ. ಇನ್ನೊಂದು ಸಮಸ್ಯೆ ಎಂದರೆ ನಮ್ಮದು ಪಾರಂಪರಿಕ ಸಮಾಜವಾಗಿದ್ದರಿಂದ, Modern Nation-Stateಗೂ ಪರಂಪರೆಗೂ ಅಗಾಧ ಬಿರುಕು ಕಂಡುಬರುತ್ತಿದೆ. ಭಾರತ ೧೯೪೭ರಲ್ಲಿ ಉದ್ಭವವಾಗಿಲ್ಲ. ಅದರೊಳಗೊಂದು ಪುರಾತನ ಸಾಂಸ್ಕೃತಿಕ ಪರಂಪರೆ ಇದೆಯಲ್ಲ ಅದನ್ನು ಆಧುನಿಕರಾಗಿ ಬೆಳೆಸಿಕೊಂಡಿರುವ ರೂಕ್ಷ ಅಸಹನೆಯನ್ನು ಬಿಟ್ಟು ಸಹಾನುಭೂತಿಯಿಂದ ಅರ್ಥೈಸಿಕೊಳ್ಳಬೇಕಿದೆ. ನಾನು ಪೊಲಿಟಿಕಲ್ ಇಂಡಿಯಾ ಬಗ್ಗೆ ಮಾತನಾಡುತ್ತಿಲ್ಲ, ಕಲ್ಚರಲ್ ಇಂಡಿಯಾ ಬಗ್ಗೆ ಮಾತನಾಡುತ್ತಿದ್ದೇನೆ.

ಆಧುನಿಕ ಭಾರತ ಎಂದರೆ ವಿದ್ಯಾವಂತರಿಗೆ–ಇಂದಿನ ಎಲೈಟ್‌ಗಳಿಗೆ–ಪಶ್ಚಿಮದ ಅನುವಾದವೆಂಬಂತಾಗಿಬಿಟ್ಟಿದೆ. ಆದರೆ ಜನ ಸಾಮಾನ್ಯರಿಗೆ ಇದು ಅನ್ಯವಾಗಿದೆ. ನೀವು ಸಾಕ್ರಟೀಸ್‌ನಿಂದ ಸ್ಪಿನೋಜ, ನೀಶೆ, ಡೆರಿಡಾ, ಫ್ಯಾನನ್, ಫುಕೊವರೆಗೆ ಓದುತ್ತೀರಾ. ಆದರೆ ಅಭಿನವ ಗುಪ್ತ ಅಥವಾ ನಾಗರ್ಜುನನನ್ನು ಅಥವಾ ವಿಮಲಕೀರ್ತಿ, ಬೋಧಿಧರ್ಮರನ್ನು ಓದುವುದಿಲ್ಲ. ನಮ್ಮ ದರ್ಶನಗಳ ಹೆಮ್ಮೆಗಳಾದ ಪ್ರತೀತ ಸಮುತ್ಪಾದ ತತ್ವ ಮತ್ತು ಅನೇಕಾಂತವಾದ ನಮ್ಮ ಚಿಂತಕರಲ್ಲಿ ಹೆಚ್ಚಿನ ಜನಕ್ಕೆ ಗೊತ್ತೇ ಇಲ್ಲ. ಕೊನೆಗೆ ಮಿಲರೇಪ ಅಥವಾ ದಲೈಲಾಮಾರನ್ನು ಓದುವುದಿಲ್ಲ. ಇನ್ನು ಶಂಕರ, ರಾಮಾನುಜ, ಮಧ್ವ, ಚೈತನ್ಯ, ಪರಮಹಂಸ, ವಿವೇಕಾನಂದ, ರಮಣರೆಂದರೆ ಹಾವು ಮೆಟ್ಟಿದವರಂತೆ ಹೌಹಾರುತ್ತೀರಾ! ಈಗ ಸೋತು ಸುಣ್ಣವಾದ ಮೇಲೆ ಮೆಲ್ಲಗೆ ಕಬೀರ, ಕನಕ, ತುಕಾರಾಮ, ಷರೀಫರನ್ನು ಹಿಡಿದುಕೊಂಡಿದ್ದೀರಾ! ಇವರೆಲ್ಲರ ಬಡಿದಾಟ–ಒಡನಾಟ ಯಾರೊಡನೆ ಎಂಬುದನ್ನು ನೀವೇಕೆ ತಿಳಿಯುತ್ತಿಲ್ಲ? ಪೂರ್ವದ ಜ್ಞಾನಶಾಖೆಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುತ್ತಿಲ್ಲ. ಇವತ್ತು ಡೆರಿಡಾ, ಎಡ್ವರ್ಡ್ ಸೈಯಿದ್ ಹೇಳುವುದನ್ನು ನಮ್ಮ ಉಪನಿಷತ್ತುಗಳ ಶಿಖರದಂತಿರುವ ಬುದ್ಧ ಬಹಳ ಹಿಂದೆಯೇ ಬೇರೆ ಬೇರೆ ನುಡಿಗಟ್ಟುಗಳಲ್ಲಿ ಹೇಳಿದ್ದ. (Physical) Truth is relative, just a construct ಅಂತ ಹೇಳಿದ್ದ. ಪಶ್ಚಿಮವನ್ನು ಓದಿಕೊಂಡಂತೆ ನಾವು ಪೂರ್ವವನ್ನು ಅರಿತಿಲ್ಲ. ಮೊದಲು ಈ ಸಮಸ್ಯೆಯನ್ನು ನಿವಾರಿಸಿಕೊಳ್ಳಬೇಕಿದೆ.

ಪ್ರಶ್ನೆ: ನೀವು ಹೇಳುವುದರಲ್ಲಿ ಒಂದು ಅಪಾಯ ಇದೆ. ಇತ್ತೀಚೆಗೆ ನಮ್ಮ ಪರಂಪರೆಯನ್ನು ಅನಗತ್ಯವಾಗಿ ವಿಜೃಂಭಿಸುವ ಒಂದು ರಾಜಕೀಯ ಪ್ರಯತ್ನ ಕಂಡುಬರುತ್ತಿದೆ. ಅಂದರೆ ನಮ್ಮಲ್ಲಿ ಎಲ್ಲವೂ ಇತ್ತು. ಮತ್ತು ನಮ್ಮದೇ ಅತಿ ಶ್ರೇಷ್ಠ ಎಂಬ ವಿಜೃಂಭಣೆ ಕಂಡುಬರುತ್ತಿದೆ. ಇದಕ್ಕೆ ಪ್ರತಿಯಾಗಿ ಯಾರಾದರೂ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದರೆ ಅವರನ್ನು ಬಂಧಿಸುವ ಮತ್ತು ಅವರ ವಿಚಾರಗಳನ್ನು ಹತ್ತಿಕ್ಕುವ ಪ್ರಯತ್ನ ನಡೆಯುತ್ತಿದೆ. ಇದಕ್ಕೆ ನಮ್ಮ ಸಾಂವಿಧಾನಿಕ ಸಂಸ್ಥೆಗಳು ಕೈ ಜೋಡಿಸುತ್ತಿರುವ ವಿದ್ಯಮಾನವನ್ನು ನೀವು ಗಮನಿಸಿರಬಹುದು...

ನಾಗಭೂಷಣ: ಎಲ್ಲವೂ ನಮ್ಮಲ್ಲಿತ್ತು ಎಂದು ನಾನೆಲ್ಲಿ ಹೇಳಿದೆ? ನಮ್ಮಲ್ಲೂ ಒಂದು ಲೋಕ ಗ್ರಹಿಕೆಯ ಕ್ರಮವಿತ್ತು, ಅದನ್ನೂ ಅತ್ತ ತಿರುಗಿ ನೋಡಿ ಎಂದಷ್ಟೇ ನಾನು ಹೇಳುತ್ತಿರುವುದು. ನನ್ನ ಪ್ರಕಾರ ನಮ್ಮಲ್ಲಿ ಎಲ್ಲವೂ ಇತ್ತು ಎಂಬ ಮಾತು ಸದ್ಯದ ರಾಜಕೀಯ ರೆಟರಿಕ್ಕಿನ ಮಾತು. ನಾವು ಆಧುನಿಕತೆಯ ಹೆಸರಿನಲ್ಲಿ ನಮ್ಮಲ್ಲಿರುವ ಎಲ್ಲವನ್ನು ಖಂಡಿಸುವುದನ್ನು, ಸಿನಿಕತನದಿಂದ ನೋಡುವುದನ್ನು ರೂಢಿಸಿಕೊಂಡಿದ್ದರ ಪ್ರತಿಕ್ರಿಯೆಯಾಗಿ ಇದು ಬಂದಿದೆ. ಲಂಕೇಶರು ಎಲ್ಲೋ ಒಂದುಕಡೆ –ಬಹುಶಃ– ಒಕ್ಕೂಟದ ಸಮ್ಮೇಳನದಲ್ಲಿ ಮಾಡಿದ ಭಾಷಣದಲ್ಲಿ 'ಇಲ್ಲಿನ ಬುದ್ಧಿವಂತರಿಗೆ ಒಂದು ಕುರ್ಚಿ, ಒಂದು ಮೇಜು, ಒಂದು ಮಂಚ ರೂಪಿಸಲಾಗಲಿಲ್ಲ. ಇಂಥ ಕಡೆ ಹೊಸತೇನು ಹುಟ್ಟೀತು?' ಎಂಬರ್ಥ ಮಾತನ್ನಾಡಿದ್ದಾರೆ. ಇದಕ್ಕೆ ಚಪ್ಪಾಳೆ ತಟ್ಟುವರೂ ಇದ್ದರು! ನಮ್ಮ ಆಧುನಿಕತೆಯ ಕಲ್ಪನೆ, ಅದರ ಹುಂಬತನ ಹೀಗಿತ್ತು!

ಪ್ರಶ್ನೆ: ಆದರೂ ಎಲ್ಲವೂ ನಮ್ಮಲ್ಲಿತ್ತು ಎಂಬುದು ರಾಜಕೀಯ ಮಾತಾಗಿ ಬಲಪಡೆಯುತ್ತಿದೆ...

ನಾಗಭೂಷಣ: ಹೌದು ಈ ಹಿಂದೆ ಕೆಲವರ ಪಿಸುಮಾತಾಗಿದ್ದ ಇದು ಎಡಪಂಥದ ರಾಜಕೀಯ ಸೋಲಿನಿಂದಾಗಿ ಈಗ ರಾಜಕೀಯ ಬಲ ಪಡೆದಿದೆ. ಆದರೆ ಬಲ್ಲವರಿಗೆ ಇದು ಇಂದೂ ಹಾಸ್ಯಾಸ್ಪದವೇ. ಆದ್ದರಿಂದ ಆತಂಕ ಬೇಡ. ಈ ಬಲಪಂಥವೂ ತುಕ್ಕು ಹಿಡಿಯುವ ಕಾಲ ಬರುತ್ತದೆ. ಆದರೆ ಇಂದಿನ ಕೆಟ್ಟ ಬೆಳವಣಿಗೆ ಎಂದರೆ ನಿಧಾನವಾಗಿ ಎಡಪಂಥೀಯರು ಕಂಗೆಟ್ಟು ಅವರ ಕಣ್ಣುಗಳು ಮಂಜಾಗತೊಡಗಿವೆ. ರಾಮಮಂದಿರ ಕಟ್ಟುತ್ತೇವೆ ಎಂದರೆ, ಮೊದಲಿನಂತೆ ಹಾರಾಡದೆ, ಆಗಲಿ ಬಿಡಿ ಎಂದು ಹೇಳುವುದನ್ನು ಕಲಿತಿದ್ದಾರೆ. ಹಾಗೇ ಅವರು ಪರಮಹಂಸ–ವಿವೇಕಾನಂದರೆಂದರೆ ಯಥಾಸ್ಥಿತಿವಾದಿಗಳು ಎಂದು ಹೌಹಾರದೆ ಅವರಲ್ಲೂ ಒಂದಿಷ್ಟು ಪ್ರಗತಿಪರತೆಯನ್ನು ಹುಡುಕಹೊರಟಿದ್ದಾರೆ! ಇದೊಂದು ಹೊಸ ವಿದ್ಯಮಾನ. ಇದು ಕಾಲದ ಹೊಂದಾಣಿಕೆಯೋ, ನಂಬಿಕೆಯೋ ಕಾದು ನೋಡಬೇಕು.

ಪ್ರಶ್ನೆ: ಸರ್, ಹಾಗಲ್ಲ. ಮುಖ್ಯವಾಗಿ ಮಾನವ ಹಕ್ಕು ಹೋರಾಟಗಾರರು, ಪ್ರಗತಿಪರರನ್ನು ಬಂಧಿಸಿ ಅವರ ಧ್ವನಿಯನ್ನು ಹತ್ತಿಕ್ಕುವ ಇಲ್ಲವಾಗಿಸುವ ಪ್ರಯತ್ನ ನಡೆಯುತ್ತಿದೆಯಲ್ಲ...

ನಾಗಭೂಷಣ: ಒಂದು ನೆನಪಿಡಿ. ಇದು ಬಹುತೇಕ ಎಲ್ಲ ಪ್ರಭುತ್ವಗಳ ಹುಟ್ಟುಗುಣ. ಈ ಹಿಂದಿನ ಸರ್ಕಾರಗಳೇನೂ ಮಹಾ ಉದಾರವಾದಿಯಾಗಿರಲಿಲ್ಲ. ಅವೂ ಲೇಖಕರನ್ನೂ, ಪುಸ್ತಕಗಳನ್ನೂ ನಿಷೇಧಿಸಿದ್ದವು. ರಾಜಕೀಯ ವಿರೋಧಿಗಳ ವಿರುದ್ಧ ತನಿಖಾ ಸಂಸ್ಥೆಗಳನ್ನು ಬಳಸಿ ಬೆದರಿಕೆ ರಾಜಕಾರಣ ಮಾಡಿದ ಅನೇಕ ಉದಾಹರಣೆಗಳಿವೆ. ಆದರೆ ಇಂದಿನ ಪ್ರಭುತ್ವದ ಒಂದು ತುಂಬಾ ಅಪಾಯಕಾರಿ ಗುಣವೆಂದರೆ, ಅದರ ಸರ್ವಜ್ಞ ಗರ್ವದ ಗುಣ. ಅದು ಧರ್ಮ ಮತ್ತು ದೇಶ ಎಂಬವುಗಳನ್ನು ಅರ್ಥ ಮಾಡಿಕೊಂಡಿರುವ (ಅಡ್ಡ) ರೀತಿಯಿಂದಾಗಿ ಬಂದಿರುವ ಗುಣ.

ಜೊತೆಗೆ ತನಗೆ ಶಾಶ್ವತವಾಗಿ ತಳವೂರುವ, ಇತಿಹಾಸವನ್ನು ಬದಲಿಸುವ ಐತಿಹಾಸಿಕ ಹಕ್ಕು ಹೊಣೆ ಇರುವುದೆಂದು ಅದು ನಂಬಿದೆ. ಹಾಗಾಗಿ ತಾನು ಮಾಡುತ್ತಿರುವುದನ್ನು ತಪ್ಪೆಂದು ಹೇಳುವ ಎಲ್ಲರನ್ನೂ ದೇಶ ಮತ್ತು ಧರ್ಮದ್ರೋಹಿಗಳೆಂದು ಪರಿಗಣಿಸಿ ತನ್ನ ಹೊಣೆ ನಿರ್ವಹಿಸಲು ಸೆರೆಗೆ ತಳ್ಳುತ್ತಿದೆ. ಈ ಸಂಬಂಧವಾದ ಬಹಳ ಆತಂಕಕಾರಿ ಸಂಗತಿ ಎಂದರೆ, ಇದಕ್ಕಾಗಿ ನ್ಯಾಯಾಂಗವನ್ನೂ ಬಳಸುತ್ತಿರುವ ಸಾಕ್ಷಿಗಳೂ ಸಿಗತೊಡಗಿವೆ. ಆದರೆ ಪ್ರಜಾಪ್ರಭುತ್ವದ ರುಚಿ ನೋಡಿರುವ ಜನತೆ ಎದುರು ಇದು ಬಹುಕಾಲ ನಡೆಯುವುದಿಲ್ಲ. ಆದರೆ ಇದೇ ವೇಳೆಯಲ್ಲಿ ಹೀಗಾಗಲು ಕಾರಣ ಏನು ಎಂಬುದನ್ನು ನಾವು ಕಂಡುಕೊಳ್ಳಬೇಕಿದೆ. ಈ ಬಗೆಯ ಬಲಪಂಥೀಯತೆ ಎಂಬುದು ಬಂಡವಾಳಶಾಹಿಯ ಒಂದು ಕಾರ್ಯಾಚರಣೆಯೂ ಹೌದು. ಹಾಗಾಗಿ ಇದಕ್ಕೆ ಗಾಂಧಿಯನ್ನು ಇವೊತ್ತಿನ ಸಂದರ್ಭಕ್ಕೆ ಒಗ್ಗಿಸಿ ಜನರ ಮಧ್ಯೆ ತರುವುದೇ ಅತ್ಯಂತ ಪರಿಣಾಮಕಾರಿ ಮಾರ್ಗ ಎಂದು ನಾನು ಭಾವಿಸಿದ್ದೇನೆ. ಗಾಂಧಿವಾದಿಗಳೆಂದು ಹೇಳಿಕೊಳ್ಳುವವರ ಸಮಾವೇಶವೊಂದರಲ್ಲಿ ಈ ಹಿಂದೆ ನಾನು ಆಡಿದ್ದ ಒಂದು ಮಾತನ್ನು ಇಲ್ಲಿ ಮತ್ತೆ ಹೇಳಬಯಸುತ್ತೇನೆ: ಎಲ್ಲಿವರೆಗೆ ಗಾಂಧಿಯನ್ನು ಎಡಪಂಥೀಯ ಎಂದು ಪರಿಗಣಿಸುವ ಪ್ರಜ್ಞೆ ನಿಮಗೆ ಉಂಟಾಗುವುದಿಲ್ಲವೋ ಅಲ್ಲಿಯವರೆಗೆ ನಿಮಗೆ ಇಂದಿನ ರೀತಿಯ ನಿರ್ಮಮ ಬಲಪಂಥೀಯತೆಯ ಸವಾಲುಗಳಿಂದ ಮುಕ್ತಿ ಇಲ್ಲ. ಮುಖ್ಯವಾಗಿ ಗಾಂಧಿ ಹಿಡಿದಂತೆ ಇಂದು ಜನರ ನಾಡಿಮಿಡಿತವನ್ನು ಹಿಡಿಯಬೇಕು. ಅಪ್ರಿಯ ಸತ್ಯಗಳನ್ನೂ ಹೇಳುವ ಧೈರ್ಯ ವಹಿಸಬೇಕು. ಅವರ ನುಡಿಗಟ್ಟಿನಲ್ಲಿ ಮಾತಾಡಬೇಕು. ದೂರದ ಮಾತೆನ್ನಿಸಬಹುದು: ನಮ್ಮ ಇಂಗ್ಲಿಷ್ ಮಾಧ್ಯಮದ ವ್ಯಾಮೋಹ ಈ ವಿಷಯದಲ್ಲಿ ನಮಗೆ ದೊಡ್ಡ ತೊಡಕಾಗಿದೆ.

ಪ್ರಶ್ನೆ: 'ಹೊಸ ಮನುಷ್ಯ' ಒಂದು ಕಿರುಪತ್ರಿಕೆಯ ಸಂಪಾದಕರಾಗಿ ಅಥವಾ ಪರ್ಯಾಯ ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡ ನಿಮಗೆ ನೀವು ಎದುರಿಸಿದ ಸವಾಲಿನ ಸ್ವರೂಪ ಏನು?

ನಾಗಭೂಷಣ: ನನಗೆ ನನ್ನ ವಿಚಾರ ಹೇಳಿಕೊಳ್ಳಲು ವೇದಿಕೆಯೇ ಇರಲಿಲ್ಲ. ವಿಶ್ವವಿದ್ಯಾಲಯದ ಗುಂಪುಗಳ ರಾಜಕಾರಣದ ಮಧ್ಯೆ ನಾನು ಕಳೆದುಹೋಗುವ ಆತಂಕದಲ್ಲಿದ್ದೆ. ಏಕೆಂದರೆ ಈ ರಾಜಕಾರಣ ತನ್ನ ಏಜೆಂಟರುಗಳ ಮೂಲಕ ನಮ್ಮ ಮಾಧ್ಯಮ ಪ್ರಪಂಚಕ್ಕೂ ಹಬ್ಬಿತ್ತು. ನನ್ನ ವಿಚಾರಗಳನ್ನು ಹಂಚಿಕೊಳ್ಳಲು ಅವಕಾಶವು ಇರಲಿಲ್ಲ. ಆದರೆ ನಾನೊಬ್ಬ ಸಾಹಿತಿ ಮತ್ತು ನನಗೆ ಮುಖ್ಯವಾದುದನ್ನು ಹೇಳುವ ಸಾಮರ್ಥ್ಯವಿದೆ ಎಂದು ನಾನು ನಂಬಿದ್ದೆ. ದೇವನೂರು ಮಹಾದೇವ, ಕೆ.ಎಂ.ಶಂಕರಪ್ಪ, ಕಿಶನ್ ಪಟ್ನಾಯಕ್ ತರಹದವರು ನನ್ನ ವಿಚಾರಶೀಲತೆಯ ಅನನ್ಯತೆಯನ್ನು ಗುರುತಿಸಿದ್ದರು ಎಂದು ನನ್ನ ಭಾವನೆ. ನನ್ನ ಪ್ರಗತಿಪರತೆಯ–ಅದನ್ನು ಹಾಗೆ ಕರೆಯಲೇ ಬೇಕಾದರೆ– ರೂಪವೇ ಬೇರೆ ಇತ್ತು. ನಾನೊಬ್ಬ ಗಾಂಧಿಯನ್ ಸಮಾಜವಾದಿ. ಇತ್ತೀಚೆಗಂತೂ ಲೋಹಿಯಾರಿಗಿಂತಲೂ ಹೆಚ್ಚು ಒಲವು ಗಾಂಧಿಯತ್ತ. ಇಲ್ಲಿಯೇ,

ಈ ಬಗ್ಗೆ ಮಾತಾಡುತ್ತಿದ್ದಾಗ ಮರೆತ ಒಂದು ಮಾತು ಹೇಳಬೇಕು. ಲೋಹಿಯಾರ ಒಂದು ಮಾತಿದೆ. 'Truth is either whole or not at all. Partial truth is an error of expression' ಅಂತ. ಇದು ನೆನಪಿಗೆ ಬಂದಾಗಲೆಲ್ಲ ಈ ಎಡ ಮತ್ತು ಬಲಪಂಥೀಯರದ್ದೆಲ್ಲ error of expression ಅನ್ನಿಸುತ್ತದೆ! ಏಕೆಂದರೆ ಅವರದ್ದು ಎಡ ಅಥವಾ ಬಲದ ದೃಷ್ಟಿಕೋನ ಎಂದು ಸ್ವಘೋಷಿತವಾಗಿದೆಯಲ್ಲ? ಇಲ್ಲಿ ಲೋಹಿಯಾ ಪರವಾಗಿ ಹೇಳಬಹುದಾದ ಒಂದು ಮಾತೆಂದರೆ ಒಮ್ಮೊಮ್ಮೆ ಎಡಪಂಥೀಯರಿಗೆ ಅವರು ಬಲಪಂಥೀಯರಾಗಿಯೂ, ಬಲಪಂಥೀಯರಿಗೆ ಎಡಪಂಥೀಯರಾಗಿಯೂ ಕಾಣುತ್ತಿದ್ದರು! ಇದಕ್ಕೆ ಮುಖ್ಯ ಕಾರಣ, ಈ ಎರಡೂ ಪಂಥೀಯರೂ ಕ್ರಾಂತಿಕಾರಿಯಾಗಿ ಕಾಣುವ ಯಂತ್ರ ನಾಗರೀಕತೆ ಸೃಷ್ಟಿಸುವ ಏಕರೂಪಿ ಮನಸ್ಸು (monotonic mind) ಉಂಟು ಮಾಡುವ ಪ್ರಜಾಪ್ರಭುತ್ವದ ವಿರೂಪ ಮತ್ತು ಅಂತ್ಯವನ್ನು ಕಂಡಿದ್ದರು. ಇಂತಹ ಗಾಂಧಿಯ ಅಸಲಿ ಶಿಷ್ಯತ್ವ ಗುಣದ ಮೂಲಕವೇ ಸ್ವತಃ ಲೋಹಿಯಾ ಅವರೆ ನನ್ನನ್ನು ಗಾಂಧಿಯತ್ತ ಕರೆದೊಯ್ದರೆಂದು ನಾನು ಭಾವಿಸುತ್ತೇನೆ

ಪ್ರಶ್ನೆ: ಸರ್ ನೀವು ಅನಾರ್ಕಿಸ್ಟಾ?

ನಾಗಭೂಷಣ: ಗಾಂಧಿಯನ್ನು ನೀವು ಅನಾರ್ಕಿಸ್ಟ್ ಎನ್ನುವುದಾದರೆ ನಾನೂ ಕೂಡಾ ಅನಾರ್ಕಿಸ್ಟ್! ಅನಾರ್ಕಿಸ್ಟ್ ಎಂಬುದನ್ನು ಇಲ್ಲಿ ನಾನು ಪಾಸಿಟಿವ್ ಆಯಾಮದಲ್ಲಿ ಹೇಳುತ್ತಿದ್ದೇನೆ. ಅನಾರ್ಕಿಸ್ಟ್ ಎಂದರೆ ಅರಾಜಕತಾವಾದಿ ಎಂದಲ್ಲ. ಅದರ ನಿಜವಾದ ಅರ್ಥ ಅನಧಿಪತ್ಯವಾದಿ ಎಂದು.

ಪ್ರಶ್ನೆ: ಸರ್, ನಿಮ್ಮೆಲ್ಲ ಬರಹಗಳಲ್ಲಿ ಒಂದು ರೀತಿಯ ಪ್ರಖರತೆ, ಮೊನಚು, ಖಚಿತತೆ ಇರುವ ಹಾಗೆ ವ್ಯಂಗ್ಯ ಹಾಗೂ ಕಹಿ ಕೂಡಾ ಇದೆ. ಶತ್ರುಗಳನ್ನು ಕಲ್ಪಿಸಿಕೊಂಡು ಬರೆಯುತ್ತೀರಿ. ಯು.ಆರ್ ಅನಂತಮೂರ್ತಿಯವರು ಒಮ್ಮೆ ನಿಮ್ಮ ಬರಹಗಳಲ್ಲಿ ಕಷಾಯದ ಗುಣ ಇದೆ ಎಂದು ಹೇಳಿದ್ದರು. ನಿಮಗೆ ಎಂದಾದರೂ ಈ ವ್ಯಂಗ್ಯ ಮತ್ತು ಕಲ್ಪಿತ ಶತ್ರುಗಳನ್ನು ಹೊರತುಪಡಿಸಿ ಬರೆಯಬೇಕು; ಇದು ನನ್ನ ಪರಿಕರ ಅಲ್ಲ ಎಂದೆನಿಸಿದೆಯೇ?

ನಾಗಭೂಷಣ: ಮೊದಲಿಗೆ ಎರಡು ಸ್ಪಷ್ಟನೆಗಳು. ಒಂದು ಕಷಾಯ ಗುಣ ಅಂದರೆ ಟೀಕೆಯ ಮಾತೇನಲ್ಲ. ಅನಂತಮೂರ್ತಿಯವರು ಹಾಗೆ ಹೇಳಿರಲು ಅವರಿಗೂ ನಾನು ಒಂದೆರಡು ಬಾರಿ ನನ್ನ ಸಾಹಿತ್ಯ ಕಷಾಯ ಕುಡಿಸಿದ ಕಾರಣವಿರಬಹುದು. ಇನ್ನು ವ್ಯಂಗ್ಯ ನನ್ನ ಸಾಹಿತ್ಯದ ಒಂದು ಪರಿಕರವೇ ಹೊರತು ಅದೇ ಎಲ್ಲ ಅಲ್ಲ. ಲಂಕೇಶರಲ್ಲಿ ವ್ಯಂಗ್ಯವೇನು ಕಡಿಮೆ ಇತ್ತೆ? ಇರಲಿ, ಈಗ ನೋಡಿ ಇದು ಬಹಳ ವೈಯಕ್ತಿಕ ಮತ್ತು ಮುಖ್ಯವಾದ ಪ್ರಶ್ನೆ. ನಾನು ಸಾಹಿತ್ಯ ವಲಯದಲ್ಲಿ ತುಂಬಾ ಕಹಿಯನ್ನು ಅನುಭವಿಸಿದ್ದೇನೆ. ಆರಂಭದಲ್ಲಿ ನನ್ನ ಅಭಿವ್ಯಕ್ತಿಯನ್ನು ಹತ್ತಿಕ್ಕುವ ಪ್ರಯತ್ನ ಹಲವರಿಂದ ನಡೆಯುತ್ತಿತ್ತು. ಅದು ನನಗೆ ಮಾತ್ರ ಗೊತ್ತು. ನನಗೆ ಕಲ್ಪಿತ ಶತ್ರುಗಳ

ಅಗತ್ಯವೇನೂ ಇರಲಿಲ್ಲ, ನಿಜವಾದ ಶತ್ರುಗಳೇ ಇದ್ದರು. ಹಾಗಾಗಿ ವ್ಯಂಗ್ಯದ ಮೊರೆ ಹೋಗುತ್ತಿದ್ದೆ. ಆದರೆ ಆತ್ಮ ವಿಶ್ವಾಸ ಕುದುರಿದ ಇತ್ತೀಚಿನ ವರುಷಗಳಲ್ಲಿ ನಾನು ವ್ಯಂಗ್ಯವನ್ನು ಬಿಟ್ಟಿದ್ದೇನೆ. ಚುರುಕುತನಕ್ಕೆ ವ್ಯಂಗ್ಯ ಬಳಸುತ್ತೇನೆಯೇ ಹೊರತು ವೈಯಕ್ತಿಕ ನೆಲೆಯಲ್ಲಿ ಅಲ್ಲ. ಮೊನಚು ನನ್ನ ಬರಹದಲ್ಲಿ ಇನ್ನೂ ಇದೆ. 'ಹೊಸ ಮನುಷ್ಯ'ದ ನನ್ನ ಸಂಪಾದಕೀಯ ಮತ್ತು ಬಿಡಿ ಟಿಪ್ಪಣಿಗಳಿಗೆ ಬರುವ ಪ್ರತಿಕ್ರಿಯೆಗಳನ್ನು ನೋಡಿದರೆ ಇದು ಗೊತ್ತಾಗುತ್ತದೆ.

ನನ್ನದು ಒಂಟಿ ಧ್ವನಿ. ಆದ್ದರಿಂದ ಅದು ಅಗತ್ಯವೂ ಹೌದು. ನನ್ನ ಪತ್ರಿಕೆಯ ಮೂಲಕ ನನ್ನ ಧ್ವನಿ ಕರ್ನಾಟಕದಲ್ಲಿ ಕೇಳುತ್ತಿದೆ ಎಂದು ಭಾವಿಸಿದ್ದೇನೆ. ನನಗೆ ಅನೇಕ ಶತ್ರುಗಳ ಜೊತೆಗೆ ಅಪಾರ ಸಂಖ್ಯೆಯ ಮಿತ್ರರೂ ಇದ್ದಾರೆ. ಪತ್ರಿಕೆಗೆ ಮನ್ನಣೆ ಇದೆ. ಕರ್ನಾಟಕದ ಅತ್ಯುತ್ತಮ ಮನಸ್ಸುಗಳು ಇಂದು ನಮ್ಮ ಪತ್ರಿಕೆಯನ್ನು ಓದುತ್ತಿದ್ದಾರೆ ಮತ್ತು ಅದರಲ್ಲಿ ಬರೆಯುತ್ತಿದ್ದಾರೆ.

ಪ್ರಶ್ನೆ: ಕೊನೆಯದಾಗಿ, ನಿಮ್ಮ 'ಗಾಂಧಿ ಕಥನ' ಪುಸ್ತಕ ಜನಮನ್ನಣೆ ಗಳಿಸಿದೆ. ಆದರೆ ಅದರಲ್ಲಿ ವಿಮರ್ಶೆ ಕಡಿಮೆ ಇದೆ. ಒಂದು ರೀತಿಯ ನ್ಯೂಟ್ರಲ್ ನೆಲೆಯಿಂದ ಗಾಂಧಿಯ ಕಥನವನ್ನು ನಿರೂಪಿಸಿದ್ದೀರಿ. ಏಕೆ ಹೀಗೆ? ಅದರ ಅಗತ್ಯವೇನಿತ್ತು?

ನಾಗಭೂಷಣ: ಗಾಂಧಿಯಷ್ಟು ವಿಮರ್ಶೆಗೆ ಒಳಗಾದ ಮತ್ತೊಬ್ಬ ಮನುಷ್ಯನಿಲ್ಲ. ಈಗಂತೂ ಒಂದು ವ್ಯವಸ್ಥಿತ ಗುಂಪೇ ಅದಕ್ಕೆ ನಿಯೋಜನೆಗೊಂಡಂತಿದೆ. ಇದಕ್ಕೆಲ್ಲ ಉತ್ತರ ಕೊಡುವುದು ಇವರಿಗೆಲ್ಲ ಸಲ್ಲದ ಮಾನ್ಯತೆ ಕೊಟ್ಟಂತಾಗುತ್ತದೆ. ಹಾಗಾಗಿ ನಾನು ಗಾಂಧಿಯನ್ನು ವಿಮರ್ಶೆಗೆ ಒಳಪಡಿಸಿದರೆ ಅವರನ್ನು ಯಾವ ನೆಲೆಯಲ್ಲಿ ವಿಮರ್ಶಿಸಬೇಕು ಎಂಬ ಪ್ರಶ್ನೆ ಇದೆ. ಏಕೆಂದರೆ ಗಾಂಧಿ ಭೂಮಿಯಷ್ಟೇ ಸಮಗ್ರನಾದ ಮನುಷ್ಯ. ಹಾಗಾಗಿ ಇಂದಿನ ಪರಿಸ್ಥಿತಿಯಲ್ಲಿ ಅವರನ್ನು ಅವರಿದ್ದ ಹಾಗೆ ಸಮಗ್ರವಾಗಿ ಜನರ ಮುಂದೆ ಇಟ್ಟು ಜನವೇ ತೀರ್ಮಾನಿಸಲಿ ಎಂದು ಬಿಟ್ಟಿದ್ದೇನೆ. ಸತ್ಯ ಎಂದರೆ ನಮ್ಮ ಬಹಳಷ್ಟು ಜನಕ್ಕೆ ಗಾಂಧಿಯ ಶೇ. ೧೦ರಷ್ಟು ಪರಿಚಯವೂ ಇರಲಿಲ್ಲ ಎಂಬುದು ಈ ಕೃತಿಯನ್ನು ಓದಿದ ಜನ ನನಗೆ ಕರೆ ಮಾಡಿ ಹೇಳುತ್ತಿರುವುದರಿಂದ ಗೊತ್ತಾಗುತ್ತಿದೆ. ಗಾಂಧಿಯ ಸತ್ಯ ತಿಳಿಯುವುದೆಂದರೆ ಅವರನ್ನು ಹೆಚ್ಚೆಚ್ಚು ಓದಿ ತಿಳಿಯುವುದು. ಇಲ್ಲಿ ಹೇಳಬೇಕಾದ ಮುಖ್ಯ ಮಾತೆಂದರೆ, ಗಾಂಧಿಯನ್ನು ವಿಮರ್ಶಿಸಲು ನಾನು ಯಾರು, ಎಷ್ಟರವನು? ಎಂಬುದು.

ಅವಿನಾಶ್: ಇಷ್ಟು ಮಾತಾಡಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ನಮಸ್ಕಾರಗಳು ಸಾರ್.

ನಾಗಭೂಷಣ: ನಿಮಗೂ ಕೂಡ,

ಭಾಗ–೪

ಕೆಲ ಶ್ರದ್ಧಾಂಜಲಿ ಬರಹಗಳು

ರಾಜಕೀಯ ಮುತ್ಸದ್ದಿ ವಾಕ್ಚತುರ ವಾಜಪೇಯಿ

ನಮ್ಮ ಜನಪ್ರಿಯ ಮಾಜಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಇನ್ನಿಲ್ಲ. ಕಳೆದ ಹತ್ತು ಹನ್ನೆರಡು ವರ್ಷಗಳಿಂದಲೇ ಅವರು ಅಸ್ವಸ್ಥರಾಗಿದ್ದು ಸಾರ್ವಜನಿಕ ಜೀವನದಲ್ಲಿ ಸಂಪೂರ್ಣ ನಿಷ್ಕ್ರಿಯರೇ ಆಗಿದ್ದು ಈಗ ಕೊನೆಯುಸಿರೆಳೆದು ಸುದ್ದಿಗೆ ವಸ್ತುವಾಗಿದ್ದಾರೆ. ಅವರಿಗೆ ಪತ್ರಿಕೆ ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸಬಯಸುತ್ತದೆ.

ವಾಜಪೇಯಿಯವರ ಸಾರ್ವಜನಿಕ ವ್ಯಕ್ತಿತ್ವ ಮತ್ತು ರಾಜಕೀಯ ವರ್ತನೆಗಳನ್ನು ಕಂಡ ರಾಜಕೀಯ ವಿಶ್ಲೇಷಕರು ಅವರನ್ನು ಅವರ ರಾಜಕೀಯ ಜೀವನದ ಸಮಕಾಲೀನರೇ ಆಗಿದ್ದ ಪಿ.ವಿ. ನರಸಿಂಹರಾವ್ ಅವರಿಗೆ ಹೋಲಿಸಿ, 'ನರಸಿಂಹರಾವ್ ಕಾಂಗ್ರೆಸ್ಸಿನೊಳಗಿನ ಅತ್ಯುತ್ತಮ ಬಿಜೆಪಿ ಮನುಷ್ಯರಾದರೆ ವಾಜಪೇಯಿ ಬಿಜೆಪಿಯೊಳಗಿನ ಅತ್ಯುತ್ತಮ ಕಾಂಗ್ರೆಸ್ಸಿಗ' ಎಂದು ನಗೆಚಾಟಿ ಹಾರಿಸುತ್ತಿದ್ದುದುಂಟು.. ಈ ವಾರೆ ನೋಟದ ಚಿತ್ರದ ಪ್ರಕಾರ ವಾಜಪೇಯಿ ಅವರನ್ನು 'ಕಳಚಿಕೊಂಡ ನೆಹ್ರೂ ಪರಂಪರೆಯ ಕೊನೆಯ ಕೊಂಡಿ' ಎಂದೂ ಕರೆಯಬಹುದು. ಆದರೆ ಈ ವರ್ಣನೆ ರಾಷ್ಟ್ರ ಇಂದು ಎದುರಿಸುತ್ತಿರುವ ಎಲ್ಲ ಸಂಕಷ್ಟಗಳಿಗೆ ನೆಹರೂ ರಾಜಕಾರಣವೇ ಹೊಣೆಯೆಂದು ಪ್ರತಿಪಾದಿಸುತ್ತಿರುವ ಪ್ರಸಕ್ತ ಬಿಜೆಪಿ ನಾಯಕರಿಗೆ ಅಷ್ಟು ರುಚಿಸಲಾರದು. ಇದು ನಮ್ಮ ರಾಜಕಾರಣದ ದಿಕ್ಕುದೆಸೆಗಳು ಕಳೆದ ಒಂದು ದಶಕದಲ್ಲಿ ನಿರ್ಣಾಯಕವಾಗಿ ಬದಲಾಗಿರುವುದರ ಸೂಚನೆಯೇ ಆಗಿದೆ. ನೆಹ್ರೂ ನಿಧನರಾದಾಗ ತಮಗಾದ ದುಃಖವನ್ನು ವಾಜಪೇಯಿಯವರು ಎಷ್ಟು ತೀವ್ರ ಕಾವ್ಯ ಸಂವೇದನೆಯೊಂದಿಗೆ – ವ್ಯಕ್ತಪಡಿಸಿದ್ದರೆಂದರೆ ಅದು ಈಗಾಗಲೇ ಹಲವೆಡೆ ಉಲ್ಲೇಖಗೊಂಡಿದೆ–ಅಂತಹುದನ್ನು ಈಗ ಯಾವ ಸಾರ್ವಜನಿಕ ವ್ಯಕ್ತಿಯ ವಿಯೋಗದಲ್ಲೂ ನಾವು ನಿರೀಕ್ಷಿಸಲಾಗದು. ಬಹುತೇಕ ರಾಜಕಾರಣಿಗಳು ಈಗ ಕಟ್ಟಿಗೆ–ಕಬ್ಬಿಣವಾಗಿ ಹೋಗಿದ್ದಾರೆ. ಏಕೆಂದರೆ ರಾಜಕಾರಣವೆಂದರೆ ಇಂದು ಗೆದ್ದವರು ಎಲ್ಲವನ್ನೂ ದೋಚುವ, ಮೆರೆಯುವ ಸ್ಪರ್ಧಾತ್ಮಕ ಆಟವಾಗಿ ಹೋಗಿದೆ. ಚುನಾವಣೆಯ ಗೆಲುವೇ ರಾಜಕಾರಣದ

ಸರ್ವಸ್ವವಾಗಿದೆ. ಹಾಗಾಗಿ ಇಂದು ರಾಜಕಾರಣದಲ್ಲಿ ಗೆಲ್ಲಲು ಹೃದಯವಂತಿಕೆ ಅಡ್ಡಿಯಾಗಿ ಮನುಷ್ಯ ಹೆಚ್ಚು ಕಟ್ಟಿಗೆ-ಕಬ್ಬಿಣವಾಗುವುದು ಅವಶ್ಯವಾಗಿದೆ.

ಅಂದ ಮಾತ್ರಕ್ಕೆ ಜಪೇಯಿಯವರು ಸ್ಪರ್ಧಾತ್ಮಕ ರಾಜಕಾರಣದಲ್ಲಿ ಇರಲಿಲ್ಲ ಎಂದಲ್ಲ. ಅವರು ಹನ್ನೆರಡು ಬಾರಿ ಸಂಸತ್ ಸದಸ್ಯರಾಗಿದ್ದರು, ಹತ್ತು ಬಾರಿ ಜನರಿಂದ ನೇರವಾಗಿ ಲೋಕಸಭೆಗೆ ಆಯ್ಕೆಯಾಗಿದ್ದರು. ಒಮ್ಮೆ ಮಾತ್ರ ಸೋಲನ್ನು ಕಂಡಿದ್ದರು. ಚತುರ ಮಾತುಗಾರರಾಗಿದ್ದ ಅವರು-ಈ ಮಾತಿನ ಬೆಡಗೇ ಅವರ ಕೆಲವು ಅಭಿಮಾನಿಗಳು ಅವರನ್ನು ಕವಿ ಎಂದು ನಂಬುವಂತೆ ಮಾಡಿದ್ದುದೂ ಸಹ-ಹಲವು ಬಾರಿ ಈ ಮಾತಿನ ಚಾತುರ್ಯವನ್ನೇ ತಮ್ಮ ದ್ವಂದ್ವ ರಾಜಕೀಯ ನಿಲುವುಗಳನ್ನು ಮರೆಮಾಚಿಕೊಳ್ಳಲು ಬಳಸುತ್ತಿದ್ದುದುಂಟು. ಉದಾಹರಣೆಗೆ, ತೊಂಬತ್ತರ ದಶಕದ ಹಿಂದುತ್ವದ ಜ್ವರ ಏರಿಕೆ ಮತ್ತು ರಥಯಾತ್ರೆಗಳ ದಾರಿಗುಂಟ ಆ ಬಗ್ಗೆ ಒಂದೂ ಪ್ರತಿಕೂಲ ಮಾತಾಡದ ಅವರು ಅದರ ತಾರ್ಕಿಕ ಅಂತ್ಯವಾದ ಬಾಬ್ರಿ ಮಸೀದಿ ನಾಶ ಪ್ರಕರಣದಿಂದ ತಮ್ಮನ್ನು ದೂರವಿರಿಸಿಕೊಳ್ಳಲು ಪ್ರಯತ್ನಿಸಿದ್ದು ಮತ್ತು ೨೦೦೨ರ ಗುಜರಾತ್ ಹತ್ಯಾಕಾಂಡದಿಂದ ನೊಂದುಹೋದವರಂತೆ 'ರಾಜಧರ್ಮ'ದ ಪಾಲನೆಯ ಮಾತಾಡಿ ಆಗಿನ ಆ ರಾಜ್ಯದ ಮುಖ್ಯಮಂತ್ರಿ ನರೇಂದ್ರಮೋದಿಯವರನ್ನು ಪದಚ್ಯುತಗೊಳಿಸುವ ಖಚಿತ ಸೂಚನೆ ನೀಡಿ ಅನಂತರದ ಒಂದೆರಡು ದಿನಗಳಲ್ಲೇ ಉಲ್ಟಾ ಹೊಡೆದದ್ದು.

ಆಗೆಲ್ಲ ವಾಜಪೇಯಿ ತಮ್ಮ ಈ ಉಲ್ಟಾ ರಾಜಕಾರಣಕ್ಕೆ ಬಲಿಪಶು ಮಾಡಿಕೊಂಡಿದ್ದು ನೇರ ನಡೆ ನುಡಿಗಳ ಗೆಳೆಯ ಅಡ್ವಾಣಿಯವರನ್ನು. ಹಾಗೆಂದೇ ಬಿಜೆಪಿಯ ಆಗಿನ ಹಿರಿಯ ಬೌದ್ಧಿಕ ನಾಯಕ ಗೋವಿಂದಾಚಾರ್ಯರು ವಾಜಪೇಯಿಯವರನ್ನು ಬಿಜೆಪಿಯ 'ಮುಖವಾಡ 'ಎಂದು ಕರೆದದ್ದು. ಅದೇನೇ ಇರಲಿ, ಇದನ್ನೆಲ್ಲ ತಮ್ಮ ಗೆಳೆಯನಿಗಾಗಿ ಸಹಿಸಿದ ಅಡ್ವಾಣಿಯವರು ಆಗ ವಹಿಸಿದ ಮೌನಕ್ಕೆ ಈಗ ಬೆಲೆ ತೆರುತ್ತಿರುವಂತಿದೆ.

ಈಗ ಜನಪ್ರಿಯ ಮಾಧ್ಯಮಗಳಲ್ಲಿ ಬಿಂಬಿಸಲಾಗುತ್ತಿರುವಂತೆ, ವಾಜಪೇಯಿ ಪ್ರಧಾನ ಮಂತ್ರಿ ಆಗಿದ್ದ ಕಾಲಾವಧಿಯಲ್ಲೇನೂ ದೇಶದಲ್ಲಿ ಹಾಲು-ಜೇನು ಹರಿಯಲಿಲ್ಲ. ಆಗಲೇ ಕಂದಹಾರ್ ವಿಮಾನ ಅಪಹರಣ ನಡೆದು ಅದನ್ನು ಅವರ ಸರ್ಕಾರ ಸಮರ್ಥವಾಗಿ ನಿರ್ವಹಿಸಲಾಗದೆ ಪಾಕಿಸ್ತಾನದ ಇಬ್ಬರು ಕುಪ್ರಸಿದ್ಧ ಭಯೋತ್ಪಾದಕ ನಾಯಕರನ್ನು ಬಿಡುಗಡೆಗೊಳಿಸಬೇಕಾದ ಮುಜುಗರದ ಸಂದರ್ಭ ಉಂಟಾಯಿತು. ಬಿಡುಗಡೆಯಾದ ಈ ನಾಯಕರೇ ಇಂದು ಪ್ರಧಾನವಾಗಿ ನಮ್ಮ ದೇಶದ ವಿರುದ್ಧದ ಭಯೋತ್ಪಾದನೆಯನ್ನು ಈಗಲೂ ಸಂಘಟಿಸುತ್ತಿರುವುದು. ಕಾರ್ಗಿಲ್ ಯುದ್ಧದ ಬಗ್ಗೆ ಮುನ್ನೆಚ್ಚರ ವಹಿಸದಿದ್ದುದು, ತಮ್ಮ ಸಾಕುಮಗಳ ಕುಟುಂಬ ಮತ್ತು ಸರ್ಕಾರದ ರಕ್ಷಣಾ ಮತ್ತು ಟೆಲಿಕಾಂ ಖಾತೆಗಳ ಹಗರಣಗಳ ಬಗ್ಗೆ ಬರೆದ ಪತ್ರಿಕೆಗಳ ಮಾಲಿಕರ ವಿರುದ್ಧ ಬೆದರಿಕೆಯ ಕಾರ್ಯಚರಣೆಗಳು ನಡೆಸಿದ್ದು ಇತ್ಯಾದಿಗಳು ಈಗ ಮರೆತುಹೋಗಿವೆಯಷ್ಟೆ. ಇವೆಲ್ಲ ಸೇರಿಯೇ ಅವರ 'ಭಾರತವೀಗ ಹೊಳೆಯುತ್ತಿದೆ' ಎಂಬ ಪ್ರಚಾರಾಂದೋಲನದ

ಹೊರತಾಗಿಯೂ ೨೦೧೪ರ ಚುನಾವಣೆಗಳಲ್ಲಿ ಅವರ ಸರ್ಕಾರ ಸೋತುಹೋದದ್ದು. ಆದರೂ ಅವರನ್ನು ನಾವೀಗ ಹಿತವಾಗಿ ನೆನಪಿಸಿಕೊಳ್ಳಲು ಮುಖ್ಯವಾಗಿ ಎರಡು ಕಾರಣಗಳಿವೆ ಎನಿಸುತ್ತದೆ. ಒಂದು, ಅವರು ಎಲ್ಲ ಸಾಮಾನ್ಯ ಮನುಷ್ಯರಂತೆ ಜೀವನದ ಎಲ್ಲ ಲಭ್ಯ ಆನಂದಗಳನ್ನೂ ಸವಿಯಬಲ್ಲ ರಸಿಕರಾಗಿ ಮಾನವ ಮಾರ್ದವತೆಯನ್ನು ಉಳಿಸಿಕೊಂಡಿದ್ದರು. ಹಾಗಾಗಿಯೇ ಅವರು 'ಅಜಾತಶತ್ರು' ಎಂದು ಹೆಸರಾದರು. ಅವರ ಈ ಗುಣವೇ ಅವರು ದಾಖಲೆಯ ಇಪ್ಪತ್ನಾಲ್ಕು ಪಕ್ಷಗಳ ಸಮ್ಮಿಶ್ರ ಸರ್ಕಾರವನ್ನು ಐದು ವರ್ಷಗಳ ಕಾಲ ಸುಗಮವಾಗಿ ನಡೆಸಿಕೊಂಡು ಹೋಗಲು ನೆರವಾದದ್ದು. ಇನ್ನೊಂದು ಕಾರಣ, ರಸಿಕತೆ ಇರಲಿ, ರಾಜಕಾರಣದ ಹೊರತಾಗಿ ಮನುಷ್ಯ ಬದುಕಿನ ಇನ್ನಾವ ಚಟುವಟಿಕೆಗಳಲ್ಲೂ ಆಸಕ್ತಿ ತೋರದ ಇಂದಿನ ಪ್ರಭುಗಳ ಭಯಾನಕ ಮರದ ದಿಮ್ಮಿಯಂತಹ ವ್ಯಕ್ತಿತ್ವ. ಹಾಗಾಗಿ ವಾಜಪಾಯಿ ಇಂತಹ ಪ್ರಭುಗಳ ನಿರ್ಗಮನದವರೆಗಾದರೂ ನಮ್ಮ ಮನಸ್ಸಿನಲ್ಲಿ ಜೀವಂತವಾಗಿರುತ್ತಾರೆ. ವಿಶೇಷವಾಗಿ ಅವರ ರಸಿಕತೆಯ ದ್ಯೋತಕವಾದ ಈ ಮಾತು : 'ನಾನು ಅವಿವಾಹಿತನೇ ಹೊರತು ಬ್ರಹ್ಮಚಾರಿಯಲ್ಲ!'

(ಸೆಪ್ಟಂಬರ್, ೨೦೧೮ರ 'ಹೊಸ ಮನುಷ್ಯ')

ಕಪ್ಪು ಕನ್ನಡಕದ ಕರುಣಾನಿಧಿ

ಇತ್ತೀಚೆಗೆ ನಮ್ಮನ್ನಗಲಿದ ಇನ್ನೊಬ್ಬ ಪೂರ್ವ ಸಾರ್ವಜನಿಕ ನಾಯಕರೆಂದರೆ ಮುತ್ತುವೇಲು ಕರುಣಾನಿಧಿ. ಕಳೆದ ಅರವತ್ತು ವರ್ಷಗಳ ಕಾಲ ನೆರೆಯ ತಮಿಳ್ನಾಡಿನ ರಾಜಕಾರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತಾ ಬಂದು ಅದರ ಸ್ವರೂಪ ಮತ್ತು ಖದರನ್ನೇ ಬದಲಿಸಿದ ಮೂರ್ನಾಲ್ಕು ಜನ ನಾಯಕರಲ್ಲಿ ಇವರು ಪ್ರಮುಖರು. ಇತರರೆಂದರೆ ಪೆರಿಯಾರ್ ರಾಮಸ್ವಾಮಿ ನಾಯಕರ್, ಸಿ.ಎನ್ ಅಣ್ಣಾದುರೈ, ಎಂಜಿ. ರಾಮಚಂದ್ರನ್ ಮತ್ತು ಜೆ. ಜಯಲಲಿತಾ. ಉತ್ತರ ಭಾರತದ ಸಾಂಸ್ಕೃತಿಕ ಮತ್ತು ರಾಜಕೀಯ ಯಜಮಾನಿಕೆಯ ವಿರುದ್ಧ ಬಂಡೆದ್ದು ಹುಟ್ಟಿದ ದ್ರಾವಿಡ ಚಳುವಳಿಯ ಉತ್ಪನ್ನಗಳಲ್ಲಿ ಬಹುಕಾಲ ಬಾಳಿದ ಈ ನಾಯಕನ ಸಾವು ರಾಜ್ಯದ ರಾಜಕಾರಣವನ್ನು ಮತ್ತೆ ನಿರ್ಣಾಯಕವಾಗಿ ಬದಲಿಸುವ ಎಲ್ಲ ಸೂಚನೆಗಳು ಅವರ ಅಂತ್ಯಕಾಲದ ಸ್ವಲ್ಪ ಮೊದಲಲ್ಲೇ ಕಾಣತೊಡಗಿವೆ. ಶಿವಾಜಿ ಗಣೇಶನ್‌ರ ವಿಫಲ ಪ್ರಯತ್ನದ ನಂತರ ಕಮಲ ಹಾಸನ್ ಮತ್ತು ರಜನೀಕಾಂತ್ ಅವರ ರಾಜಕೀಯ ಪ್ರವೇಶವೇ ಈ ಸೂಚನೆಗಳು. ಈ ಅರ್ಥದಲ್ಲಿ ಕರುಣಾನಿಧಿ ರಾಜ್ಯ ರಾಜಕಾರಣದ ಮಟ್ಟಿಗಾದರೂ ಒಂದು ಯುಗದ ನಾಯಕನೆಂದು ಹೇಳಬಹುದು.

ಈ ಮೇಲೆ ರಾಜ್ಯ ರಾಜಕಾರಣದ ಮಟ್ಟಿಗಾದರೂ ಎಂದು ಹೇಳಲು ಕಾರಣವಿದೆ. ಅದೆಂದರೆ ಅವರು ವ್ಯಾವಹಾರಿಕ ರಾಜಕಾರಣದಲ್ಲಿ ಮಾಡಿದ ಸಾಧನೆಯನ್ನು ಅವರ ಸಾರ್ವಜನಿಕ ಜೀವನ ಪ್ರವೇಶದ ಮೂಲ ಉದ್ದೇಶವಾದ ಜನಸಮೂಹದಲ್ಲಿ ಯಜಮಾನ ಸಂಸ್ಕೃತಿಯ ವಿರುದ್ಧ ವೈಚಾರಿಕತೆ ಜಾಗೃತಿ ಮೂಡಿಸುವ ಮತ್ತು ಕಾರ್ಯಚರಣೆಗಳನ್ನು ನಡೆಸುವ ವಿಷಯದಲ್ಲಿ ಅವರು ಅಷ್ಟೇನೂ ಯಶಸ್ವಿಯಾದಂತೆ ಕಾಣುವುದಿಲ್ಲ ಎಂಬುದು. ಇದ್ದ ರಾಜಕೀಯ ಚೌಕಟ್ಟಿನಲ್ಲೇ ತಮಿಳು ಜನರ ಹಿತಾಸಕ್ತಿಗಳನ್ನು ಕಾಪಾಡುವಂತಹ ರಾಜಕಾರಣವನ್ನು ಅವರು ಕಟ್ಟಿದರಾದರೂ, ಅವರು ಸಾಂಸ್ಕೃತಿಕವಾಗಿ ಎಲ್ಲ ಹಂತಗಳಲ್ಲಿ ತಮಿಳು ಸಮಾಜದ ಶ್ರೇಣೀಕರಣದ ಬಂಧನಗಳನ್ನು ಸಡಿಲಗೊಳಿಸಿದರೆಂದು ಹೇಳಲಾಗುವುದಿಲ್ಲ. ಹಾಗೇ ಅದರಲ್ಲಿ ಅಂತರ್ಗತವಾಗಿದ್ದ ಹಿಂಸೆಯಿಂದ ತಮಿಳು ಜನರನ್ನು ಬಿಡುಗಡೆಗೊಳಿಸಿದರೆಂದು

ಹೇಳಲಾಗುವುದಿಲ್ಲ. ಉತ್ತರ ಭಾರತವೆಂದರೆ ಬ್ರಾಹ್ಮಣ ಸಂಸ್ಕೃತಿ ಎಂದು ತಪ್ಪಾಗಿ ಬಗೆದ ಇವರ 'ಬ್ರಾಹ್ಮಣೇತರ ಚಳುವಳಿ' ನಂತರ ಒಂದು ರಾಜಕಿಯ ಸಿದ್ಧಾಂತವೂ ಆದಾಗ ಅದರ ಕಾಟ ತಡೆಯಲಾರದೆ ತಮಿಳ್ನಾಡಿನ ಬ್ರಾಹ್ಮಣರು ದೆಹಲಿಗೆ ದೌಡಾಯಿಸಿ ಅಖಿಲ ಭಾರತ ಮಟ್ಟದಲ್ಲಿ ಭದ್ರವಾಗಿ ಪುನರ್ವಸಿತರಾದರೆ, ಬ್ರಾಹ್ಮೇಣತರ ಜಾತಿಗಳ ಜನ ಖಾಲಿಯಾದ ಆ ಸಾಂಸ್ಕೃತಿಕ ಯಜಮಾನಿಕೆಯ ಸ್ಥಾನವನ್ನು ಆಕ್ರಮಿಸಿಕೊಂಡರು. ಕರುಣಾನಿಧಿಯವರು ನಿರ್ಲಜ್ಜವಾಗಿ ಬೆಳೆಸಿದ ಕುಟುಂಬ ರಾಜಕಾರಣ ಮತ್ತು ಅದರ ಸಂಪತ್ತು–ಸಮೃದ್ಧಿಗಳ ಬೇರುಗಳನ್ನೂ ನಾವು ಇಲ್ಲಿಯೇ ಗುರುತಿಸಬಹುದು. ಇದೇ ಅವರ ರಾಜಕಾರಣಕ್ಕೆ ದ್ರಾವಿಡ ಚಳುವಳಿಯೊಳಗಿಂದಲೇ ಪ್ರಬಲ ಸವಾಲುಗಳು ಹುಟ್ಟಿ ಅವರ ಹಲವು ದೀರ್ಘಾವಧಿ ರಾಜಕೀಯ ವನವಾಸಗಳಿಗೆ ಮತ್ತು ರಾಜ್ಯದಲ್ಲಿ ಜಾತಿಗೊಂದು ರಾಜಕೀಯ ಪಕ್ಷ ಉದಿಸಲು ಕಾರಣವಾದದ್ದು. ಹಾಗಾದರೆ ದ್ರಾವಿಡ ಚಳುವಳಿ ಏನು ಮಾಡಲು ಹೊರಟು ಏನು ಮಾಡಿತು? ಅದೂ ಕರುಣಾನಿಧಿಯವರಂತಹ ನಾಯಕರಿಗೆ ಒದಗಿಬಂದಿದ್ದ ಅದ್ಭುತ ಮಾತುಗಾರಿಕೆ, ಸಿನಿಮಾದಂತಹ ಜನಪ್ರಿಯಯ ಮಾಧ್ಯಮದ ನಿಕಟ ಸಂಪರ್ಕ, ಸಾಹಿತ್ಯ ಕೌಶಲ್ಯಗಳಂತಹ ಸಂಪನ್ಮೂಲಗಳ ಸೌಲಭ್ಯಗಳ ಹೊರತಾಗಿಯೂ? ಯೋಚಿಸಬೇಕಾದ ವಿಚಾರವಲ್ಲವೆ?

ಭಾರತದಲ್ಲಿ ವಂಚಿತ ಜನವರ್ಗಗಳ ಜನರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಲಗೊಳಿಸುವುದರ ಜೊತೆಗೇ ಅವರ ಮನಸ್ಸಿನಲ್ಲಿರುವ ಹಳೆಯ ಪಾರಂಪರಿಕ ನಂಬಿಕೆಗಳ ಕಿಲುಬನ್ನೂ ತೆಗೆಯುವ ಕೆಲಸವಾಗದಿದ್ದರೆ ನಾವು ಕಾಣಲು ಸಾಧ್ಯವಾಗುವುದು ಒಂದು ಸಬಲ ಕ್ರೂರ ಸಮಾಜವನ್ನೇ ಹೊರತು ಹೊಸದೊಂದು ಘನತೆಯ ನಾಗರಿಕ ಸಮಾಜವಲ್ಲ. ಇಂದು ದ.ಭಾರತದಲ್ಲೇ ತಮಿಳ್ನಾಡಿನ ದಲಿತರ ಸ್ಥಿತಿ ದಾರುಣವಾಗಿರುವುದಕ್ಕೆ ಇದೇ ಕಾರಣ. ಶೂದ್ರ ಜಾತಿಗಳು ತಮ್ಮ ಸಬಲೀಕರಣದೊಂದಿಗೆ ತಮ್ಮೊಳಗಿನ ಊಳಿಗಮಾನ್ಯಶಾಹಿ ಗುಣವನ್ನು ಮತ್ತೆ ಕಂಡುಕೊಂಡಿರುವುದು. ಹಾಗೆ ನೋಡಿದರೆ ಈ 'ಬ್ರಾಹ್ಮಣೇತರ ಚಳುವಳಿ'ಯೇ ಸ್ಫೂರ್ತಿಯಾಗಿ ಭಾರತದಾದ್ಯಂತ ರೂಪುಗೊಂಡ 'ಸಾಮಾಜಿಕ ನ್ಯಾಯ' ಚಳುವಳಿಯ ಒಂದು ಉಪಪರಿಣಾಮವೂ ಇದೇ ಆಗಿದೆ. ರಾಷ್ಟ್ರ ರಾಜಕಾರಣದಲ್ಲಿ ನೆಹರೂ ಕುಟುಂಬದ ರಾಜ್ಯಭಾರಕ್ಕೆ ಸಮಾನಾಂತರವಾಗಿ ವಿವಿಧ ರಾಜ್ಯಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ಉದ್ದೇಶವನ್ನೇ ಭಂಗಗೊಳಿಸುತ್ತಾ ಬೇರೂರಿರುವ ಕುಟುಂಬ ರಾಜಕಾರಣದ ಶಾಖೆಗಳೇ ಇದಕ್ಕೆ ಸಾಕ್ಷಿ. ಒಮ್ಮೆ ಕರುಣಾನಿಧಿಯವರು ಯಾವುದೋ ಪ್ರತಿಭಟನೆಗಾಗಿ ಅಣ್ಣಾ ಸಮಾಧಿಯ ಬಳಿ ಏರ್ ಕೂಲರ್‌ಗಳೊಂದಿಗೆ ಸಜ್ಜಾದ ಆವರಣದಲ್ಲಿ ತಮ್ಮ ಇಬ್ಬರು ಹೆಂಡಿರನ್ನೂ ತಮ್ಮ ಶಯನಾಸನದ ಎರಡೂ ಬದಿಗಳಲ್ಲಿರಿಸಿಕೊಂಡು ಒಂದು ದಿನದ ಉಪವಾಸ ನಡೆಸಿದ ಚಿತ್ರವೇ ಇಂತಹ ರಾಜಕಾರಣದ ಎಲ್ಲ ಮತ್ತು ಎಲ್ಲರ ಕಥೆಯನ್ನೂ ಹೇಳುವಂತಿತ್ತು.

ಕರುಣಾನಿಧಿಯವರ ಸಾವಿನ ಸಂದರ್ಭದಲ್ಲಿ ಮನಸ್ಸಿನಲ್ಲೇಳುವ ಇನ್ನೊಂದು ದೊಡ್ಡ ನಿರಾಸೆ ಎಂದರೆ ರಾಷ್ಟ್ರಾಡಳಿತದಲ್ಲಿ ದೆಹಲಿ ದರ್ಬಾರಿಗೆ ಇರುವ ಪ್ರಾಮುಖ್ಯತೆಯನ್ನು ಪ್ರಶ್ನಿಸುತ್ತಾ ರಾಜ್ಯ ಸ್ವಾಯತ್ತೆಯನ್ನು ಪ್ರಬಲವಾಗಿ ಪ್ರತಿಪಾದಿಸುವ ರಾಜಕೀಯ ವಾರಸುದಾರಿಕೆಯನ್ನು ಇವರು ನಿಧಾನವಾಗಿ ಕೈಬಿಟ್ಟಿದ್ದು. ತಮ್ಮ ರಾಜಕೀಯ ಉಳಿವಿಗಾಗಿ ದೆಹಲಿ ಪ್ರಭುಗಳೊಂದಿಗೆ ಮಾಡಿಕೊಂಡ ಹಲವು ರಾಜಿಗಳೇ ಇದಕ್ಕೆ ಕಾರಣವೆಂಬುದು ಸ್ಪಷ್ಟ. ದೊಡ್ಡ ಆದರ್ಶಗಳನ್ನು ಸಾಧಿಸಲು ತುಂಬ ದೊಡ್ಡ ಶೀಲದ ಅಗತ್ಯವೂ ಇರುತ್ತದೆ. ಇಲ್ಲಿ ಶೀಲ ಎಂದರೆ ವ್ಯಕ್ತಿತ್ವದ ಸಮಗ್ರತೆ. ಆ ಸಮಗ್ರತೆಯಲ್ಲೇ ಬದುಕಿನ ಆನಂದ ಮತ್ತು ಸಾರ್ಥಕತೆಯನ್ನು ಕಂಡುಕೊಳ್ಳುವ ಗುಣ. ಕರುಣಾನಿಧಿ ಅವರು ತಮ್ಮ ವ್ಯಕ್ತಿತ್ವದ ಮಿತಿಗಳಲ್ಲೇ ಏನನ್ನು ಸಾಧಿಸಬಹುದೋ ಅದನ್ನು ಸಾಧಿಸಿದರು. ಅದರಿಂದಾಗಿ ಒಂದು ಘನವಾದದ್ದಲ್ಲದಿದ್ದರೂ ಒಂದು ಸಣ್ಣ ಜಾಗೃತಿ ತಮಿಳ್ನಾಡಿನ ಜನಮನದಲ್ಲಿ ಆಗಿದೆ. ಅದರ ಪ್ರಯೋಜನಗಳನ್ನು ಆ ಜನ ಉಣ್ಣುತ್ತಿರುವವರೆಗೂ ಕರುಣಾನಿಧಿ ಅವರ ಮನಸ್ಸಿನಲ್ಲಿ ಉಳಿಯುತ್ತಾರೆ. ಕರುಣಾನಿಧಿಯವರಿಗೆ ಪತ್ರಿಕೆಯ ಶ್ರದ್ಧಾಂಜಲಿಗಳು.

(ಸೆಪ್ಟಂಬರ್, ೨೦೧೮ರ 'ಹೊಸ ಮನುಷ್ಯ')

ಗಂಗಾ ನದಿಯ ನಿಜ ಪುತ್ರ ಜಿ.ಡಿ. ಅಗರ್‌ವಾಲ್

ಗಂಗಾ ನದಿಯ ಶುದ್ಧೀಕರಣಕ್ಕಾಗಿ ಒತ್ತಾಯಿಸಿ ಅಮರಣಾಂತ ಉಪವಾಸ ಕೈಗೊಂಡಿದ್ದ ಸಾನಂದ ಸ್ವಾಮೀಜಿ (ಜಿ..ಡಿ. ಅಗರ್‌ವಾಲ್) ಸರ್ಕಾರದ ನಿರ್ಲಕ್ಷ್ಯಕ್ಕೆ ಒಳಗಾಗಿ ಕಳೆದ ಅಕ್ಟೋಬರ್, ೧೨ರಂದು ಗಂಗಾ ತೀರದ ಋಷಿಕೇಶದಲ್ಲಿ ಸಾವನ್ನಪ್ಪಿದ್ದಾರೆ. ಗಂಗೆಯ ಪುತ್ರನೆಂದೂ, ಗಂಗಾಮಾತೆಯೇ ತಮ್ಮನ್ನು ವಾರಾಣಾಸಿಗೆ ಕರೆದು ಗೆಲ್ಲಿಸಿ ಪ್ರಧಾನಮಂತ್ರಿಯನ್ನಾಗಿ ಮಾಡಿರುವಳೆಂದೂ 'ನಮಾಮಿ ಗಂಗಾ' ಎಂಬ ಹೆಸರಿನ ಗಂಗಾ ಶುದ್ಧೀಕರಣದ ಭವ್ಯ ಕಾರ್ಯಕ್ರಮವನ್ನು ಘೋಷಿಸಿದ ನರೇಂದ್ರ ಮೋದಿ ಈ ಅನ್ಯಾಯದ ಸಾವಿಗೆ 'ವಿಷಾದ'ದ ಒಂದು 'ಟ್ವೀಟ್' ಮಾಡಿ ಅಂತಹ ಅನಾಹುತವೇನೂ ಆಗಿಲ್ಲವೆಂಬಂತೆ ತಮ್ಮ ಭವ್ಯ ಅಭಿವೃದ್ಧಿ ಆಡಳಿತವನ್ನು ಮುಂದುವರೆಸಿದ್ದಾರೆ.

ಇದು ನಿಜವಾಗಿಯೂ ಕೆಟ್ಟ ಕಾಲ. ಏಕೆಂದರೆ, ಐಐಟಿಯಲ್ಲಿ ಇಂಜಿನಿಯರಿಂಗ್ ಪದವಿ ಪಡೆದು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಿಂದ ಡಾಕ್ಟೋರೇಟ್ ಪಡೆದು ಬಂದು ಗಂಗಾ ನದಿಯನ್ನೇ ಕೇಂದ್ರವಾಗಿಟ್ಟುಕೊಂಡು ವ್ಯಾಪಕ ಸಂಶೋಧನೆ ನಡೆಸಿ ಸಹಸ್ರಾರು ವರ್ಷಗಳಿಂದ ದೇಶದ ಕೋಟ್ಯಾಂತರ ಜನರ ಬದುಕು ಮತ್ತು ಸಂಸ್ಕೃತಿಗಳನ್ನು ಕಟ್ಟುತ್ತಾ ಬಂದು ಅವರ ಆರಾಧ್ಯ ದೈವವೇ ಆಗಿರುವ ಈ ಮಹಾನದಿಯ ಜೀವ ಉಳಿಸಲು ತಮ್ಮ ಬದುಕನ್ನೇ ಅರ್ಪಿಸಿಕೊಂಡಿದ್ದ ಜಿ.ಡಿ ಅಗರ್‌ವಾಲ್ ಅದಕ್ಕಾಗಿ ಸಂನ್ಯಾಸ ದೀಕ್ಷೆ ಪಡೆದು ಸಾನಂದ ಸ್ವಾಮಿಯಾಗಿದ್ದರು. ಎಂಬತ್ತಾರು ವರ್ಷಗಳ ಈ ಹಿರಿಯ ವಿಜ್ಞಾನಿ-ಸಂನ್ಯಾಸಿಯು ತನ್ನ ಗುರಿ ಸಾಧನೆಗಾಗಿ ೧೧೦ ದಿನಗಳ ಸತತ ಉಪವಾಸದ ಪರಿಣಾಮವಾಗಿ ಸಾವು ಬದುಕುಗಳ ನಡುವೆ ತುಯ್ದಾಡುತ್ತಿದ್ದಾಗ ಅಲ್ಲಾಡದೆ ಸರ್ಕಾರ ಕೂತಿತ್ತೆಂದರೆ ಅದರ ಅರ್ಥವಾದರೂ ಏನು? ಇನ್ನು ನಮ್ಮ 'ರಾಷ್ಟ್ರೀಯ' ಮಾಧ್ಯಮಗಳಾದರೂ ಏನು ಮಾಡುತ್ತಿದ್ದವು? ಇವುಗಳ ಪ್ರಕಾರವೂ ಈಗ 'ರಾಷ್ಟ್ರ' ಅಂದರೆ ಸರ್ಕಾರ ಎಂದೇ ಆಗಿಬಿಟ್ಟಿರುವಂತಿದೆ!

ಅಭಿವೃದ್ಧಿಯ ದೆವ್ವ ಬಡಿದಿರುವ ನಮ್ಮ ಸರ್ಕಾರಗಳಿಗೆ ಉತ್ತರಾಖಂಡ, ಶ್ರೀನಗರ, ಚೆನ್ನೈ ಮತ್ತು ಇತ್ತೀಚಿನ ಕೇರಳ-ಕೊಡಗು ದುರಂತಗಳೂ ಕಣ್ಣು ತರೆಸಿಲ್ಲ. ತಮ್ಮ ಪಕ್ಷಕ್ಕೆ ತೆರೆಮರೆಯಲ್ಲಿ ಲೆಕ್ಕವಿಲ್ಲದ ದೇಣಿಗೆ ನೀಡುವ ಉದ್ಯಮಪತಿಗಳಿಗೆ ಮತ್ತು ಗುತ್ತಿಗೆದಾರರಿಗೆ ತಮ್ಮನ್ನು ಮಾರಿಕೊಂಡಿರುವ ಈ ಸರ್ಕಾರಗಳು ಈ 'ಅಭಿವೃದ್ಧಿ'ಯ ಮೂಲಕ ದೇಶವನ್ನು ಬಲಿಷ್ಠಗೊಳಿಸುತ್ತಿರುವುದಾಗಿ ಎದೆ ತಟ್ಟಿಕೊಂಡು ಹೇಳುತ್ತಾ ಇನ್ನಷ್ಟು, ಮತ್ತಷ್ಟು ಎಂದು ತಣಿಯದ ಸುಖಸೌಕರ್ಯಗಳ ದಾಹಕ್ಕೆ ಸಿಕ್ಕಿರುವ ಜನರ ಕಣ್ಣಿಗೆ ಸುಲಭವಾಗಿ ಮಣ್ಣೆರೆಚುತ್ತಿದ್ದಾರೆ. ಎಲ್ಲರೂ ಸೇರಿ ರಾಷ್ಟ್ರದ ಆತ್ಮಸಾಕ್ಷಿಯನ್ನು ಕೊಲ್ಲುತ್ತಿರುವ ಮಹಾ ದುರಂತದ ವಿಕಟ ದೃಶ್ಯವಿದು.

ತಮ್ಮ ಸಂಶೋಧನೆಗಳ ಮೂಲಕ ಜನರ ಪಾರಂಪರಿಕ ನಂಬಿಕೆಯಾಗಿದ್ದ ಗಂಗೆಯ ನೀರಿಗೆ ವಿಶಿಷ್ಟ ಶಕ್ತಿಯಿದೆ ಎಂಬುದಕ್ಕೆ ಅಗರ್‌ವಾಲರು ಪುರಾವೆ ಕಂಡುಕೊಂಡಿದ್ದರು. ಗಂಗಾ ನೀರನ್ನು ರೋಗನಿರೋಧಕವಾಗಿಸಿರುವ ಕೆಲವು ವಿಶಿಷ್ಟ ಸೂಕ್ಷ್ಮಾಣು ಜೀವಿಗಳು ಬದುಕುಳಿಯಲು ನದಿಯ ಹರಿವು ನಿರಂತರವಾಗಿರಬೇಕಿದ್ದು, ಇದಕ್ಕೆ ಅಡ್ಡಿಯಾಗುತ್ತಿರುವ ಜಲವಿದ್ಯುತ್ ಉದ್ದೇಶದ ಅಣೆಕಟ್ಟುಗಳನ್ನು ನದಿಯ ಬಾಲ್ಯದ ಘಟ್ಟವಾದ ಹಿಮಾಲಯ ಶ್ರೇಣಿಯಲ್ಲಾದರೂ ನಿಷೇಧಿಸಬೇಕೆಂಬುದು ಅವರ ಆಗ್ರಹವಾಗಿತ್ತು. ಇದರ ಕೊನೆಯ ಪ್ರಯತ್ನವಾಗಿ ಉಪವಾಸ ಕೂತಿದ್ದರು. ಹೀಗೆ ಈ 'ನಮಾಮಿ ಗಂಗಾ' ಪಕ್ಷದ ನಿರ್ಲಕ್ಷ್ಯಕ್ಕೆ ಅಗರ್‌ವಾಲರು ಮೊದಲ ಬಲಿಯೇನಲ್ಲ. ಗಂಗೆಯ ಒಡಲ ಮರಳಿನ ಲೂಟಿಯ ವಿರುದ್ಧ ಉಪವಾಸ ಕೂತ ಸ್ವಾಮಿ ನಿಗಮಾನಂದರೂ ಹೀಗೇ ಸರ್ಕಾರದ ಅಲಕ್ಷ್ಯಕ್ಕೆ ಈಡಾಗಿ ಕೊನೆಯುಸಿರೆಳೆದಿದ್ದರು

ಅಗರ್‌ವಾಲರು ಯುಪಿಎ ಸರ್ಕಾರವಿದ್ದಾಗಲೂ ಇಂಥದೇ ಕಾರಣಗಳಿಗಾಗಿ ಎರಡು ಬಾರಿ ಉಪವಾಸ ಕೈಗೊಂಡಿದ್ದರು. ಎರಡು ಬಾರಿಯೂ ಮನಮೋಹನಸಿಂಗ್ ಸರ್ಕಾರ ಕೊಸರಾಡಿಯಾದರೂ ಅವರ ಆಗ್ರಹಗಳ ಪರಿಶೀಲನೆಯ ಆಶ್ವಾಸನೆ ನೀಡಿ ಅವರ ಪ್ರಾಣವನ್ನು ರಕ್ಷಿಸಿತ್ತು ಮತ್ತು ಅವರ ಕೆಲವು ಬೇಡಿಕೆಗಳನ್ನೂ ಈಡೇರಿಸಿತ್ತು. ಆದರೆ 'ಹಿಂದುತ್ವ'ದ ಅಬ್ಬರದ ಪ್ರಸ್ತುತ ಸರ್ಕಾರ ನಿಜವಾದ ಗಂಗಾಪುತ್ರನನ್ನು ಬಲಿ ತೆಗೆದುಕೊಂಡಿದೆ. ಈ ಬಲಿದಾನ ವ್ಯರ್ಥವಾಗುವುದಿಲ್ಲ ಎಂದು ಭಾವಿಸೋಣ.

(ನವೆಂಬರ್, ೨೦೧೮ರ 'ಹೊಸ ಮನುಷ್ಯ')

ಧೀರ ಪೊಲೀಸ್ ಅಧಿಕಾರಿ ಮಧುಕರ ಆರ್ ಶೆಟ್ಟಿ

ಭಾರತದ ಇಂದಿನ ದುಷ್ಟ ಮತ್ತು ಭ್ರಷ್ಟ ವ್ಯವಸ್ಥೆ ಅದನ್ನು ಸರಿಪಡಿಸುವ ಒಂದು ಸಣ್ಣ ಪ್ರಯತ್ನ ಮಾಡುವವರನ್ನೂ ಸಹಿಸದೆ ಆಹುತಿ ತೆಗೆದುಕೊಳ್ಳುತ್ತದೆ ಎಂಬುದಕ್ಕೆ ನಮ್ಮ ಯುವ ಪೊಲೀಸ್ ಅಧಿಕಾರಿ ಮಧುಕರ ಆರ್. ಶೆಟ್ಟಿ ಅವರ ಹಠಾತ್ ಸಾವು ಒಂದು ಉದಾಹರಣೆ. ಹೆಚ್೧ ಎನ್೧ ಸೋಂಕಿಗೆ ಒಳಗಾಗಿ ಹೈದರಾಬಾದ್‌ನ ಅತ್ಯಾಧುನಿಕ ಆಸ್ಪತ್ರೆಯಲ್ಲಿ ಕಳೆದ ಡಿಸೆಂಬರ್ ೨೮ರಂದು ಕೊನೆಯುಸಿರೆಳೆದಾಗ ಅವರಿಗೆ ಕೇವಲ ೪೭ ವರ್ಷ. ತೆಲಂಗಾಣ ಮತ್ತು ಕರ್ನಾಟಕ ಸರ್ಕಾರಗಳೆರಡರ ಉನ್ನತಾಧಿಕಾರಿಗಳ ಉಸ್ತುವಾರಿಯಲ್ಲಿ ಒದಗಿಸಲಾದ ಶ್ರೇಷ್ಠ ಮಟ್ಟದ ವೈದ್ಯಕೀಯ ಚಿಕಿತ್ಸೆಯೂ ಶಿಸ್ತಿನ ಜೀವನ ನಡೆಸಿದ ಪೊಲೀಸ್ ಅಧಿಕಾರಿಯ ಜೀವವನ್ನು ಕಾಪಾಡಲಾಗಲಿಲ್ಲ ಎಂದರೆ ಏನರ್ಥ? ಎಂತಹ ಸೋಂಕಿರಬಹುದು ಅದು?

೧೯೯೯ರ ಐಪಿಸ್ ಅಧಿಕಾರಿಗಳ ತಂಡದ ಮಧುಕರಶೆಟ್ಟಿಯವರು ಚಿಕ್ಕಮಗಳೂರು ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಯಾದಾಗಿರಬಹುದು, ಕಾಡುಗಳ್ಳ ವೀರಪ್ಪನ್ ನಿಗ್ರಹ ಕಾರ್ಯತಂಡದಲ್ಲಿ ಇರಬಹುದು ಅಥವಾ ನಕ್ಸಲ್ ನಿಗ್ರಹ ಕಾರ್ಯತಂಡದಲ್ಲಿ ಇರಬಹುದು ಅಥವಾ ಕರ್ನಾಟಕ ಲೋಕಾಯುಕ್ತದಲ್ಲಿನ ತನಿಖಾಧಿಕಾರಿಯಾದಾಗಿರಬಹುದು ಅವರ ಕೊನೆಯ ಹುದ್ದೆಯಾದ ಹೈದರಾಬಾದ್‌ನ ಪೋಲೀಸ್ ತರಬೇತಿ ಕೇಂದ್ರದ ಉಪನಿರ್ದೇಶಕತ್ವ ಇರಬಹುದು ಹೀಗೆ ತಾವು ನೇಮಕಗೊಂಡ ಎಲ್ಲ ಕಡೆ ಅವರು ತಮ್ಮ ಅನುಪಮ ದಕ್ಷತೆ, ಪ್ರಾಮಾಣಿಕ ಕಾರ್ಯನಿರ್ವಹಣೆಗಳ ಮೂಲಕ ಜನರ ಮತ್ತು ಸಹೋದ್ಯೋಗಿಗಳ ಗೌರವ ಮತ್ತು ಪ್ರೀತಿ ಸಂಪಾದಿಸಿದವರು. ಚಿಕ್ಕಮಗಳೂರಿನಲ್ಲಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಯಾಗಿದ್ದಾಗ (೨೦೦೬) ತಮ್ಮಂತೆಯೇ ದಕ್ಷ ಮತ್ತು ಪ್ರಾಮಾಣಿಕರಾಗಿದ್ದ ಜಿಲ್ಲಾಧಿಕಾರಿ ಹರ್ಷ ಗುಪ್ತರೊಡಗೂಡಿ ಉಳ್ಳವರು ಕಬಳಿಸಿದ್ದ ಸರ್ಕಾರಿ ಜಮೀನನ್ನು ತೆರವುಗೊಳಿಸಿ ಅದನ್ನು ನಿರ್ವಸಿತ ಬಡಬಗ್ಗರಿಗೆ ಹಂಚಿದ ಕೆಲಸವನ್ನು ಆ ಜನ ತಮ್ಮ ಈ ಹೊಸ ನಿವಾಸ ಪ್ರದೇಶಕ್ಕೆ ಗುಪ್ತಶೆಟ್ಟಿ ಹಳ್ಳಿ ಎಂದು

ಹೆಸರಿಟ್ಟು ಗೌರವಿಸಿದ ಸಂಗತಿ ಅಪೂರ್ವವಾದದ್ದೇ ಸರಿ. ಅಲ್ಲಿಯೇ ಅವರು ನಕ್ಸಲ್ ನಿಗ್ರಹ ದಳದಲ್ಲಿದ್ದಾಗ ಅವರ ಕಾರ್ಯತಂತ್ರ, ಹಳ್ಳಿಗಳ ಪ್ರವಾಸ ಮಾಡಿ ಜನರ ಕುಂದುಕೊರತೆಗಳನ್ನು ಸಹಾನುಭೂತಿಯಿಂದ ಆಲಿಸಿ ಪರಿಹಾರ ಕ್ರಮಗಳಿಗಾಗಿ ಪ್ರಯತ್ನಿಸುವ ಮೂಲಕ ಜನರನ್ನು ನಕ್ಸಲರ ಪ್ರಭಾವದಿಂದ ದೂರವಿಡುವುದಾಗಿತ್ತು.

ಅವರ ಪ್ರಕಾರ ಪ್ರತಿಯೊಂದು ಅಪರಾಧದದ ಹಿಂದೆಯೂ ಒಂದು ಸಾಮಾಜಿಕ ಅಂಶ ಇರುತ್ತದೆ. ಅದನ್ನು ಪರಿಗಣಿಸದೆ ಅಪರಾಧಗಳನ್ನು ತಡೆಯಲಾಗದು.

ಮಧುಕರ ಶೆಟ್ಟಿಯವರು ತಮ್ಮ ಸೇವಾವಧಿಯಲ್ಲಿ ಎಂದೂ ಯಾರಿಂದಲೂ ಪುಕ್ಕಟೆಯಾಗಿ ಒಂದು ಕಪ್ ಚಹಾವನ್ನೂ ಕುಡಿಯದ, ಎಲ್ಲಕ್ಕೂ ಕಿಸೆಯಿಂದ ಹಣಕೊಟ್ಟು ಚಿಲ್ಲರೆ ಪಡೆದೇ ಹೋಗುತ್ತಿದ್ದ ವ್ಯಕ್ತಿ. ವೈಯಕ್ತಿಕ ಉದ್ದೇಶಗಳ ಸಂಚಾರಕ್ಕಾಗಿ ಸಾರ್ವಜನಿಕ ಸರ್ಕಾರಿ ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಿದ್ದ ಮಧುಕರ್ ತಮ್ಮ ಕೈಕೆಳಗಿನ ಯಾರೇ ಆಗಲಿ ಅಧಿಕಾರ ದುರುಪಯೋಗಪಡಿಸಿಕೊಂಡದ್ದು ಕಂಡುಬಂದಲ್ಲಿ ಅವರನ್ನು ಮಟ್ಟಹಾಕುವವರೆಗೂ ಬಿಡುತ್ತಿರಲಿಲ್ಲ. ವೀರಪ್ಪನ್ ವಿಶೇಷ ಕಾರ್ಯತಂಡದವರೆಲ್ಲರಿಗೂ ಸರ್ಕಾರ ನಿವೇಶನಗಳನ್ನು ಘೋಷಿಸಿದಾಗ ಅದನ್ನು 'ನನ್ನ ಕರ್ತವ್ಯ ನಿರ್ವಹಿಸಿದ್ದಕ್ಕೆ ಬಹುಮಾನವೇ?' ಎಂದು ಅದನ್ನು ನಿರಾಕರಿಸಿದ ಸ್ವಚ್ಛ ಆತ್ಮಸಾಕ್ಷಿಯ ಧೀರ ಅಧಿಕಾರಿ ಮಧುಕರ ಶೆಟ್ಟಿ.

ಲೋಕಾಯುಕ್ತದಲ್ಲಿದ್ದಾಗ (೨೦೦೯-೧೧) ಗಣಿ ರೆಡ್ಡಿಗಳ ಬಳಗ ಮತ್ತು ಕಟ್ಟಾ ಸುಬ್ರಮಣ್ಯ ನಾಯ್ಡು-ಕೃಷ್ಣ ಸೆಟ್ಟಿ ವಗೈರೆಗಳ ಭೂಮಾಫಿಯಾದ ಎಲ್ಲ ದುಷ್ಟ ಮತ್ತು ಭ್ರಷ್ಟ ವ್ಯವಹಾರಗಳನ್ನೂ ತನಿಖೆಗೊಳಪಡಿಸಿ ಈ ದುಷ್ಟ-ಭ್ರಷ್ಟ ಕೂಟಗಳನ್ನು ಕಂಗೆಡಿಸಿದ ಸಾಹಸಿ ಈತ. ಆದರೆ ಈ ತನಿಖೆಯೆಲ್ಲ ನ್ಯಾಯಾಂಗದ ನೆಲೆಯಲ್ಲಿ ಎಲ್ಲೂ ಮುಟ್ಟದೆ ಅಪರಾಧಿಗಳು ನಿರಾಳರಾಗತೊಡಗಿದಾಗ ಕಂಗೆಡುವ ಸ್ಥಿತಿ ಸ್ವತಃ ಮಧುಕರ ಶೆಟ್ಟಿಯವರದೇ ಆಗಿದ್ದುದು ವ್ಯವಸ್ಥೆಯ ವಿಪರ್ಯಾಸ. ತಮ್ಮ ತನಿಖೆಯನ್ನು ಅದರ ತಾರ್ಕಿಕ ಅಂತ್ಯಕ್ಕೆ ಮುಟ್ಟಿಸುವಲ್ಲಿ ಲೋಕಾಯುಕ್ತದ ಮುಖ್ಯಸ್ಥರಾಗಿದ್ದ ನ್ಯಾ. ಸಂತೋಷ್ ಹೆಗ್ಡೆಯವರು ತಮ್ಮ 'ಪೂರ್ವಾಗ್ರಹ ಪೀಡಿತವಾದ ಅಸಮರ್ಪಕ ವರದಿ'ಯ ಮೂಲಕ ವಿಫಲರಾಗಿದ್ದಾರೆಂದು ಅಸಮಾಧಾನಗೊಂಡ ಶೆಟ್ಟಿಯವರು ಅಧ್ಯಯನ ರಜೆ ಹಾಕಿ ಉನ್ನತ ಅಧ್ಯಯನಕ್ಕೆಂದು ಅಮೆರಿಕಾದ ನ್ಯೂಯಾರ್ಕ್‌ನಲ್ಲಿರುವ ಆಲ್ಬೆನಿ ವಿಶ್ವವಿದ್ಯಾನಿಲಯಕ್ಕೆ ಹೋಗಿಬಿಟ್ಟರು. ಐದು ವರ್ಷಗಳ ನಂತರ 'ಸಾರ್ವಜನಿಕ ಆಡಳಿತ' ಕುರಿತ ಪಿಹೆಚ್‌ಡಿ ಪದವಿಯೊಂದಿಗೆ ವಾಪಸಾದ ಅವರಿಗೆ ಸರ್ಕಾರ ನೀಡಿದ್ದು ಸಾರ್ವಜನಿಕ ಸಂಪರ್ಕವಿಲ್ಲದ ಪೋಲೀಸ್ ತರಬೇತಿ ಕೇಂದ್ರದ ಹುದ್ದೆಯನ್ನು.

ತಮ್ಮ ಕಿರಿಯ ಸಹೋದ್ಯೋಗಿಗಳಿಗೆ ಸದಾ ಆದರ್ಶಗಳ ಪ್ರತೀಕ ಮತ್ತು ಸ್ಫೂರ್ತಿಯ ಚಿಲುಮೆಯಾಗಿದ್ದ ಮಧುಕರ ಶೆಟ್ಟಿ, ಅವರಿಗೆ ಸದಾ ಹೇಳುತ್ತಿದ್ದ ಒಂದು ಮಾತೆಂದರೆ, 'ಎಲ್ಲವನ್ನೂ ಒಟ್ಟಿಗೇ ಮೈಮೇಲೆ ಹಾಕಿಕೊಳ್ಳಲು ಹೋಗಬೇಡಿ. ವೃತ್ತಿಜೀವನದಲ್ಲಿ ಒಂದು

ಆದರ್ಶಕ್ಕೆ ಬದ್ಧರಾಗಿ ಅದರಂತೆ ನಡೆಯಿರಿ.' ಆದರೆ ಸ್ವತಃ ಅವರೇ ಈ ಮಾತಿನಂತೆ ನಡೆಯದೆ ಎಲ್ಲ ಆದರ್ಶಗಳನ್ನೂ ಒಮ್ಮೆಗೇ ಮೈಮೇಲೆ ಎಳೆದುಕೊಂಡರೇ? ಎಂಬ ಪ್ರಶ್ನೆ ಅವರ ಅಭಿಮಾನಿಗಳನ್ನು ಕಾಡಲಿದೆ. ಸಮಾಜವಾದಿ ಚಳುವಳಿಯ ಮೂಸೆಯಲ್ಲಿ ಬೆಳೆದು ಕನ್ನಡದ ಹಿರಿಯ ಪತ್ರಕರ್ತರಾಗಿದ್ದ ವಡ್ಡರ್ಸೆ ರಘುರಾಮ ಶೆಟ್ಟರ ಕಿರಿಯ ಮಗನಾಗಿದ್ದ ಮಧುಕರ ಶೆಟ್ಟಿ ಅಪ್ಪನಿಗೆ ತಕ್ಕ ಮಗನಾಗಿ ಬಾಳಿ ಕನ್ನಡಿಗರ ಮನಗಳಲ್ಲಿ ಅಮರರಾಗಿದ್ದಾರೆ.

(ಫೆಬ್ರುವರಿ, ೨೦೧೯ರ 'ಹೊಸ ಮನುಷ್ಯ')

ಸಹಜ ಬೇಸಾಯದ ಧೀರ ಎಲ್. ನಾರಾಯಣ ರೆಡ್ಡಿ

ಕೃಷಿ ಋಷಿ, ಕರ್ನಾಟಕದ ಫುಕೊವೊಕಾ ಎಂದೆಲ್ಲ ಹೆಸರಾಗಿದ್ದ ಎಲ್. ನಾರಾಯಣ ರೆಡ್ಡಿ (೮೪ ವರ್ಷ) ಇನ್ನಿಲ್ಲ ಎಂದರೆ ನಂಬಲಾಗುತ್ತಿಲ್ಲ. ಗಾಂಧಿಗಿದ್ದಂತೆಯೇ ೧೨೫ ವರ್ಷ ಬದುಕುವ ಬಯಕೆ ಅವರಿಗಿತ್ತು. ಹಾಗೆಂದು ಅವರು ನಂಬಿಯೂ ಇದ್ದರು. ರೆಡ್ಡಿಯವರು ೨೦೧೮ರ ಅಕ್ಟೋಬರ್‌ನಲ್ಲಿ ನಮ್ಮ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದಲ್ಲಿ ಕುಪ್ಪಳಿಯಲ್ಲಿ ಆಯೋಜಿಸಿದ್ದ 'ಆಧುನಿಕತೆಯೊಂದಿಗೆ ಮುಖಾಮುಖಿ' ಎಂಬ ವಿಷಯ ಕುರಿತ ಅಧ್ಯಯನ ಶಿಬಿರವನ್ನು ಉದ್ಘಾಟಿಸುತ್ತಾ ಈ ಬಯಕೆ ಮತ್ತು ನಂಬಿಕೆಯನ್ನು ವ್ಯಕ್ತಪಡಿಸಿದ್ದರು. ಅದಕ್ಕೆ ತಕ್ಕಂತೆ ತಾವು ನಡೆಸುತ್ತಿದ್ದ ಮೈ ಬಗ್ಗಿಸಿ ನಡೆಸುವ ಶಿಸ್ತಿನ ಮತ್ತು ಸರಳ ಜೀವನದ ಪಾಠವನ್ನು ಶಿಬಿರಾರ್ಥಿಗಳಿಗೆ ಹೇಳಿದ್ದರು. ಆದರೆ ವಿಧಿಯ ಆಟ ಬೇರೇಯೇ ಆಗಿತ್ತು. ಇದು ಕರ್ನಾಟಕಕ್ಕೆ ಆದ ನಷ್ಟ.

ನಾರಾಯಣ ರೆಡ್ಡಿಯವರನ್ನು ನಾನು ಮೊದಲು ನೋಡಿದ್ದು ೨೦೧೩ರಲ್ಲಿ, ಶ್ರೀರಂಗಪಟ್ಟಣದಲ್ಲಿ ನಡೆದ ಒಂದು ಸರ್ವೋದಯ ಸಮ್ಮೇಳನದಲ್ಲಿ. ಅವರು ಆ ಮಂಡ್ಯದ ಗಂಡುಮೆಟ್ಟಿನ ನೆಲದಲ್ಲೇ ನಿಂತು ಆ ಜಿಲ್ಲೆಯ ರೈತರು ಮೂಢರಂತೆ ಬತ್ತ ಮತ್ತು ಕಬ್ಬಿನ ಗದ್ದೆಗಳಿಗಾಗಿ ಅನಗತ್ಯವಾಗಿ ಕಾವೇರಿ ನೀರನ್ನು ವ್ಯರ್ಥಗೊಳಿಸುತ್ತಾ ದುರಾಸೆಯಿಂದ ರಾಸಾಯನಿಕ ಬೇಸಾಯಕ್ಕೆ ಬಿದ್ದು ಸಾಲಗಾರರಾಗಿ ಭೂಮಿ ಮಾರಿಕೊಂಡೋ, ಸರ್ಕಾರದ ಮುಂದೆ ಪರಿಹಾರಕ್ಕಾಗಿ ಕೈಯೊಡ್ಡಿಕೊಂಡೋ ರೈತತನದ ಮರ್ಯಾದೆ ಕಳೆಯುತ್ತಿರುವ ಬಗ್ಗೆ ಗುಡುಗಿದ್ದನ್ನು ಕೇಳಿ ನಾನು ದಂಗಾಗಿದ್ದೆ. ಹೌದು, ಹೀಗೆ ದಿಟ್ಟವಾಗಿ ಮಾತಾಡಲು ಅವರಿಗೆ ಎಲ್ಲ ಅಧಿಕಾರವಿತ್ತು. ಅವರಿಗೆ ತಮ್ಮ ಭೂಮಿಯಲ್ಲಿ ರಾಸಾಯನಿಕ ಗೊಬ್ಬರ ಅಥವಾ ಕೀಟನಾಶಕಗಳಿಲ್ಲದ ಬೇಸಾಯ ಮಾಡಿ ಸುಖವಾಗಿ ಬದುಕಿದ ಅನುಭವವಿತ್ತು. ಆದರೆ ಒಂದೇ ವ್ಯತ್ಯಾಸವೆಂದರೆ, ಅವರ ಕಲ್ಪನೆಯ ಸುಖ ಇಂದಿನ ಆಧುನಿಕ ರೈತರ ಸುಖದ ಕಲ್ಪನೆಗಿಂತ ಬೇರೆಯದು. ಅದು ಕನಿಷ್ಟ ಅಗತ್ಯಗಳ ಪ್ರಕೃತಿ ನಡುವಣ ಹಳ್ಳಿಯ ಸಾಂಘಿಕ ಜೀವನದ ಪರಮ ಸುಖ.

ಮೊದಲು ಎಲ್ಲರಂತೆಯೇ 'ಹಸಿರು ಕ್ರಾಂತಿ'ಯ ಭ್ರಾಂತಿಯಲ್ಲಿ ರಾಸಾಯಿನಿಕ ಬೇಸಾಯ ಮಾಡಿ ೧೯೭೭ರಲ್ಲೇ ದಾಖಲೆಯ ರಾಗಿ ಫಸಲು ತೆಗೆದು 'ಪ್ರಗತಿಪರ' ರೈತನೆಂಬ ಅಭಿದಾನ ಪಡೆದು ಅವರು ಅಮೆರಿಕಾದ ಆಲ್ಬರ್ಟ್ ಟ್ರಕ್ಕರ್ ಎಂಬ ಕೃಷಿ ವಿಜ್ಞಾನಿಯೊಬ್ಬರ ಗಮನ ಸೆಳೆದಿದ್ದರು. ಅವರು ರೆಡ್ಡಿಯವರನ್ನು ಬೆಂಗಳೂರು ಬಳಿಯ ಸೋರಹುಣಿಸೆ ಗ್ರಾಮಕ್ಕೆ ಹುಡುಕಿಕೊಂಡು ಬಂದು ಸಹಜ ಕೃಷಿಯ ಪಾಠ ಬೋಧಿಸಿ ಹೋದರು. ಅಲ್ಲಿಂದ ರೆಡ್ಡಿಯವರ ಬೇಸಾಯ ಮತ್ತು ಬದುಕೂ ಎರಡೂ ಬದಲಾಯಿತು. ಅವರು ಪ್ರಕೃತಿಯ ಗುಟ್ಟುಗಳನ್ನು ಅರಿತು, ಅವುಗಳ ಸಹಾಯದಿಂದ ಮಾತ್ರ ಕೃಷಿ ಮಾಡಿ ರಾಸಾಯನಿಕ ಕೃಷಿಗೆ ಸಮನಾದ ಇಳುವರಿ ಪಡೆದು ಎಲ್ಲರನ್ನೂ ಬೆಕ್ಕಸಬೆರಗುಗೊಳಿಸಿದರು. ಆದರೆ ಅದರ ನಿಜವಾದ ಪ್ರಯೋಜನ ಪಡೆದವರು ಯೂರೋಪಿನ ಸರ್ಕಾರಗಳು ಮತ್ತು ರೈತರು. ಏಕೆಂದರೆ ನಮ್ಮ ಸರ್ಕಾರಗಳು ಮತ್ತು ರೈತರು ಅವರು ಹೇಳುವ ಕೃಷಿಗೇ, ಹಳ್ಳಿಗೇ ಬದ್ಧವಾದ ಬದುಕಿನ ಮಾದರಿಯನ್ನು ಒಪ್ಪಲು ಸಿದ್ಧರಿರಲಿಲ್ಲ. ಆದರೇನು, ಕೃಷಿಲೋಕದ ಗಾಂಧಿ ಎಂದು ಕರೆಯಬಹುದಾದ ಜಪಾನ್‌ನ ಮಸನೊಬ ಫುಕೊವೋಕಾರೇ ಇವರನ್ನು ನೋಡಲು ಅವರ ಹಳ್ಳಿಗೆ ಬಂದರು. ಅದನ್ನು ರೆಡ್ಡಿಯವರು ನನ್ನ ಬಳಿ ವರ್ಣಿಸಿದ್ದ ಹೀಗೆ: 'ನನ್ನ ಕಣ್ಣಿಗೆ ಅವರು ವೈಕುಂಠದಿಂದ ಶ್ರೀಮನ್ನಾರಯಣನೇ ಬಂದು ಇಳಿದ ಹಾಗೆ ಕಂಡು ನನ್ನ ಕಣ್ಣು ಮಂಜಾಗಿ ಆ ದೃಶ್ಯವನ್ನು ಅವರು ಬಂದು ನನ್ನನ್ನು ಮುಟ್ಟುವವರೆಗೂ ನಂಬಲೇ ಆಗಲಿಲ್ಲ!' ನಾನು ಅವರನ್ನು ನೀವಿಬ್ಬರೂ ಏನು ಮಾತಾಡಿದಿರಿ ಎಂದು ಕೇಳಿದ್ದಕ್ಕೆ ರೆಡ್ಡಿಯವರು ಹೇಳಿದ್ದು : 'ಅವರೆಲ್ಲಿ ನನ್ನೊಡನೆ ಮಾತಾಡಿದರು? ನನ್ನ ಹೊಲದ ಪಕ್ಕ ಆಗ ಹರಿಯುತ್ತಿದ್ದ ದಕ್ಷಿಣ ಪಿನಾಕಿನಿ ತೊರೆಯ ನೀರಿನ ಹರಿವನ್ನು ನೋಡುತ್ತಾ ಋಷಿಯಂತೆ ಕೂತುಬಿಟ್ಟಿದ್ದರು!;' (ಅಂದ ಹಾಗೆ ನಾನೂ ಈ ನದಿಯ ದಡದ ಹಳ್ಳಿಯೊಂದರಲ್ಲಿ ಹುಟ್ಟಿ ಅದರ ಮೇಲೆ ತೆಪ್ಪದ ಪ್ರಯಾಣ ಸವಿದವನೇ!)

ಬಾಲ್ಯದಲ್ಲಿ ಕುರಿ ಕಾಯುತ್ತಲೇ ಶಾಲೆಗೆ ಹೋಗುತ್ತಿದ್ದ, ಹೆಚ್ಚೇನೂ ಓದದ (ನನಗೆ ತಿಳಿಸಿದಂತೆ ಅವರು ಪಿಯುಸಿವರೆಗೆ ಓದಿದ್ದರು) ರೆಡ್ಡಿಯವರು ನೆದರ್‌ಲ್ಯಾಂಡ್-ಬೆಲ್ಜಿಯಂ ಮುಂತಾದ ದೇಶಗಳಿಗೆ ಕೃಷಿ ಸಲಹಾಕಾರರಾಗಿ ಈ ದೇಶಗಳಿಗೆ ಹಲವಾರು ಬಾರಿ ಹೋಗಿ ಬಂದವರಾಗಿದ್ದರಾದರೂ ಕರ್ನಾಟಕ ಸರ್ಕಾರ ಅವರ ಸೇವೆಯನ್ನು ಬಳಸಿದ್ದು ಬಹು ವಿರಳವಾಗಿ ಮತ್ತು ನಾಮಕಾವಸ್ಥೆಯದ್ದಾಗಿ ಮಾತ್ರ. ಇದು ಕರ್ನಾಟಕದ ದುರಂತ. ಅವರು ನಮ್ಮ ಕುಪ್ಪಳ್ಳಿ ಶಿಬಿರದಲ್ಲಿ ಹೇಳಿದ ಈ ಮುಖ್ಯ ಮಾತುಗಳೇ ಅವರ ಒಟ್ಟು ಜೀವನದ ತಾತ್ವಿಕತೆಯೂ ಆಗಿತ್ತು: 'ಫಲವತ್ತಾದ ಭೂಮಿ, ದನಕರುಗಳು, ಹಸಿರು ತುಂಬಿದ ಮರಗಿಡಗಳು, ಆರೋಗ್ಯವಂತರಾಗಿ, ಶಕ್ತಿವಂತರಾಗಿ ದುಡಿಯುವ ಜನ ಸಮಾಜದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಅದು ಅಭಿವೃದ್ಧಿಯ ಸಂಕೇತ. ಇವುಗಳನ್ನು ಬಿಟ್ಟು ಗಗನಚುಂಬಿ ಕಟ್ಟಡಗಳು, ಅಗಲವಾದ ರಸ್ತೆಗಳು ಇದ್ದ ಮಾತ್ರಕ್ಕೆ ಅದನ್ನು ಅಭಿವೃದ್ಧಿ ಎನ್ನಲಾಗದು' (ವಿವರಗಳಿಗಾಗಿ ನೋಡಿ, 'ಹೊಸ ಮನುಷ್ಯ'ದ ೨೦೧೪ರ ನವೆಂಬರ್ ಸಂಚಿಕೆ).

ರೆಡ್ಡಿಯವರು ಊಟದ ಸಮಯದಲ್ಲಿ ನನ್ನೊಂದಿಗೆ ಮಾತನಾಡುತ್ತಾ ಹೇಳಿದ ಇನ್ನೊಂದು ಮಾತೂ ಅಷ್ಟೇ ಅರ್ಥಪೂರ್ಣ: 'ಸ್ವಾಮೀ ಈ ಆಧುನಿಕತೆಯ ರೋಗ ಎಲ್ಲ ಕಡೆ ಹೇಗೆ ಹರಡಿದೆ ಎಂದರೆ, ಇವೊತ್ತು ನಗರದಲ್ಲಿ ಮಕ್ಕಳನ್ನ ನಮ್ಮ ಪೋಷಕರು ಅವರ ಉದ್ಧಾರಕ್ಕೇಂತ ಹಗಲು ರಾತ್ರಿ ಟೂಷನ್ನುಗಳಿಗೆ, ಪ್ರವೇಶ ಪರೀಕ್ಷೆಗಳಿಗೇಂತ ತರಬೇತಿಗಳಿಗೆ ಹಾಕಿ ಅರೀತಾರಲ್ಲ, ಅದೇ ರೋಗ ನಮ್ಮ ರೈತರಿಗೂ ಹರಡಿ ಅವರು ಬೆಳೆ ಉದ್ಧಾರಕ್ಕೇಂತ ಟ್ರ್ಯಾಕ್ಟರು, ರಸಗೊಬ್ಬರ. ಕಳೇನಾಶಕ, ಕೀಟ ನಾಶಕ ತಂದು ಜಬರ್‌ದಸ್ತಾಗಿ ಬೇಸಾಯ ಮಾಡಿ ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ಪಟ್ಟಣದವರಿಗೂ ಶಾಂತಿ ನೆಮ್ಮದಿ ಬೇಕಾಗಿಲ್ಲ. ಹಳ್ಳಿಯವರಿಗೂ ಬೇಕಾಗಿಲ್ಲ. ಪೋಲಿ ಪುಂಡರನ್ನೆಲ್ಲ ಆರಿಸಿ ರಾಜ್ಯಭಾರ ಮಾಡಕ್ಕೆ ಕಳಿಸಿರೋ ಇವರಿಗೆಲ್ಲ ಸತ್ತು ಸುಣ್ಣವಾದಗಲೇ ಬುದ್ಧಿ ಬರೋದು!'

ಆದರೆ ನಾರಾಯಣ ರೆಡ್ಡಿಯವರ ಈ ಮಾತುಗಳು ಹತಾಶೆಯ ಮಾತುಗಳಾಗಿರಲಿಲ್ಲ. ಅವರ ಮೂಲ ಗ್ರಾಮ ಬೆಂಗಳೂರು ನಗರದ ವಶವಾದಾಗ ಅವರು ದೊಡ್ಡಬಳ್ಳಾಪುರದ ಬಳಿಯ ಮರಳೇನಹಳ್ಳಿಗೆ ಬಂದು ಅಲ್ಲೊಂದು ಮಾದರಿ ಬೇಸಾಯ ಕ್ಷೇತ್ರವನ್ನೇ ನಿರ್ಮಿಸಿದ್ದರು. ಮನೆಗೆ ಬೇಕಾದ ಎಲ್ಲ ಬೆಳೆಗಳನ್ನೂ ಬೆಳೆಯುವ ಮಾದರಿ ತರಬೇತಿ ಮತ್ತು ಪ್ರಾತ್ಯಕ್ಷಿಕೆಯೂ ಅದಾಗಿತ್ತು. ಅವರು ನಮ್ಮನ್ನು ಅಲ್ಲೊಂದು ಅಧ್ಯಯನ ಶಿಬಿರ ಮಾಡಲು ಆಹ್ವಾನಿಸಿದ್ದರು. ಆದರೆ ನಾನು ಅವರು ಹೇಗೂ ದೀರ್ಘ ಕಾಲ ಬದುಕುವರಲ್ಲ ಎಂದು ಸ್ವಲ್ಪ ಉದಾಸೀನ ಮಾಡಿದೆ. ಅದು ನನ್ನ ಜೀವನದ ದೊಡ್ಡ ಲೋಪವಾಗಿ ನನ್ನನ್ನು ಬಹುದಿನ ಕಾಡಲಿದೆ.

(ಫೆಬ್ರುವರಿ, ೨೦೧೯ರ 'ಹೊಸ ಮನುಷ್ಯ')

ನಮ್ಮ ಪ್ರೀತಿಯ ಕೆ.ಬಿ. ಸಿದ್ಧಯ್ಯ

ಹೋರಾಟಗಾರ, ಕವಿ, ಆತ್ಮೀಯ ಗೆಳೆಯ ಕೆ.ಬಿ. ಸಿದ್ದಯ್ಯ ಇನ್ನಿಲ್ಲವೆಂದರೆ ನಂಬುವುದು ಕಷ್ಟ. ಏಕೆಂದರೆ ಅವರು ನಮ್ಮ ಜೀವನದಲ್ಲಿ ಅಷ್ಟು ಹಾಸು ಹೊಕ್ಕಾಗಿ ಬೆರೆತು ಹೋಗಿದ್ದರು ಮತ್ತು ೬೫ ವರ್ಷ ಎಂದರೆ ಈಗ ಸಾಯುವ ವಯಸ್ಸೇನಲ್ಲ. ರಾಷ್ಟ್ರದಲ್ಲಿ ಅವರು ನಂಬಿದ್ದ ಮೌಲ್ಯಗಳ ಮೇಲೆ ಗಂಭೀರ ದಾಳಿ ನಡೆದಿದ್ದಾಗ ಅವರು ಕಣ್ಮರೆಯಾದದ್ದು ನನಗೆ ತುಂಬ ದೊಡ್ಡ ನಷ್ಟವಾಗಿಯೇ ಕಾಣುತ್ತಿದೆ.

ಸಿದ್ದಯ್ಯನವರನ್ನು ಸಾಮಾನ್ಯವಾಗಿ ದಲಿತ ಹೋರಾಟಗಾರ ಮತ್ತು ಚಿಂತಕ ಎಂದು ಕರೆಯಲಾಗುತ್ತದೆ. ಆದರೆ ನಾನು ಬಲ್ಲಂತೆ ಅವರು ದಲಿತತ್ವದ ಸೀಮೆಯನ್ನು ಎಂದೋ ದಾಟಿಹೋದ ವ್ಯಕ್ತಿಯಾಗಿದ್ದರು. ಅದಕ್ಕೆ ಮುಖ್ಯ ಕಾರಣ ಅವರ ವ್ಯಕ್ತಿತ್ವಕ್ಕೆ ಸೀಮೆಗಳೆಂಬುವೇ ಇರಲಿಲ್ಲ ಎಂಬುದು. ತಾವು ನಂಬಿದ ಸ್ವಾತಂತ್ರ್ಯ, ಸಮಾನತೆ ಮತ್ತು ಅಹಿಂಸೆಗಳಲ್ಲಿ ನಂಬಿಕೆ ಇಟ್ಟಿದ್ದ ಎಲ್ಲರನ್ನೂ ಅವರು ತಮ್ಮವರೆಂದೇ ಭಾವಿಸಿದ್ದರು. ಆ ಭಾವನೆಯಲ್ಲಿ ನಿಷ್ಕಲ್ಮಶ ಪ್ರೀತಿ ಹೆಪ್ಪುಗಟ್ಟಿರುತ್ತಿತ್ತು. ಈ ಪ್ರೀತಿಯೇ ಅವರನ್ನು ದಲಿತ ಕಾವ್ಯದ ವಿಶಿಷ್ಟ ಕವಿಯನ್ನಾಗಿಯೂ ಮಾಡಿದ್ದದು. ತನ್ನ ಸಾಮಾಜಿಕ-ಸಾಂಸ್ಕೃತಿಕ ಹಿನ್ನೆಲೆಯ ಕಥಾನಕಗಳನ್ನು ಎಲ್ಲರ ಸಾಮಾಜಿಕ-ಸಾಂಸ್ಕೃತಿಕ ಕಥಾನಕಗಳನ್ನಾಗಿ ಮಾಡಬಲ್ಲ ರೂಪಕ ಮತ್ತು ನುಡಿಗಟ್ಟುಗಳ ಸೃಜನ ಶಕ್ತಿ ಅವರಲ್ಲಿತ್ತು. ಇದರ ಹಿಂದೆ ಬುದ್ಧನ 'ಕರುಣಾ' ಅಂತರ್ಗಂಗೆಯಾಗಿ ಹರಿಯುತ್ತಿತ್ತು. ದಲಿತ ಚಳುವಳಿಯ ಆರಂಭದ ವರ್ಷಗಳಲ್ಲಿ ಅದರ ಎಲ್ಲ ಸಭೆಗಳಲ್ಲಿ ಮಾರ್ದನಿಸುತ್ತಿದ್ದ ಅವರ ಜನಪ್ರಿಯ ರಚನೆ 'ಈ ನಾಡ ಮಣ್ಣಿನಲ್ಲಿ' ಇದಕ್ಕೊಂದು ಉದಾಹರಣೆ.

ಗಾಂಧಿ ಮತ್ತು ಲೋಹಿಯಾ ಮೂಲಕ ಅಂಬೇಡ್ಕರ್ ಅವರನ್ನು ತಲುಪಿದ್ದ ಸಿದ್ದಯ್ಯ ಆ ಕಾರಣದಿಂದಾಗಿಯೇ ಮೂರನೆಯವರಷ್ಟೇ ಮೊದಲಿಬ್ಬರನ್ನೂ ಗೌರವಿಸುತ್ತಿದ್ದರು. ಅವರ ಅಂಬೇಡ್ಕರ್ ಚಿಂತನೆ ಗಾಂಧಿ ಮತ್ತು ಲೋಹಿಯಾ ಚಿಂತನೆಯ ವಿಸ್ತರಣೆಯೇ ಆಗಿತ್ತು. ಅದರಲ್ಲಿ ಒಗರಿತ್ತು; ಆದರೆ ಕಹಿ ಎಂಬುದು ಲವಲೇಶವೂ ಇದ್ದಿರಲಿಲ್ಲ. ಇದೇ ಅವರನ್ನು ದೇವನೂರ ಮಹಾದೇವರಂತೆಯೇ ದಲಿತ ಚಳುವಳಿಯಲ್ಲಿ ವಿಶಿಷ್ಟರನ್ನಾಗಿಸಿದ್ದುದು. ಮಹಾದೇವ ಅವರಂತೆಯೇ ಇವರು ಬಹುತೇಕ ದಲಿತ ಚಳುವಳಿಕಾರರ ನಿಲುವಿನಿಂದ ವಿಚಲಿತರಾಗದೆ, ರೈತ ಚಳುವಳಿ

ಮತ್ತು ಕನ್ನಡ ಮಾಧ್ಯಮ ಚಳುವಳಿಗಳ ವಕ್ತಾರಿಕೆಯನ್ನೂ ವಹಿಸಿದ್ದರು. ಅವರು ಯಾವಾಗಲೂ ಹೇಳುತ್ತಿದ್ದಂತೆ, ಅಹಿಂಸೆ ಅವರು ನಂಬಿದ ಪರಮ ಮೌಲ್ಯವಾಗಿತ್ತು. ಮಿಕ್ಕೆಲ್ಲ ಮೌಲ್ಯಗಳೂ ಅದರ ಮೂಲಕ ಹಾದುಹೋಗಬೇಕಿತ್ತು. ಅಹಿಂಸೆಯ ಲೌಕಿಕ ಅರ್ಥವನ್ನೂ ಬಲ್ಲವರಾಗಿದ್ದ ಸಿದ್ದಯ್ಯ ಎದುರಾದ ಎಲ್ಲರಿಗೂ ಕೇಳುತ್ತಿದ್ದ ಮೊದಲ ಪ್ರಶ್ನೆ ಎಂದರೆ, 'ಊಟ ಆಗಿದೆಯೇನೋ?'. ಅವರ ಕಾರ್ಯಕ್ಷೇತ್ರವಾಗಿದ್ದ ತುಮಕೂರು ಸೀಮೆಯ ಅವರ ಗೆಳೆಯರು ಮತ್ತು ಅನುಯಾಯಿಗಳು ಅವರ ಈ ವಿಶಿಷ್ಟತೆಯನ್ನು ಗೌರವಿಸಿ ಅವರ ಮಾನವೀಯ ಗುಣಕ್ಕೆ ಮಾರು ಹೋಗಿದ್ದರು.

ದಲಿತ ಚಳುವಳಿ ತನ್ನ ಭಾರಕ್ಕೆ ತಾನೇ ಮಣಿದು ಕುಸಿದ ನಂತರ ಸಿದ್ದಯ್ಯ ಅವರು ರಾಜಕಾರಣದತ್ತ ಹೆಚ್ಚು ವಾಲಿದ್ದರು. ಇದರಿಂದಾಗಿ ಅವರ ವ್ಯಕ್ತಿತ್ವದ ಸ್ಫುಟ ಗೆರೆಗಳು ಮಾಸತೊಡಗಿದ್ದವು. ಸ್ಥಳೀಯ ರಾಜಕಾರಣದ ರಾಗ ದ್ವೇಷಗಳೊಂದಿಗೆ ರಾಜ್ಯಮಟ್ಟದ ಅಧಿಕಾರ ರಾಜಕಾರಣದಲ್ಲಿ ಜಾಗ ಕಂಡುಕೊಳ್ಳಲು ಪ್ರಯತ್ನಿಸಿದ್ದರು. ಅದರಲ್ಲಿ ಯಶ ಕಾಣದ ಹತಾಶೆ ಇತ್ತೀಚಿನ ದಿನಗಳಲ್ಲಿ ಅವರಲ್ಲಿ ಕಾಣಿಸಿಕೊಂಡಿತ್ತು. ನನ್ನ ಕುಟುಂಬದ ಅವಿಭಾಜ್ಯ ಅಂಗವೇ ಆಗಿಹೋಗಿದ್ದ ಅವರಿಗೆ ಮತ್ತು ಅವರ ಹೆಂಡತಿ ಮಕ್ಕಳಿಗೆ ನಾನು, ಅವರು ಬುದ್ಧನನ್ನು ಮರೆತು ತೃಷ್ಣೆಗೆ ಬಲಿ ಬಿದ್ದಿದ್ದಾರೆ ಎಂದು ಹಲವು ಬಾರಿ ಎಚ್ಚರಿಸಿದ್ದೆ. ತೃಷ್ಣೆಯೇ (ದಾಹ) ಹಾಗೆ. ಅದು ಒಮ್ಮೆ ಆರಂಭವಾದರೆ ಅದು ತೀರುವವರೆಗೂ ಮನುಷ್ಯನನ್ನು ದಿಕ್ಕೆಡಿಸಿ, ಅಲೆದಾಡಿಸಿ ಅವನ ಮೈಮರೆವನ್ನು ಪೂರ್ಣಗೊಳಿಸಿ ಅವನನ್ನೇ ಬಲಿ ತೆಗೆದುಕೊಳ್ಳುತ್ತದೆ. ಬೌದ್ಧ ಪರಿಭಾಷೆಯಲ್ಲಿ ಇದನ್ನು ಮಾರನ ಬಾಣ ಎಂದೂ ಕರೆಯಲಾಗುತ್ತದೆ. ಸಿದ್ದಯ್ಯನವರ ಬದುಕು ಇದಕ್ಕೊಂದು ಇತ್ತೀಚಿನ ಉದಾಹರಣೆಯಷ್ಟೆ. ಅವರು ಸಾವನ್ನು ಆಹ್ವಾನಿಸಿದ ರಸ್ತೆ ಅಪಘಾತದ ಸನ್ನಿವೇಶ ಇದಕ್ಕೊಂದು ಸಾಕ್ಷಿಯಂತಿದೆ. ನನ್ನ ಪ್ರಕಾರ ಇದು ಗಾಂಧಿ ಚಳುವಳಿಯಿಂದ ಹಿಡಿದು ನಮ್ಮ ಎಲ್ಲ ಜನಪರ ಚಳುವಳಿಗಳ ಆತ್ಮದ್ರೋಹದ ಹಾದಿಯ ಬಲೆಯೂ ಆಗಿದೆ.

ಸಿದ್ದಯ್ಯ ಅವರ ಇತ್ತೀಚಿನ ಕಾವ್ಯ ಕೂಡ ಈ ಮೇಲಿನ ಮಾತಿಗೆ ಹೊರತಾದುದಲ್ಲ. ಬುದ್ಧನ ಅನಾತ್ಮವಾದ ('ಅನಾತ್ಮ' ಎಂಬುದು ಸಿದ್ದಯ್ಯವರ ಈಚಿನ ವರ್ಷಗಳ ಕವನ ಸಂಕಲನವೊಂದರ ಶೀರ್ಷಿಕೆಯೂ ಹೌದು) ಸಾಮಾಜಿಕ ಉದ್ದೇಶಕ್ಕೆ ಬಳಸಲ್ಪಟ್ಟು ಶೋಷಿತ ಜನರ ಮೇಲೆ ಆರೋಪಿತವಾದ ಪರಿಕಲ್ಪನೆಯಾದಾಗ ಅದು ಎಷ್ಟು ಸ್ಥೂಲಗೊಂಡು ಅಪಾರ್ಥಗಳನ್ನು ಕಲ್ಪಿಸಬಹುದು ಎಂಬುದಕ್ಕೆ ನಿದರ್ಶನದಂತಿದೆ.

ಕೇಬಿಯವರ ಆತ್ಮಕ್ಕೆ ಶಾಂತಿ ಸಿಗಲಿ!

('ಹೊಸ ಮನುಷ್ಯ' ನವೆಂಬರ್, ೨೦೧೯)

ನಮ್ಮ ಪುಟ್ಟರಾಜು ಇನ್ನಿಲ್ಲ

ಕಳೆದ (೨೦೨೦) ಸೆಪ್ಟಂಬರ್ ೨೭ರ ಮಧ್ಯಾಹ್ನದ ಹೊತ್ತಿಗೆ ನಮ್ಮ ಪುಟ್ಟರಾಜು ಇನ್ನಿಲ್ಲ ಎಂಬ ಸುದ್ದಿ ಬಂದಾಗ ನಮ್ಮ ಗೆಳೆಯರಾರೂ ನಂಬುವ ಸ್ಥಿತಿಯಲ್ಲಿ ಇರಲಿಲ್ಲ. ದಾವಣಗೆರೆಯ ಯುವ ಶಕ್ತಿಯ ಪ್ರತೀಕದಂತಿದ್ದ ಈ ಐವತ್ತರ ಚಿರ ಯುವಕ ಸದಾ ಕ್ರಿಯಾಶೀಲ. ಈ ಹಿಂದಿನ ದಿನವಷ್ಟೇ ನಾನು ಅವರ ಇತ್ತೀಚಿನ ಚಟುವಟಿಕೆಗಳ ಬಗ್ಗೆ ಮಾತನಾಡಿದ್ದೆ. ಯುವಶಕ್ತಿಗಾಗಿಯೇ ಹಲವು ಸಂಸ್ಥೆ–ವೇದಿಕೆಗಳನ್ನು ಕಟ್ಟಿದ್ದ ಮತ್ತು ಹಲವು ಕನಸುಗಳನ್ನು ಕಂಡಿದ್ದ ಬಹುಮುಖ ಆಸಕ್ತಿಗಳ ಈ ಕಿರಿಯ. ಹತ್ತು ವರ್ಷಗಳ ಹಿಂದೆ ನಮ್ಮ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ಕುಪ್ಪಳ್ಳಿಯಲ್ಲಿ ಆಯೋಜಿಸಿದ್ದ ಮೊದಲ ಸಮಾಜವಾದಿ ಶಿಬಿರಕ್ಕೆ ಶಿಬಿರಾರ್ಥಿಯಾಗಿ ಬಂದಿದ್ದ. ಶಿಬಿರದಲ್ಲಿ ತಮ್ಮ ಸಕ್ರಿಯ ಭಾಗವಹಿಸುವಿಕೆಯ ಮೂಲಕ ನನ್ನ ಗಮನ ಸೆಳೆದಿದ್ದ ಪುಟ್ಟರಾಜು ಮುಂದಿನ ಐದಾರು ವರ್ಷಗಳ ಕಾಲ ನಮ್ಮ ಈ ಪ್ರತಿಷ್ಠಾನದ ಟ್ರಸ್ಟೀಯೂ ಆಗಿ ಕಾರ್ಯ ನಿರ್ವಹಿಸಿದ್ದರು. ಈ ಅವಧಿಯಲ್ಲಿ ಅವರು ಕೊಂಡಜ್ಜಿಯ ಸ್ಕೌಟ್ಸ್ ಮತ್ತು ಗೈಡ್ಸ್ ಆವರಣದಲ್ಲಿ ಪ್ರಾಯೋಜಿಸಿದ್ದ ಸಮಾಜವಾದಿ ಶಿಬಿರ ಅವರ ಸಂಘಟನಾ ಶಕ್ತಿ ಮತ್ತು ಕ್ರಿಯಾಶೀಲತೆಗೆ ಸಾಕ್ಷಿಯಾಗಿತ್ತು. ಒಂದು ನಿರ್ದಿಷ್ಟ ಅವಧಿಯ ನಂತರ ಟ್ರಸ್ಟೀಗಳು ಬದಲಾಗುವ ರೂಢಿಗೆ ತಕ್ಕಂತೆ ಅವರು ನಂತರ ಟ್ರಸ್ಟೀಯಾಗಿರದಿದ್ದರೂ, ಪ್ರತಿಷ್ಠಾನದ ಭಾಗವಾಗಿಯೇ ಅದರ ಎಲ್ಲ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿದ್ದರು.

ದಾವಣಗೆರೆ ಬಳಿಯ ದೊಗ್ಗಳ್ಳಿ ಗೌಡ್ರ ಮನೆತನದ ಈ ಹುಡುಗ ಗೇಣಿದಾರರಿಗೆ ತನ್ನ ಪಾಲಿನ ಭೂಮಿಯನ್ನೆಲ್ಲ ಬರೆದುಕೊಟ್ಟು ದಾವಣಗೆರೆ ಸೇರಿದ ತಮ್ಮ ತಂದೆಯ ಸಮಾಜವಾದಿ ಆದರ್ಶಗಳ ಎರಕದಲ್ಲಿ ಬೆಳೆದು ಯುವಕನಾದವರು. ಕಾನೂನು ಪದವೀಧರರಾದರೂ ಉದ್ಯೋಗವನ್ನರಸಿ ಹೋಗದೆ ಜೀವನೋಪಾಯಕ್ಕಾಗಿ ಬಿಡಿ ಉದ್ಯೋಗಗಳನ್ನು ಮಾಡುತ್ತಲೇ ಯುವಜನರ ದಂಡನ್ನು ಸಂಘಟಿಸಿ ಅವರಿಗೆ ವಿವಿಧ ವೃತ್ತಿ ತರಬೇತಿ ನೀಡಿ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿದ್ದರು. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ಬಾಲ ವಿಕಾಸ ಅಕಾಡೆಮಿ, ಬಾಲಭವನ, ಜಾನಪದ ಪರಿಷತ್

ಹೀಗೆ ಹಲವು ವೇದಿಕೆಗಳಲ್ಲಿ ಅವರು ಕಾರ್ಯತತ್ಪರರಾಗಿದ್ದರು. ದಾವಣಗೆರೆಯಲ್ಲಿ ಜೆ.ಹೆಚ್. ಪಟೇಲ್ ಹೆಸರಿನ ಮ್ಯಾನೇಜ್‌ಮೆಂಟ್ ಕಾಲೇಜನ್ನು ಆರಂಭಿಸಿ ಅದನ್ನು ಆರ್ಥಿಕವಾಗಿ ಹಾಗೂ ಹೀಗೂ ಸರಿದೂಗಿಸಿಕೊಂಡು ನಡೆಸಿಕೊಂಡು ಹೋಗುತ್ತಿದ್ದರು.

ಮಿತಭಾಷಿಯಾದ ಪುಟ್ಟರಾಜು ಸ್ವಭಾವತಃ ಅಂತರ್ಮುಖಿ. ಹಾಗಾಗಿಯೇ ಅವರು ಹೃದಯಾಘಾತಕ್ಕೆ ಒಳಗಾಗಿ ಯಾರನ್ನೂ ಕೇಳದೆ ಯಾರಿಗೂ ಹೇಳದೆ ಒಂದು ಮುಂಜಾನೆ ಎಲ್ಲರನ್ನೂ ತೊರೆದು ಹೋಗಿಬಿಟ್ಟರು. ಆದರೆ ಅವರ ನೆನಪು ಅವರನ್ನು ಬಲ್ಲವರಿಂದ ಬಹುಬೇಗ ಮಾಸದು. ಅವರ ಜೀವನ ಸಂಗಾತಿ ಪ್ರತಿಭಾ ಮತ್ತು ಅವರ ಇಬ್ಬರು ಪುಟ್ಟ ಮಕ್ಕಳಿಗೆ ನೈತಿಕ ಬೆಂಬಲವಾಗಿ ನಿಲ್ಲುವ ಒಂದು ಯುವಪಡೆಯೇ ಇದೆ. ಅದೇ ಪುಟ್ಟರಾಜು ತಮ್ಮ ಕುಟುಂಬಕ್ಕೆ ಗಳಿಸಿಕೊಟ್ಟು ಹೋಗಿರುವ ಆಸ್ತಿ.

('ಹೊಸ ಮನುಷ್ಯ', ನವೆಂಬರ್, ೨೦೧೯)

ಸತ್ವಶಾಲಿ ಸಮಾಜವಾದಿ ರಘುವಂಶಪ್ರಸಾದ ಸಿಂಗ್

ಹಿರಿಯ ಸಮಾಜವಾದಿ ರಾಜಕಾರಣಿ ರಘುವಂಶ ಪ್ರಸಾದ್ ಸಿಂಗ್ ಇನ್ನಿಲ್ಲ ಎಂಬುದು ಕರ್ನಾಟಕದ ಬಹಳ ಜನರಿಗೆ ಗೊತ್ತೇ ಆಗಲಿಲ್ಲ. ಸುಮಾರು ಐವತ್ತು ವರ್ಷಗಳಷ್ಟು ದೀರ್ಘ ಅವಧಿಯ ಹೋರಾಟ ಮತ್ತು ಸಂಸದೀಯ ರಾಜಕಾರಣದ ಬದುಕು ನಡೆಸಿದ್ದ ಅವರ ಮರಣ ನಮ್ಮ ಪತ್ರಿಕೆಗಳಲ್ಲಿ ಎರಡು ಸಾಲಿನ ಸುದ್ದಿಯೂ ಆಗದಿದ್ದರೆ ಅದು ನಮ್ಮ ಇಂದಿನ ಈ ಪತ್ರಿಕೋದ್ಯಮ ಮುಟ್ಟಿರುವ ರಾಜಕೀಯ ತಿಳುವಳಿಕೆಯ ಕೊರತೆಯ ಮಟ್ಟದ ಸೂಚನೆಯೇ ಹೊರತು ರಘುವಂಶ ಪ್ರಸಾದರ ರಾಜಕೀಯ ಸಾಧನೆಯ ಕೊರತೆಯಲ್ಲ. ಏಕೆಂದರೆ ಇಂದು ಭಾರತಾದ್ಯಂತ ಗ್ರಾಮೀಣ ಬಡಜನತೆಯನ್ನು ಸಂಕಷ್ಟದ ಕಾಲದಲ್ಲಿ ಹಸಿವಿನಿಂದ ಪಾರು ಮಾಡುತ್ತಾ ಅವರ ನಿತ್ಯ ತುತ್ತಿಗೆ ಆಸರೆಯಾಗಿರುವ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಬಡತನ ನಿವಾರಣೆಯ ಹೆಸರಿನ ಇನ್ನೊಂದು ಸರ್ಕಾರಿ ಪ್ರದರ್ಶನದ ಯೋಜನೆಯಾಗಿ ಕಳೆದುಹೋಗದಂತೆ ಪಟ್ಟು ಹಿಡಿದು ಅದನ್ನು ಹಳ್ಳಿ ಹಳ್ಳಿಗೆ ತಲುಪಿಸಿದ ಸಾಧಕರಿವರು.

ಈ ಯೋಜನೆ ಸೋನಿಯಾ ಗಾಂಧಿಯವರ ರಾಷ್ಟ್ರೀಯ ಸಲಹಾ ಸಮಿತಿಯ ಕೊಡುಗೆಯಾದರೂ ರಘುವಂಶ ಪ್ರಸಾದ್ ಸಿಂಗ್ ಮೊದಲ ಯುಪಿಎ ಸರ್ಕಾರದಲ್ಲಿ ಲಾಲೂ ಪ್ರಸಾದ ಯಾದವ್ ಅವರ ರಾಷ್ಟ್ರೀಯ ಜನತಾ ದಳದ ಪ್ರತಿನಿಧಿಯಾಗಿ ಗ್ರಾಮೀಣ ಅಭಿವೃದ್ಧಿ ಮಂತ್ರಿಯಾಗಿ (೨೦೦೪-೦೯) ಈ ಯೋಜನೆಗೆ ಮುಕ್ತ ಮಾರುಕಟ್ಟೆ ಆರ್ಥಿಕತೆಯ ಸಮರ್ಥಕರಾದ ಮನಮೋಹನ್ ಸಿಂಗ್ ಅವರ ನೇತೃತ್ವದ ಸರ್ಕಾರ ಮತ್ತು ಅವರ ಆಪ್ತ ಶಿಷ್ಯ ಮೋಂಟೆಕ್ ಸಿಂಗ್ ಅಹ್ಲೂವಾಲಿಯಾ ನೇತೃತ್ವದ ಯೋಜನಾ ಆಯೋಗ ಈ ಎರಡೂ, ಹಣದ ಕೊಸರಾಟ ನಡೆಸಿದಾಗಲೆಲ್ಲ ತಮ್ಮ ವಿಶಿಷ್ಟ ಗ್ರಾಮೀಣ ಕಸುಬಿನ ವಾದಗಳ ಮೂಲಕ ಅಗತ್ಯ ಹಣ ಮಂಜೂರು ಮಾಡಿಸಿಕೊಂಡು ಈ ಯೋಜನೆಯನ್ನು ಆ ಯುಪಿಎ ಸರ್ಕಾರದ ಧ್ವಜ ಕಾರ್ಯಕ್ರಮವನ್ನಾಗಿ ಪರಿವರ್ತಿಸಿದವರು. ಅಷ್ಟೇ ಅಲ್ಲ, ಅದನ್ನು ಒಂದು ಶಾಸನಾತ್ಮಕ ಯೋಜನೆಯನ್ನಾಗಿ ಮಾಡುವ ಸಂಸದೀಯ ಕೌಶಲ್ಯವನ್ನೂ ಪ್ರದರ್ಶಿಸಿ ತಮ್ಮ ಸಮಾಜವಾದಿ ತಾತ್ವಿಕತೆಯ ಕಟಿಬದ್ಧತೆಯನ್ನು ಮೆರೆದವರು. ಈ ಸರ್ಕಾರ ೨೦೦೯ರಲ್ಲಿ ಮತ್ತೆ ಅಧಿಕಾರಕ್ಕೆ ಬಂದದ್ದೇ ಈ ಯೋಜನೆಯ ಯಶಸ್ಸಿನಿಂದಾಗಿ ಎಂಬುದು ರಾಜಕೀಯ ವಿಶ್ಲೇಷಕರ ಅಭಿಮತ. ಇಂದು ಮೋದಿ ಸರ್ಕಾರ ಈ ಯೋಜನೆಯನ್ನು ಕೊಸರಾಡಿಯಾದರೂ

ಮುಂದುವರೆಸುತ್ತಿದ್ದರೆ ಅದಕ್ಕೆ ಮುಖ್ಯ ಕಾರಣ ಈ ಯೋಜನೆಯ ಶಾಸನಾತ್ಮಕ ಸ್ವರೂಪವೇ ಆಗಿದೆ.

೧೯೭೦ರ ದಶಕದಲ್ಲಿ ಜೆಪಿ ಚಳುವಳಿಯಲ್ಲಿ ಭಾಗವಹಿಸಿದ್ದ ಬಿಹಾರ ಸಮಾಜವಾದಿ ವಿಚಾರಧಾರೆಯ ಯುವ ಸಮೂಹದಲ್ಲಿ ಒಬ್ಬರಾಗಿದ್ದ ರಘುವಂಶ ಪ್ರಸಾದ್ ಸಿಂಗ್ ಗಣಿತಶಾಸ್ತ್ರ ಅಧ್ಯಯನದಲ್ಲಿ ಡಾಕ್ಟೋರೇಟ್ ಪಡೆದವರು. ಅವರು ಹುಟ್ಟಿನಿಂದ ರಜಪೂತರಾದರೂ ಲೋಹಿಯಾ ಅವರ ಪಟ್ಟ ಶಿಷ್ಯರಾಗಿದ್ದ ಹಿಂದುಳಿದ ವರ್ಗಗಳ ನಾಯಕ ಕರ್ಪೂರಿ ಠಾಕೂರರ ಅನುಯಾಯಿಯಾಗಿ ಬೆಳೆದವರು. ೧೯೭೭ರ ಬಿಹಾರ ವಿಧಾನ ಸಭೆಗೆ ಆಯ್ಕೆಯಾದ ಅವರು ಕರ್ಪೂರ ಠಾಕೂರ್ ಅವರ ಸಂಪುಟದಲ್ಲಿ ಇಂಧನ ಖಾತೆಯ ಉಪಮಂತ್ರಿಯಾಗಿ ಸೇರಲ್ಪಟ್ಟವರು ೧೯೯೬ರಲ್ಲಿ ಲೋಕಸಭೆಗೆ ಆಯ್ಕೆಯಾಗುವವರೆಗೆ ವಿವಿಧ ಖಾತೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಸಚಿವರಾಗಿ ಬಿಹಾರ ರಾಜಕಾರಣದ ಸಮಾಜವಾದಿ ಧಾರೆಯ ಮಹಾಪೋಷಕರಾಗಿ ಬೆಳೆದರು. ೧೯೯೪ರಲ್ಲಿ ತಮ್ಮಿಬ್ಬರು ಗೆಳೆಯರಾದ ಲಾಲೂ ಮತ್ತು ನಿತೀಶ್ ಕುಮಾರ್ ಬೇರೆ ಬೇರೆ ದಿಕ್ಕುಗಳಲ್ಲಿ ಹೊರಟಾಗ ಕೋಮುವಾದಿ ರಾಜಕರಣದ ಉಗ್ರ ವಿರೋಧಿಯಾದ ಸಿಂಗ್ ಅವರು ಲಾಲೂ ಅವರ ರಾಷ್ಟ್ರೀಯ ಜನತಾದಳದ ಕಡೆಗೆ ಒಲಿದಿದ್ದು ಸಹಜವೇ ಆಗಿತ್ತು. ಈ ಪಕ್ಷದ ಅಭ್ಯರ್ಥಿಯಾಗಿ ವೈಶಾಲಿ ಕ್ಷೇತ್ರದಿಂದ ೧೯೯೬ರಿಂದ ಸತತವಾಗಿ ಐದು ಬಾರಿ ಲೋಕಸಭೆಗೆ ಆಯ್ಕೆಯಾದ ಅವರು ೨೦೧೪ರ ಚುನಾವಣೆಯಲ್ಲಿ ಮೋದಿ ಅಲೆ ಎದುರು ಮೊದಲ ಪರಾಭವವನ್ನು ಕಂಡರು.

ಇತ್ತೀಚಿನ ವರ್ಷಗಳಲ್ಲಿ ರಾಜಕೀಯದಲ್ಲಿ ಸಕ್ರಿಯ ಆಸಕ್ತಿ ಕಳೆದುಕೊಂಡಿದ್ದ ಸಿಂಗ್ ತಮ್ಮ ಪಕ್ಷ ಸಂಪೂರ್ಣವಾಗಿ ಲಾಲೂ ಮಕ್ಕಳ ಕೈವಶವಾಗುತ್ತಿರುವುದನ್ನು ಪ್ರತಿಭಟಿಸತೊಡಗಿದ್ದರು. ಪಕ್ಷದ ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆಯನ್ನೂ ನೀಡಿದ್ದರು. ಒಂದು ತಿಂಗಳ ಹಿಂದೆ ಕೋವಿಡ್‌ನಿಂದ ಬಳಲಿ ಸುಧಾರಿಸಿಕೊಂಡಿದ್ದ ಅವರು ನಂತರದ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಾ ತಮ್ಮ ಬದುಕಿನ ಕೊನೆಯ ಹೋರಾಟ ನಡೆಸಿ ಅಂತಿಮವಾಗಿ ದೆಹಲಿಯ ಅಖಿಲ ಭಾರತ ವೈದ್ಯಕೀಯ ಸಂಸ್ಥೆಯಲ್ಲಿ ಸೆಪ್ಟಂಬರ್ ೧೪ರಂದು ತಮ್ಮ ೭೬ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು ಬುದ್ಧನ ನಾಡಾದ ವೈಶಾಲಿಯ ಪುತ್ರನಾದ ಅವರು ಮರಣ ಶಯ್ಯೆಯಿಂದಲೇ ಬರೆದ ತಮ್ಮ ಎರಡು ಕೊನೆಯ ಪತ್ರಗಳಲ್ಲಿ ಪ್ರಧಾನ ಮಂತ್ರಿ ಮೋದಿಯವರನ್ನು ಕಾಬೂಲ್‌ನಲ್ಲಿರುವ ಬುದ್ಧನ ಭಿಕ್ಷಾಪಾತ್ರೆಯನ್ನು ವೈಶಾಲಿಗೆ ವಾಪಸ್ ತರುವ ವ್ಯವಸ್ಥೆ ಮಾಡಬೇಕೆಂದೂ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್‌ರನ್ನು ಉದ್ಯೋಗ ಖಾತರಿ ಯೋಜನೆಯ ಪ್ರಾಮಾಣಿಕ ಅನುಷ್ಠಾನದ ಮೂಲಕ ತಮ್ಮ ವೈಶಾಲಿ ಕ್ಷೇತ್ರದ ಗ್ರಾಮೀಣ ಬಡ ಜನತೆಯನ್ನು ರಕ್ಷಿಸಿ ಎಂದು ಕೋರಿದ್ದರು. ಇದು ಅವರ ಸಮಾಜವಾದಿ ತತ್ವ ಬದ್ಧತೆಗೆ ಸಹಜವೇ ಆಗಿತ್ತು.

(**'ಹೊಸ ಮನುಷ್ಯ' ಅಕ್ಟೋಬರ್. ೨೦೨೦**)

ಹೋರಾಟಗಾರ ಸಂನ್ಯಾಸಿ ಸ್ವಾಮಿ ಅಗ್ನಿವೇಶ್

ಆರ್ಯ ಸಮಾಜ ಚಳುವಳಿಯ ಹಿರಿಯ ನಾಯಕರೂ, ಮಾಜಿ ಲೋಕಸಭಾ ಸದಸ್ಯರೂ ಆಗಿದ್ದ ಸ್ವಾಮಿ ಅಗ್ನಿವೇಶ್ ಅವರ ನಿಧನರಾಗಿದ್ದಾರೆ. ಕಾವಿ ತೊಟ್ಟು ಸಂನ್ಯಾಸಿಯಾಗಿ ತಮ್ಮ ರಾಜ್ಯ ಹರ್ಯಾನಾದಲ್ಲಿ ಸಮಾಜ ಸುಧಾರಣಾ ಕಾರ್ಯಕ್ರಮಗಳಲ್ಲಿ ತೊಡಗಿದ್ದ ಅಗ್ನಿವೇಶರು ದೇಶ ಇಂದಿರಾ ಗಾಂಧಿಯವರ ನೇತೃತ್ವದಲ್ಲಿ ಅಡ್ಡ ಹಾದಿ ಹಿಡಿಯತೊಡಗಿದಾಗ ಜಯಪ್ರಕಾಶ ನಾರಾಯಣರ ಕರೆಯ ಮೇರೆಗೆ ಪ್ರಜಾಸತ್ತೆಯನ್ನು ರಕ್ಷಿಸುವ ಮಹಾ ಆಂದೋಲನದಲ್ಲಿ ಭಾಗವಹಿಸಲು ಹಿಂಜರಿಯಲಿಲ್ಲ. ೧೯೭೭ರಲ್ಲಿ ಲೋಕಸಭೆಗೆ ಆಯ್ಕೆಯಾಗುವಷ್ಟು ಜನಮನ್ನಣೆ ಗಳಿಸಿದ ಅವರು ಜೆಪಿ ಚಳುವಳಿಯ ಪ್ರಭಾವ ಕ್ಷೀಣಿಸಿದಂತೆ ಅವರೂ ರಾಜಕಾರಣದ ಹಿನ್ನೆಲೆಗೆ ಸರಿದರು. ಹರ್ಯಾಣಾ–ರಾಜಸ್ಥಾನಗಳಲ್ಲಿ ಜೀತ ಪದ್ಧತಿ, ಅಸ್ಪೃಶ್ಯತೆ ಮತ್ತು ಮಹಿಳಾ ದೌರ್ಜನ್ಯಗಳ ವಿರುದ್ಧ ಹಲವು ಹೋರಾಟಗಳನ್ನು ನಡೆಸಿ ಯಶಸ್ವಿಯಾಗಿದ್ದ ಅವರು ಸಂಘ ಪರಿವಾರದ ಕೋಮುವಾದಿ ರಾಜಕಾರಣದ ವಿರುದ್ಧ ತಮ್ಮ ಕೊನೆಯ ಹೋರಾಟವನ್ನೂ ನಡೆಸುತ್ತಾ ಅಸು ನೀಗಿದ್ದಾರೆ.

ಇಂದಿನ ತಲೆಮಾರಿನ ಯುವಜನ ಅವಶ್ಯವಾಗಿ ನೆನಪಿಡಬೇಕಾದ ನಿಜ ಹೋರಾಟಗಾರರಿವರು.

(ಅಕ್ಟೋಬರ್, ೨೦೨೦ರ 'ಹೊಸ ಮನುಷ್ಯ')

ಅಗಲಿದ ಅಪರೂಪದ ಕವಿಚೇತನ ಸಿದ್ಧಲಿಂಗಯ್ಯ

ಕವಿ ಸಿದ್ಧಲಿಂಗಯ್ಯ ಈಗ ನಮ್ಮೊಡನಿಲ್ಲ ಎಂದರೆ ನಂಬುವುದು ಕಷ್ಟ. ಅವರು ತಮ್ಮ ಕಾವ್ಯ, ಹೋರಾಟ, ಮಾತುಗಾರಿಕೆ ಮತ್ತು ಅಪ್ರತಿಮ ಹಾಸ್ಯದಿಂದ ನಮ್ಮನ್ನು ಈವರೆಗೆ ಎಷ್ಟು ದಟ್ಟವಾಗಿ ಸುತ್ತುವರೆದಿದ್ದರೆಂದರೆ ಅವರ ನೆನಪು ನಮ್ಮನ್ನು ಬಹುಕಾಲ ಕಾಡುತ್ತಲೇ ಇರುತ್ತದೆ.

ಒಂದೂವರೆ ತಿಂಗಳ ಹಿಂದೆ ಕರೋನಾ ಸೋಂಕಿಗೆ ಬಲಿಯಾಗಿ ಗುಣಮುಖರಾಗಿ ಆಸ್ಪತ್ರೆಯಿಂದ ಹೊರಬಂದಿದ್ದರೂ, ಅವರು ಕೆಲವೇ ದಿನಗಳಲ್ಲಿ ಕರೋನಾಗೆ ಸಂಬಂಧಿಸಿದಂತೆ ಬಹುವಾಗಿ ಹೇಳುವ ಚಿಕಿತ್ಸೋತ್ತರ ದುಷ್ಪರಿಣಾಮಗಳಿಗೆ ಒಳಗಾಗಿ ಅಸು ನೀಗಿದ್ದಾರೆ. ಅಪಾರ ಜೀವನೋತ್ಸಾಹಿಯಾಗಿದ್ದ ಅವರಿಗೆ ಬದುಕುವ ಆಸೆ ಬಹಳವಿತ್ತು. ಹಾಗಾಗಿಯೇ ಅವರು ಬಹಳ ವರ್ಷಗಳಿಂದ ಮಧುಮೇಹ, ರಕ್ತದ ಒತ್ತಡ ಮತ್ತು ಹೃದಯ ಸಂಬಂಧಿ ಕಾಯಿಲೆಗಳ ವಿರುದ್ಧ ತಮ್ಮ ವ್ಯಕ್ತಿತ್ವಕ್ಕೆ ಒಗ್ಗದ ಆಹಾರ ಪಥ್ಯ, ಪ್ರಾಣಾಯಾಮ, ಯೋಗ, ಸಮನ್ವಯ ಚಿಂತನೆಗಳನ್ನು ತಮ್ಮ ಈ ಹಿಂದಿನ ಹಲವು ಸಹವರ್ತಿಗಳ ಕಟು ಟೀಕೆ-ದೂಷಣೆಗಳನ್ನು ಲೆಕ್ಕಿಸದೆ ಹಠದಂತೆ ಅಳವಡಿಸಿಕೊಂಡು ಬದುಕುತ್ತಿದ್ದರು. ಈ ಹೊಸ ಜೀವನ ಕ್ರಮ ಅವರು ಆವರೆಗೆ ಎತ್ತಿ ಹಿಡಿದಿದ್ದ ಜೀವನ ದೃಷ್ಟಿ ಮತ್ತು ತತ್ವಗಳಿಗೆ ವಿರುದ್ಧವಾಗಿ ತೋರುತ್ತಿದ್ದರೂ. ಬದುಕುವ ಆಸೆಯಿಂದ ತುಂಬಿಕೊಂಡ ಅವರ ಈ ವಿಚಿತ್ರ ಹಠದ ಹಿನ್ನೆಲೆಯಲ್ಲೇ ಅವರ ಈ ಹಠಾತ್ ಸಾವು ಹೆಚ್ಚು ವೇದನಾಮಯವೆನ್ನಿಸುವುದು. ಅವರ ನಿಧನಕ್ಕಾಗಿ 'ಹೊಸ ಮನುಷ್ಯ' ತನ್ನ ಓದುಗರೊಂದಿಗೆ ಶೋಕಿಸುತ್ತದೆ.

ಕರ್ನಾಟಕವೇನು, ಇಡೀ ಭಾರತ ರಾಜಕೀಯ ಮತ್ತು ಸಾಮಾಜಿಕ-ಆರ್ಥಿಕ ಸಂಕಟಗಳ ಅಶಾಂತಿಯಲ್ಲಿ ಬೇಯುತ್ತಿದ್ದ ಕಳೆದ ಎಪ್ಪತ್ತರ ದಶಕದಲ್ಲಿ ಆ ಅಶಾಂತಿಯ ಅಗ್ನಿದಿವ್ಯದಲ್ಲಿ ಯುವ ಹೋರಾಟಗಾರ ಮತ್ತು ಕವಿಯಾಗಿ ಹೊರಹೊಮ್ಮಿದ ಸಿದ್ಧಲಿಂಗಯ್ಯ ಆನಂತರ ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ಹಿಂದಿರುಗಿ ನೋಡಿದ್ದೇ ಇಲ್ಲ.

ಇದಕ್ಕೆ ಬಡತನದಲ್ಲಿ ಬೆಂದು ಮೂಡಿದ್ದ ಕೆಚ್ಚು, ಹುಟ್ಟು ಪ್ರತಿಭೆಗಳು ಎಷ್ಟು ಕಾರಣವೋ ಅಷ್ಟೇ ಅವರ ಹುಟ್ಟು ಜಾಣತನವೂ ಕಾರಣವಾಗಿತ್ತು. ಅವರು 'ಇಕ್ರಲಾ, ವದೀರ್ಲಾ, ನನ್ಮಕ್ಕ ಚರ್ಮ ಎಬ್ರಲಾ...' ಎಂಬಂತಹ ಆ ಕಾಲದ ಸಮಾಜ–ಕಾವ್ಯಗಳೆರಡನ್ನೂ ಬೆಚ್ಚಿಬೀಳಿಸುವಂತಹ ಪದ್ಯ ಬರೆದರೂ, ಆ ಆಕ್ರೋಶ ಅವರ ಜೀವದಿಂದ ಚಿಮ್ಮಿ ಬಂದಿದ್ದಲ್ಲ ಎನ್ನುವುದನ್ನು ಸೂಚಿಸುವಂತೆ ಅವುಗಳ ಜೊತೆಗಿನ ಬಹುತೇಕ ಕವನಗಳು ಇನ್ನೊಬ್ಬರ ಅಂತಃಕರಣವನ್ನು ತಟ್ಟಿ ಅವರನ್ನು ಆತ್ಮಾವಲೋಕನಕ್ಕೆ ದೂಡುವ ಆಳದ ದುಗುಡ–ಅಸಹಾಯಕತೆಗಳಿಂದ ಆರ್ದ್ರಗೊಂಡಂಥವು. 'ನನ್ನ ಜನಗಳು' ಎಂಬ ಅವರ ಪದ್ಯ ಇದಕ್ಕೊಂದು ಮಾದರಿ ಉದಾಹರಣೆ. ಹಾಗೆ ನೋಡಿದರೆ ಅವರ 'ಇಕ್ರಲಾ ವದೀರ್ಲಾ...' ಲಾಂಛನ ಪದ್ಯದ ಮುಂದುವರಿದ ಸಾಲುಗಳ ತುಂಬ ಇದೇ ಭಾವ ತುಂಬಿ ತುಳುಕಿದೆ.

ಹಾಗೆಂದೇ ಸಿದ್ಧಲಿಂಗಯ್ಯ ಅವರ ಈ (ಬಾಲ)ಆರ್ಭಟಕ್ಕೆ ಯಾರೂ ಹೆದರಲಿಲ್ಲ ಅಥವಾ ದೂರಲಿಲ್ಲ; ಬದಲಿಗೆ ಅದೊಂದು ವಿಲೋಮ ಭಾವಗೀತೆಯೆಂಬಂತೆಯೇ ಮೆಚ್ಚಿದರು; ಸ್ವಾಗತಿಸಿದರು! ಸಿದ್ಧಲಿಂಗಯ್ಯ ಆಗ ಸಂದರ್ಭದ ಉತ್ಸಾಹದಲ್ಲಿ ಭಾಗವಹಿಸಿದ ಬೂಸಾ ಚಳುವಳಿ, ಕಮ್ಯೂನಿಸ್ಟ್ ಚಳುವಳಿ, ದಲಿತ ಚಳುವಳಿ ಮತ್ತು ಬಂಡಾಯ ಚಳುವಳಿಗಳ ಹುಟ್ಟು ಆವೇಶ ಮತ್ತು ಗದ್ದಲಗಳ ನಡುವೆ ಅವರ ದನಿಯ ಈ ಸೂಕ್ಷ್ಮ ತರಂಗಾಂತರಗಳನ್ನು ಗಮನಿಸದೆ ಅವರನ್ನು ಸಾರಾಸಗಟಾಗಿ ಸಾಂಪ್ರದಾಯಿಕ ನಮೂನೆಯ ಬೆಂಕಿ ಉಗುಳುವ 'ಕ್ರಾಂತಿ ಕವಿ' ಎಂದು ಗುರುತಿಸಲಾಯಿತು. ಕವಿ ಕೂಡ ಇದು ಹುಟ್ಟಿಸಿದ ಉನ್ಮಾದದಲ್ಲಿ ಅದನ್ನು ಒಪ್ಪಿಕೊಂಡರು. ಇವರು ಬರೆದಿರುವ ಗದ್ಯರಾಶಿಯನ್ನು ಸಾಹಿತ್ಯಕವಾಗಿ ಪರಿಶೀಲಿಸಿದರೆ ಈ ಮಾತು ಸೂರ್ಯಸ್ಪಷ್ಟವಾಗುವುದು. ನನ್ನ ಅಭಿಪ್ರಾಯದಲ್ಲಿ ಕ್ರಾಂತಿಕಾರಕತೆ ಮತ್ತು ಕಾವ್ಯಗಳೆರಡೂ ತಮ್ಮ ಉತ್ತುಂಗ ಮುಟ್ಟಿ ಹದವಾಗಿ ಬೆರೆತ ಅವರ ಏಕೈಕ ಪದ್ಯವೆಂದರೆ 'ಸಾವಿರಾರು ನದಿಗಳು.' ಸಿದ್ಧಲಿಂಗಯ್ಯನವರನ್ನು ಈ ಪದ್ಯ ಆಧುನಿಕ ಕನ್ನಡ ಕಾವ್ಯಲೋಕದಲ್ಲಿ ವಿಶಿಷ್ಟರನ್ನಾಗಿ ಉಳಿಸುವುದು.

ಸಿದ್ಧಲಿಂಗಯ್ಯ ನಾನು ಕಂಡಂತೆ ನಗರಕ್ಕೆ ಬಂದು ಬದುಕಲು ತಮ್ಮ ಜಾಣ್ತನವನ್ನು ಕಿಲಾಡಿತನವನ್ನಾಗಿ ಪರಿವರ್ತಿಸಿಕೊಂಡ ಮೂಲತಃ ಹಳ್ಳಿ ಮನಸ್ಸಿನ ಲಾಲಿತ್ಯವುಳ್ಳ ಮನುಷ್ಯ. ಹೋರಾಟದ ಸಂಭ್ರಮ ಮತ್ತು ಜಯಕಾರಗಳ ನಡುವೆ ಈ ವ್ಯಕ್ತಿತ್ವದಲ್ಲಿ ಉಂಟಾದ ಈ ಬಿರುಕಿನ ಕಡೆ ಗಮನ ಹರಿಸಲಾಗದ ಸಿದ್ಧಲಿಂಗಯ್ಯ ನಂತರ ಅದಕ್ಕೆ ಬಲಿಯಾದರು. ಆನಂತರ ಅವರನ್ನು ಕಾಡಿದ ಮಾರಕ ಕಾಯಿಲೆಗಳ ಮೂಲವೂ ಇಲ್ಲೇ ಇತ್ತು ಎನ್ನಬಹುದು. ಇದಕ್ಕೆ ಅವರೆಷ್ಟು ಕಾರಣರೋ ಅವರನ್ನು ಮೆರೆಸಿದ ಅವರ ಚಳುವಳಿಕಾರ ಮತ್ತು ಸಾಹಿತ್ಯಿಕ ಗೆಳೆಯರೂ ಕಾರಣ. ಆದರೀಗ ಇವರೆಲ್ಲ ಅವರೊಬ್ಬರನ್ನೇ ವಿಶ್ವಾಸದ್ರೋಹಿಯೆಂದೂ, ಅವಕಾಶವಾದಿಯೆಂದೂ ಕರೆಯುತ್ತಿದ್ದರೆ

ಅದಕ್ಕೆ ಈಗ ಇವರನ್ನೆಲ್ಲ ಸುಸ್ತು ಮಾಡಿ ಹೀಗೆ ಶಪಿಸಲು ಮಾತ್ರ ಶಕ್ತರನ್ನಾಗಿ ಉಳಿಸಿರುವ ಅವರ ಚಳುವಳಿಗಳ ಮತ್ತು ಸಾಹಿತ್ಯ ಮೀಮಾಂಸೆಗಳ ಮಿತಿಗಳು ಕಾರಣವೆನ್ನಬಹುದು.

ಅಂದ ಮಾತ್ರಕ್ಕೆ ಸಿದ್ಧಲಿಂಗಯ್ಯನವರ ಹೋರಾಟ, ಪದ್ಯ, ಗದ್ಯ, ಹಾಸ್ಯ ಎಲ್ಲವೂ ತಮ್ಮ ಮೂಲ ಮೌಲ್ಯಗಳನ್ನೇನೂ ಕಳೆದುಕೊಳ್ಳವು. ಅವು ನಮ್ಮ ಕಾಲದ ರೋಮಾಂಚಕ ಅವಧಿಯ ಚರಿತ್ರೆಯ ಜೀವಂತ ತುಣುಕುಗಳಾಗಿ ನಮ್ಮನ್ನು ಕಾಡುತ್ತಲೇ ಇರುತ್ತವೆ. ಅವುಗಳೊಳಗಿನ ಹಲವು ಅಪಶೃತಿಗಳ ಬಗ್ಗೆ ಎಚ್ಚರಿಸುತ್ತಲೂ.

(ಜುಲೈ, ೨೦೨೧ರ 'ಹೊಸ ಮನುಷ್ಯ')

ಸ್ಮರಣೆ

ಶೃಂಗೇರಿ ಮಠದ ಓರ್ವ ವಿಭಿನ್ನ ಪೀಠಾಧಿಪತಿ : ಶ್ರೀ ಚಂದ್ರಶೇಖರ ಭಾರತಿ ಸ್ವಾಮೀಜಿ

ಏಳನೇ ಶತಮಾನದಲ್ಲಿ ಆದಿ ಶಂಕರಾಚಾರ್ಯರಿಂದ ಸ್ಥಾಪಿತವಾದದ್ದೆಂಬ ಪ್ರತೀತಿ ಇರುವ ಶೃಂಗೇರಿ ಶಾರದಾ ಪೀಠಕ್ಕೆ ಈವರೆಗೆ ನೂರಾರು ಪೀಠಾಧಿಪತಿಗಳು ಆಗಿ ಹೋಗಿದ್ದರೂ, ಶ್ರೀ ಚಂದ್ರಶೇಖರ ಭಾರತಿ ಸ್ವಾಮೀಜಿಯವರಷ್ಟು(೧೮೯೨-೧೯೫೪) ಆಧುನಿಕ ಕಾಲಮಾನದ ಜನಮನದಲ್ಲಿ ಅವರ ಅಧ್ಯಾತ್ಮಿಕ ಸಂಪನ್ನತೆಗಾಗಿ ನೆಲೆಗೊಂಡವರು ಬಹಳ ಕಡಿಮೆ. ಬದುಕಿದ್ದಾಗಲೇ ಜೀವನ್ಮುಕ್ತರೆಂದು ಅವರ ಭಕ್ತರಿಂದ ಗುರುತಿಸಲ್ಪಟ್ಟಿದ್ದ ಸ್ವಾಮೀಜಿ, ಪೀಠದ ಅಧಿಪತಿಗಳಾಗಿ ಇದ್ದುದು ಔಪಚಾರಿಕವಾಗಿ ಮಾತ್ರ. ಎಲ್ಲ ಅಧಿಕಾರವನ್ನೂ ಮಠದ ಸರ್ವಾಧಿಕಾರಿಗಳಿಗೆ ಬಿಟ್ಟುಕೊಟ್ಟಿದ್ದ ಅವರು ಪೀಠಾರೋಹಣ ಮಾಡಿದ ಹದಿನೆಂಟು ವರ್ಷಗಳಲ್ಲೇ ಶಿಷ್ಯಪರಿಗ್ರಹ ಮಾಡಿಕೊಂಡು ಆ ಶಿಷ್ಯನಿಗೆ ಪೀಠಾಧಿಪತ್ಯದ ಎಲ್ಲ ಜವಾಬ್ದಾರಿಗಳನ್ನೂ ವಹಿಸಿ (೧೯೩೬) ತಾವು ಇಚ್ಛಾಮರಣಿಯಾಗುವ ಕಾಲದವರೆಗೆ ಪೂರ್ಣ ಅಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿಕೊಂಡಿದ್ದವರು. ಪೀಠಾಧಿಪತಿಯಾಗಿದ್ದಾಗಲೂ ಮಠದ ಔಪಚಾರಿಕತೆಗಳಾದ ಪೂಜೆ – ಅಭಿಷೇಕ – ಪಟ್ಟಾಧಿಕಾರ – ಪೀಠಾರೋಹಣ – ಉತ್ಸವ – ರಾಜಮೆರವಣಿಗೆ ಇತ್ಯಾದಿಗಳ ಬಗ್ಗೆ, ಮಠದ ಸಂಪದಭಿವೃದ್ಧಿಯ ಚಟುವಟಿಕೆಗಳ ಬಗ್ಗೆ ಔದಾಸೀನ್ಯವನ್ನೇ ತಾಳಿದ್ದ ಅವರನ್ನು ಮಠಾಧಿಕಾರಿಗಳು ಮಾನಸಿಕ ಅಸ್ವಸ್ಥರಂತೆಯೇ ಕಂಡದ್ದು ಆಶ್ಚರ್ಯವಲ್ಲ. ಅವಧೂತ ಪ್ರವೃತ್ತಿ ಈ ಪೀಠ ಪರಂಪರೆಗೆ ಹೊಸದೇ ಆಗಿದ್ದಿರಬಹುದು.

ಚಂದ್ರಶೇಖರ ಭಾರತಿಯವರು ಅದ್ವೈತ ಸಿದ್ಧಾಂತ ಮತ್ತು ಅದರ ಅನುಷ್ಠಾನದಲ್ಲಿ ಪರಿಶ್ರಮ ಹೊಂದಿದವರಾಗಿದ್ದರೂ, ಅವರಿಗೆ ಅದೊಂದು ಬಂಧನವಾಗಿರಲಿಲ್ಲ. ತಮಗೆ ವೇದ ವಿದ್ಯಾಭ್ಯಾಸದ ಗುರುಗಳಾಗಿದ್ದ ಹಾನಗಲ್ಲು ವಿರೂಪಾಕ್ಷಶಾಸ್ತ್ರಿಗಳ

ಗರಡಿಯಲ್ಲಿ ಬೆಳೆದವರಾಗಿ ಅದ್ವೈತವನ್ನು ಒಂದು ಮತೀಯ ಪಂಥವಾಗಿ ಸಂಕುಚಿತವಾಗಿ ನೋಡಿದವರಲ್ಲವೆಂಬುದು ಅವರ ಬದುಕಿನ ಹಲವು ಸಂಗತಿಗಳು ಸಾಬೀತುಪಡಿಸುತ್ತವೆ. ಮುಖ್ಯವಾಗಿ, ತಮ್ಮನ್ನು ವೈದಿಕ ಪಾಠಶಾಲೆಗೆ ಸೇರುವಂತೆ ಮಾಡಿ ಮುಂದೆ ಪೀಠಾಧಿಪತಿಯನ್ನಾಗಿ ಆಯ್ದ ನೃಸಿಂಹ ಭಾರತಿಯವರು ತಮ್ಮನ್ನು ಬೆಂಗಳೂರಿನ ಶಂಕರಮಠದ ವೇದ ಪಾಠಶಾಲೆಗೆ ಕಳಿಸುವಾಗ ಆಶೀರ್ವಾದ ರೂಪದಲ್ಲಿ ರಚಿಸಿ ಉಪದೇಶಿಸಿದ್ದ ಈ ಅರ್ಥದ ಸಂಸ್ಕೃತ ಶ್ಲೋಕವೇ ಅವರ ಬದುಕಿನ ಮಾರ್ಗದರ್ಶಿಯಾಗಿತ್ತು: 'ಸಂಸಾರವೆಂಬ ನದಿಯನ್ನು ದಾಟುವ ಬಯಕೆ ನಿನಗಿದ್ದರೆ, ಹಿತವನ್ನುಂಟು ಮಾಡುವ, ಉಪನಿಷತ್ತಿನ ಉಪದೇಶಗಳಿಗೆ ಹೊಂದಿಕೊಳ್ಳುವ ನನ್ನ ಈ ಮಾತನ್ನು ಕೇಳು. ತಲೆ ಬೋಳಿಸಿಕೊಂಡು, ಜನಿವಾರವನ್ನು ಕಿತ್ತೆಸೆದ ಸಂನ್ಯಾಸಿಯಾಗಿ ಶ್ರದ್ಧಾಭಕ್ತಿನಿರತನಾಗಿ ಸಾಧನ ಚತುಷ್ಟಯಗಳ ಮೂಲಕ ಗುರುವಿನ ಮಾತಿನಂತೆ ಆತ್ಮನನ್ನು ಅರಸು.' ಅವರು ತಮ್ಮ ಬಳಿಗೆ ಬಂದವರಿಗೆ ಬೋಧಿಸಿದ್ದೂ ಇದನ್ನೆ.

ಅವರು ಈ ಸಾಧನೆಯ ಚಿಹ್ನೆಯಾಗಿ ಕಾಣುತ್ತಿದ್ದುದು ಯಾರದೇ ಪಾಠ ಪಾಂಡಿತ್ಯವನ್ನಲ್ಲ. ಬದಲಿಗೆ ಅನುಷ್ಠಾನ ಚಿಹ್ನೆಗಳನ್ನು. ಸ್ವಾಮೀಜಿ ಏಕಾಂತ ಬಯಸಿ ಮಠ ಬಿಟ್ಟು ಎಲ್ಲಿ ಹೋದರೂ ತಮ್ಮನ್ನು ಮುತ್ತುತ್ತಿದ್ದ ಭಕ್ತಸಮೂಹದ ದರ್ಶನಕಾಂಕ್ಷೆಯಿಂದ ವಿಚಲಿತರಾಗುತ್ತಿದ್ದರು. ಇದನ್ನು ಅವರು ವಿವರಿಸುತ್ತಿದ್ದುದು ಹೀಗೆ: ಜನ ಬರುವುದು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಆಶೀರ್ವಾದ ಪಡೆಯಲು. ಆ ಶಕ್ತಿ ನನಗಿಲ್ಲ. ನನ್ನ ದರ್ಶನ ಬಯಸಿ ಬರುವವರು ಹೆಚ್ಚಾಗಿ ನಾನು ಕೂತಿರುವ ಪೀಠದ ಮೇಲಿನ ಗೌರವದಿಂದ. ಈ ಪೀಠದ ಮೇಲೆ ಯಾರು ಕೂತರೂ ಅವರು ಬರುತ್ತಾರೆ. ನಿಜವಾಗಿ ನನ್ನನ್ನೇ ಕಾಣಲು ಬಯಸುವವರು ಹೇಗಾದರೂ ನನ್ನನ್ನು ಕಂಡೇ ಕಾಣುವ, ಮಾತಾಡುವ ಸಂದರ್ಭ ಒದಗುತ್ತದೆ. ಹಿರಿಯ ಭಕ್ತರೊಬ್ಬರು ಲೋಕೋದ್ಧಾರಕ್ಕಾಗಿ ತಮ್ಮನ್ನು ಸಮರ್ಪಿಸಿಕೊಳ್ಳಬಯಸುವುದಾಗಿ ಹೇಳಿಕೊಂಡು ಅವರ ಆಶೀರ್ವಾದ ಬೇಡಿ ಬಂದಾಗ ಅವರ ಅಧ್ಯಯನದ ವಿವರ ಕೇಳಿದ ಸ್ವಾಮಿಗಳು ಅವರಿಗೆ 'ಮೊದಲು ನಿಮ್ಮ ಉದ್ಧಾರವಾಗಿದೆಯೇ ನೋಡಿಕೊಳ್ಳಿ. ಆಗ ಹಸಿವೇ ಇಲ್ಲದ ಜನರಿಗೆ ಹಸಿವು ನಿವಾರಿಸಿಕೊಳ್ಳುವುದರ ಬಗ್ಗೆ ಪ್ರವಚನ ನೀಡುವ ಅಸಾಂಗತ್ಯ ನಿಮ್ಮ ಅರಿವಿಗೆ ಬರುತ್ತದೆ' ಎಂದು ಸಲಹೆ ನೀಡಿದರು..

ಟಿಪ್ಪುವನ್ನು ಹಿಂದೂ ವಿರೋಧಿ ಅಥವಾ ಮುಸ್ಲಿಂ ಮತಾಂಧ ಎಂದು ಕರೆಯಲು ನಿರಾಕರಿಸುವ ಸ್ವಾಮಿಗಳು ಹಿಂದೂಗಳಾಗಿದ್ದ ಮರಾಠರು ಶೃಂಗೇರಿ ಮಠವನ್ನು ಲೂಟಿ ಮಾಡಿದಾಗ ಹೈದರಾಬಾದ್‌ನ ನಿಜಾಮ ಮತ್ತು ಮೈಸೂರಿನ ಟಿಪ್ಪು ಮಠಕ್ಕೆ ಅಮೂಲ್ಯ ಕೊಡುಗೆಗಳಿಂದ ನೆರವಾದುದನ್ನು ನೆನಪಿಸುತ್ತಾ, ಟಿಪ್ಪು ತನ್ನ ಒಂದು ರಾಜ್ಯದ ದೊರೆಯಾಗಿ ರಾಜಧರ್ಮ ಪಾಲನೆ ಮಾಡಿದನಷ್ಟೆ ಎಂದು ವಿವರಿಸುತ್ತಾರೆ. ಅದ್ವೈತ ಸಿದ್ಧಾಂತ ಪಂಡಿತರೊಬ್ಬರು ಅನ್ಯಮತ ಖಂಡನೆಯ ವಿದ್ವತ್ಪೂರ್ಣ ಗ್ರಂಥ ರಚಿಸಿ ತಂದೊಪ್ಪಿಸಿ ಆಶೀರ್ವಾದ ಬೇಡಿದಾಗ, 'ಇತರರ ನಂಬಿಕೆಗೆ ಘಾತ ಉಂಟು

ಮಾಡುವ ಈ ಪಂಡಿತ ಕಸರತ್ತುಗಳಲ್ಲೇಕೆ ಕಾಲ ವ್ಯರ್ಥ ಮಾಡುವಿರಿ? ನೀವು ನಂಬಿದ ವಿಚಾರ ಪಥದಲ್ಲಿ ಸಾಧನೆ ಮಾಡಿ ನಿಮ್ಮನ್ನು ನೀವು ಶುದ್ಧಿ ಮಾಡಿಕೊಳ್ಳಿ' ಎಂದು ಸಲಹೆ ನೀಡಿ ಕಳಿಸಿದರು. ಇನ್ನು ಅವರ ಅವಧೂತ ಪ್ರವೃತ್ತಿಯನ್ನು ಅಸ್ವಸ್ಥತೆಯೆಂದು ತಿಳಿದು ಅದರ ಚಿಕಿತ್ಸೆಗಾಗಿ ಮಠದ ಸರ್ವಾಧಿಕಾರಿಗಳ ಕರೆಯ ಮೇರೆಗೆ ಬಂದು ತಾವು ಮಾಧ್ವರಾಗಿದ್ದರೂ ಸ್ಮಾರ್ತರಂತೆ ಭಸ್ಮ ವಿಭೂತಿ ಧರಿಸಿ ಭಕ್ತವೃಂದದ ಮಧ್ಯೆ ಮಾರುವೇಷದಲ್ಲಿದ್ದು ಸ್ವಾಮಿಗಳ ವರ್ತನೆಯನ್ನು ಅಭ್ಯಸಿಸುತ್ತಿದ್ದ ಮಾನಸಿಕ ರೋಗತಜ್ಞ ಡಾ.ಗೋಂವಿದಸ್ವಾಮಿಯವರು ತಮ್ಮ 'ಅಭ್ಯಾಸ' ಮುಗಿಸಿ ಹೋಗುವ ಮುನ್ನ ತೀರ್ಥಕ್ಕೆ ಕೈವೊಡ್ಡಿದಾಗ ಸ್ವಾಮಿಗಳು ಅವರನ್ನು ಬೆಚ್ಚಿ ಬೀಳಿಸಿದ್ದು ಈ ಮಾತುಗಳಿಂದ: 'ಬಂದ ಕೆಲಸ ಪೂರ್ಣವಾಯಿತೇ ಗೋವಿಂದಸ್ವಾಮಿಯವರೇ? ಇದೇನು ಭಸ್ಮ ವಿಭೂತಿ ಧಾರಣೆ? ನೀವು ಮಾಧ್ವರಾಗಿ ಇಂತಹುದಕ್ಕೆಲ್ಲ ನಿಮ್ಮ ಆಚಾರ-ವಿಚಾರಗಳನ್ನು ಬಿಡ ಬಾರದು!'

ಚಂದ್ರಶೇಖರ ಭಾರತಿಯವರ ನುಡಿಗಳಂತೆ ಅವರ ನಡೆಯಲ್ಲಿಯೂ ಅವಧೂತನವಿತ್ತು. ಒಮ್ಮೆ ಬೆಂಗಳೂರಿನ ಶಂಕರಮಠದಲ್ಲಿ ಸ್ವಾಮಿಗಳು ಭಕ್ತ ಸಮೂಹಕ್ಕೆ ತೀರ್ಥ ನೀಡುತ್ತಿದ್ದಾಗ ದೂರದಲ್ಲಿ ಒಬ್ಬ ಮಹಿಳೆ ಕಂಭಕ್ಕೊರಗಿ ಅಳುತ್ತಿರುವುದನ್ನು ಕಂಡರು. ಇದೇಕೆಂದು ವಿಚಾರಿಸಿದಾಗ ಸಕೇಶಿಯಾದ ಆ ವಿಧವೆ ಮಠದ ನಿಯಮಗಳ ಪ್ರಕಾರ ತೀರ್ಥಕ್ಕೆ ಅನರ್ಹವಾಗಿರುವ ಅಸಹಾಯಕತೆ ಆಕೆಯ ದುಃಖಕ್ಕೆ ಕಾರಣವೆಂದು ಗೊತ್ತಾಯಿತು. ಕೂಡಲೇ ಸ್ವಾಮಿ ಆ ವಿಧವೆಯನ್ನು ತಮ್ಮ ಬಳಿಗೆ ಕರೆಸಿ ತೀರ್ಥ ಪ್ರದಾನ ಮಾಡಿ ಕಳಿಸಿದರು.

ಶೃಂಗೇರಿಯಲ್ಲಿ ಒಮ್ಮೆ ಭಕ್ತರು ಸ್ವಾಮಿಗಳಿಂದ ತೀರ್ಥ ಪಡೆದು ಎದುರಿಗಿದ್ದ ಹರಿವಾಣಕ್ಕೆ ಮಠಕ್ಕಾಗಿ ತಮ್ಮ ಕೈಲಾದ ಹಣ ಹಾಕಿ ಹೋಗುವ ಸಂದರ್ಭದಲ್ಲಿ ಓರ್ವ ಹಿರಿಯ ವಯಸ್ಸಿನ ಭಕ್ತರು ತೀರ್ಥ ಪಡೆದು ಮುಖ ಮುಚ್ಚಿ ಸುಮ್ಮನೆ ಅಳತೊಡಗಿದಾಗ ಸ್ವಾಮಿ ಅದೇಕೆಂದು ವಿಚಾರಿಸಿದರು. ಆ ಹಿರಿಯರು ತಮಗೆ ಅವಿವಾಹಿತ ಮಗಳಿದ್ದು ಬಡತನದಿಂದಾಗಿ ಅವಳ ಮದುವೆ ಮಾಡಲಾಗದೆ ಅಸಹಾಯಕನಾಗಿದ್ದು ಮದುವೆ ನೆರವೇರುವಂತೆ ಸ್ವಾಮಿಗಳ ಆಶೀರ್ವಾದ ಬೇಕಾಗಿದೆ ಎಂದಾಗ ಎಲ್ಲ ಅರ್ಥ ಮಾಡಿಕೊಂಡ ಸ್ವಾಮಿಗಳು ಮಠದ ಸಹಾಯಕನನ್ನು ಕರೆದು ಎದುರಿಗಿದ್ದ ಹರಿವಾಣದಲ್ಲಿ ಸಂಗ್ರಹವಾಗಿದ್ದ ಎಲ್ಲ ಹಣವನ್ನೂ ಆ ಹಿರಿಯ ಭಕ್ತರಿಗೆ ನೀಡುವಂತೆ ಸೂಚಿಸಿದರು. ಮಠದ ಅಧಿಕಾರಿಗಳು ತಬ್ಬಿಬ್ಬಾದರೂ ಸ್ವಾಮಿಗಳ ಸೂಚನೆಯನ್ನು ಪಾಲಿಸಲೇಬೇಕಾಯಿತು.

ಮಠದ ಉಂಬಳಿಗಳನ್ನು ವಶ ಮಾಡಿಸಿಕೊಳ್ಳುವ ರಾಜ್ಯ ಸರ್ಕಾರದ ಶಾಸನ ಜಾರಿಗೆ ಬಂದಾಗ; ಅದೇ ಸಂದರ್ಭದಲ್ಲಿ ಮಠಕ್ಕೆ ಭೇಟಿ ನೀಡಿದ್ದ ರಾಷ್ಟ್ರಪತಿ ರಾಜೇಂದ್ರ ಪ್ರಸಾದರೊಂದಿಗೆ ಸ್ವಾಮಿಗಳು ಮಾತನಾಡಿ ಮಠದ ಆಸ್ತಿ ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕೆಂಬ ಮಠಾಧಿಕಾರಿಗಳ ಸಲಹೆಯನ್ನು 'ಮಠ ಸ್ಥಾಪಿಸಿದ

ಶಂಕರಾಚಾರ್ಯರೇನು ಉಂಬಳಿ ನಂಬಿ ಮಠ ಸ್ಥಾಪಿಸಿದರೆ?' ಎಂದು ಪ್ರಶ್ನಿಸಿ ಸುಮ್ಮನಿರಿಸಿದರು.. ರಾಷ್ಟ್ರಪತಿಗಳೊಂದಿಗೆ ಆ ಬಗ್ಗೆ ಚಕಾರವೆತ್ತಲಿಲ್ಲ.

ಹೀಗೆ ತಮ್ಮ ನಡೆನುಡಿಗಳೆರಡರಲ್ಲೂ ಮಠ ವ್ಯವಸ್ಥೆಯನ್ನು ತಬ್ಬಿಬ್ಬುಗೊಳಿಸುತ್ತಲೇ ಶೃಂಗೇರಿ ಪೀಠದ ಸಾಂಪ್ರದಾಯಿಕ ಪರಂಪರೆಗೊಂದು ಅವಧೂತ ಸ್ಪರ್ಶ ನೀಡಿದ ಶ್ರೀ ಚಂದ್ರಶೇಖರ ಭಾರತಿಯವರು ತಮ್ಮ ಮರಣದಲ್ಲೂ ಅದನ್ನೇ ಸಾಧಿಸಿದರು. ಯಾರಿಗೂ ಏನೂ ಸೂಚನೆ ನೀಡದೆ ೧೯೫೪ರ ಸೆಪ್ಟಂಬರ್ ೨೬ರ ಬೆಳಗಿನ ಝಾವ ತಮ್ಮ ಸಹಾಯಕನನ್ನೆಬ್ಬಿಸಿಕೊಂಡು ತುಂಗಾನದಿಗೆ ಸ್ನಾನಕ್ಕೆ ಹೋದ ಅವರು ನದಿಯ ಬಂಡೆಯೊಂದರ ಮೇಲೆ ಪದ್ಮಾಸನ ಹಾಕಿ ಧ್ಯಾನಕ್ಕೆ ಕೂತವರು ಆ ಆಸನ ಭಂಗಿಯಲ್ಲೇ ನದಿಗೆ ಬಿದ್ದು ಅದರ ಸೆಳವಿನಲ್ಲಿ ತೇಲುತ್ತಾ ಹೋಗಿದ್ದರು. ಪ್ರಾಣ ಬಂಧನ ಮಾಡಿಕೊಂಡಿದ್ದರಿಂದಾಗಿ ಒಳಕ್ಕೆ ನೀರು ಹೋಗಿರದ ಅವರ ಕಳೇಬರವನ್ನು ನದಿಯ ದಡಕ್ಕೆ ತಂದು ಸಮಾಧಿ ಮಾಡಲಾಯಿತು.

(ಆಧಾರ: ಸಾ.ಕೃ. ರಾಮಚಂದ್ರ ರಾವ್ ಅವರ 'ಶ್ರೀ ಶಾರದಾ ಪೀಠದ ಮಾಣಿಕ್ಯ' ಮತ್ತು ಆರ್. ಕೃಷ್ಣಸ್ವಾಮಿ ಅಯ್ಯರ್ ಸಂಗ್ರಹಿಸಿರುವ 'ಡೈಲಾಗ ವಿತ್ ದ ಗುರು')

(ಜುಲೈ, ೨೦೨೦ರ 'ಹೊಸ ಮನುಷ್ಯ')

ನನ್ನ ತಂಗಿ ಸರಸ್ವತಿ ಎಂಬ ವಿಷಾದ ಗೀತೆ

ನನಗೆ ಇಬ್ಬರು ತಂಗಿಯರು. ಹಿರಿಯಳು ರಾಜಮ್ಮ (ಮನೋವೈದ್ಯ ಡಾ. ಸಿ.ಆರ್, ಚಂದ್ರಶೇಖರ್ ಅವರನ್ನು ಮದುವೆಯಾಗಿ ರಾಜೇಶ್ವರಿ ಆದವಳು) ಐದಾರು ವರ್ಷಗಳ ಹಿಂದೆಯೇ ನಮ್ಮನ್ನಗಲಿ ಹೋಗಿದ್ದಳು. ಈಗ ಚಿಕ್ಕ ತಂಗಿ ಸರಸ್ವತಿಯ ಸರದಿ. ಇಬ್ಬರೂ ತಮ್ಮ ಅರವತ್ತನೇ ವಯಸ್ಸಿನ ಆಸುಪಾಸಿನಲ್ಲೇ ಕೊನೆಯುಸಿರೆಳೆದಿದ್ದಾರೆ. ಇಬ್ಬರೂ ನನ್ನಂತೆಯೇ ತಾಯಿ ಮತ್ತು ತಂದೆಯಿಂದ ಕ್ರಮವಾಗಿ ಸಕ್ಕರೆ ಕಾಯಿಲೆ ಮತ್ತು ಅತಿ ರಕ್ತದೊತ್ತಡದ ಬಳುವಳಿಗಳನ್ನು ಪಡೆದು ಆ ಬಗ್ಗೆ ಹೆಚ್ಚು ಎಚ್ಚರವಹಿಸದೆ ಬಳಲಿ ಬಳಲಿ ಈ ಲೋಕದಿಂದ ನಿರ್ಗಮಿಸಿದವರು, ಈ ಬಗ್ಗೆ ಈ ಇಬ್ಬರ ಬಗೆಗೂ ನನಗೆ ಬೇಸರ–ದುಃಖ ಇದೆ.

ರಾಜಮ್ಮನ ಬಗ್ಗೆ ಈಗಾಗಲೇ ಬರೆದಿದ್ದೇನೆ: (ನೋಡಿ: ನನ್ನ 'ಬಹುಮುಖ' ಕೃತಿ) ಸರಸ್ವತಿಯ ಬಗ್ಗೆ ಈಗ ಇಲ್ಲಿ ಬರೆಯುವಾಗ ನನ್ನ ಕಣ್ಣುಗಳಿಂದ ತಾನೇ ತಾನಾಗಿ ಹನಿಗಳು ಜಿನುಗುತ್ತಿವೆ. ಮೊದಲೇ ಹೇಳಿದ ಹಾಗೆ ಅವಳು ನನ್ನ ಚಿಕ್ಕ ತಂಗಿ. ರಾಜಮ್ಮ ಹುಟ್ಟಿದಾಗ ನಾನಿನ್ನೂ ಮೂರು ವರ್ಷದ ಮಗು. ಅವಳನ್ನು ಎತ್ತಿ ಆಡಿಸಿದ ನೆನಪಿಲ್ಲ. ಬದಲಿಗೆ ಕಿತ್ತಾಡಿದ್ದೇ ಜಾಸ್ತಿ; ಅವಳಿಗೆ ಮನೆಯಲ್ಲಿ ದೊರೆಯುತ್ತಿದೆ ಎಂದು ನಾನು ಭಾವಿಸಿದ್ದ ಹೆಚ್ಚಿನ ಸವಲತ್ತುಗಳ ಕಾರಣದಿಂದಾಗಿ. ಆದರೆ ಸರಸ್ವತಿಯನ್ನು ಮೊದಲು ಎತ್ತಿಕೊಂಡ ಸಂದರ್ಭ, ದಿನವೂ ನನಗೆ ನೆನಪಿದೆ. ಅವಳು ಹುಟ್ಟಿದ್ದು ಡಾಬಸ್‌ಪೇಟೆಯಲ್ಲಿ, ನಮ್ಮ ತಾಯಿ ಹೆರಿಗೆಗಾಗಿ ಹೋಗಿದ್ದ ನಮ್ಮ ದೊಡ್ಡಪ್ಪ–ದೊಡ್ಡಮ್ಮನ ಮನೆಯಲ್ಲಿ. ಸರಸ್ವತಿ ಹುಟ್ಟಿದ್ದು ಸರಸ್ವತಿ ಹಬ್ಬದ ದಿನ. ಅವಳು ಹುಟ್ಟಿದ ದಿನಕ್ಕೆ ಅನುಗುಣವಾಗಿ ಅವಳಿಗೆ ಸರಸ್ವತಿ ಎಂದು ಹೆಸರಿಡಬೇಕೆಂದು ನಾನು ನನ್ನ ತಂದೆಗೆ ದುಂಬಾಲು ಬಿದ್ದೆ. ಇದಕ್ಕೆ ಇನ್ನೊಂದು ಭಾವನಾತ್ಮಕ ಕಾರಣವೂ ಇತ್ತು. ನಮ್ಮ ತಂದೆಯ ಆಶ್ರಯದಲ್ಲೇ ಬೆಳೆದು ಯಾವುದೋ ಕಾರಣಕ್ಕಾಗಿ ನಮ್ಮಿಂದ ದೂರವಾಗಿ ಬಹು ಅನುಕೂಲಸ್ಥ ಜೀವನ ನಡೆಸುತ್ತಿದ್ದ ನಮ್ಮ ಓರ್ವ ಚಿಕ್ಕಪ್ಪನ ಮಗಳ ಹೆಸರೂ ಸರಸ್ವತಿಯಾಗಿತ್ತು, ಈಗ ನಮ್ಮ ಮನೆಯ ಮಗಳಿಗೆ ಸರಸ್ವತಿ ಎಂದು ಹೆಸರಿಟ್ಟು

ವಿಚಿತ್ರ ಸುಖ ಪಡುವ ನನ್ನ ಬಯಕೆ. ನನ್ನ ಸರಳ ಬೇಡಿಕೆಯನ್ನು ಒಪ್ಪದಿರಲು ನಮ್ಮ ತಂದೆಗೇನೂ ಕಾರಣವಿರಲಿಲ್ಲವಾದ್ದರಿಂದ ಅವಳು ಹುಟ್ಟಿದ ಹನ್ನೊಂದನೆಯ ದಿನ ಅವಳಿಗೆ ಡಾಬಸ್‌ಪೇಟೆಯ ನಮ್ಮ ಹಿರಿಯರ ಮನೆಯಲ್ಲಿ ಸರಸ್ವತಿ ಎಂದು ನಾಮಕರಣ ಮಾಡಲಾಯಿತು. ನಾನು, ನಮ್ಮಣ್ಣ ಮತ್ತು ನಮ್ಮ ಮನೆಯಲ್ಲಿ ಓದಲು ಇದ್ದ ನಮ್ಮ ಓರ್ವ ಚಿಕ್ಕಪ್ಪನ ಮಗ ನಾವಿದ್ದ ತ್ಯಾಮಗೊಂಡ್ಲುವಿನಿಂದ. ನಮ್ಮ ತಂದೆ ಕೊಟ್ಟಿದ್ದ ಬಸ್ ಚಾರ್ಜ್ ಉಳಿಸಿ ವೀರಶೈವರ ಕಾಫಿ ಕ್ಲಬ್‌ನಲ್ಲಿ ಮನಸಾರೆ ಚಟ್ನಿ ಹುಯ್ಸಿಕೊಂಡು ದೊಡ್ಡ ತಟ್ಟೆ ಇಡ್ಲಿ ತಿಂದು ಐದು ಮೈಲಿ ದೂರವಿದ್ದ ಡಾಬಸ್‌ಪೇಟೆಗೆ ನಡೆದೇ ಹೋಗಿದ್ದೆವು.

ನಾವು ಡಾಬಸ್‌ಪೇಟೆ ಮನೆ ತಲುಪಿದಾಗ ಮನೆಯ ಹಜಾರದಲ್ಲಿ ಮೊರವೊಂದರಲ್ಲಿ ಸೀರೆ ತುಂಡೊಂದರಲ್ಲಿ ಸುತ್ತಿ ಮಲಗಿಸಿದ್ದ ಮಗುವನ್ನು ನೋಡಿದೆ. ಮುದ್ದು ಬಂದು ಎತ್ತಿಕೊಳ್ಳಲು ಬಾಗುತ್ತಿದ್ದಂತೆ ನನ್ನ ಪ್ರೀತಿಯ ಪಾರ್ವತಮ್ಮ ದೊಡ್ಡಮ್ಮ ಗಾಬರಿಯಿಂದ 'ಹಸೀ ಮೈ ಕಣೋ, ಈಗ ಬೇಡ' ಎಂದು ಅಡ್ಡ ಬಂದದ್ದು ನನಗೆ ಇನ್ನೂ ನೆನಪಿದೆ. ಜೊತೆಗೇ ಮಗುವಿನ ಮುದ್ದು ಮೊಗವೂ. ಅಂದು ಬೆಲ್ಲದ ಪಾಯಸ ಉಂಡು ನಾವು ಊರಿಗೆ ವಾಪಸಾದೆವು.

ಆಮೇಲೆ ಒಂದೂವರೆ ತಿಂಗಳ ನಂತರ ತಾಯಿ ಮತ್ತು ಮಗು ನಮ್ಮ ಮನೆಗೆ ಬಂದರು. ಅಂದಿನಿಂದ ಸುಮಾರು ಒಂದು ವರ್ಷ ಅವಳ ತೊಟ್ಟಿಲು ತೂಗುವ ಕೆಲಸ ನನ್ನದಾಯಿತು. ಸಾಯಂಕಾಲದ ನನ್ನ ಆಟದ ಸಮಯಕ್ಕೆ ಸಾಕಷ್ಟು ಕತ್ತರಿ ಬಿತ್ತು. ಆದರೆ ನನ್ನ ಕತ್ತೆ ರಾಗದ ಹಾಡುಗಾರಿಕೆ ಸುಧಾರಿಸಿತು. ಸರಸ್ವತಿ ತೊಟ್ಟಿಲಲ್ಲಿ ಎದ್ದ ಕೂಡಲೇ ಒಂದೇ ಸಮನೆ ಅಳುತ್ತಿದ್ದಳು. ನನಗೋ ತೂಗಿ ತೂಗಿ ನನ್ನ ಎಳೆಯ ಕೈಗಳು ಸೋಲುತ್ತಿದ್ದವು, ಆಗ ನಾನು ಕಂಡುಕೊಂಡ ಪರಿಹಾರ ನಾನು ಅಲ್ಲಲ್ಲಿ ಕೇಳಿ ಕಲಿತುಕೊಂಡ ನಾಲ್ಕೋ ಐದೋ ಸಿನಿಮಾ–ನಾಟಕಗಳ ಹಾಡುಗಳನ್ನು 'ಪ್ರಾಕ್ಟೀಸು' ಮಾಡುವುದು. ಆಗ ತ್ಯಾಮಗೊಂಡ್ಲುವಿನಲ್ಲಿ ಮೊಕ್ಕಾಂ ಮಾಡಿದ್ದ ಮಾರುತಿ ಟೂರಿಂಗ್ ಟಾಕೀಸ್‌ನಲ್ಲಿ–ಈ ಊರಿಗೆ ಬರುವ ಮುನ್ನ ನಾವಿದ್ದುದು ಸಿನಿಮಾ ಎಂಬ ಶಬ್ದವೇ ಕಿವಿಗೆ ಬೀಳದಿದ್ದ ಕುಗ್ರಾಮವೊಂದರಲ್ಲಿ–ನಾನು ಬೆರಗುಗಣ್ಣುಗಳಿಂದ ನೋಡಿದ್ದ ಆದರ್ಶ ಸತಿ ಮತ್ತು ಸ್ಕೂಲ್ ಮಾಸ್ಟರ್ ಸಿನಿಮಾಗಳ ಹಾಡುಗಳನ್ನು ನಾನೇ ನನ್ನ ಬಾಲಪ್ರತಿಭೆ ಬಳಸಿ ಬೇರೆ ಬೇರೆ ರಾಗಗಳಲ್ಲಿ ಹಾಡುತ್ತಿದ್ದೆ. ಜೊತೆಗೆ ಬಾಶಾನ ಸೈಕಲ್ ಶಾಪ್‌ನ ಗ್ರಾಮಾಫೋನ್‌ನಿಂದ ಮೊಳಗುತ್ತಿದ್ದ ಕೊಟ್ಟೂರಪ್ಪನವರ 'ದಾನಶೂರ ಕರ್ಣ" ಮತ್ತು ಹಿರಣ್ಣಯ್ಯನವರ 'ದೇವದಾಸಿ' ನಾಟಕಗಳ ಹಾಡುಗಳು. ನನ್ನ ಬಾಲ ಹಾಡುಗಾರಿಕೆಯನ್ನು ಮೆಚ್ಚಿದಂತೆ ಸರಸ್ವತಿ ಮಲಗುತ್ತಿದ್ದಳಾದರೂ, ನಮ್ಮ ತಂದೆ ಮಾತ್ರ ಇದ್ದಕ್ಕಿದ್ದಂತೆ 'ನಿಲ್ಲಿಸು ನಿನ್ನ ಅರಚಾಟ' ಎಂದು ಕೂಗು ಹಾಕುತ್ತಿದ್ದರು. ವಿಶೇಷವಾಗಿ ನಾನು 'ದೇವದಾಸಿ'ಯ 'ಸುಖಾವೀವ ಸುರಾಪಾನವಿದೇ ಸ್ವರ್ಗ ಸಮಾನಂ ತಲೆ ಬಾಗಿಸಿ ತಲೆದೂಗಿಸೋ ಸೊಂಪಿನ ಪಾನಂ' ಹಾಡು ಶುರು ಮಾಡಿದಾಗ. 'ಯಾವ

ಮನೆಹಾಳನೋ ನಿನಗೆ ಆ ಹಾಡು ಕಲಿಸಿದ ಎನ್ನುತ್ತಿದ್ದರು. ಇದೇಕೆ ಹೀಗೆ ಹೇಳುತ್ತಾರೆ ಎಂದು ನನಗೆ ಆಶ್ಚರ್ಯವಾಗುತ್ತಿತ್ತು. ಅದೇನೇ ಇರಲಿ, ಶಿಶುವಾಗಿದ್ದಾಗಲೇ ನನ್ನ ಈ ಸಂಗೀತ ಕಛೇರಿ ಕೇಳಿ ಬೆಳೆದ ಸರಸ್ವತಿ ಮುಂದೆಂದೂ ತನ್ನ ಜೀವನದಲ್ಲಿ ಹಾಡುವ ಪ್ರಯತ್ನ ಮಾಡಲಿಲ್ಲ ಎಂಬುದು ಸತ್ಯ.

ನಂತರದ ದಿನಗಳಲ್ಲಿ ಸರಸ್ವತಿ ಶಾಲೆಗೆ ಸೇರುವವರೆಗೂ ನನ್ನ ಶಾಲೆಯ ಸಮಯದ ಹೊರತಾಗಿ ನನ್ನ ಸೊಂಟದ ಮೇಲೇ ಇರುತ್ತಿದ್ದಳು. ನಾನೆಲ್ಲಿ ಹೋದರೂ ಅಳುತ್ತಾ. 'ನಾನೂ...ನಾನೂ...' ಎಂದು ಬಾಲದಂತೆ ನನ್ನ ಹಿಂದೆ ದೇಕುತ್ತಲೋ, ಅಂಬೆಗಾಲಿಡುತ್ತಲೋ ಬರುತ್ತಿದ್ದಳು; ಪಕ್ಕದ ಮನೆಯ ಮಗು ಮನೆಯ ಹೊಸ್ತಿಲು ದಾಟಿದ ದಿನ ಆ ಮನೆಯವರು ಸುತ್ತಮುತ್ತಲ ಮನೆಗಳಿಗೆ ಹಂಚಿದ ಚರುಪಿನ ರುಚಿ ಕಂಡಿದ್ದ ನಾನು ಸರಸ್ವತಿ ಹೊಸ್ತಿಲು ದಾಟುವ ಸಂದರ್ಭಕ್ಕಾಗಿ ಕಾಯುತ್ತಲೇ ಇದ್ದೆ. ಆ ದಿನ ಬಂದೇ ಬಂತು. ಅಂದು ನಮ್ಮ ತಂದೆ ಲಗುಬಗೆಯಿಂದ ಹಂಚಿದ ಕಡಲೆ ಪುರಿ, ಬೆಲ್ಲ ಕಾಯಿಗಳ ಚರುಪಿನ ರುಚಿ ಇನ್ನೂ ನನ್ನ ಬಾಯಲ್ಲಿದೆ. ಜೊತೆಗೆ ಅವರ ಈ ತಾಕಿತು 'ಮಗು ಹೊಸಿಲು ದಾಟಿ ಮೆಟ್ಟಿಲು ಉರುಳಿ ಬೀದಿಗೆ ಬೀಳದಂತೆ ನೋಡ್ಕೋ ಬೇಕು, ಗೊತ್ತಾಯ್ತಾ?' ಚರುಪು ಏಕೋ ಸ್ವಲ್ಪ ಚುರುಕಾಯಿತು ಎನಿಸಿತು.

ನಮ್ಮ ತಂದೆಗೆ ಸರಸ್ವತಿ ಕಂಡರೆ ಬಹಳ ಅಕ್ಕರೆ. ಅವರಿಗೆ ಇವಳು ಗಂಡಾಗಿ ಹುಟ್ಟಬೇಕಿತ್ತೆಂಬ ಆಸೆ ಇತ್ತೋ ಏನೋ. ಅವಳಿಗೆ ಅವರು ನಮ್ಮ ಮನೆದೇವರಾದ ವೀರಭದ್ರ ಎಂಬ ಅಡ್ಡ ಹೆಸರಿಟ್ಟಿದ್ದರು. ಅಷ್ಟೇ ಅಲ್ಲ, ಅವಳಿಗೆ ಗಂಡು ಮಕ್ಕಳ ಅಂಗಿ-ಚೆಡ್ಡಿಯನ್ನು ಹೊಲೆಸಿ ಹಾಕಿ ನೋಡಿ ಸಂತೋಷಪಟ್ಟರು. ಅವಳು ಈ ಅಂಗಿ ಚೆಡ್ಡಿ ತೊಟ್ಟು ಅಂಗಡಿ ಬೀದಿಯಲ್ಲಿ ಹೋಗುತ್ತಿದ್ದರೆ ಕೆಲವರು 'ಅದ್ಯಾವಾಗ ಮೇಷ್ಟ್ರಿಗೆ ಇನ್ನೊಂದು ಗಂಡು ಮಗುವಾಯಿತೋ?' ಎಂದು ಅರ್ಧ ಹಾಸ್ಯ-ಅರ್ಧ ಬೆರಗಿನಿಂದ ನನ್ನನ್ನು ಕೇಳುತ್ತಿದ್ದರು. ಈ ಅಂಗಿ-ಚೆಡ್ಡಿಯೊಂದಿಗೇ ಅವಳೊಂದಿಗೆ ನಾನು ಊರ ಬೀದಿಗಳನ್ನು ಸುತ್ತಿಸುತ್ತಿದ್ದೆ. ಸೋಜಿಗಗೊಂಡ ಅಂಗಡಿಯವರು ಇಬ್ಬರನ್ನೂ ಕರೆದು ಕಡಲೆಯನ್ನೋ, ಬೆಲ್ಲವನ್ನೋ ಕೊಡುತ್ತಿದ್ದರು. ಜೊತೆಗೆ 'ಏನು ಮುದ್ದು ಮಗು!' ಎಂದು ಅವಳ ಕೆನ್ನೆ ಚಿವುಟುತ್ತಿದ್ದರು. ಆಗೆಲ್ಲ ನನಗೆ ನಮ್ಮ ಊರಿನ ಮಕ್ಕಳಲ್ಲೆಲ್ಲ ನಮ್ಮ ಸರಸ್ವತಿಯೇ ಚೆಂದ ಅಲ್ಲವೆ? ಎಂದು ಯೋಚಿಸಿ ಖುಷಿ ಪಡುತ್ತಿದ್ದೆ.

ಸರಸ್ವತಿಯನ್ನು ಎತ್ತಿಕೊಂಡು ನಮ್ಮೂರ ತೇರಿನ ಅಂಕಣಗಳನ್ನು ಏರುತ್ತಿದ್ದ ನನ್ನ ಸಾಹಸ ನೆನೆಸಿಕೊಂಡರೆ ಈಗಲೂ ಮೈ ಜುಮ್ಮೆನಿಸುತ್ತದೆ. ಊರ ತೇರಿಗಾಗಿ ಊರ ಬಡಗಿಗಳು ದಿನಾ ಬೆಳಿಗ್ಗೆ ನಮ್ಮೂರ ತೇರು ಬೀದಿಯಲ್ಲಿದ್ದ ನಾಲ್ಕು ಬೃಹತ್ ಕಲ್ಲಿನ ಚಕ್ರಗಳ ಚೌಕಟ್ಟಿನ ಮೇಲೆ ಒಂದೊಂದು ಅಂಕಣ ಕಟ್ಟುತ್ತಿದ್ದರು. ಕಟ್ಟಿಗೆ ತುಂಡುಗಳನ್ನು ಸೀಳಿ, ಸವರಿ ಜೋಡಿಸಿ ಅಂಕಣ ಕಟ್ಟುವ ಕೌಶಲ್ಯವನ್ನು ನೋಡುವುದೇ ಒಂದು ಆನಂದ. ನಾನು ಪ್ರತಿದಿನ ಎದ್ದ ಕೂಡಲೆ ಕಣ್ಣು ಪಿಸರೆ ತೆಗೆಯದೇ ನಮ್ಮ ಮನೆಯ ಬಳಿಯೇ ಇದ್ದ ತೇರುಬೀದಿಗೆ ಹೋಗಿ ಆ ಆನಂದದಾಯಕ ಕೆಲಸವನ್ನು ತನ್ಮತೆಯಿಂದ

ನೋಡುತ್ತಾ ನಿಲ್ಲುತ್ತಿದೆ. ಸೂರ್ಯ ಸರಿಯಾಗಿ ಮೂಡಿದ ಮೇಲೆ ಬಡಗಿಗಳೆಲ್ಲ ಕೆಲಸ ಮುಗಿಸಿ ಹೋಗುತ್ತಿದ್ದರು. ನಂತರ ಅಲ್ಲಿ ನನ್ನ ಸಾಹಸ: ರಥದ ಚಕ್ರಗಳ ಚಚ್ಚೌಕವನ್ನೇರಿ ಅಂಕಣಗಳ ನಿಲುವುಗಳ ಮಧ್ಯೆ ನುಸುಳಿ ಅಂಕಣಗಳನ್ನು ಏರುತ್ತಾ ಹೋಗುವುದು. ನನ್ನ ಆಶ್ಚರ್ಯವೆಂದರೆ ಬೀದಿಯಲ್ಲಿ ಹಾದು ಹೋಗುತ್ತಿದ್ದ ಊರ ಹಿರಿಯರಾಗಲೀ, ನನ್ನ ಸಹಪಾಠಿಗಳಾಗಲೀ ಈ ನನ್ನ ಸಾಹಸವನ್ನು ಕಣ್ಣೆತ್ತಿಯೂ ನೋಡದೆ ತಮ್ಮ ಪಾಡಿಗೆ ತಾವು ಹೋಗುತ್ತಿದ್ದರು.

ಆದರೇನಂತೆ ಒಂದು ಬೆಳಿಗ್ಗೆ ನಾನು ಮೂರನೇ ಅಂಕಣದ ಮೇಲಿದ್ದಾಗ ಕೆಳಗಿನಿಂದ 'ನಾಷ್ಣಾ... ನಾನೂ...' ಎಂಬ ಕೂಗು ಕೇಳಿ ನಾನು ಬೆಚ್ಚಿ ಬೀಳುವಂತಾದೆ! ಅದು ಮಗು ಸರಸ್ವತಿಯ ಕೂಗು!! (ಅವಳು ಕೊನೆವರೆಗೂ ನನ್ನನ್ನು ಸಂಬೋಧಿಸುತ್ತಿದ್ದು ನಾಗಭೂಷಣ ಎಂಬುದರ ಈ ಚುಟುಕು ರೂಪದಿಂದಲೇ!) ಅವಳು ನಾನು ಮನೆಯಿಂದ ಹೊರಟದ್ದನ್ನು ಮಲಗಿದ್ದೆಡೆಯಿಂದಲೇ ಕಂಡು ತನ್ನ ಪುಟ್ಟ ಹೆಜ್ಜೆಗಳನ್ನಿಡುತ್ತಾ ನನ್ನನ್ನು ಹಿಂಬಾಲಿಸಿ ಬಂದಿದ್ದಾಳೆ. ಬಂದಿದ್ದಾಳೆ ಮಾತ್ರವಲ್ಲ, ತನ್ನನ್ನೂ ಹತ್ತಿಸು ಎನ್ನುತ್ತಿದ್ದಾಳೆ! ಅವಳಿಗಾಗ ನಾಲ್ಕೋ ಐದೋ ವರ್ಷವಿರಬೇಕು, ಮೊದಲಾಗಿ ಅವಳನ್ನು ಎತ್ತರದ ಚಕ್ರಗಳ ಚಚ್ಚೌಕದ ಮೇಲೆ ಹತ್ತಿಸುವುದೇ ಕಷ್ಟ, ಆದರೆ ಅವಳು ಕೆಳಗೆ ನಿಂತು 'ಕರಕೋ' ಎಂದು ಒಂದೇ ಸಮನೆ ರಚ್ಚೆ ಹಿಡಿದಿದ್ದಾಳೆ. ಬೀದಿಯಲ್ಲಿ ಹೋಗುವವರೆಲ್ಲ ಈ ದೃಶ್ಯವನ್ನು ನೋಡಿ ಇದಕ್ಕೂ ತಮಗೂ ಸಂಬಂಧವಿಲ್ಲದಂತೆ ಸಾಗಿ ಹೋಗುತ್ತಿದ್ದಾರೆ. ನನ್ನ ದುರಾದೃಷ್ಟಕ್ಕೆ ಆ ವೇಳೆಗೆ ತರಗತಿಯಲ್ಲಿ ಯಾವುದೋ ಪ್ರಶ್ನೋತ್ತರದ ಸಂದರ್ಭದಲ್ಲಿ ನನ್ನ ಕಾಲ ಕೆಳಗೆ ನುಸುಳುವ ಶಿಕ್ಷೆಗೆ ಒಳಗಾಗಿ ಅಪಮಾನಿತನಾಗಿದ್ದ ನನ್ನ ಸಹಪಾಠಿಯೊಬ್ಬ ಅಲ್ಲಿಗೆ ಬಂದು ಸೇಡು ತೀರಿಸಿಕೊಳ್ಳಲು ಇದೇ ಸುಸಮಯವೆಂದು 'ಮೇಷ್ಟ್ರನ್ನ (ನನ್ನ ತಂದೆಯವರನ್ನು) ಕರೀತೀನಿ ತಾಳು' ಎಂದು ನಮ್ಮ ಮನೆಯ ಕಡೆ ಓಡಿದ. ನನ್ನ ಜಂಘಾಬಲವೇ ಉಡುಗಿ ಹೋಯಿತು. ಏಕೆಂದರೆ ಕೋಪ ಬಂದರೆ ನಮ್ಮ ತಂದೆ ಮನುಷ್ಯರೇ ಆಗಿರುತ್ತಿರಲಿಲ್ಲ. ಅವರ ಆ ಹೊಡೆತಗಳಿಗೆ ಇಡೀ ಒಂದು ದಿನ ಸುಧಾರಿಸಿಕೊಳ್ಳಬೇಕಿತ್ತು.

ಅಷ್ಟರಲ್ಲಿ ನಾನು ಮೈಯೆಲ್ಲ ತರಚಿಕೊಂಡು ಅಂಕಣಗಳನ್ನು ಜಾರಿ ಚಚ್ಚೌಕದ ಮೇಲೆ ಇಳಿದೆ. ಇದರಿಂದ ಸ್ಫೂರ್ತಿಗೊಂಡ ಸರಸ್ವತಿ ತನ್ನನ್ನೂ ಅಲ್ಲಿಗೆ ಕರೆದುಕೋ ಎಂದು ಜೋರಾಗಿ ಅಳತೊಡಗಿದಳು. ಅವಳ ಅಳು ಎಲ್ಲಿ ಮನೆವರೆಗೆ ಕೇಳಿಸೀತೋ ಎಂಬ ಭಯದಿಂದ ಅವಳ ಕೈಹಿಡಿದು ಎಳೆದು ಚಕ್ರವೊಂದರ ಕಡಾಣಿಯ ಮೇಲೆ ಹತ್ತಿಸಿಕೊಂಡು ನನ್ನ ಬಳಿಗೆ ಎಳೆದುಕೊಂಡೆ. ಅಯ್ಯೋ ಮುಂದಿನ ದೃಶ್ಯ ನನ್ನ ಎದೆ ನಡುಗಿಸಿತು. ಅವಳು ತನ್ನ ಹಿಂದಿನ ಜನ್ಮವೊಂದರ ಸ್ಮೃತಿಯನ್ನು ಆವಾಹಿಸಿಕೊಂಡವಳ ಹಾಗೆ ಕೋತಿಯಂತೆ ಎರಡು ಅಂಕಣಗಳನ್ನು ಹತ್ತಿ 'ಬಾ' ಎಂದು ನನಗೆ ಕೈ ನೀಡುತ್ತಿದ್ದಾಳೆ! ನಾನು ಗಾಬರಿಯಿಂದ ಏನು ಮಾಡಲೂ ತೋಚದೆ ಕಣ್ಣು ಕಣ್ಣು ಬಿಡುತ್ತಿದ್ದಾಗ ಕೆಳಗಿಂದ ನನ್ನ ತಂದೆಯ ಆರ್ಭಟ ಮೊಳಗಿತು: 'ಅಯ್ಯೋ ಅಯೋಗ್ಯ

ನನ್ಮಗನೇ, ಕೊಂದೇ ಹಾಕ್ದಲ್ಲೋ ಮಗೀನಾ!' ಅವರೂ ಓಡಿಬಂದು ಪಂಚೆ ಎತ್ತಿಕಟ್ಟಿ ತೇರು ಏರಲು ಸನ್ನದ್ಧರಾಗುತ್ತಿದ್ದಂತೆ ಸರಸ್ವತಿ 'ಬೇಡಣ್ಣಾ.. ನಾನೇ ಬತ್ತೀನಿ' ಎನ್ನುತ್ತಾ ಅಂಕಣಗಳ ನಿಲುವುಗಳ ಮಧ್ಯೆ ನುಸುಳುತ್ತಾ, ಜಾರುತ್ತಾ ಅದೋ ಇಳಿದು ಬಿಟ್ಟಳು. ಅಷ್ಟರಲ್ಲಿ ಅಲ್ಲಿ ಸೇರಿದ್ದ ಜನರ ಸಣ್ಣ ಗುಂಪೊಂದು ಚಪ್ಪಾಳೆ ತಟ್ಟಿ 'ಕಲ್ಲುಗುಂಡಿನಂತ ಮಗ ಇದು! ಏನು ಹಾಕಿ ಸಾಕಿದ್ದೀರಾ ಮೇಷ್ಟ್ರೆ!' ಎನ್ನುತ್ತಾ ಸರಸ್ವತಿಯನ್ನು ನೆಲಕ್ಕೆ ಇಳಿಸಿದರು. ಮುಂದಿನ ಬೆಳವಣಿಗೆಯನ್ನು ಊಹಿಸಿ ಕಂಪಿಸಿದ ನಾನು ಸಾರ್ವಜನಿಕರ ಮುಂದೆ 'ಪೂಜೆ' ತಪ್ಪಿಸಿಕೊಳಲು ಅಲ್ಲಿಂದ ಓಟಕಿತ್ತು ಮನೆ ಸೇರಿದೆ. ಅಲ್ಲಿ ನೋಡಿದರೆ ನಮ್ಮ ತಂದೆಗೆ ದೂರು ನೀಡಿದ್ದ ನನ್ನ ಸಹಪಾಠಿ ನನಗೆ ಆಗುವ 'ಪೂಜೆ'ಯನ್ನು ಕಂಡು ಆನಂದಿಸಲು ಮನೆಯ ಮುಂದೆ ಸುಳಿದಾಡುತ್ತಿದ್ದಾನೆ! ಆದರೆ ಅಂದು ನನ್ನ ಜೀವನದ ಪರಮಾಶ್ಚರ್ಯವೊಂದನ್ನು ನಾನು ಕಂಡೆ! ಸರಸ್ವತಿಯನ್ನು ಎತ್ತಿಕೊಂಡು ಮನೆಯೊಳಗೆ ಬಂದ ನನ್ನ ತಂದೆ, ಏಕೋ ಏನೂ ಆಗದಂತೆ; 'ಹೋಗೋ ಮುಖ ತೊಳಕೊಂಡು ಸ್ಕೂಲಿಗೆ ನಡಿ' ಎನ್ನುತ್ತಾ ತಾವೂ ಸ್ಕೂಲಿಗೆ ಹೊರಡಲು ಸಜ್ಜಾಗತೊಡಗಿದರು. ಅವರನ್ನು ಅಂದು ಶಾಂತಗೊಳಿಸಿದ ಸಂಗತಿಯೇನೆಂದು ನನಗಿನ್ನೂ ಗೊತ್ತಾಗಿಲ್ಲ. ಜನ ಚಪ್ಪಾಳೆ ತಟ್ಟಿ ಮೆಚ್ಚಿದ ಸರಸ್ವತಿಯ ಸಾಹಸ ಕಂಡು ಅವರು ಮುಗ್ಧ ಮೌನಕ್ಕೆ ಒಳಗಾಗಿದ್ದರೆ?

ಸರಸ್ವತಿಯ ಬಾಲ್ಯದ ಇನ್ನೊಂದು ವಿಶೇಷ ನೆನಪೆಂದರೆ, ಅವಳು ನಮ್ಮ ತಂದೆಯಿಂದ, ಆನಂತರ ನನ್ನಿಂದ ನೆಲದ ಮೇಲೆ ಬಳಪದಿಂದ 'ಕರ' ಎಂಬುದರಿಂದ ಆರಂಭವಾಗಿ ಕನ್ನಡ ಅಕ್ಷರಗಳನ್ನು ಕಲಿತದ್ದು. ನಮ್ಮೂರಿನಲ್ಲಿ ಬಾಲಕಿಯರ ಪ್ರತ್ಯೇಕ ಶಾಲೆ ಇದ್ದರೂ ಅಲ್ಲಿ ಚೆನ್ನಾಗಿ ಪಾಠ ಆಗುವುದಿಲ್ಲವೆಂದು ನಮ್ಮ ತಂದೆ ಅವಳನ್ನು ತಾವೇ ಮುಖ್ಯೋಪಾಧ್ಯಾಯರಾಗಿದ್ದ ಬಾಲಕರ ಪ್ರಾಥಮಿಕ ಶಾಲೆಗೆ ಸೇರಿಸಿದರು. ಅವಳನ್ನು ಮೊದಲ ದಿನ ಅಂಗಿ ಚಡ್ಡಿ ಹಾಕಿಸಿ ಒಂದನೇ ತರಗತಿಗೆ ಕರೆದುಕೊಂಡು ಹೋಗಿ ಹುಡುಗರ ಪಕ್ಕ ಮಣೆಯ ಮೇಲೆ ಕೂರಿಸಿ ಬಂದವನು ನಾನೇ. ಅವಳ ಹೆಸರಿನ ಜೊತೆಗೆ ಅವಳ ವೇಷ ನೋಡಿ ಹುಡುಗರೆಲ್ಲ ಜೋರಾಗಿ ನಕ್ಕರು. ಮೇಷ್ಟ್ರು ಭೈರಪ್ಪನವರು ಹೆಡ್ಮಾಷ್ಟ್ರ ಮಗಳು ಇವಳು, ಹುಷಾರ್!' ಎಂದು ಅವರೆಲ್ಲರ ಬಾಯಿ ಮುಚ್ಚಿಸಿದರು.

ಈ ಘಟನೆಗಿಂತ ಮುಖ್ಯವಾಗಿ ನನಗೆ ಚೆನ್ನಾಗಿ ನೆನಪಿರುವ ಸಂಗತಿ ಎಂದರೆ, ಅವಳು ಒಂದನೇ ತರಗತಿಯಲ್ಲಿದ್ದಾಗಲೋ, ಎರಡನೇಯ ತರಗತಿಯಲ್ಲಿದ್ದಾಗಲೋ– ಸರಿಯಾಗಿ ನೆನಪಿಲ್ಲ, ಸ್ಕೂಲಿಗೆ ಇನ್‌ಸ್ಪೆಕ್ಟರೊಬ್ಬರು ಇನ್‌ಸ್ಪೆಕ್ಷನ್‌ಗೆ ಬಂದ ಘಟನೆ. ನಮ್ಮ ತಂದೆ ಬಡತನದ ಕಾರಣ ಪ್ರತಿ ಸಂಜೆ ಊರಿನ ಕೆಲವು ಮಕ್ಕಳಿಗೆ ಪಾಠ ಹೇಳುತ್ತಿದ್ದರು. ಆ ಪಾಠದ ಮಕ್ಕಳ ಜೊತೆ ಸರಸ್ವತಿಯೂ ಕೂರುತ್ತಿದ್ದಳು. ನಮ್ಮ ತಂದೆ ಪಾಠದ ವೈಶಿಷ್ಟ್ಯವೆಂದರೆ ಮಕ್ಕಳು ನಾಲ್ಕನೇ ತರಗತಿ ಮುಗಿಸುವಷ್ಟರಲ್ಲಿ ಒಂದರಿಂದ ಇಪ್ಪತ್ತರವರೆಗೆ ಮಗ್ಗಿಯನ್ನು ಕಂಠಪಾಠ ಮಾಡಿರುವಂತೆ ನೋಡಿಕೊಳ್ಳುವುದು. ಓೀಗಾಗಿ ಇನ್‌ಸ್ಪೆಕ್ಟರ್ ಇವಳ ತರಗತಿಯ ಇನ್‌ಸ್ಪೆಕ್ಷನ್‌ಗೆ ಬಂದು ಸರಸ್ವತಿಯನ್ನು

ಹದಿಮೂರರ ಮಗ್ಗಿ ಹೇಳಲು ಸೂಚಿಸಿದರಂತೆ. ಆಗ ಸರಸ್ವತಿ ಅವರನ್ನು ಕೇಳಿದ ಮರುಪ್ರಶ್ನೆ ಏನು ಗೊತ್ತೆ? 'ಕೆಳಗಿಂದ ಹೇಳಲೋ. ಮೇಲಿಂದ ಹೇಳಲೋ?' (ಅಂದರೆ ಹದಿಮೂರಹತ್ಲ'ದಿಂದಲೋ. 'ಹದಿಮೂರೊಂದ್ಲ'ದಿಂದಲೋ? ಎಂದು) ದಂಗಾದ ಆ ಇನ್‌ಸ್ಪೆಕ್ಟರ್ ತಮ್ಮ ಇನ್‌ಸ್ಪೆಕ್ಷನ್ ರಿಪೋರ್ಟ್‌ನಲ್ಲಿ ಆಶ್ಚರ್ಯಸೂಚಕ ಚಿಹ್ನೆಯೊಂದಿಗೆ ಕೆಳಗೆರೆ ಹಾಕಿ ನಮೂದಿಸಿಹೋಗಿದ್ದರು! ಇದನ್ನು ನಮ್ಮ ತಂದೆ ಬಹುಕಾಲ ನಮ್ಮ ಮನೆಗೆ ಬರುತ್ತಿದ್ದ ಬಂಧು ಮಿತ್ರರೆಲ್ಲರಿಗೂ ಹೆಮ್ಮೆಯಿಂದ ಹೇಳುತ್ತಿದ್ದುದು ನನಗೆ ನೆನಪಿದೆ.

* * *

ಹೀಗಿದ್ದ ಸಣ್ಣ ಊರೊಂದರ ಬಾಲ ಸರಸ್ವತಿಯ ಚರಿತ್ರೆ ನಮ್ಮ ಅಣ್ಣನಿಗೆ ಬೆಂಗಳೂರಿನಲ್ಲಿ ಉಪನ್ಯಾಸಕ ಹುದ್ದೆ ಸಿಕ್ಕಿ ನಾವು ತಾಯಿ ಮಕ್ಕಳೆಲ್ಲ ಬೆಂಗಳೂರಿಗೆ ಹೋಗಿ ನೆಲೆ ನಂತರ ತನ್ನ ಬಣ್ಣ ಬೆಡಗುಗಳನ್ನು ಕಳೆದುಕೊಂಡಿತು. ಹಾಗೆ ನೋಡಿದರೆ ನಮ್ಮ ಕುಟುಂಬದಲ್ಲಿ ಬೆಂಗಳೂರು ಜೀವನಕ್ಕೆ ಸಹಜವಾಗಿ ಹೊಂದಿಕೊಂಡವರೆಂದರೆ ನಮ್ಮ ಅಣ್ಣ ಮತ್ತು ದೊಡ್ಡ ತಂಗಿ ರಾಜಮ್ಮ. ನಮ್ಮಣ್ಣನಂತೂ ಅವರೆಗಿನ ತನ್ನ ಯೌವ್ವನದ ವರ್ಷಗಳನ್ನೆಲ್ಲ ಕಾಲೇಜು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿನಲ್ಲೇ ಕಳೆದವನು. ಇನ್ನು ರಾಜಮ್ಮ ಬಾಲ್ಯದಿಂದಲೂ ಸ್ವಲ್ಪ ಜೋರಿನ ವ್ಯಕ್ತಿತ್ವದವಳೇ. ಅದೇನೇ ಇದ್ದರೂ. ನಾನು ಕಾಲೇಜು ಸೇರಿ ಬೆಂಗಳೂರಿನಲ್ಲಿ ಹಲವು ಹಲ್ಲಂಡೆಗಳ ನಡುವೆ ಕಳೆದುಹೋಗತೊಡಗಿದಂತೆ ಸರಸ್ವತಿಯೊಡನೆಯ ನನ್ನ ಒಡನಾಟ ತನ್ನ ತೀವ್ರತೆಯನು ಕಳೆದುಕೊಂಡು ತೆಳುವಾಗತೊಡಗಿತು. ಆದರೆ ನಮ್ಮಣ್ಣ ಈ ಇಬ್ಬರು ತಂಗಿಯರನ್ನೂ, ಆಗಾಗ್ಗೆ ಹೊಸಬಟ್ಟೆಗಳನ್ನು ಹೊಲೆಸುತ್ತಾ, ಸಿನಿಮಾಗಳಿಗೆ (ಅದೂ ಬಾಲ್ಕನಿಗೇ) ಕರೆದೊಯ್ಯುತ್ತಾ, ಪರಿಹಾಸ್ಯದ ಮಾತುಗಳನ್ನಾಡುತ್ತಾ ಆತ್ಮೀಯವಾಗಿ ನೋಡಿಕೊಳ್ಳುತ್ತಿದ್ದನು. ಆದರೆ ಮುಂದಿನ ಒಂದೆರಡು ವರ್ಷಗಳಲ್ಲಿ ನಮ್ಮ ಅಣ್ಣನಿಗೆ ಮದುವೆಯಾಗಿ ಸಂಸಾರದ ಬೇಡಿಕೆಗಳು ಹೆಚ್ಚಾಗಿ ಖರ್ಚುಗಳ ಒತ್ತಡ ಆರಂಭವಾದಾಗ ಸಂಬಂಧಗಳಲ್ಲಿ ಬಿಗುವು ಸೃಷ್ಟಿಯಾಯಿತು. ನಮ್ಮ ತಂದೆಯೂ ನಿವೃತ್ತರಾಗಿ ನಮ್ಮನ್ನು ಕೂಡಿಕೊಂಡರು. ಆದರೆ ಮನೆಗೆ ಸೊಸೆಯಾಗಿ ಬಂದ ನಮ್ಮ ಅತ್ತಿಗೆಯವರು ಎಲ್ಲವನ್ನು ಸರಿದೂಗಿಸಿಕೊಂಡು ಹೋಗುವ ಗುಣವುಳ್ಳವರಾದ್ದರಿಂದ ಹೇಗೋ ಮುಂದಿನ ಜೀವನ ಹೆಚ್ಚು ತೊಡಕುಗಳಿಲ್ಲದೆ ಸಾಗಿತ್ತು. ಸರಸ್ವತಿ ಮನೆಯಲ್ಲಿ ಹತ್ತರಲ್ಲೊಬ್ಬಳಾಗಿದ್ದಳು. ಆದರೆ ನಮ್ಮಣ್ಣನ ಎಲ್ಲ 'ಹೈಕ್ಲಾಸ್' ಅಭಿರುಚಿಗಳನ್ನೂ ಮೈಗೂಡಿಸಿಕೊಳ್ಳುತ್ತಾ ಬೆಳೆದಿದ್ದಳು!

ನಾನು ನನ್ನ ವಿದ್ಯಾಭ್ಯಾಸ ಮುಗಿಸಿ ಉದ್ಯೋಗ ನಿಮಿತ್ತ ದೆಹಲಿಗೆ ಹೋಗುವ ಹೊತ್ತಿಗೆ ಸರಸ್ವತಿ ಶಾಲಾ ಶಿಕ್ಷಣ ಮುಗಿಸಿ ಕಾಲೇಜು ಸೇರುವ ಹಂತ ತಲುಪಿದ್ದಳು. ನಾನು ಮುಂದಿನ ಏಳೆಂಟು ವರ್ಷ ದೆಹಲಿಯಿಂದ ಮನೆಗೆ ವರ್ಷಕ್ಕೊಮ್ಮೆಯೋ ಎರಡು ಬಾರಿಯೋ ಒಂದು ವಾರ ಅಥವಾ ಹತ್ತು ದಿವಸಗಳ ಮಟ್ಟಿಗೆ ಬರುತ್ತಿದ್ದುದರಿಂದ ನನ್ನ ಮತ್ತು ಸರಸ್ವತಿಯ ಸಂಬಂಧ ಔಪಚಾರಿಕವಾಗತೊಡಗಿತು. ನಮ್ಮಣ್ಣ ಅವನದೇ

ಕಾಲೇಜಿನ ಕಷ್ಟಕೋಟಲೆಗಳ ನಡುವೆ ಸರಸ್ವತಿಯನ್ನು ಕಾಲೇಜಿಗೆ ಸೇರಿಸಲೂ ಯಾರೂ ಇಲ್ಲದಾಗಿ ಅವಳೇ ಹೇಗೋ ಸೇರಿ ಪಿಯುಸಿ ಪಾಸಾಗಿ ಪದವಿ ಮುಟ್ಟಿದ್ದಳು. ಈ ಮಧ್ಯೆ ರಾಜಮ್ಮನಿಗೂ ಮದುವೆಯಾಗಿ ಗಂಡನ ಮನೆಗೆ ಹೋಗಿದ್ದಳು. ನಮ್ಮ ಅಣ್ಣನಿಗೆ ಮೂರು ಮಕ್ಕಳಾಗಿದ್ದವು. ಈ ಮೂರೂ ಮಕ್ಕಳನ್ನು ಸರಸ್ವತಿ ಬಹುಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಳು. ಆದರೆ ನಾನು ಮನೆಗೆ ಬಂದಾಗಲೆಲ್ಲ ಸರಸ್ವತಿ ಖಿನ್ನಳಾಗುತ್ತಿದ್ದಂತೆ ತೋರುತ್ತಿದ್ದಳು. ಅವಳು ನಿಧಾನವಾಗಿ ತನ್ನ ಬಾಲ್ಯದ ಜೀವಂತಿಕೆ ಕಳೆದುಕೊಂಡು ಬಾಡುತ್ತಿದ್ದಂತೆ ನನಗೆ ಅನ್ನಿಸುತ್ತಿತ್ತು, ಬಂದಾಗ ಅವಳಿಗೆ ಖರ್ಚಿಗೆಂದು ಒಂದಿಷ್ಟು ಹಣ ಕೊಡುವುದರ ಹೊರತಾಗಿ ನಾನೇನೂ ಮಾಡುವಂತಿರಲಿಲ್ಲ. ಆದರೂ ದುಬಾರಿ ಕೈಚೀಲ, ಬಣ್ಣದ ಛತ್ರಿ ಇತ್ಯಾದಿಗಳಿಗೆ ಸಂಬಂಧಿಸಿದ ಅವಳ 'ಹೈಕ್ಲಾಸ್' ಅಭಿರುಚಿಗಳೇನೂ ಕಡಿಮೆಯಾಗಿರಲಿಲ್ಲ. ಇದಕ್ಕಾಗಿ ನಾನು ಹಲವು ಬಾರಿ ಅವಳನ್ನು ಗದರಿದ್ದೂ ಉಂಟು.

ಅವಳು ಹೀಗೆ ಬಾಡಲು ಮುಖ್ಯ ಕಾರಣ ಅವಳ ಮದುವೆ ಕುರಿತ ಪ್ರಸಂಗಗಳು ಎಂಬುದು ನನಗೆ ಗೊತ್ತಾಗತೊಡಗಿತು. ಅವಳು ಕಪ್ಪು ಮತ್ತು ಎತ್ತರ ಕಡಿಮೆ ಎಂಬ ಕಾರಣದಿಂದ ಅವಳು ಕೆಲವು ಸಂಬಂಧಗಳಿಂದ ತಿರಸ್ಕೃತಳಾಗಿದ್ದಳು. ಜೊತೆಗೆ ನಮ್ಮ ತಂದೆ ಅತಿರಕ್ತದೊತ್ತಡದ ಪರಿಣಾಮ ಅರೆ ಕುರುಡರಾಗಿದ್ದರಿಂದ ಅವರು ಸಂಬಂಧಗಳನ್ನು ಹುಡುಕುತ್ತಾ ಓಡಾಡುವ ಹಾಗಿರಲಿಲ್ಲ. ನಮ್ಮ ಅಣ್ಣನೋ ಒಂದಿಬ್ಬರು ಹತ್ತಿರದ ಸಂಬಂಧಿಗಳ ಹೊರತಾಗಿ ಇನ್ನಾವ ನೆಂಟರಿಷ್ಟರನ್ನೂ ಹತ್ತಿರ ಸೇರಿಸುತ್ತಿರಲಿಲ್ಲ. ಹೀಗಾಗಿ ಹೆಣ್ಣು ಹುಡುಕಿಕೊಂಡು ಬರುವ ಸಂಬಂಧಗಳ ಸಂಖ್ಯೆ ಬತ್ತಿ ಹೋಯಿತು. ವಿದ್ಯಾವಂತರ ಮನೆಯೆಂದು ಬಂದ ಸಂಬಂಧಗಳು ನಮ್ಮ ತಂದೆ ತಾಯಿಗಳ ಮೂರ್ಖತನದಿಂದ ತಪ್ಪಿಹೋದವು ಎಂದೂ ನಾನು ಕೇಳಿದ್ದೆ. ಅವರ ಮೂರ್ಖತನವೆಂದರೆ, ದೊಡ್ಡ ಮಗಳಿಗೆ ಡಾಕ್ಟರನ್ನು ಕೊಟ್ಟು ಮದುವೆ ಮಾಡಿರುವಾಗ ಇವಳಿಗೆ ಕಡಿಮೆ ದರ್ಜೆಯ ಉದ್ಯೋಗದ ಹುಡುಗನನ್ನು ನೋಡಿದರಾದೀತೆ ಎಂಬ ಸಾಮಾನ್ಯ ವಿವೇಕದ ಕೊರತೆ. ನಾನು ಎಷ್ಟು ಹೇಳಿದರೂ ಬಹುಕಾಲ ಬುದ್ಧಿ ಕಲಿಯಲಿಲ್ಲ.

ಈ ಹೊತ್ತಿಗೆ ನಾನು ದೆಹಲಿ ಬಿಟ್ಟು ಭದ್ರಾವತಿಗೆ ಬಂದು ಅನ್ಯ ಜಾತಿಯ ಸವಿತಾಳನ್ನು ಮದುವೆಯಾದ ಕಾರಣ ಕೆಲ ವರ್ಷಗಳ ಕಾಲ ಕುಟುಂಬದಿಂದ ಬಹಿಷ್ಕೃತನಾಗಿದ್ದೆ. ಸರಸ್ವತಿಯೂ ತನ್ನ ಮದುವೆಯಾಗದೆ ಅಣ್ಣ ಹೀಗೆ ಮದುವೆಯಾದದ್ದನ್ನು ಇಷ್ಟಪಟ್ಟಿರಲಿಲ್ಲವೆಂದು ನಾನು ಮತ್ತೆ ನನ್ನ ತಂದೆ ತಾಯಿಗಳ ಕುಟುಂಬದ ಬಳಿ ಹೋಗತೊಡಗಿದಾಗ ಗೊತ್ತಾಯಿತು. ಆದರೂ ನಾನು ಒಂದೆರಡು ಬಾರಿ ಅವಳಿಗೆ ನಮ್ಮ ಜೊತೆ ಬಂದುಬಿಡು, ನಿನಗೆ ಮದುವೆ ಮಾಡುವುದು ನನ್ನ ಜವಾಬ್ದಾರಿ ಎಂದು ಹೇಳಿದ್ದೆ. ಆದರೆ ಅವಳು ಹೆದರಿದ್ದಳು ಮತ್ತು ಬಹುಶಃ ನನ್ನ ತಂದೆ ತಾಯಿಗಳೂ ಹೆದರಿಸಿದ್ದರು. ನಾವು ತ್ಯಾಮಗೊಂಡ್ಲು ಬಿಟ್ಟು ಬಂದು ಬೆಂಗಳೂರು ಸೇರಿದ ನಂತರ ನೆಂಟರಿಷ್ಟರ ನನ್ನ ಸಂಪರ್ಕ ಹೆಚ್ಚೂ ಕಡಿಮೆ ಕಡಿದೇ ಹೋಗಿತ್ತು. ಹಾಗಾಗಿ ನಮ್ಮ ಜಾತಿ ಬಾಂಧವರಲ್ಲಿ ಅವಳಿಗೆ ನಾನು (ಅದೂ ಜಾತಿಬಿಟ್ಟು ಮದುವೆಯಾದವನು)

ಗಂಡು ಹುಡುಕುವುದು ದುಸ್ಸಾಧ್ಯವೇ ಆಗಿತ್ತು. ಆದರೂ ಒಂದೆರಡು ಕಡೆ ಪ್ರಯತ್ನಿಸಿ ಮುಖಕ್ಕೆ ತಣ್ಣೀರೆರಚಿಸಿಕೊಂಡ ನಂತರ ಸುಮ್ಮನಾದೆ.

ಇಪ್ಪತ್ತಾರು-ಇಪ್ಪತ್ತೇಳು ದಾಟಿದರೂ ಮದುವೆಯ ಸಾಧ್ಯತೆ ಕಂಡು ಬರದಿದ್ದಾಗ ಸರಸ್ವತಿ ಒಂಟಿಯಾದಳು. ಅವಳಿಗೆ ಅಣ್ಣನ ಮೂರು ಮಕ್ಕಳೇ ಆತ್ಮೀಯ ಸಂಗಾತಿಯಾದವು. ಜೊತೆಗೆ ಅವಳು ಲೈಬ್ರರಿಯಿಂದ ದಿನವಹಿ ತಂದು ಓದುತ್ತಿದ್ದ ಕನ್ನಡದ 'ಜನಪ್ರಿಯ' ಮಹಿಳಾ ಕಾದಂಬರಿಗಳ ರಾಶಿ. ವಯಸ್ಸಾದ ನಮ್ಮ ತಂದೆ ತಾಯಿ ಒತ್ತಡಕ್ಕೆ ಒಳಗಾದರು. ನಮ್ಮ ಅಣ್ಣನೂ ಅಸಹಾಯಕನಾಗಿದ್ದ.. ನಾನು ಮೂಕ ಪ್ರೇಕ್ಷಕನ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದೆ. ಈಗ ರಾಜಮ್ಮನೂ ತಂಗಿಗೆ ಗಂಡು ಹುಡುಕುವ ಪ್ರಯತ್ನ ಮಾಡಿದಳಾದರೂ ಅದು ತಡವಾಗಿತ್ತು. ಬಟ್ಟಲುಗಣ್ಣುಗಳ ಮುದ್ದಾಗಿದ್ದ ಸರಸ್ವತಿಯ ಮುಖ ಕಪ್ಪಿಟ್ಟು ಸದಾ ಬಾಗಿರುತ್ತಿತ್ತು. ಅವಳ ಹತ್ತು ವರ್ಷಗಳ ಚರಿತ್ರೆಯೇ ಅದರ ಮೇಲೆ ಬರೆದಿರುವಂತಿತ್ತು. ಕೊನೆಗೆ ಅವಳೇ ನಿಶ್ಚಯಿಸಿಕೊಂಡಂತೆ ಮನೆಯ ಎದುರಿಗೇ ಇದ್ದ ಟೈಪಿಂಗ್ ತರಬೇತಿ ಕೇಂದ್ರ ಸೇರಿದಳು. ಎರಡು ವರ್ಷಗಳಲ್ಲಿ ಸೀನಿಯರ್ ಪರೀಕ್ಷೆ ಪಾಸು ಮಾಡಿದಳು. ಅಲ್ಲಿ ಪರಿಚಯವಾದ ಗೆಳತಿಯೊಬ್ಬರ ಮೂಲಕ ಕರ್ನಾಟಕ ಹಾಲು ಮಹಾಸಂಘದ (ಕೆಎಂಎಫ್) ಬೆಂಗಳೂರು ಕಛೇರಿಯಲ್ಲಿ ಟೈಪಿಸ್ಟ್ ಕೆಲಸವನ್ನು ಗಿಟ್ಟಿಸಿಕೊಂಡಳು. ಇಲ್ಲಿಂದಾಚೆ ಸರಸ್ವತಿಯ ಬದುಕಿನ ಖದರೇ ಬದಲಾಗತೊಡಗಿತು. ಮದುವೆಯಾಗಿಲ್ಲ ಎಂಬ ಬೇಸರ, ಸುಸ್ತು ಎದ್ದು ಕಾಣುತ್ತಿದ್ದರೂ. ಖಿನ್ನತೆಯ ಛಾಯೆ ಮಾಯವಾಗಿತ್ತು, ಜೀವನದಲ್ಲಿ ವಿಶ್ವಾಸ ಮರಳಿ ಬಂದಿತ್ತು. ಈ ಮಧ್ಯೆ ನಮ್ಮ ತಂದೆ ತೀರಿ ಹೋದರು. ಅಂದು ನಾನು ನಮ್ಮ ತಂದೆಯ ಶವದ ಥಣ್ಣನೆಯ ಕಾಲುಗಳನ್ನು ಹಿಡಿದು ಕಣ್ಣೀರಿಡುತ್ತಿದ್ದಾಗ ಸರಸ್ವತಿ ನನ್ನ ಕೈಹಿಡಿದು 'ನಾಣ್ಣಾ...' ಎಂದು ರೋಧಿಸುತ್ತಿದ್ದಾಗ ಅವಳ ಮನಸ್ಸಿನಲ್ಲಿ ಯಾವ ಅಸಹಾಯಕತೆಯ ಭಾವ ಹಾದು ಹೋಗುತ್ತಿತ್ತೋ ನಾನರಿಯದಾಗಿದ್ದೆ. ನಾನವಳ ಬೆನ್ನು ಸವರುತ್ತಾ 'ಏನೂ ಆಗೊಲ್ಲ ಸುಮ್ಮನಿರು' ಎಂದು ಸಮಾಧಾನಪಡಿಸಿದ್ದೆ.

* * *

ಕೊನೆಗೊಂದು ದಿನ ಮುವ್ವತ್ತು ದಾಟಿದ ಅವಳಿಗೆ ಮದುವೆಯ ಯೋಗದ ಘಳಿಗೆ ಬಂದೇ ಬಂದಿತು. ನನ್ನ ಸೋದರ ಸಂಬಂಧದಲ್ಲೇ ಮದುವೆಯಾಗಿದ್ದ ಲಿಂಗರಾಜು ಎಂಬುವವರು ಅಕಾಲದಲ್ಲಿ ಪತ್ನಿಯನ್ನು ಕಳೆದುಕೊಂಡಿದ್ದರು. ಅವರಿಗೊಬ್ಬ ದೀಪು (ದೀಪಕ್) ಎಂಬ ಚಿಕ್ಕ ವಯಸ್ಸಿನ ಮಗ ಇದ್ದ, ನಾನು ಈ ಬಗ್ಗೆ ಯೋಚನೆ ಮಾಡಿ ನನ್ನ ಸೋದರ ಸಂಬಂಧಿಗೆ ಸೂಚನೆ ನೀಡುವ ಹೊತ್ತಿಗೇ ಯೋಗಾಯೋಗ ಕೂಡಿ ಬಂದು ಲಿಂಗರಾಜು-ಸರಸ್ವತಿಯರ ಮದುವೆ ನಿಶ್ಚಯವಾಯಿತು. ಈ ಹೊತ್ತಿಗೆ ಒಂದು ಅನಿವಾರ್ಯ ಕಾರಣದಿಂದ ನಾನು ನಮ್ಮಣ್ಣನಿಂದ ದೂರವಾಗಿದ್ದೆ. ಆದರೆ ಡಾಬಸ್ಪೇಟೆಯಲ್ಲಿನ ನಮ್ಮ ಹಿರಿಯರ ಆಸ್ತಿ ಮಾರಿದ್ದ ಹಣದ ನನ್ನ ಭಾಗವನ್ನು ಸರಸ್ವತಿಯ ಮದುವೆಗೆಂದು ನಮ್ಮಣ್ಣನ ಬಳಿಯೇ ಬಿಟ್ಟು ಹೋಗಿದ್ದೆ. ಆದರೂ

ಮದುವೆಗೆ ನನಗೆ ಆಹಾನ್ವವಿರಲಿಲ್ಲ ಸರಸ್ವತಿಯಾದರೂ ಫೋನ್ ಮಾಡುವಳು ಅಥವಾ ಆಹ್ವಾನ ಪತ್ರಿಕೆ ಕಳಿಸುವಳು ಎಂದು ಕಾದಿದ್ದೂ ವ್ಯರ್ಥವಾಗಿತ್ತು, (ಆ ಹೊತ್ತಿಗೆ ಅವಳು ನಮ್ಮಣ್ಣ ಮಗನ ಜೊತೆ, ಆಗ ನಾನಿದ್ದ ಮಡಿಕೇರಿಗೆ ಬಂದು ನಮ್ಮ ಜೊತೆ ಕಾಲ ಕಳೆದುಹೋಗಿದ್ದಳು.) ಬಹುಶಃ ಅವಳು ನಮ್ಮಣ್ಣನಿಗೆ ಹೆದರಿದ್ದಳು. ಆದರೆ ವರ ಲಿಂಗರಾಜು ಆಹ್ವಾನ ಪತ್ರಿಕೆ ಕಳಿಸಿದ್ದರು. ಇದೇ ಸಾಕೆಂದು (ಬಹುಶಃ ಅವರು ಆಹ್ವಾನ ಪತ್ರಿಕೆ ಕಳಿಸದಿದ್ದರೂ) ಮದುವೆಗೆ ಬೆಂಗಳೂರಿಗೆ ಹೋದೆವು. ಧಾರೆ ಮುಹೂರ್ತಕ್ಕೆ ಹಾಜರಾಗಿ ವಧೂವರರನ್ನು ಆಶೀರ್ವದಿಸಿ ಬಂದೆವು. ಸರಸ್ವತಿ ಕಷ್ಟಪಟ್ಟು ಕಾದದ್ದೂ ಸಾರ್ಥಕವೆಂಬಂತೆ ಅವಳಿಗೆ ಒಳ್ಳೆಯ ಗಂಡ ಸಿಕ್ಕಿದ್ದರು. ಜೊತೆಗೆ ಪಾಲಿಸಿ ಪೋಷಿಸಲು ಒಬ್ಬ ಪುಟ್ಟ ಮಗ ಕೂಡ!

ನಂತರ ಅವಳ ವೈವಾಹಿಕ ಜೀವನ ಸುಖಮಯವಾಗಿತ್ತೆಂದೇ ನನಗೆ ಕಂಡಿತು. 'ಕಂಡಿತು' ಏಕೆಂದರೆ ಮದುವೆಯ ನಂತರ ಅವಳೊಂದಿಗೆ ಆಪ್ತವಾಗಿ ಒಂದಿಷ್ಟು ಕಾಲ ಮಾತನಾಡುವ ಸಂದರ್ಭವೇ ನನಗೆ ಒದಗಿಬರಲಿಲ್ಲ. ಅವಳಿಗೂ ಅದು ಇಷ್ಟವಿರಲಿಲ್ಲವೋ ಏನೋ ತಿಳಿಯದು. ಶಿವಮೊಗ್ಗದ ನಮ್ಮ ಮನೆಯ 'ಗೃಹ ಪ್ರವೇಶ'ಕ್ಕೆ ಬಂದು ಒಂದು ಭರ್ಜರಿ ಉಡುಗೊರೆ ಕೊಟ್ಟು ಹೋದದ್ದರ ಹೊರತಾಗಿ ಅವಳು ನನ್ನ ಮತ್ತು ಸವಿತಾಳ ಹಲವು ಆಹ್ವಾನಗಳಿಗೆ ಪ್ರತಿಸ್ಪಂದಿಸಲಿಲ್ಲ. ಆದರೆ ನಾನು ಬೆಂಗಳೂರಿಗೆ ಹೋಗಿ ನಮ್ಮಣ್ಣನ ಮನೆಯಲ್ಲೋ, ರಾಜಮ್ಮನ ಮನೆಯಲ್ಲೋ ಇದ್ದಾಗ ತಿಳಿಸಿದರೆ ಸಂಜೆ ಆಫೀಸಿನಿಂದ ಬರುವಾಗ ನನಗಿಷ್ಟವಾದ ಒಂದಷ್ಟು ತಿಂಡಿಗಳನ್ನು ಕಟ್ಟಿಸಿಕೊಂಡು ಬಂದು ಕೊಟ್ಟು ಸಂಕ್ಷಿಪ್ತವಾಗಿ ಮಾತನಾಡಿಸಿ ಹೋಗುತ್ತಿದ್ದಳು. ಅವಳು ಮೊದಲೇ ಹೇಳಿದ ಹಾಗೆ 'ಹೈಕ್ಲಾಸ್' ಅಭಿರುಚಿಯವಳು. ಮದುವೆಯಾದೊಡನೆ ಪೋಲೀಸ್ ಕ್ವಾಟ್ರರ್ಸ್ ವಾತಾವರಣ ಸರಿಯಿಲ್ಲವೆಂದು ಗಂಡನನ್ನು ಒತ್ತಾಯಿಸಿ ಇನ್ನೂ ಸರಿಯಾಗಿ ರಸ್ತೆ ಇರದ, ಬಸ್ ಸಂಪರ್ಕವಿಲ್ಲದ, ಸೊಟ್ಟಪಟ್ಟಾಗಿ ಮನೆಗಳನ್ನು ಕಟ್ಟಿದ ಸುಂಕದ ಕಟ್ಟೆ ಎಂಬ ಕಂದಾಯ ಬಡಾವಣೆಯಲ್ಲಿ ಒಂದು ಸುಂದರ ಮನೆಯನ್ನು ಕಟ್ಟಿಸಿಕೊಂಡಳು. ಕಾರಿನ ಒಡತಿಯಾದಳು. ಎಲ್ಲೋ ಜಮೀನು ಕೊಂಡಳು. ಆ ಕಿಷ್ಕಿಂಧೆಯಲ್ಲಿ ಅವಳ ಮನೆಯನ್ನು ಗುರುತು ಹಿಡಿಯಲು ನನಗೆ ಕಷ್ಟವಾಗುತ್ತಿದ್ದುದರಿಂದ ನಾನಾಗಿ ನಾನು ಅಲ್ಲಿಗೆ ಎಂದೂ ಹೋದವನಲ್ಲ. ಆದರೆ ದಂಪತಿಗಳು ನಾನಿದ್ದಲ್ಲಿ ಬಂದಾಗ ಅವರೊಂದಿಗೆ ನಾಲ್ಕಾರು ಬಾರಿ ನನ್ನ ಪತ್ನಿಯೊಂದಿಗೆ ಹೋಗಿ ಬಂದಿದ್ದೇನೆ. ಆಗಲೂ ಅವಳದ್ದು ಮಾತು ಕಡಿಮೆ. ಮುನಿಸೋ, ಹೊಸ ಜವಾಬ್ದಾರಿಯ ಗಾಂಭೀರ್ಯವೋ ನನಗೆ ತಿಳಿಯಲಿಲ್ಲ. ನಾನು ಬೈಯುತ್ತೇನೆ ಎಂಬುದೂ ಇದಕ್ಕೊಂದು ಕಾರಣವೆಂದು ಲಿಂಗರಾಜು ಹೇಳುತ್ತಿದ್ದರು. ಆದರೆ ಅದಕ್ಕೆ ಅವರೇ ಕಾರಣರು! ಸಕ್ಕರೆ ಕಾಯಿಲೆ ಇದ್ದ ಅವಳು ಸರಿಯಾಗಿ ಮಾತ್ರೆ ತಿನ್ನುವುದಿಲ್ಲ, ಇನ್ಸುಲಿನ್ ತೆಗೆದುಕೊಳ್ಳುವುದಿಲ್ಲ ಎಂದು ಅವರು ಸಿಕ್ಕಾಗೆಲ್ಲ ದೂರಿದರೆ ನಾನೇನು ಮಾಡಬಹುದು? ಅದೂ ಒಮ್ಮೆ ಸಕ್ಕರೆ ವಿಪರೀತ ಹೆಚ್ಚಾಗಿ, ಮತ್ತೊಮ್ಮೆ ವಿಪರೀತ ಕಡಿಮೆಯಾಗಿ ಮರಣಶಯ್ಯೆಗೆ ಹೋಗಿ ಬಂದಿದ್ದಾಗ?

ಆದರೆ ಅವಳು ಜೀವನದ ಯಾವ ಖುಷಿಗಳನ್ನೂ ಬಿಡಲೊಲ್ಲದವಳು. ಒಂದಿಸ ಜೀವನದ ಬೇಸರವನ್ನೆಲ್ಲ ಈಗ ಸುಖಪಟ್ಟು ತೀರಿಸಿಕೊಳ್ಳಬಯಸಿದವಳು ಅವಳು ಎಂದು ನನಗೆ ಹಲವು ಬಾರಿ ಅನಿಸಿದೆ. ಹಾಗೆ ನೋಡಿದರೆ ಅವಳ ವ್ಯಕ್ತಿತ್ವದಲ್ಲೇ ಈ ರೀತಿ ಯಾವುದೇ ಮುಲಾಜಿಲ್ಲದೆ 'ಖುಷಿ'ಪಡುವ ಗುಣ ಇತ್ತೆಂದು ತೋರುತ್ತದೆ. ಏಕೆಂದರೆ ನಾನು ದೆಹಲಿಯಲ್ಲಿದ್ದಾಗ ಅಲ್ಲಿಗೆ ಪ್ರವಾಸ ಬಂದ ನನ್ನ ತಂದೆ, ದೊಡ್ಡ ತಂಗಿ, ಅವಳ ಪತಿ ಸಿಆರ್‌ಸಿ ಪರಿವಾರದೊಂದಿಗೆ ಸರಸ್ವತಿಯೂ ತನ್ನ ಅಣ್ಣನ ಮಾತನ್ನೂ ಲೆಕ್ಕಿಸದೆ ಹೊರಟು ಬಂದಿದ್ದಳು. ಆನಂತರ ಇವರಿಬ್ಬರ ನಡುವೆ ಮಾತುಕತೆಯೇ ಹೆಚ್ಚೂಕಡಿಮೆ ಸ್ಥಗಿತಗೊಂಡಿತ್ತು. ಹಾಗೇ ನಾವು ಹಿಮಾಲಯದ 'ಚಾರೋಧಾಮ್' ಪ್ರವಾಸ ಹೊರಟಾಗ 'ನಾನೂ ಬರ್ತೀನಿ ಕಣೋ' ಎಂದು ಹಠ ಮಾಡಿ ನಮ್ಮನ್ನು ಸೇರಿಕೊಂಡಳು. ಈ ಎರಡೂ ಪ್ರವಾಸಗಳ ಎಲ್ಲ ಖುಷಿಗಳನ್ನೂ ಒಂಚೂರೂ ಬಿಡದೆ ಅನುಭವಿಸಿದಳು. ಇದರಿಂದಾಗಿ ಒಂದೆರಡು ಬಾರಿ ನನ್ನಿಂದ ಬೈಸಿಕೊಂಡಿದ್ದೂ ಉಂಟು. ಕೇದಾರದ ಶೃಂಗದಲ್ಲಿ ಆಮ್ಲಜನಕ ಸಾಲದೆ ಉಸಿರುಕಟ್ಟಿ ಅವಳು ಆಗ ಬದುಕಿ ಬಂದದ್ದೇ ಹೆಚ್ಚು. (ನಮ್ಮ ತಂಡದ ಒಬ್ಬರು ಅಲ್ಲಿ ಅಸು ನೀಗಿದ ದುರಂತವೂ ಆಗ ಸಂಭವಿಸಿತು.) ಆದರೆ ಅದೇ ಹೊತ್ತಿನಲ್ಲಿ ಅವಳೊಬ್ಬ ಮಹಾಛಲವಾದಿಯೂ ಎನಿಸಿದೆ. ಅವಳು ದೀಪುವನ್ನು ತನ್ನಣ್ಣನ ಹೆಣ್ಣುಮಕ್ಕಳ ಮಾರ್ಗದರ್ಶನದಲ್ಲಿ ಪಟ್ಟು ಹಿಡಿದು ಓದಿಸಿ ಸಾಫ್ಟ್‌ವೇರ್ ಎಂಜಿಯರನ್ನಾಗಿ ಮಾಡಿದಳು. ಆ ಹೊತ್ತಿಗೆ ಲಿಂಗರಾಜು ಬಡ್ತಿ ಹೊಂದಿ ಸಬ್ ಇನ್‌ಸ್ಪೆಕ್ಟರ್ ಆದ ನಂತರ ತನ್ನ ಕೆಲಸದಿಂದ ಸ್ವಯಂನಿವೃತ್ತಿ ಪಡೆದು ನಿರಾಳಳಾದಳು. ಇದ್ದ ಮನೆಯನ್ನು ಮತ್ತಷ್ಟು ಸುಸಜ್ಜಿತಗೊಳಿಸಿದಳು. ಗಂಡ-ಮಗನೊಂದಿಗೆ ಮತ್ತು ತನಗೆ ಆಪ್ತರಾದ ಬಂಧುಗಳೊಂದಿಗೆ ಬೇಕಬೇಕಾದ ಕಡೆ ಪ್ರವಾಸ ಮಾಡಿದಳು. ಬೇಕಾದ್ದನ್ನು ತಿಂದು ಉಂಡಳು. ಮಗನಿಗೆ ಒಳ್ಳೆಯ ಕಡೆ ನೋಡಿ ಮದುವೆ ಮಾಡಿದಳು. ಮೊಮ್ಮಗನನ್ನು ಪಡೆದಳು.

ಹೀಗೆ ಅವಳು ತನ್ನದೇ ನೆಮ್ಮದಿಯಲ್ಲಿದ್ದಾಗ ಕರೋನಾ ಮಹಾಮಾರಿ ಅವತರಿಸಿದಳು. ಮನೆಗೆ ಬೀಗ ಹಾಕಿ ಒಳಗೆ ಸೇರಿಕೊಂಡರೂ ಈ ಮಹಾಮಾರಿಯ ಎರಡನೆಯ ಅಲೆ ಅವಳನ್ನು ಎಳೆದೊಯ್ದಿತು. ಮೈಸೂರಿನ ಪರಿಚಿತರ ಆಸ್ಪತ್ರೆ ಸೇರಿ ಒಂದು ತಿಂಗಳ ಚಿಕಿತ್ಸೆ ಪಡೆದು ಮನೆಗೆ ವಾಪಸಾಗಿದ್ದ ಅವಳು ಒಂದು ರಾತ್ರಿ ತಾನಾಗಿ ಎಂದೂ ನನಗೆ ಕರೆ ಮಾಡದಿದ್ದವಳು ಕರೆ ಮಾಡಿ ಸೋತುಹೋದ ದನಿಯಲ್ಲಿ ಕುಶಲ ವಿಚಾರಿಸಿದಳು. ನಾನೂ 'ಪಾರಾಗಿ ಬಂದುಬಿಟ್ಟೆ, ಗುಡ್' ಎಂದೆ. ಅಷ್ಟೇ ಹೇಳಿದ್ದರೆ ಸಾಕಾಗುತ್ತಿತ್ತು ಎಂದು ನನಗೀಗ ಪಶ್ಚಾತ್ತಾಪವಾಗುತ್ತಿದೆ. ಏಕೆಂದರೆ ಅಂದು ಮಧ್ಯಾಹ್ನ ಕರೆ ಮಾಡಿದ್ದ ಲಿಂಗರಾಜು ಮತ್ತು ದೀಪು ಇಬ್ಬರೂ ಅವಳು 'ಇನ್ಸುಲಿನ್ ಸರಿಯಾಗಿ ತೆಗೆದುಕೊಳ್ಳದೆ ನಮಗೆ ಗಾಬರಿ ಉಂಟು ಮಾಡುತ್ತಿದ್ದಾಳೆ, ಸ್ವಲ್ಪ ಹೇಳಿ ಅಣ್ಣ' ಎಂದಿದ್ದರು. ಹಾಗಾಗಿ ನಾನು 'ನೀನು 'ಇನ್ಸುಲಿನ್ ಸರಿಯಾಗಿ ತಗೋಬೇಕು, ಗಂಡ ಮಕ್ಕಳಿಗೆ ತೊಂದರೆ ಕೊಡಬೇಡ' ಎಂದು ಹೇಳಿದ್ದೆ. "ಇಲ್ಲಪ್ಪ, ಇನ್ನು ಯಾರಿಗೂ ತೊಂದರೆ ಕೊಡಲ್ಲ"

ಎಂದು ಸಮಾಧಾನದಿಂದಲೇ ಉತ್ತರಿಸಿದ್ದಳು. ಅಂದು ಸರಸ್ವತಿ ನಮ್ಮ ಅಣ್ಣ ಸೇರಿ ತನಗೆ ಬೇಕಾದ ಎಲ್ಲರಿಗೂ ಫೋನ್ ಮಾಡಿ ಕುಶಲ ವಿಚಾರಿಸಿದ್ದಳಂತೆ. ಮಾರನೆಯ ಬೆಳಿಗ್ಗೆಯೇ ಅವಳ ಸಕ್ಕರೆ ಕನಿಷ್ಟಕ್ಕೆ ಇಳಿದು ಕೋಮಾಗೆ ಹೋಗಿ ಹೃದಾಯಘಾತದಿಂದ ಕೊನೆಯುಸಿರೆಳೆದು ಯಾರಿಗೂ ತೊಂದರೆ ಕೊಡಲಾಗದ ಜಾಗಕ್ಕೆ ಹೋಗಿಬಿಟ್ಟಳು.

ಆದರೂ ಸರಸ್ವತಿ ಈಗಲೂ ನನಗೆ ತೊಂದರೆ ಕೊಡುತ್ತಲೇ ಇದ್ದಾಳೆ. ಗತಿಸಿದ ನನ್ನ ಹಿರಿಯ ತಂಗಿ ಬಗ್ಗೆ ಒಂದು ನೆನಪಿನ ಸಂಚಿಕೆಗಾಗಿ ಒಂದು ಲೇಖನ ಬರೆಯಲು ಅವಳಿಗೆ ಹೇಳಿದ್ದೆ. ಅವಳು ಬರೆದಿದ್ದಳು. ಅದರ ಒಂದು ಸಾಲು ಹೀಗಿತ್ತು: 'ನಾನು ಕುರೂಪಿಯಾಗಿದ್ದುದ್ದರಿಂದ ನನ್ನ ಮದುವೆ ತಡವಾಗುತ್ತಾ ಹೋಯಿತು'. ಇದನ್ನು ಓದಿದ ನಾನು ತಳಮಳಿಸಿ ಹೋದೆ. ಅವಳ ಎದೆಯ ಆಳದ ಗಾಯ ನನ್ನ ಮುಂದೆ ತೆರದು ನಿಂತಂತಾಗಿ ಸಂಕಟ ನನ್ನನ್ನು ಆವರಿಸಿತು. ಸುಧಾರಿಸಿಕೊಂಡ ನಾನು ಕುರೂಪಿಯಾಗಿದ್ದುದರಿಂದ ಎನ್ನುವುದನ್ನು ಕಪ್ಪಗಿದ್ದುದರಿಂದ ಎಂದು ಬದಲಾಯಿಸಿದೆ. ಇದಾದ ನಂತರ ಅವಳು ಸಿಕ್ಕಾಗ ಬದಲಾವಣೆ ಏಕೆ ಮಾಡಿದೆ ಎಂದು ವಿಚಾರಿಸಿದಳು. ನಾನು, 'ನೀನು ಕುರೂಪಿ ಎಂದು ಯಾರು ಹೇಳುವರು? ಕಪ್ಪಷ್ಟೇ' ಎಂದೆ. ಅದಕ್ಕವಳು 'ಈ ಲೋಕಕ್ಕೆ ಅವರೆಡೂ ಒಂದೇ ಬಿಡು' ಎಂದಳು. ಅವಳ ಈ ಮಾತು ನನಗೆ ಅವಳ ಬದುಕಿನ ವಿಷಾದ ಗೀತೆಯಂತೆ ಕೇಳಿಸಿ ಇರಿಯತೊಡಗಿತು. ಈಗಲೂ ಒಂದೇ ಸಮನೆ ಇರಿಯುತ್ತಿದೆ.

ಸರಸ್ವತಿ ಆಡಿದ ಮಾತು ಲೋಕ ಸತ್ಯವಾಗಿಲ್ಲದಿರಬಹುದು. ಅದು ಅವಳು ಹುಟ್ಟಿದ್ದ, ಅತ್ತ ಆತ್ತಲೂ ಸೇರದ ಮತ್ತು ಇತ್ತ ಇತ್ತಲೂ ಸೇರದ ತ್ರಿಶಂಕು ವರ್ಗವೊಂದರ ಸತ್ಯವಿರಬಹುದು. ಆದರೆ ಅದು ಅವಳು ಬಾಳಿ ಬದುಕಿ ನಿರ್ಗಮಿಸಿದ ಲೋಕದ ಸತ್ಯವಂತೂ ಹೌದು. ಓಂ ಶಾಂತಿ ಶಾಂತಿ ಶಾಂತಿಃ....

ಜಿಕೆಜಿ ಅವರಿಗೆ ವಿದಾಯ

ವಿಚಾರವಾದಿ ಚಿಂತಕ, ನಿವೃತ್ತ ಇಂಗ್ಲಿಷ್ ಅಧ್ಯಾಪಕ ಹಾಗೂ ಹಿರಿಯ ನಟ ಪ್ರೊ. ಜಿ.ಕೆ. ಗೋವಿಂದರಾವ್ ನಮ್ಮನ್ನು ಅಗಲಿ ಹೋಗಿದ್ದಾರೆ. ಇವರ ನಿಧನಕ್ಕಾಗಿ 'ಹೊಸ ಮನುಷ್ಯ' ಬಳಗ ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.

ಜಿಕೆಜಿ ೮೪ ವರ್ಷಗಳ ತುಂಬು ಮತ್ತು ಸಾರ್ಥಕ ಬದುಕು ನಡೆಸಿ ಈ ಲೋಕದಿಂದ ನಿರ್ಗಮಿಸಿದ್ದಾರೆ. ತಮ್ಮ ಬದುಕಿನ ಕೊನೆಯ ದಿನಗಳವರೆಗೂ ಸಮಕಾಲೀನ ಸಾರ್ವಜನಿಕ ಜೀವನದ ಭಾಗೀದಾರಿಕೆಯ ಸಜೀವ ಪ್ರತೀಕದಂತಿದ್ದ ಗೋವಿಂದರಾವ್, ಸದಾ ವ್ಯವಸ್ಥೆಯ ವಿರೋಧಿ ದನಿಯಾಗಿದ್ದರು. ಇತ್ತೀಚಿನ ವರ್ಷಗಳಲ್ಲಿ ತಮ್ಮ ವಿಚಾರವಾದಕ್ಕೆ ಆಧಾರವಾಗಿದ್ದ ನಾಸ್ತಿಕತೆಯನ್ನು ಕೊಂಚ ಸಡಿಲಿಸಿಕೊಂಡು ಮಾನವನ ಬದುಕಿನಲ್ಲಿ ದೇವರು-ಧರ್ಮಗಳಿಗೂ ಒಂದು ಜಾಗವಿರಬಹುದು ಎಂದು ನಂಬತೊಡಗಿದ್ದರು. ಆದರೆ ಜಾತಿಪದ್ಧತಿ ಮತ್ತು ಮತಾಂಧತೆಗಳ ಪ್ರಬಲ ವಿರೋಧಿಯಾಗಿದ್ದ ಅವರು ಇತ್ತೀಚಿನ ವರ್ಷಗಳಲ್ಲಿ ಈ ಸಂಬಂಧದ ಸಾಹಿತ್ಯ ರಚನೆಯಲ್ಲೂ ತೊಡಗಿಕೊಂಡಿದ್ದರು.

ಇಂಗ್ಲಿಷ್ ಸಾಹಿತ್ಯದ ಅಧ್ಯಾಪಕರಾಗಿದ್ದ ಜಿಕೆಜಿ, ಶೇಕ್ಸ್‌ಪಿಯರ್‌ನ ಮಹಾ ಅಭಿಮಾನಿಯಾಗಿದ್ದರು. ಈ ನಾಟಕಕಾರನ ಹಲವು ನಾಟಕಗಳ ಪ್ರಧಾನ ಪಾತ್ರಧಾರಿಯಾಗಿ ರಂಗದ ಮೇಲೆ ಹಲವು ಬಾರಿ ಮಿಂಚಿದ್ದ ಸುಪುಷ್ಟ ಕಂಠದ ಅವರು, ಸಿನಿಮಾ ಮತ್ತು ಕಿರುತೆರೆಗಳ ಹಿರಿಯ ನಟರಾಗಿ ಜನಸಾಮಾನ್ಯರ ಮೆಚ್ಚುಗೆಯ ನಟರೂ ಆಗಿದ್ದರು. ಸಾಹಿತ್ಯದಷ್ಟೇ, ರಾಜಕೀಯ ವಿಷಯಗಳಲ್ಲೂ ತೀವ್ರ ಆಸಕ್ತಿ ಹೊಂದಿದ್ದ ಜಿಕೆಜಿ ದೊಡ್ಡ ಪ್ರಮಾಣದ ಪುಸ್ತಕಪ್ರಿಯರೂ ಆಗಿದ್ದರು. ತಾವು ಓದಿದ ಪುಸ್ತಕಗಳಲ್ಲಿ ತಮಗೆ ವಿಶೇಷವೆನಿಸುವುಗಳ ಬಗ್ಗೆ ತಮ್ಮ ಆಪ್ತರ ಜೊತೆ ಲಿಖಿತ ಚರ್ಚೆ ನಡೆಸುತ್ತಿದ್ದುದು ಅವರ ಇತ್ತೀಚಿನ ವಾಡಿಕೆಯಾಗಿತ್ತು. ಹಲವು ಬಾರಿ ಅವರು ತಮ್ಮ ಇಂತಹ ಆಪ್ತರಿಗೆ ಆ ಪುಸ್ತಕಗಳನ್ನು ಕೊಂಡು ಕೊಡುಗೆಯಾಗಿ ನೀಡುತ್ತಿದ್ದುದೂ ಉಂಟು. ಅವರ ಈ ಗುಣದ ಫಲಾನುಭವಿಗಳಲ್ಲಿ ಒಬ್ಬ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆಯೆನಿಸುತ್ತದೆ.

ಗೋವಿಂದರಾವ್ 'ಹೊಸಮನುಷ್ಯ' ಪತ್ರಿಕೆಯ ಮಹಾ ಅಭಿಮಾನಿ ಓದುಗರಾಗಿದ್ದರು. ತಿಂಗಳ ಮೊದಲ ವಾರದಲ್ಲಿ ಅಂಚೆ ವ್ಯತ್ಯಯದಿಂದಾಗಿ ಪತ್ರಿಕೆ ತಲುಪದಿದ್ದರೆ ಕರೆ

ಮಾಡಿ ವಿಚಾರಿಸುತ್ತಿದ್ದರು. ಪತ್ರಿಕೆಯಲ್ಲಿನ ತಮಗೆ ಇಷ್ಟವಾದ ಬರಹ-ವಿಚಾರಗಳ ಬಗ್ಗೆ ತಿಂಗಳಿಗೊಮ್ಮೆಯಾದರೂ ನನ್ನೊಡನೆ ಮಾತಾಡುವ ಅಭ್ಯಾಸ ಅವರಿಗಿತ್ತು. ಅವರು ಪ್ರತಿ ವರ್ಷ ಪತ್ರಿಕೆಗೆ ಚಂದಾದೊಡನೆ ಒಂದಿಷ್ಟು ದೇಣಿಗೆಯನ್ನೂ ನೀಡಿ ಪ್ರೋತ್ಸಾಹಿಸುತ್ತಿದ್ದರು. ಅವರು ನನ್ನೊಂದಿಗೆ ವ್ಯಕ್ತಪಡಿಸಿದ್ದ ಎರಡು ವೈಯಕ್ತಿಕ ನೆಲೆಯ ಆಸೆಗಳಲ್ಲಿ ಒಂದನ್ನು ಈಡೇರಿಸಿದ ತೃಪ್ತಿ ಇರುವಂತೆಯೇ ಇನ್ನೊಂದನ್ನು ಈಡೇರಿಸಲಾಗದ ಬೇಸರವೂ ನನ್ನದಾಗಿದೆ. ಈಡೇರಿದ ಅವರ ಆಸೆ ದುರದೃಷ್ಟಕರವಾಗಿ ಈಡೇರಿದೆ: ಪತ್ರಿಕೆಯನ್ನು ನಿಲ್ಲಿಸುವ ಆಲೋಚನೆ ಇದೆ ಎಂಬ ಸುದ್ದಿಯನ್ನು ಯಾರಿಂದಲೋ ಕೇಳಿದ್ದ ಅವರು, ಒಂದು ತಿಂಗಳ ಹಿಂದಷ್ಟೇ ಕರೆ ಮಾಡಿ ತಾವು ಬದುಕಿರುವವರೆಗಾದರೂ ಹಾಗೆ ಮಾಡಬಾರದೆಂದು ಹೇಳಿದ್ದರು. ಈಡೇರಿಸಲಾಗದಿದ್ದ ಅವರ ಆಸೆ ಎಂದರೆ ನಾನು ಮತ್ತು ನನ್ನ ಪತ್ನಿ ಸವಿತಾ ಅವರೊಡನೆ ಒಂದು ಸಂಜೆಯನ್ನು ಕಳೆಯಬೇಕೆಂಬುದು. ಕರೋನಾ ಮತ್ತು ನನ್ನ ಇತ್ತೀಚಿನ ಅಸ್ವಸ್ಥತೆ ಇದಕ್ಕೆ ಅಡ್ಡಿಯಾದವು. ಸದಾ ಅಶಾಂತ ಮಗುವಿನಂತಿರುತ್ತಿದ್ದ ಗೋವಿಂದರಾವ್ ಅವರ ಆತ್ಮಕ್ಕೆ ಪತ್ರಿಕೆ ಶಾಂತಿ ಕೋರುತ್ತದೆ.

('ಹೊಸ ಮನುಷ್ಯ' ಪತ್ರಿಕೆಯ ನವೆಂಬರ್, ೨೦೨೧ರ ಸಂಚಿಕೆಯಲ್ಲಿ ಪ್ರಕಟ)

ಎರಡು ಅನುಬಂಧಗಳು

ಅನುಬಂಧ – ೧

ಕನ್ನಡದ ಬ್ರಹ್ಮ ಪುರಾಣ : ನಂ ಮೇಷ್ಟ್ರು ಜಿ. ಬ್ರಹ್ಮಪ್ಪನವರ ರಸ ಪ್ರಸಂಗಗಳು

ಜಿ. ಬ್ರಹ್ಮಪ್ಪ ಕಳೆದ ತಲೆಮಾರಿನ ಕನ್ನಡ ಅಧ್ಯಾಪನ ಮತ್ತು ಸಾಹಿತ್ಯ ಕ್ಷೇತ್ರದ ಒಂದು ಗಮನಾರ್ಹ ಹೆಸರು. ಅವರು ಜೈನ ಧರ್ಮ ವಿದ್ವಾಂಸರು. ಈ ಸಂಬಂಧವಾಗಿ ಅವರು ಹಲವು ಪುಸ್ತಕಗಳನ್ನೂ ರಚಿಸಿದ್ದಾರೆ. ಆದರೆ ಬ್ರಹ್ಮಪ್ಪನವರು ಇವೆಲ್ಲಕ್ಕಿಂತ ಹೆಚ್ಚಾಗಿ ಗಮನಾರ್ಹವೆನಿಸಿದ್ದುದು ಅವರ ವಿಶಿಷ್ಟ ವಿನೋದ ಪ್ರಜ್ಞೆಗಾಗಿ.

ಸದಾ ಕಚ್ಚೆ ಪಂಚೆ, ಮೇಲೊಂದು ಜುಬ್ಬ ಮತ್ತು ತಲೆಯ ಮೇಲೊಂದು ಖಾದಿ ಟೋಪಿ ಧರಿಸುತ್ತಿದ್ದ ಕೋಲು ಮುಖದ ಅವರು ೧೯೬೬ರಲ್ಲಿ ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ನನಗೆ ಪಿಯುಸಿಯಲ್ಲಿ ಮೇಷ್ಟ್ರು. ಅವರು ಬರೆದ 'ದಾನಚಿಂತಾಮಣಿ ಅತ್ತಿಮಬ್ಬೆ' ಎಂಬ ಕಾದಂಬರಿಯು ನಮಗೆ ಆಗ ಪಠ್ಯವಾಗಿದ್ದುದರಿಂದ ಲೇಖಕ ಎಂಬ ಕಾರಣಕ್ಕಾಗಿ ಅವರ ಬಗ್ಗೆ ನಮಗೆಲ್ಲ ಹೆಚ್ಚಿನ ಕುತೂಹಲ. ಅವರು ನಮಗೆ ಪಾಠ ಮಾಡುತ್ತಿದ್ದ ಪ್ರಭುಶಂಕರ ಅವರ 'ನಿವೇದಿತಾ' ಎಂಬ ಪುಸ್ತಕ ನಮ್ಮ ಆಗಿನ ವಯಸ್ಸನ್ನು ಮೀರಿದ ಅಧ್ಯಾತ್ಮಿಕ ವಾಸನೆ ಹೊಡೆಯುತ್ತಿದ್ದುದರಿಂದ ಅದರ ಪಾಠವೂ ಒಣಕಲಾಗಿದ್ದು ತರಗತಿಯಲ್ಲಿ ವಿದ್ಯಾರ್ಥಿಗಳ ಗಲಾಟೆ ಜಾಸ್ತಿಯಿರುತ್ತಿತ್ತು. ಆದರೆ ಬ್ರಹ್ಮಪ್ಪನವರು ಇದಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ವಣವಣವೆಂದು ಮಂತ್ರ ಹೇಳಿದಂತೆ ಪಾಠ ಮಾಡುತ್ತಲೇ ಹೋಗುತ್ತಿದ್ದರು. ಯಾರಾದರೂ ವಿದ್ಯಾರ್ಥಿಗಳು 'ಜೋರಾಗಿ ಪಾಠ ಹೇಳಿ ಸಾರ್, ಕೇಳಿಸುವುದಿಲ್ಲ!' ಎಂದರೆ 'ನೀವೆಲ್ಲ ಗಲಾಟೆ ನಿಲ್ಲಿಸಿದರೆ ಅದು ಕೇಳಿಸುತ್ತದೆ' ಎಂಬ ಎರಡು ವಾಕ್ಯದ ಉತ್ತರವನ್ನು ಮಾತ್ರ ನೀಡಿ ತಮ್ಮ ವಣವಣವನ್ನು ಮುಂದುವರೆಸುತ್ತಿದ್ದರು. ಪಾಠ ಕುರಿತ ಅವರ ಈ ನಿಲುವಿಗೆ ಸಂಬಂಧಿಸಿದಂತೆ ಅವರ ಕಿರಿಯ ಸಹೋದ್ಯೋಗಿ ಮಿತ್ರರೊಬ್ಬರು ಹೇಳಿದ ಪ್ರಸಂಗ ಸ್ವಾರಸ್ಯಕರವಾಗಿದೆ:

ಬ್ರಹ್ಮಪ್ಪ ಪ್ರಾಂಶುಪಾಲರಾಗಿದ್ದ ಕಾಲೇಜೊಂದರಲ್ಲಿ ಹೊಸದಾಗಿ ನೇಮಕವಾಗಿದ್ದ ಮೇಷ್ಟ್ರೊಬ್ಬರು ತರಗತಿಯೊಂದಕ್ಕೆ ಪಾಠ ಮಾಡಲು ಹೋದ ಹತ್ತು ನಿಮಿಷಗಳಲ್ಲೇ

ವಾಪಸ್ ಬಂದು 'ನಾನಿನ್ನು ಆ ತರಗತಿಗೆ ಪಾಠ ಮಾಡಲು ಹೋಗುವುದಿಲ್ಲ' ಎಂದರಂತೆ. ತರಗತಿಯಲ್ಲಿ ಏನು ಅನಾಹುತವಾಯಿತೋ ಎಂದು ಗಾಬರಿಯಾದ ಬ್ರಹ್ಮಪ್ಪನವರು 'ಏನು ತೊಂದರೆಯಾಯಿತಯ್ಯಾ?' ಎಂದು ಕೇಳಲು ಆ ಮೇಷ್ಟ್ರು 'ನಾನು ಹೋಗಿ ಸೀರಿಯಸ್ಸಾಗಿ ಪಾಠ ಮಾಡುತ್ತಿದ್ದೇನೆ ಸಾರ್. ಎದುರಿಗೆ ನೋಡಿದರೆ ಒಬ್ಬ ಡೆಸ್ಕ್ ಮೇಲೆ ತಲೆ ಇಟ್ಟು ನಿದ್ದೆ ಮಾಡುತ್ತಿದ್ದಾನೆ ಸಾರ್! ಇದು ಎಂತಹ ತರಗತಿ ಸಾರ್!' ಎಂದು ವ್ಯಗ್ರರಾದರಂತೆ. ದೀರ್ಘ. ನಿಟ್ಟುಸಿರು ಬಿಟ್ಟ ಬ್ರಹ್ಮಪ್ಪನವರು ಮೆಲ್ಲಗೆ 'ನಿನಗೆ ಸೀರಿಯಸ್ಸಾಗಿ ಪಾಠ ಮಾಡಲು ಯಾರು ಹೇಳಿದರಯ್ಯ? ಇರಲಿ, ಅವನೇನಾದರೂ ಗೊರಕೆ ಹೊಡೆಯುತ್ತಿದ್ದನೇನಯ್ಯ?' ಎಂದು ಕೇಳಿದರಂತೆ. ಅದಕ್ಕೆ ಆ ಮೇಷ್ಟ್ರು 'ಅದೇನು ಕೇಳಿಸಲಿಲ್ಲ' ಎಂದಾಗ ಸಣ್ಣಗೆ ನಕ್ಕು, 'ಹಾಗಿದ್ದರೆ ಅವನಿಂದ ನಿನಗೇನು ತೊಂದರೆ? ಅದರಿಂದ ತರಗತಿಯ ಗಲಾಟೆ ಆ ಮಟ್ಟಿಗೆ ಕಡಿಮೆಯೇ ಆಯಿತು. ಸುಮ್ಮನೆ ಹೋಗಿ ಸುಖವಾಗಿ ಪಾಠ ಮುಗಿಸಿ ಬಾ!' ಎಂದು ಅವರು ಆ ಹೊಸ ಮೇಷ್ಟ್ರಿಗೆ ಅಧ್ಯಾಪನದ ಪ್ರಾಥಮಿಕ ಪಾಠ ಹೇಳಿ ಕಳಿಸಿದರಂತೆ! ಮೇಷ್ಟ್ರು ಹೋದ ನಂತರ ಅವರು 'ನಿಜವಾಗಿ ಬಂದು ದೂರು ಹೇಳಬೇಕಾದವನು ಫೀಜು ಕೊಟ್ಟು ಕಾಲೇಜಿಗೆ ಬರುತ್ತಿರುವ ಆ ವಿದ್ಯಾರ್ಥಿ, ಈ ಮೇಷ್ಟ್ರ ಪಾಠದಿಂದ ತನ್ನ ನಿದ್ದೆಗೆ ತೊಂದರೆಯಾಗುತ್ತಿದೆ ಎಂದು. ಆದರೆ ನೋಡಿ, ಅವನ ಫೀಜಿನಿಂದ ಸಂಬಳ ತಿನ್ನುವ ಈ ಮೇಷ್ಟ್ರು ಬಂದಿದ್ದಾನೆ ದೂರು ತೆಗೆದುಕೊಂಡು!' ಎಂದು ಅಲ್ಲಿ ಕುಳಿತಿದ್ದ ಇನ್ನೊಬ್ಬ ಮೇಷ್ಟ್ರಿಗೆ ಹೇಳಿದರಂತೆ!

* * *

ಬ್ರಹ್ಮಪ್ಪ ಕವಿ ಜಿ.ಎಸ್ ಶಿವರುದ್ರಪ್ಪನವರ ಸಹಪಾಠಿ. ಈ ಬಗ್ಗೆ ಜಿಎಸ್ಸೆಸ್ 'ಚತುರಂಗ' ಎಂಬ ತಮ್ಮ ಕೆಲ ನೆನಪುಗಳ ಪುಸ್ತಕದಲ್ಲಿ ವಿವರವಾಗಿ ಬರೆದಿದ್ದಾರೆ. ಅದನ್ನು ಒಂದಿಷ್ಟು ಸಂಕ್ಷಿಪ್ತಗೊಳಿಸಿ ಹೇಳುವುದಾದರೆ–

ಪರಸ್ಪರ ಏಕವಚನದ ಈ ಗೆಳೆಯರು ಪರಸ್ಪರ ಪರಿಚಯವಾದ ಬಗೆ ಹೀಗೆ. ತುಮಕೂರಿನ ಇಂಟರ್‌ಮೀಡಿಯೇಟ್ ಕಾಲೇಜಿನ ಕರ್ನಾಟಕ ಸಂಘದ ಚುನಾವಣೆಗಳ ಸಂದರ್ಭ. ಆಗ ಜಿಎಸ್ಸೆಸ್ ಕೈಗೆ 'ಸನ್ನಿವೇಶವಿಲ್ಲದ ಕುನ್ನಿ' ಎಂಬ ಶೀರ್ಷಿಕೆಯ ಕರಪತ್ರವೊಂದು ಸಿಕ್ಕಿತು. ಕುತೂಹಲಗೊಂಡ ಅವರು ಅದನ್ನು ವಿವರವಾಗಿ ಓದಿ ಅದನ್ನು ಬರೆದವನ ಸಾಹಿತ್ಯ ಪ್ರತಿಭೆ ಕಂಡು ಗಾಬರಿಗೊಂಡು ಆತನ ಪರಿಚಯಕ್ಕೆ ಹಾತೊರೆದರು. ಆತನೇ ಬ್ರಹ್ಮಪ್ಪ. ಆ ಕರಪತ್ರದಲ್ಲಿ ಶೀರ್ಷಿಕೆಯ ವಿವರಣೆ ಹೀಗಿತ್ತು: 'ಹೌದು ಈಗ ನಾನೊಬ್ಬ ಬಡ ಕುನ್ನಿಯೇ. ಆದರೆ ಸನ್ನಿವೇಶ ದೊರೆತರೆ ನಾನೂ ನನ್ನ ಶಕ್ತಿಮೀರಿ ಬೊಗಳುವ ನಾಯಿಯಾಗಿ ನಿಮ್ಮ ಮತ್ತು ಕನ್ನಡದ ಸೇವೆ ಮಾಡುವೆ. ಆದ್ದರಿಂದ ನಿಮ್ಮ ಮತ ನನಗಿರಲಿ!' ತಮ್ಮ ಮತ ಅವರಿಗೆ ಬಿತ್ತೋ ಇಲ್ಲವೋ ಎಂಬುದನ್ನು ಜಿಎಸ್ಸೆಸ್ ಹೇಳದಿದ್ದರೂ ಅವರಿಬ್ಬರ ಸ್ನೇಹವಂತೂ ಆ ಘಳಿಗೆಯಲ್ಲೇ ಗಟ್ಟಿಯಾಯಿತು!

* * *

ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಬಿಎ ಆನರ್ಸ್‌ನಲ್ಲಿ ಮತ್ತೆ ಬ್ರಹ್ಮಪ್ಪ ಮತ್ತು ಜಿಎಸ್ಸೆಸ್ ಸಹಪಾಠಿಗಳು. ಎರಡನೇ ಆನರ್ಸಿನಲ್ಲಿದ್ದಾಗ ಇವರಿಬ್ಬರೂ ಸೇರಿದಂತೆ ಕೆಲವು ವಿದ್ಯಾರ್ಥಿಗಳು ಗುರುಗಳಾದ ರಾಘವಾಚಾರ್ಯರ ಮಾರ್ಗದರ್ಶನದಲ್ಲಿ ಹಂಪೆ-ಬಾದಾಮಿ-ಐಹೊಳೆ-ಪಟ್ಟದಕಲ್ಲುಗಳ ಪ್ರವಾಸ ಹೊರಟರು. ರೈಲು ಹತ್ತಿದೊಡನೆ ಕಿಟಕಿಯ ಮೂಲಕ ಪಶ್ಚಿಮದ ದಿಗಂತದತ್ತ ಕಣ್ಣು ಕೀಲಿಸಿ ಕಾವ್ಯ ಸಮಾಧಿಗೆ ಸಂದ ಬ್ರಹ್ಮಪ್ಪ ಹಂಪೆ ಪ್ರವಾಸದುದ್ದಕ್ಕೂ ಹಾಗೇ ಇದ್ದುಬಿಟ್ಟರು! ಇದರ ಪರಿಣಾಮವಾಗಿ ಪ್ರವಾಸ ಹೊಸಪೇಟೆಯಿಂದ ಮುಂದುವರೆಯಲು ರೈಲು ಹತ್ತುವಾಗ ರಾಘವಾಚಾರ್ಯರು ತಮ್ಮಿಬ್ಬರು ಶಿಷ್ಯರನ್ನು ಅಟ್ಟಿ ಯಾವುದೋ ಹಾಳು ಮಂಟಪದಲ್ಲಿ ಏಕಾಗ್ರತೆಯಿಂದ ಕಾವ್ಯ ರಚನೆಯಲ್ಲಿ ತೊಡಗಿದ್ದ ಬ್ರಹ್ಮಪ್ಪನವರನ್ನು ಎಬ್ಬಿಸಿ ಕರೆತಂದು ರೈಲು ಹತ್ತಿಸಬೇಕಾಯಿತಂತೆ! ಗೆಳೆಯರಿಗೆಲ್ಲ ಬ್ರಹ್ಮಪ್ಪ ಎಂತಹ ಮಹಾಕಾವ್ಯ ರಚನೆಯಲ್ಲಿ ತೊಡಗಿದ್ದಾನೋ ಎಂಬ ಕುತೂಹಲ!

ಮಾರನೆಯ ದಿನ ಬಾದಾಮಿ ನೋಡಿ ರಾತ್ರಿ ಪಟ್ಟದಕಲ್ಲು ಸೇರಿ ಊಟ ಮಾಡಿ ಯಾರದೋ ಒಂದು ಮುರುಕಲು ಮನೆಯಲ್ಲಿ ನಿದ್ರೆಗೆ ಸಿದ್ಧವಾಗುತ್ತಿರುವ ಹೊತ್ತಿನಲ್ಲಿ ಯಾರೋ ಹೊರಗೆ ಸುರಿಯುತ್ತಿದ್ದ ಬೆಳುದಿಂಗಳನ್ನು ನೋಡಿ ತಮ್ಮ ಗುರುಗಳಿಗೆ, 'ಸಾರ್ ಕಾವ್ಯ ಕೇಳಲು ಇದು ಪ್ರಶಸ್ತ ಕಾಲ. ನಮ್ಮ ಬ್ರಹ್ಮಪ್ಪ ಹಂಪೆ ಕುರಿತು ಒಂದು ಮಹಾಕಾವ್ಯ ರಚಿಸುತ್ತಿದ್ದಾನೆ. ಕೇಳೋಣ ಸಾರ್' ಎಂದದ್ದೇ ತಡ ಬ್ರಹ್ಮಪ್ಪ ಎದ್ದು ಕೂತರು. ರಾಘವಾಚಾರ್ಯರೂ, 'ಅದೇನು ಬರೆದಿದ್ದೀಯೋ ಬ್ರಹ್ಮಪ್ಪ, ಓದೋಣವಾಗಲಿ' ಎಂದು ಅಪ್ಪಣೆ ಕೊಡಿಸಿದರು. ತಡಮಾಡದ ಕವಿವರನು ಮೂಗಿಗೆ ಒಂದು ಚಿಟಿಕೆ ನಶ್ಯ ಏರಿಸಿ ನೋಟ್‌ಬುಕ್‌ನಿಂದ ಕಾವ್ಯಧಾರೆ ಹರಿಸಲು ಶುರು ಮಾಡಿದನು:

ಹಂಪೆಯ ಬಳಿ ಹರಿಯುತ್ತಿದೆ ತುಂಗಭದ್ರೆ

ಇದ ನೋಡಿ ನನಗೆ ಬರುತಿದೆ ಗಾಢ ನಿದ್ರೆ!

ಕಾವ್ಯರಸಿಕ ಸಮೂಹ ಒಮ್ಮೆಗೇ 'ಹೋ' ಎಂದು ಚಪ್ಪಾಳೆ ತಟ್ಟಿತು. ಇದರಿಂದ ಮತ್ತಷ್ಟು ಉತ್ತೇಜಿತರಾದ ಕವಿವರ್ಯರು ತಮ್ಮ ಕಾವ್ಯ ಪ್ರವಾಹವನ್ನು ಮುಂದುವರೆಸಿದರು:

ರಾಣಿವಾಸದ ರಾಗದ ರಾಟೆ ತಿರುವಿದ ತಾಣದಲಿ

ಲದ್ದಿಯನಿಕುತ್ತಿವೆ ಕತ್ತೆಗಳು ಬಹು ಸೋಗಿನಲಿ!

ಈ ಉಪಮಾತೀತ ಕಾವ್ಯರಚನಾ ಸಾಮರ್ಥ್ಯವನ್ನು ಕಂಡು ಇಡೀ ಸಭೆ ಮೌನವಿಸ್ಮಿತವಾಯಿತು. ಗುರುಗಳೂ ಕುತೂಹಲಭರಿತರಾಗಿ ಕೇಳಿದರು: ಅಲ್ಲ ಬ್ರಹ್ಮಪ್ಪ, ಕತ್ತೆಗಳಾದರೂ ಸೋಗಿನಲ್ಲಿ ಲದ್ದಿಯಿಕ್ಕುವುದು ಹೇಗೆ ಹೇಳಯ್ಯ! ತಕ್ಷಣವೇ ಬಂತು ಉತ್ತರ: 'ಪದ್ಯದ ಪ್ರಾಣವಿರುವುದು ಪ್ರಾಸದಲ್ಲಲ್ಲವೇ ಸಾರ್? ಹಿಂದಿನ ಸಾಲಿನಲ್ಲಿನ 'ತಾಣದಲಿ' ಎಂಬುದಕ್ಕೆ 'ಸೋಗಿನಲಿ' ಎಂಬುದು ಒಂದು ಘನವಾದ ಪ್ರಾಸವಾಗುತ್ತದಲ್ಲವಾ ಸಾರ್?' ಮತ್ತೆ 'ಹೋ' ಅಬ್ಬರ. ಅದರಲ್ಲಿ ಈಗ ಗುರುಗಳೂ ಸೇರಿಕೊಂಡರು!

* * *

ಜಿಎಸ್ಸೆಸ್-ಬ್ರಹ್ಮಪ್ಪನವರ ನಂಟು ವಿದ್ಯಾರ್ಥಿ ಜೀವನವನ್ನೂ ಹಾದು ಅಧ್ಯಾಪನ ಜೀವನಕ್ಕೂ ವಿಸ್ತರಿಸಿತು. ದಾವಣಗೆರೆ ಕಾಲೇಜಿನಲ್ಲಿ ಇಬ್ಬರೂ ಕನ್ನಡ ಮೇಷ್ಟ್ರುಗಳಾದರು. ಅಷ್ಟು ಹೊತ್ತಿಗೆ ಬ್ರಹ್ಮಪ್ಪ 'ಭರತೇಶನ ಬಾಳ್ಗಬ್ಬಂ' ಎಂಬ ನಾಟಕವನ್ನು ರಚಿಸಿ ಅಚ್ಚು ಹಾಕಿಸಿದ್ದರು, ಆದರೆ ಅವನ್ನು ಮಾರುವ ಪರಿ ಎಂತು? ಅದನ್ನೂ ಜಿಎಸ್ಸೆಸ್ 'ನಭೂತೋ ನಭವಿಷ್ಯತಿ' ಎಂದು ಮೆಚ್ಚುಬಿದ್ದಂತೆ ವಿವರಿಸಿದ್ದಾರೆ.

ಆಗ ದಾವಣಗೆರೆಯಲ್ಲಿ ಜೈನ ಶೆಟ್ಟರ ಅಂಗಡಿಗಳು ಸಾಕಷ್ಟಿದ್ದವು. ಬ್ರಹ್ಮಪ್ಪನವರ ಮನೆಗೆ ಹುಣಿಸೆ ಹಣ್ಣು ಬೇಕಾಯಿತು ಎನ್ನಿ, ಅವರು ನೇರವಾಗಿ ಜೈನಶೆಟ್ಟರೊಬ್ಬರ ಅಂಗಡಿಗೆ ಹೋಗಿ ಎಷ್ಟು ಬೇಕೋ ಅಷ್ಟು ಹುಣಿಸೆ ಹಣ್ಣು ಹೇಳಿ ಕಟ್ಟಿಸಿಕೊಂಡು 'ಇದರ ಬೆಲೆ ಎಷ್ಟು?' ಎಂದು ಕೇಳುವರು. ಶೆಟ್ಟರು ಎರಡು ರೂಪಾಯಿ ಎಂದರೆನ್ನಿ, ಬ್ರಹ್ಮಪ್ಪ ತಣ್ಣಗೆ, 'ಅಷ್ಟೇನಾ?' ಎನ್ನುತ್ತಾ ನಿಧಾನವಾಗಿ ಹುಣಿಸೆಹಣ್ಣು ಪೊಟ್ಟಣವನ್ನು ತಮ್ಮ ಕೈಚೀಲದೊಳಗಿರಿಸಿ, ಅದೇ ಚೀಲದಿಂದ ತಮ್ಮ ನಾಟಕದ ಪ್ರತಿಯೊಂದನ್ನು ತೆಗೆದು ಶೆಟ್ಟರ ಕೈಗಿಟ್ಟು 'ನೋಡಿ ಧರ್ಮಾತ್ಮರೇ, ಇದು ಪ್ರಥಮ ತೀರ್ಥಂಕರರ ಮಗ ಭರತ ಚಕ್ರವರ್ತಿಯ ಬಾಳ ಮಹಿಮೆಯ ಕಥೆ. ಇದರ ಬೆಲೆ ಎರಡೋ ಮೂರೋ ರೂಪಾಯಿ ಎಂದು ಅದರ ಮೇಲೆ ನಮೂದಿಸಿದೆಯಾದರೂ, ಧರ್ಮದ ದೃಷ್ಟಿಯಿಂದ ಇದು ಬೆಲೆ ಕಟ್ಟಲಾಗದ್ದು, ದಿನವೂ ಪಠಣ ಮಾಡಿ ಪುಣ್ಯ ಸಂಪಾದಿಸಿಕೊಳ್ಳಿ' ಎಂಬ ಸಣ್ಣ ಪ್ರವಚನ ಮಾಡುವರು. ಶೆಟ್ಟರು ಸೊಟ್ಟ ಮೋರೆ ಮಾಡಿಕೊಂಡು ಬೆಪ್ಪಾಗಿ ನಿಂತಿರುವಂತೆಯೇ ಬ್ರಹ್ಮಪ್ಪನವರು ಮನೆಗೆ ಇನ್ನೇನು ಬೇಕು ಎಂದು ನೆನಪಿಸಿಕೊಂಡು ಇನ್ನೊಂದು ಜೈನ ಶೆಟ್ಟರ ಅಂಗಡಿಯತ್ತ ಧಾವಿಸುವರು!

* * *

ದಾವಣಗೆರೆ ಕಾಲೇಜಿಗೆ ಸುಪ್ರಸಿದ್ಧ ವಿನೋದ ಸಾಹಿತಿ 'ಅನರ್ಥಕೋಶ'ದ ಅಧಿಪತಿಗಳಾದ ನಾ. ಕಸ್ತೂರಿ ಅಧೀಕ್ಷಕರು. ಅಂದರೆ ಆಡಳಿತಾಧಿಕಾರಿ. ಕ್ರಿಸ್‌ಮಸ್ ರಜೆಯ ನಂತರ ಕಾಲೇಜು ಪುನರಾರಂಭವಾಗುವ ದಿನ ಎಲ್ಲ ಮೇಷ್ಟ್ರುಗಳೂ ಬೆಳಿಗ್ಗೆ ಹತ್ತೂವರೆ ಹೊತ್ತಿಗೆ ಕಾಲೇಜಿಗೆ ಹಾಜರಾಗಿ ಸಹಿ ಹಾಕುವುದು ಆಗ ಕಡ್ಡಾಯ. ಆದರೆ ಆ ದಿನ ಆ ಹೊತ್ತಿಗೆ ಬ್ರಹ್ಮಪ್ಪ ಬರಲೇ ಇಲ್ಲ. ಹತ್ತೂವರೆಯೇನು, ಹನ್ನೆರಡೂವರೆಯಾದರೂ ಅವರ ಪತ್ತೆ ಇಲ್ಲ. ಒಂದೂವರೆಯಾಗುತ್ತಿದ್ದಂತೆ ಕಸ್ತೂರಿಯವರು ಹಾಜರಿ ಪುಸ್ತಕ ತೆಗೆದು ಬ್ರಹ್ಮಪ್ಪನವರ ಗೈರು ಹಾಜರಿಯನ್ನು ದಾಖಲಿಸಿ ವಿಶ್ವವಿದ್ಯಾನಿಲಯಕ್ಕೆ ವರದಿ ಕಳಿಸಲು ಸಿದ್ಧರಾಗುತ್ತಿರುವಂತೆ ಬ್ರಹ್ಮಪ್ಪ ಏದುಸಿರು ಬಿಡುತ್ತಾ ಓಡೋಡಿ ಬಂದು ಕಸ್ತೂರಿಯವರ ಎದುರು ನಿಂತರು. ಕಸ್ತೂರಿಯವರು 'ಏನು ಬ್ರಹ್ಮಪ್ಪ, ನಿಮಗೆ ನಿಯಮ ಗೊತ್ತಿಲ್ಲವೆ? ವರದಿ ತಯಾರಾಗುತ್ತಿದೆ, ನೋಡಿ' ಎಂದು ರೇಗಾಡತೊಡಗಿದಾಗ ಬ್ರಹ್ಮಪ್ಪ ಕೈಜೋಡಿಸಿ ವಿನೀತರಾಗಿ 'ಬಸ್ ಕೆಟ್ಟು ಲೇಟಾಯ್ತು ಸಾರ್! ಆದರೂ ಮರೆಯದೆ ನಿಮ್ಮ ಮನೆಗೆ ಹೋಗಿ ಇಟ್ಟು ಬಂದಿದ್ದೇನೆ ಸಾರ್!' ಎಂದು ವಿವರಣೆಗೆ ತೊಡಗಿದರು. ಕಸ್ತೂರಿಯವರಿಗೆ ಇದೇನೆಂದು ಅರ್ಥವಾಗದೆ ಕಣ್ಣು ಕಣ್ಣು ಬಿಡುತ್ತಾ, 'ರೀ ಬ್ರಹ್ಮಪ್ಪ

ಏನು ಬಡಬಡಿಸುತ್ತಿದ್ದೀರಿ? ಅರ್ಥವಿಲ್ಲದ ಮಾತಾಡಿ ನನ್ನ ದಾರಿ ತಪ್ಪಿಸಲಾರಿರಿ!' ಎಂದು ಮತ್ತಷ್ಟು ಏರಿದ ದನಿಯಲ್ಲಿ ಕೂಗತೊಡಗಿದರು. ಬ್ರಹ್ಮಪ್ಪ ಇದರಿಂದ ಕೊಂಚವೂ ವಿಚಲಿತರಾಗದೆ, 'ಸಂಜೆಗೆ ಮನೆಗೆ ಹೋಗಿ ನಿಮ್ಮ ಮನೆಯವರನ್ನೇ ಕೇಳಿ ನೋಡಿ ಸಾರ್, ಸತ್ಯವಾಗಿಯೂ ಇಟ್ಟು ಬಂದಿದ್ದೇನೆ' ಎಂದಾಗ ದಿಕ್ಕೇ ತೋಚದಂತಾದ ಕಸ್ತೂರಿಯವರು 'ಬ್ರಹ್ಮಪ್ಪ ಅದೇನು ನಿನ್ನ ಅಸಂಬದ್ಧವಾದ ಮಾತು... ನೀನು ತಡವಾಗಿ ಬರಲು ಕಾರಣವೇನು, ನೇರವಾಗಿ ಹೇಳು. ಇಲ್ಲದಿದ್ದರೆ ಈ ವರದಿಯನ್ನು ಯೂನಿವರ್ಸಿಟಿಗೆ ಕಳಿಸುತ್ತೇನೆ' ಎಂದು ಬೆದರಿಸಿದಾಗ ಬ್ರಹ್ಮಪ್ಪ ಹೇಳಿದ್ದು ಇಷ್ಟು: 'ಮಧುಗಿರಿ ಬಸ್ ಕೆಟ್ಟು ಲೇಟಾದ್ರೂ ನಮ್ಮ ತೋಟದಿಂದ ಇಳಿಸಿಕೊಂಡು ಬಂದಿದ್ದ ಸಕತ್ತಾದ ಹಲಸಿನ ಹಣ್ಣನ್ನು ನಾನೇ ಬಸ್ಸಿನಿಂದಿಳಿಸಿ ಹೊತ್ತುಕೊಂಡು ಹೋಗಿ ನಿಮ್ಮ ಮನೆಯಲ್ಲಿ ಇಟ್ಟು ಬರಲು ಇಷ್ಟು ತಡವಾಯಿತು ಅಷ್ಟೇ ಸಾರ್!'

ಬಿಗಿದುಕೊಂಡಿದ್ದ ಕಸ್ತೂರಿಯವರ ಮುಖ ನಿಧಾನವಾಗಿ ಸಡಿಲವಾಯಿತು. 'ಅಯ್ಯೋ ನಿಮ್ಮ! ಇಲ್ಲಿ ಸಹಿ ಹಾಕಿ ಸುಮ್ಮನೆ ಕ್ಲಾಸ್‌ಗೆ ಹೋಗಿ!' ಎಂದು ಆಜ್ಞಾಪಿಸಿದರು.

* * *

ಇಂತಹವು ಎಷ್ಟೋ ರಸಗುಳಿಗೆಗಳು ಈ ಬ್ರಹ್ಮಪುರಾಣದಲ್ಲಿ. ಕೊನೆಯಲ್ಲಿ ಹಂಪನಾ ಅವರು ನನಗೆ ತಿನ್ನಿಸಿದ ಒಂದು ಗುಳಿಗೆಯನ್ನು ಬ್ರಹ್ಮಪ್ಪನವರ ಹಾಸ್ಯ ಕೀರ್ತಿ ಪತಾಕೆ ಆಕಾಶದಲ್ಲಿ ಇನ್ನಷ್ಟು ಎತ್ತರದಲ್ಲಿ ಹಾರಾಡಲಿ ಎಂದು ಆಶಿಸುತ್ತಾ ಆ ಗುಳಿಗೆಗೆ ಇನ್ನಷ್ಟು ಸ್ವಾರಸ್ಯದ ಲೇಪ ಹಚ್ಚಿ ನಿರೂಪಿಸಿ ಈ ಪುರಾಣ ಪಾರಾಯಣವನ್ನು ಕೊನೆಗೊಳಿಸಬಹುದು:

ಒಮ್ಮೆ ದೆಹಲಿಯಲ್ಲಿ ಆಚಾರ್ಯ ವಿದ್ಯಾನಂದರ ಜೈನಧರ್ಮ ಪ್ರವಚನದ ಸಭೆ ಏರ್ಪಾಡಾಗಿತ್ತು. ಕನ್ನಡಿಗರಾಗಿದ್ದ ಆಚಾರ್ಯರು ಪ್ರವಚನಕ್ಕೆ ಮುನ್ನ ಅಲ್ಲಿದ್ದ ಹಿಂದಿ ಜನಕ್ಕೆ ಕನ್ನಡದ ಮಹಿಮೆಯನ್ನು ವಿವರಿಸುವ ಅಭಿಲಾಷೆಯುಂಟಾಗಿ, ಸಮೀಪದಲ್ಲೇ ಆಸೀನರಾಗಿದ್ದ ಬ್ರಹ್ಮಪ್ಪನವರಿಗೆ, 'ಸುಲಿದ ಬಾಳೆಯ ಹಣ್ಣಿನಂದದಿ ಪದ್ಯದ ಮೂಲಕ ಕನ್ನಡದ ಮಹಿಮೆಯನ್ನು ಈ ಜನಕ್ಕೆ ವಿವರಿಸಿ ಬ್ರಹ್ಮಪ್ಪ' ಎಂದು ಅಪ್ಪಣೆ ಕೊಡಿಸಿದರು. ಗಾಬರಿಯಾದ ಬ್ರಹ್ಮಪ್ಪ, 'ಇಲ್ಲ ಸ್ವಾಮೀಜಿ ನನಗೆ ಅಷ್ಟು ಹಿಂದಿ ಬರುವುದಿಲ್ಲ' ಎಂದು ಓಂಜರಿದರು. ಆದರೆ ಆಚಾರ್ಯರು ಬಿಡದೆ, 'ನಿಮಗೆ ಎಷ್ಟು ಗೊತ್ತಿದೆಯೋ ಅಷ್ಟು ಹಿಂದಿಯಲ್ಲಿಯೇ ವಿವರಿಸಿ. ಈ ಜನ ಜಾಣರು, ಅರ್ಥ ಮಾಡಿಕೊಳ್ಳುತ್ತಾರೆ' ಎಂದು ಪ್ರೋತ್ಸಾಹಿಸಿದರು. ಇದರಿಂದ ಉತ್ತೇಜಿತರಾದ ಬ್ರಹ್ಮಪ್ಪ ಎದ್ದು ನಿಂತರು. ಎದುರಿಗೆ ಮೇಜಿನ ಮೇಲಿಟ್ಟಿದ್ದ ಬಾಳೆ ಹಣ್ಣಿನ ಚಿಪ್ಪೊಂದರಿಂದ ಒಂದು ಹಣ್ಣು ಕಿತ್ತು ಕನ್ನಡ ಪದ್ಯದ ಲಯಗಾರಿಕೆಗೆ ಅನ್ಯಾಯ ಮಾಡದಂತೆ ಎಚ್ಚರಿಕೆ ವಹಿಸಿ ಕನ್ನಡದ ಮಹಿಮಾಗಾಥೆಯನ್ನು ಶುರು ಮಾಡಿದರು: **'ಐಸಾ ಬಾಳೇ ಕಿ ಹಣ್ಣು ಉತ್ಕೋ! ಇಸ್ಕಿ ಚಮಡಾ ಐಸೆ ನಿಕಾಲ್ಕೋ! ಬಾಯಿ ಮೆ ರಕ್ಖೋ.. ರುಚಿಕೋ ದೇಖೋ, ಹಾ ಸುಂದರ್ ಕನ್ನಡಾ... ಓ ಸುಂದರ್ ಕನ್ನಡಾ ಐಸೆ ಬೊಮ್ಡಾ ಭಜಾಕೋ!!'**

ಅಚಾರ್ಯರು ಸೇರಿದಂತೆ ಇಡೀ ಸಭೆ ಕನ್ನಡದ ಕೀರ್ತಿ ಪತಾಕೆ ಪಟಪಟನೆ ಎತ್ತರೆತ್ತರಕ್ಕೆ ಹಾರಿ ಹಾರಿ ಆಕಾಶದಲ್ಲಿ ಅಂತರ್ಧಾನವಾದದ್ದನ್ನು ಕಂಡು ದಿಗ್ಮೂಢವಾಗಿ ಕೂತಿತು.

(ಜನವರಿ, ೨೦೨೧ 'ಹೊಸ ಮನುಷ್ಯ'ದಲ್ಲಿ ಪ್ರಕಟ)

ಅನುಬಂಧ – ೨

ಸಿದ್ಧಲಿಂಗಯ್ಯನವರ ದೆಹಲಿ ಭೇಟಿ ಎಂಬ ಪುರಾತನ ಪ್ರಸಂಗವು

ನಾನು ೧೯೭೪ರ ಕೊನೆಯಿಂದ ೧೯೮೧ರ ಕೊನೆವರೆಗೆ ಸುಮಾರು ಎಂಟು ವರ್ಷಗಳ ಕಾಲ ದೆಹಲಿಯಲ್ಲಿದ್ದೆ. ಅಲ್ಲಿನ ಆಕಾಶವಾಣಿಯ ಅಖಿಲ ಭಾರತ ಸುದ್ದಿಸೇವಾ ವಿಭಾಗದ ಕನ್ನಡ ಘಟಕದಲ್ಲಿ ನನ್ನದು ಅನುವಾದಕ/ವಾರ್ತಾವಾಚಕನ ಕೆಲಸ. ಈ ಅವಧಿಯಲ್ಲಿ ನನ್ನ ಹಲವು ಬಂಧುಗಳು ಮತ್ತು ಗೆಳೆಯರು ದೆಹಲಿಗೆ ಬಂದು ನನ್ನ ಮನೆಯಲ್ಲಿದ್ದು ಹೋಗಿದ್ದಾರೆ. ಅವರಲ್ಲಿ ಕವಿ ಸಿದ್ಧಲಿಂಗಯ್ಯನವರ ಭೇಟಿ ಅವರ ವ್ಯಕ್ತಿತ್ವದಂತೆಯೇ ಅನನ್ಯವೂ ವಿಶಿಷ್ಟವೂ ಆಗಿ ನನ್ನ ನೆನಪಿನಲ್ಲಿ ಅಚ್ಚಳಿಯದೆ ಉಳಿದಿದೆ.

ಅದು ೧೯೭೭ ಅಥವಾ ೭೮ ಇರಬಹುದು. ಬಹುಶಃ ಹಿತವಾದ ಹವಾಮಾನ ಇರುವ ಮಾರ್ಚ್ ಅಥವಾ ಅಕ್ಟೋಬರ್ ಇರಬೇಕು. ಒಂದು ದಿನ ನನಗೆ ಸಮಾಜವಾದಿ ಮಿತ್ರ ಕಾಳೇಗೌಡ ನಾಗವಾರರಿಂದ ಒಂದು ಪತ್ರ ಬಂತು. ಅದರಲ್ಲಿ 'ಹೊಲೆಮಾದಿಗರ ಹಾಡು' ಕವಿ ಸಿದ್ಧಲಿಂಗಯ್ಯ ಆಕಾಶವಾಣಿಯ ಒಂದು ಹುದ್ದೆಗಾಗಿ ಯುಪಿಎಸ್‌ಸಿ ಸಂದರ್ಶನ ಎದುರಿಸಲು ದೆಹಲಿಗೆ ಬರುತ್ತಿರುವುದಾಗಿಯೂ, ಅವರಿಗೆ ಎರಡು ಮೂರು ದಿನದ ವಸತಿ ಒದಗಿಸಿ ಜೋಪಾನವಾಗಿ ನೋಡಿಕೊಂಡು ಕಳಿಸಿಕೊಡಬೇಕೆಂದು ಕೋರಿದ್ದರು. ಆ ಹೊತ್ತಿಗೆ ನಾನು 'ಹೊಲೆಮಾದಿಗರ ಹಾಡು' ಸಂಗ್ರಹವನ್ನು ಓದಿ ಸಿದ್ಧಲಿಂಗಯ್ಯನವರ ಅಭಿಮಾನಿಯಾಗಿದ್ದೆ. ಆದರೆ ಅವರನ್ನು ನೋಡಿರಲಿಲ್ಲ. ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರ ಸಮಾಜವಾದಿ ಯುವಜನ ಸಭಾದಲ್ಲಿ, ನಂತರದ ಬೂಸಾ ಚಳುವಳಿಯಲ್ಲಿ ಅವರ ಸಾಹಸಗಳ ಬಗ್ಗೆ ಕೇಳಿದ್ದೆ. ಈಗ ಅವರು ಸಿಪಿಎಂ ಪಕ್ಷ ಸೇರಿದ್ದಾರೆಂದೂ ತಿಳಿದಿತ್ತು. ಅವರೀಗ ನನ್ನ ಮನೆಗೇ ಬಂದು ಉಳಿಯುತ್ತಾರೆಂಬ ಸುದ್ದಿಯಿಂದ ರೋಮಾಂಚಿತನಾದೆ. ಆದರೆ ಅವರು ಬರುವ ನಿರ್ದಿಷ್ಟ ದಿನಾಂಕವನ್ನು ಕಾಳೇಗೌಡರು ತಿಳಿಸದೇ ಇದ್ದುದರಿಂದ ದಿನ ಕಳೆದಂತೆ ನನ್ನ ದಿನನಿತ್ಯದ ವ್ಯವಹಾರಗಳ ಮಧ್ಯೆ ಆ ರೋಮಾಂಚನದ ತೀವ್ರತೆ ಕಡಿಮೆ ಆಗತೊಡಗಿತ್ತು.

ಹೀಗಿರುವಾಗ ಒಂದು ದಿನ ಮಧ್ಯಾಹ್ನ ಸುಮಾರು ಒಂದು ಘಂಟೆಯ ಹೊತ್ತಿಗೆ ನಾನು ಕನ್ನಡ ವಾರ್ತಾವಿಭಾಗದ ಕೊಠಡಿಯಲ್ಲಿ ಕಾರ್ಯನಿರತನಾಗಿದ್ದಾಗ, ನಮ್ಮ ಪ್ರಸಾರಭವನದ ಸ್ವಾಗತ ಕಛೇರಿಯಿಂದ ಕರೆಯೊಂದು ಬಂತು. ನನ್ನನ್ನು ಕಾಣಲು ಕರ್ನಾಟಕದಿಂದ ಒಬ್ಬರು ಬಂದಿದ್ದಾರೆಂದೂ, ಬಂದು ಅವರನ್ನು ತುರ್ತಾಗಿ ಕಾಣಬೇಕೆಂದೂ ನನಗೆ ತಿಳಿಸಲಾಯಿತು. ಅಂದು ಮಧ್ಯಾಹ್ನ ೧.೧೦ರ ವಾರ್ತೆಗಳನ್ನು ನಾನೇ ಓದಬೇಕಾಗಿದ್ದುದರಿಂದ, ಬಂದಿರುವವರು ಸಿದ್ಧಲಿಂಗಯ್ಯನವರೆಂದೇ ಊಹಿಸಿದೆನಾದರೂ ತುರ್ತೇನೆಂದು ಗೊತ್ತಾಗದೆ ನಾನು ಸ್ವಲ್ಪ ಅವಸರದಲ್ಲಿ ಸಾಕಷ್ಟು ದೂರವೇ ಇದ್ದ ಸ್ವಾಗತ ಕಛೇರಿಯತ್ತ ಓಡಿದೆ. ಅಲ್ಲಿ ಹೋಗಿ ನೋಡಿದರೆ ಕರೆ ಮಾಡಿದ ಸ್ವಾಗತಕಾರ ಸಹಾಯಕ ಎಲ್ಲೋ ಎದ್ದುಹೋಗಿದ್ದ. ಸ್ವಾಗತ ಕೊಠಡಿ ತುಂಬ ಇದ್ದ ಜನರತ್ತ ಒಮ್ಮೆ ಕಣ್ಣು ಹಾಯಿಸಿ ನೋಡಿದರೆ ನನ್ನ ಕಲ್ಪನೆಯ ಸಿದ್ಧಲಿಂಗಯ್ಯನವರಂತೆ ಕಾಣುವ ಆಸಾಮಿ ಅಲ್ಲಿ ಯಾರೂ ಇರಲಿಲ್ಲ. ಆಗಲೇ ಸಮಯ ಒಂದು ಘಂಟೆ ಆಗುತ್ತಿದ್ದುದರಿಂದ ನಾನು ವಾರ್ತೆಗಳಿದ್ದ ಹಾಳೆಗಳನ್ನು ಹಿಡಿದು ಸ್ಟುಡಿಯೋದತ್ತ ಧಾವಿಸಿದೆ. ವಾರ್ತೆಗಳನ್ನು ಓದಿ ನಮ್ಮ ವಿಭಾಗದ ಕೊಠಡಿಗೆ ಹೋಗಿ ಹಾಳೆಗಳ ಕಟ್ಟನ್ನು ಕಡತ ಮಾಡುತ್ತಿರುವಂತೆಯೇ ಸ್ವಾಗತ ಕೊಠಡಿಯಿಂದ ಮತ್ತೊಂದು ಕರೆ ಬಂತು. ಈಗ ಸಿದ್ಧಲಿಂಗಯ್ಯನವರೇ ಮಾತನಾಡುತ್ತಿದ್ದರು. ಅವರು 'ಬೇಗ ಬನ್ನಿ ಸಾರ್!' ಎಂದಷ್ಟೇ ಹೇಳಿ ಫೋನ್ ಇಟ್ಟುಬಿಟ್ಟರು. ಅವರ ಆ ಮಾತಿನಲ್ಲಿ ಬೇಗ ಬರದಿದ್ದರೆ ಆಗುವ ಅನಾಹುತಕ್ಕೆ ತಾವು ಹೊಣೆಯಲ್ಲ ಎಂಬ ದನಿಯೂ ಇದ್ದಂತಿತ್ತು. ಮೊದಲೇ 'ಇಕ್ರಲಾ ವದೀರ್ಲ...' ಎಂದು ಅಬ್ಬರಿಸಿರುವ ಕವಿ! ಏನೂ ಗೊತ್ತಾಗದೆ ನಾನು ಸ್ವಲ್ಪ ಗಾಬರಿಯಿಂದಲೇ ನನ್ನ ಉಳಿದ ಔಪಚಾರಿಕತೆಗಳನ್ನು ನನ್ನ ಸಹೋದ್ಯೋಗಿಯೊಬ್ಬರಿಗೆ ಒಪ್ಪಿಸಿ ಮತ್ತೆ ಸ್ವಾಗತ ಕಛೇರಿಯತ್ತ ಧಾವಿಸಿದೆ. ನಾನು ಹೋದ ಕೂಡಲೇ ಸ್ವಾಗತ ಸಹಾಯಕ 'ವೋ ಹೈ ಆಪ್‌ಕಾ ಮೆಹಮಾನ್' ಎಂದು ಕುರ್ಚಿಯೊಂದರಲ್ಲಿ ಗುಬ್ಬಚ್ಚಿಯಂತೆ ಮುದುರಿ ಕೂತಿದ್ದ ಪ್ರೌಢಶಾಲಾ ವಿದ್ಯಾರ್ಥಿಯಂತಿದ್ದ ಹುಡುಗನೊಬ್ಬನ್ನು ಬೊಟ್ಟು ಮಾಡಿ ತೋರಿಸಿದ. ನನ್ನ ಕಲ್ಪನೆಯೆಲ್ಲ ವೇಗವಾಗಿ ವಿಸರ್ಜನೆಯಾಗುವ ಗೊಂದಲದಲ್ಲಿ ನಾನಿರುವಾಗಲೇ ಆ ಬಾಲಕ 'ನಾಗಭೂಷಣ್‌ರಾ ಸಾರ್? ನಾನು ಸಿದ್ಧಲಿಂಗಯ್ಯ' ಎಂದು ನನ್ನತ್ತ ಬಂದಾಗ ನಾನು ನಿಜವಾಗಿ ಸುಸ್ತಾಗಿದ್ದೆ. ನಾನು ಕ್ರಾಂತಿ ಕವಿ ಸಿದ್ಧಲಿಂಗಯ್ಯನವರನ್ನು ಕಲ್ಪಿಸಿಕೊಂಡಿದ್ದುದೇ ಬೇರೆ ರೀತಿ, ಎತ್ತರದ ಪೈಲ್ವಾನ ಥರ, ದಪ್ಪ ಮೀಸೆಯ ಬಿರುಗಣ್ಣುಗಳ ಯುವಕನನ್ನು. ಇಲ್ಲಿ ನೋಡಿದರೆ ಚಿಗುರು ಮೀಸೆ ಗಡ್ಡಗಳ ಹದಿಹರೆಯದ ಪೋರ!

ನನಗೆ ಎದೆ ಸ್ವಲ್ಪ ಹಗುರಾದಂತಾಗಿ ಸಿದ್ಧಲಿಂಗಯ್ಯ ಅವರ ಕೈಹಿಡಿದು ಕಛೇರಿಯ ಹೊರಗೆ ಕರೆದುಕೊಂಡು ಹೋಗುತ್ತಿದ್ದಂತೆ ಅವರು ನನ್ನ ಜುಬ್ಬಾ ಜಗ್ಗಿ ಆತಂಕದಿಂದ 'ಸ್ವಲ್ಪ ಅರ್ಜೆಂಟ್ ಸಾ..' ಎಂದು ತನ್ನ ಬಲಗೈನ ಮಧ್ಯದೆರಡು ಬೆರಳುಗಳನ್ನು ಮಡಚಿ ತುರ್ತು

ಅಗತ್ಯ ಸೂಚನೆ ನೀಡಿದರು. ಪರಿಸ್ಥಿತಿಯ ಅಪಾಯವನ್ನರಿತ ನಾನು ಹತ್ತಿರದಲ್ಲೆಲ್ಲೂ ಶೌಚಗೃಹವಿಲ್ಲದುದು ಗೊತ್ತಾಗಿ ಅರೆಕ್ಷಣ ಗಾಬರಿಯಾದೆ. ಶೌಚಗೃಹ ಹತ್ತಿರದಲ್ಲಿದ್ದುದು ಪ್ರಸಾರ ಭವನ ಕಟ್ಟಡದ ಒಳಗೆ. ಒಳಗೆ ಹೋಗಬೇಕಾದರೆ ಕಾರಣ ಬರೆದು ಒಪ್ಪಿಸಿ ಪಾಸ್ ಪಡೆಯಬೇಕು. ಇವರ ಸ್ಥಿತಿ ನೋಡಿದರೆ ಚಿಂತಾಜನಕವಾಗಿದ್ದಂತಿದೆ. ನಾನು ಕೂಡಲೇ ಕಟ್ಟಡದ ಮುಖ್ಯ ದ್ವಾರದಲ್ಲಿದ್ದ ನನ್ನ ಪರಿಚಿತ ಕಾವಲು ಸಿಬ್ಬಂದಿಗೆ ಪರಿಸ್ಥಿತಿ ವಿವರಿಸಿದ ಕೂಡಲೇ ಆತ ನಾನು ಈವರೆಗೆ ನೋಡದಿದ್ದ, ಆ ಬಾಗಿಲ ಹಿಂಬದಿಯಲ್ಲೇ ಇದ್ದ ಒಂದು ಸಣ್ಣ ಶೌಚಾಲಯದತ್ತ ಬೊಟ್ಟು ಮಾಡಿದ. ಸಿದ್ಧಲಿಂಗಯ್ಯ ತಮ್ಮ ಹೆಗಲು ಚೀಲವನ್ನು ನನ್ನತ್ತ ಎಸೆದು ಆ ಶೌಚ ಗೃಹವನ್ನು ಹೊಕ್ಕರು. ಐದು ನಿಮಿಷಗಳ ನಂತರ ಅಂಗಿಯಲ್ಲಿ ಕೈ ಒರೆಸಿಕೊಳ್ಳುತ್ತಾ ಹೊರಬಂದು ಮುಖವರಳಿಸುತ್ತಾ, 'ಸದ್ಯ ಬಾಂಬ್ ಅಲ್ಲಿ ಬಿದ್ದು ಆಕಾಶವಾಣಿ ಹೆಡಾಫೀಸ್ ಮುಂದೆ ಕ್ರಾಂತಿಯಾಗುವುದು ತಪ್ಪಿತು ಸಾರ್!' ಎಂದು ನನ್ನ ಪಾಲಿನ ತಮ್ಮ ಮೊದಲ ಜೋಕ್ ಹೊಡೆದರು! ನಾನು 'ಅದರ ಕೀರ್ತಿ ಈ ದ್ವಾರಪಾಲಕನಿಗೆ ಸಲ್ಲಬೇಕು' ಎಂದಾಗ ಅವರು ಆ ದ್ವಾರಪಾಲಕನ ಬಳಿ ಹೋಗಿ ಆತನ ಕೈಹಿಡಿದು ಕುಲುಕಿ 'ತ್ಯಾಂಕ್ಯೂ' ಎಂದರು. ಆತ ಇದೆಲ್ಲ ಏನೆಂದು ಗೊತ್ತಾಗದೆ ನನ್ನತ್ತ ಪಿಳಿಪಿಳಿ ಕಣ್ಣು ಬಿಡುತ್ತಾ ನಸುನಕ್ಕ.. ಸಿದ್ಧಲಿಂಗಯ್ಯ ಅಲ್ಲಿಂದ ನನ್ನ ಬಳಿ ಧಾವಿಸಿ, 'ಬಂಡಿ ಸುರಿದದ್ದು ಆಯಿತು ಸಾರ್! ಈಗ ಅರ್ಜೆಂಟಾಗಿ ಬಂಡಿ ಏರಿಸಬೇಕು ಸಾರ್!! ಬೆಳಿಗ್ಗೆ ರೈಲ್ವೇ ಸ್ಟೇಷನ್ ಹತ್ರ ಎರಡು ತಂಗಳು ಸಮೋಸ ತಿಂದು ಹೋಗಿದ್ದು... ಅದಕ್ಕೇ ಹೊಟ್ಟೆ ಹಿಂಗಾಗಿದ್ದು' ಎಂದರು. ಸಿದ್ಧಲಿಂಗಯ್ಯ ಈಗ ನನಗೆ ಬೆಂಕಿ ಕಾರುವ ಕ್ರಾಂತಿ ಕವಿ ಆಗಿರಲಿಲ್ಲ, ಮನಸ್ಸು ನಿರಾಳವಾಗಿ ಆ ಕ್ಷಣವೇ ನನ್ನ-ಅವರ ನಡುವಣ ಅಂತರ ಮಾಯವಾಗಿ ಅವರು ನನಗೆ ಆತ್ಮೀಯರಾದರು. ಮುಂದೆ ಎಂದೋ ಕಂಡುಕೊಂಡಂತೆ ನನ್ನ ಹಿರಿಯರು ಬಂದಿದ್ದುದು ಅವರ ಹಳ್ಳಿ ಮಂಚನಬೆಲೆಯ ಪಕ್ಕದಿಂದಲೇ! ಮಾಗಡಿ ಸನಿಹದ ಉಜ್ಜನಿಯಿಂದ. ಹಾಗಾಗಿಯೇ ಅವರ ಮತ್ತು ನನ್ನ ಕನ್ನಡದ ನುಡಿಗಟ್ಟು ಒಂದೇ ಆಗಿತ್ತು.

ನಾನು ಅವರು ಬೆಂಗಳೂರಿನಿಂದ ಇದೀಗ ತಾನೇ ರೈಲು ಇಳಿದು ನನ್ನಲ್ಲಿಗೆ ಬಂದಿದ್ದಾರೆ ಎಂದು ತಿಳಿದಿದ್ದರೆ ಇದೇನೋ ಬೇರೆ ಹೇಳುತ್ತಿದ್ದಾರೆ ಎಂದು ಗೊಂದಲಗೊಂಡು, 'ನೀವು ಡೆಲ್ಲಿಗೆ ಬಂದದ್ದು ಯಾವಾಗ ಸಿದ್ಲಿಂಗಯ್ನೋರೆ?' ಎಂದು ಕೇಳಿದೆ. ಅವರು 'ನಿನ್ನೆ ಸಾಯಂಕಾಲ ಬಂದೆ ಸಾರ್, ಸಾಯಂಕಾಲದ ಹೊತ್ತು ನೀವು ಸಿಗದಿದ್ದರೆ ರಾತ್ರಿ ಕಳೆಯೋದೆಲ್ಲಿ ಅಂತ ಯೋಚ್ನೆ ಮಾಡಿ, ನಂಗೆ ಮದ್ರಾಸ್‌ನಿಂದ ಜೊತೆಯಾಗಿದ್ದ ಒಬ್ರು ಸಾಬ್ರ ವ್ಯಾಪಾರಿ ಜೊತೆ ರೈಲ್ವೇಸ್ಟೇಷನ್ ಎದುರುಗಿನ ಒಂದು ಹೋಟೆಲ್ ಸೇರ್ಕಂಡಿದ್ದೆ ಸಾರ್. ಬೆಳಿಗ್ಗೆ ಹತ್ತೂವರೆಗೆ ಇಂಟರ್‌ವ್ಯೂ ಇದ್ದದ್ರಿಂದ ಎದ್ದು ಮಕ ತೊಳ್ಕೊಂಡಿದ್ದೆ.. ಅಲ್ಲೇ ಎರಡು ಸಮೋಸಾ ತಿಂದು ಯುಪಿಎಸ್ಸಿ ಕಡೆ ಬಸ್ ಹತ್ತಿಬಿಟ್ಟೆ ಸಾರ್!' ಎಂದರು.

ಹಾಗಾದರೆ ಇವರು ಎಲ್ಲ ಮುಗಿಸಿಕೊಂಡೇ ಬಂದಿದ್ದಾರೆ ಎಂದು ತಿಳಿದು ಅವರನ್ನು ನಮ್ಮ ಕಛೇರಿಯಿದ್ದ ಪಾರ್ಲಿಮೆಂಟ್ ಸ್ಟ್ರೀಟ್‌ನ ಒಂದು ರಸ್ತೆ ಆಚೆ ಇದ್ದ ಯುಎನ್ಐ ಕ್ಯಾಂಟೀನ್‌ನತ್ತ ಕರೆದುಕೊಂಡು ನಡೆದೆ. ದಾರಿಯಲ್ಲಿ ಕುತೂಹಲದಿಂದ 'ಇಂಟರ್‌ವ್ಯೂ ಹೇಗಾಯ್ತು?' ಎಂದು ಕೇಳಿದೆ.. ಅದಕ್ಕವರು 'ಈ ರೇಡಿಯೋ ಪಾಡಿಯೋ ನಮಗಲ್ಲ ಬಿಡಿ ಸಾರ್! ಇದೆಲ್ಲ ಬ್ರಾಂಬ್ರ್ರಿಗೇ ಸರಿ... ಹೋಗಿ ಬರೋ ಖರ್ಚು ಕೊಡ್ತಾರಲ್ಲಾ, ಡೆಲ್ಲಿ ನೋಡ್ಕೊಂಡ್ ಹೋಗಾಣಾಂತ ಬಂದೆ ಅಷ್ಟೇ ಸಾರ್' ಎಂದರು. ನಾನಾಗ 'ನಾನೇನು ಬ್ರಾಹ್ಮಣ ಅಲ್ಲರೀ...ಈಗ ಆಕಾಶವಾಣಿಯಲ್ಲಿ ಎಲ್ರೂ ಇದಾರೆ' ಎಂದೆ. ಅದಕ್ಕೆ ತಕ್ಷಣ ಸಿದ್ದಲಿಂಗಯ್ಯ 'ಅದ್ಕೇ ನೀವು ಫಸ್ಟು ರೆಸಿಪ್ಶನ್ ಆಫೀಸಿಗೆ ಬಂದಾಗ ಅದು ನೀವು ಅಂತ ಗೊತ್ತಾಗ್ಲಿಲ್ಲ. ನಾಗಭೂಷಣ್ ಅಂದರೆ ಬ್ರಾಮಿನ್, ಕೆಂಪಗೆ ಎತ್ತರವಾಗಿ ಕ್ರಾಪ್ ತೆಗೆದು ನೀಟಾಗಿರ್ತಾರೆ ಅಂದುಕೊಂಡ್ರೆ ನೀವು ಒಳ್ಳೆ ಸಾದು ಕಪ್ಪು, ಗಡ್ಡ ಬೇರೆ ಬಿಟಕೊಂಡು ಖಾದಿ ಜುಬ್ಬಾದಲ್ಲಿದೀರಿ!' ಎಂದು ನಕ್ಕರು. ನಾನೂ ಅವರನ್ನು ಕಲ್ಪಿಸಿಕೊಂಡಿದ್ದ ರೀತಿಯಿಂದಾಗಿ ಆಗ ಗುರುತಿಸದೇ ಹೋದ ಕಾರಣವನ್ನು ವಿವರಿಸಿದೆ. (ಈ ಪ್ರಸಂಗವನ್ನು ಸಿದ್ಧಲಿಂಗಯ್ಯ ತಮ್ಮ 'ಊರುಕೇರಿ'ಯ ಎರಡನೇ ಸಂಪುಟದಲ್ಲಿ ಸಂಕ್ಷಿಪ್ತವಾಗಿ ಬರೆದಿದ್ದಾರೆ.)

ನಂತರ ಸಿದ್ಧಲಿಂಗಯ್ಯ ನಾಟಕೀಯವಾಗಿ ದನಿ ತಗ್ಗಿಸಿ, 'ನಿಮಗೂ ಕಾಳೇಗೌಡರಿಗೂ ಏನು ಸಂಬಂಧ ಸಾರ್?' ಎಂದರು. ನಾನು 'ಅಂತಹ ದೊಡ್ಡ ಸಂಬಂಧವೇನಿಲ್ಲ, ಸಮಾಜವಾದದ ಸಂಬಂಧ ಅಷ್ಟೆ, ಅವರನ್ನ ಒಂದೋ ಎರಡು ಬಾರಿನೋ ನೋಡಿರಬಹುದು ಅಷ್ಟೆ' ಎಂದೆ, ಅದಕ್ಕವರು, 'ಎರಡೇ ಸಲವಾದ್ರೂ ನಿಮ್ಮನ್ನ ಚೆನ್ನಾಗಿ ನೋಡವರೆ ಅವರು' ಎನ್ನುತ್ತಾ 'ಮಹಾ ಸೌಂದರ್ಯಾರಾಧಾರಕರು ಅವರು ಸಾರ್, ನಿಮ್ಮನ್ನು ಯಾವಾಗಲೂ ಕಪ್ಪು ಸುಂದರ, ಬ್ಲ್ಯಾಕ್ ಬ್ಯೂಟಿ ಅಂತ ಕರೀತಿರ್ತಾರೆ ಸಾರ್' ಎಂದು ಸೇರಿಸಿದರು.

ನಾನು ಅದು ಅವರು ಲೋಹಿಯಾ ಅವರ ಸೌಂದರ್ಯ ಮತ್ತು ಮೈಬಣ್ಣ ಲೇಖನ ಓದಿದ ಹ್ಯಾಂಗ್‌ಓವರ್ ಇರಬೇಕು ಎಂದು ನಕ್ಕೆ. ಸಿದ್ದಲಿಂಗಯ್ಯ ಕೂಡಲೇ ಲೋಹಿಯಾ 'ಕುಳ್ಳರ ಬಗ್ಗೆ ಏನೂ ಬರೆದಿಲ್ವಾ ಸಾರ್? ಬರೆದಿದ್ರೆ ನಮ್ಮಂಥೋರು ಎದೆ ಸೆಟೆಸಿಕೊಂಡು ನಡೀಬೋದಿತ್ತು' ಎನ್ನುತ್ತಾ ಜೋರಾಗಿ ನಕ್ಕರು. ಅದಕ್ಕೆ ನಾನು 'ಲೋಹಿಯಾನೇ ಮಹಾಕುಳ್ಳರು ಸಿದ್ಲಿಂಗಯ್ಯ' ಎಂದೆ. ಸಿದ್ದಲಿಂಗಯ್ಯ 'ಹೌದಾ ಸಾರ್? ನಮ್ಮ ಕುಲಕ್ಕೆ ಒಂದು ಪ್ಲಸ್ ಪಾಯಿಂಟ್, ನಾವೂ ತಲೆ ಎತ್ತಿ ನಡೀಬಹುದು ಬಿಡಿ ಸಾರ್' ಎಂದಾಗ ನಗುವ ಪಾಳಿ ನನ್ನದಾಯಿತು.

ಅಷ್ಟರಲ್ಲಿ ಯುಎನ್ಐ ಕ್ಯಾಂಟೀನು ಬಂದಿತ್ತು, ಅದು ಯುಎನ್ಐ ವಾರ್ತಾಸಂಸ್ಥೆಯ ಕಛೇರಿಯಿದ್ದ ಹಳೇ ಬಂಗಲೆಯೊಂದರ ಹಿಂಭಾಗದ ಗೋಡೆಗೆ ಐಯ್ಯರ್ ಕುಟುಂಬವೊಂದು ವಪ್ಪಾರ ಹಾಕಿಕೊಂಡು ನಾಲ್ಕಾರು ಜನ ಸಹಾಯಕರೊಂದಿಗೆ

ಬೆಳಿಗ್ಗೆ ಎಂಟರಿಂದ ರಾತ್ರಿ ಎಂಟರವರೆಗೆ ನಡೆಸುತ್ತಿದ್ದ ದಕ್ಷಿಣ ಭಾರತೀಯ ತಿನಿಸುಗಳ ಹೊರಾಂಗಣ ಉಪಾಹಾರ ಸ್ಥಳ. ಅಲ್ಲಿಗೆ ಸುತ್ತಮುತ್ತಲ ಕಛೇರಿಗಳಿಂದಲ್ಲದೆ ಸಂಜೆಯ ಹೊತ್ತಿಗೆ ದೆಹಲಿಯ ಹಲವು ಜನ ಬುದ್ಧಿಜೀವಿಗಳು, ಲೇಖಕರು, ರಂಗನಟರು, ಪತ್ರಕರ್ತರು, ರಾಜಕಾರಣಿಗಳು ಅಲ್ಲಿಗೆ ದೋಸೆ–ವಡೆ ತಿನ್ನಲು ಬರುತ್ತಿದ್ದರು. ನಾವು ಕೆಲವು ಜನ ಸಮಾಜವಾದಿ ಮಿತ್ರರು ಸಂಜೆ ಸೇರಲು ಆಯ್ದುಕೊಳ್ಳುತ್ತಿದ್ದುದೂ ಇದರ ಆವರಣದ ಹುಲ್ಲುಗಾವಲನ್ನೇ. ಈ ಜಾಗ ನೋಡಿ ಸಿದ್ಧಲಿಂಗಯ್ಯನವರಿಗೆ ಆಶ್ಚರ್ಯವೂ ಸಂತೋಷವೂ ಆಯಿತು. ಅಂದು ಅಲ್ಲಿಗೆ ರಾಷ್ಟ್ರೀಯ ಬುಕ್ ಟ್ರಸ್ಟ್‌ನ ಶಾ.ಬಾಲೂರಾವ್ ಕೂಡ ಬಂದಿದ್ದರು. ಸಿದ್ಧಲಿಂಗಯ್ಯನವರಿಗೆ ಅವರನ್ನು ಪರಿಚಯ ಮಾಡಿಕೊಟ್ಟೆ. ಸಿದ್ಧಲಿಂಗಯ್ಯ, ಅವರಿಗೆ ತಮ್ಮ ಕವನ ಸಂಕಲನದ ಪ್ರತಿಯೊಂದನ್ನು ನೀಡಿದರು. ಕವಿಯನ್ನು ಕಂಡು ಬಾಲೂರಾವ್ ಸಂತೋಷಪಟ್ಟು ಅವರನ್ನು ತಮ್ಮ ಕಛೇರಿಗೆ ಆಹ್ವಾನಿಸಿದರು.

ನಂತರ ಸಿದ್ಧಲಿಂಗಯ್ಯ ಮತ್ತು ನಾನು ಹೊಟ್ಟೆ ತುಂಬ ತಿಂಡಿ ತಿಂದೆವು. ಅಂದಿಗೆ ನನ್ನ ಕೆಲಸದ ಎರಡು ಪಾಳಿಗಳೂ ಮುಗಿದಿದ್ದುದರಿಂದ 'ಸಿದ್ಧಲಿಂಗಯ್ಯನವರೇ, ಇನ್ನು ಮನೆಗೆ ಹೋಗೋಣ... ನಡೀರಿ ಮೊದಲು ನಿಮ್ಮ ಹೋಟೆಲ್ ರೂಂ ಖಾಲಿ ಮಾಡಿಕೊಂಡು ಬರೋಣ' ಎಂದೆ. ಅದಕ್ಕವರು 'ರೂಂ ಬೆಳಿಗ್ಗೇನೇ ಖಾಲಿ ಮಾಡಿಕೊಂಡೇ ಇಂಟರ್‌ವ್ಯೂಗೆ ಹೋಗಿದ್ದು ಸಾರ್' ಎಂದು ಉತ್ತರಿಸಿದಾಗ ನಾನು ತಬ್ಬಿಬ್ಬಾದೆ.

'ಹಾಗಾದರೆ ನಿಮ್ಮ ಲಗ್ಗೇಜ್ ಎಲ್ಲಿ?'

'ಇಲ್ಲೇ ಐತಲ್ಲ ಸಾರ್ ನನ್ನ ಚೀಲ' ಎಂದು ತಮ್ಮ ಹೆಗಲು ಚೀಲ ತೋರಿಸಿ, 'ನಮ್ಮಂಥ ಕಾಮ್ರೇಡುಗಳಿಗೆ ಏನು ಬೇಕು ಸಾರ್? ಒಂದು ಜೊತೆ ಬಟ್ಟೆ ಮತ್ತು ಒಂದು ಟವಲ್, ಸೋಪು, ಟೂತ್ ಬ್ರಷ್' ಎಂದಾಗ ನಾನು ಪಿಳಿಪಿಳಿ ಕಣ್ಣು ಬಿಡುವುದರ ಹೊರತಾಗಿ ಮತ್ತೇನೂ ಮಾಡಲಾಗದೆ 'ಹಾಗಾದ್ರೆ ಮನೆ ಕಡೆ ಹೊರಡೋಣ' ಎಂದೆ. ಅದಕ್ಕವರು 'ಈಗ್ಲೇ ಮನೆಗೆ ಹೋಗಿ ಏನು ಮಾಡುವುದು? ಇವೊತ್ತು ಸ್ವಲ್ಪ ಡೆಲ್ಲಿ ತೋರಿಸ್ಬಿಡಿ ಸಾರ್' ಎಂದರು.

'ಡೆಲ್ಲಿ ಹಂಗೆ ತೋರ್ಸಕ್ಕಾಗಲ್ಲ. ತುಂಬಾ ದೊಡ್ಡದು ಊರು. ನಾಳೆ ಬೆಳಿಗ್ಗೆ ಡೆಲ್ಲಿ ಟೂರಿಸಂ ಬಸ್ ಹತ್ತಿಸ್ತೀನಿ, ಅವರು ಎಲ್ಲ ತೋರುಸ್ತಾರೆ, ಈಗ ನಡೀರಿ ಮನೆಗೆ'

'ಅಯ್ಯೋ ಸಾರ್! ನಾಳೆ ಬೆಂಗಳೂರಿಗೆ ಹೋಗಬೇಕು ಸಾರ್'

'ನಾಳೆನಾ? ಬೆಂಗಳೂರೇನು, ನೀವು ತುಮಕೂರಿಗೆ ಹೋದಂಗಾ? ಏನಪ್ಪು ಅವಸರ?'

'ಕ್ರಾಂತಿಯ ಅವಸರ ಸಾರ್!'

ನನಗೆ ನಗು ಬಂತು. 'ಬೆಳಿಗ್ಗೆ ತಾನೇ ಕ್ರಾಂತಿ ವಿಫಲವಾಗಿದೆ. ಇಷ್ಟು ಬೇಗ ಮತ್ತೊಂದು ಪ್ರಯತ್ನವಾ?' ಅವರೂ ನಕ್ಕರು. 'ಟಿಕೆಟ್ ಬುಕ್ ಆಗಿದೆಯಾ?' ನಾನು ಕೇಳಿದೆ.

'ಅದೆಲ್ಲ ಬೂರ್ಜ್ವಾಗಳಿಗೆ ಸಾರ್! ಬೆಂಗಳೂರು ದಿಕ್ಕಿನ ಕಡೆ ಹೋಗೋ ರೈಲುಗಳಿಗೆ ಹತ್ತತಾ ಹೋಗೋದು ಅಷ್ಟೇ ಸಾರ್'

ನನಗೆ ನಿಜವಾಗಿಯೂ ಗಾಬರಿಯಾಯಿತು. ಹಿಂದೊಮ್ಮೆ ಮದ್ರಾಸ್‌ನಿಂದ ಭೂಪಾಲ್‌ವರೆಗೆ ಹೀಗೇ ಕಾದಿರಿಸದ ಬೋಗಿಯಲ್ಲಿ ಹೋಗಿ ಪಟ್ಟ ಕಷ್ಟಗಳು ನೆನಪಾಗಿ 'ಬೇಡ ಸಿದ್ಧಲಿಂಗಯ್ಯ, ನಿಮ್ಮ ಕ್ರಾಂತಿಯ ಕನಸೇ ಹಾರಿಹೋಗುವಷ್ಟು ಕಷ್ಟ. ಕರ್ನಾಟಕ ಭವನದ ಶೆಟ್ಟಿಗೆ ಹೇಳಿ ಇನ್ನೊಂದೆರಡು ದಿನಕ್ಕೆ ಟಿಕೆಟ್ ಬುಕ್ ಮಾಡಿಸಿಕೊಡುವೆ.'

'ಅಯ್ಯೋ ನೀವೇನೂ ಯೋಚಿಸ್ಬೇಡಿ ಸಾರ್, ನಾನು ಇಲ್ಲೀಗ್ ಬಂದದ್ದೂ ಹಂಗೇನೇ'

ನನಗೆ ಮುಂದೆ ಮಾತೇ ಹೊರಡದೆ 'ಈಗ ಮುಖ್ಯವಾಗಿ ಏನು ನೋಡ್ಬೇಕು ಹೇಳಿ?' ಎಂದೆ. ಅದಕ್ಕೆ ಸಿದ್ಧಲಿಂಗಯ್ಯ,–

'ಡೆಲ್ಲಿ ಅಂದರೆ ಸಾಬರ ದರ್ಬಾರು ಜಾಸ್ತಿ ಇತ್ತು ಅಲ್ವಾ ಸಾರ್? ಅದನ್ನ ಇವೊತ್ತಿಗೆ ಏನು ನೋಡಬಹುದೋ ಅಷ್ಟನ್ನ ತೋರುಸ್ಬಿಡಿ ಸಾರ್ ಸಾಕು' ಎಂದರು ನಗುತ್ತಾ.

ನಾನು ಅಂದು ಬೆಳಗಿನ ಪಾಳಿಗಾಗಿ ನಾಲ್ಕೂವರೆಗೆ ಎದ್ದು, ನಂತರ ಮಧ್ಯಾಹ್ನದ ಪಾಳಿಯನ್ನು ಮಾಡಿ ಸುಸ್ತಾಗಿತ್ತು. ಕಣ್ಣುಗಳು ಭಾರವಾಗಿ ಎಳೆಯುತ್ತಿದ್ದವು. ತಕ್ಷಣ ಬಸ್ ಹಿಡಿದು ಓಡಾಡುವುದು ಅಸಾಧ್ಯವೆನಿಸತೊಡಗಿತ್ತು, ನನ್ನ ಅದೃಷ್ಟಕ್ಕೆ ಸರಿಯಾಗಿ ಅಷ್ಟುಹೊತ್ತಿಗೆ ಯುಎನ್‌ಐ ಕ್ಯಾಂಟೀನಿಗಾಗಿ ದವಸ–ತರಕಾರಿ ಮೂಟೆಗಳನ್ನು ಹೊತ್ತ ಅವರ ವರ್ತನೆಯ ಆಟೋ ಬಂದು ಅಲ್ಲಿ ನಿಂತಿತು. ಅದು ಮೂಟೆಗಳನ್ನು ಇಳಿಸುತ್ತಿದ್ದಂತೆ ನಾನು ನನಗೆ ಚೆನ್ನಾಗಿ ಪರಿಚಯವಿದ್ದ ಆ ಕ್ಯಾಂಟೀನಿನ ಕಿರಿಯ ಐಯ್ಯರ್‌ಗೆ ನನ್ನ ಕಷ್ಟ ಹೇಳಿ, ನಮ್ಮ ಮನೆ ಕುತುಬ್‌ಮೀನಾರ್‌ಗೆ ಹತ್ತಿರದ ಹೌಸ್‌ಕಾಸ್‌ನಲ್ಲಿದ್ದುದರಿಂದ ಹತ್ತಿರದ ಹುಮಾಯೂನ್ ಸಮಾಧಿ, ನಂತರ ಕೆಂಪುಕೋಟೆ ತೋರಿಸಿ ಕುತುಬ್‌ಮಿನಾರ್‌ಗೆ ಬಿಡಲು ಆಟೋ ಬಾಡಿಗೆಗೆ ಕೊಡಲು ಕೋರಿದೆ. ಐಯ್ಯರ್ ಕೂಡಲೇ ಆಟೋದವನನ್ನು (ಆತನೂ ತಮಿಳನೇ) ಕರೆದು ಬಾಡಿಗೆ ನಿಗದಿ ಮಾಡಿ ಹೊರಡು ಎಂದ. ಸಿದ್ಧಲಿಂಗಯ್ಯನವರಿಗೆ ನನ್ನ ಕಷ್ಟ ವಿವರಿಸಿ, ಆಟೋ ಹುಡುಗನಿಗೆ ಸಿದ್ಧಲಿಂಗಯ್ಯನವರನ್ನು ಎರಡೂ ಕಡೆ ಕರೆದೊಯ್ದು ತೋರಿಸಿ ಐದು ಗಂಟೆಯೊಳಗಾಗಿ ಇಲ್ಲಿಗೇ ಬರುವಂತೆ ಹೇಳಿದೆ. ಆಟೋ ಹೋದೊಡನೆ ನಾನು ಯುಎನ್‌ಐ ಕಟ್ಟಡದ ಮುಂದಿನ ಸೊಗಸಾದ ಹುಲ್ಲು ಹಾಸಿನ ಮೇಲೆ ಸಿದ್ಧಲಿಂಗಯ್ಯನವರ ಚೀಲವನ್ನು ತಲೆದಿಂಬಾಗಿಸಿಕೊಂಡು ಒರಗಿ ಕಣ್ಮುಚ್ಚಿದೆ.

ಮತ್ತೆ ಕಣ್ಣು ತೆರೆದದ್ದು ಸಿದ್ಧಲಿಂಗಯ್ಯ ಬಂದು ಎಚ್ಚರಿಸಿದಾಗಲೇ. ಆಟೋ ಹುಡುಗ ಒಂದೇ ಸಮನೆ ನಗುತ್ತಿದ್ದ, ಅವರಿಬ್ಬರೂ ಯಾವ ಭಾಷೆಯಲ್ಲಿ ಪರಸ್ಪರ

ಮಾತಾಡಿಕೊಂಡರೋ ತಿಳಿಯದು. ಆ ಹುಡುಗ ತಮಿಳಿನಲ್ಲಿ 'ಒಳ್ಳೇ ಮಜಾ ಮನುಷ್ಯ ಇವರು' ಎಂದು ಖುಷಿಖುಷಿಯಾಗಿ ಅಯ್ಯರ್‌ಗೆ ಸಿದ್ಧಲಿಂಗಯ್ಯನವರ ಗುಣಗಾನ ಮಾಡುತ್ತಿದ್ದ. ಆಗಲೇ ಹೊತ್ತಾಗಿದ್ದುದರಿಂದ ನಾವು ಆಟೋ ಏರಿ ಕುತುಬ್‌ಮಿನಾರ್ ಕಡೆ ಹೊರಟೆವು. ಸಿದ್ಧಲಿಂಗಯ್ಯ 'ಈ ಸಾಬರು ಏನು ಕಟ್ಟಿದರೂ ದೊಡ್ಡದೇ ಕಟ್ತಾರಲ್ವಾ ಸಾರ್! ಸಮಾಧೀನೂ ಎಕರೆಗಟ್ಟಲೆ... ಕೋಟೆ ಗೋಡೆ ನೋಡುದ್ರೆ ಆನೆಗಾತ್ರ ದಪ್ಪ...' ಎಂದು ಬೆರಗುಗೊಂಡಿದ್ದರು. ನಾನು, 'ಕುತುಬ್‌ಮಿನಾರ್ ನೋಡಬನ್ನಿ, ಆಕಾಶಕ್ಕೆ ಗೋಪುರ ಕಟ್ಟಿದ್ದಾರೆ' ಎಂದು ಅವರ ಕುತೂಹಲ ಕೆರಳಿಸುವ ಮಾತಾಡುತ್ತಾ ನನ್ನ ಕುತೂಹಲದ ವಿಷಯಕ್ಕೆ ಬಂದೆ. ಅವರ ಇಂಟರ್‌ವ್ಯೂನಲ್ಲಿ ಏನೇನು ಪ್ರಶ್ನೆ ಕೇಳಿದರು ಮತ್ತು ಇವರೇನು ಉತ್ತರಕೊಟ್ಟರೆಂಬುದು ನನ್ನ ಕುತೂಹಲವಾಗಿತ್ತು. 'ಇಂಟರ್‌ವ್ಯೂ ವಿಷಯ ಹೇಳಲೇ ಇಲ್ಲವಲ್ಲ ಸಿದ್ಧಲಿಂಗಯ್ಯನೋರೇ... ಏನೇನು ಪ್ರಶ್ನೆ ಕೇಳಿದ್ರು?' ಎಂದು ಕೇಳಿದೆ.

ಸಿದ್ಧಲಿಂಗಯ್ಯ, 'ನೀವು ಮುಖ್ಯವಾಗಿ ಕೇಳೋ ರೇಡಿಯೋ ಕಾರ್ಯಕ್ರಮಗಳು ಯಾವುವು? ಅಂತ ಕೇಳಿದ್ರು ಸಾರ್, ನಾನು ನಮ್ಮ ಮನೇಲಿ ರೇಡಿಯೋ ಇಲ್ಲ ಅಂದೆ, ಅವರೆಲ್ಲಾ ಒಬ್ರನೊಬ್ರು ಕಣ್ಣುಬಿಟ್ಟು ನೋಡ್ಕೊಂಡು ಸುಮ್ನಾಗಿಬಿಟ್ಟರು. ಆಮೆಲೆ ಒಬ್ರು 'ನೀವು ಬೆಂಗಳೂರಿಂದ ಡೆಲ್ಲಿವರೆಗೆ ಬಂದ್ರಲ್ಲಾ, ಯಾವ ಯಾವ ನದಿ ದಾಟ್ಕಂಡು ಬಂದ್ರಿ?' ಅಂತ ಕೇಳುದ್ರು, ನಾನು ನೋಡ್ಲಿಲ್ಲ ಮಲಗುಬಿಟ್ಟಿದ್ದೆ ಅಂದೆ. ಅವರು ನಕ್ಕೂ ನಕ್ಕು ಜೊತೆಗಿದ್ದ ಕನ್ನಡ ಎಕ್ಸ್‌ಪರ್ಟ್‌ಗೆ, ಅವರ್‍ಯಾರೋ ಡೆಲ್ಲಿ ಇಂಗ್ಲಿಷ್ ಪೇಪರ್‌ನೋರಂತೆ, ನೀವು ಪ್ರಶ್ನೆ ಕೇಳೀಂತ ಬಿಟ್ರು. ಅವರು 'ಏನಾದರೂ ಬರೆದಿದ್ದೀರಾ?' ಅಂತ ಕೇಳುದ್ರು, ನಾನು ಬ್ಯಾಗಿಂದ ನನ್ನ 'ಹೊಲೆಮಾದಿಗರ ಹಾಡು' ಪುಸ್ತಕಾನ ತೆಗೆದು ಅವರ ಕೈಗೆ ಕೊಟ್ಟೆ ನೋಡಿ ಸಾರ್, ಪಾಪ ಅವರು ಹಾಳೆ ತಿರುವ್ತಾ ತಿರುವ್ತಾ ಹಂಗೇ ಕೂತುಬಿಟ್ಟರು. ಆಮೇಲೆ ಏನೂ ಕೇಳದೆ ಹೋಗಿಬನ್ನಿ ಅಂದ್ರು ಸಾರ್!' ಎಂದು ಒಂದು ಕಳ್ಳಮುಗ್ಧ ನಗೆ ಬೀರಿದರು. ಆಟೋ ಹುಡುಗನಿಗೆ ಏನು ಅರ್ಥವಾಯಿತೋ, ಅವನೂ ನಗ್ತಾ ಇದ್ದ.

ಅಷ್ಟರಲ್ಲಿ ಕುತುಬ್‌ಮಿನಾರ್ ಬಂತು. ನಾವು ಇಳಿದೆವು. ಸಿದ್ಧಲಿಂಗಯ್ಯ ಆ ಹುಡುಗನಿಗೆ ಪ್ರೀತಿಯಿಂದ ಹತ್ತು ರೂಪಾಯಿ ಭಕ್ಷೀಸು ನೀಡಿ ಕಳಿಸಿದರು. ಆಗಿನ್ನೂ ಕುತುಬ್‌ಮಿನಾರ್‌ನ ಮೂರನೇ ಹಂತದವರೆಗೆ ಜನರನ್ನು ಒಳಗೆ ಹತ್ತಿ ಇಳಿಯಲು ಬಿಡುತ್ತಿದ್ದರು. ಸಿದ್ಧಲಿಂಗಯ್ಯ ಕೂಡ ಹೊರಟರು. ನಾನು ಹೋಗಲಿಲ್ಲ. ಅರ್ಧ ಘಂಟೆಯೊಳಗೆ ಅವರು ಬೆವರು ಸುರಿಸುತ್ತಾ, ಆದರೂ ಮುಖದ ಮೇಲೆ ಒಂಚೂರು ಸುಖದ ಮಿಂಚಿನೊಂದಿಗೆ ಹೊರಬಂದರು. 'ಹೇಗಿತ್ತು?' ಎಂದೆ. ಅವರು ಹುಸಿಮುನಿಸಿನಿಂದಲೇ, 'ಏನ್ ಈ ಡೆಲ್ಲಿ ಜನ ಸಾರ್! ಗಂಡಸರು ಹೆಂಗಸರು ಅನ್ನದೆ ಮೈಮೇಲೆ ಬಿದ್ದು ತಳ್ಳಾಡ್ತಾರೆ... ಆ ತಳ್ಳಾಟದಲ್ಲಿ ನಾನು ಇಳೀಲೇ ಇಲ್ಲ ಸಾರ್, ಅವರೇ ಎಲ್ಲ ತಳ್ಳಿಕೊಂಡು ಬಂದು ಹೊರಕ್ಕೆ ಬಿಸಾಡುದ್ರು' ಎಂದಾಗ ಅದರಲ್ಲಿ ಬೇಸರಕ್ಕಿಂತ ಆನಂದವೇ ಹೆಚ್ಚಿದ್ದಂತಿತ್ತು.

ನಂತರ ನಾವು ಸನಿಹದಲ್ಲೇ ಇದ್ದ ಎತ್ತರದ, ಕೆಳಗಿಂದ ಮೇಲಕ್ಕೆ ಸಣ್ಣದಾಗಿ ರೂಪುಗೊಳಿಸಿದ್ದ ಕಬ್ಬಿಣದ ಸ್ತಂಭದ ಕಡೆ ನಡೆದವು. ಅದೊಂದು ಐತಿಹಾಸಿಕ ಮಹತ್ವದ, ಭಾರತದಲ್ಲಿ ಕಬ್ಬಿಣದ ಕುಲುಮೆ ಪದ್ಧತಿ ಎಷ್ಟು ಪ್ರಾಚೀನ ಮತ್ತು ಕೌಶಲ್ಯಪೂರ್ಣವಾದದ್ದೆಂದು ಸೂಚಿಸುವ ಸ್ಮಾರಕ. ನಾನು ಸಿದ್ಧಲಿಂಗಯ್ಯನವರಿಗೆ ಅದರ ಪ್ರತೀತಿ ತಿಳಿಸುತ್ತಾ ಅದನ್ನು ತಬ್ಬಿಕೊಂಡವರ ಎರಡೂ ಕೈಗಳು ಪರಸ್ಪರ ಕೂಡಿದರೆ ಅವರು ವಿಶೇಷ ಜನರಾಗಿರುತ್ತಾರೆ ಎನ್ನುತ್ತಾರೆ ಎಂದು ವಿವರಿಸಿದೆ. ಜೊತೆಗೆ, ನಾಲ್ಕಾರು ತಿಂಗಳ ಹಿಂದೆ ದೆಹಲಿಗೆ ಬಂದಿದ್ದ ದೇವನೂರ ಮಹಾದೇವ ಅವರು ಇದನ್ನು ತಬ್ಬಿದಾಗ ಕೈಗಳು ಕೂಡಿದ್ದವು ಎಂದು ಸೇರಿಸಿದೆ. ಮಹಾದೇವ ಇವರಂತೆಯೇ ಒಂದು ಯುಪಿಎಸ್‌ಸಿ ಸಂದರ್ಶನಕ್ಕೆಂದೇ ಆಲನಹಳ್ಳಿ ಕೃಷ್ಣ ಅವರ ಜೊತೆ ಬಂದಿದ್ದರು. ಇದನ್ನು ಕೇಳಿ ಒಂದು ಕ್ಷಣ ಕಣ್ಣು ಮುಚ್ಚಿ ತೆಗೆದ ಅವರು 'ಮಹಾದೇವ ಅವರು ಬಿಡಿ ಸಾರ್, ಮಹಾತ್ಮರು' ಎನ್ನುತ್ತಾ ಒಮ್ಮೆ ಕಂಭವನ್ನು ಮೇಲಿಂದ ಕೆಳಗೆ ನೋಡಿ 'ಇದನ್ನ ತಲೆಕೆಳಗಾಗಿ ನಿಲ್ಸಿದ್ರೆ ನಾನೂ ಮಹಾತ್ಮ ಆಗಬಹುದು ಸಾರ್!' ಎಂದು ಒಂದು ಜೋಕ್ ಹೊಡೆಯುತ್ತಲೇ ಕಂಭವನ್ನು ತಬ್ಬಿ ನೋಡಿದರು. ನಂತರ 'ನಾವು ಕಮ್ಯುನಿಸ್ಟರು, ಇಂತಹ ಮೂಢ ನಂಬಿಕೆಗಳಿಗೆ ನಮ್ಮಲ್ಲಿ ಜಾಗವಿಲ್ಲ' ಎಂದು ಘೋಷಿಸಿದರು.

ಕತ್ತಲಾಗುತ್ತಾ ಬರುತ್ತಿತ್ತು. ಮನೆಗೆ ಹೋಗಿ ಈಗ ಅಡುಗೆ ಮಾಡುವುದು ರೇಜಿಗೆ ಎನಿಸಿತು. ಆಗ ನಾನು ನನ್ನ ಕೆಲಸದ ಪಾಳಿಯನ್ನವಲಂಬಿಸಿ ಬೆಳಿಗ್ಗೆ ತಿಂಡಿ, ರಾತ್ರಿ ಊಟ ತಯಾರಿಸಿಕೊಳ್ಳುತ್ತಿದ್ದೆ. ಹತ್ತಿರದ ಜೆಎನ್‌ಯುಗೆ ಹೋದರೆ ಅಲ್ಲಿನ ಮೆಸ್‌ನಲ್ಲಿ ಸ್ನೇಹಿತರ ಅತಿಥಿಯಾಗಿ ಊಟ ಮಾಡಿಬರಬಹುದೆಂದು, ಸಿದ್ಧಲಿಂಗಯ್ಯನವರಿಗೆ ಜೆನ್‌ಯು ಹೇಗೆ ಕಮ್ಯುನಿಸ್ಟರ ಕೋಟೆ ಎಂದು ವಿವರಿಸುತ್ತಾ ಅತ್ತ ಕಡೆ ಬಸ್ ಹತ್ತಿದೆವು.

ಅಲ್ಲಿಗೆ ಹೋಗಿ ಗೆಳೆಯ ಜಸ್ವೀರ್‌ರನ್ನು ವಿಚಾರಿಸಿದಾಗ ಅಂದು ಸಂಜೆ ಕರ್ನಾಟಕದ ಹಿರಿಯ ಸಮಾಜವಾದಿಯೊಬ್ಬರು ಬಂದಿದ್ದಾರೆಂದೂ, ಪ್ರಾಧ್ಯಾಪಕರೊಬ್ಬರ ಕ್ವಾರ್ಟರ್ಸ್‌ನಲ್ಲಿ ಪಾನಕೂಟದಲ್ಲಿ ಮಗ್ನರಾಗಿದ್ದಾರೆಂದೂ ತಿಳಿದು ಬಂತು. ಸಿದ್ಧಲಿಂಗಯ್ಯ ಚುರುಕಾದರು. ಅಲ್ಲಿಗೆ ಹೋಗಿ ಹಿರಿಯರನ್ನು ಮಾತಾಡಿಸಿಕೊಂಡು ಬರಬಹುದೆ? ಎಂದು ಕೇಳಿದರು. ನನಗೂ ಅವರನ್ನು ನೋಡುವ ಕುತೂಹಲವಿತ್ತಾದರೂ, ಈ ಗೆಳೆಯರೊಂದಿಗೆ ಅಲ್ಲಿಗೆ ಹೋದರೆ ಕೆಲಸ ಕೆಡುತ್ತದೆಂದು ನಾನು 'ಮನೆ ಸೇರಲು ಲೇಟಾಗುತ್ತೆ ಸಿದ್ಧಲಿಂಗಯ್ಯ, ಊಟ ಮಾಡಿ ಹೊರಟುಬಿಡೋಣ' ಎಂದರೆ ಅವರು ಬಿಡಬೇಕಲ್ಲ? 'ಸಮಾಜವಾದಿಗಳು ಅಂದ್ರೆ ನಮ್ಮ ಬ್ರದರ್ ಕಾಮ್ರೇಡ್‌ಗಳು ಸಾರ್, ಅಷ್ಟು ದೂರದಿಂದ ಬಂದವರೆ, ಒಂದು ನಿಮಿಷ ಮಾತಾಡಿಸಿಕೊಂಡು ಬಂದುಬಿಡೋಣ' ಎಂದು ನನ್ನನ್ನು ಪುಸಲಾಯಿಸತೊಡಗಿದರು. ಸಿದ್ಧಲಿಂಗಯ್ಯನವರ ಬಗ್ಗೆ 'ಹೆಚ್ಚು' ತಿಳಿಯದ ನನ್ನ ಗೆಳೆಯ 'ಒಂದು ನಿಮಿಷ ಹೋಗಿ ಬರೋಣ.. ಇಲ್ಲೇ ಹತ್ತಿರ' ಎಂದು ಹೊರಟೇಬಿಟ್ಟರು.

ಅಲ್ಲಿ ಹೋಗಿ ನೋಡಿದರೆ, ಪಾನ ಕಛೇರಿ ಧೃತ್ ತೀನ್ ತಾಳ್ ಹಂತ ಮುಟ್ಟಿತ್ತು. ಅಲ್ಲಿದ್ದ ಕರ್ನಾಟಕದ ಸಮಾಜವಾದಿ ಅತಿಥಿ ಬಹು ವಿಚಾರವಂತರೂ, ವಾಗ್ಮಿಗಳೂ

ಎಂದು ಹೆಸರಾದ ಎಸ್. ಎಸ್. ಕುಮುಟಾ ಅವರು. ಅವರು ನನ್ನ ಹೆಸರನ್ನು ಕೇಳಿದ್ದರು, ಇನ್ನು ಸಿದ್ಧಲಿಂಗಯ್ಯನವರನ್ನು ಕಂಡು ರೋಮಾಂಚನಗೊಂಡವರಂತೆ ಅವರನ್ನು ಬಿಗಿಯಾಗಿ ಆಲಂಗಿಸಿದರು. ತಮ್ಮ ಆತಿಥೇಯರಿಗೆ ತಮ್ಮ ಹೊಸ ಅತಿಥಿಯ ಮಹತ್ವವನ್ನು ಇಂಗ್ಲಿಷ್‌ನಲ್ಲಿ ವಿವರಿಸುತ್ತಾ, (ನಾನು ನೋಡಿದಂತೆ ಸಮಾಜವಾದಿಗಳ ಇಂಗ್ಲಿಷ್ ವಿರೋಧ ಪಾನಗೋಷ್ಠಿಗಳಲ್ಲಿ ತಲೆಕೆಳಗಾಗಿ ಅವರ ಇಂಗ್ಲಿಷ್ ಪರಿಣಿತಿ ತನ್ನ ಉತ್ತುಂಗ ಸ್ಥಿತಿ ಕಂಡುಕೊಳ್ಳುತ್ತದೆ! Wonderful! Fine! Beautiful! Non sense! Shut up, Get out ಮುಂತಾದ ಬಿಡಿಗಾಳು ಶಬ್ದಗಳಂತೂ ಕಾಂಗ್ರೆಸ್ ಕಡಲೆ ಬೀಜಗಳಂತೆ ಬಾಯ್ತುಂಬಾ, ಗೋಷ್ಠಿಯ ತುಂಬ ಸುಮ್ಮನೆ ಉರುಳಾಡುತ್ತವೆ!) ಎರಡು ಹೊಸ ಗ್ಲಾಸ್ ತರಲು ಹೇಳಿದರು. ನಾನು ಕಟ್ಟುನಿಟ್ಟಾಗಿ ಬೇಡವೆಂದು ಹೇಳಿದಾಗ ಸಿದ್ಧಲಿಂಗಯ್ಯ 'ಹಿರಿಯ ಸಮಾಜವಾದಿಗಳ ಆಕಸ್ಮಿಕ ಭೇಟಿಯಾಗಿದೆ, ಆ ನೆನಪಿಗೆ ಒಂದು ಪೆಗ್ ಇರಲಿ ಸಾರ್' ಎಂದು ಕೂತೇಬಿಟ್ಟರು. ಅದು ಒಂದು ಪೆಗ್‌ಗೇನೂ ನಿಲ್ಲಲಿಲ್ಲ, ನಾನು ಅಸಹಾಯಕನಾಗಿದ್ದೆ. ಆದರೆ ಒಂದು ಸಮಾಧಾನವೆಂದರೆ ನಮ್ಮ ಊಟ ಅಲ್ಲೇ ಆಯಿತಲ್ಲದೆ ನಾವು ನಮ್ಮ ಮನೆಗೆ ಹೋಗಲು ಆ ಆತಿಥೇಯ ಪ್ರಾಧ್ಯಾಪಕರು ಯಾರಿಗೋ ಫೋನ್ ಮಾಡಿ ನಾವು ಮನೆಗೆ ಹೋಗಲು ಆಟೋ ವ್ಯವಸ್ಥೆಯನ್ನೂ ಮಾಡಿದರು.

ಮನೆ ತಲುಪಿದ ನಮಗೆ ತಲೆ ನೆಲಕ್ಕೆ ಹಾಕಿದರೆ ಸಾಕೆನಿಸಿತ್ತು. ಆದರೂ ಆ ಸ್ಥಿತಿಯಲ್ಲೂ ಸಿದ್ಧಲಿಂಗಯ್ಯ ತಮ್ಮ ವರ್ಗಪ್ರಜ್ಞೆಯನ್ನು ಮರೆಯುತ್ತಾ ತಮಗೆ ಹಾಸಿಗೆ ಬೇಡವೆಂದು ಹಠ ಮಾಡಿ ನಾನು ಕೊಟ್ಟ ಹಾಸಿಗೆಯ ತಳಗಿನ ಜಮಖಾನಾ ಎಳೆದು ತಮ್ಮ ಉದ್ದನೆಯ ಟವಲನ್ನು ಮುಖಕ್ಕೆಳೆದುಕೊಂಡು ಮಲಗಿದರು. ಇಬ್ಬರಿಗೂ ಚೆನ್ನಾಗಿ ನಿದ್ದೆ ಬಂತು.

ನಾನು ಬೆಳಿಗ್ಗೆ ಏಳು ಗಂಟೆಗೆ ಎದ್ದಾಗ ಸಿದ್ಧಲಿಂಗಯ್ಯ ಕಾಣಲಿಲ್ಲ. ಬಾಗಿಲು ತೆಗೆದದ್ದನ್ನು ನೋಡಿ ಹೊರಗೆ ವಾಯುಸಂಚಾರಕ್ಕೆ ಹೋಗಿರಬಹುದೆಂದು ನಾನು ನನ್ನ ಕೆಲಸದ ಮಧ್ಯಾಹ್ನದ ಪಾಳಿಗೆ ಹೋಗಬೇಕಾದ್ದರಿಂದ ಸ್ನಾನಕ್ಕೆ ನೀರು ಕಾಯಿಸಿ ತಿಂಡಿ ತಯಾರಿಸುವ ಸಿದ್ಧತೆಯಲ್ಲಿ ತೊಡಗಿದೆ. ಸಿದ್ಧಲಿಂಗಯ್ಯ ಬಂದರು. ನನಗೆ ತೊಂದರೆ ಕೊಡಬಾರದೆಂದು ಬೆಳಗಿನ ಟೀಯನ್ನು ಹೊರಗೆ ಕುಡಿದು ಬಂದೆ ಎಂದರು. ನಾನು 'ನೀರು ಕಾದಿದೆ ಸ್ನಾನ ಮಾಡಿ' ಎಂದೆ. ಕೂಡಲೇ ಅವರು 'ಅದೆಲ್ಲ ಬೇಡ ಸಾರ್, ನಾನು ಬೆಂಗಳೂರಿಂದ ಸ್ನಾನ ಮಾಡಿಕೊಂಡೇ ಹೊರಟಿದ್ದು ಸಾರ್!' ಎನ್ನುತ್ತಾ 'ನಮ್ಮಂಥೋರು ದಿನಾ ಸ್ನಾನ ಮಾಡದನ್ನ ರೂಢಿ ಮಾಡಕಂಡರೆ ಸೌದೆ, ಸೀಮೆಎಣ್ಣೆ ಎಲ್ಲಿಂದ ಜೋಡಿಸಿಕೊಳ್ಳೋದು?' ಎಂಬ ಪ್ರಶ್ನೆಯನ್ನು ನನ್ನತ್ತ ಎಸೆದು 'ಮುಖ ತೊಳಕಂಡು ಹೊರಡ್ತೀನಿ ಸಾರ್' ಎಂಬ ಬಾಂಬ್ ಬೇರೆ ಹಾಕಿದರು. ಒಂದರ ಮೇಲೊಂದರಂತೆ ಬಿದ್ದ ಬಾಂಬುಗಳಿಂದ ತತ್ತರಿಸಿದ ನಾನು ಸಾವರಿಸಿಕೊಂಡು ಮುಖ ತೊಳೆದುಕೊಂಡು ಬಂದ ಅವರಿಗೆ 'ಅವಲಕ್ಕಿ ಉಪ್ಪಿಟ್ಟು ಮಾಡ್ತಾ ಇದೀನಿ. ಇಬ್ರೂ

ತಿಂದು ಜೊತೆಯಲ್ಲಿ ಹೋಗೋಣ' ಎಂದರೆ 'ಬೇಡ ಬೇಡ ಸಾರ್... ಬೆಳಿಗ್ಗೆ ಎದ್ದು ಬಿಸಿ ಬಿಸಿ ತಿನ್ನೋದು ರೂಢಿ ಮಾಡಿಕೊಂಡ್ರೆ ನಮ್ಮಂತೋರಿಗೆ ಕಷ್ಟ... ಈಗ ಹೋಗಿ ನೋಡಿಕೊಂಡು ಬಂದ್ನಲ್ಲಾ, ಟೀ ಅಂಗಡಿಯೊಳಗೆ ರಾಶಿ ರಾಶಿ ನಿನ್ನೆ ರಾತ್ರೀದು ವೆರೈಟಿಗಳು ಇವೆ. ಬೆಳಿಗ್ಗೆ ತಂಗಳೇ ನಮಗೆ ಭೂಷಣ!' ಎಂದು ಘೋಷಿಸುತ್ತಾ, ಚೀಲವನ್ನು ಹೆಗಲಿಗೇರಿಸಿಕೊಂಡು 'ಬತ್ತೀನಿ ಸಾರ್!' ಎನ್ನುತ್ತಾ ಹೊರಟೇ ಬಿಟ್ಟರು. ನಾನು 'ಹೇಗೆ ಹೋಗ್ತಿರಾ ತಾಳಿ, ಈ ಕಡೆ ಆಟೋ ಬರಲಿ ಹತ್ತಿಸ್ತೀನಿ' ಎಂದರೆ 'ಬೇಡ ಸಾರ್! ಊರು ನೋಡ್ಕೊಂಡು ಹೋದ್ರೆ ಎಷ್ಟು ಮಹಾ ದೂರ! ಸಾಧ್ಯ ಆದರೆ ಇಂದಿರಾಗಾಂಧಿ ಮನೆ ತಾವಾಸಿ ಹೋಗ್ತೀನಿ' ಎಂದು ನಡೆದೇ ಬಿಟ್ಟರು. ನಿನ್ನೆ ಕುತುಬ್ ಮಿನಾರ್‌ಗೆ ಆಟೋದಲ್ಲಿ ಬರುವಾಗ ದೂರದಿಂದ ರಾಷ್ಟ್ರಪತಿ ಭವನವನ್ನೂ, ಇಂದಿರಾ ಗಾಂಧಿಯವರ ಮನೆಯ ದಿಕ್ಕನ್ನೂ ತೋರಿಸಿದ್ದೆ. ನಾನೀಗ ಮೂಕವಿಸ್ಮಿತನಾಗಿ ಮನೆ ಬಾಗಿಲವರೆಗೂ ಹೋಗಿ ಅವರು ಹೋಗುವುದನ್ನೇ ನೋಡುತ್ತಾ ಚಿಂತಿಸುತ್ತಾ ನಿಂತೆ. ನಮ್ಮ ಮನೆಯಿಂದ ರೈಲ್ವೇ ಸ್ಟೇಷನ್‌ಗೆ ಕನಿಷ್ಠ ೧೦-೧೨ ಮೈಲಿ ದೂರ!

ಒಂದು ವಾರ ನನಗೆ ಆತಂಕವೋ ಆತಂಕ. ಅಂತೂ ಒಂದು ದಿನ ಕಾಳೇಗೌಡರಿಂದ ಪತ್ರ ಬಂದು, ತಮ್ಮ ಗೆಳೆಯ ಸುಕ್ಷೇಮವಾಗಿ ಬೆಂಗಳೂರು ತಲುಪಿದ್ದಾರೆಂದು ತಿಳಿಸಿ, ಅದಕ್ಕಾಗಿ ನನಗೆ ವಂದನೆ ಹೇಳಿದ್ದರು!

* * *

ಆರೇಳು ತಿಂಗಳುಗಳ ನಂತರ ನಾನು ಬೆಂಗಳೂರಿಗೆ ಹೋಗಿದ್ದಾಗ ಒಂದು ಸಂಜೆ ಸೆಂಟ್ರಲ್ ಕಾಲೇಜ್ ಕ್ಯಾಂಪಸ್‌ನಲ್ಲಿ ಡಿ.ಆರ್. ನಾಗರಾಜ್ ಸಿಕ್ಕರು. ನಾನು ಇದನ್ನೆಲ್ಲ ಅವರಿಗೆ ಹೇಳಿದೆ. ಅವರು ಗಹಗಹಿಸಿ ನಕ್ಕು, 'ಅವರು ಹೇಳಿದ್ರಲ್ಲಿ ಅರ್ಧ 'ಕವಿ ಸಮಯ'ಗಳು ಗುರುಗಳೇ, 'ಭೋಡ್' ಜಾಸ್ತಿ, ಮಾತಿನ ಪರಿಣಾಮಕ್ಕೆ! ಕವಿಗಳು ಡೆಲ್ಲಿಗೆ ಹೊರಟಾಗ ನಾವಿಬ್ರೂ ಹೋಗಿ ರೈಲ್ವೇ ಪೋಲೀಸ್ ಆಫೀಸರ್ ಭರಣಿಯವರ ಮೂಲಕ ಹೋಗಿ ಬರೋಕ್ಕೆ ಜಿ.ಟಿ. ಎಕ್ಸ್‌ಪ್ರೆಸ್‌ನಲ್ಲಿ ಟಿಕೆಟ್ ಬುಕ್ ಮಾಡಿಸಿಕೊಂಡು ಬಂದಿದ್ವಿ' ಎನ್ನುತ್ತಿದ್ದಂತೆ ಎಲ್ಲಿಂದಲೋ ಗೊತ್ತಿಲ್ಲ ಅಲ್ಲಿ ನಮ್ಮೆದುರಿಗೆ ಸಿದ್ಧಲಿಂಗಯ್ಯ ಬಂದು ನಿಂತಿದ್ದರು! ನಾನು ಏನೂ ಮಾತಾಡದೆ ಸುಮ್ಮನೇ ಅವರನ್ನು ನೋಡುತ್ತಾ ನಿಂತೆ. ಒಂದು ನಿಮಿಷದ ನಂತರ ಇಬ್ಬರಿಗೂ ಎಲ್ಲ ಅರ್ಥವಾದಂತೆ ಜೋರಾಗಿ ನಕ್ಕೆವು!!

(ಆಗಸ್ಟ್, ೨೦೨೧ರ 'ಹೊಸ ಮನುಷ್ಯ'ದಲ್ಲಿ ಪ್ರಕಟ)

ಇದೇ ಲೇಖಕರ ಇತರ ಕೃತಿಗಳು

ಗಾಂಧಿ ಕಥನ (ಮಹಾತ್ಮ ಗಾಂಧಿಯವರ ಬದುಕಿನ ಸಮಗ್ರ ನಿರೂಪಣೆ)

ಗಮನ (ಸಾಹಿತ್ಯ ವಿಮರ್ಶೆ–ವಿಚಾರ)

ಅನೇಕ (ಸಾಹಿತ್ಯ ವಿಮರ್ಶೆ–ವಿಚಾರ)

ಕುವೆಂಪು ಸಾಹಿತ್ಯ ದರ್ಶನ (ಕುವೆಂಪು ಸಾಹಿತ್ಯಾವಲೋಕನ)

ಈ ಭೂಮಿಯಿಂದ ಆ ಆಕಾಶದವರೆಗೆ (ಸಾಹಿತ್ಯ ವಿಮರ್ಶೆ–ವಿಚಾರ)

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ (ವ್ಯಕ್ತಿ ಹಾಗೂ ಸಾಹಿತ್ಯ ಪರಿಚಯ)

ಸಮತೆಯ ಸಾಕಾರಮೂರ್ತಿ ರಮಣ ಮಹರ್ಷಿ (ರಮಣ ದರ್ಶಿಕೆ)

ರೂಪರೂಪಗಳನು ದಾಟಿ (ಈವರೆಗಿನ ಸಾಹಿತ್ಯ ವಿಮರ್ಶೆಗಳ ಸಂಗ್ರಹ)

ಭೂಮಿಯನ್ನು ಹಂಚಿಕೊಳ್ಳುವ ಬಗೆಗಳು (ಆಧುನಿಕತೆ, ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಕುರಿತ ಲೇಖನಗಳು)

ಕನ್ನಡ ಮನಸ್ಸು ಮತ್ತು ಇತರ ಲೇಖನಗಳು (ಸಂಕೀರ್ಣ)

ಇಂದಿಗೆ ಬೇಕಾದ ಗಾಂಧಿ (ಗಾಂಧಿ ಪ್ರಸ್ತುತತೆ ಕುರಿತ ಬರಹಗಳು)

ಕಾಲಕ್ರಮ ('ಹೊಸ ಮನುಷ್ಯ' ಪತ್ರಿಕೆಯ ಸಂಪಾದಕೀಯ ಮತ್ತು ಕೆಲ ಪೂರಕ ಬರಹಗಳು)

ನೀರೆಲ್ಲವೂ ತೀರ್ಥ (ಸಾಹಿತ್ಯಿಕ–ಸಾಂಸ್ಕೃತಿಕ ಟಿಪ್ಪಣಿಗಳು)

ಬಹುಮುಖ (ಸಮಕಾಲೀನ ರಾಜಕೀಯ ಮತ್ತು ಸಾಂಸ್ಕೃತಿಕ ಬರಹಗಳು)

ಲೋಹಿಯಾ ಸಮಾಜವಾದ ದರ್ಶನ (ಸಮಾಜವಾದ ಪರಿಚಯ, ವಿಶ್ಲೇಷಣೆ)

ಜಯಪ್ರಕಾಶ್ ನಾರಾಯಣ : ಒಂದು ಅಪೂರ್ಣ ಕ್ರಾಂತಿಯ ಕಥೆ (ಜೀವನ ಚಿತ್ರ)

ಮರಳಿ ಬರಲಿದೆ ಸಮಾಜವಾದ! (ಸಮಾಜವಾದಿ ವಿಚಾರ ವೈವಿಧ್ಯ)

ಬೇರು ಬಿಳಲು (ಸಮಾಜವಾದಿ ಸಂಕಥನಗಳು-೧)

ಇದು ಭಾರತ! ಇದು ಭಾರತ!! (ಸಮಾಜವಾದಿ ಸಂಕಥನಗಳು-೨)

ವಸಿಷ್ಠರು ಮತ್ತು ವಾಲ್ಮೀಕಿಯರು (ಸಮಾಜವಾದಿ ಸಂಕಥನಗಳು-೩)

ಇಲ್ಲಿ ಯಾವುದೂ ಅಮುಖ್ಯವಲ್ಲ (ಸಮಾಜವಾದಿ ಸಂಕಥನಗಳು-೪)

ಕಂಡದ್ದು ಕಾಡಿದ್ದು (ಸಮಾಜವಾದಿ ಸಂಕಥನಗಳು-೫)

ಲೋಹಿಯಾ ಜೊತೆಯಲ್ಲಿ (ಲೋಹಿಯಾ-ಗಾಂಧಿ-ಅಂಬೇಡ್ಕರ್-ಮಾರ್ಕ್ಸ್ ಚಿಂತನೆಗಳು)

ಕನ್ನಡ-ಕರ್ನಾಟಕ: ಸಂಕಥನಗಳು (ಕನ್ನಡ ನಾಡು ನುಡಿ ಚಿಂತನೆಗಳು)

ರೈತ ಭಾರತ: ಅವಸಾನದ ಅಂಚಿನಲ್ಲಿ (ರೈತರ ಆತ್ಮಹತ್ಯೆ ವಿಶ್ಲೇಷಣೆ)

ಒಂದನೇ ತರಗತಿಯಿಂದ ಇಂಗ್ಲಿಷ್ ಏಕೆ ಬೇಡ? (ಭಾಷಾ ನೀತಿ ಜಿಜ್ಞಾಸೆ)

ಲೋಹಿಯಾ ಕೈಪಿಡಿ

ಲೋಹಿಯಾ ವಾಣಿ

ಜೆಪಿ ಕೈಪಿಡಿ

ಸಂಪಾದನೆ:

ರಸಿಕ ರುದ್ರ ತಪಸ್ವಿ ಲೋಹಿಯಾ (ವಿವಿಧ ಲೇಖಕರ ಲೇಖನಗಳು)

ಸಮಾಜವಾದದ ಸಾಲುದೀಪಗಳು (ಭಾರತದ ಸಮಾಜವಾದಿಗಳ ಪರಿಚಯ)

ನಮ್ಮ ಸಮಾಜವಾದಿಗಳು (ಕರ್ನಾಟಕದ ಸಮಾಜವಾದಿಗಳ ಪರಿಚಯ)

ಲೋಹಿಯಾ: ವ್ಯಕ್ತಿ-ವಿಚಾರ-ವಿಮರ್ಶೆ (ಲೋಹಿಯಾ ಕುರಿತ ಅಧ್ಯಯನ)

ಕುವೆಂಪು: ಒಂದು ಪುನರನ್ವೇಷಣೆ (ಶತಮಾನೋತ್ಸವ ಸಂಪುಟ)

ಆ ಗಣರಾಜ್ಯ ಈ ಕರ್ನಾಟಕ (ಸುವರ್ಣ ಕರ್ನಾಟಕ ಸಂಪುಟ)

ಮಲೆಗಳಲ್ಲಿ ಮದುಮಗಳು-೫೦ (ಕಾದಂಬರಿಯ ಅರ್ಧ ಶತಮಾನೋತ್ಸವ ಸಂಪುಟ)

ಒಲವು (ಅಂತರ್ಜಾತಿ ವಿವಾಹಿತರ ಮೊದಲ ಸಮಾವೇಶದ ಸ್ಮರಣ ಸಂಪುಟ)

'ಹೊಸ ಮನುಷ್ಯ' ಮಾಸಿಕ (ಸಮಾಜವಾದಿ ಚಿಂತನೆಯ ನಿಯತಕಾಲಿಕ)

ಮಾನವ (ಸಮಾಜವಾದಿ ಮಾಸಿಕ)

ಸಹ ಸಂಪಾದನೆ:

ಕಾಡಿನ ಹುಡುಗ ಕೃಷ್ಣ (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)

ಮಾಸ್ತಿ ಸಾಹಿತ್ಯ: ಸಮಗ್ರ ದರ್ಶನ (ಶತಮಾನೋತ್ಸವ ಸಂಪುಟ)
ಹಣತೆ (ಡಾ. ಜಿ. ಎಸ್ ಶಿವರುದ್ರಪ್ಪ ಅಭಿನಂದನ ಗ್ರಂಥ)
ಉರಿದ ಪಂಜು (ಕೆ. ರಾಮದಾಸ್ ಸ್ಮರಣ ಸಂಪುಟ)
ನಮ್ಮ ಶಾಮಣ್ಣ (ಕಡಿದಾಳು ಶಾಮಣ್ಣ ಗೌರವ ಗ್ರಂಥ)
ಸಾಹಿತ್ಯ ಸಂವಾದ (ಸಾಹಿತ್ಯ ದ್ವೈಮಾಸಿಕ)

ಅನುವಾದ:

ಜೆಪಿ ಸೆರೆಮನೆ ದಿನಚರಿ



...ಇವತ್ತು ಆಧುನಿಕ ಶಿಕ್ಷಣ ಅಂತ ಅಂದರೆ ಏನೂಂದ್ರೆ, ಮಕ್ಕಳನ್ನು ತಂದೆ ತಾಯಿಗಳಿಂದ ಮತ್ತು ಅವರ ಊರುಗಳಿಂದ ದೂರ ತೆಗೆದುಕೊಂಡು ಹೋಗುವ ಒಂದು ಉಪಾಯ ಆಗಿದೆ. ಬೆಂಗಳೂರು ಇತ್ಯಾದಿ ಮಹಾನಗರಗಳಲ್ಲಿರುವವರಿಗೆ ಊರೇ ಇಲ್ಲದಾಗಿದೆ. ಈಗ ಜಿಲ್ಲಾ ತಾಲ್ಲೂಕು ಕೇಂದ್ರಗಳಿಗೂ ಅದೇ ಗತಿ ಆಗುತ್ತಿದೆ. ಅವಕ್ಕೆಲ್ಲ ಬಿಡಿಭಾಗಗಳೇ ಇಲ್ಲ. ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಚಹರೆಗಳೆ ಇಲ್ಲದ ಹೊಟ್ಟೆ ಮಾತ್ರ ಇರುವ ಪೆಡಂಭೂತಗಳಾಗ್ತಾ ಇವೆ. ನಾನು ಅಂದ್ರೆ ಯಾರು ನಿಜವಾಗಿ? ಒಂದು ಊರಲ್ಲಿ ಹುಟ್ಟುತ್ತೀವಲ್ಲ, ಯಾವುದೋ ಒಂದು ಹಳ್ಳಿಯಲ್ಲಿ ನಾನು ಹುಟ್ಟಿದೆ, ನಾನು ಅಂತ ಅಂದ್ರೆ ಬರೀ ನಾನಲ್ಲ. ನನ್ನ ಬಳಗ, ನನ್ನ ಊರು, ನನ್ನ ನದಿ, ನನ್ನ ಬೆಟ್ಟ, ನನ್ನ ಗುಡ್ಡ, ಇದೆಲ್ಲವೂ ಸೇರಿ ನಾನಾಗಿರ್ತಕ್ಕಂತದ್ದು. ಆಗಲೇ ನಾನು ಜೀವಂತವಾಗಿರುವುದು. ವಿದ್ಯಾಭ್ಯಾಸ ನನ್ನನ್ನ ಏನ್ ಮಾಡ್ತು? ನನ್ನನ್ನು ತೆಗೆದುಕೊಂಡು ಹೋಗಿ ಬೆಂಗಳೂರಿಗೆ ಹಾಕ್ತು. ಕೆಲಸಕ್ಕೆ ದೆಹಲಿಗೆ ತೆಗೆದುಕೊಂಡು ಹೋಗಿ ಹಾಕ್ತು. ಈ ನದಿ, ತೊರೆ, ಈ ತೋಪು, ಈ ಮೈದಾನ, ಈ ಗುಡ್ಡ, ತಂದೆ, ತಾಯಿ, ಬಂಧು, ಬಳಗ, ಸ್ನೇಹಿತರು ಎಲ್ಲ ಹೋಯ್ತು. ಅದರ ಜೊತೆನಲ್ಲಿ ನನ್ನ ಸಂವೇದನೆಯೂ ಬಸಿದುಹೋಗುವಂತಾಯ್ತು. ಹೀಗೆ ಮನುಷ್ಯನನ್ನ ಒಂದು ಯಂತ್ರವನ್ನಾಗಿ ಮಾಡ್ತಾ ಇದೆ ಈ ಆಧುನಿಕ ಶಿಕ್ಷಣ.

(ಈ ಸಂಗ್ರಹದಲ್ಲಿನ ಲೇಖನವೊಂದರಿಂದ)

ರೂಪ
ಪ್ರಕಾಶನ

ISBN 978-81-955083-2-7
9 788195 508327